
ಕನ್ನಡ ಎಂ.ಎ.
ಅಂತಿಮ

ಸಂಪುಟ - ೧
ಸಂಚಿಕೆ : ೨೯-೩೧

ಕೋರ್ಸ್ - X

# ಕನ್ನಡ ಶಾಸನ ಅಧ್ಯಯನ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

*ರಾಷ್ಟ್ರೀಯ ಶಿಕ್ಷಣ ನೀತಿ 1986*

The Open University system has been initiated in order to augment opportunities for higher education and as an instrument of democratising education.

***National Education Policy 1986***

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 06

## ಎಂ.ಎ., ಕನ್ನಡ (ಅಂತಿಮ)

## ಪತ್ರಿಕೆ - ೧೦ : ಕನ್ನಡ ಶಾಸನ ಅಧ್ಯಯನ (ತತ್ತ್ವ ಮತ್ತು ಆಯ್ದ ಪಠ್ಯ ಶಾಸನಗಳು)


**ಸಂಪುಟ – ೧**

| ಬ್ಲಾಕ್ | ಪಠ್ಯ – ವಿಷಯ |
|---|---|
| ೨೯. | ತತ್ತ್ವಗಳು |
| ೩೦. | ತತ್ತ್ವಗಳು |
| ೩೧. | ಪಠ್ಯ ಶಾಸನಗಳು |

**ಸಂಪುಟ – ೨**

| | |
|---|---|
| ೩೨. | ಪಠ್ಯ ಶಾಸನಗಳು |
| ೩೩. | ಪಠ್ಯ ಶಾಸನಗಳು |
| ೩೪. | ಪಠ್ಯ ಶಾಸನಗಳು |
| ೩೫. | ಪಠ್ಯ ಶಾಸನಗಳು |

### ಬ್ಲಾಕ್ – ೨೯ ತತ್ತ್ವಗಳು

| | | ಪುಟ ಸಂಖ್ಯೆ |
|---|---|---|
| ಘಟಕ – ೧೧೩ : | ಶಾಸನ : ಪದದ ಅರ್ಥ ಮತ್ತು ವ್ಯಾಪ್ತಿ ; ಶಾಸನಗಳ ಮಹತ್ವ | ೦೧ |
| ಘಟಕ – ೧೧೪ : | ಕರ್ನಾಟಕದಲ್ಲಿ ಶಾಸನಾಧ್ಯಯನದ ಇತಿಹಾಸ | ೧೩ |
| ಘಟಕ – ೧೧೫ : | ಶಾಸನಗಳ ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಮಹತ್ವ | ೨೧ |
| ಘಟಕ – ೧೧೬ : | ಶಾಸನಗಳ ವರ್ಗೀಕರಣ ; ಶಾಸನ ಸಾಮಗ್ರಿಗಳು ; ಶಾಸನಗಳ ಸಿದ್ಧತೆ ಮತ್ತು ಸಂರಕ್ಷಣೆ | ೪೬ |

### ಬ್ಲಾಕ್ – ೩೦ ತತ್ತ್ವಗಳು

| | | |
|---|---|---|
| ಘಟಕ – ೧೧೭ : | ಶಾಸನಗಳಲ್ಲಿ ವಿಷಯಾನುಪೂರ್ವಿ | ೪೬ |
| ಘಟಕ – ೧೧೮ : | ಶಾಸನಗಳಲ್ಲಿ ವಿಷಯಾನುಪೂರ್ವಿ : ಅಧಿಕೃತತ್ವದ ಸೂಚನೆಗಳು | ೮೩ |
| ಘಟಕ – ೧೧೯ : | ಶಾಸನಗಳಲ್ಲಿ ಕಾಲಗಣನೆ | ೮೯ |
| ಘಟಕ – ೧೨೦ : | ವೀರಗಲ್ಲು, ಮಾಸ್ತಿಗಲ್ಲು, ನಿಸಿಧಿಗಲ್ಲು | ೧೦೧ |

### ಬ್ಲಾಕ್ – ೩೧ ಪಠ್ಯ ಶಾಸನಗಳು

| | | |
|---|---|---|
| ಘಟಕ – ೧೨೧ : | ಹಲ್ಮಿಡಿ ಶಾಸನ : ಭಾಗ – ೧ ಪಠ್ಯ – ಅರ್ಥ | ೧೧೬ |
| ಘಟಕ – ೧೨೨ : | ಹಲ್ಮಿಡಿ ಶಾಸನ : ಭಾಗ – ೨ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ ಮತ್ತು ಭಾಷಿಕ ವಿವೇಚನೆ | ೧೨೯ |
| ಘಟಕ – ೧೨೩ : | ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ : ಭಾಗ – ೧ ಪಠ್ಯ – ಅರ್ಥ | ೧೪೬ |
| ಘಟಕ – ೧೨೪ : | ಕಪ್ಪೆ ಅರಭಟ್ಟನ ಶಾಸನ : ಭಾಗ – ೨ | ೧೬೦ |

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್.ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಡಿ. ಟಿ. ಬಸವರಾಜ್**
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು — ಸಂಪಾದಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಡಾ. ಡಿ. ಟಿ. ಬಸವರಾಜ್**
ಪ್ರಾಧ್ಯಾಪಕರು — ಸಂಯೋಜಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

## ಪತ್ರಿಕೆ – ೧೦ ಪಠ್ಯಕ್ರಮ ನಿರೂಪಕರು — ಘಟಕಗಳು

**ಬ್ಲಾಕ್ – ೨೯. ಡಾ. ಡಿ. ಟಿ. ಬಸವರಾಜ್** — ೧೧೩ ರಿಂದ ೧೧೬
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಬ್ಲಾಕ್ – ೩೦. ಡಾ. ಎಲ್. ರಾಜಶೇಖರಯ್ಯ** — ೧೧೭ ಮತ್ತು ೧೨೦
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

**ಡಾ. ಚಿದಾನಂದಮೂರ್ತಿ**
**ಡಾ. ಸಿ.ಪಿ. ಕೃಷ್ಣಕುಮಾರ್** } ಲೇಖಕರ ಕೃಪೆ

**ಬ್ಲಾಕ್ – ೩೧. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ** — ೧೨೧ ರಿಂದ ೧೨೪
ಪ್ರಾಧ್ಯಾಪಕರು, ನಿರ್ದೇಶಕರು (ವಿಶ್ರಾಂತ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

## ಕುಲಸಚಿವರು

ಕ.ರಾ.ಮು.ವಿ., ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2014

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು – 6 ಇಲ್ಲಿಂದ ಪಡೆಯಬಹುದು.

ಪ್ರಿಯ ಕಲಿಕಾರ್ಥಿ,

'ಶಾಸನಶಾಸ್ತ್ರ' ಇಂದು ಪ್ರತ್ಯೇಕ ಅಧ್ಯಯನ ಕ್ಷೇತ್ರವಾಗಿ ರೂಪುಗೊಂಡಿದೆ. ಹಿಂದಿನ ಅಥವಾ ಪ್ರಾಚೀನ ಕಾಲದ ಒಂದು 'ಪ್ರಕಾರ'ದ ಮಹತ್ವ ಪೂರ್ಣ ದಾಖಲೆಗಳಾಗಿ ಶಾಸನಗಳು ಇರುವುದರಿಂದ, ಇತರ ಅಧ್ಯಯನ ಕ್ಷೇತ್ರಗಳು ತಮ್ಮ ಅಧ್ಯಯನದ ಪೂರ್ಣತೆಗಾಗಿ ಈ ಕ್ಷೇತ್ರವನ್ನು ಅವಲಂಬಿಸುತ್ತವೆ. ಸಾಹಿತ್ಯವೂ ಇದಕ್ಕೆ ಹೊರತಲ್ಲ. ಶಾಸನಗಳು ಪ್ರಭುತ್ವ ಸಂಬಂಧಿ ವಿಚಾರಗಳನ್ನು ಪ್ರಮುಖವಾಗಿ ಮತ್ತು ಹೆಚ್ಚಾಗಿ ಹೇಳುತ್ತವೆಂಬುದು ನಿಜವಾದರೂ, ನಮ್ಮ (ಪ್ರಾಚೀನ) ಸಾಹಿತ್ಯ ಕೃತಿಗಳಲ್ಲಿ ಕಾಣುವ ಜೀವನ ವಿಧಾನ, ಕಲೆ–ಸಂಸ್ಕೃತಿ, ಭಾಷೆ ಮೊದಲಾದವುಗಳ ಅಧ್ಯಯನಕ್ಕೆ ನಾವು ಶಾಸನಗಳನ್ನು ಪೂರಕ ಆಕರಗಳಾಗಿ ಪರಿಗಣಿಸುತ್ತೇವೆ. ಈ ದೃಷ್ಟಿಯಿಂದ ಶಾಸನಗಳ ಪರಾಮರ್ಶೆಯು ಸಂಸ್ಕೃತಿ ಮತ್ತು ಭಾಷೆಯ ಅಧ್ಯಯನಕ್ಕೆ ಮಹತ್ವದ ಕೊಡುಗೆಯನ್ನ ನೀಡುತ್ತ ಬಂದಿದೆ ಎಂಬ ಅಂಶವನ್ನು ನೀವು ಗಮನಿಸಬೇಕು.

ಕನ್ನಡದಲ್ಲಿ ಕೂಡ ಶಾಸನ ಕ್ಷೇತ್ರವನ್ನು ಅಧ್ಯಯನ ಕ್ಷೇತ್ರವಾಗಿ ಆಯ್ದುಕೊಂಡು ಸೇವೆ ಸಲ್ಲಿಸಿದವರು ವಿರಳವೆ. ಈ ಅಧ್ಯಯನ ಕ್ಷೇತ್ರ ಅಕ್ಷರಶಃ ಕಲ್ಲುಮುಳ್ಳುಗಳ ಹಾದಿ. ಬಹುಪಟ್ಟು ಶ್ರದ್ಧೆ–ಶ್ರಮ ನಿರೀಕ್ಷಿಸುವ ಕ್ಷೇತ್ರವಿದು. ದೊಡ್ಡಬೆಟ್ಟವನ್ನು ಅಗೆದು ಚಿನ್ನದ ಎಳೆಯನ್ನು ಪಡೆವ ಶ್ರಮ ಮತ್ತು ಫಲ. ಫಲ ಕಿರಿದಾದರೂ ಮಹತ್ವ ಮೌಲಿಕವಾದುದು ಎಂಬುದರಲ್ಲಿ ಸಂದೇಹವಿಲ್ಲ ಇಂಥ ಮೌಲಿಕ ಕಾರ್ಯವನ್ನು ದಣಿವರೆಯದೆ ಸಾಧಿಸಿದ ವ್ಯಕ್ತಿಗಳ –ಸಂಸ್ಥೆಗಳ ಸೇವೆ ಸ್ಮರಣಿಯವಾದುದ್ದು.

ಸರ್ ವಿಲಿಯಂ ಜೋನ್ಸ್, ಕರ್ನಲ್ ಮೆಕೆಂಜಿ, ಜೇಮ್ಸ್ ಪ್ರಿನ್ಸೆಪ್, ಜೆ.ಎಫ್. ಫ್ಲಿಟ್, ಬುಲ್ ರೈಸ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ಶಾಸನಕ್ಷೇತ್ರದ ಸೇವೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಗಣನೀಯವಾದುದು. ಭಾರತದಲ್ಲಿ ಲಭ್ಯವಾಘಿರುವ ಶಾಸನಗಳನ್ನು ಸಂಗ್ರಹಿಸಿ 'ಎಪಿಗ್ರಾಫಿಯಾ ಇಂಡಿಕಾ' (E. I.) ಸಂಪುಟಗಳ ಮಾದರಿಯಲ್ಲಿ ಕನ್ನಡ ನಾಡಿನ ಶಾಸನಗಳನ್ನು 'ಎಪಿಗ್ರಾಫಿಯಾ ಕರ್ನಾಟಿಕ' (E. C.) ಸಂಪುಟಗಳಲ್ಲಿ ಬಿ.ಎಲ್. ರೈಸ್ ಅವರು ಸಂಪಾದಿಸಿಕೊಟ್ಟಿದ್ದಾರೆ. (ಇದರ ಪರಿಷ್ಕೃತ ಆವೃತ್ತಿಯ ಸಂಪುಟಗಳು ಕೂಡ ಈಗ ಪ್ರಕಟವಾಗುತ್ತಲಿವೆ) ಈ ಎರಡು ಶಾಸನ ಪ್ರಕಟಣಮಾಲೆಗಳಲ್ಲದೆ ಕನ್ನಡ ಶಾಸನಗಳು 'ಸೌತ್ ಇಂಡಿಯನ್ ಇನ್ಸ್ಕ್ರಿಪ್ಶನ್ಸ್' (S.I.I) ಮತ್ತು ನಮ್ಮ ನಾಡಿನ ಪ್ರಾಕ್ತನ ಇಲಾಖೆಯ M A R ಗಳಲ್ಲಿಯೂ ಪ್ರಕಟಗೊಂಡಿವೆ.

ಶಾಸನಗಳ ಶೋಧ ಮತ್ತು ಅಧ್ಯಯನದಲ್ಲಿ ಕನ್ನಡ ವಿದ್ವಾಂಸರಾದ ಕವೆಲ್ಲಿ ವೆಂಕಟಬೋರ್‍ಯ ಮೊದಲುಗೊಂಡು ಆರ್. ನರಸಿಂಹಾಚಾರ್ ಎಂ. ಎಚ್. ಕೃಷ್ಣ ಡಿ.ಸಿ ಸರ್ಕಾರ್, ಪಿ.ಬಿ. ದೇಸಾಯಿ, ಆರ್.ಎಸ್. ಪಂಚಮುಖಿ, ಬಿ.ಆರ್. ಗೋಪಾಲ್, ಶ್ರೀನಿವಾಸ ರಿತ್ತಿ, ಎಂ. ಚಿದಾನಂದ ಮೂರ್ತಿ, ಎಂ.ಎಂ. ಕಲಬುರ್ಗಿ ಮೊದಲಾದವರ ಸಾಧನೆ ಅನುಪಮವಾದದ್ದು, ಶಾಸನಗಳ ಅಧ್ಯಯನಾಕಾಂಕ್ಷಿಗಳು ವಿರಳವಾದರೂ ಶಾಸನಗಳನ್ನು ಆಧರಿಸಿಯೇ ಪಿಎಚ್.ಡಿ ಸಂಶೋಧನಾ ಕಾರ್ಯಗಳು ಕನ್ನಡದಲ್ಲಿ ನಡೆದಿವೆ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಸ್ಕೃತಿಕ ಅಧ್ಯಯನ' ಒಂದು ಮಹತ್ವದ ಸಂಶೋಧನಾ ಗ್ರಂಥ. ಇದರ ಪ್ರಭಾವ, ಪ್ರೇರಣೆ, ಅನುಸರಣೆಗಳಾಗಿ ಅನೇಕ ಸಂಶೋಧನಾ ಗ್ರಂಥಗಳೂ ಪ್ರಕಟವಾಗಿವೆ. ಈ ಶಾಸನ ಕ್ಷೇತ್ರದಲ್ಲಿ ಆಗಬೇಕಾದ ಕೆಲಸವೂ ಅಪಾರವಾಗಿದೆ. ಈ ಪತ್ರಿಕೆಯ ಅಭ್ಯಾಸ ಈ ಕ್ಷೇತ್ರದಲ್ಲಿ ಅಧ್ಯಯನ ಮಾಡುವ ಆಸಕ್ತಿಯನ್ನು ನಿಮ್ಮಲ್ಲಿ ಮೂಡಿಸಲಿ ಎಂದು ಆಶಿಸುತ್ತೇವೆ.

ಪ್ರಸ್ತುತ **'ಕನ್ನಡ ಶಾಸನ ಅಧ್ಯಯನ'**ವನ್ನು ೧೧ನೇ ಪತ್ರಿಕೆಯಾಗಿ ನೀವು ವ್ಯಾಸಂಗ ಮಾಡುತ್ತಲಿದ್ದೀರಿ. ಎರಡು ಸಂಪುಟಗಳಲ್ಲಿ ಕಲಿಕ ಸಾಮಗ್ರಿಯನ್ನು ನಿಮಗೆ ನೀಡಲಾಗಿದೆ. ಈ ಪತ್ರಿಕೆಯ ಪಠ್ಯ ವಿಷಯವನ್ನು ಎರಡು ಭಾಗವಾಗಿ ಪರಿಗಣಿಸಬಹುದು. ಮೊದಲ ಭಾಗ ಶಾಸನಗಳ ಅಧ್ಯಯನ ಕುರಿತ ತಾತ್ವಿಕ – ಸೈದ್ಧಾಂತಿಕ ವಿಚಾರಗಳದ್ದು. ಎರಡನೆಯ ಭಾಗ 'ನಿರ್ದಿಷ್ಟ ಶಾಸನ'ಗಳ ಅಧ್ಯಯನಕ್ಕೆ ಸಂಬಂಧಿಸಿದ್ದು. ಮೊದಲ ಸಂಪುಟದಲ್ಲಿ ಮೊದಲ ಭಾಗದ ಪಠ್ಯವಿಷಯದ ಜೊತೆಗೆ ಎರಡನೇ ಭಾಗಕ್ಕೆ ಸಂಬಂಧಿಸಿದ ಕೆಲ ಶಾಸನಗಳ ವಿಶ್ಲೇಷಣೆ ನೀಡಲಾಗಿದೆ.

ಅಧ್ಯಾಪಕ ವೃಂದದ ಪರವಾಗಿ
**ಡಾ. ಡಿ. ಟಿ. ಬಸವರಾಜ್**
ಅಧ್ಯಕ್ಷರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು

## ಕೋರ್ಸ್ - X : ಕನ್ನಡ ಶಾಸನ ಅಧ್ಯಯನ (ತತ್ತ್ವ ಮತ್ತು ಆಯ್ದ ಶಾಸನ ಪಠ್ಯಗಳು)

## ಬ್ಲಾಕ್ - 29 : ತತ್ತ್ವಗಳು

# ಘಟಕ - 113

# ಶಾಸನ : ಪದದ ಅರ್ಥ ಮತ್ತು ವ್ಯಾಪ್ತಿ ; ಶಾಸನಗಳ ಮಹತ್ವ

ರಚನೆ

113.0 ಘಟಕದ ಉದ್ದೇಶ

113.1 ಪೀಠಿಕೆ

113.2 ಶಾಸನ : ಪದದ ಅರ್ಥ ಮತ್ತು ವ್ಯಾಪ್ತಿ

113.3 ಶಾಸನಗಳ ಮಹತ್ವ

113.4 ಸಮಾರೋಪ

113.5 ಅಭ್ಯಾಸ ಪ್ರಶ್ನೆಗಳು

113.6 ಪರಾಮರ್ಶನ ಗ್ರಂಥಗಳು

## 113.0 ಘಟಕದ ಉದ್ದೇಶ

- 'ಶಾಸನ' ಪದದ ಅರ್ಥ ಮತ್ತು ವ್ಯಾಪ್ತಿಯನ್ನು ತಿಳಿಯುವುದು.
- 'ಚರಿತ್ರೆ' ರಚನೆಯ ಸಂದರ್ಭದಲ್ಲಿ ಶಾಸನಗಳು ವಹಿಸುವ ಪಾತ್ರವನ್ನು ಅರಿಯುವುದು.

## 113.1 ಪೀಠಿಕೆ

ಪ್ರಿಯ ವಿದ್ಯಾರ್ಥಿ, ನಮ್ಮ ಇಂದಿನ ಬದುಕು ಯಾವ ಸ್ವರೂಪದಲ್ಲಿ ಇದೆಯೋ ಹಾಗೆಯೇ ನಮ್ಮ ಪೂರ್ವಜರ ಬದುಕು ಇದ್ದಿಲ್ಲ. ಚಿಂತನೆ - ಜೀವನ ವಿಧಾನ, ಆಚಾರವಿಚಾರ, ಧಾರ್ಮಿಕವಾದ ನಂಬಿಕೆ, ರಾಜಕೀಯವಾದ ವ್ಯವಸ್ಥೆ ಎಲ್ಲದರಲ್ಲೂ ಹಲಕೆಲ ವ್ಯತ್ಯಾಸಗಳು ವಿಶಿಷ್ಟತೆಗಳೂ ಇದ್ದೇ ಇವೆ. ನಮ್ಮ ಪೂರ್ವಿಕರ ಬದುಕು ನಮಗೆ ತಿಳಿಯುವುದು ಚರಿತ್ರೆಯಿಂದ. ಈ ಚರಿತ್ರೆಯಲ್ಲಿ ರಾಜಕೀಯ ಮಾತ್ರವೇ ಅಲ್ಲದೆ ಮೇಲೆ ಹೇಳಿದ ಎಲ್ಲಾ ಅಂಶಗಳೂ ಅಂತರ್ಗತವಾಗುತ್ತವೆ. ಇಂಥದೊಂದು ಚರಿತ್ರೆಯನ್ನು ತಿಳಿಯಲು ನಮಗೆ ಐತಿಹ್ಯಗಳು, ಪುರಾಣವೇ ಮೊದಲಾದ ಸಾಹಿತ್ಯ ಕೃತಿಗಳು, ಪುರಾತತ್ತ್ವ ಶೋಧನೆಯೇ ಮೊದಲಾದ ಸಂಶೋಧನೆಗಳು ನೆರವಾಗುತ್ತವೆ. ಇವುಗಳ ಸಾಲಿಗೆ ಶಾಸನಗಳೂ ಸೇರುತ್ತವೆ. ಅಂದಂದಿನ ಬದುಕಿನ ಬಹುತೇಕ ಮಗ್ಗುಲುಗಳ ವಿವರಗಳನ್ನು ಶಾಸನಗಳು ಲಿಖಿತವಾಗಿ ದಾಖಲಿಸಿಕೊಂಡುತ್ತವೆ. ಆದುದರಿಂದ ಇವು ಇತರ ಆಕರಗಳಿಗಿಂತ ಹಲವಾರು ಸಂದರ್ಭಗಳಲ್ಲಿ ಅಧಿಕೃತತೆ ಪಡೆಯುತ್ತವೆ.

ಶಾಸನಗಳ ಅಧ್ಯಯನ ಈ ದೃಷ್ಟಿಯಿಂದ ಅಪೇಕ್ಷಣೀಯ. ಅತ್ಯಂತ ಕುತೂಹಲಕಾರಿ ಕೂಡ. ಪ್ರಸ್ತುತ ಪತ್ರಿಕೆ ಇಂಥ ಮಹತ್ವದ ವಿಷಯವನ್ನೊಳಗೊಂಡಿದೆ. ಕನ್ನಡ ಶಾಸನಗಳ ಅಧ್ಯಯನದ ಮೂಲಕ ಕನ್ನಡ ನಾಡು - ಸಂಸ್ಕೃತಿಯ ತಿಳುವಳಿಕೆ ಪಡೆಯುವ ಸದವಕಾಶವಿದು. ಈ ಪತ್ರಿಕೆಯಲ್ಲಿ ಎರಡು ಭಾಗಗಳಿವೆ. ಮೊದಲ ಭಾಗ - 'ಶಾಸನ ಶಾಸ್ತ್ರ' ಕುರಿತ ತಾತ್ವಿಕ ವಿಚಾರಗಳನ್ನು ಪ್ರಸ್ತಾಪಿಸುತ್ತದೆ. ಎರಡನೆಯ ಭಾಗದಲ್ಲಿ ನಿರ್ದಿಷ್ಟವಾದ ಶಾಸನಗಳನ್ನೇ ಕುರಿತಿದೆ. ಶಾಸನ ಶಾಸ್ತ್ರದ ಈ ಪತ್ರಿಕೆ ನಿಮಗೆ ಪ್ರಾಚೀನ ಕರ್ನಾಟಕದ ಸಮಗ್ರ ಸ್ವರೂಪವನ್ನು ಸ್ಥೂಲವಾಗಿ ಕಟ್ಟಿಕೊಡುತ್ತದೆ. ಈ ಶಾಸನಗಳ ಅಧ್ಯಯನ ನಿಮ್ಮಲ್ಲಿ ಈ ಶಾಸ್ತ್ರದ ಬಗ್ಗೆ ಆಸಕ್ತಿ ಮೂಡಿಸಲಿ, ಹೆಚ್ಚು ಆಳವಾದ ವ್ಯಾಪಕವಾದ ಅಧ್ಯಯನಕ್ಕೆ ನಿಮ್ಮನ್ನು ಪ್ರೇರೇಪಿಸಲಿ ಎಂದು ಆಶಿಸುತ್ತೇವೆ.

## 113.2 ಶಾಸನ : ಪದದ ಅರ್ಥ ಮತ್ತು ವ್ಯಾಪ್ತಿ

'ಶಾಸನ' ಎಂಬುದು ಸಂಸ್ಕೃತ ಪದ. ಇದನ್ನು 'ಕಾನೂನು' ಎಂಬ ಅರ್ಥದಲ್ಲಿ ಈಗಲೂ ನಾವು ಬಳಸುತ್ತಿದ್ದೇವೆ. 'ಶಾಸಕ' ಎಂಬ ಪದ ಕೂಡ ಇದರೊಡನೆ ಸಂಬಂಧವಿರಿಸಿಕೊಂಡಿದೆ. ಕಾನೂನು, ಕಾನೂನುಗಳನ್ನು ರೂಪಿಸುವವರು, ಕಾನೂನು ಅಥವಾ ಸಂಹಿತೆಗಳ ಅನುಸಾರ ಅಧಿಕಾರ ನಡೆಸುವವರು ಎಂಬತ್ಯಾದಿ ಅರ್ಥಛಾಯೆಗಳಲ್ಲಿ ಈ ಪದ ಪ್ರಚಲಿತದಲ್ಲಿದೆ. 'ಶಾಸನ' ಪದ 'ಶಾಸ್' ಎಂಬ ಧಾತುವಿನಿಂದ ಬಂದದ್ದು. 'ಶಾಸ್' ಎಂಬ ಧಾತುವಿನಿಂದ ನಿಷ್ಪನ್ನವಾದ 'ಶಾಸನ' ಎಂಬ ಪದಕ್ಕೆ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂಬ ಅರ್ಥಗಳಿವೆ. ಕೌಟಿಲ್ಯ, ಶುಕ್ರಾಚಾರ್ಯ ಮೊದಲಾದ ಪ್ರಾಚೀನರು 'ಶಾಸನ' ಪದಕ್ಕೆ ಇರುವ ಅರ್ಥಗಳನ್ನು ಪ್ರಸ್ತಾಪಿಸಿದ್ದಾರೆ. "(ಪ್ರಾಚೀನರು) ಹೇಳುತ್ತಾರೆ- ಶಾಸನ (ಎಂಬ ಪದ) ರಾಜರ ಆಜ್ಞೆಗಳನ್ನು ತಿಳಿಸುವ ಬರಹವನ್ನು ಹೇಳುತ್ತದೆ" ಎಂದು ಕೌಟಿಲ್ಯ ಹೇಳಿದರೆ ; 'ಶುಕ್ರನೀತಿ ಸಾರ' ವು ಶಾಸನದಲ್ಲಿ ವಿಷಯ ನಿರೂಪಣೆ ಕೂಡ ಹೇಗಿರಬೇಕೆಂಬುದನ್ನೂ ತಿಳಿಸುತ್ತದೆ. ನೀತಿಸಾರದ ಈ ವಿವರಣೆ ಗಮನಿಸಿ

"ಶಾಸನ ಪತ್ರದಲ್ಲಿ ರಾಜನ ಸ್ವಂತ ರುಜುವೂ, ಆ ಆಜ್ಞೆ ಹೊರಟ ದಿನಾಂಕವೂ ಇರಬೇಕು ಮತ್ತು ಹೀಗೆ ಆರಂಭವಾಗಬೇಕು- 'ನೀವೆಲ್ಲ ಕೇಳಿರಿ, ನೀವೆಲ್ಲ ಹೀಗೆ ಹೀಗೆ ಮಾಡಬೇಕು ಮತ್ತು ಈ ಆಜ್ಞೆಯಂತೆ ನಡೆದುಕೊಳ್ಳಬೇಕು' ಇತ್ಯಾದಿ".

"....ಇವು ಸಾಮಂತರಿಗೆ, ಮಾಂಡಲಿಕರಿಗೆ ಮತ್ತು ಇತರ ಅಧಿಕಾರಿಗಳಿಗೆ ಒಪ್ಪಿಸಿದ ಕರ್ತವ್ಯಗಳ ನಿರೂಪಣೆಗಳು".

"ಲೇಖನವಿಲ್ಲದೆ ಆಜ್ಞೆ ಮಾಡುವ ರಾಜ, ಇಂತಹ ಆಜ್ಞಾಪತ್ರಗಳಿಲ್ಲದೆ ಅಧಿಕಾರವನ್ನು ಪ್ರಯೋಗಿಸುವ ಅಧಿಕಾರಿಗಳಿಬ್ಬರು ಚೋರರು".

"ರಾಜಮುದ್ರಾಸಹಿತವಾದ ಶಾಸನವೇ ನಿಜವಾದ ರಾಜ. ಬರಿಯ ರಾಜ ರಾಜನೇ ಅಲ್ಲ".

ಶುಕ್ರ ನೀತಿಸಾರದ ಈ ಮಾತುಗಳಲ್ಲಿ ಶಾಸನಗಳನ್ನು ಕುರಿತು ಅನೇಕ ಮಹತ್ವದ ಅಂಶಗಳು ತಿಳಿಯುತ್ತವೆ. ಅವುಗಳಲ್ಲಿ ಮುಖ್ಯವಾದುವು, ಶಾಸನಗಳು ರಾಜನಿಂದ ಹೊರಟ ಆಜ್ಞೆಗಳು, ಮುಖ್ಯವಾಗಿ ಆಡಳಿತ ನಿರ್ವಹಣೆಗೆ ಸಂಬಧಪಟ್ಟವು, ಬರವಣಿಗೆಯ ರೂಪದಲ್ಲಿರುವ ಆಜ್ಞೆಗೆ ಮಾತ್ರ ಮಾನ್ಯತೆ ಇತ್ತು. ಬರವಣಿಗೆ ರೂಪದ ಆಜ್ಞೆ ರಾಜಮುದ್ರೆಯಿಂದ ಕೂಡಿರಬೇಕು, ಆಗ ಮಾತ್ರ ಅದಕ್ಕೆ ಅಧಿಕೃತತೆ ಪ್ರಾಪ್ತವಾಗುತ್ತದೆ ಇತ್ಯಾದಿ .

ದೂತರ ಮೂಲಕ ರಾಜನು ಆಜ್ಞೆಗಳನ್ನು ತನ್ನ ಇತರ ಅಧಿಕಾರಿಗಳಿಗೆ ಅಥವಾ ರಾಜರುಗಳಿಗೆ ಕಳುಹಿಸಿಕೊಡುವ ಪದ್ಧತಿಯಿದ್ದುದು ಸರಿಯಷ್ಟೆ. ".... ದೂತರು ಅವಜ್ಞತೆಯಿಂದಲೋ ಅಜ್ಞಾನದಿಂದಲೋ, ದಡ್ಡತನದಿಂದಲೋ ಆ ಆಜ್ಞೆಯನ್ನು ಸರಿಯಾಗಿ ಮುಟ್ಟಿಸದೆ ಇರಬಹುದು. ಆದ್ದರಿಂದ ತಾಳಪತ್ರದ ಮೇಲೆ ಲಿಖಿತವಾದ ರಾಜಾಜ್ಞೇಯೇ ಗೌರವಾರ್ಹವಾದುದು" ಎಂಬುದು ಕೌಟಿಲ್ಯನ ಮತ್ತೊಂದು ವ್ಯಾಖ್ಯಾನ. "ರಾಜರ ಆಜ್ಞೆಯೇನೋ ತಾಳಪತ್ರಗಳ ಮೇಲೆ ಇದ್ದಿರಬಹುದು. ಆದರೆ ಅವು ಇಲ್ಲಿಯವರೆಗೆ ಉಳಿದು ಬಂದಿಲ್ಲ. ಅವರು ಕೊಟ್ಟ ದತ್ತಿಗಳ ವಿಷಯ ಮೂಲತಃ ತಾಳಪತ್ರಗಳ ಮೇಲೆ ಇದ್ದಿತಾದರೂ ಆ ವಿಷಯವು ಬಹುಕಾಲ ಉಳಿಯಲೆಂಬ ಉದ್ದೇಶದಿಂದ ತಾಮ್ರ ಪಟಗಳ ಮೇಲೂ, ಶಿಲೆಗಳ ಮೇಲೂ ಕೊರೆದರು. ಇವುಗಳೂ ರಾಜಾಜ್ಞೆಗಳಾದುದರಿಂದ 'ಶಾಸನ'ಗಳೆಂಬುದು ಇವುಗಳಿಗೆ ಅನ್ವರ್ಥವಾಯಿತು" (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. - ೧೪).

ರಾಜನ ಕರ್ತವ್ಯಗಳ ಪ್ರಸ್ತಾಪ ಮಾಡುತ್ತ 'ಯಾಜ್ಞವಲ್ಕ್ಯ ಸಂಹಿತೆ'ಯು ಶಾಸನವೆಂಬ ಪರಿಕಲ್ಪನೆಗೆ ಸರಿಹೊಂದುವ ಈ ಕೆಲವು ವಿಚಾರಗಳನ್ನು ಹೇಳಿದೆ. "ಭೂಮಿಯನ್ನು ದಾನ ಮಾಡುವಾಗಲೋ ಅಥವಾ ಯಾವುದಾದರೂ ಶಾಶ್ವತವಾದ ಏರ್ಪಾಟನ್ನು ಮಾಡುವಾಗಲೋ ಅದರ ನಿಯಮಗಳನ್ನು ಮುಂದಿನ ರಾಜರ ತಿಳುವಳಿಕೆಗಾಗಿ ವಸ್ತ್ರಪಟದ ಮೇಲಾಗಲಿ, ತಾಮ್ರಪಟದ ಮೇಲಾಗಲಿ ಬರೆಯಿಸಬೇಕು. ಅದರಲ್ಲಿ ತನಗಿಂತ ಹಿಂದಿನ (ಮೂರು) ತಲೆಮಾರುಗಳ ವಿಷಯ, ತನ್ನ ವಿಷಯ, ದಾನವನ್ನು ಸ್ವೀಕರಿಸುವವನ ವಿಷಯ, ದಾನದ ಪ್ರಮಾಣ, ಭೂಮಿಯ ಮೇರೆಗಳು, ದಿನಾಂಕ ಇವುಗಳನ್ನು ನಿರೂಪಿಸಿ, ತನ್ನ ಮುದ್ರೆ ಮತ್ತು ಸಹಿಗಳನ್ನು ಹಾಕಬೇಕು. ಹೀಗೆ ದಾನವು ಶಾಶ್ವತವಾಗಿ ನಡೆಯುವಂತೆ ಮಾಡಬೇಕು"

ದತ್ವಾ ಭೂಮಿಂ ನಿಬಂಧಂ ವಾ ಕೃತ್ವಾ ಲೇಖ್ಯಂ ತು ಕಾರಯೇತ್ |
ಆಗಾಮಿಭದ್ರ ನೃಪತಿ ಪರಿಜ್ಞಾನಾಯ ಪಾರ್ಥಿವಃ ||
ಪಟೇ ವಾತಾಮ್ರಪಟ್ಟೇ ವಾ ಸ್ವಮುದ್ರೋಪರಿ ಚಿಹ್ನಿತಂ |
ಅಭಿ ಲೇಖ್ಯಾತ್ಮನೋ ವಂಶ್ಯಾನಾತ್ಮಾನಂ ಚ ಮಹೀಪತಿಃ ||
ಪ್ರತಿಗ್ರಹ ಪರೀಮಾಣಂ ದಾನಚ್ಛೇದೋವರ್ಣನಂ |
ಸ್ವಹಸ್ತಕಾಲಸಂಪನ್ನಂ ಶಾಸನಂ ಕಾರಯೇತ್ ಸ್ಥಿರಂ.

ಯಾಜ್ಞವಲ್ಕ್ಯ ಸಂಹಿತೆಯ ಈ ಮಾತುಗಳು ಮುಖ್ಯವಾಗಿ ದಾನ ಶಾಸನಗಳನ್ನು ಕುರಿತು ಹೇಳಿದಂತೆ ಕಂಡರೂ ಶಾಸನಗಳ ಸ್ವರೂಪ, ಉದ್ದೇಶ, ಪ್ರಯೋಜನ ಮೊದಲಾದ ಸಂಗತಿಗಳನ್ನು ಕುರಿತಿರುವುದನ್ನು ನಾವು ಗಮನಿಸಬೇಕು.

ರಾಜಾಜ್ಞೆಗಳು ಸಾಮಂತ ಮಾಂಡಲಿಕರಿಗೆ ರಾಜ್ಯ ಸೂತ್ರಗಳ ನಿರ್ವಹಣೆ ಕುರಿತ ನಿರೂಪಗಳನ್ನು ಹೇಗೆ ಹೊಂದಿರುತ್ತಿದ್ದುವೋ ಹಾಗೆಯೇ ಕೆಲವು ರಾಜಾಜ್ಞೆಗಳು ಜನಸಾಮಾನ್ಯರ ತಿಳುವಳಿಕೆಗೆ ತಲುಪಬೇಕಿತ್ತು. ಇದಕ್ಕಾಗಿ ವ್ಯವಸ್ಥಿತ ವಿಧಾನವೇ ಇದ್ದುದಾಗಿ ತಿಳಿಯುತ್ತದೆ. ಶುಕ್ರನೀತಿ ಸಾರವು ಇದನ್ನು ಸ್ಪಷ್ಟವಾಗಿ ತಿಳಿಸುತ್ತದೆ. "ರಾಜ ಶಾಸನಗಳನ್ನು, ಎಂದರೆ ರಾಜಾಜ್ಞೆಗಳನ್ನು - ಪ್ರಜೆಗಳಿಗೆ ಡಂಗುರ ಹೊಯಿಸಿ ತಿಳಿಸಬೇಕೆಂದೂ, ಅವುಗಳನ್ನು ಪ್ರಜೆಗಳ ಗಮನಕ್ಕೆ ತರಲು ಅವುಗಳನ್ನು ನಾಲ್ಕು ದಾರಿಗಳು ಕೊಡುವ ಸ್ಥಳಗಳಲ್ಲಿ ಬರೆಯಿಸಿ ಪ್ರಕಟಿಸಬೇಕೆಂದೂ, ಅವುಗಳನ್ನು ಮೀರಿದವರಿಗೆ ಶಿಕ್ಷೆಯನ್ನು ವಿಧಿಸಲಾಗುವುದೆಂದು ತಿಳಿಸಬೇಕು..." (ಅಲ್ಲೇ).

> ಇತಿ ಮಚ್ಛಾಸನಂ ಶ್ರುತ್ವಾ ಯೇಽನ್ಯಥಾ ವರ್ತಯನ್ತಿ ತಾನ್
> ವಿನಿಷ್ಯಾಮಿ ದಂಡೇನ ಮಹತಾ ಪಾಪಕಾರಕಾನ್
> ಇತಿ ಪ್ರಬೋಧಯೇನ್ನಿತ್ಯಂ ಪ್ರಜಾಶ್ಯಾಸನ ಡಿಂಡಿಮೈಃ
> ಲಿಖಿತ್ವಾ ಶಾಸನಂ ರಾಜಾ ಧಾರಯೇತ ಚತುಷ್ಪಥೇ (೧. ೩೧೨-೩)

ಕೆಲವೊಮ್ಮೆ ಅತ್ಯಂತ ಸಾಮಾನ್ಯವೆನಿಸುವ (ಆದರೆ ಮುಖ್ಯವಾದ) ಸಂಗತಿಗಳನ್ನು ಕೂಡ ಶಾಸನಗಳ ರೂಪದಲ್ಲಿ ಪ್ರಜೆಗಳಿಗೆ ತಿಳಿಯಪಡಿಸಲಾಗುತ್ತಿತ್ತು. "ಜನರು ಪರಸ್ಪರ ದೂಷಿಸಕೂಡದು, ಹೊಡೆದಾಡಕೂಡದು, ರಾಜಕಾರ್ಯಗಳನ್ನು ಮಾಡುವವರು ಲಂಚ ಸ್ವೀಕರಿಸಕೂಡದು, ಯಾರೂ ಅವರಿಗೆ ಲಂಚ ಕೊಡಕೂಡದು ಇತ್ಯಾದಿ" (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. - ೧೪).

ಮೇಲಿನ ಈ ಕೆಲವು ವಿವರಗಳನ್ನು ಗಮನಿಸಿದರೆ, ಶಾಸನಗಳು ಎಂದರೆ ರಾಜಾಜ್ಞೆಗಳು, ಅಧಿಕಾರಿಗಳು ಅಥವಾ ಸಾಮಂತಾದಿಗಳಿಗೆ ನೀಡಿದ ಆಡಳಿತ ನಿರೂಪಗಳು ; ಕೆಲವೊಮ್ಮೆ ಪ್ರಜೆಗಳಿಗೆ ನೀಡಿದ ನಿರ್ದೇಶನಗಳು ಎಂತಲೂ ಅರ್ಥವಾಗುತ್ತದೆ. ದಾನ ಮುಂತಾದ ಕಾರ್ಯಗಳನ್ನು ನೆರವೇರಿಸಿದಾಗ ಅಂಥವೂ ಕೂಡ ರಾಜಾಜ್ಞೆಯ ರೂಪದಲ್ಲಿರತಕ್ಕವು ಎಂಬಿತ್ಯಾದಿ ವಿಚಾರಗಳು ಸ್ಪಷ್ಟವಾಗುತ್ತವೆ.

'ಶಾಸನ' ಎಂಬ ಪದಕ್ಕೆ 'ರಾಜಾಜ್ಞೆ' ಎಂಬ ಅರ್ಥವೇ ಹೆಚ್ಚು ಅನ್ವವಾಗುವಂಥಾದ್ದು. ಈ ಆಜ್ಞೆಗಳು, ಆಡಳಿತ ಅಧಿಕಾರದ ಯಾವುದೇ ವಿಷಯವನ್ನು ಒಳಗೊಂಡಿರುವುದು ಶಾಸನ ಎಂಬ ಪದಕ್ಕೆ ಅನ್ವರ್ಥವಾಗುತ್ತದೆ. ಈ ಮೂಲ ಅರ್ಥವು ಮುಂದೆ ಕ್ರಮೇಣ ವ್ಯಾಪಕವಾದ ಅರ್ಥ ಮತ್ತು ಸ್ವರೂಪದಲ್ಲಿ ವಿಸ್ತೃತವಾಗಿ ಬಳಕೆಯಾಗಿದೆ.

ಆಡಳಿತ ಅಧಿಕಾರಕ್ಕೆ ಸಂಬಂಧಿಸಿದ ರಾಜನಿಂದ ಹೊರಟ ಆಜ್ಞೆಗಳು ಶಾಸನವೆಂದಿದ್ದದ್ದು ರಾಜನು ನೀಡಿದ (ಆಡಳಿತ ಅಧಿಕಾರೇತರ) ಎಲ್ಲ ನಿರೂಪಗಳಿಗೂ ಅನ್ವಯವಾಗತೊಡಗಿತು. ರಾಜನೊಬ್ಬ ನೀಡಿದ ದಾನ ವಿಚಾರ ಕೂಡ ಶಾಸನ ಎಂಬ ವ್ಯಾಪ್ತಿಗೆ ಒಳಪಟ್ಟಿದ್ದು ಅದರ ಮೊದಲ ವಿಸ್ತೃತ ಅರ್ಥಗಳಲ್ಲೊಂದು. ಕೊಟ್ಟ ದಾನ ಅಧಿಕೃತವಾದದ್ದು ಎಂಬ ಕಾರಣಕ್ಕಾಗಿ ದಾನ ವಿವರ ಹೊಂದಿದ ಬರಹಗಳೂ 'ಶಾಸನ'ದ ವ್ಯಾಪ್ತಿಗೆ ಒಳಪಟ್ಟವು. ರಾಜನ ತೀರಾ ವೈಯಕ್ತಿಕ ವ್ಯವಹಾರವಲ್ಲದ ಕಾರಣಕ್ಕೋ, 'ರಾಜ'ನಾಗಿ ನೀಡಿದ ಕಾರಣಕ್ಕೋ ದಾನ ಕಾರ್ಯಗಳು ಮತ್ತು ಅವುಗಳ ಉಲ್ಲೇಖ ಆಡಳಿತದ ಪರಿಧಿಯೊಳಗೇ ಬರುವಂಥದ್ದಾಗಿರುವುದರಿಂದ ಅವುಗಳನ್ನು ರಾಜಾಜ್ಞೆ ಅರ್ಥದ 'ಶಾಸನ' ಪದದಿಂದಲೇ ಅರ್ಥೈಸಿಕೊಳ್ಳುವುದು ಸೂಕ್ತವಾಗಿಯೇ ಇದೆ. ಮುಂದುವರಿದು, ರಾಜನ ಪರವಾಗಿ ಅಧಿಕಾರ ಹೊಂದಿದ (ರಾಜನಲ್ಲದ) ಅಧಿಕಾರಿಗಳು ಹಾಕಿಸಿದ ರಾಜಾಜ್ಞೆಗಳೂ 'ಶಾಸನ' ಎಂಬ ಅರ್ಥದಲ್ಲಿಯೇ ಪರಿಗಣಿತವಾಗತೊಡಗಿದವು. ಇವರು ಹಾಕಿಸಿದ ದಾನ ಧರ್ಮದ ವಿಷಯವನ್ನೊಳಗೊಂಡ ಉಲ್ಲೇಖಗಳೂ ಶಾಸನವೆಂಬ ಪದದ

ಅರ್ಥ ವ್ಯಾಪ್ತಿಯ ಒಳಗೇ ಬಂದವು. ರಾಜರ 'ಪ್ರಶಸ್ತಿ'ಯನ್ನು ಕುರಿತ ಬರಹಗಳು, ವೀರರ ಸಾವನ್ನು ಹೇಳುವ ಬರಹಗಳು, ಸಂನ್ಯಾಸಿಗಳ ಮರಣವನ್ನು ಹೇಳುವ ಬರಹಗಳು, ಕಡೆಗೆ ಶಿಲ್ಪದ ಅಥವಾ ಶಿಲ್ಪಿಯ ಹೆಸರನ್ನು ಉಲ್ಲೇಖಿಸುವ ಬರಹಗಳು, ಮುಂದುವರಿದು ಹೇಳುವುದಾದರೆ ಗಟ್ಟಿ ವಸ್ತುಗಳಾದ ಕಲ್ಲು, ಮರ, ಮಣ್ಣಿನ ವಸ್ತು ಮೊದಲಾದವುಗಳ ಮೇಲೆ ಬಯಲ್ಪಟ್ಟ ಯಾವುದೇ ವಿಷಯದ ಪ್ರಸ್ತಾಪವಿರುವುದನ್ನೂ 'ಶಾಸನ' ಎಂದೇ ಕರೆಯುವ ರೂಢಿ ಉಂಟಾಯಿತು.

"ಮೊದಲ ಹಂತದ ಶಾಸನಗಳು ರಾಜ ಕೊಟ್ಟ ದಾನಗಳನ್ನೂ ತತ್ಸಂಬಂಧವಾದ ನಿಯಮಗಳನ್ನೂ ಹೇಳುತ್ತಿದ್ದವು; ದಾನವಾಗಿ ಕೊಟ್ಟ ಭೂಮಿಗೆ ತೆರಿಗೆಯ ವಿನಾಯಿತಿಯನ್ನು ಹೇಳುವ ಆಜ್ಞೆಯನ್ನೂ ಅವು ಒಳಗೊಂಡಿರುತ್ತಿದ್ದವು. ಮುಂದೆ ರಾಜರಲ್ಲದೆ ಬೇರೆಯವರು ಕೊಟ್ಟ ದಾನಗಳನ್ನು ಉಲ್ಲೇಖಿಸುವ ಬರಹಗಳೂ ಶಾಸನಗಳೆಂದು ಕರೆಯಿಸಿಕೊಂಡವು. ಇದು ಎರಡನೆಯ ಹಂತ. ಕಡೆಕಡೆಗೆ, ದಾನಕ್ಕೆ ಸಂಬಂಧಿಸಿದ, ರಾಜಾಜ್ಞೆಯನ್ನೊಳಗೊಂಡಿರದ, ಸಂಕೀರ್ಣ ವಿಷಯಕ ಬರಹಗಳಿಗೆಲ್ಲ ಶಾಸನವೆಂಬ ಹೆಸರು ಅನ್ವಯವಾಗತೊಡಗಿತು. ಇಂದು ಶಾಸನವೆಂದರೆ ದಾನ ಶಾಸನವೇ ಆಗಿರಬೇಕಾಗಿಲ್ಲ. ಇತರ ವಿಷಯಗಳನ್ನೂ ಹೇಳುವಂಥದ್ದಾಗಿರಬಹುದು; ಅದು ಆಜ್ಞೆಯೇ ಆಗಿರಬೇಕಾಗಿಲ್ಲ. ಯಾವುದೋ ಸಂಗತಿ ನಿರೂಪಣೆಯಷ್ಟೇ ಆಗಿರಬಹುದು". ('ಶಾಸನಶಾಸ್ತ್ರ' ಕುರಿತ ಹಳೆಯ ಮಾರ್ಗದರ್ಶಕ ಪಾಠ, ಪು. - ೧೦) ಎಂಬ ಮಾತುಗಳು (ಭಾರತೀಯ) ಶಾಸನಗಳ ಅರ್ಥ ಮತ್ತು ವ್ಯಾಪ್ತಿಯ ಸ್ಥೂಲ ಚಿತ್ರವನ್ನು ಕಟ್ಟಿಕೊಡುತ್ತವೆ.

'ಶಾಸನ'ಕ್ಕೆ ಇಂಗ್ಲಿಷ್‌ನಲ್ಲಿ 'Inscription' ಎಂಬ ಸಂವಾದಿ ಪದವಿದೆ. 'Epigraph' ಎಂಬ ಸಮಾನಾರ್ಥಕ ಪದ ಪ್ರಯೋಗವೂ ಇದೆ. "Inscribe" ಎಂದರೆ 'ಕೆತ್ತು' ಎಂಬ ಅರ್ಥವಿದೆ. Inscribe ಆಗಿರುವಂಥದ್ದು Inscription. ಅಂದರೆ ಕೆತ್ತಲ್ಪಟ್ಟದ್ದು ಅಥವಾ ಕೊರೆಯಲ್ಪಟ್ಟದ್ದು ಎಂಬ ಅರ್ಥವಿದೆ. ಯಾರು ಕೆತ್ತನೆಗೆ ಕಾರಣಕರ್ತರು, ಯಾರು ಕೆತ್ತಿದರು, ಏನು ವಿಷಯವಿದೆ ಎಂಬ ಈ ಯಾವ ಅಂಶಗಳ ಹಿನ್ನೆಲೆಯೂ Inscription ಎಂಬ ಪದಕ್ಕಿಲ್ಲ. ಇದರ ಅರ್ಥ ತೀರಾ ನಿರ್ದಿಷ್ಟ ಚೌಕಟ್ಟಿಗೆ ಒಳಪಡದೆ ಸಾಕಷ್ಟು ವಿಶಾಲವಾದ ವ್ಯಾಪಕವಾದ ಅರ್ಥವನ್ನು ಹೊಂದಿದೆ. "ಶಾಸನವೆಂದರೆ ಯಾವುದಾದರೊಂದು ಪದಾರ್ಥದ ಮೇಲೆ ಕೊರೆದ ಯಾವುದೇ ಬರಹವೆಂದು ಅಕ್ಷರಶಃ ಅರ್ಥವಾಗುತ್ತದೆ" ಎನ್ನುತ್ತಾರೆ ಡಿ.ಸಿ. ಸರ್ಕಾರ್ ಎಂಬ ವಿದ್ವಾಂಸರು. ( Inscription literally means any writing engraved on some object ).

ಬ್ರಿಟಾನಿಕಾ ವಿಶ್ವಕೋಶ'ದಲ್ಲಿ ಒಂದು ಅಧಿಕೃತ ವಿವರಣೆ ಶಾಸನದ ಬಗ್ಗೆ ಈ ರೀತಿ ಇದೆ. "Documents incised on some hard or permanent material in the form of letters or other conventional signs, for the purpose of conveying some information or preserving a record. They are, therefore, to be distinguished on the one hand form manuscripts or documents written on papyrus, parchment, paper or other more or less smooth surface by means of a brush, reed or pen and some coloured fluid" (XII, p.-393).

ಸಾಮಾನ್ಯವಾಗಿ, ನಾಶವಾಗುವಂತಹ ತಾಳೆಗರಿ, ಭೂರ್ಜಪತ್ರ. ಕಾಗದ ಮೊದಲಾದವುಗಳ ಮೇಲಿನ ಬರಹಗಳನ್ನು ಹೊರತುಪಡಿಸಿ ಬಹುಕಾಲ ಉಳಿಯುವ ಗಟ್ಟಿ ವಸ್ತುಗಳ (ಶಿಲೆ, ಲೋಹ ಇತ್ಯಾದಿ) ಮೇಲೆ ಬರೆದಿರುವ ಬರವಣಿಗೆಯನ್ನು ಶಾಸನಗಳೆಂದು ಕರೆಯಲಾಗುತ್ತದೆ.

ಬರವಣಿಗೆಗೆ ಅನೇಕ ಬಗೆಯ ವಸ್ತುಗಳನ್ನು ಬಳಸಿದ್ದಾರೆ. ತಾಳಪತ್ರ, ಭೂರ್ಜಪತ್ರಗಳಲ್ಲದೆ, ಅಗರು ತೊಗಟೆ, ವಸ್ತ್ರ, ಚರ್ಮ, ಕಾಗದ, ಮರ ಮೊದಲಾದುವನ್ನು ಇಲ್ಲಿ ಹೆಸರಿಸಬಹುದು. ಈ ಎಲ್ಲಾ ವಸ್ತುಗಳ ಮೇಲೂ ಶಾಸನ ಎಂದು ಕರೆಸಿಕೊಳ್ಳುವ ಬರವಣಿಗೆ ಕಾಣಸಿಗುತ್ತದೆ. ಒಂದು ಕಾಲಕ್ಕೆ, ಗಟ್ಟಿಯಾದ ವಸ್ತುವಿನ ಮೇಲೆಯಷ್ಟೇ ಬರೆದ, ದೀರ್ಘಕಾಲದವರೆಗೆ ಅವು ಉಳಿಯಬೇಕೆಂದು ಉದ್ದಿಷ್ಟವುಳ್ಳ ಬರವಣಿಗೆಯನ್ನು ಮಾತ್ರವೇ ಶಾಸನವೆಂದು ಕರೆಯಬೇಕೆಂಬ ರೂಢಿ ಸಡಿಲವಾಯಿತು. ಕಾಲಕ್ರಮದಲ್ಲಿ ಬರವಣಿಗೆಗೆ

ಬಳಸುವ ಎಲ್ಲಾ ವಸ್ತುಗಳ ಮೇಲೂ ಶಾಸನಗಳನ್ನು ಬರೆಸುವ ರೂಢಿ ಬಳಕೆಗೆ ಬಂದಿತು. "ಈಜಿಪ್ಟಿನಲ್ಲಿ ಮರದ ಮೇಲೆ ಬರೆದಿರುವ ಶಾಸನಗಳೂ ಚೀನಾದಲ್ಲಿ ಮೂಳೆಗಳ ಮೇಲೆ ಬರೆದಿರುವ ಶಾಸನಗಳೂ ಸಿಕ್ಕಿವೆ. ಮೆಸಪಟೋಮಿಯಾ ಮತ್ತು ಕ್ರೀಟೆಗಳಲ್ಲಿ ಮಣ್ಣು ಹಸಿಯಿರುವಾಗ ಅದರ ಮೇಲೆ ಮುದ್ರೆಗಳಿಂದ ಒತ್ತಿ ಬಳಿಕ ಸುಡುತ್ತಿದ್ದು.. "ದಕ್ಕೆ ಆಧಾರಗಳು ದೊರಕಿವೆ. "....ಹರಪ್ಪ ಮತ್ತು ಮೊಹಂಜೊದಾರೋಗಳಲ್ಲಿ ಇಂತಹ ಹಲವಾರು ಮುದ್ರೆಗಳು ಸಿಕ್ಕಿವೆ." ನಾಣ್ಯಗಳ ಮತ್ತು ಹರಳುಗಳ ಮೇಲಿರುವ ಬರಹಗಳೂ ಶಾಸನಗಳೇ..... ಮಣ್ಣಿನ ಪಾತ್ರೆಗಳ ಮೇಲೆ ಇರುವ ಬರಹಗಳನ್ನೂ ಶಾಸನಗಳೆಂದು ಕರೆಯುತ್ತಾರೆ. (ಆಂಧ್ರ ಪ್ರದೇಶದ) ಕೃಷ್ಣಾ ಜಿಲ್ಲೆಯ ಭಟ್ಟಿಪ್ರೋಲು ಎಂಬಲ್ಲಿ ಸ್ಫಟಿಕದ ಹರಳಿನ ಮೇಲಿರುವ ಬರಹ ಸಿಕ್ಕಿದೆ. ಅದನ್ನೂ ಶಾಸನವೆಂದು ಕರೆಯಲಾಗುತ್ತದೆ..... ಇ ಲಹಾಬಾದ್ ಜಿಲ್ಲೆಯ ದೇವ ಸಂಸ್ಥಾನದ ಗಿಂಜ ಬೆಟ್ಟದಲ್ಲಿ ಬಂಡೆಯೊಂದರ ಮೇಲೆ ಒಂದು ಶಾಸನವನ್ನು ಬಣ್ಣದಲ್ಲಿ ಬರೆದಿದೆ (ಭೀಮಸೇನನೆಂಬ ರಾಜನ ಪ್ರಸ್ತಾಪ ಮಾಡುವ ಆ ಶಾಸನದ ಕಾಲ ಕ್ರಿ.ಶ. ೩೭೧). ಇಂತಹ ವರ್ಣಿತ ಶಾಸನಗಳು ನಿಜಾಂ ರಾಜ್ಯದ ಅಜಂತಾದ ಬೌದ್ಧ ಗುಹೆಗಳಲ್ಲಿ ಕಂಡು ಬರುತ್ತಿವೆ...." (ಶಾಸನ ಮತ್ತು ಗದ್ಯ, ಪು. - ೩).

ಈ ದೀರ್ಘ ಉದ್ಧೃತ ಭಾಗದಲ್ಲಿ, ಶಾಸನಗಳ ಕೆಲವು ಬಗೆಗಳ ವಿವರ ಕೂಡ ಲಭ್ಯವಾಗುತ್ತದೆ. ಆದ್ದರಿಂದ ಕೆತ್ತಿದ್ದಷ್ಟೇ ಅಲ್ಲ ಕೊರೆದದ್ದು, ಕೊರೆದದ್ದಷ್ಟೇ ಅಲ್ಲ ಬರೆದದ್ದು ಕೂಡ ಶಾಸನ ಎನ್ನುವ ವ್ಯಾಪ್ತಿಗೆ ಬರುತ್ತದೆಂಬುದು ಸ್ಪಷ್ಟವಾಗುತ್ತದೆ. ಶಾಸನ ರಚನೆಗಾಗಿ ಬಳಸುತ್ತಿದ್ದ ವಿವಿಧ ವಸ್ತುಗಳ ವಿವರವೂ ಇದೆ.

ಇದುವರೆಗಿನ ವಿವರಣೆ, ಯಾವ ವಸ್ತುವಿನ ಮೇಲೆ ಹೇಗೆ ಶಾಸನ ಮೂಡಿಸುತ್ತಿದ್ದರು ಎಂಬ ಹಿನ್ನೆಲೆಯನ್ನು ಮೂಲವಾಗಿಟ್ಟುಕೊಂಡಿದೆ. ಶಾಸನದಲ್ಲಿ ಏನು ವಿಷಯ ಇರುತ್ತದೆ; ಇರಬೇಕು ಎಂಬ ಹಿನ್ನೆಲೆಯಲ್ಲಿ ಶಾಸನದ ಸ್ವರೂಪ ಹೇಳಿದ ಹೇಳಿಕೆಯೊಂದು ಈ ರೀತಿ ಇದೆ - ಗಮನಿಸಿ

"ಶಾಸನಗಳು ಬಹು ಸಂದರ್ಭಗಳಲ್ಲಿ ಅಧಿಕೃತ ಲಕ್ಷಣವುಳ್ಳ, ಸಾಧಾರಣವಾಗಿ ಹೆಚ್ಚು ಕಡಿಮೆ ಸಾರ್ವಜನಿಕ ಸ್ವರೂಪವುಳ್ಳ ಸರಳವಾದ ಅಥವಾ ಸಂಕೀರ್ಣವಾದ ಸಂಗತಿಗಳನ್ನುಸುರುವ, ದಿನಾಂಕವಿರುವ ಅಥವಾ ಇಲ್ಲದಿರುವ ಮತ್ತು ತಾವು ಪ್ರಸ್ತಾಪಿಸುವ ವಿಷಯಗಳ ಬಗ್ಗೆ ಶಾಶ್ವತವಾದ ದಾಖಲೆಗಳಾಗಬೇಕೆಂದು ಉದ್ದಿಷ್ಟವಾದ ಪ್ರಕಟಣೆಗಳು"

( The inscriptions are notifications, very frequently of an official character, and generally more or less of a public nature, which recite facts, simple or complex, with or without dates, and are intended to be lasting records of the matters to which they refer ).

ಈ ವಿವರಣೆ ಶಾಸನ ತಜ್ಞರಾದ ಜೆ.ಎಫ್. ಫ್ಲೀಟ್ ಅವರದು. ಶಾಸನಗಳ, ಮುಖ್ಯವಾಗಿ ಭಾರತದ ಶಾಸನಗಳ ಸ್ವರೂಪ ಮತ್ತು ವಸ್ತು ಸಂಗತಿ, ಅವುಗಳ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ಮೇಲಿನ ಮಾತುಗಳನ್ನು ಹೇಳಲಾಗಿದೆ.

ರಾಜಾಜ್ಞೆಗಳು ಮೊದಲಿಗೆ ತಾಳೆಗರಿಯ ಮೇಲೆಯೇ ಇರುತ್ತಿದ್ದಿರಬೇಕು. ಅವುಗಳನ್ನು ಶಾಶ್ವತಗೊಳಿಸುವ ಕ್ರಮವಾಗಿ ಬಹುಕಾಲ ಉಳಿಯುವ ತಾಮ್ರಪಟಗಳು ಅಥವಾ ಕಲ್ಲಿನ ಮೇಲೂ ಕೊರೆಸುವ ಪರಿಪಾಠ ರೂಢಿಗೆ ಬಂದಿರಬೇಕು.

ವಸ್ತು ವೈವಿಧ್ಯ : ರಾಜನ ಆಜ್ಞೆಗಳು, ರಾಜನ ಪರವಾಗಿ ಹೊರಡಿಸಿದ ಬರೆಹಗಳು, ರಾಜ ಮಾಡಿದ ಅಧಿಕೃತ ದಾನ ಧರ್ಮಗಳು, ರಾಜರಲ್ಲದ ಪ್ರಮುಖ ವ್ಯಕ್ತಿಗಳು ಹಾಕಿಸಿದ ಬರೆಹಗಳು ಶಾಸನಗಳೆಂದು ಕರೆದುಕೊಳ್ಳುವುದು ಒಂದೆಡೆಯಾದರೆ; ಮೇಲಿನ ಅರ್ಥಗಳಲ್ಲಿ ಶಾಸನಗಳೆಂದು ಕರೆಯಲಾಗದ ಬರಹಗಳು ಕಲ್ಲು ಮೊದಲಾದ ಗಟ್ಟಿ ಪದಾರ್ಥಗಳ ಮೇಲೆ ಕೊರೆಯಲ್ಪಟ್ಟಿವೆ. ಅವುಗಳ ವಸ್ತುವೈವಿಧ್ಯ ನಿಜಕ್ಕೂ ನಮ್ಮನ್ನು ಬೆರಗುಗೊಳಿಸುತ್ತದೆ.

"ಶಿಲೆಗಳ ಮೇಲೆ ಶುದ್ಧ ಕಾವ್ಯಗಳನ್ನು ಕೆತ್ತಿರುವ ನಿದರ್ಶನಗಳೂ ಹಲವಾರಿವೆ. ವಿಶಾಲತಮ ಅರ್ಥದಲ್ಲಿ ಮಾತ್ರ ಇವು ಶಾಸನವರ್ಗಕ್ಕೆ ಸೇರುತ್ತವೆ. ಅನೇಕ ಸರ್ಗಗಳನ್ನೊಳಗೊಂಡ ಕಾವ್ಯಗಳೂ ಅನೇಕ ಅಂಕಗಳನ್ನೊಳಗೊಂಡ ನಾಟಕಗಳೂ ಶಾಸನ ರೂಪದಲ್ಲಿರುವುದು ಕುತೂಹಲಕಾರಿಯಾದ ಸಂಗತಿ. (ಶಾಸನಗಳ ಬರಹದ ವ್ಯಾಪ್ತಿ ಒಂದು ಅಕ್ಷರದಿಂದ ಹಿಡಿದು ಅನೇಕ ಸರ್ಗ ಅಥವಾ ಅಂಕಗಳವರೆಗೆ ಇರಬಹುದೆಂಬುದು ಇದರಿಂದ ವ್ಯಕ್ತವಾಗುತ್ತದೆ). ಉದಯಪುರದ ರಾಜಸಮುದ್ರ ಶಾಸನದಲ್ಲಿರುವ ರಣಚೋಡ ಕೃತ 'ರಾಜ ಪ್ರಶಸ್ತಿ ಕಾವ್ಯ'; ನರ್ಮದಾ ನದಿ ತೀರದ ಮಾಂಧಾತದ ಅಮರೇಶ್ವರ ದೇವಾಲಯದ ಮುಂದಿನ ಕಲ್ಲುಗಳ ಮೇಲಿರುವ ಹಲಾಯುಧನ 'ಮಹಿಮ್ನ ಸ್ತೋತ್ರ' ; ಧಾರ್, ಮಾಂಡು, ಅಜ್ಮೀರ್ ಶಾಸನಗಳಲ್ಲಿರುವ ಸೋಮದೇವ ಕೃತ 'ಲಲಿತ ವಿಗ್ರಹ ರಾಜ ನಾಟಕ' (ಚಾಹಮಾನ ದೊರೆ ವಿಗ್ರಹ ರಾಜನ ಗೌರವಾರ್ಥ ರಚಿತವಾದುದು), ವಿಗ್ರಹ ರಾಜ ಕೃತ 'ಹರಕೇಳಿ ನಾಟಕ', ಮದನ ವಿರಚಿತ 'ಪಾರಿಜಾತ ಮಂಜರಿ' (ಪರಮಾರ ದೊರೆ ಅರ್ಜುನವರ್ಮನನ್ನು ಕುರಿತದ್ದು), ಪರಮಾರ ಭೋಜನ 'ಕೂರ್ಮಶತಕ', 'ಕೂರ್ಮಾಷ್ಟಕ', 'ಕೋದಂಡ ಕಾವ್ಯ' ಮುಂತಾದುವು (ಈ ಕೃತಿಗಳಿಗೆ ಹಸ್ತಪ್ರತಿಗಳೇ ಇಲ್ಲವಂತೆ. ಆದ್ದರಿಂದ ಇವು ಶಿಲಾಂತದಲ್ಲೆ ಉಳಿದು ಬೆಳಕಿಗೆ ಬಂದಿರುವ ರಚನೆಗಳು, ಒಂದರ್ಥದಲ್ಲಿ ಇವು ಸಾಹಿತ್ಯ ಚರಿತ್ರೆಗೆ ಶಾಸನಗಳ ಕೊಡುಗೆ ಎನ್ನಬಹುದು), ಮೂರನೆಯ ಕುಲೋತ್ತುಂಗ ಚೋಳನ ತ್ರಿಭುವನಂ ಶಾಸನ, ಶ್ರವಣಬೆಳಗೊಳದ ಬೆಟ್ಟದ ಮೇಲಿರುವ ಬಂಡೆಯಲ್ಲಿ ಕೆತ್ತಲಾಗಿರುವ ಬೊಪ್ಪಣ ಪಂಡಿತನ 'ಗೊಮ್ಮಟ ಸ್ತುತಿ' ಮುಂತಾದವೂ ಈ ಪ್ರಕಾರದ ಕಾವ್ಯ-ಶಾಸನಗಳಿಗೆ ಉದಾಹರಣೆಗಳು.

ಕಾವ್ಯ ನಾಟಕಗಳನ್ನಲ್ಲದೆ ಇತರ ಬಗೆಯ ಕೃತಿಗಳನ್ನೂ ಶಾಸನಗಳಲ್ಲಿ ಕೆತ್ತಿದ್ದಾರೆ. ರಾಜಾಸ್ಥಾನದ ಬಿಜೋಲಿಯ ಎಂಬಲ್ಲಿನ ಒಂದು ಬಂಡೆಯ ಮೇಲೆ 'ಉನ್ನತಿ ಶಿಖರ ಪುರಾಣ' (ಕ್ರಿ.ಶ. ೧೧೭೦) ಎಂಬ ದಿಗಂಬರ ಜೈನ ಕೃತಿಯೊಂದನ್ನು ಕೆತ್ತಲಾಗಿದೆ. ಧಾರ್ ಎಂಬಲ್ಲಿ ಶಿಲೆಯ ಮೇಲೆ ಸಂಸ್ಕೃತ ವರ್ಣಮಾಲೆಯನ್ನೂ, ಕಾತಂತ್ರ ವ್ಯಾಕರಣದ ಅಖ್ಯಾತ ಪ್ರತ್ಯಯಗಳ ಪಟ್ಟಿಯನ್ನೂ ದೇವಗಢದ ಶಿಲಾಫಲಕವೊಂದರ ಮೇಲೆ ಹದಿನೆಂಟು ಭಾಷೆಗಳು ಮತ್ತು ಅವುಗಳ ಲಿಪಿಗಳನ್ನೂ ಕೆತ್ತಲಾಗಿದೆಯಂತೆ. ಈ ದೃಷ್ಟಿಯಿಂದ ಅತ್ಯಂತ ಸ್ವಾರಸ್ಯಪೂರ್ಣವಾದುದು ಮದರಾಸಿನ ಪುದುಕೋಟೆಗೆ ಹತ್ತಿರವಿರುವ ಕುಡಿಮಿಯಾಮಲೈ ಎಂಬ ಬೆಟ್ಟದ ಬಂಡೆಯ ಮೇಲೆ ಕೊರೆಯಲಾಗಿರುವ ಒಂದು ಶಾಸನ. ಇದರ ವಿಷಯ ಸಂಗೀತ. ಕ್ರಿ.ಶ. ೭ ನೆಯ ಶತಮಾನದ ಸಂಗೀತ ಪದ್ಧತಿಯ ಮೇಲೆ ಈ ಕುಡಿಮಿಯಾಮಲೈ ಶಾಸನ ಬೆಳಕು ಬೀರುತ್ತದೆಂದು ಹೇಳಲಾಗಿದೆ. ಇಂಥವೂ ಶಾಸನಗಳೆಂದು ಬಹಳ ವ್ಯಾಪಕವಾದ ಅರ್ಥದಲ್ಲಿ ಪರಿಗಣಿಸಬೇಕಷ್ಟೆ, ('ಶಾಸನಶಾಸ್ತ್ರ' ಕುರಿತ ಹಳೆಯ ಮಾರ್ಗದರ್ಶಕ ಪಾಠ, ಪು. ೧೧, ೧೨).

**ರಾಜ ಶಾಸನಗಳು :** ಶಾಸನ ಎಂಬ ಹೆಸರಿನಡಿಯಲ್ಲಿ ಯಾವ ಯಾವ ವಸ್ತು ವಿಷಯ ಸಾಮಗ್ರಿ ಬಳಕೆಗಳನ್ನೆಲ್ಲಾ ಪರಿಗಣಿಸಬೇಕು ಎಂಬುದನ್ನು ತಿಳಿದಿದ್ದೇವೆ. ಆದರೆ ನಿಜವಾದ ಮೂಲಾರ್ಥದಲ್ಲಿ ನಿಕರವಾಗಿ ನೋಡುವುದಾದರೆ ರಾಜಶಾಸನಗಳೇ ನಿಜವಾದ ಅರ್ಥದಲ್ಲಿ ಶಾಸನಗಳು. ಇವುಗಳಲ್ಲಿಯೂ ಶುದ್ಧ ರಾಜಕೀಯ ಅಥವಾ ಆಡಳಿತಾತ್ಮಕ ಸಂಗತಿಗಳನ್ನು ಹೊಂದಿರುವ ಶಾಸನಗಳೇ ನಿಜವಾದ ಶಾಸನಗಳು.

ವಸ್ತು, ವಿಷಯ ರಾಜಕೀಯ ಅಥವಾ ಆಡಳಿತಾತ್ಮಕವೇ ಆಗಿರಬೇಕು ಎಂಬ ನಿಯಮವನ್ನು ಸಡಿಲಿಸಿದರೆ ರಾಜಶಾಸನಗಳನ್ನು ಮೂರು ಮುಖ್ಯ ವರ್ಗಗಳಾಗಿ ವಿಂಗಡಿಸಿ ನೋಡಬಹುದು. ದಾನ ಶಾಸನ, ಪ್ರಸಾದ ಶಾಸನ, ಜಯಪತ್ರ ಎಂಬುವೇ ಆ ಮೂರು ವರ್ಗಗಳು. ಇತಿಹಾಸ ರಚನೆಗೆ ಇಂಥ ಶಾಸನಗಳು ಪ್ರಮುಖ ಆಕರಗಳಾಗಿ ನಿಲ್ಲುತ್ತವೆ.

ದಾನ ಶಾಸನಗಳನ್ನು ಹೇಗೆ ಬರೆಯಿಸಬೇಕು, ಅದರಲ್ಲಿ ಯಾವಯಾವ ವಿಷಯಗಳಿರಬೇಕು ಎಂಬುದರ ಸ್ಪಷ್ಟ ನಿರ್ದೇಶನವನ್ನು ಧರ್ಮಶಾಸ್ತ್ರ, ಸ್ಮೃತಿಗಳು ಮತ್ತು ಅರ್ಥಶಾಸ್ತ್ರ ಮೊದಲಾದ ಕೃತಿಗಳಲ್ಲಿ ಮಾಡಲಾಗಿದೆ. ಶಾಸನಗಳನ್ನು ನಕಲು ಮಾಡುವ ಸಂಪ್ರದಾಯವಿತ್ತು. ಕ್ರಿ.ಶ. ೨ನೇ ಶತಮಾನದ ಕೆಲವು ಪಶ್ಚಿಮ ಭಾರತೀಯ ಗುಹಾ ಶಾಸನಗಳು, ಮೂಲತಃ ವಸ್ತ್ರ ಅಥವಾ ತಾಮ್ರಪಟದ

ಮೇಲಿದ್ದ ರಾಜ ಶಾಸನಗಳ ನಕಲುಗಳಾಗಿರಬೇಕೆಂದು ಊಹಿಸಿದೆ. ಉದಾ. : "ಗೌತಮೀಪುತ್ರ ಶಾತಕರ್ಣಿಯ (ಕ್ರಿ.ಶ. ೧೦೬-೩೦) ನಾಸಿಕ್ ಗುಹಾಶಾಸನಗಳು ಮತ್ತು ಅಲ್ಲಿಯದೇ ಆದನ ನಹಪಾನನ ಕಾಲದ ಕ್ರಿ.ಶ. ೧೨೦ರ ಶಾಸನ. ಕ್ಷಹರಾತ, ಶಾತವಾಹನ ದೊರೆಗಳ ಕಾಲದ ಈ ಗುಹಾಶಾಸನಗಳು ಒಕ್ಕಣೆಯಲ್ಲಿ ತಾಮ್ರಪಟಗಳನ್ನೇ ಹೋಲುತ್ತವೆ." (ಅದೇ ಪು.-೨೩) ತಾಮ್ರಪಟಗಳು ಕಳೆದುಹೋಗುವ ಸಂಭವವಿರುವುದರಿಂದ ಇಂಥ ನಕಲು ಪದ್ಧತಿ ರೂಢಿಗೆ ಬಂದಿರಬೇಕೆಂದು ಹೇಳಬಹುದು. ಶಾಸನಗಳನ್ನು ನಕಲು ಮಾಡಲು ದೇವಾಲಯಗಳ ಗೋಡೆಗಳು ಅಥವಾ ಶಿಲಾಪಟ್ಟಿಕೆ......... ಬಳಸಲಾಗುತ್ತಿತ್ತು. ಉದಾ. : ಉತ್ತರಭಾರತದ ಷೇರ್‌ಗಢ್ ಶಿಲಾಶಾಸನ. ಇದು ಪರಮಾರ ದೊರೆ ಉದಯಾದಿತ್ಯ (ಕ್ರಿ.ಶ. ೧೦೬೦-೮೭) ತಾಮ್ರಶಾಸನವೊಂದರ ನಕಲು. ಕರ್ನಾಟಕದಲ್ಲಿ ಹೊಯ್ಸಳ ದೊರೆ ಎರಡನೆಯ ವೀರ ಬಲ್ಲಾಳನ ಗದಗು ಶಾಸನ (ಕ್ರಿ.ಶ. ೧೧೯೨), ನಾಲ್ಕನೇ ರಟ್ಟ ಕಾರ್ತವೀರ್ಯನ ಬೆಳಗಾಂ ಶಾಸನಗಳು ಇಂಥ ನಕಲು ಶಾಸನಗಳು. ತಾಮ್ರ ಮತ್ತು ಕಲ್ಲು ಎರಡೂ ವಸ್ತುಗಳ ಮೇಲೆ ಕಾಣಬರುವ ಇಂಥ ಸಮಾನ ಅಂಶಗಳ ನಕಲು ಶಾಸನಗಳ ಉದ್ದೇಶ, ಶಾಸನವನ್ನು ಹಲವು ಪ್ರತಿಗಳಲ್ಲಿ 'ದಾಖಲಿಸುವುದು ಆಗಿರಬಹುದು. ತಾಮ್ರಪಟಗಳು ಖಾಸಗಿ ಉಪಯೋಗಕ್ಕೆ ಮುಖ್ಯವಾಗಿ ಸೀಮಿತವಾದವು. ಇದರ ವಿಚಾರ ಸಾರ್ವಜನಿಕರಿಗೂ ತಿಳಿಯಬೇಕಾದರೆ ಅದರ ನಕಲನ್ನೇ ಶಿಲಾಶಾಸನಗಳ ರೂಪದಲ್ಲಿ ಕೆತ್ತಿಸುವುದು ಅನಿವಾರ್ಯವಾಗುತ್ತಿತ್ತು.

## 113.3 ಶಾಸನಗಳ ಮಹತ್ವ

ಶಾಸನಗಳು ಹಲವಾರು ಕಾರಣಗಳಿಗಾಗಿ ಮಹತ್ವದ ಸ್ಥಾನವನ್ನು ಪಡೆಯುತ್ತವೆ. 'ದೀರ್ಘಕಾಲದ ಬಾಳಿಕೆ' ಶಿಲಾಶಾಸನದಂತಹ ವಸ್ತುಗಳ ಬಳಕೆಯಲ್ಲಿ ಕಂಡುಬಂದರೆ; ಅಧಿಕೃತವಾದ 'ದಾಖಲೆ'ಯಾಗಿ ನಿಲ್ಲುವುದು ಅವುಗಳ ಮತ್ತೊಂದು ಪ್ರಾಮುಖ್ಯತೆ. ವಿಷಯವನ್ನು ಸಾರ್ವಜನಿಕರಿಗೆ ಪ್ರಚುರಪಡಿಸುವಲ್ಲಿಯೂ ಇವುಗಳದು ಮಹತ್ವದ ಸಾಧನೆ.

ಶಾಸನಗಳು ಇತಿಹಾಸ ನಿರ್ಮಾಣಕ್ಕೆ ಅಧಿಕೃತ ಲಿಖಿತ ದಾಖಲೆಗಳಾಗಿ ಮಹತ್ವ ಪಡೆದಿವೆ. ಇತಿಹಾಸ ರಚನೆಗೆ (೧) ಪರಂಪರೆ ಅಥವಾ ಐತಿಹ್ಯ (೨) ವಾಙ್ಮಯ ಅಥವಾ ಸಾಹಿತ್ಯ (೩) ಪುರಾತತ್ವ ಶೋಧನೆ ಇವು ಮೂರೂ ಬಹುಮುಖ್ಯವಾದ ಆಕರಗಳಾಗಿರುತ್ತವೆ. ನಿವೇಶಾನ್ವೇಷಣೆ, ಭೂಶೋಧನೆ ನಾಣ್ಯಗಳು, ಕಟ್ಟಡಗಳು, ವಾಸ್ತುಶಿಲ್ಪ ಮೂರ್ತಿಶಿಲ್ಪ, ಚಿತ್ರಕಲೆ ಇವೆಲ್ಲ ಪುರಾತತ್ವ ಶೋಧನೆಯ ಅಂಗಗಳು. ಶಾಸನಗಳು ಕೂಡ ಪುರಾತತ್ತ್ವ ಶೋಧನೆಯ ಮುಖ್ಯ ಅಂಗವಾಗಿವೆ. ಬರಹ ರೂಪದ ಇತರ ಆಧಾರಗಳಿಗಿಂತ ಶಾಸನ ರೂಪದ ಬರವಣಿಗೆಯ ದಾಖಲೆ ಹೆಚ್ಚು ವಿಶ್ವಾಸಾರ್ಹವಾದದ್ದು. ಚರಿತ್ರೆಯ ರಚನೆಯಲ್ಲಿ ವಂಶಾವಳಿ ಅಥವಾ ಇತಿವೃತ್ತಗಳು, ಪುರಾಣಗಳು, ಅಧಿಕೃತ ದಾಖಲೆಗಳನ್ನು ಮುಖ್ಯವಾಗಿ ಆಶ್ರಯಿಸಲಾಗುತ್ತದೆ. ಕಾವ್ಯಗಳು ಕೂಡ ತಕ್ಕಮಟ್ಟಿನ ಪ್ರಾಮಾಣ್ಯವನ್ನು ಒದಗಿಸುತ್ತವೆ. ಆದರೆ ಈ ಎಲ್ಲ ಇತರೆ ಮೂಲಗಳು ನಶಿಸುವ, ತಿದ್ದಲ್ಪಡುವ, ವೈಭವೀಕರಿಸುವ ಅಪಾಯಗಳಿಗೆ ತುತ್ತಾಗುತ್ತವೆ. ಆದರೆ ಇಂಥ ಅಪಾಯ ಶಾಸನಗಳಿಗೆ ಇಲ್ಲ. ಕಡೆಯ ಪಕ್ಷ ಇಂಥ ಅಪಾಯಗಳ ಪ್ರಮಾಣವಾದರೂ ಕಡಿಮೆ ಎಂದು ಶಾಸನಗಳ ಬಗ್ಗೆ ಹೇಳಬಹುದು. "ಹಿಂದೂ ಜನಾಂಗದ ಅಧಿಕೃತ ಚರಿತ್ರೆ ಇಲ್ಲದಿರುವಾಗ, ಆಕಸ್ಮಿಕಗಳ ಮೂಲಕ ಆಗಾಗ ಪತ್ತೆಯಾಗುವ ಎಲ್ಲ ಅಸಲಿ ಸ್ಮಾರಕಗಳಿಗೆ-ವಿಶೇಷವಾಗಿ ಶಿಲಾಶಾಸನ, ಲೋಹ ಶಾಸನಗಳಿಗೆ - ನ್ಯಾಯವಾಗಿ ಪ್ರಾಮುಖ್ಯ ಸಲ್ಲುತ್ತದೆ" ಎಂದು ಕೋಲ್ ಬ್ರೂಕ್ ಎಂಬ ವಿದ್ವಾಂಸ ಅಭಿಪ್ರಾಯಪಟ್ಟಿದ್ದಾನೆ. "ವಿಶೇಷವಾಗಿ ಭರತ ಖಂಡ ಶಾಸನ ರೂಪದ ಅವಶೇಷಗಳಲ್ಲಿ ಶ್ರೀಮಂತವಾಗಿರುವುದು ಮಾತ್ರವಲ್ಲದೆ, ಆ ಶಾಸನಗಳೇ ಈ ದೇಶದ ಪ್ರಾಚ್ಯಯುಗ ಸಂಬಂಧವಾದ ಎಲ್ಲ ಸಂಶೋಧನ ಪಥಗಳಲ್ಲಿ ಐತಿಹಾಸಿಕ ಫಲಿತಾಂಶಗಳಿಗೆ ಖಚಿತವಾದ ಏಕಮಾತ್ರ ಬುನಾದಿ" ಎಂದು ಫ್ಲೀಟ್ ಎಂಬ ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಪ್ರಾಚೀನ ಭಾರತದ ಕಾಲಾನುಕ್ರಮಣಿಕೆಯ (Cronology) ಒಂದು ಒಂದು ಅಂತಿಮ ಆಲಂಬನ" ಶಾಸನಗಳು ಎನ್ನುತ್ತಾರೆ ದೀಕ್ಷಿತ್. ಬಿ.ಸಿ. ಛಬ್ರಾ

ಶಾಸನಗಳನ್ನು "ಭಾರತೀಯ ಇತಿಹಾಸದ ಜೀವನಾಡಿ" ಎಂದು ವರ್ಣಿಸಿದ್ದಾರೆ. ಇಂತಹ ಮಾತುಗಳಲ್ಲೆಲ್ಲ ಶಾಸನಗಳ ಮಹತ್ವವು ಚರಿತ್ರೆಯ ರಚನೆಯಲ್ಲಿ ಎಷ್ಟು ಎಂಬುದು ಪ್ರತಿಬಿಂಬಿತವಾಗಿದೆ.

ಚರಿತ್ರೆಯ ಸ್ಥಿತಿಗತಿಗಳನ್ನು ತಿಳಿಯಲಷ್ಟೇ ಅಲ್ಲ ಇಡೀ ಜನಾಂಗದ ಸಾಮಾಜಿಕ ಧಾರ್ಮಿಕ ಒಟ್ಟಾರೆಯಾಗಿ ಸಾಂಸ್ಕೃತಿಕ ಬದುಕಿನ ಚಿತ್ರಣ ಅರಿಯುವಲ್ಲಿ ಶಾಸನಗಳು ಪ್ರಮುಖ ಪಾತ್ರವನ್ನೇ ವಹಿಸುತ್ತವೆ.

"ಚರಿತ್ರೆಯ ರಾಜಕೀಯ ಮುಖವನ್ನು ಮಾತ್ರವಲ್ಲದೆ, ಇತರ ಮುಖಗಳನ್ನೂ ರೂಪಿಸುತ್ತವೆ ಶಾಸನಗಳು. ದಿಸ್ಕಾಲ್ಕರ್ ಎಂಬ ವಿದ್ವಾಂಸರು ಹೀಗೆ ಹೇಳುತ್ತಾರೆ : ಪ್ರಾಚೀನ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಅಭ್ಯಾಸಿಗಳು ತಮ್ಮ ಜ್ಞಾನದ ಕೊರತೆಯನ್ನು ಶಾಸನಗಳ ಅಭ್ಯಾಸದಿಂದ ಹೋಗಲಾಡಿಸಿಕೊಳ್ಳಬಹುದು." (ಡಾ. ಎಂ. ಚಿದಾನಂದಮೂರ್ತಿಯವರಿಂದ ಉದ್ಧೃತ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೨೭.) ಧರ್ಮ, ಭಾಷೆ, ಲಿಪಿ, ಸಾಹಿತ್ಯ ಇತ್ಯಾದಿಗಳ ಚರಿತ್ರೆಯ ಮೇಲೂ ಅವು ಬೆಳಕು ಬೀರುತ್ತವೆ. ಒಟ್ಟಿನ ಮೇಲೆ ಪ್ರಾಚೀನ ಭಾರತದ ಸರ್ವಾಂಗೀಣ ಚಿತ್ರವೊಂದನ್ನು ಸಮರ್ಥವಾಗಿ ಮೂಡಿಸುತ್ತವೆ ಶಾಸನಗಳು.

ಶಾಸನಗಳ ಬಹುಮುಖ ಪ್ರಯೋಜನ, ಪ್ರಾಮುಖ್ಯಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ಇಲ್ಲಿ ಕೆಲವೇ ಕೆಲವು ನಿದರ್ಶನಗಳನ್ನು ಮುಂದಿಡಬಹುದು.

ನೇಪಾಳದ ರುಮ್ಮಿಂದೇಯ್ ಎಂಬಲ್ಲಿ ಸಿಕ್ಕಿರುವ ಅಶೋಕನ ಸ್ತಂಭ ಶಾಸನವೊಂದು ಬುದ್ಧನ ಜನ್ಮಸ್ಥಳವನ್ನು ಖಚಿತವಾಗಿ ನಿರ್ಣಯಿಸುತ್ತದೆ; ಇಲ್ಲಿಯೇ ಬುದ್ಧ ಹುಟ್ಟಿದ್ದು ಎಂದು ಹೇಳುತ್ತದೆ ಆ ಶಾಸನ. ಬೌದ್ಧ ಶಾಸ್ತ್ರಗ್ರಂಥಗಳಲ್ಲಿ ಆ ಸ್ಥಳ 'ಲುಂಬಿನಿದವ' ಎಂಬ ಹೆಸರಿನಿಂದ ಉಲ್ಲೇಖಗೊಂಡಿದೆ.

ಅಶೋಕನ ಮಾಸ್ಕಿ (ಹೈದರಾಬಾದ್) ಶಾಸನದಲ್ಲಿ ಅಶೋಕ ಎಂಬ ಹೆಸರಿಗೂ 'ದೇವಾನಾಂಪ್ರಿಯ' ಎಂಬ ಬಿರುದಿಗೂ ಅಭೇದ ಕಲ್ಪಿತವಾಗಿದೆ. ಈ ಶಾಸನ ಸಿಗುವುದಕ್ಕೆ ಮುನ್ನ ದೇವಾನಾಂಪ್ರಿಯನ ಹೆಸರಿನಲ್ಲಿರುವ ಶಾಸನಗಳೆಲ್ಲ ಅಶೋಕನವು ಎಂಬ ಊಹೆಗೆ ಮಾತ್ರ ಅವಕಾಶವಿತ್ತು.

ಕೌಶಾಂಬಿಯ ಉದಯನರಾಜನ ಕೋಶಾಧಿಕಾರಿ ಘೋಷಕನೆಂಬುವನು ಬುದ್ಧನ ವಾಸಕ್ಕಾಗಿ 'ಘೋಷಿತಾರಾಮ'ವನ್ನು ಕಟ್ಟಿಸಿದನೆಂದು 'ಧಮ್ಮಪದಟ್ಟಕಥಾ' ಎಂಬ ಪಾಲಿ ಗ್ರಂಥದಲ್ಲಿ ಉಕ್ತವಾಗಿದೆ. ಈ ಸಂಗತಿ ಎಷ್ಟರಮಟ್ಟಿಗೆ ಐತಿಹಾಸಿಕವೆಂಬ ಶಂಕೆ ವಿದ್ವಾಂಸರಲ್ಲಿ ಇದ್ದೇ ಇತ್ತು. ಈಚೆಗೆ ಅಲಹಾಬಾದ್ ಜಿಲ್ಲೆಯ ಕೋಸಂ (ಕೌಶಾಂಬಿ)ನಲ್ಲಿ ನಡೆದ ಭೂಶೋಧನೆಯ ಫಲವಾಗಿ ಸಿಕ್ಕಿದ ಕ್ರಿ.ಶ. ೧ನೆಯ ಶತಮಾನ ಶಿಲಾಶಾಸನವೊಂದು ಆ ಸಂಗತಿಯನ್ನು ದೃಢೀಕರಿಸುತ್ತದೆ.

ಗುಪ್ತದೊರೆಗಳ ಶಕವನ್ನು ಕುರಿತ ಬಹುಕಾಲದ ವಿವಾದವನ್ನು ಮಂದಸೋರ್ ಶಾಸನ ಪರಿಹರಿಸುತ್ತದೆ. ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನದಿಂದ (ಕ್ರಿ.ಶ. ೬೩೪) ಕಾಳಿದಾಸನ ಕಾಲದ ಮೇಲೆ ಬೆಳಕು ಬೀಳುತ್ತದೆ.

ಗುಪ್ತವಂಶದಲ್ಲಿ ಬುಧಗುಪ್ತನೆಂಬ ದೊರೆಯ ಅಸ್ತಿತ್ವ ೧೯ನೆಯ ಶತಮಾನದ ಮೊದಲ ಪಾದದವರೆಗೆ ಗೊತ್ತೆ ಇರಲಿಲ್ಲ. ಬುಧಗುಪ್ತನ ರಾಯಭಾರಿ ಸುರಶ್ಮಿಚಂದ್ರನನ್ನು ಹೇಳುವ ಶಿಲಾಶಾಸನವೊಂದು ಕ್ರಿ.ಶ. ೧೮೩೮ರಲ್ಲಿ ಸಿಕ್ಕಿತು ; ಅದರ ಕಾಲ ಕ್ರಿ.ಶ. ೪೮೪-೮೫. ಆದ್ದರಿಂದ ಬುಧಗುಪ್ತನೆಂಬ ದೊರೆ ಕ್ರಿ.ಶ. ೪೮೪-೪೫೮ರಲ್ಲಿ ಮಾಳವ ಪ್ರಾಂತವನ್ನು ಆಳುತ್ತಿದ್ದನೆಂಬ ವಿಷಯ ತಿಳಿದುಬಂತು. ಅವನ ನಾಣ್ಯಗಳು ೧೮೯೪ರಲ್ಲೂ ಸಾರನಾಥ್ ಶಾಸನಗಳು ೧೯೧೪-೧೫ರಲ್ಲೂ ದಾಮೋದರಪುರ್ ಪಟಗಳು ೧೯೧೯-

೨೦ರಲ್ಲೂ ನಳಂದಾಮುದ್ರೆ ೧೯೪೩ರಲ್ಲೂ ದೊರೆತವು. ಬುಧಗುಪ್ತನ ಸಾಮ್ರಾಜ್ಯ ಬಂಗಾಳದ ಉತ್ತರ ಭಾಗವನ್ನೊಳಗೊಂಡಿತ್ತು. ಅವನು ಪುರಗುಪ್ತನ ಮಗ, ಕುಮಾರಗುಪ್ತನ ಮೊಮ್ಮಗ. ಇಮ್ಮಡಿ ಚಂದ್ರಗುಪ್ತನ ಮರಿಮಗ ಮತ್ತು ಸಮುದ್ರಗುಪ್ತನ ಮರಿ-ಮರಿಮಗ. ಹೀಗಾಗಿ ೧೮೩೮ ರಿಂದ ೧೯೪೩ ರವರೆಗಿನ ಒಂದು ಶತಮಾನದಲ್ಲಿ ಒಬ್ಬ ಪ್ರಾಚೀನ ಚಕ್ರವರ್ತಿಯ ವೃತ್ತಾಂತ ಶಾಸನಗಳಿಂದ ಪೂರ್ಣವಾಗಿ ತಿಳಿದುಬಂತು.

ವಿಶಾಖದತ್ತನ 'ದೇವೀಚಂದ್ರಗುಪ್ತ' ನಾಟಕದ ಕೆಲವು ಭಾಗಗಳು ಉಪಲಬ್ಧವಾಗಿವೆ. ಅದರಲ್ಲಿ ರಾಮಗುಪ್ತ ಎಂಬ ರಾಜನ ಹೆಸರು ಬರುತ್ತದೆ. ಕೆಲವು ನಾಣ್ಯಗಳ ಮೇಲೆ ರಾಮಗುಪ್ತ ಎಂಬ ಹೆಸರಿದ್ದರೂ ಅವನು ಪ್ರಸಿದ್ಧ ಗುಪ್ತವಂಶದವನಲ್ಲವೆಂದು ಕೆಲವರು ಭಾವಿಸಿದ್ದರು. ಕೆಲವೇ ವರ್ಷಗಳ ಹಿಂದೆ ಮಧ್ಯಪ್ರದೇಶದ ವಿದಿಶಾ ಜಿಲ್ಲೆಯ ದುರ್ಜನ್‌ಪುರ ಎಂಬಲ್ಲಿ ದೊರೆತ ಕ್ರಿ.ಶ. ೪ನೆಯ ಶತಮಾನದ ಮೂರು ಪ್ರತಿಮಾ ಶಾಸನಗಳಿಂದ ರಾಮಗುಪ್ತ ಚಾರಿತ್ರಿಕ ವ್ಯಕ್ತಿಯೆಂಬುದು ಸ್ಥಿರೀಕೃತವಾಗಿದೆ. ಆ ಶಾಸನಗಳು ಅವನನ್ನು 'ಮಹಾರಾಜಾಧಿರಾಜ'ನೆಂದು ಕರೆದಿವೆ.

ಕದಂಬ ವಂಶದ ಮೂಲ ಹಾಗೂ ಇತಿಹಾಸ ಶಾಂತಿವರ್ಮನ ತಾಳಗುಂದ ಶಾಸನದಲ್ಲಿ (ಸು. ಕ್ರಿ.ಶ. ೪೫೦) ವಿಶ್ವಸನೀಯವಾಗಿ ತಿಳಿದುಬರುತ್ತದೆ. (ಬನವಾಸಿಯಲ್ಲಿ ಕದಂಬರ ಒಂದು ಶಾಸನವೂ ಸಿಕ್ಕಿರಲಿಲ್ಲವಾದ್ದರಿಂದ, ನಿಜವಾಗಿಯೂ ಬನವಾಸಿ ಅವರ ರಾಜಧಾನಿಯಾಗಿತ್ತೆ ಎಂಬ ಸಂದೇಹ ವಿದ್ವಾಂಸರಿಗಿತ್ತು. ಈಚೆಗೆ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಪ್ರಾಚೀನ ಕದಂಬರ ಶಾಸನದ ಒಂದು ಭಾಗ ಸಿಕ್ಕಿ, ಆ ಸಂದೇಹವನ್ನು ನಿವಾರಿಸಿದೆ.) ಹೀಗೆಯೇ ವಿಶೇಷಚಾರಿತ್ರಿಕ ಮಹತ್ವವುಳ್ಳ ಶಾಸನಗಳಲ್ಲಿ ಇವುಗಳನ್ನು ಹೆಸರಿಸಬಹುದು : ಕ್ರಿ.ಪೂ. ೧ನೆಯ ಶಥಮಾನದ ಖಾರವೇಲನ ಹಾಥಿ ಗುಂಫ ಶಾಸನಗಳು, ರುದ್ರದಾಮನ ಜುನಾಗಢ್ ಬಂಡೆ ಶಾಸನ (ಕ್ರಿ.ಶ. ೧೫೦) ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನ (ಕ್ರಿ.ಶ. ೬೩೪) ಮತ್ತು ಚೋಳರ, ಪೂರ್ವ ಚಾಳುಕ್ಯರ ಹಾಗೂ ಪೂರ್ವಗಂಗರ ಶಾಸನಗಳು.

ಐಹೊಳೆ ಶಾಸನದಲ್ಲಿ ಮಂಗಳೇಶ, ರೇವತೀ ದ್ವೀಪವನ್ನು ಗೆದ್ದ ಸಂಗತಿ ಉಕ್ತವಾಗಿದೆ. ಇಲ್ಲಿ ರೇವತೀ ದ್ವೀಪವೆಂದರೆ ನಿಜವಾಗಿ ದ್ವೀಪವಲ್ಲ, ಪಶ್ಚಿಮ ಕರಾವಳಿಯ ಕೊಂಕಣದ ಪ್ರಾಂತವಾಗಿದ್ದಿರಬಹುದು ಎಂದು ಚರಿತ್ರಕಾರರು ಅನುಮಾನಿಸಿದ್ದರು. ಆದರೆ ಕ್ರಿ.ಶ. ೧೦೦೯ ರ ಚಾಳುಕ್ಯ ತಾಮ್ರ ಶಾಸನವೊಂದರಲ್ಲಿ, ಮಂಗಳೇಶ ಹಡಗುಗಳ ಸೇತುವೆ ಕಟ್ಟಿ-ಎಂದರೆ, ನೌಕಾಸೇನೆಯ ನೆರವಿನಿಂದ-ರೇವತೀ ದ್ವೀಪವನ್ನು ವಶಪಡಿಸಿಕೊಂಡನೆಂದು ಸ್ಪಷ್ಟವಾಗಿ ಹೇಳಲಾಗಿದೆ. (ಶಾಸನಗಳು ತಮಗೆ ತಾವೆ ಮೌಲ್ಯ ಪಡೆದುಕೊಂಡಿರುವುದಲ್ಲದೆ ಪರಸ್ಪರ ಪೋಷಕವಾಗಿ, ಪೂರಕವಾಗಿ ನಿಲ್ಲುವುದೂ ಉಂಟು ಎಂಬುದು ಇಂಥ ನಿದರ್ಶನಗಳಿಂದ ವೇದ್ಯವಾಗುತ್ತದೆ.)

ರಾಷ್ಟ್ರಕೂಟ ಒಂದನೆಯ ಅಮೋಘವರ್ಷನಿಗೆ ಎರಡನೆಯ ಕೃಷ್ಣನೊಬ್ಬನೇ ಮಗನೆಂದು ಇದುವರೆಗೆ ಭಾವಿಸಲಾಗಿತ್ತು. ಆದರೆ ಕ್ರಿ.ಶ. ೯ ನೆಯ ಶತಮಾನದ ರಾಮದುರ್ಗದ ಶಾಸನದಿಂದ, ದುದ್ಧಯ್ಯ ಎಂಬ ಮತ್ತೊಬ್ಬ ಮಗ ಅಮೋಘವರ್ಷನಿಗಿದ್ದಂತೆ ತಿಳಿದುಬರುತ್ತದೆ.

ಪಶ್ಚಿಮ ಪಾಕಿಸ್ತಾನದ ಅಟ್ಟಾಕ್ ಜಿಲ್ಲೆಯ ಹುಂಡ್‌ನಲ್ಲಿ ಸಿಕ್ಕಿದ ಕ್ರಿ.ಶ. ೮ ನೆಯ ಶತಮಾನದ ಶಾಸನವೊಂದರಲ್ಲಿ, ಅನಂತದೇವನೆಂಬ ದೊರೆ 'ತುರುಷ್ಕಬಲ'ವನ್ನು ಸಿಂಧು ರಾಜ್ಯದಲ್ಲಿ ನಾಶಗೊಳಿಸಿದನೆಂದು ಉಕ್ತವಾಗಿದೆ. ಅಷ್ಟು ಹಿಂದೆಯೇ ಭಾರತದ ಮೇಲೆ ಮುಸ್ಲಿಮರ ದಾಳಿ ಆರಂಭವಾಗಿತ್ತೆಂಬ ವಿಶೇಷ ಸಂಗತಿ ಇದರಿಂದ ವ್ಯಕ್ತವಾಗುತ್ತದೆ.

ಪೂರ್ವಬಂಗಾಳದ ಬೋಗ್ರಾ ಜಿಲ್ಲೆಯ ಮಹಾಸ್ಥಾನದ ಒಂದು ಮೌರ್ಯ ಶಾಸನದಲ್ಲಿ ಕ್ಷಾಮಪರಿಹಾರ ಕಾರ್ಯಗಳ ಉಲ್ಲೇಖವಿದೆ; ಪ್ರಜೆಗಳ ಯೋಗಕ್ಷೇಮದಲ್ಲಿ ಸರ್ಕಾರ ಆಸಕ್ತಿ ವಹಿಸುತ್ತಿದ್ದುದು ಇದರಿಂದ ಗೊತ್ತಾಗುತ್ತದೆ. ಅಂತೆಯೇ, ರೋಗಿಗಳಿಗೆ ಕಲ್ಪಿಸಿಕೊಡುತ್ತಿದ್ದ ಸೌಕರ್ಯಗಳನ್ನು ದೇವಪಾಲನ ನಳಂದಾ ಶಾಸನ ಹೇಳುತ್ತದೆ.

ಪ್ರಾಚೀನ ಭಾರತದ ಆಡಳಿತ ವ್ಯವಸ್ಥೆಯ ಮೇಲೆ ಶಾಸನಗಳು ಬೆಳಕು ಚೆಲ್ಲುತ್ತವೆ ; 'ಅರ್ಥಶಾಸ್ತ್ರ', 'ಶುಕ್ರನೀತಿ'ಗಳಿಗನುಸಾರವಾಗಿ ಆಡಳಿತ ನಡೆಯುತ್ತಿದ್ದುದನ್ನು ಅವು ತಿಳಿಸುತ್ತವೆ. ಈ ದಿಕ್ಕಿನಲ್ಲಿ ಉತ್ತರ ಮೇರೂರು ಶಾಸನಗಳು ಬಹಳ ಗಮನಾರ್ಹವಾಗಿವೆ.

ಭಾರತೀಯರ ನೌಕಾಯಾನಕ್ಕೆ ಶಾಸನಾಧಾರವುಂಟು. ಆಂಧ್ರದ ಕೃಷ್ಣಾ ಜಿಲ್ಲೆಯ ಘಂಟಸಾಲದ ಪ್ರಾಚೀನ ಶಾಸನವೊಂದು ಶಿವಕನೆಂಬ 'ಮಹಾನಾವಿಕ'ನನ್ನು ಹೆಸರಿಸುತ್ತದೆ.

ಹಿಂದೆ ಸ್ತ್ರೀಯರಿಗಿದ್ದ ಸ್ಥಾನಮಾನಗಳನ್ನು ಶಾಸನಗಳು ತಿಳಿಸಿಕೊಡುತ್ತವೆ. ಇಲ್ಲಿ ಎರಡು ಉದಾಹರಣೆಗಳನ್ನು ಹೇಳಬಹುದು. ಕಾಶ್ಮೀರದ ದಿಡ್ಡಾ ಎಂಬ ರಾಣಿಯನ್ನು ಶ್ರೀನಗರದ ಒಂದು ಶಾಸನ 'ರಾಜನ್' ಎಂದು ಪುಲ್ಲಿಂಗದಲ್ಲಿ ವಿಶ್ಲೇಷಿಸಿ ಸ್ತುತಿಸುತ್ತದೆ. ಆಂಧ್ರದ ಕಾಕತೀಯ ರಾಣಿ ರುದ್ರಾಂಬೆ 'ರುದ್ರದೇವ ಮಹಾರಾಜ' ಎಂಬ ಹೆಸರಿನಲ್ಲಿ ಆಜ್ಞೆ ಹೊರಡಿಸುತ್ತಿದ್ದ ಸಂಗತಿ ಶಾಸನಗಳಿಂದ ಪ್ರಕಟವಾಗುತ್ತದೆ.

ಕೆಲವು ಸ್ವಾರಸ್ಯಪೂರ್ಣವಾದ ಸಾಮಾಜಿಕ ಪದ್ಧತಿಗಳು ಶಾಸನಗಳಿಂದ ಬೆಳಕಿಗೆ ಬರುತ್ತವೆ. ಪ್ರಾಚೀನ ವಿದ್ಯಾಭ್ಯಾಸ ಪದ್ಧತಿಯನ್ನು ಶಾಸನಗಳಿಂದ ಅರಿಯಬಹುದು. ಕರ್ನಾಟಕದ ಬಳ್ಳಿಗಾವೆಯ ಶಾಸನಗಳು ಪಂಚಮಠ ಸ್ಥಾನಗಳನ್ನೂ ವಿದ್ಯಾವಿತರಣವನ್ನೂ ಬೌದ್ಧ ವಿಹಾರಗಳ ಅಸ್ತಿತ್ವನ್ನೂ ತಿಳಿಸಿಕೊಡುತ್ತವೆ. ಕ್ರಿ.ಶ. ೪ ನೆಯ ಶತಮಾನದಲ್ಲಿ ಕಂಚಿಯೊಂದು ಘಟಿಕಾ ಸ್ಥಾನವಾಗಿತ್ತೆಂದು ತಾಳಗುಂದ ಶಾಸನದಿಂದ ಗೊತ್ತಾಗುತ್ತದೆ. ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿದ್ದ ಕಡಲೇವಾಡ ಮಹಾಘಟಿಕಾಸ್ಥಾನವಾಗಿತ್ತೆಂಬುದು ಅಲ್ಲಿನ ಶಾಸನಗಳಿಂದ ವ್ಯಕ್ತವಾಗುವ ಸಂಗತಿ.

ಜೈನ, ಬೌದ್ಧ, ಶೈವ, ವೈಷ್ಣವ ಮುಂತಾದ ವಿವಿಧ ಧರ್ಮಗಳ ಚರಿತ್ರೆಯನ್ನು ಶಾಸನಗಳಿಂದಲೇ ಸಂಗ್ರಹಿಸಬೇಕು. ಈ ದಿಶೆಯಲ್ಲಿ ಶ್ರವಣಬೆಳಗೊಳದ ಶಾಸನಗಳನ್ನು ಉದಾಹರಿಸಬಹುದು : ಅದು ಕರ್ನಾಟಕದಲ್ಲಿ ದಿಗಂಬರ ಜೈನಪಂಥದ ಇತಿಹಾಸವನ್ನು ರಚಿಸಲು ಮುಖ್ಯವಾದ ಆಕರವಾಗಿವೆ.

ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಐಹೊಳೆ (ತಮಿಳು ಶಾಸನಗಳಲ್ಲಿ ಅಯ್ಯಾವೊಳೆ) ದಕ್ಷಿಣ ಭಾರತದ ವಣಿಕ್ ಸಂಘದ ಕೇಂದ್ರವಾಗಿತ್ತೆಂದೂ ಕರ್ಣಾಟಕ ಆಂಧ್ರ, ತಮಿಳ್ನಾಡುಗಳು ಅದರ ಆಡಳಿತಕ್ಕೆ ಒಳಪಟ್ಟಿದ್ದುವೆಂದು ಶಾಸನಗಳಿಂದ ತಿಳಿದುಬರುತ್ತದೆ.

ಕನ್ನಡ ಲಿಪಿ ಭಾಷೆ ಸಾಹಿತ್ಯಗಳ ಬೆಳವಣಿಗೆಯನ್ನು ಗುರುತಿಸಲು ಅವಶ್ಯವಾದ ಸಾಮಗ್ರಿ ಶಾಸನಗಳು. ಸು.ಕ್ರಿ.ಶ. ೪೫೦ರ ಹಲ್ಮಿಡಿ ಶಾಸನವೆ ಸದ್ಯಕ್ಕೆ ಉಪಲಬ್ಧವಿರುವ ಕನ್ನಡ ಭಾಷೆಯ ಪ್ರಾಚೀನತಮ ದಾಖಲೆ ಎಂಬುದು ಸರ್ವವಿದಿತ. ಅಂತೆಯೆ, ಕನ್ನಡ ಸಾಹಿತ್ಯದ ಪ್ರಥಮ ದರ್ಶನ ನಮಗಾಗುವುದು ಕ್ರಿ.ಶ. ೭ ನೆಯ ಶತಮಾನದ ಬಾದಾಮಿ ಹಾಗೂ ಶ್ರವಣಬೆಳಗೊಳದ ಶಾಸನಗಳಲ್ಲಿ. ಈ ಕಾರಣದಿಂದಲೆ ಡಾ. ಚಿದಾನಂದಮೂರ್ತಿಯವರು "ಶಾಸನಗಳು ಕನ್ನಡ ಸಾಹಿತ್ಯದ ತಲಕಾವೇರಿ" (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೩೧) ಎಂದಿರುವದು. ಭಾರತದ ಪ್ರಾಚೀನ ಭೂಗೋಳದ ಪರಿಜ್ಞಾನಕ್ಕೆ ಶಸಾನಗಳು ಅಗತ್ಯ. ಶಿಲ್ಪಗಳ ಮತ್ತು ಕಟ್ಟಡಗಳ ಕಾಲನಿರ್ಣಯಕ್ಕೂ ಅವು ಉಪಯುಕ್ತ.

ಒಟ್ಟಿನಲ್ಲಿ, ಫ್ಲೀಟ್ ಹೇಳುವಂತೆ "ಭಾರತದ ರಾಜಕೀಯ ಚರಿತ್ರೆಯ ಬಗೆಗಿರುವ ನಮ್ಮ ಪರಿಜ್ಞಾನ ನಿಷ್ಪನ್ನವಾಗಿರತಕ್ಕದ್ದು ಸಂಪೂರ್ಣವಾಗಿ ಶಾಸನಗಳ ಒಂದು ಸಹನಾಪೂರ್ಣ ಪರೀಕ್ಷೆಯಿಂದಲೇ "ರಾಜಕೀಯ ಚರಿತ್ರೆ ಮಾತ್ರವಲ್ಲ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಚರಿತ್ರೆಗಳ ಪರಿಜ್ಞಾನವೂ ಬಹುಮಟ್ಟಿಗೆ ಶಾಸನಗಳಿಂದಲೇ ಬಂದದ್ದು, ಬರತಕ್ಕದ್ದು." ('ಶಾಸನಶಾಸ್ತ್ರ' ಕುರಿತ ಹಳೆಯ ಮಾರ್ಗದರ್ಶಕ ಪಾಠ, ಪು. - ೭,೮).

## 113.4 ಸಮಾರೋಪ

'ಶಾಸನ' ಎಂಬುದು 'ಶಾಸ್' ಎಂಬ (ಸಂಸ್ಕೃತ) ಧಾತುವಿನಿಂದ ನಿಷ್ಪನ್ನವಾದ ಪದ. ಆಜ್ಞೆ ಎಂಬ ಮುಖ್ಯ ಅರ್ಥ ಈ ಪದಕ್ಕಿದೆ. ರಾಜಾಜ್ಞೆಗಳನ್ನು ಶಾಸನಗಳೆಂದು ಕರೆಯುವುದು ಹೆಚ್ಚು ಅನ್ವರ್ಥವಾದುದು. ಮೂಲದಲ್ಲಿ ರಾಜಾಜ್ಞೆಗಳನ್ನು ಮಾತ್ರವೇ ಶಾಸನಗಳೆಂದು ಕರೆಯುತ್ತಿದ್ದರೂ ಕಾಲಕ್ರಮೇಣ ಈ ಪದದ ವ್ಯಾಪ್ತಿ ಹಿರಿದಾಯಿತು. ರಾಜಾಜ್ಞೆಗಳಲ್ಲದ, ರಾಜನಲ್ಲದೆ ಇತರರೂ ಹಾಕಿಸಿದ ಬರಹಗಳನ್ನೂ ಶಾಸನಗಳೆಂದು ಕರೆಯುವ ರೂಢಿ ಬಂದಿತು. ಯಾವುದೇ ವಿಷಯ ಯಾರಿಂದಲೇ ಆಗಲಿ ಅದು ಗಟ್ಟಿಯಾದ ವಸ್ತುಗಳಾದ ಕಲ್ಲು, ಮರ; ತಾಮ್ರಪಟ ಮುಂತಾದ ಲೋಹಗಳ ಮೇಲಾಗಲಿ ಕೆತ್ತಿಸಿದ / ಕೊರೆಸಿದ ಬರಹಗಳೆಲ್ಲ ಶಾಸನ ಎಂಬ ಅರ್ಥದ ವ್ಯಾಪ್ತಿಯ ಒಳಗೇ ಪರಿಭಾವಿತವಾಗತೊಡಗಿದವು. ಶಾಸನಕ್ಕೆ ಇಂಗ್ಲಿಷ್‌ನಲ್ಲಿ Inscription, Epigraph ಎಂಬ ಪದಗಳನ್ನು ಬಳಸಲಾಗುತ್ತದೆ.

ಶಾಸನಗಳು ಯಾವ ಅಧಿಕೃತತೆ ಹೊಂದಿರಬೇಕು, ಅದರಲ್ಲಿ ಯಾವ ಯಾವ ವಿಷಯಗಳಿರಬೇಕು ಎಂಬುವೇ ಮೊದಲಾದ ವಿವರಗಳನ್ನು ಕೌಟಿಲ್ಯನ 'ಅರ್ಥಶಾಸ್ತ್ರ', ಶುಕ್ರಾಚಾರ್ಯರ 'ನೀತಿಸಾರ', ಯಾಜ್ಞವಲ್ಕ್ಯರ 'ಯಾಜ್ಞವಲ್ಕ್ಯ ಸಂಹಿತೆ' ಮೊದಲಾದ ಪ್ರಾಚೀನ ಭಾರತೀಯ ಗ್ರಂಥಗಳು ನೀಡುತ್ತವೆ. ಶಾಸನಗಳು ಒಂದು (ನಿರ್ದಿಷ್ಟ) ಪ್ರದೇಶದ, ಕಾಲಘಟ್ಟದ ಜನಸಮುದಾಯದ, ಜೀವನವನ್ನು ತಕ್ಕಮಟ್ಟಿಗೆ ಕಟ್ಟಿಕೊಡುತ್ತವೆ. ಹಿಂದಿನವರ ರಾಜಕೀಯ, ಸಾಮಾಜಿಕ, ಧಾರ್ಮಿಕ ಅಥವಾ ಒಟ್ಟಾರೆಯಾಗಿ ಸಾಂಸ್ಕೃತಿಕ ಬದುಕನ್ನು ಅರಿಯಲು ಗಮನಾರ್ಹವಾದ (ಸಾಕಷ್ಟು) ವಿಶ್ವಾಸಾರ್ಹವಾದ ದಾಖಲೆಗಳಾಗುತ್ತವೆ ಈ ಶಾಸನಗಳು.

## 13.5 ಅಭ್ಯಾಸ ಪ್ರಶ್ನೆಗಳು

1. 'ಶಾಸನ' ಪದದ ಅರ್ಥ ಮತ್ತು ವ್ಯಾಪ್ತಿಯನ್ನು ವಿಶದಪಡಿಸಿ.
2. ಚರಿತ್ರೆಯ ರಚನೆಯಲ್ಲಿ ಶಾಸನಗಳು ವಹಿಸುವ ಮಹತ್ತ್ವವನ್ನು ಕುರಿತು ಬರೆಯಿರಿ.

## 113.6 ಪರಾಮರ್ಶನ ಗ್ರಂಥಗಳು


1. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಎಂ. ಚಿದಾನಂದ ಮೂರ್ತಿ
2. ಪುರಾತತ್ತ್ವ ಶೋಧನೆ : ಎಸ್. ಶ್ರೀಕಂಠಶಾಸ್ತ್ರೀ
3. ಕರ್ಣಾಟಕ ಸಂಸ್ಕೃತಿ ಸಮೀಕ್ಷೆ : ಎಚ್. ತಿಪ್ಪೇರುದ್ರಸ್ವಾಮಿ
4. ಶಾಸನ ಮತ್ತು ಗದ್ಯ : ಹು.ಕ. ಜಯದೇವ

# ಕೋರ್ಸ್ - X : ಕನ್ನಡ ಶಾಸನ ಅಧ್ಯಯನ (ತತ್ತ್ವ ಮತ್ತು ಆಯ್ದ ಶಾಸನ ಪಠ್ಯಗಳು)

## ಬ್ಲಾಕ್ - 29 : ತತ್ತ್ವಗಳು

## ಘಟಕ - 114
## ಕರ್ನಾಟಕದಲ್ಲಿ ಶಾಸನಾಧ್ಯಯನದ ಇತಿಹಾಸ

ರಚನೆ


114.0 ಉದ್ದೇಶ

114.1 ಪೀಠಿಕೆ

114.2 ಕರ್ನಾಟಕದಲ್ಲಿ ಶಾಸನಾಧ್ಯಯನ - ಪಾಶ್ಚಾತ್ಯ ವಿದ್ವಾಂಸರ ಸೇವೆ

114.3 ಕರ್ನಾಟಕದಲ್ಲಿ ಶಾಸನಾಧ್ಯಯನ - ಭಾರತೀಯ ವಿದ್ವಾಂಸರ ಸೇವೆ

114.4 ಕನ್ನಡದಲ್ಲಿ ಶಾಸನಗಳನ್ನಾಧರಿಸಿದ ಸಂಶೋಧನಾ ಕಾರ್ಯಗಳು

114.5 ಸಮಾರೋಪ

114.6 ಅಭ್ಯಾಸ ಪ್ರಶ್ನೆಗಳು

114.7 ಪರಾಮರ್ಶನ ಗ್ರಂಥಗಳು

## 114.0 ಉದ್ದೇಶ

- ಶಾಸನಗಳ ಅಧ್ಯಯನ ನಡೆದು ಬಂದ ದಾರಿಯನ್ನು ಗದುರುತಿಸುವುದು.
- ಶಾಸನಗಳ ಅಧ್ಯಯನದಲ್ಲಿ ತೊಡಗಿದ್ದ ಪಾಶ್ಚಾತ್ಯ ವಿದ್ವಾಂಸರ ಸೇವೆಯನ್ನು ತಿಳಿಯುವುದು
- ಶಾಸನಗಳ ಅಧ್ಯಯನದಲ್ಲಿ ತೊಡಗಿದ್ದ ಭಾರತೀಯ ವಿದ್ವಾಂಸರ ಸೇವೆಯನ್ನು ತಿಳಿಯುವುದು.
- ಶಾಸನಗಳ ಆಧರಿಸಿದ ಸಂಶೋಧನಾ ಕಾರ್ಯಗಳ ಮಾಹಿತಿ ಪಡೆಯುವುದು.

## 114.1 ಪೀಠಿಕೆ

ಈ ಘಟಕದಲ್ಲಿ ಮುಖ್ಯವಾಗಿ ಶಾಸನಗಳ ಅಧ್ಯಯನ ಕುರಿತ ಕಾರ್ಯವು ಕರ್ನಾಟಕದಲ್ಲಿ ನಡೆದ ಬಗೆಗಿನ ಪ್ರಸ್ತಾಪವನ್ನು ಒಳಗೊಂಡಿದೆ. ಶಾಸನ ಶಾಸ್ತ್ರದ ಅಧ್ಯಯನವೇ ಹೊಸ ಕ್ಷೇತ್ರ. ಪಾಶ್ಚಾತ್ಯರಲ್ಲಿಯೇ ಇದು ಆರಂಭವಾದದ್ದು ತಡವಾಗಿ. ಭಾರತದಲ್ಲಿ ೧೯ನೆಯ ಶತಮಾನದ ಕಡೆಯಲ್ಲಿ ಅಧ್ಯಯನ ಪ್ರಾರಂಭವಾಗಿದೆ. ಕನ್ನಡ ಶಾಸನ ಪ್ರಕಟಣೆ ಕುರಿತ ಪ್ರಥಮ ಉಲ್ಲೇಖನವನ್ನೂ ೧೮ ಶತಮಾನದ ಕಡೆಯಲ್ಲಿ ಕಾಣುತ್ತೇವೆ. ಈವರೆಗೆ ಕನ್ನಡದಲ್ಲಿ ಸುಮಾರು ೨೫,೦೦೦ಕ್ಕೂ ಹೆಚ್ಚು ಶಾಸನಗಳನ್ನು ಕ್ಷೇತ್ರಕಾರ್ಯದ ಮೂಲಕ ಪತ್ತೆ ಹಚ್ಚಲಾಗಿದೆ. ಹೀಗೆ ಪತ್ತೆಯಾದ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಹೇಗೆ? ಈ ಕ್ಷೇತ್ರದಲ್ಲಿ ದುಡಿದ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ಯಾರು ಯಾರು, ಕಂಡುಕೊಂಡ ಸತ್ಯಗಳು ಯಾವುವು ಮೊದಲಾದ ಸಂಗತಿಗಳನ್ನು ಈ ಘಟಕದಲ್ಲಿ ಸ್ಥೂಲವಾಗಿ ತಿಳಿಯುತ್ತೇವೆ.

ಕನ್ನಡದಲ್ಲಿ ಶಾಸನಗಳನ್ನು ಆಧರಿಸಿ ನಡೆದ ಕೆಲಸ ಮತ್ತು ರಚಿಸಿದ ಕೃತಿ ಮತ್ತು ಕರ್ತೃಗಳ ಬಗ್ಗೆ ಕೆಲವೆಡೆ ಹೆಸರನಷ್ಟೇ ಇಲ್ಲಿ ಸೂಚಿಸಿದೆ. ಕ್ಷೇತ್ರ ಕಾರ್ಯ ಮಾಡಿದ ವಿದ್ವಾಂಸರು, ಸಂಶೋಧಕರು, ಸಂಶೋಧನಾ ಕೃತಿಗಳಲ್ಲಿರುವ ವಿಷಯಗಳ ಹೆಚ್ಚುವರಿ ಸಂಗತಿಗಳನ್ನು ಇತರ ಮೂಲಗಳ ನಿಮ್ಮ ಓದುವಿಕೆಯಿಂದ ಸಂಗ್ರಹಿಸಿಕೊಳ್ಳಬೇಕೆಂದು ತಿಳಿಸಲಿಚ್ಛಿಸುತ್ತೇನೆ.

## 114.2 ಕರ್ನಾಟಕದಲ್ಲಿ ಶಾಸನಾಧ್ಯಯನ : ಪಾಶ್ಚಾತ್ಯ ವಿದ್ವಾಂಸರ ಸೇವೆ

ಕನ್ನಡ ಶಾಸನಗಳ ಅಧ್ಯಯನ ಆರಂಭಗೊಂಡದ್ದು ೧೮ ನೆಯ ಶತಮಾನದಲ್ಲಿ. ಬಂಗಾಳದ 'ರಾಯಲ್ ಏಷಿಯಾಟಿಕ್ ಸೊಸೈಟಿ'ಯು ಪ್ರಕಟಿಸುತ್ತಿದ್ದ 'ಏಷಿಯಾಟಿಕ್ ರಿಸರ್ಚಸ್' (Asiatic Researches, vol.-iii) ಎಂಬ, ಸಂಶೋಧನ ಬರಹಗಳ ಪತ್ರಿಕೆಯಲ್ಲಿ ೧೭೯೧ ರಲ್ಲಿ ಕನ್ನಡ ಶಾಸನ ಕುರಿತ ಲೇಖನವೊಂದು ಟಿಪ್ಪಣಿ ಸಹಿತ ಪ್ರಕಟವಾಯಿತು. ಸರ್‌ವಿಲಿಯಂ ಜೋನ್ಸ್ ಎಂಬಾತ ಇದರ ಕರ್ತೃ. 'ಏ ರಾಯಲ್ ಗ್ರಾಂಟ್ ಆಫ್ ಲ್ಯಾಂಡ್ ಇನ್ ಕರ್ನಾಟ' (A Royal Grant of Land in Carnata) ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಈ ಲೇಖನವನ್ನು ಜೋನ್ಸ್‌ನು ಅಲೆಕ್ಸಾಂಡರ್ ಮಾಕ್ಲಿಯೋಡ್ (Alexander Macleod) ಎಂಬ ಆಂಗ್ಲ ಅಧಿಕಾರಿ ಕಳುಹಿಸಿಕೊಟ್ಟ ತಾಮ್ರಪಟ ಆಧರಿಸಿ ರಚಿಸಿದ್ದಾಗಿತ್ತು. ಕಂಚಿಯಲ್ಲಿ ದೊರೆತ ಈ ತಾಮ್ರಪಟವು ವಿಜಯನಗರ ದೊರೆಗಳಿಗೆ ಸಂಬಂಧಿಸಿದ್ದು. ವಿಜಯನಗರದ ದೊರೆಗಳು ಕಂಚಿಯ ದೇವಸ್ಥಾನಕ್ಕೆ ಕೊಟ್ಟ ದತ್ತಿಯನ್ನು ಹೇಳುತ್ತದೆ ಈ ಶಾಸನ. ಈ ಲೇಖನವೇ ಕನ್ನಡ ಶಾಸನಗಳನ್ನು ಕುರಿತ ಮೊಟ್ಟಮೊದಲ ಪ್ರಕಟಣೆ. ಆದ್ದರಿಂದಲೇ ಇದಕ್ಕೆ ಐತಿಹಾಸಿಕ ಮಹತ್ವವೂ ಇದೆ.

ಕರ್ನಲ್ ಮೆಕೆಂಜಿ (Colonel Colin Mackenzie) ಎಂಬ ಮತ್ತೋರ್ವ ಸೈನ್ಯಾಧಿಕಾರಿ ಶಾಸನಗಳ ಸಂಗ್ರಹ ಮತ್ತು ಪ್ರಕಟಣೆಗೆ ತನ್ನದೇ ಆದ ಸೇವೆ ಸಲ್ಲಿಸಿದ್ದಾನೆ. ಟಿಪ್ಪೂಸುಲ್ತಾನನಿಂದ ೧೭೯೯ ರಲ್ಲಿ ಮೈಸೂರು ಪ್ರದೇಶವನ್ನು ಆಕ್ರಮಿಸಿಕೊಂಡ

ಬ್ರಿಟಿಷರು ಮೈಸೂರು ಪ್ರದೇಶದಲ್ಲಿ ಆಡಳಿತವನ್ನು ವ್ಯವಸ್ಥೆಗೆ ತರುವ ಸಲುವಾಗಿ ಈತನನ್ನು ಭೂ ಪರಿವೀಕ್ಷಣೆಗೆ ನೇಮಿಸಿದ ಸಂದರ್ಭದಲ್ಲಿ ಈತ ತನ್ನ ಕರ್ತವ್ಯದ ಜೊತೆಗೆ ಊರೂರಲ್ಲಿ ದೊರೆಯುತ್ತಿದ್ದ ತಾಡೆಯೋಲೆ ಗ್ರಂಥಗಳು, ಕೈಫಿಯತ್ತುಗಳು, ತಾಮ್ರಪಟಗಳು, ನಾಣ್ಯ ಮೊದಲಾದ ಪ್ರಾಚೀನ ವಸ್ತು ವಿಶೇಷಗಳನ್ನು ಸಂಗ್ರಹಿಸಿದ. ಹೀಗೆ ಸಂಗ್ರಹಿಸಿದ ವಸ್ತುಗಳಲ್ಲಿ ಶಾಸನ - ಪಡಿಯಚ್ಚುಗಳೂ ಇದ್ದವು. ಇವುಗಳನ್ನು ಓದುವ ಅರ್ಥೈಸುವ ಪ್ರಯತ್ನಗಳನ್ನು ಈತ ಮಾಡಿದ. ಈ ಕಾರ್ಯದಲ್ಲಿ ಕವೆಲ್ಲಿ ವೆಂಕಟಬೋರೈಯ (Cavelly Borai, Brahmin) ಎಂಬ ಭಾರತೀಯ ಈತನಿಗೆ ಸಹಾಯ ಮಾಡಿದುದಾಗಿ ತಿಳಿದುಬರುತ್ತದೆ. ಮೆಕೆಂಜಿ ಸಂಗ್ರಹಿಸಿದ ಒಟ್ಟು ಶಾಸನಗಳ ಸಂಖ್ಯೆ ೮೦೨೬. ಕರ್ನಲ್ ಮೆಕೆಂಜಿ ಶಾಸನಗಳ ಬಗ್ಗೆ 'ಏಷಿಯಾಟಿಕ್ ರಿಸರ್ಚಸ್' ಪತ್ರಿಕೆಯಲ್ಲಿ ವರದಿ ಮಾಡಿದ್ದಾನೆ. ಈ ಪತ್ರಿಕೆಯ ೯ ನೆಯ ಸಂಪುಟದಲ್ಲಿ (ಕ್ರಿ.ಶ. ೧೮೦೭) ಈ ವರದಿ ಇದೆ. ವಿಜಯನಗರದ ಎರಡು ತಾಮ್ರಪಟಗಳು ಮತ್ತು ಕುರುಗೋಡಿನ ಒಂದು ಶಿಲಾಶಾಸನದ ಅನುವಾದ ಈ ಸಂಪುಟದಲ್ಲಿ ಪ್ರಕಟವಾಗಿದೆ. ವಿಲಿಯಂ ಬ್ರೌನ್ಸ್ ಎಂಬಾತ ಕೂಡ ಕೆಲವು ಶಾಸನಗಳನ್ನು ಸಂಗ್ರಹಿಸಿದಂತೆ ಇದೇ ಸಂಪುಟದಲ್ಲಿ ತಿಳಿದುಬರುತ್ತದೆ.

ಬೆಂಬಾಯಿ ಸರ್ಕಾರದ ಕಾರ್ಯದರ್ಶಿಯಾಗಿದ್ದ ವಿಲಿಯಂ ಹೆನ್ರಿ ವಥೆನ್ (William Henry Wathen) ಎಂಬಾತ ಹನ್ನೆರಡು ಶಾಸನಗಳನ್ನು ಓದಿ ಭಾಷಾಂತರಿಸಿ ಅವುಗಳ ಸಾರಾಂಶವನ್ನು ಕ್ರಿ.ಶ. ೧೮೩೫ ರಲ್ಲಿ ಪ್ರಕಟಿಸಿದ. ಇದಕ್ಕೆ ನೆರವು ನೀಡಿದವನು ಎಂ.ಎಸ್. ಎಲ್ಫಿನ್‌ಸ್ಟನ್ (Hon. Mount Stuart Elphiston), ಸರ್ ಜೈನ್ ಮಾಲ್ಕಂ (Sir John Malcolm). ಮುಂದೆ ವಥೆನ್ ೧೮೩೬ರಲ್ಲಿ 'ರಾಯಲ್ ಏಷಿಯಾಟಿಕ್ ಸೊಸೈಟಿ'ಯ ಪತ್ರಿಕೆಯ (J.R.A.S) ಸಂಪುಟ - ೫ ರಲ್ಲಿ ಬೆಳಗಾವಿಯ ಒಂದು ಶಾಸನ ಪ್ರಕಟಿಸಿದ.

ಕನ್ನಡ ಶಾಸನಗಳ ಅಧ್ಯಯನ ಒಂದು ವ್ಯವಸ್ಥಿತ ರೂಪ ಪಡೆದುಕೊಂಡದ್ದು ವಾಲ್ಟರ್ ಎಲಿಯಟ್ ಎಂಬ ಆಂಗ್ಲ ವಿದ್ವಾಂಸನಿಂದ. ಈತ ಕ್ರಿ.ಶ. ೧೮೩೬ರಲ್ಲಿ 'Hindu Inscriptions' (ಹಿಂದೂ ಶಾಸನಗಳು) ಎಂಬ ಲೇಖನವನ್ನು Journal of the Royal Asiatic Society ಪತ್ರಿಕೆಯಲ್ಲಿ (Vol. 4, p. 1-41) ಪ್ರಕಟಿಸುತ್ತಾನೆ. ಈ ಲೇಖನದಿಂದ "ಕರ್ನಾಟಕದ ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸಗಳ ಅಧ್ಯಯನದಲ್ಲಿ ಒಂದು ಹೊಸ ಅಧ್ಯಾಯವೆ ಪ್ರಾರಂಭವಾಗುತ್ತದೆ." ಇದರಲ್ಲಿ ಶಾಸನಗಳನ್ನು ಆಧರಿಸಿದ ಕರ್ನಾಟಕದ ಕೆಲವು ರಾಜಮನೆತನಗಳ (ಕದಂಬ ಚಾಳುಕ್ಯ ಮೊದಲಾದ) ಚರಿತ್ರೆಯನ್ನು ರಚಿಸುವ ಯತ್ನ ನಡೆದಿದೆ. ಇದೇ ಲೇಖನ ಕೆಲವು ಪರಿಷ್ಕಾರಗಳೊಂದಿಗೆ Madras Journal of Literature and Science (Vol. vii, p. 193) ಪತ್ರಿಕೆಯಲ್ಲಿ ಮತ್ತೆ ಪ್ರಕಟವಾಗಿದೆ. ಈತನ ಮತ್ತೊಂದು ದೊಡ್ಡ ಸಾಧನೆ "ಕರ್ನಾಟಕ ದೇಶ ಇನ್‌ಸ್ಕ್ರಿಪ್ಷನ್ಸ್" (Karanatak Desh Inscriptions) ಎಂಬ ಹೊತ್ತಗೆ ಸಿದ್ಧಪಡಿಸಿದ್ದು. ಇದರಲ್ಲಿ ಸು. ೫೬೫ ಶಾನಗಳಿದ್ದು ಈ ಸಂಗ್ರಹದ ಒಟ್ಟು ನಾಲ್ಕು ಪ್ರತಿಗಳನ್ನು ಮಾಡಿ ಒಂದು ಪ್ರತಿಯನ್ನು ರಾಯಲ್ ಏಷಿಯಾಟಿಕ್ ಸಂಸ್ಥೆಗೂ ಇನ್ನೊಂದನ್ನು ಎಡಿನ್‌ಬರೋ ವಿಶ್ವವಿದ್ಯಾನಿಲಯಕ್ಕೂ ಕೊಟ್ಟುದುದಾಗಿ ತಿಳಿಯುತ್ತದೆ.

ಅಶೋಕನ ಶಾಸನಗಳನ್ನು ಯಶಸ್ವಿಯಾಗಿ ಓದಲು ಸಾಧ್ಯವಾದದ್ದು ಶಾಸನ ಅಧ್ಯಯನದಲ್ಲಿ ಮುಖ್ಯವಾದ ಸಾಧನೆ. ೧೮೩೬ರಲ್ಲಿ ಗ್ರೀಕ್ - ಬ್ರಾಹ್ಮಿ ಲಿಪಿಯ ನಾಣ್ಯಗಳ ಸಹಾಯದಿಂದ ಲಾಸೆನ್ ಎಂಬಾತ ಅಶೋಕನ ಶಾಸನಗಳನ್ನು ಓದುವಲ್ಲಿ ಯಶಸ್ವಿಯಾಗುತ್ತಾನೆ.

೧೮೩೭ ರಲ್ಲಿ ಜೇಮ್ಸ್ ಪ್ರಿನ್ಸೆಪ್ ಎಂಬ ವಿದ್ವಾಂಸ Journal of the Asiatic Society of Bengalನ ೬ ನೇ ಸಂಪುಟದಲ್ಲಿ ೧೦ ನೆಯ ಶತಮಾನದ ಕನ್ನಡ ಶಾಸನವೊಂದರ ನಕಲು ಮತ್ತು ಅದರ ಸಾರಾಂಶವನ್ನು ಪ್ರಕಟಿಸಿದ. ಕರ್ನಾಟಕದಲ್ಲಿ ದೊರೆತ ಅಶೋಕನ ಶಾಸನಗಳನ್ನು ಹಾಗೂ ಬ್ರಾಹ್ಮೀ ಲಿಪಿಯ ಇತರ ಶಾಸನಗಳನ್ನು ಸ್ಪಷ್ಟವಾಗಿ ಓದಲು ಈತನ ಪ್ರಯತ್ನಗಳು ನೆರವಾದವು. ಬ್ರಾಹ್ಮೀ ಲಿಪಿಯಲ್ಲಿರುವ ಶಾಸನಗಳನ್ನು ಯಶಸ್ವಿಯಾಗಿ ಓದಿ ಆ ಲಿಪಿಯ ವಿವರಗಳನ್ನು ಈತ ಪ್ರಕಟಿಸಿದ್ದಾನೆ. ಕನ್ನಡ ಲಿಪಿಯ ವಿಕಾಸವನ್ನು ಗುರುತಿಸಿಕೊಳ್ಳುವಲ್ಲಿಯೂ ಈ ಪ್ರಯತ್ನ ಸಹಾಯಕವಾಗಿದೆ. ೧೮೩೦ ರ ವರ್ಷದಿಂದಾಗಲೇ ಅಶೋಕನ ಶಾಸನಗಳನ್ನು ಓದುವ

ಪ್ರಯತ್ನ ನಡೆದಿತ್ತಾದರೂ ಲಾಸೆನ್ ಎಂಬ ವಿದ್ವಾಂಸ ೧೮೩೬ ರಲ್ಲಿ ಗ್ರೀಕ್ ಮತ್ತು ಬ್ರಾಹ್ಮಿ ಲಿಪಿಯ ನಾಣ್ಯಗಳ ನೆರವಿನಿಂದ ಈ ಶಾಸನಗಳನ್ನು ಓದುವ ಮೊದಲ ಯಶಸ್ವೀ ಪ್ರಯತ್ನ ಮಾಡಿದ್ದಾನೆ. ಭಾರತದಲ್ಲಿ ಆಳುತ್ತಿದ್ದ ಅಗಥೋಕ್ಲಿಸ್ ಎಂಬ ಗ್ರೀಕ್ ದೊರೆಯ ಕಾಲದ ನಾಣ್ಯಗಳ ಮೇಲಿದ್ದ ಗ್ರೀಕ್ ಮತ್ತು ಬ್ರಾಹ್ಮಿ ಲಿಪಿ ಈ ಓದಿಗೆ ಮೂಲ ಆಕರಗಳಾಗಿದ್ದವು.

ಕರ್ನಾಟಕದ ಶಾಸನಗಳ ಅಧ್ಯಯನಕ್ಕೆ ಗುರುತರವಾದ ಕಾಣಿಕೆ ಸಲ್ಲಿಸಿದವರು ಜೆ.ಎಸ್. ಫ್ಲೀಟ್ ಮತ್ತು ಬಿ.ಎಲ್. ರೈಸ್. ಒಂದೊಂದು ಶಾಸನವನ್ನೂ ತಾಳ್ಮೆ ಮತ್ತು ಜವಾಬ್ದಾರಿಯಿಂದ ಅಧ್ಯಯನ ಮಾಡಿ ಅವುಗಳನ್ನು ಅಗತ್ಯ ಟಿಪ್ಪಣಿ ವಿವರಣೆಗಳೊಡನೆ ಪ್ರಕಟಿಸಿದ್ದಾರೆ.

ಫ್ಲೀಟ್ ಅವರ ಪೂರ್ಣ ಹೆಸರು ಜಾನ್ ಪೇಥ್‌ಫುಲ್ ಫ್ಲೀಟ್ ಎಂಬುದು. 'ರಾಯಲ್ ಏಷಿಯಾಟಿಕ್ ಸೊಸೈಟಿಯ ಮುಂಬೈ ಶಾಖೆ' ಪತ್ರಿಕೆ (Journal of the Bombay Branch of the Royal Asiatic Society (JBBRAS) ಆರಂಭದ ಹನ್ನೆರಡು ಸಂಪುಟಗಳಲ್ಲಿ ಮತ್ತು 'ಇಂಡಿಯನ್ ಆ್ಯಟಿಕ್ವರಿ' (Indian Antiquary) ಮೊದಲ ಇಪ್ಪತ್ತು ಸಂಪುಟಗಳಲ್ಲಿ ಫ್ಲೀಟ್ ಹಲವಾರು ಶಾಸನ ಮತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. 'Sanskrit and Old Canarese Inscriptions' ಎಂಬ ಶೀರ್ಷಿಕೆಯಲ್ಲಿ ಈ ಪ್ರಕಟಣೆಗಳಿವೆ. ಮುಂದೆ ೧೮೭೮ ರಲ್ಲಿ ಕೆಲವು ಹೊಸ ಶಾಸನಗಳನ್ನು ಸೇರಿಸುವುದರೊಂದಿಗೆ ಮತ್ತೊಂದು ಬೃಹತ್ಪ್ರಕಟಣೆ ಮಾಡಿದರು. 'Pali, Sanskrit and Old Canarese inscriptions from the Bombay Presidency and parts of Madras presidency and Mysore' ಎಂಬ ಹೆಸರಿನಲ್ಲಿ ಒಂಬತ್ತು ಸಂಪುಟಗಳನ್ನು ಪ್ರಕಟಿಸಿಲಾಗಿದೆ. ಇದರಲ್ಲಿ ಉತ್ತರ ಕರ್ನಾಟಕ ಪ್ರದೇಶಗಳ, ಮುಖ್ಯವಾಗಿ ಬೆಳಗಾವಿ, ಧಾರವಾಡ ವಿಜಾಪುರ ಜಿಲ್ಲೆಯ ಶಾಸನಗಳು ಸಂಪಾದಿತವಾಗಿವೆ. ಅಲ್ಲದೆ ಮಹಾರಾಷ್ಟ್ರ ಗುಜರಾತ್‌ಗಳಲ್ಲಿ ದೊರೆತ ಚಾಲುಕ್ಯ ಮತ್ತು ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನಗಳೂ ಇವೆ. ಫ್ಲೀಟರ ಈ "ಮಹತ್ತರ ಕಾರ್ಯದಿಂದಾಗಿ ಆದಿ ಕದಂಬ, ಬಾದಾಮಿ ಚಾಲುಕ್ಯ ರಾಷ್ಟ್ರಕೂಟ ಮನೆತನಗಳ ಖಚಿತವಾದ ಚರಿತ್ರೆ ವಿದ್ವಲ್ಲೋಕಕ್ಕೆ ದೊರೆಯುವಂತಾಯಿತು".

೧೮೮೮ ರಲ್ಲಿ ಆರಂಭವಾದ 'Epigraphia Indica' ಎಂಬ ಪತ್ರಿಕೆಯಲ್ಲಿ ಫ್ಲೀಟರು 'Some records of the Rastrakuta Kings of Malkhed" ಎಂಬ ಶೀರ್ಷಿಕೆಯಡಿಯಲ್ಲಿ ಸುಮಾರು ಇಪ್ಪತ್ತು ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಕನ್ನಡ ನಾಡು ನುಡಿಯ ಬಗ್ಗೆ ಜಾಗೃತಿ ಮೂಡಲು ಫ್ಲೀಟರ ಶಾಸನ ಸಂಗ್ರಹ ಸಂಪಾದನೆ ಪ್ರಕಟನೆ ಪೂರಕವಾದ ಪ್ರಚೋದನೆ ಒದಗಿಸಿದೆ.

ಫ್ಲೀಟರ ಜೊತೆಗೆ ನೆನೆಯಬೇಕಾದ ಮತ್ತೊಂದು ಹೆಸರು ರೈಸ್ ಅವರು. ಬೆಂಝುಮಿನ್ ಲೂಯಿ ರೈಸ್ ಅವರ ಪೂರ್ಣನಾಮ. ರೈಸ್ ಅವರದು ಬಹುಮುಖ ಪ್ರತಿಭೆ, ಶಿಕ್ಷಣ ತಜ್ಞರಾಗಿ, ಗೆಝೆಟಿಯರ್ ರಚನಕಾರರಾಗಿ, ಶಾಸನ ತಜ್ಞರಾಗಿ, ಹಸ್ತಪ್ರತಿ ಸಂಗ್ರಾಹಕರಾಗಿ, ಅವುಗಳ ಪರಿಷ್ಕರಣಕಾರರಾಗಿ, ಇತಿಹಾಸಜ್ಞರಾಗಿ ಸೇವೆ ಸಲ್ಲಿಸಿದ್ದಾರೆ. ಬಿ.ಎಲ್. ರೈಸ್ ಜನಿಸಿದ್ದು ಭಾರತದಲ್ಲಿ, ಅದರಲ್ಲಿಯೂ ಬೆಂಗಳೂರಿನಲ್ಲಿ ಕ್ರಿ.ಶ. ೧೮೩೭ರಲ್ಲಿ. ಇವರ ತಂದೆ ಬೆಂಜಾಮಿನ್ ಹೊಲ್ಟ್ ರೈಸ್ ಧರ್ಮೋಪದೇಶಕರಾಗಿ ಭಾರತಕ್ಕೆ ಬಂದು ಬೆಂಗಳೂರಿನಲ್ಲಿ ನೆಲೆಸಿದ್ದರು. ರೈಸ್ ಅವರನ್ನು **'ಕರ್ನಾಟಕ ಶಾಸನ ಪಿತಾಮಹ'**ರೆಂದು ಗುರುತಿಸಲಾಗುತ್ತದೆ. ಮೈಸೂರು ಪ್ರಾಂತದ ಹಳ್ಳಿಹಳ್ಳಿಗಳನ್ನು ಸುತ್ತಿ ಶಾಸನಗಳ ಪರಿವೀಕ್ಷಣೆ ನಡೆಸಿ, ಪಡಿಯಚ್ಚು ತೆಗೆದುಕೊಂಡು ಅವುಗಳ ಪಾಠವನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ಅನುವಾದದೊಡನೆ ಪ್ರಕಟಿಸಿದ್ದಾರೆ. 'ಎಪಿಗ್ರಾಫಿಯಾ ಕರ್ನಾಟಿಕಾ' ಮಾಲಿಕೆಯಲ್ಲಿ ಹನ್ನೆರಡು ಸಂಪುಟಗಳಲ್ಲಿ ಸಂಕಲಿತವಾಗಿರುವ ಶಾಸನಗಳ ಸಂಖ್ಯೆ ೮,೮೬೯. ಶಾಸನ ಸಂಗ್ರಹದ ಇತಿಹಾಸವನ್ನು ರೈಸ್ ತಮ್ಮ Mysore And Coorg From Inscriptions ಎಂಬ ಗ್ರಂಥದ ಮುನ್ನುಡಿಯಲ್ಲಿ ದಾಖಲಿಸಿದ್ದಾರೆ. ಕ್ರಿ.ಶ. ೧೮೮೪ ರಲ್ಲಿ ರೈಸ್ ಅವರನ್ನು ಮೈಸೂರು ಸಂಸ್ಥಾನದ

ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರನ್ನಾಗಿ ನೇಮಕ ಮಾಡಲಾಯಿತು. ೧೮೮೬ ರಲ್ಲಿ ಕೊಡಗಿನ ಶಾಸನಗಳೂ ಒಳಗೊಂಡ ಸಂಪುಟ, ೧೮೮೯ ರಲ್ಲಿ ಶ್ರವಣಬೆಳಗೊಳವನ್ನು ಒಳಗೊಂಡ ಶಾಸನ ಸಂಪುಟ ಪ್ರಕಟಗೊಂಡವು. ೧೮೯೦ ರಿಂದ ೧೯೦೬ರವರೆಗೆ ಅವರು ನಿವೃತ್ತರಾಗುವವರೆಗೆ ಪ್ರಾಚ್ಯವಸ್ತು ಇಲಾಖೆಯಲ್ಲಿ ದುಡಿದಿದ್ದಾರೆ. ರೈಸ್ ಅವರು ಸಂಪಾದಿಸಿರುವ 'ಎಪಿಗ್ರಾಫಿಯಾ ಕರ್ನಾಟಿಕಾ'ದ ಸಂಪುಟಗಳ ಶಾಸನಗಳ ವಿವರ ಈ ಕೆಳಕಂಡಂತಿದೆ.

| ಸಂಪುಟ | ಜಿಲ್ಲೆ / ಪ್ರದೇಶ | ಶಾಸನ ಸಂಖ್ಯೆ | ಪ್ರಕಟಿತ ವರ್ಷ |
|---|---|---|---|
| ಸಂಪುಟ-೧ | ಇನ್‌ಸ್ಕ್ರಿಪ್‌ಷನ್ ಫ್ರಮ್ ಕೂರ್ಗ್ (೧೯೧೪ ರಲ್ಲಿ ರೈಸ್ ಪುನಮುದ್ರಣ ಮಾಡಿಸಿದರು) | ೨೩ | ೧೮೮೬ |
| ಸಂಪುಟ-೨ | ಇನ್‌ಸ್ಕ್ರಿಪ್‌ಷನ್ಸ್ ಅಟ್ ಶ್ರವಣಬೆಳಗೊಳ | ೧೪೪ | ೧೮೮೯ |
| ಸಂಪುಟ-೩ | ಇನ್‌ಸ್ಕ್ರಿಪ್‌ಷನ್ಸ್ ಇನ್ ದ ಮೈಸೂರು ಡಿಸ್ಟ್ರಿಕ್ಟ್, ಭಾಗ-೧ (ಮಂಡ್ಯ ಜಿಲ್ಲೆ ಶಾಸನಗಳು) | ೮೦೩ | ೧೮೯೪ |
| ಸಂಪುಟ-೪ | ಇನ್‌ಸ್ಕ್ರಿಪ್‌ಷನ್ಸ್ ಇನ್ ದ ಮೈಸೂರು ಡಿಸ್ಟ್ರಿಕ್ಟ್, ಭಾಗ-೨ (ಮಂಡ್ಯ ಜಿಲ್ಲೆ ಶಾಸನಗಳು) | ೯೬೪ | ೧೮೯೮ |
| ಸಂಪುಟ-೫ | ಇನ್‌ಸ್ಕ್ರಿಪ್‌ಷನ್ಸ್ ಫ್ರಮ್ ಹಾಸನ್ ಡಿಸ್ಟ್ರಿಕ್ಟ್ | ೯೪೧ | ೧೯೦೨ |
| ಸಂಪುಟ-೬ | ಇನ್‌ಸ್ಕ್ರಿಪ್‌ಷನ್ಸ್ ಫ್ರಮ್ ಕಡೂರ ಡಿಸ್ಟ್ರಿಕ್ಟ್ | ೬೨೬ | ೧೯೦೧ |
| ಸಂಪುಟ-೭ | ಇನ್‌ಸ್ಕ್ರಿಪ್‌ಷನ್ಸ್ ಫ್ರಮ್ ಶಿಮೊಗ್ಗ ಡಿಸ್ಟ್ರಿಕ್ಟ್ ಭಾಗ-೧ | ೬೫೮ | ೧೯೦೨ |
| ಸಂಪುಟ-೮ | ಇನ್ಸ್‌ಕ್ರಿಪ್‌ಷನ್ಸ್ ಫ್ರಮ್ ಶಿಮೊಗ್ಗ ಡಿಸ್ಟ್ರಿಕ್ಟ್ ಭಾಗ-೨ | ೯೩೮ | ೧೯೦೨ |
| ಸಂಪುಟ-೯ | ಇನ್‌ಸ್ಕ್ರಿಪ್‌ಷನ್ಸ್ ಇನ್ ಬೆಂಗಳೂರ್ ಡಿಸ್ಟ್ರಿಕ್ಟ್ | ೧೦೬೯ | ೧೯೦೫ |
| ಸಂಪುಟ-೧೦ | ಇನ್‌ಸ್ಕ್ರಿಪ್‌ಷನ್ಸ್ ಇನ್ ಕೋಲಾರ ಡಿಸ್ಟ್ರಿಕ್ಟ್ | ೧೩೪೭ | ೧೯೦೬ |
| ಸಂಪುಟ-೧೧ | ಇನ್‌ಸ್ಕ್ರಿಪ್‌ಷನ್ಸ್ ಇನ್ ಚಿತ್ರದುರ್ಗ | ೬೨೩ | ೧೯೦೨ |
| ಸಂಪುಟ-೧೨ | ಇನ್‌ಸ್ಕ್ರಿಪ್‌ಷನ್ ಇನ್ ತುಮಕೂರು | ೭೩೩ | ೧೯೦೪ |

ಸಿದ್ಧಾಪುರ, ಬ್ರಹ್ಮಗಿರಿ, ಜಟಿಂಗ ರಾಮೇಶ್ವರಗಳಲ್ಲಿ ಅಶೋಕನ ಶಾಸನಗಳನ್ನು ಶೋಧನೆ ನಡೆಸಿದ್ದು ಬಿ.ಎಲ್. ರೈಸ್ ಅವರು. ಇದಲ್ಲದೆ ಮಳವಳ್ಳಿಯ ಪ್ರಾಕೃತ ಶಾಸನಗಳು, ತಾಳಗುಂದದ ಕಾಕುಸ್ಥವರ್ಮನ ಶಾಸನ, ಗಂಗರ ತಾಮ್ರ ಪಟಗಳು, ಶ್ರವಣಬೆಳಗೊಳದ ನಿಷಧಿ ಬರಹಗಳು ಮೊದಲಾದವುಗಳನ್ನು ಪ್ರಕಟಿಸಿ ಬೆಳಕಿಗೆ ತಂದ ಕೀರ್ತಿ ರೈಸ್ ಅವರಿಗೆ ಸಲ್ಲಬೇಕು. ರೈಸ್ ಅವರ ಪ್ರಕಟಣೆಗಳಲ್ಲಿ ಕೆಲವು ಶಾಸನಗಳು ಕೃತಕ ಶಾಸನಗಳಾಗಿರುವುದನ್ನು ಫ್ಲೀಟರು ಎತ್ತಿ ತೋರಿಸಿದ ಪರಿಣಾಮ ಲಿಪಿ ಶಾಸ್ತ್ರದ ಹಲವು ಸೂಕ್ಷ್ಮಗಳು ವಿದ್ವತ್ ಪ್ರಪಂಚಕ್ಕೆ ಪರಿಚಿತವಾಗಲು ಸಹಾಯಕವಾಯಿತು.

ಹೆನ್ರಿ ವಥೆನ್ ಎಂಬ ವಿದ್ವಾಂಸ ಬೆಳಗಾವಿಯ ಶಾಸನಗಳನ್ನು ೧೮೩೯ರಲ್ಲಿ ಪ್ರಕಟಿಸಿದ. ಈತ ೧೮೬೫ರಲ್ಲಿ ಕ್ಷೇತ್ರ ಕಾರ್ಯ ನಡೆಸಿ ಸಂಗ್ರಹಿಸಿದ. ಚಿತ್ರದುರ್ಗ, ಬೆಳಗಾವಿ, ಹರಿಹರ ಮೊದಲಾದೆಡೆಗಳ ದೊರೆತ ಶಾಸನಗಳ ಪಡಿಯಚ್ಚು ಮತ್ತು ಫೋಟೋಗಳನ್ನು ಮೈಸೂರು ಸರ್ಕಾರ ಪ್ರಕಟಿಸಿದೆ.

ಇ. ಹುಲ್ಷ್ ಎಂಬುವರು ೧೮೯೦ ರಲ್ಲಿ 'ದಕ್ಷಿಣ ಭಾರತದ ಶಾಸನಗಳು' ಮಾಲಿಕೆಯಲ್ಲಿ ಮೊದಲ ಸಂಪುಟವನ್ನು ಪ್ರಕಟಿಸಿದರು. ಈ ಮಾಲಿಕೆಯ ೯ ನೆಯ ಸಂಪುಟದ ಎರಡು ಭಾಗಗಳು; ೧೧ನೆಯ ಸಂಪುಟದ ಎರಡು ಭಾಗಗಳು, ೧೫, ೧೮ ಮತ್ತು ೨೦ ನೆಯ ಸಂಪುಟಗಳಲ್ಲಿ ಕನ್ನಡ ಶಾಸನಗಳ ಸಂಗ್ರಹವಿದೆ.

## 114.3 ಕರ್ನಾಟಕದಲ್ಲಿ ಶಾಸನಾಧ್ಯಯನ : ಭಾರತೀಯ ವಿದ್ವಾಂಸರ ಸೇವೆ

ಶಾಸನಗಳ ಅಧ್ಯಯನಕ್ಕೆ ಹೀಗೆ ಪಾಶ್ಚಾತ್ಯ ವಿದ್ವಾಂಸರು ಸೇವೆಸಲ್ಲಿಸಿದ ಸಂದರ್ಭದಲ್ಲಿಯೇ ಭಾರತೀಯ ವಿದ್ವಾಂಸರೂ ಶಾಸನ ಅಧ್ಯಯನ ಕೈಂಕರ್ಯವನ್ನು ಮಾಡುತ್ತ ಬಂದಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಕ್ಷೇತ್ರಕಾರ್ಯ ಮಾಡುತ್ತ ಶಾಸನ ಸಂಗ್ರಹ ಮಾಡುತ್ತಿದ್ದ ಕಾಲದಲ್ಲಿ ಅವರಿಗೆ ಕೆಲವರು ದೇಶೀಯಾ ವಿದ್ವಾಂಸರು ನೆರವು ನೀಡಿದ್ದಾರೆ. ಕವೆಲ್ಲಿ ಬೋರೈಯ ಮೊದಲಾಗಿ ಅವನ ಇತರ ಸೋದರರು ಶಾಸನ ಪರಿವೀಕ್ಷಣೆಗೆ ನೆರವು ನೀಡುತ್ತಿದ್ದುದನ್ನು ನಾವು ಸ್ಮರಿಸಬೇಕು. ಹೀಗೆಯೇ ವೆಂಕಟರಂಗೋ ಕಟ್ಟಿ, ಗಂಗಾಧರ ಮಡಿವಾಳೇಶ್ವರ ತುರಮರಿ ಮೊದಲಾದ ವಿದ್ವಾಂಸರು ಫ್ಲೀಟ್ ಅವರಿಗೆ ಉತ್ತರ ಕರ್ನಾಟಕದ ಶಾಸನವನ್ನು ಓದಿ ಅರ್ಥೈಸುವಲ್ಲಿ ಸಹಕರಿಸಿರುವುದನ್ನು ನಾವು ನೆನೆಯಬೇಕು. ೧೮೬೦ ರಿಂದ ೧೮೭೫ ಅವಧಿಯಲ್ಲಿ ಬಾಳಗಂಗಾಧರ ಶಾಸ್ತ್ರಿ, ಕಾಶೀನಾಥ ತ್ರ್ಯಂಬಕ ತೇಲಂಗ, ಭಾವುದಾಜಿ ಮೊದಲಾದ ಭಾರತೀಯರು ಶಾಸನ ಸಂಗ್ರಹ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡಿದ್ದಾರೆ.

ಆರ್. ನರಸಿಂಹಾಚಾರರು ೧೯೦೬ ರಲ್ಲಿ ರೈಸರ ಉತ್ತರಾಧಿಕಾರಿಯಾಗಿ ಪ್ರಾಕ್ತನ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಆ ಅವಧಿಯಲ್ಲಿ 'ವಾರ್ಷಿಕವರದಿ'ಗಳನ್ನು ಪ್ರಕಟಿಸುವ ಪರಿಪಾಠವನ್ನು ಆರಂಭಿಸಿದರು. ೧೯೨೨ ರವರೆಗೆ ಒಟ್ಟು ೧೭ ವರದಿಗಳನ್ನು, ಎಫಿಗ್ರಾಫಿಯಾ ಕರ್ನಾಟಕದ ೧೪, ೧೫, ೧೬ ಮತ್ತು ೧೭ ನೆಯ ಸಂಪುಟಗಳನ್ನು ಹೊರತಂದರು. 'ಶಾಸನ ಪದ'ಗಳ ಸಂಗ್ರಹದ ಮೊದಲ ಭಾಗ (ಕೆ ವರೆಗೆ) ಪ್ರಕಟಿಸಿದರು. ೧೯೮೭ ರಲ್ಲಿ ಇದರ ಎರಡನೆ ಭಾಗವನ್ನು ಪ್ರಾಕ್ತನ ವಿಭಾಗ ಪ್ರಕಟಿಸಿದೆ. ಸುಮಾರು ೫೦೦೦ ಶಾಸನಗಳನ್ನು ನರಸಿಂಹಚಾರರು ಸಂಪಾದಿಸಿ ಪ್ರಕಟಿಸಿದ್ದಾರೆ. ಹಲವು ಶಾಸನ ಪಾಠಗಳನ್ನು ಪರಿಷ್ಕರಿಸಿದ್ದಾರೆ. ಇವರ ಕಾರ್ಯ ದಕ್ಷತೆಯನ್ನು ಕಂಡು ಮೈಸೂರು ಸರ್ಕಾರ ಇವರಿಗೆ 'ಪ್ರಾಕ್ತನ ವಿಮರ್ಶ ವಿಚಕ್ಷಣ' ಎಂಬ ಬಿರುದು ನೀಡಿ ಗೌರವಿಸಿದೆ. ಭಾರತ ಸರ್ಕಾರ 'ಮಹಾಮಹೋಪಾಧ್ಯಾಯ' ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಎಂ.ಎಚ್. ಕೃಷ್ಣ ಅವರು ನರಸಿಂಹಾಚಾರ್ ಅವರ ತರುವಾಯ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಕೃಷ್ಣ ಅವರು ಕೂಡ ೧೯೨೯ ರಿಂದ ೧೯೪೫ ರವರೆಗೆ ವಾರ್ಷಿಕ ವರದಿಗಳನ್ನು ಪ್ರಕಟಿಸಿದ್ದಾರೆ. ಸುಮಾರು ಒಂದು ಸಾವಿರದಷ್ಟು ಹೊಸ ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ರಾಷ್ಟ್ರಕೂಟ ಅವಿಧೇಯನ ಪಂಡರಂಗವಳ್ಳಿಯ ಶಾಸನ, ಹಲ್ಮಿಡಿ ಶಾಸನಗಳ ಪ್ರಕಟಣೆಯ ಕೀರ್ತಿ ಕೃಷ್ಣ ಅವರಿಗೆ ಸಲ್ಲಬೇಕು. ಚಿತ್ರದುರ್ಗದ ಬಳಿಯ ಚಂದ್ರವಳ್ಳಿ ಪ್ರದೇಶವನ್ನು ಉತ್ಖನನ ಮಾಡಿಸಿದ, 'ಮಯೂರ ಶರ್ಮನ ಚಂದ್ರವಳ್ಳಿ' ಶಾಸನವನ್ನು ಓದಿ ವ್ಯಾಖ್ಯಾನಿಸಿದ ಕೀರ್ತಿ ಕೂಡ ಅವರದೇ.

ಪಿ.ಬಿ. ದೇಸಾಯಿಯವರು ಹೈದ್ರಾಬಾದ್ ಕರ್ನಾಟಕದ ಹಲವಾರು ಶಾಸನಗಳನ್ನು ಪ್ರಕಟಿಸಿದ್ದಾರೆ. ಎನ್. ವೆಂಕಟರಮಣಯ್ಯನವರು ಕರೀಂನಗರ ಜಿಲ್ಲೆಯ ಕುರ್ಕಿಯಾಲ ಬೊಮ್ಮಲಗುಡ್ಡದಲ್ಲಿನ ಜಿನವಲ್ಲಭನ ಶಾಸನ ಕಂಡುಹಿಡಿದಿದ್ದಾರೆ. ಈ ಜಿನವಲ್ಲಭ ಪಂಪನ ಕನ್ನಡದ ಪ್ರಸಿದ್ಧ ಕವಿ ತಮ್ಮನೆಂಬ ಸಂಗತಿಯನ್ನು ತಿಳಿಸುವುದರೊಂದಿಗೆ ಪಂಪನ ಇತರ

ಕೆಲವು ವೈಯಕ್ತಿಕ ವಿಚಾರಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದ ಶಾಸನವಾಗಿದೆ.

ಧಾರವಾಡದ 'ಕನ್ನಡ ಅಧ್ಯಯನ ಸಂಸ್ಥೆ' ಕನ್ನಡ ಶಾಸನಗಳ ಸಂಗ್ರಹ ಮತ್ತು ಪ್ರಕಟಣೆಯ ಕಾರ್ಯದಲ್ಲಿ ಗಮನಾರ್ಹ ಸೇವೆಸಲ್ಲಿಸಿದೆ. ಆರ್.ಎಸ್. ಪಂಚಮುಖಿ, ಜಿ.ಎಸ್. ದೀಕ್ಷಿತ್, ಪಿ.ಬಿ. ದೇಸಾಯಿ, ಬಿ.ಆರ್. ಗೋಪಾಲ, ಶ್ರೀನಿವಾಸ ರಿತ್ತಿ ಮೊದಲಾದ ವಿದ್ವಾಂಸರು ಸಂಗ್ರಹಿಸಿರುವ ಶಾಸನಗಳು 'ಕರ್ನಾಟಕದ ಶಾಸನಗಳು ಎಂಬ ಹೆಸರಿನಲ್ಲಿ ಆರು ಸಂಪುಟಗಳಲ್ಲಿ ಪ್ರಕಟವಾಗಿವೆ. ಕರ್ನಾಟಕದ ಶಾಸನಗಳ-ಸಂಗ್ರಹ ಮತ್ತು ಸಂಪಾದನೆಯ ಕ್ಷೇತ್ರದಲ್ಲಿ ದುಡಿದ ಡಿ.ಸಿ. ಸರ್ಕಾರ್, ಜಿ.ಎಸ್. ಗಾಯಿ, ಪ್ರೊ. ಮಿರಾಶಿ, ಆರ್.ಎನ್. ಗುರುಷ, ಎಸ್. ಶೆಟ್ಟರ್, ಕೆ.ವಿ. ರಮೇಶ್, ಎ.ವಿ. ನರಸಿಂಹಮೂರ್ತಿ, ಎಂ. ಚಿದಾನಂದಮೂರ್ತಿ, ಎಂ.ಎಂ. ಕಲಬುರ್ಗಿ, ಅವರ ಶಾಸನ ಸೇವೆ ಸಾಂಸ್ಕೃತಿಕ ಮೊದಲಾದವರ ಹೆಸರು ಗಮನಾರ್ಹವಾದವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯ ಹಳೆಯ ಮೈಸೂರು ಪ್ರದೇಶದ ಶಾಸನಗಳನ್ನು ಸಮಗ್ರವಾಗಿ ಕ್ರಮಬದ್ಧವಾಗಿ ಪ್ರಕಟಿಸುವ ಯೋಜನೆಯನ್ನು ೧೯೭೨ ರಲ್ಲಿ ಪ್ರಾರಂಭಿಸಿದೆ. ಮೈಸೂರು, ಮಂಡ್ಯ, ಶ್ರವಣಬೆಳ್ಗೊಳ ಮುಂತಾಗಿ ಈಗ ಸಂಪುಟಗಳು ಪ್ರಕಟಗೊಂಡಿವೆ. ೧೯೭೨ ರಿಂದ ೭೮ ರವರೆಗೆ ಏಳು ಸಂಪುಟಗಳು ಪ್ರಕಟಗೊಂಡಿದೆ, ಮುಂದೆ ೧೯೭೮ ರಿಂದ ೮೪ ರ ಅವಧಿಯಲ್ಲಿ ಎರಡು ಸಂಪುಟಗಳು ಪ್ರಕಟಗೊಂಡಿವೆ.

ಡಾ. ಎಂ.ಎ. ಕಲಬುರ್ಗಿ ಅವರು ಶಾಸನಗಳ ಅಧ್ಯಯನದ ಇತಿಹಾಸ ಕುರಿತು ಮೂರು ಮುಖ್ಯ ಮಜಲುಗಳನ್ನು ಗುರುತಿಸುತ್ತಾರೆ. ಈ ಮಜಲುಗಳನ್ನು ಅವರು ಯುಗಗಳೆಂದು ಕರೆದಿದ್ದಾರೆ. ಅವುಗಳ ವಿವರ ಹೀಗೆದೆ.

1. ಕರ್ನಲ್ ಮೆಕೆಂಝಿ ಯುಗ ೧೭೯೧ ೧೮೩೭
2. ಸರ್ ವಾಲ್ಟರ್ ಇಲಿಯಟ್ ಯುಗ ೧೮೩೭ ೧೮೭೦
3. ಡಾ. ಫ್ಲೀಟ್ ಮತ್ತು ರೈಸ್ ಯುಗ ೧೮೭೦ ರ ನಂತರ

(ಹೆಚ್ಚಿನ ವಿವರಗಳಿಗೆ ಅವರ ಮಾರ್ಗ ಸಂ. ೨ನ್ನು ನೋಡಿ)

## 114.4 ಕನ್ನಡದಲ್ಲಿ ಶಾಸನಗಳನ್ನು ಆಧರಿಸಿದ ಸಂಶೋಧನಾ ಕಾರ್ಯಗಳು

ಶಾಸನಗಳನ್ನು ಆಧರಿಸಿ ಅನೇಕ ಸಂಪ್ರಬಂಧಗಳು ರಚನೆಯಾಗಿವೆ. ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' (೧೯೬೬) ಈ ಕ್ಷೇತ್ರದ ಬಹು ಮುಖ್ಯವಾದ ಕೃತಿ. ಪ್ರಾಚೀನತೆ ಮತ್ತು ಮಹತ್ವ ಎರಡೂ ದೃಷ್ಟಿಗಳಿಂದಲೂ ಗಮನಾರ್ಹವಾದ ಕೃತಿ. ಮುಂದೆ ಶಾಸನಗಳಲ್ಲಿ ಶಿವಶರಣರು (೧೯೭೦), ಮಹಾರಾಷ್ಟ್ರದ ಕನ್ನಡ ಶಾಸನಗಳು (೧೯೮೯), ಸಮಾಧಿ ಬಲಿದಾನ ವೀರಮರಣಗಳು (೧೯೮೦) ಎಂಬ ಎಂ.ಎಂ. ಕಲಬುರ್ಗಿಯವರ ಲೇಖನಗಳು; ಆರ್. ಶೇಷಶಾಸ್ತ್ರಿಯವರ 'ಕರ್ನಾಟಕದ ವೀರಗಲ್ಲುಗಳು' (೧೯೮೨); ಬಿ.ಆರ್. ಹಿರೇಮಠರ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು' (೧೯೮೬); ಎಂ.ಜಿ. ನಾಗಯ್ಯನವರ 'ಆರನೆಯ ವಿಕ್ರಮಾದಿತ್ಯನ ಶಾಸನಗಳು' (೧೯೮೭); ಎಸ್.ಕೆ. ಕೊಪ್ಪ ಅವರ 'ತರ್ದವಾಡಿ ನಾಡು' (೧೯೯೦); ಬಿ.ವಿ. ಶಿರೂರರ 'ಶ್ರವಣಬೆಳ್ಗೊಳ ರಾಜಕೀಯ ಸಾಂಸ್ಕೃತಿಕ ಮಹತ್ವ' (೧೯೭೨); ಚನ್ನಕ್ಕ ಎಲಿಗಾರ ಅವರ 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ' (೧೯೯೧) ಮತ್ತು 'ಬಂಕಾಪುರ ಶೋಧ (೧೧೯೦); ಬಿ.ಎಸ್. ಶೇಠೆ ಅವರ 'ಕರ್ನಾಟಕದಲ್ಲಿ ಸತೀ ಪದ್ಧತಿ' (೧೯೯೧); ಬಿ.ಬಿ. ಪಾಟೀಲರ 'ನಾಗರಖಂಡ ೭೦' (೧೯೯೫) ಕೆಲವು ಪ್ರಮುಖ ಕೃತಿಗಳಾಗಿವೆ.

ಎಂ.ಬಿ. ಭೋೀಯಿ ಅವರ 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಮತ್ತು ಸಾಹಿತ್ಯಿಕ ಅಧ್ಯಯನ' (೧೯೭೭); ಆರ್. ಶರಣಮ್ಮ ಅವರ 'ಪುಲಿಗೆರೆ-ಐತಿಹಾಸಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವ' (೧೯೭೮); ವಿ.ಬಿ. ಬಡಿಗೇರ ಅವರ 'ಸಿರಸಂಗಿ ಸಂಸ್ಥಾನ 'ಸಾಂಸ್ಕೃತಿಕ ಅಧ್ಯಯನ' (೧೯೮೫); ಎಸ್.ಬಿ. ಪಾಟೀಲರ 'ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ' (೧೯೮೬); ಕೆ.ಜಿ. ವೆಂಕಟೇಶ ಜೋಯಿಸ ಅವರ "ಕೆಳದಿ ಶಾಸನಗಳ ಸಾಂಸ್ಕೃತಿಕ ಅದ್ಯಯನ ಮತ್ತು ಸಂಪಾದನೆ'; ರಮಾನಂದ ಅವರ 'ವಿಜಯನಗರ ಕಾಲದ ಶಾಸನಗಳ ಸಂಸ್ಕೃತಿಕ ಅಧ್ಯಯನ; ಕೆ.ಆರ್. ಗಣೇಶ್ ಅವರ ಆಂಧ್ರ ಪ್ರದೇಶದ ಕನ್ನಡ ಶಾಸನಗಳು; ಸಿ.ಯು. ಮಂಜುನಾಥ ಅವರ 'ಕರ್ನಾಟಕದ ಶಾಸನಗಳು ಮತ್ತು ಸಂಸ್ಕೃತಿ' ಮೊದಲಾದುವು ಕೆಲವು ಇಂಥ ಸಂಶೋಧನಾ ಕಾರ್ಯಗಳಾಗಿವೆ. (ಹೆಚ್ಚಿನ ವಿವರಗಳಿಗೆ 'ಮಹಾಮಾರ್ಗ' ಅಭಿನಂದನಾ ಗ್ರಂಥವನ್ನು ನೋಡಿ).

## 114.5 ಸಮಾರೋಪ

ಕನ್ನಡ ನಾಡಿನ ಶಾಸನಗಳ ಸಂಗ್ರಹ ಸಂಪಾದನೆ ಮತ್ತು ಅಧ್ಯಯನದ ಪ್ರಯತ್ನ ರೋಚಕವಾದುದು. ಪಾಶ್ಚಾತ್ಯ ವಿದ್ವಾಂಸರಿಂದ ಈ ಅಧ್ಯಯನ ಮೊದಲಾಯಿತು. ಫ್ಲೀಟ್, ರೈಸ್ ಮೊದಲಾದ ವಿದ್ವಾಂಸರು ಗಣನೀಯವಾದ ಸೇವೆ ಸಲ್ಲಿಸಿದ ಪಾಶ್ಚಿಮಾತ್ಯರಾಗಿದ್ದಾರೆ. ಭಾರತದ ಅದರಲ್ಲಿಯೂ ಕನ್ನಡಿಗ ವಿದ್ವಾಂಸರೂ ಕೂಡ ಈ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಶಾಸನ ಸಾಹಿತ್ಯದ ಸಮೃದ್ಧಿ, ಕನ್ನಡ ರಾಜಮನೆತನಗಳ ರಾಜಕೀಯ ಚರಿತ್ರೆ, ಅಂದಂದಿನ ಕಾಲದ ಸಾಮಾಜಿಕ ಧಾರ್ಮಿಕ, ಒಟ್ಟಾರೆಯಾಗಿ ಸಾಂಸ್ಕೃತಿಕವಾದ ಜೀವನ ಇವನ್ನೆಲ್ಲ ಅರಿಯಲು ಈ ಅಧ್ಯಯನ ಬಹಳವೇ ನೆರವನ್ನು ನೀಡಿದೆ.

## 114.6 ಅಭ್ಯಾಸ ಪ್ರಶ್ನೆಗಳು

1. ಕರ್ನಾಟಕದಲ್ಲಿ ಶಾಸನ ಅಧ್ಯಯನದ ಇತಿಹಾಸ ಮತ್ತು ಸ್ವರೂಪವನ್ನು ತಿಳಿಸಿ.
2. ಶಾಸನ ಅಧ್ಯಯನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕೊಡುಗೆಯನ್ನು ಪರಿಚಯಿಸಿ.

# ಘಟಕ - 115

# ಶಾಸನಗಳ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಮಹತ್ವ

ರಚನೆ

115.0 ಉದ್ದೇಶ

115.1 ಪೀಠಿಕೆ

115.2 ಶಾಸನಗಳಲ್ಲಿ ಚಾರಿತ್ರಿಕ ಸಂಗತಿಗಳು

115.3 ಶಾಸನಗಳಲ್ಲಿ ಧಾರ್ಮಿಕ ಸಂಗತಿಗಳು

115.4 ಶಾಸನಗಳಲ್ಲಿ ಸಾಮಾಜಿಕ ಸಂಗತಿಗಳು

115.5 ಶಾಸನಗಳ ಸಾಹಿತ್ಯಕ ಗುಣ

115.6 ಸಮಾರೋಪ

115.7 ಅಭ್ಯಾಸ ಪ್ರಶ್ನೆಗಳು

115.8 ಪರಾಮರ್ಶನ ಗ್ರಂಥಗಳು

## 115.0 ಉದ್ದೇಶ

ಈ ಘಟಕವನ್ನು ಅಧ್ಯಯನ ಮಾಡಿದ ಮೇಲೆ ನೀವು ಈ ಕೆಳಕಂಡ ವಿಷಯಗಳನ್ನು ಕುರಿತು ಅಧಿಕೃತ ಮಾಹಿತಿ ತಿಳಿಯಲು ಶಕ್ತರಾಗುತ್ತೀರಿ.

- ಶಾಸನಗಳಲ್ಲಿ ವ್ಯಕ್ತವಾಗಿರುವ ಚಾರಿತ್ರಿಕ ಸಂಗತಿಗಳು.
- ಸಾಸನಗಳಲ್ಲಿ ವ್ಯಕ್ತವಾಗಿರುವ ಧಾರ್ಮಿಕ ಸಂಗತಿಗಳು.
- ಶಾಸನಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಸಂಗತಿಗಳು.

## 115.1 ಪೀಠಿಕೆ

ಹಿಂದಿನ ಘಟಕಗಳಲ್ಲಿ 'ಶಾಸನ' ಪದದ ಅರ್ಥ, ಅದರ ವ್ಯಾಪ್ತಿ ಮತ್ತು ಮಹತ್ವವನ್ನು ತಿಳಿಯುವುದರೊಂದಿಗೆ, ಕನ್ನಡ ಶಾಸನಗಳ ಅಧ್ಯಯನ ನಡೆದು ಬಂದ ದಾರಿಯನ್ನು ಪರಿಚಯ ಮಾಡಿಕೊಂಡಿದ್ದೀರಿ. ಪ್ರಸ್ತುತ ಸಂಚಿಕೆಯಲ್ಲಿ ಶಾಸನಗಳನ್ನು ಅಧ್ಯಯನ ಮಾಡುವುದರಿಂದ ನಮಗೆ ಆಯಾ ಕಾಲದ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ತಿಳಿಯಲು ಯಾವ ರೀತಿ ಸಹಕರಿಸುತ್ತವೆ? ಅಂತಹ ಸಂಗತಿಗಳಾವುವು ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಅರಿಯುತ್ತೇವೆ. ವಿಷಯದ 'ಪರಿಚಯ'ದ ದೃಷ್ಟಿಯಿಂದ ನೀಡಿರುವ ವಿವರಗಳ ಬಾಹುಳ್ಯ ಕಡಿಮೆ. ಇವುಗಳ ನೆರವಿನಿಂದ ಸಂಬಂಧಪಟ್ಟ ಮತ್ತು ಸೂಚನೆಯಲ್ಲಿ ನೀಡಿದ ಪರಾಮರ್ಶನ ಗ್ರಂಥಗಳನ್ನು ಅಧ್ಯಯನ ಮಾಡುವುದರ ಮೂಲಕ ಹೆಚ್ಚಿನ ಮಾಹಿತಿಗಳನ್ನು ಪಡೆಯಬೇಕೆಂದು ನಿಮಗೆ ಸೂಚಿಸಬಯಸುತ್ತೇನೆ.

## 115.2 ಶಾಸನಗಳಲ್ಲಿ ಚಾರಿತ್ರಿಕ ಸಂಗತಿಗಳ

'ಶಾಸನ'ವೆಂಬುದು ರಾಜಾಜ್ಞೆಯನ್ನು ಮುಖ್ಯವಾಗಿ ಒಳಗೊಂಡಿರುತ್ತದೆ ಎಂಬುದನ್ನು ನಾವು ಈಗಾಗಲೇ ಕಂಡುಕೊಂಡಿದ್ದೇವೆ. ಆಜ್ಞೆಯನ್ನ ಹೊರಡಿಸುವವನು ರಾಜ. ರಾಜನು ಹಾಕಿಸಿದ ಶಾಸನಗಳೆಲ್ಲವೂ ರಾಜಾಜ್ಞೆಗಳೇ ಆಗಿರಬೇಕೆಂಬುದೇನೂ ಅಲ್ಲ ಎಂಬುದು ತಿಳಿದ ವಿಚಾರವಾದರೂ ರಾಜನು ಹಾಕಿಸಿದ ಬಹುತೇಕ ಶಾಸನಗಳಲ್ಲಿ ರಾಜಕೀಯ ವಿಚಾರಗಳು ಇರುತ್ತಿದ್ದವೆಂಬುದು ಸರ್ವೇಸಾಮಾನ್ಯ ಸಂಗತಿ. ಇಂತಹ ರಾಜಕೀಯ ವಿಚಾರಗಳಿಂದ ಆಯಾ ಕಾಲದ 'ಚರಿತ್ರೆ'ಯನ್ನು ನಾವು ರೂಪಿಸಿಕೊಳ್ಳಬಹುದು. ಹಾಗಾಗಿ ರಾಜಕೀಯ ಸಂಗತಿಗಳನ್ನು ಒಳಗೊಂಡಿರುವ ಇಂತಹ ಶಾಸನಗಳು ಚಾರಿತ್ರಿಕ ದಾಖಲೆಗಳಾಗಿ ಪರಿಗಣಿಸಲು ಯೋಗ್ಯವಾಗಿವೆ.

ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇರಲಿಲ್ಲವೆಂಬುದು ಒಂದು ಸಾಮಾನ್ಯ ಅಭಿಪ್ರಾಯ. ತಾವು ಮಾಡಿದ ಕೆಲಸ ಐತಿಹಾಸಿಕವಾದುದೆಂಬುದಾಗಲಿ ಇತಿಹಾಸದಲ್ಲಿ ಇದನ್ನು ದಾಖಲು ಮಾಡಬೇಕೆಂದಾಗಲಿ ಭಾರತೀಯರಿಗೆ ಅನ್ನಿಸಿಯೇ ಇರಲಿಲ್ಲವೆಂದೂ ಈ ಅಭಿಪ್ರಾಯವನ್ನು ವ್ಯಾಖ್ಯಾನಿಸುವುದೂ ಉಂಟು. ಇತಿಹಾಸ ಪ್ರಜ್ಞೆ ಇಲ್ಲದಿರಲಿ ಅಥವಾ ತಾವು ಮಾಡಿದ ಸಾಧನೆಗಳನ್ನು 'ದಾಖಲು' ಮಾಡುವುದೇ ಎಂಬ ನಿರ್ಲಿಪ್ತ ಧೋರಣೆಯೇ ಇರಲಿ ಐತಿಹಾಸಿಕ ದಾಖಲೆಗಳಾಗಿ ಚಾರಿತ್ರಿಕ ಸಂಗತಿಗಳನ್ನು ತಾನೇ ತಾನಾಗಿ ಒಳಗೊಂಡಿವೆ. ಪ್ರಮಾಣದಲ್ಲಿ ಕೊರತೆ ಕಾಣಬಹುದಷ್ಟೆ.

ಚರಿತ್ರೆಯನ್ನು ತಿಳಿಯುವಲ್ಲಿ ಶಾಸನಗಳು ಒದಗಿಸುವ ದಾಖಲೆಗಳು ಮಹತ್ವಪೂರ್ಣವಾದವು. ಶಾಸನಗಳು ಕೊಡುವ ಬಹುಬಗೆಯ ವಿವರಗಳಾಗಲಿ, ವಿವರಗಳ ಪ್ರಮಾಣಗಳಾಗಲಿ ಇತರ ದಾಖಲೆಗಳಿಂದ ದೊರೆಯುವ ವಿವರಗಳಿಗಿಂತ ಹೆಚ್ಚೇ ಎಂದು ಹೇಳಬೇಕು. ಸಾಹಿತ್ಯ ಕೃತಿಗಳಲ್ಲಿಯೂ ರಾಜಕೀಯ / ಚಾರಿತ್ರಿಕ ಸಂಗತಿಗಳು ಇರುತ್ತವೆಯಾದರೂ ಅವು ಕೊಡುವ ವಿವರಗಳು ಮತ್ತು

ವಿವರಗಳ ಸತ್ಯಾಸತ್ಯತೆ ಕೆಲಮಟ್ಟಿಗೆ ಪ್ರಶ್ನಾರ್ಹವಾಗುತ್ತವೆ. ರಾಜಸಭೆಯಲ್ಲಿ ಆಸ್ಥಾನ ಕವಿಯಾಗಿರುವ ಕವಿ ಆಶ್ರಿತನ ಅಥವಾ ಅವನ ಕುಲ ಛಲಗಳ ಬಗ್ಗೆ ಕೊಡುವ ವಿವರಗಳು ಪಕ್ಷಪಾತದಿಂದ ಕೂಡಿರುವ ಸಾಧ್ಯತೆ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ತಾಳೆ ಗರಿಯಂತಹ ತಾಮ್ರಪಟದಂತಹ ಸಾಮಗ್ರಿಗಳ ಮೇಲೆ ಬರೆದ ದಾಖಲೆಗಳು ತಿದ್ದಲ್ಪಡುವ ಸಾಧ್ಯತೆಯೂ ಹೆಚ್ಚು. ಇಂಥ ಯಾವ ಸಂಶಯ ಸಮಸ್ಯೆಗಳು ಶಿಲೆಯನ್ನು ಸಾಮಗ್ರಿಯಾಗಿ ಬಳಸಿದ ಶಾಸನಗಳಲ್ಲಿ ಇರುವುದಿಲ್ಲ. ಇದ್ದರೂ ಸಾಧ್ಯತೆ ಮತ್ತು ಪ್ರಮಾಣ ತೀರಾ ಕಡಿಮೆ. ಆದುದರಿಂದ (ಶಿಲಾ)ಶಾಸನಗಳು ಬಹುಮಟ್ಟಿಗೆ ವಿಶ್ವಾಸಾರ್ಹ ದಾಖಲೆಗಳು.

ವಂಶಾವಳಿಯನ್ನು ಒಳಗೊಂಡಿರುವ ಶಾಸನಗಳು ಆಯಾ ರಾಜಮನೆತನಗಳ ಕೆಲವು ತಲೆಮಾರುಗಳ ವಿವರಗಳನ್ನಾದರೂ ಹೊಂದಿರುವುದರ ಮೂಲಕ ಮಹತ್ವದ ದಾಖಲೆಗಳಾಗಿರುತ್ತವೆ. ಶಾಸನಗಳ ರಚನೆಯಲ್ಲಿ (ಕಾಲಕ್ರಮದಲ್ಲಿ) ನಿರ್ದಿಷ್ಟ ಕ್ರಮ ರೂಢಿಗೆ ಬಂದು ಅಧಿಕೃತವೆನಿಸುವ ಅನೇಕ ಸಂಗತಿಗಳು ಅಲ್ಲಿ ದಾಖಲಾಗ ತೊಡಗಿದವು. ಉದಾಹರಣೆಗೆ ಯಾವ ರಾಜ ಶಾಸನವನ್ನು ಹಾಕಿಸಿದ ಅವನ ವಂಶಮೂಲ ಯಾವುದು ? ಯಾವ ವರ್ಷ ಶಾಸನವನ್ನು ಹಾಕಿಸಿದ? (ಯಾವ ಮುಖ್ಯ ವಿಷಯವನ್ನು ಶಾಸನ ಒಳಗೊಂಡಿದೆ) ಎಂಬಿತ್ಯಾದಿ ಸಂಗತಿಗಳು ಶಾಸನದಲ್ಲಿ ದಾಖಲಾಗತೊಡಗಿದವು.

ಭಾರತದಲ್ಲಿ ದೊರೆತ ಪ್ರಾಚೀನತಮ ಶಾಸನಗಳು 'ಅಶೋಕ'ನವು. ಕರ್ನಾಟಕದಲ್ಲಿ ದೊರೆತ ಶಾಸನಗಳಲ್ಲಿ ಪ್ರಾಚೀನವಾದವು ಕೂಡ ಅಶೋಕನ ಶಾಸನಗಳೇ, ಕಾಲ ಕ್ರಿ.ಪೂ. ಮೂರನೆ ಶತಮಾನ. ಕರ್ನಾಟಕದ ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರ, ಕೊಪ್ಪಳ, ಮಸ್ಕಿ ಮೊದಲಾದ ಕಡೆಗಳಲ್ಲಿ ಈ ಶಾಸನಗಳು ದೊರಕಿವೆ. ಇವುಗಳೆಲ್ಲ 'ಧಮ್ಮಲಿಪಿ'ಗಳು. "ಮಾತಾ ಪಿತೃಗಳ ಸೇವೆ ಮಾಡಬೇಕು..." ಎಂದು ಮುಂತಾಗಿ ಹಲವು ನೈತಿಕ ಸಾತ್ವಿಕ ವಿಚಾರಗಳನ್ನು ಒಳಗೊಂಡಿರುವ ಈ ಶಾಸನಗಳು, ಅಶೋಕನು ಬೌದ್ಧ ಧರ್ಮವನ್ನು ಒಳಗೊಂಡಿರುವ ಈ ಶಾಸನಗಳು, ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಿದ ಅನಂತರದಲ್ಲಿ ಹಾಕಿಸಿದವುಗಳಾಗಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಶಾಸನಗಳು ಅವನ ಆಳ್ವಿಕೆಯ ೧೧ ಅಥವಾ ೧೨ನೆಯ ವರ್ಷದಲ್ಲಿ ಹುಟ್ಟಿದವಾಗಿರಬೇಕೆಂದು ಊಹಿಸಲಾಗಿದೆ.

ಅಶೋಕನ ಶಾಸನಗಳನ್ನು ಹೊರತು ಪಡಿಸಿದರೆ ಕರ್ನಾಟಕದಲ್ಲಿ ದೊರೆಯುವ ಪ್ರಾಚೀನಶಾಸನ ಕದಂಬ ಕುಲದ ಮಯೂರ ಶರ್ಮನದು. ಚಿತ್ರದುರ್ಗ ಬಳಿಯ ಚಂದ್ರವಳ್ಳಿ ಎಂಬ ಸ್ಥಳದಲ್ಲಿ ಈ ಶಾಸನ ದೊರೆಯುತ್ತದೆ. ಲಿಪಿ ಕನ್ನಡ ಭಾಷೆ ಪ್ರಾಕೃತ ಇದರ ಕಾಲ ಕ್ರಿ.ಶ. ನಾಲ್ಕನೆಯ ಶತಮಾನ. ಕದಂಬ ರಾಜವಂಶ ಸ್ಥಾಪಕವಾದ ಮಯೂರ ಶರ್ಮನು ಒಂದು ಕೆರೆಯನ್ನು ಕಟ್ಟಿಸಿದ ವಿವರ ಈ ಶಾಸನದಲ್ಲಿದೆ. ಈತನು "ತ್ರೈಕೂಟ, ಅಭೀರ, ಪಲ್ಲವ, ಪಾರಿಯಾತ್ರಿಕ, ಶಕಸ್ಥಾನ, ಸೇಂದ್ರಕ, ಪುನ್ನಾಟ, ಮೌಖರಿ ಇವರುಗಳ ಮೇಲೆ ಸಂಪಾದಿಸಿದ ವಿಜಯವನ್ನು ಈ ಶಾಸನ ನಿರ್ದೇಶಿಸುತ್ತದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕು ತಾಳಗುಂದ ಗ್ರಾಮದ ಪ್ರಣವೇಶ್ವರ ದೇವಸ್ಥಾನದ ಆವರಣದಲ್ಲಿರುವ ಸ್ತಂಭ ಶಾಸನ ಕ್ರಿ.ಶ. ಸು. ಐದನೆಯ ಶತಮಾನದ್ದು. ಕಾಕುಸ್ಥವರ್ಮನ ಮಗನಾದ ಸಾಂತಿವರ್ಮ ಈ ಶಾಸನವನ್ನು ಹಾಕಿಸಿದ್ದಾನೆ. "ಕದಂಬ ಕುಲದ ಮಯೂರಶರ್ಮನು ಕಂಚಿಯ ಪಲ್ಲವ ರಾಜೇಂದ್ರನನ್ನು ಪ್ರತಿಭಟಿಸಿ, ಕರ್ನಾಟಕದಲ್ಲಿ ಕದಂಬರ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದ ಚಿತ್ರಮಯ ವೃತ್ತಾಂತವನ್ನು ಈ ಶಾಸನ ನಿವೇದಿಸುತ್ತದೆ". ಕದಂಬ ಕುಲದ ಮೂಲವನ್ನು ಪುರಾಣದ ಹಿನ್ನೆಲೆಯಲ್ಲಿ ಅರ್ಥೈಸಲಾಗುತ್ತಿತ್ತು ಮೂಲವನ್ನು ಪುರಾಣದ ಹಿನ್ನೆಲೆಯಲ್ಲಿ ಅರ್ಥೈಸಲಾಗುತ್ತಿತ್ತು ಹಾನುಗಲ್ಲಿನ ಮತ್ತು ಗೋವೆಯ ಕದಂಬರ ಶಾಸನಗಳಲ್ಲಿ ಇಂಥ ಪೌರಾಣಿಕ ಮೂಲವನ್ನು ಹೇಳಲಾಗಿದೆ. ಪುರಾಣ ಮೂಲದ ಪ್ರಕಾರ ಕದಂಬರ ಮೂಲ ಪುರುಷನಾದ ಮಯೂರನು ಶಿವ ಮತ್ತು ಪಾರ್ವತಿಯರ ಮಗ. ಶಿವ ಮತ್ತು ಭೂದೇವಿಯರ ಮಗನೆಂದೂ ಕೆಲವು ಶಾಸನಗಳು ಹೇಳುತ್ತಿದ್ದವು. ಇಂಥ ಪೌರಾಣಿಕ ಕಲ್ಪನೆಗೆ ತೆರೆ ಬಿದ್ದದ್ದು ತಾಳಗುಂದದ ಶಾಸನದಿಂದ.

ಶಾಸನಗಳಲ್ಲಿ ದೊರೆಯುವ ಚಾರಿತ್ರಿಕ ವಿವರಗಳಿಗೆ ಇವು ಒಂದೆರಡು ಉದಾಹರಣೆಗಳು. ಇಂಥ ಅನೇಕ ವಿವರಗಳನ್ನು ಶಾಸನಗಳ ಮೂಲದಿಂದ ನಾವು ಪಡೆಯಬಹುದು.

ರಾಜರಾಗಲಿ ಅಥವಾ ಯಾವುದೇ ವ್ಯಕ್ತಿಯಾಗಲಿ ಹಾಕಿಸಿದ ಶಾಸನಗಳಲ್ಲಿ ಶಾಸನ ಹಾಕಿಸಿದ ಕಾಲದ ಪ್ರಸ್ತಾಪವೂ ಇರುತ್ತದೆ. (ಕಾಲವನ್ನು ನಮೂದಿಸದ ಶಾಸನಗಳೂ ಹೇರಳವಾಗಿ ದೊರೆಯುತ್ತವೆ) ಮೊದಮೊದಲಿಗೆ ರಾಜನ ಆಳ್ವಿಕೆಯ ವರ್ಷವನ್ನು ಹೇಳುವ ಪದ್ಧತಿಯಿದ್ದಂತೆ ಕಾಣುತ್ತದೆ. ಅಶೋಕನ ಶಾಸನಗಳಲ್ಲಿಯೇ ಈ ಪದ್ಧತಿ ಬಳಕೆಯಾಗಿದೆ. 'ಶಕ' ವರ್ಷಗಳಲ್ಲಿ ಕಾಲವನ್ನು ನಿರೂಪಿಸುವ ಪದ್ಧತಿ ಆನಂತರದಲ್ಲಿ ಜಾರಿಗೆ ಬಂದಿದೆ. (ಒಬ್ಬ ಸ್ವತಂತ್ರ ರಾಜನ ಆಳ್ವಿಕೆಯ ವರ್ಷಗಣನೆಗೆ 'ಶಕ' ವರ್ಷವೆಂದು ಕರೆಯಲಾಗುತ್ತದೆ) ವಿಕ್ರಮ ಶಕ (ಕ್ರಿ.ಪೂ. ೫೮), ಶಾಲಿವಾಹನ ಶಕ (ಕ್ರಿ.ಶ. ೭೮) ಪ್ರಮುಖವಾದ ಶಕವರ್ಷಗಳು. ಇವುಗಳಲ್ಲದೆ ಕೊಲ್ಲಂ ಶಕ, ನೇವಾರಿ ಶಕ, ಲಕ್ಷ್ಮಣ ಸೇನ ಶಕ, ಕ್ರಿಸ್ತಶಕಗಳ ಪ್ರಯೋಗ ಭಾರತೀಯ ಶಾಸನಗಳಲ್ಲಿ ಕಂಡು ಬರುತ್ತದೆ. ಕಲಚುರಿ ಶಕ, ಗುಪ್ತ ಶಕ, ಗಂಗ ಶಕ, ಹರ್ಷ ಶಕ, ಸಿಂಹ ಶಕ, ಶಿವಾಜಿ ಪಟ್ಟಾಭಿಷೇಕ ಶಕ, ಬುದ್ಧ ನಿರ್ವಾಣ ಶಕ ಎಂದು ಮುಂತಾಗಿ ಇತರ ಶಕಗಳ ಬಳಕೆ ಕೂಡ ದೊರೆಯುತ್ತದೆ.

ಶಾಸನಗಳನ್ನು ಅಧ್ಯಯನ ಮಾಡುವಾಗಿ ಆಯಾ ಕಾಲದ ರಾಜನ ಕಾಲದಲ್ಲಿ ನಡೆದ ಯುದ್ಧಗಳು, ಕೈಗೊಂಡ ಸಾರ್ವಜನಿಕ ಕೆಲಸ ಕಾರ್ಯಗಳು, ರಾಜನ ಶಕ್ತಿ ಸಾಮರ್ಥ್ಯ ಗುಣಗಳು ಮುಂತಾದ ಅನೇಕ ಸಂಗತಿಗಳೂ ಲಭ್ಯವಾಗುತ್ತವೆ. ಇವುಗಳ ಜೊತೆಗೆ ರಾಜ್ಯದ ಆರ್ಥಿಕ ಸ್ಥಿತಿಗತಿ, ಕಪ್ಪ, ತೆರಿಗೆ ಕರ ಇತ್ಯಾದಿಗಳ ವಿಧಿಸುತ್ತಿದ್ದ ವಿವರಗಳು, ಮಂಡಳಿಕ ಸಾಮಂತ ಮುಂತಾದ ವಿಕೇಂದ್ರೀಕೃತ ಆಡಳಿತ ವಿಧಾನ ಮುಂತಾದ ಸಂಗತಿಗಳು ತಿಳಿದುಬರುತ್ತವೆ.

ಶಾಸನಗಳಲ್ಲಿ ದಾನ ಶಾಸನಗಳ ಸಂಖ್ಯೆಯೇ ಅಧಿಕ. ಅದನ್ನು ಹೊರತುಪಡಿಸಿದರೆ ವೀರಗಲ್ಲುಗಳು ನಂತರದ ಸ್ಥಾನ ಪಡೆಯುತ್ತವೆ. ರಾಜಕೀಯ ಸಂಗತಿಗಳನ್ನು ಪ್ರತ್ಯೇಕವಾಗಿ ಹೇಳುವ ಶಾಸನಗಳ ಸಂಖ್ಯೆ ಕಡಿಮೆಯೇ. ಆದರೂ ದಾನ ಶಾಸನ ಮತ್ತು ವೀರಗಳಲ್ಲಿ ರಾಜಕೀಯ-ಚರಿತ್ರೆಗೆ ಸಂಬಂಧಿಸಿದ ಪರೋಕ್ಷ ದಾಖಲೆಗಳು ಹೇರಳವಾಗಿ ದೊರೆಯುತ್ತವೆ.

ಕನ್ನಡದ ಉಪಲಬ್ಧ ಶಾಸನ 'ಹಲ್ಮಿಡಿ ಶಾಸನ'. ಇದರ ಕಾಲ ಕ್ರಿ.ಶ. ಸು. ೪೫೦. ಇದೊಂದು ದಾನ ಶಾಸನ. ಪಲ್ಮಿಡಿ ಮತ್ತು ಮೂಳುವಳ್ಳಿ ಗ್ರಾಮಗಳನ್ನು ದಾನವಾಗಿ ನೀಡಲಾಗಿದೆ. ಕದಂಬ ರಾಜನಾದ ಕಾಕುಸ್ಥವರ್ಮನು (ಸು. ೪೨೨-೪೪೨) ರಾಜ್ಯವಾಳುತ್ತಿದ್ದಾಗ ಕದಂಬರಿಗೂ ಪಲ್ಲವರಿಗೂ ನಡೆದ ಯುದ್ಧಯೊಂದರ ವಿಚಾರವನ್ನು ಈ ಶಾಸನ ದೃಢಪಡಿಸುತ್ತದೆ. ಈ ಯುದ್ಧಲ್ಲಿ ಕದಂಬರ ಪರವಾಗಿ ವೀರಾವೇಶದಿಂದ ಹೋರಾಡಿದ ವಿಜ ಅರಸನೆಂಬವನಿಗೆ ('ಬಾಳ್ಗಟ್ಟು' ಗೌರವದೊಂದಿಗೆ) ಗ್ರಾಮಗಳನ್ನು ದಾನಮಾಡಲಾಗಿದೆ. ಈ ದಾನವನ್ನು ಮಾಡಿದವರು ನರಿದಾವಿಳೆ ನಾಡಿನ ಅಧಿಕಾರಿಗಳಾದ ಮೃಗೇಶನಾಗರೆಂಬವರು. ಪಲ್ಲವರು ಮತ್ತು ಕದಂಬರು ಪರಸ್ಪರ ಪ್ರತಿಸ್ಪರ್ಧಿಗಳಾಗಿದ್ದ ಸಂಗತಿಯು ತಿಳಿಯುತ್ತದೆ ಕದಂಬರಿಗೆ ಸೇಂದ್ರಕ ಮತ್ತು ಬಾಣರು ನೆರವು ನೀಡಿ ಈ ಯುದ್ಧದಲ್ಲಿ ಹೋರಾಡಿದರೆ; ಪಲ್ಲವರಿಗೆ ಕೇಕಯ ಸೈನ್ಯ ಸಹಾಯ ಮಾಡಿದೆ. ಅಳುಕದಂಬ ಎಂಬ ಪದ ಪ್ರಯೋಗವನ್ನು ಗಮನಿಸಿ ವಿಜಅರಸ ಅಳುಪರು ಮತ್ತು ಕದಂಬರ ಕುಲಗಳ ಸಂಬಂಧದಿಂದ ಜನಿಸಿದವನಿರಬೇಕೆಂಬ ಊಹೆಯನ್ನು ಮಾಡಲಾಗಿದೆ.

ಕನ್ನಡದ ಮತ್ತೊಂದು ಪ್ರಾಚೀನ ಶಾಸನ ಬಾದಾಮಿ ಮಹಾಕೂಟ ಶಾಸನ. ಕನ್ನಡ ನಾಡನ್ನು ಆಳಿದ ಪ್ರಮುಖ ರಾಜಮನೆತನವಾದ ಚಾಲುಕ್ಯನಿಗೆ ಸೇರಿದ ಶಾಸನವಿದು. ಚಾಲುಕ್ಯರ ಪ್ರಸಿದ್ಧ ದೊರೆ ಎರಡನೆಯ ಪುಲಿಕೇಶಿ. ಈ ಶಾಸನ ಪುಲಿಕೇಶಿಗಿಂತಲೂ ಮೊದಲು ರಾಜ್ಯವಾಳುತ್ತಿದ್ದ ಅವನ ಚಿಕ್ಕಪ್ಪ ಮಂಗಳೇಸನೆಂಬಾತನ ಕಾಲದ್ದು. ದೇವರಿಗೆ ಹೂವನ್ನು ಇರಿಸುವ ಮಾಲೆಕಾರನಿಗೆ ಅರ್ಥವಿಸದಿಯನ್ನು ದಾನವಾಗಿ ಕೊಟ್ಟ ಸಂಗತಿ ಈ ಶಾಸನದಲ್ಲಿದೆ. ಇದರ ಕಾಲ ಕ್ರಿ.ಶ. ಸು. ೫೯೭ ರಿಂದ ೬೦೯ರ ಒಳಗೆ ಎಂದು ಊಹಿಸಲಾಗಿದೆ. ಮಂಗಳೇಸನ ಧಾರ್ಮಿಕ ಪ್ರವೃತ್ತಿಯನ್ನು ಈ ಶಾಸನ ದೃಢಪಡಿಸುತ್ತದೆ.

ಮಾವಳಿಯ ಕ್ರಿ.ಶ. ೮೦೦ ರ ಶಾಸನವೊಂದು ರಾಷ್ಟ್ರಕೂಟರ ಮೂರನೆಯ ಗೋವಿಂದ ಕಾಲದಲ್ಲಿ ಅವನ ಸಾಮ್ರಾಜ್ಯದ ಒಳಗೆ ಮಹಾ ಮಾಂಡಳಿಕ - ಮಾಂಡಳಿಕರಲ್ಲಿ ನಡೆದ ಕಾಳೆಗವೊಂದನ್ನು ಪ್ರಸ್ತಾಪಿಸುತ್ತದೆ. ಈ ಕಾಳಗದಲ್ಲಿ ತನ್ನ ಒಡೆಯನ ಪರವಾಗಿ ವೀರಕುಲಮುದ್ದನೆಂಬಾತ ಹೋರಾಡಿ ಮಡಿಯುತ್ತಾನೆ. ಅವನ ಜ್ಞಾಪಕಾರ್ಥ ನಿಲಿಸಿದ ವೀರಗಲ್ಲು ಇದು. ರಾಷ್ಟ್ರಕೂಟರ ಮೂರನೆಯ ಕೃಷ್ಣ ಚಕ್ರವರ್ತಿಯಾಗಿದ್ದಾಗ ಬನವಾಸಿ ಮಂಡಲವನ್ನು ರಜಾದಿತ್ಯನು, ಅಳುವಖೇಡವನ್ನು ಚಿತ್ರವಾಹನನೆಂಬಾತನು ಆಳುತ್ತಿದ್ದುದಾಗಿ ತಿಳಿದುಬರುತ್ತದೆ.(ಹೆಚ್ಚಿನ ವಿವರಗಳಿಗೆ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಗ್ರಂಥವನ್ನು ಪರಿಶೀಲಿಸಿ).

## 115.3 ಶಾಸನಗಳಲ್ಲಿ ಧಾರ್ಮಿಕ ಸಂಗತಿಗಳು

ರಾಜಕೀಯವಾದ ಸಂಗತಿಗಳನ್ನು ಶಾಸನಗಳು ಹೇಗೆ ಅಧಿಕೃತವಾಗಿ ತಿಳಿಸುವ ದಾಖಲೆಗಳಾಗಿ ನಿಲ್ಲುತ್ತವೆಯೋ ಹಾಗೆಯೇ ಧಾರ್ಮಿಕ ಸಂಗತಿಗಳೂ ಅವುಗಳಿಂದ ಅಧಿಕೃತವಾಗಿ ತಿಳಿಯಲ್ಪಡುತ್ತವೆ. ಸಾಮಾನ್ಯವಾಗಿ ರಾಜರು ಹಾಕಿಸುವ ಶಾಸನಗಳಿಂದ ಅವರು ಅನುಸರಿಸುತ್ತಿದ್ದ ಧರ್ಮ ಯಾವುದು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ರಾಜರಲ್ಲದೆ ಬೇರೆ ಯಾರೇ ಶಾಸನವನ್ನು ಹಾಕಿಸಿದಾಗಲೂ ಅವರ ಧರ್ಮ ಯಾವುದೆಂಬುದನ್ನು ತಿಳಿಯಲು ಸಾಧ್ಯವಿದೆ. ಸಾಮಾನ್ಯವಾಗಿ ಈ ಸೂಚನೆ ಆಯಾ ಶಾಸನ ಹಾಕಿಸಿದವನು ಶಾಸನದಲ್ಲಿ ಬಳಸಿದ ಪ್ರಾರ್ಥನಾ ಪದ್ಯದಿಂದ ತಿಳಿಯುತ್ತದೆ. ಕೆಲವೊಮ್ಮೆ ಕೇವಲ ಶುಭ ಚಿಹ್ನೆಗಳ ಬಳಕೆ ಇದ್ದಾಗಲೂ ಆ ಶಾಸನ ಹಾಕಿಸಿದಾತ ಯಾವ ಧರ್ಮದ ಅನುಯಾಯಿ ಎಂಬುದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಓಂ, ಶ್ರೀ, ಸ್ವಸ್ತಿಶ್ರೀ ಮೊದಲಾದ ಏಕಾಕ್ಷರಿ ದ್ವ್ಯಕ್ಷರಿ ಪ್ರಾರ್ಥನೆಗಳಿಂದ ಮೊದಲುಗೊಂಡು ಎರಡು, ನಾಲ್ಕು ಪಾದಗಳ ಪೂರ್ಣಪದ್ಯದವರೆಗಿನ ಪ್ರಾರ್ಥನೆಗಳು ಕಾಣಸಿಗುತ್ತವೆ.

ಸಾಮಾನ್ಯವಾಗಿ ಶಾಸನ ಹಾಕಿಸಿದಾತ ಶೈವ ಉಪಾಸಕನಾಗಿದ್ದರೆ

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ
ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ

ಎಂಬ ಶಿವಪರಸ್ತುತಿ ಕಾಣುತ್ತದೆ. ವಿಷ್ಣು ಉಪಾಸಿಕರಾಗಿದ್ದಾರೆ.

ಜಯತಿ ಶ್ರೀ ಪರಿಷ್ವಂಗ ಶಾರ್ಙ್ಗ್ಮ್ಯಾನತಿ ರಚ್ಯುತಃ
ದಾನವಾಕ್ಷೋಯುರ್ಗಾಂತಾಗ್ನಿಃ ಶಿಷ್ಟಾನಾನ್ತು ಸುದರ್ಶನಃ

ಎಂಬ ಅಥವಾ

ಜಯತ್ಯಾವಿಷ್ಕೃತಂ ವಿಷ್ಣೋರ್ವರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ

ಎಂಬ ಶ್ಲೋಕವಿರುತ್ತದೆ.

ಜನೋಪಾಸಕರಾದ ಶಾಸನ ಹಾಕಿದಾತರು
ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾ ಮೋಕ್ಷ ಲಾಂಛನಂ
ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನ ಜಿನ ಶಾಸನಂ

ಎಂಬ ಜಿನಪರ ಶ್ಲೋಕವನ್ನು ಹಾಕಿಸುತ್ತಿದ್ದರು. ಇವೇ ಶ್ಲೋಕಗಳು ಶಾಸನಗಳಲ್ಲಿ ಇರುತ್ತವೆಂಯೆಂದೇನಲ್ಲ. ಆದರೆ ಆಯಾ ಧರ್ಮದ ಅನುಯಾಯಿಗಳು ಆಯಾ ಧರ್ಮದ ಅಧಿದೇವತೆಗಳ ಶ್ಲೋಕಗಳನ್ನು ಶಾಸನಾರಂಭದಲ್ಲಿ ಹಾಕಿಸುತ್ತಿದ್ದರೆಂಬುದನ್ನು ಗಮನಿಸಬೇಕು.

ಹೀಗೆ ಆಯಾ ಧರ್ಮದವರಿಂದ ಹಾಕಿಸಲ್ಪಟ್ಟ ಶಾಸನಗಳು ಆಯಾ ಧರ್ಮದ ದೇವತಾ ಸ್ತುತಿಗಳಿಂದ ಆರಂಭವಾಗುತ್ತಿದ್ದವೆಂಬ ಅಂಶ ಕೆಲ ಕಾಲದ ನಂತರ ಬದಲಾದದ್ದನ್ನು ಕಾಣುತ್ತೇವೆ. ಅಂದರೆ ಒಂದು ಧರ್ಮದ ಅನುಯಾಯಿ ಹಾಕಿಸಿದ ಶಾಸನದಲ್ಲಿ ಮತ್ತೊಂದು ಧರ್ಮದ ದೇವತಾ ಸ್ತುತಿಯು ಕಾಣಿಸಿಕೊಂಡ ಉದಾಹರಣೆಗಳಿವೆ. ಎರಡೂ ಧರ್ಮದ ದೇವರನ್ನು ಒಂದೇ ಶಾಸನದಲ್ಲಿ ಸ್ತುತಿಸಿದ ಉದಾಹರಣೆಗಳೂ ದೊರೆಯುತ್ತವೆ.

**ಶ್ರೀಮತ್ರೈಲೋಕ್ಯ ಪೂಜ್ಯಾಯ ಸರ್ವಕರ್ಮ ಸುಸಾಕ್ಷಿಣೇ**
**ಫಲದಾಮ ನಮೋ ನಿತ್ಯಂ ಕೇಶವಾಯ ಶಿವಾಯ ಚ**

ಎಂಬ ಸ್ತುತಿಯಲ್ಲಿ ವೈಷ್ಣವ ಮತ್ತು ಶೈವ ಧರ್ಮದ ದೇವತಾ ಸ್ತುತಿ ಒಂದೇ ಶ್ಲೋಕದಲ್ಲಿ ಬಂದಿರುವುದನ್ನು ಕಾಣಬಹುದು. ಹೀಗೆ ಎರಡು ಧರ್ಮಗಳ ದೇವತೆಗಳನ್ನು ಸ್ತುತಿಸುವಾಗ ವಿಷ್ಣು ಮತ್ತು ಶಿವನನ್ನೂ ಜೊತೆ ಜೊತೆಗೆ ಸ್ತುತಿಸಿದ ಪದ್ಯಗಳು ಹೆಚ್ಚಾಗಿ ಸಿಗುತ್ತವೆ. ತ್ರಿಮೂರ್ತಿಗಳನ್ನು ಒಟ್ಟಿಗೆ ಸ್ತುತಿಸಿದ ಶಾಸನಗಳೂ ಇವೆ. (ಆದರೆ ಬ್ರಹ್ಮನನ್ನು ಪ್ರತ್ಯೇಕವಾಗಿ ಸ್ತುತಿಸಿದ ಶಾಸನಗಳು ಲಭ್ಯವಿಲ್ಲ).

ಇಂತಹ ಸ್ತುತಿಗಳಿಂದ ಧಾರ್ಮಿಕ ಸಾಮರಸ್ಯವಿದ್ದ ಸಂಗತಿ ಸ್ಫುಟವಾಗುತ್ತದೆ. ಒಂದು ಧರ್ಮದವರು ಮತ್ತೊಂದು ಧರ್ಮದವರನ್ನು ಪ್ರೀತಿ ವಿಶ್ವಾಸಗಳಿಂದ ಕಂಡ ಆದರ ತೋರಿ ಗೌರವಿಸಿದ ಸಂಗತಿ ವೇದ್ಯವಾಗುತ್ತದೆ.

ಕರ್ನಾಟಕ ಧರ್ಮಸಮನ್ವಯಕ್ಕೆ ಹೆಸರಾದ ನಾಡು. ನಾಡಿನ ಇತಿಹಾಸವನ್ನು ನೋಡ ಹೊರಟ ನಮಗೆ ಹಲವು ಧರ್ಮಗಳು ಈ ನಾಡಿನಲ್ಲಿ ಹೇಗೆ ಸಮನ್ವಯದಿಂದಲೂ ಬದುಕಿದವು ಎಂಬುದು ತಿಳಿಯುತ್ತದೆ. ಬೇಲೂರಿನ ಶಾಸನವೊಂದು ಇಂಥ ಧರ್ಮ ಸಮನ್ವಯವನ್ನು ಕಟ್ಟಿಕೊಡುತ್ತದೆ.

**ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ |**
**ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ ||**
**ಅರ್ಹನಿತ್ಯಥ ಶಾಸನ ರತಾಃ ಕರ್ಮೇತಿ ಮೀಮಾಂಸಕಾಃ |**
**ಸೋಽಯಂ ವೋ ವಿಧಧಾತು ವಾಂಛಿತ ಫಲಂ ಶ್ರೀಕೇಶವೇಸ್ಸದಾ ||**

ಎಂಬ ಶಾಸನ ಪದ್ಯದಲ್ಲಿ ಶಿವ, ವಿಷ್ಣು, ಜಿನ, ಬುದ್ಧರ ಸ್ಮರಣೆ ಇದೆ. ಮತ್ತು ಅವರೆಲ್ಲರಿಗೂ ಅಭೇದವನ್ನು ಕಲ್ಪಿಸಿ ನೋಡಿದ ವ್ಯಾಪಕ-ಪೂರ್ಣ ದೃಷ್ಟಿಯಿದೆ.

ರಾಜರು ಸ್ವತಃ ದೇವಾಲಯಗಳ ನಿರ್ಮಾಣ ಕಾರ್ಯವನ್ನು ಕೈಗೊಂಡ ಉದಾಹರಣೆಗಳಿವೆ. ಚಾಲುಕ್ಯರ ವಿಜಯಾಧಿತ್ಯನು ಬಾದಾಮಿಯಲ್ಲಿ ತ್ರಿಮೂರ್ತಿಗಳಿಗಾಗಿ ಒಂದು ದೇವಾಲಯ ಕಟ್ಟಿಸಿದ ಉಲ್ಲೇಖವಿದೆ. ಈ ಚಾಲುಕ್ಯ ದೊರೆಗಳು ಬಹುಮಟ್ಟಿಗೆ ಧರ್ಮ ಸಹಿಷ್ಣುಗಳಾಗಿದ್ದರು ಎಂದು ತಿಳಿಯುತ್ತದೆ. ಎರಡನೆಯ ಪುಲಿಕೇಶಿಯ ಕಾಲದ ಐಹೊಳೆ ಶಾಸನ ಜಿನದೇವಾಲಯವನ್ನು ಕಟ್ಟಿಸಿದ ಸಂಗತಿಯನ್ನು ಹೇಳುತ್ತದೆ.

ಗಂಗರ ಕಾಲದಲ್ಲಿ ಜೈನಧರ್ಮ ವಿಶೇಷವಾದ ಸ್ಥಾನಮಾನವನ್ನೂ ಪಡೆದಿದ್ದಂತೆ ತಿಳಿಯುತ್ತದೆ. ವಿಜಯನಗರ ಸಾಮ್ರಾಜ್ಯ ಧರ್ಮ ಸಮನ್ವಯದ ಬೀಡಾಗಿದ್ದಂತೆ ತಿಳಿಯುತ್ತದೆ. "ಬಹುಧರ್ಮಧೇನು ನಿವಹಕ್ಕಾಡುಂಬೊಲಂ" ಎಂಬ ಕವಿವಾಣಿ ನೆನಪಾಗುತ್ತದೆ. ಕೆರೆಯನ್ನು ಕಟ್ಟಿಸುವುದು, ದೇವಸ್ಥಾನವನ್ನು ನಿರ್ಮಿಸುವುದು ಮೊದಲಾದುವು ಧರ್ಮ ಕಾರ್ಯಗಳಾಗಿದ್ದವು.

ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕೆಂಬುದು, ಇಲ್ಲವೇ ಕಟ್ಟಿಸಿದ ಗುಡಿಗಳಿಗೆ ದಾನವನ್ನು ಕೊಡಬೇಕೆಂಬುದು ಆಗಿನವರ ಧಾರ್ಮಿಕ ಭಾವನೆಯಾಗಿತ್ತು. ದೇವಾಲಯವನ್ನು ನಿರ್ಮಿಸುವುದು ಅಷ್ಟು ಸುಲಭವಾದ ಕೆಲಸವಾಗಿರಲಿಲ್ಲ. ರಾಜರು ಅಥವಾ ಅಧಿಕಾರಿಗಳನ್ನುಳ್ಳ ಮಂತ್ರಿ ದಂಡನಾಯಕ ಮೊದಲಾದವರುಗಳು ಅದನ್ನು ಮಾಡಬಹುದಾಗಿತ್ತು ಅನೇಕ ದಂಡನಾಯಕರುಗಳು ದೇವಾಲಯಗಳನ್ನು ಕಟ್ಟಿಸಿ ತಮ್ಮ ಅಧಿಕಾರಗಳನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಇವರಲ್ಲಿ ಹೂವಿನ ಹಡಗಲಿಯ ಶಾಸನವು ಹೇಳುವ ರವಿಗದಂಡಧಿಪ, ಇಟ್ಟಿಗೆಯ ಶಾಸನವು ಹೇಳುವ ಮಹಾದೇವ ದಂಡಾಧಿಪತಿ, ಹೊಯ್ಸಳ ನರಸಿಂಹ ಬಲ್ಲಾಳನ ಮಂತ್ರಿಯಾದ ಹುಳ್ಳ, ರಾಚಮಲ್ಲನ ಮಂತ್ರಿಯಾದ ಚಾವುಂಡರಾಯ, ವಿಷ್ಣುವರ್ಧನನ ಮಂತ್ರಿ ಗಂಗರಾಜ ಈ ಮೊದಲಾದವರನ್ನು ಹೆಸರಿಸಬಹುದು." (ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. - ೨೭೩). ದೇವಾಲಯಗಳ ನಿರ್ಮಾಣದಲ್ಲಿ ರಾಜಮಹಾರಜರ ಪಾತ್ರಗಳನ್ನು ಕುರಿತು ಪ್ರಸ್ತಾಪಿಸುವಾಗ ಅತ್ತಿಮಬ್ಬೆಯ ಹೆಸರು ವಿಶಿಷ್ಟ ಕಾರಣಕ್ಕಾಗಿ ಗಮನಾರ್ಹವಾಗಿ ನಿಲ್ಲುತ್ತದೆ. ಲಕ್ಕುಂಡಿಯ ಶಾಸನ ಈಕೆಯ ಬಗೆಗೆ ಕೆಲವು ವಿವರಗಳನ್ನು ನೀಡುತ್ತದೆ. ಧರ್ಮ ಮತ್ತು ಸಾಹಿತ್ಯದ ಪ್ರಚಾರದಲ್ಲಿ ವಿಶೇಷ ಆಸಕ್ತಿ ವಹಿಸಿದ್ದ ಅತ್ತಿಮಬ್ಬೆ" ನಾಡಿನ ವಿವಿಧ ಭಾಗಗಳಲ್ಲಿ ಸುಮಾರು ೧೫೦೦ ಜೈನ ದೇವಾಲಯಗಳನ್ನು ಕಟ್ಟಿಸಿದಳೆಂದು ಪ್ರಸಿದ್ಧಳಾಗಿದ್ದಾಳೆ".

ಒಂದೆಡೆ ದೇವಾಲಯ ನಿರ್ಮಾಣದಂತಹ ಕೆಲಸಗಳನ್ನು ರಾಜರು, ಶ್ರೀಮಂತರು ಕೆಲವೊಮ್ಮೆ ಸಾಮಾನ್ಯ ಜನರು ಮಾಡುತ್ತಿದ್ದರೆ ಅದರ ಜೊತೆಗೆ ದೇವಾಲಯದ ಜೀರ್ಣೋದ್ಧಾರ, ಹಾಗೂ ಅದರ ದೈನಂದಿನ ಕೈಂಕರ್ಯಗಳಿಗೆ ಅಗತ್ಯವಾದ ನೆರವು ನೀಡಿದ ಸಂದರ್ಭಗಳು ಶಾಸನಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ದೇವಾಲಯದಲ್ಲಿ ವಿವಿಧ ಸೇವಾ ಕಾರ್ಯಗಳನ್ನು ಮಾಡುತ್ತಿದ್ದ ನಿರ್ದಿಷ್ಟ ವ್ಯಕ್ತಿಗಳಿರುತ್ತಿದ್ದ ಸಂಗತಿಗಳನ್ನು ಶಾಸನಗಳು ತಿಳಿಸುತ್ತವೆ. ಅರ್ಚಕ, ಜ್ಯೋತಿಶಾಸ್ತ್ರಜ್ಞ, ಮಾಲೆಕಾರ, ಪತ್ರೆ ತರುವವ, 'ತೋಟದ ತಳಾಜಿ', ವಂಶಕಾರ, ಪಟೆಕಾರ, ಶಂಖ ಊದುವವ, ಪಾಳವಿಗ (ಧ್ವಜ ಹಿಡಿವವ), ಅಡಿಗೆಯವಳ, ದವಸಗಿತಿ ಮೊದಲಾದವರ ಹೆಸರುಗಳನ್ನು ಶಾಸನಗಳು ತಿಳಿಸುತ್ತವೆ. ಇಂಥ ವಿವರಗಳಿಂದ ದೇವಾಲಯಗಳು ಹೇಗೆ ವ್ಯವಸ್ಥಿತವಾದ ಸ್ವರೂಪವನ್ನು ಪಡೆದಿದ್ದವು ಎಂಬುದರ ಜೊತೆಗೆ ಅಂದಿನ ಧಾರ್ಮಿಕ ಸ್ಥಿತಿಗತಿಗಳು ಹೇಗಿದ್ದವು ಎಂಬ ವಿವರಗಳೂ ದೊರೆಯುತ್ತವೆ. (ಶಾಸನಗಳಲ್ಲಿ ಧರ್ಮ ಸಂಬಂಧಿಯಾದ ವಿವರಗಳು ದೊರೆಯುವಲ್ಲಿ ಧರ್ಮಸಮನ್ವಯದ ಅಂಶದ ಕಡೆಗೆ ಹೆಚ್ಚಿನ ಒತ್ತನ್ನು ಇಲ್ಲಿ ನೀಡಲಾಗಿದೆ. ಧರ್ಮ ಮತ್ತು ಧರ್ಮಗಳ ಮೇಲಾಟ ನಡೆದದ್ದು, ಪೈಪೋಟಿಯಿಂದ ಪರಧರ್ಮಗಳನ್ನು ಹಳಿದಿದ್ದೂ ಮುಂತಾದ ಸಂಗತಿಗಳೂ ಇವೆ ಎಂಬುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ).

ಸೂಚನೆ : ಧರ್ಮ ಸಂಬಂಧಿಯಾದ ಹೆಚ್ಚಿನ ವಿವರಗಳಿಗೆ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿಯನ್ನು ಪರಾಮರ್ಶಿಸಿ.

## 115.4 ಶಾಸನಗಳಲ್ಲಿ ಸಾಮಾಜಿಕ ಸಂಗತಿಗಳು

### ಸ್ತ್ರೀ ಜೀವನ

ಸುಗಮ ಬದುಕಿಗೆ ಮತ್ತು ಸಾರ್ಥಕ ಜೀವನ ಸಾಗಿಸುವುದಕ್ಕೆ ಗಂಡು ಹೆಣ್ಣು ಇಬ್ಬರ ಸಮಾನ ಸಹಕಾರದ ಅಗತ್ಯವಿದೆ. ಒಬ್ಬರ ಅಗತ್ಯ ಮತ್ತೊಬ್ಬರಿಗೆ ಪೂರಕ. ರಥದ ಗಾಲಿಗಳಿಗೆ ಹೋಲಿಸಿರುವ ಉಪಮೆ ಅತ್ಯಂತ ಅರ್ಥಪೂರ್ಣವಾದುದು. ಇಬ್ಬರೂ ಸಮಾನರು ಎಂಬುದನ್ನು ಇದು ಸ್ಪಷ್ಟವಾಗಿ ನಿರೂಪಿಸುತ್ತದೆ. ಈ ಸಮಾನತೆ ತಾತ್ವಿಕವಾಗಿ ಒಪ್ಪಿತವಾಗಿದ್ದರು ಆಚರಣೆಯಲ್ಲಿನ ವಾಸ್ತವತೆ

ಬೇರೆಯೇ ಆಗಿ ಇದ್ದುದು ಇರುವುದು ನಮ್ಮ ಗಮನಕ್ಕೆ ಬರುತ್ತದೆ. ಲಿಂಗ ಸಮಾನತೆಯು 'ವಿಚಾರ'ದಲ್ಲಿದ್ದರೂ 'ಆಚಾರ'ದಲ್ಲಿ ತಾರತಮ್ಯ ಕಾಣಿಸಿಕೊಳ್ಳುತ್ತಲೇ ಬಂದಿದೆ. ಸ್ತ್ರೀಗಿಂತ ಪುರುಷನೇ ಮೇಲು - ಉತ್ತಮ ಎನ್ನುವ ಧಾಟಿ ಧೋರಣೆ ನಡೆದುಕೊಂಡೇ ಬಂದಿದೆ. ಪುರುಷನ ಸ್ಥಾನಮಾನ ಸಮಾಜದಲ್ಲಿ ಎಂದೂ ಅಬಾಧಿತ ಮತ್ತು ಸ್ಥಿರ. ಆದರೆ ಸ್ತ್ರೀಯ ಸ್ಥಾನಮಾನ ಈ ತೆರನಾದ ಸ್ಥಿರತೆಯನ್ನು ಎಂದೂ ಕಾಣಲಿಲ್ಲ. ಪುರುಷನಿಗಿಂತಲೂ ಸ್ತ್ರೀ ಶ್ರೇಷ್ಠಳೆಂದು ಕೆಲವೊಮ್ಮೆ ಗೌರವಿಸಲ್ಪಟ್ಟರೂ ಆಕೆಯ ಸ್ಥಾನಮಾನ ಪುರುಷನ ಸ್ಥಾನಮಾನಕ್ಕೆ ಸಮಾನವೆಂದು ಪರಿಗಣಿತವಾದದ್ದು ಕಡಿಮೆಯೇ. ಸ್ತ್ರೀಸಮೂಹಕ್ಕೆ ದಕ್ಕಿದ್ದು ಎರಡನೆಯ ದರ್ಜೆ ಅಥವಾ ಕಡೆಯ ದರ್ಜೆಯ ಸ್ಥಾನ. ಇದಕ್ಕೆ ಮುಖ್ಯ ಕಾರಣ ಪುರುಷಪ್ರಧಾನ ಸಮಾಜವ್ಯವಸ್ಥೆ. ವೇದ ಕಾಲದ ಮಹಿಳೆಯು ಉತ್ತಮ ಗೌರವನ್ನು ಪಡೆದಿದ್ದಳೆಂದು ತಿಳಿದು ಬರುತ್ತದೆ. ಆ ಕಾಲದ ಮಹಿಳೆಗೆ ಅಧಿಕ ಸ್ವಾತಂತ್ರ್ಯವಿದ್ದು ವಿದ್ಯಾಭ್ಯಾಸವನ್ನೂ ಪಡೆದು ಆತ್ಮಜ್ಞಾನವನ್ನೂ ಹೊಂದಿ ಪ್ರಬುದ್ಧಳಾಗಿದ್ದಳೆಂದು ತಿಳಿಯುತ್ತದೆ. ಆದರೆ ಈ ಸ್ಥಾನಮಾನ ಆಕೆಗೆ ಚಿರಕಾಲ ಉಳಿದು ಬರಲಿಲ್ಲ. ಪುರಾಣ-ಇತಿಹಾಸಗಳ ಕಾಲದ ವೇಳೆಗೆ ಮಹಿಳೆಯ ಸ್ಥಾನಮಾನ ಕುಸಿಯತೊಡಗಿತು. ಮಹಿಳೆಯರ ಪಾಲಿಗೆ 'ಕತ್ತಲ ಯುಗ'ವಾಗಿ ಪರಿಣಮಿಸಿತು. ಸ್ಮೃತಿಕಾರರ ಕಾಲಕ್ಕಂತೂ ಉಸಿರುಕಟ್ಟುವ ವಾತಾವರಣ ನಿರ್ಮಾಣವಾಯಿತು. ಗೌರವದ ಮರ್ಯಾದೆಯ ಮುಸುಕಿನಲ್ಲಿ ಸ್ವಾತಂತ್ರ ಮತ್ತಷ್ಟು ಕಡಿತವಾಯಿತು. ಪರಕೀಯರು ಪರಮತೀಯರು ಭಾರತವನ್ನು ಪ್ರವೇಶಿಸಿದ ಪರಿಣಾಮ ಭಾರತದ ಧರ್ಮ ಮತ್ತು ಸಮಾಜಗಳ ಮೇಲೆ ಬದಲಾವಣೆಯ ಗಾಳಿ ಬೀಸಿತು. ಸ್ತ್ರೀ ಸಮೂಹದ ಮೇಲೂ ಇದರ ಪರಿಣಾಮ ಉಂಟಾಯಿತು. ಮುಖ್ಯವಾಗಿ ಪಾಶ್ಚಾತ್ಯ ಸಂಸ್ಕೃತಿ ಸಾಹಿತ್ಯಗಳ ಪರಿಚಯದಿಂದ ವ್ಯಕ್ತಿ ಸ್ವಾತಂತ್ರ ಮತ್ತು ಸಮಾನತೆಗಳ ಅರಿವು ಜಾಗೃತವಾಯಿತು. ಇಂದು ಮಹಿಳೆಯನ್ನು ತಾತ್ಸಾರದಿಂದ ಕಾಣುವ ಪರಿಸ್ಥಿತಿ ಗಣನೀಯವಾಗಿ ಕಡಿಮೆಯಾಗಿದೆ. ಮಹಿಳೆಯೂ ತನ್ನ ಸ್ವತಂತ್ರ ಮತ್ತು ಹಕ್ಕುಗಳನ್ನು ಕಾನೂನುದ್ವಾರ ಪಡೆಯುವ ಎಚ್ಚರ ಹೊಂದಿದ್ದಾಳೆ. ಹೀಗೆ ಏರು ಇಳುವುಗಳ ಕಲ್ಲುಮುಳ್ಳುಗಳ ಅಂಕುಡೊಂಕುಗಳ ದಾರಿಯಲ್ಲಿ ಸಾಗಿ ಬಂದ ಮಹಿಳೆಯ ಜೀವನ ನಮ್ಮ ಭಾರತದ - ಕರ್ನಾಟಕದ ಶಾಸನಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಳ್ಳೋಣ.

ಗಂಡು ಮಗುವಿನ ಜನನವನ್ನು ನಿರೀಕ್ಷಿಸಿದಂತೆ ಹೆಣ್ಣು ಮಗುವನ್ನು ನಿರೀಕ್ಷಿಸುವುದು ಅಪರೂಪವೇ. 'ಇಲ್ಲ'ವೆಂದರೂ ಅತಿಶಯೋಕ್ತಿ ಎನಿಸದು. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಮಾತಿನ ಹಿಂದೆ ಪುತ್ರ (ಗಂಡು ಸಂತಾನ) ನಿಲ್ಲದಿದ್ದರೆ ಪಿತೃಗಳಿಗೆ ಸದ್ಗತಿ ಪ್ರಾಪ್ತಿಯಾಗುವುದಿಲ್ಲ ಎಂಬ ನಂಬಿಕೆಯೇ ಬಲವಾಗಿದ್ದುದನ್ನು ನೆನೆಯಬಹುದು. ಸುಪುತ್ರನನ್ನು 'ಕುಲದೀಪಕ' ಎಂದು ಭಾವಿಸಲಾಗುತ್ತಿತ್ತು. ಹೆಣ್ಣನ್ನು ಕುರಿತ ಇಂಥ ಶ್ಲಾಘನೆ ಕಡಿಮೆ. ಆದರೆ ಹೆಣ್ಣನ್ನು 'ಸುಪುತ್ರಿ ಕುಲದೀಪಿಕೆ' ಎಂದು ಕರೆದು ಗೌರವಿಸಿದ ಅಪರೂಪದ ಶಾಸನವೊಂದು ದೊರೆತಿದೆ. (ಎ.ಕ.V. ಚನ್ನರಾಯಪಟ್ಟಣ ೨೫೪, ಅತ್ತೀಹಳ್ಳಿ ಕ್ರಿ.ಶ. ೧೧೬೪). ಇದೇ ಊರಿನಲ್ಲಿ ದೊರೆತ ೨೧೦ ಬಿದಿರೆ (ಕ್ರಿ.ಶ. ೧೧೨೩) ಶಾಸನ ಬೆಳಪ್ಪನಾಯಕನ ಮಡದಿ ಚುಂಗವ್ವೆ ಒಂದು ಹೆಣ್ಣು ಮಗುವನ್ನು ಪಡೆದುದನ್ನು ಗೌರವಾದರಗಳಿಂದ ಹೇಳುತ್ತದೆ. ಈ ಶಾಸನ ಭಾಗ ನೋಡಿ :

ಬಡವರ್ಗ್ಗೆ ಕಲ್ಪವೃಕ್ಷಮನೆಡ
ರಡಸಿದವರ್ಗೆ ರತ್ನದಾಗರಮಂ ತಾಂ
ಪಡೆದೀವತೆರದೆ ಚುಂಗವ್ವೆ
ಪಡೆದಳ್ .... ರತ್ನಮೆನಿಪ ಗೌರಲಸುತೆಯಂ

ಹುಟ್ಟಿದ ಹೆಣ್ಣು ಮಗುವಿಗೆ ವಿದ್ಯಾಭ್ಯಾಸಕ್ಕೆ ಅಗತ್ಯವಾದ ಒಂದು ವ್ಯವಸ್ಥೆ ಇದ್ದ ಬಗ್ಗೆ ಉಲ್ಲೇಖಗಳು ದೊರೆಯುವುದಿಲ್ಲ. ಪಂಪನ ಆದಿಪುರಾಣ ವೃಷಭದೇವನು ಮಕ್ಕಳಾದ ಬ್ರಾಹ್ಮಿ ಮತ್ತು ಸುಂದರಿಯರಿಗೆ ಅಕ್ಷರ ಮತ್ತು ಸಂಖ್ಯೆಗಳನ್ನು ಹೇಳಿಕೊಟ್ಟ ವಿವರ ದೊರೆಯುತ್ತದೆ. [ಆದಿಪು. (ಸಂ.) ೮-೫೪, (ಸಂ.) ಡಿ.ಎಲ್.ಎನ್] ತಂದೆಯೇ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಮಾಡಿಸುತ್ತಿದ್ದಿರಬಹುದೆಂಬ

ಸೂಚನೆಯನ್ನು ಇದು ಕೊಡುತ್ತದೆಂದು ಭಾವಿಸಬಹುದು. ಪುತ್ರಿಯರಿಗಾಗಿ ತಂದೆ ಹಸ್ತಪ್ರತಿಗಳನ್ನು ಬರೆದುಕೊಟ್ಟ, ಹೆಣ್ಣುಮಕ್ಕಳೇ ಹಸ್ತಪ್ರತಿಗಳನ್ನು ಬರೆದ ಮತ್ತು ಬರೆಸಿಕೊಂಡ ಉಲ್ಲೇಖಗಳು ಸಿಗುತ್ತವೆಯಾದರೂ, ಅವು ವಿದ್ಯಾಭ್ಯಾಸಕ್ಕಿದ್ದ ವ್ಯವಸ್ಥೆಯನ್ನು ನೇರವಾಗಿ ಹೇಳುವುದಿಲ್ಲ.

ಯೌವನಕ್ಕೆ ಬಂದ ಕನ್ಯೆಯರನ್ನು ವಿವಾಹ ಮಾಡುತ್ತಿದ್ದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಪ್ರಾಚೀನ ಕಾಲದಲ್ಲಿ ಬ್ರಹ್ಮ, ದೈವ, ಆರ್ಷ, ಪ್ರಜಾಪತ್ಯ, ಅಸುರ, ಗಂಧರ್ವ, ರಾಕ್ಷಸ ಮತ್ತು ಪೈಶಾಚ ಎಂಬುದಾಗಿ ಎಂಟು ಬಗೆಯ ವಿವಾಹಗಳು ಬಳಕೆಯಲ್ಲಿದ್ದವು. ಇವು ಶಿಷ್ಟ ಜನಸಮಾಜದಲ್ಲಿ ಕಾಣುವ ವಿವಾಹ ಪದ್ಧತಿಗಳಾದರೆ ಆದಿವಾಸಿಗಳಲ್ಲಿನ ವಿವಾಹ ಪದ್ಧತಿಗಳು ಸ್ವಲ್ಪ ಬೇರೆಯ ಸ್ವರೂಪದಲ್ಲಿ ಇರುತ್ತಿದ್ದವು. ಹಿರಿಯರು ಗೊತ್ತು ಮಾಡಿದ ವಿವಾಹ ಪದ್ಧತಿ ಹೆಚ್ಚು ಪ್ರಚಲಿತದಲ್ಲಿತ್ತು. ಶಾಸನಗಳು ರಾಜಮಹಾರಾಜರ ವಿವಾಹ ವಿಷಯವನ್ನು ಕುರಿತು ಪ್ರಸ್ತಾಪ ಮಾಡಿವೆ. ರಾಷ್ಟ್ರಕೂಟರ ದಂತಿದುರ್ಗ ಚಾಲುಕ್ಯರ ಕೀರ್ತಿವರ್ಮನ ಮಗಳು ಲಕ್ಷ್ಮೀದೇವಿಯನ್ನು ವಿವಾಹವಾದ ಸಂಗತಿಯನ್ನು ನವಸಾರಿ ಶಾಸನ ಹೇಳುತ್ತದೆ. ರಾಜಮನೆತನಗಳಲ್ಲಿ ಮುಖ್ಯವಾಗಿ ಸ್ವಯಂವರ ವಿವಾಹ ಪದ್ಧತಿ ಜಾರಿಯಲ್ಲಿತ್ತು. ಕಲ್ಯಾಣದ ಚಾಲುಕ್ಯ ೬ ನೆಯ ವಿಕ್ರಮಾದಿತ್ಯ ಶಿಲಾಹಾರ ಮನೆತನದ ಚಂದಲದೇವಿಯನ್ನು ಸ್ವಯಂವರ ಪದ್ಧತಿಯಲ್ಲಿ ವಿವಾಹ ಮಾಡಿಕೊಂಡ ಸಂಗತಿಯನ್ನು (ವಿಕ್ರಮಾಂಕದೇವ ಚರಿತೆ, VII, ೧೧-೬೯) ತಿಳಿಸುತ್ತದೆ. ಮೊದಲನೆಯ ಅಮೋಘವರ್ಷನ ಸಂಜಾನ ತಾಮ್ರ ಶಾಸನ ರಾಕ್ಷಸ ವಿವಾಹ ನಡೆದ ಪದ್ಧತಿಯನ್ನು ಪ್ರತಿನಿಧಿಸುತ್ತದೆ. ಇಂದ್ರರಾಜನೆಂಬಾತ ಖೇಟ ಮಂಡಲದ ಯುದ್ಧದಲ್ಲಿ ಚಾಲುಕ್ಯ ರಾಜಕುವರಿಯನ್ನು ಅಪಹರಿಸಿ ತಂದು ರಾಕ್ಷಸ ವಿವಾಹ ಮಾಡಿಕೊಂಡ ಉಲ್ಲೇಖವಿದೆ (ಎ.ಇ XVIII, ಕ್ರಿಶ. ೮೭೧). ಅರಸು ಮನೆತನಗಳು ಸಮಾನ ಸ್ಥಾನಮಾನ ಹೊಂದಿದ ಅರಸು ಮನೆತನಗಳ ಜೊತೆ ವಿವಾಹ ಸಂಬಂಧವನ್ನೂ ಬೆಳೆಸುತ್ತಿದ್ದವು. ಕೆಲವೊಮ್ಮೆ ಸಾಮಂತರು, ಮಾಂಡಲಿಕರು, ದಂಡನಾಯಕರೊಂದಿಗೂ ಸಂಬಂಧ ಬೆಳೆಸುತ್ತಿದ್ದುದುಂಟು. ಸಾಮಂತ ಕದಂಬ ಮಯೂರವರ್ಮನು ಚಾಲುಕ್ಯ ಅಕ್ಕದೇವಿಯನ್ನು (ಎ.ಇ. XV ಪು. ೭೩, ಹೊಟ್ಟೂರು ಕ್ರಿ.ಶ. ೧೦೩೭) ; ಸಾಮಂತ ಕದಂಬ ಜಯಕೇಶಿ ಆರನೆಯ ವಿಕ್ರಮಾದಿತ್ಯನ ಮಗಳು ಮೈಳಲದೇವಿಯನ್ನು (ಧಾ.ತಾ ೫೪೯, ನರೇಂದ್ರ ಕ್ರಿ.ಶ. ೧೧೨೫); ಹೊಯ್ಸಳ ವಿಷ್ಣುವರ್ಧನ ಪೆರ್ಗಡೆ ಮಾರಸಿಂಗಮಯ್ಯನ ಮಗಳು ಶಾಂತಲೆಯನ್ನು (ಎ.ಕ. II ಶ್ರವಣಬೆಳಗೊಳ, ೧೩೨, ಕ್ರಿ.ಶ. ೧೧೨೩); ದಂಡನಾಯಕ ಸಿಂಗನೆಂಬವ ವಿಷ್ಣುವರ್ಧನನ ಮಗಳು ಹರಿಯಲದೇವಿಯನ್ನು (ಎ.ಕ. VI, ಮೂಡಿಗೆರೆ, ೨೨, ಹಂತೂರು ಕ್ರಿ.ಶ. ೧೧೯೯) ಮದುವೆಯಾದ ಉದಾಹರಣೆಗಳನ್ನು ನೋಡಬಹುದು. ದೇವದಾಸಿಯರು ಅಥವಾ ವೇಶ್ಯಾಸ್ತ್ರೀಯರನ್ನು ಮದುವೆಯಾದ ಉದಾಹರಣೆಗಳಿವೆ. ಮೊದಲನೆಯ ಗೊಂಕನೆಂಬಾತ ದೇವಸ್ಥಾನದ ಪಾತ್ರದವಳೊಂದಿಗೆ ಮದುವೆಯಾದರೆ (ದಿ ಚಲುಕ್ಯಾಸ್ ಆಫ್ ಕಲ್ಯಾಣಿ, ಪು. ೨೪೭, ಕೃಷ್ಣಮುರಾರಿ) ; ನೀತಿಮಾರ್ಗ ಪೆರ್ಮನಡಿಗಳ ಸೂಳೆ ಜೋಗಬ್ಬೆಯ ಮಗಳು ಚಾವುಂಡಬ್ಬೆಯನ್ನು ಸಿಗೆನಡ ಪೆರ್ಮಾಡಿ ಗಾವುಂಡ ಮದುವೆಯಾಗಿದ್ದನು (ಎಂ.ಎ.ಆರ್, ೧೯೩೦-೧೪, ಹೆಗ್ಗೂಟಾರ, (ತಾ) ಚಾಮರಾಜನಗರ, ಕ್ರಿ.ಶ. ೮೦೦). ವಿವಾಹಕ್ಕೆ ಕುಲವನ್ನು ಮುಖ್ಯವಾಗಿ ಪರಿಗಣಿಸುವ ಪರಿಪಾಠವಿತ್ತು. 'ಅಕುಲೀನರಪ್ಪರೊಳು ಕೊಳು ಕೊಡೆಯಾದರೆ ಕುಲಕ್ರಮಂ ಕೆಡುಗುಂ' (ಎ.ಕ. VII, ಶಿಕಾರಿಪುರ, ೪. ಶಿಕಾರಿಪುರ, ಕ್ರಿ.ಶ. ೧೧೨೨). ಕಟ್ಟುಕಟ್ಟಳೆಗಳು ಏನೇ ಇದ್ದರು ಅವುಗಳನ್ನು ಮೀರಿದ ಚಟುವಟಿಕೆಗಳು ನಡೆಯುತ್ತಿದ್ದವು. ಚಾಲುಕ್ಯರ ೬ನೆಯ ವಿಕ್ರಮಾದಿತ್ಯ ಬೇರೆಬೇರೆ ಧರ್ಮದ ರಾಣಿಯರನ್ನು ಮದುವೆಯಾಗಿದ್ದ ; ಶಾಂತಲೆಯ ತಂದೆ ಮಾರಸಿಂಗಯ್ಯ ಶಿವಭಕ್ತ, ತಾಯಿ ಮಾಚಿಕಬ್ಬೆ ಜಿನಭಕ್ತೆಯಾಗಿದ್ದಳು ; ಶಾಂತಲೆ ಜಿನಧರ್ಮ ಅನುಸರಿಸಿದರೆ ಆಕೆಯ ಗಂಡ ವಿಷ್ಣುವರ್ಧನ ಶ್ರೀವೈಷ್ಣವ ಧರ್ಮದ ಅನುಯಾಯಿಯಾಗಿದ್ದ.

ಬಹುಪತ್ನಿತ್ವ ಹೆಚ್ಚು ಪ್ರಚಲಿತವಿತ್ತು. ಅರಸರು, ಅಧಿಕಾರಿ ವರ್ಗಗಳಲ್ಲೂ ಇಂತಹ ವಿವಾಹ ವ್ಯವಸ್ಥೆ ಸಾಮಾನ್ಯವಾಗಿತ್ತು. ಜನಸಾಮಾನ್ಯರಲ್ಲಿ ಇದು ವಿರಳವೆಂದೇ ಹೇಳಬೇಕು. ಚಾಲುಕ್ಯ ಇಮ್ಮಡಿ ಪುಲಿಕೇಶಿ, ಕಲ್ಯಾಣಿ ಚಾಲುಕ್ಯ ಸೋಮೇಶ್ವರ, ಆರನೆಯ

ವಿಕ್ರಮಾದಿತ್ಯ, ಹೊಯ್ಸಳರ ಎರೆಯಂಗ, ವಿಷ್ಣುವರ್ಧನ, ನಾರಸಿಂಹ, ಬಲ್ಲಾಳ ಮೊದಲಾದ ದೊರೆಗಳು ಬಹುಪತ್ನಿಯರನ್ನು ಹೊಂದಿದ್ದರು. 'ಪಟ್ಟಮಹಿಷಿ', 'ಪಿರಿಯರಸಿ' ಎಂಬ ವಿಶೇಷಣಗಳು ಹಿರಿಯ ಅಥವಾ ಮುಖ್ಯ ರಾಣಿಯರಿಗೆ ಪ್ರಯೋಗವಾಗುತ್ತಿದ್ದವು. ಉಳಿದ ರಾಣಿಯರಿಗೆ 'ವಿಶಾಳವಕ್ಷಸ್ಥಳ ನಿವಾಸಿನಿ'ಯರು ಎಂದು ಕರೆದ ಉಲ್ಲೇಖಗಳಿವೆ.

ರಾಣಿಯರು ಕೆಲವೊಮ್ಮೆ ರಾಜ್ಯಸೂತ್ರಗಳನ್ನು ಹಿಡಿದು ಆಡಳಿತ ನಡೆಸಿದ ಉದಾಹರಣೆಗಳಿವೆ. ಚಾಲುಕ್ಯ ವಿಕ್ರಮಾದಿತ್ಯನ ರಾಣಿಯರು ಇಂಥ ಜವಾಬ್ದಾರಿ ಹೊತ್ತ ಉಲ್ಲೇಖವಿದೆ.

ಪತ್ನಿಯನ್ನು 'ಧರ್ಮಪತ್ನಿ' ಎಂದು ಪರಿಗಣಿಸಲಾಗುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ಸತಿಪತಿಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದ ಉಲ್ಲೇಖಗಳಿವೆ. ಧರ್ಮಶಾಸ್ತ್ರಗಳೂ ಇದನ್ನು ಮಾನ್ಯ ಮಾಡಿವೆ. ಮುತ್ತಿಗೆಯ ಶಾಸನ (ಅಯ್, ಎನ್.ಕೆ, ೩, ಮುತ್ತಿಗೆ, ಬಾಗೇವಾಡಿ ತಾ. ಕ್ರಿ.ಶ. ೧೦೭೮) ವಿಟ್ಟರಸನು ಸತಿ "ಕೋಮಲದೇವಿಯೊಳೊಂದಾಗಿ ಧರ್ಮತತ್ವದ ಚಿತ್ತ"ನಾದುದನ್ನು ದಾಖಲಿಸಿದೆ. ಎಲಿಶಿರೂರ ಶಾಸನದ ಮೇಲ್ಭಾಗದಲ್ಲಿ ಕೆತ್ತಲಾಗಿರುವ ಶಿವಲಿಂಗದ ಎಡಬಲಗಳಲ್ಲಿ ಗಂಡಹೆಂಡತಿಯರ ವಿಗ್ರಹವನ್ನು ಕೆತ್ತಲಾಗಿದೆ. ಇದರಲ್ಲಿ "ಲಕ್ಷ್ಮೀದೇವಿಯುಂ ಪದ್ಮರಸನುಂ ಸದಾಶಿವನ ಸ್ತುತಿಯಿಸುತ್ತಿರ್ದ್ದಪ್ಪರು" (ಬಿ.ಕೆ. ಅಯ್, I-i ೫೦, ಗದಗ (ತಾ), ಕ್ರಿ.ಶ. ೧೧೩೮) ಎಂಬ ಬರಹವೂ ಇದೆ. ಪತಿನಿಷ್ಠೆಯುಳ್ಳ ಸತಿಯನ್ನು ಕನ್ನಡ ಶಾಸನಗಳು 'ಪತಿವ್ರತೆ', 'ಪುರುಷವ್ರತೆ' ಎಂಬ ವಿಶೇಷಣಗಳಿಂದ ಕರೆದು ಗೌರವಿಸಿದೆ. ಅನೇಕ ಸ್ತ್ರೀಯರು ತಮ್ಮ ಪಾತಿವ್ರತ್ಯದ ಬಲದಿಂದ ಪವಾಡ ಸದೃಶ ಕಾರ್ಯಗಳನ್ನು ಮಾಡಿದ ಉದಾಹರಣೆಗಳಿವೆ. ಸುಗ್ಗಲದೇವಿ ಎಂಬಾಕೆ 'ಘಟಸರ್ಪ ಪವಾಡ' ಮಾಡುವುದರ ಮೂಲಕ ತನ್ನ ಪಾತಿವ್ರತ್ಯವನ್ನೂ ಸಾರ್ವಜನಿಕರಿಗೆ ಪ್ರಕಟಿಸಿದ್ದಾಳೆ. (ಐ.ಎ. XII, ಪು. ೯೫ ತೊರಗಲ್ಲು, ಕ್ರಿ.ಶ. ೧೧೮೭).

ವಿಚಿತ್ರವೆಂದರೆ, ಕೆಟ್ಟದಾಗಿ ವರ್ತಿಸುವ ಕೆಲವು ಸ್ತ್ರೀಯರ ವಿವರಗಳನ್ನು ಶಾಸನಗಳು ಕೊಡುತ್ತಿವೆ.

> ಪತಿಯಂ ವಂಚಿಸಿ ಸಲೆ ನಿಜ
> ಕೃತಕದಿನರ್ಥಾವಲೋಕನಾಕ್ಷಿಗಳಿಂ ಭ್ರೂ
> ಲತೆಯೊಳಮೊಳಪೊಯ್ಯೀ ದು
> ವ್ರತೆಯರ್ ಪೋಲ್ತಪರೆ ಚಾಗಿಮಬ್ಬರಸಿಯುಂ

ಎಂಬ ವಿವರವಿರುವ ಶಾಸನ (ಎ.ಕ. viii, ನಗರ ೪೭, ಹುಂಚ, ಕ್ರಿ.ಶ. ೧೦೬೨) ಇಂಥದೊಂದು ಸಂಗತಿಯನ್ನು ಒಳಗೊಂಡಿದೆ. ಸ್ತ್ರೀಯರ ಇಂಥ ವರ್ತನೆಗಳನ್ನು ಸೌಂದತ್ತಿಯ ಶಾಸನ (ಎಸ್.ಐ.ಐ. XX, ೨೪೮ ಸೌಂದತ್ತಿ, ಕ್ರಿ.ಶ. ೧೨೦೮) ವಿವರವಾಗಿ ತಿಳಿಸುತ್ತದೆ.

ಸಾಂಸಾರಿಕ ಚಟುವಟಿಕೆಗಳಲ್ಲಿ ಮಾತ್ರವೇ ತಮ್ಮನ್ನು ತೊಡಗಿಸಿಕೊಳ್ಳದೆ ಕೆಲವು ಹೆಣ್ಣುಗಳು ಸಂದರ್ಭ ಬಂದಾಗ ಕೈಯಲ್ಲಿ ಖಡ್ಗ ಹಿಡಿದು. ದುಷ್ಟರನ್ನು ಸದೆಬಡಿದು ಧರ್ಮಕಾರ್ಯಗಳನ್ನು ಮಾಡಿದ ಉದಾಹರಣೆಗಳಿವೆ.

> ಮಡದಿಯರಾವಗಂ ಕೆರಸಿ ಕಾವಲಿ ತಂಬುಗೆ ಹುಟ್ಟು ಸಟ್ಟುಗಂ
> ಕೊಡಸೊರಲಕ್ಕಿಯೆಂಬಿವನೆ ಚಿಂತಿಸಿ ಕೋಟಲೆಗೊಂಬರಲ್ಲದೇಂ
> ಮೃಡನನೆ ಸುಪ್ರತಿಷ್ಠೆಯನೆ ಮಾಡಿಸಿ ಕಲ್ವೆಸದಿಂದೆ ಗೇಹಮಂ
> ಪೊಡವಿಯೊಳೊಪ್ಪೆ ಮಾಡಿಪರೆ ಸನ್ನುತ ಪೆಣ್ನಲ ಸೆಟ್ಟಿಕವ್ವೆವೋಲ್

ಮಕ್ಕಳನ್ನು ಹೆತ್ತು ಜನ್ಮ ಸಾರ್ಥಕ ಮಾಡಿಕೊಳ್ಳಬೇಕೆಂಬ ಬಯಕೆ ಹೆಣ್ಣಿಗೆ ಜನ್ಮತಃ ಬಂದ ಬಯಕೆ. ಇದಕ್ಕಾಗಿ ವ್ರತ ಪೂಜೆಗಳನ್ನು ಮಾಡುತ್ತಿದ್ದ ಪ್ರಸಂಗಗಳು ಶಾಸನಗಳಲ್ಲಿ ದಾಖಲಾಗಿವೆ. 'ನನ್ನಿಯ ಗಂಗದೇವನ ರಾಣಿ ಕಂಚಲ ಮಹಾದೇವಿಯ ಪದ್ಮಾವತಿಗೆ ಹರಕೆ

ಹೊತ್ತು ಹೆಮ್ಮಡಿ ದೇವನನ್ನು ಪಡೆದ ಉದಾಹರಣೆಯನ್ನು ನೋಡಬಹುದು. (ಎ.ಕ. VII, ಶಿವಮೊಗ್ಗ, ೪, ಕಲ್ಲೂರಗುಡ್ಡ, ಕ್ರಿ.ಶ. ೧೧೨೨). ಉನ್ನತ ವರ್ಗದವರು ತಮ್ಮ ಮಕ್ಕಳ ಪಾಲನೆ ಪೋಷಣೆಗಾಗಿ 'ಬಾಯ್ಬೆಣ್ಣೆ' ಹೊಲಮನೆಗಳನ್ನು ಕೊಟ್ಟಿದ್ದಾರೆ. ಗಂಡುಮಕ್ಕಳ ಪೋಷಣೆಗೆ ಈ ವ್ಯವಸ್ಥೆ ಇತ್ತೇ ಹೊರತು ಹೆಣ್ಣು ಮಕ್ಕಳ ಪೋಷಕರಿಗೆ ಈ ಸೌಲಭ್ಯವಿರಲಿಲ್ಲ ಎಂದೆನಿಸುತ್ತದೆ. ದಾದಿಯರು ರಾಜಪುತ್ರನಿಗೆ ಹಾಲುಣಿಸಿ ಪೋಷಿಸಲು ನಿಯೋಜಿತರಾಗುತ್ತಿದ್ದರು 'ತೊಳ್ತಿನ ಮೊಲೆವಾಲನುಂಡ ಗುಣಂ' ಎಂಬ ಪಂಪಭಾರತದ ವಿವರವನ್ನು ಗಮನಿಸಬಹುದು. ಆರನೆಯ ವಿಕ್ರಮಾದಿತ್ಯ ಮತ್ತು ಚಂಗಲದೇವಿಯರ ಮಗ ತೈಲಪನ ದಾಯಿ ಬಾಯಿಗಬ್ಬೆಯ ಉಲ್ಲೇಖವಿದೆ. (ಎ.ಆರ್. ಐ. ಇ. ೧೯೬೦-೬೧, ನಂ. ೮೬, ಮಲ್ಲೇಶ್ವರ, ಕೊಲ್ಹಾಪುರ ತಾ. ಕ್ರಿ.ಶ. ೧೧೧೧). ಗಂಡು ಮಕ್ಕಳಿಲ್ಲದವರ ಆಸ್ತಿ ಹೆಣ್ಣು ಮಕ್ಕಳಿಗೆ ಸಲ್ಲುತ್ತಿರಲಿಲ್ಲ. "ಮಕ್ಕಳಿಲ್ಲದಿದ್ದರೆ ಅಣ್ಣತಮ್ಮಂದಿರಿಗೆ ಸಲುವುದು, ತಂಮ ಅಂಣತಂಮಂದಿರು ಇಲ್ಲದಿದ್ದರೆ ಅಳಿಯ ಮಕ್ಕಳಿಗೆ ಸಲುವುದು ಇವರಾರೂ ಇಲ್ಲದಿದ್ದಡೆ ಧರ್ಮಕ್ಕೆ ಸಲುವುದು" ಎಂಬುದಾಗಿ ಕಿತ್ತಿನಲ್ಲಿಯ ಶಾಸನ ಹೇಳುತ್ತದೆ (ಎ.ಕ. IX, ನೆಲಮಂಗಲ ೧೨, ಕಿತ್ತಿನಲ್ಲಿ). "ಅಪುತ್ರಕಧನವಪ್ಪುದು ದೇವರಿಗೆ" ಎನ್ನುತ್ತದೆ ಬಳ್ಳಿಗಾವೆಯ ಶಾಸನ (ಎ.ಕ. vii, ಶಿಕಾರಿಪುರ ಕ್ರಿ.ಶ. ೧೦೫೪).

ವಿಧವೆಯಾದ ಸ್ತ್ರೀಗೆ ಜೀವನದಲ್ಲಿ ಭದ್ರತೆಯಿರಲಿಲ್ಲ. ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀಯರು ಪತಿಯ ಮರಣಾನಂತರ ಸಹಗಮನ ಮಾಡುತ್ತಿದ್ದರು. ಧರ್ಮಾಸಕ್ತರಾಗಿ ಕೆಲವರು ಜೀವನ ಸಾಗಿಸುತ್ತಿದ್ದರಾದರೂ ಸಹಗಮನ ಪದ್ಧತಿ ಹೆಚ್ಚಿತ್ತು. ಸಹಗಮನ ಕಡ್ಡಾಯವಾಗಿರಲಿಲ್ಲವಾದರೂ ಸ್ವಸಂತೋಷದಿಂದ ಸಹಗಮನ ಮಾಡಿದರೆಂಬಂತೆಯೇ ಲಿಖಿತಾಧಾರಗಳು ತಿಳಿಸುತ್ತವೆ. ಕ್ರಿ.ಶ. ೪೫೦ ರ ಕವಡಿ ಶಾಸನ (ಎ.ಕ. VIII, ಸೊರಬ) ರವಿವರ್ಮನ ರಾಣಿ ಸಹಾಗಮನ ಮಾಡಿದ ಉಲ್ಲೇಖನವನ್ನೊಳಗೊಂಡಿದೆ. ಇದು ಕನ್ನಡ ನಾಡಿನಲ್ಲಿ ದೊರೆತ ಸಹಗಮನ ಪ್ರಸ್ತಾಪಿಸುವ ಪ್ರಥಮ ಶಾಸನವಾಗಿದೆ. ಸಹಗಮನ ಮಾಡದೆ ಉಳಿದ ಸ್ತ್ರೀಯರ, ಅದರಲ್ಲಿಯೂ ಕೆಳವರ್ಗದ ಸ್ತ್ರೀಯರ ಬಾಳು ಶೋಚನೀಯವಾಗಿದ್ದಿತು. ಪತಿಯ ಮರಣಾನಂತರ ಸ್ತ್ರೀಯು ಮುತ್ತೈದೆಯ ಸಂಕೇತವಾದ ಮಂಗಳಸೂತ್ರವನ್ನು ತೆಗೆಯಬೇಕಾದ ಪದ್ಧತಿಯನ್ನು

**ಅದಟಿನಳುರ್ಕೆಯಂ ನೃಪನ ಸಾಹಮಂ ಧರೆಗಾನದಿಂತುಟೆ**
**ನ್ನದೊಡವೆ ತಾಮೆ ಪೇಳವೆ ವಿರೋಧಿಯ ಪೆಂಡಿರ ಕಂಕಣಂಗಳಿ**
**ಲ್ಲದ ಕರಮಾರಮಿಲ್ಲದರ ಮಂಜನಮಿಲ್ಲದ ಕಣ್ಣಳೋಲೆಯಿ**
**ಲ್ಲದ ಕಿವಿ ಕಾಂಚಿಯಿಲ್ಲದುಡೆ ನೂಪುರಮಿಲ್ಲದ ಪಾದಪಲ್ಲವಂ**

ಎಂಬ ಶಾಸನ ಪದ್ಯ ತಿಳಿಸುತ್ತದೆ. ವಿಧವೆಯಾದವಳು ಪತಿ ಮಾಡಿದ ಸಾಲಕ್ಕೆ ಬಾಧ್ಯಸ್ಥಳಾಗುತ್ತಿದ್ದಳು. ತಿಪ್ಪವ್ವೆ ಎಂಬುವಳು ತನ್ನ ಪತಿ ತಿಪ್ಪಯ್ಯ ಮಾಡಿದ ಸಾಲವನ್ನು ತೀರಿಸಿದ ಸಂಗತಿ ಧಾರವಾಡದ ಶಾಸನದಲ್ಲಿ ಉಲ್ಲೇಖಿತವಾಗಿದೆ (ಕೆ.ಐ. v ೩೨, ಧಾರವಾಡ ಕ್ರಿ.ಶ. ೧೨೧೫).

ವಿವಾಹೇತರ ದೈಹಿಕ ಸಂಬಂಧವನ್ನು ಪುರುಷ ಹೊಂದಿದ್ದ 'ವೇಶ್ಯಾ ಪದ್ಧತಿ' ರೂಢಿಯಲ್ಲಿದ್ದುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ಸಾಮಾಜಿಕ ಧಾರ್ಮಿಕ ಎಂದು ಸ್ಪಷ್ಟವಾಗಿ ವರ್ಗೀಕರಿಸಿ ಈ ಪದ್ಧತಿಯನ್ನು ನೋಡಬಹುದಾಗಿದೆ. ರಾಜ, ಅಧಿಕಾರಿ ಶ್ರೀಮಂತ ಅಥವಾ ವ್ಯಕ್ತಿಯೊಬ್ಬ ತನ್ನ ವಿಲಾಸ ಜೀವನಕ್ಕಾಗಿಯೋ, ಪ್ರತಿಷ್ಠೆಗಾಗಿಯೋ ವೇಶ್ಯಾಸ್ತ್ರೀಯೊಬ್ಬಳ ಸಂಬಂಧವನ್ನು ಇಟ್ಟುಕೊಂಡದ್ದು ಸಾಮಾಜಿಕ ವರ್ಗದಲ್ಲಿಯೂ, ದೇವಾಲಯದ ಸೇವಾಕಾರ್ಯಗಳಿಗಾಗಿ ನಿಯೋಜಿತಳಾಗಿದ್ದ 'ದೇವದಾಸಿ'ಗಳನ್ನು ಧಾರ್ಮಿಕ ವರ್ಗದಲ್ಲಿಯೂ ಪರಿಗಣಿಸಿ ನೋಡಲಾಗುತ್ತದೆ.

ರಾಜರು ಯುದ್ಧದಲ್ಲಿ ವಿಜಯ ಸಂಪಾದಿಸಿದಾಗ ಗೆದ್ದ ಊರಿನ ಸಂಪತ್ತನ್ನು (ಸ್ತ್ರೀಯರನ್ನೂ ಒಳಗೊಂಡಂತೆ) ಬಾಚಿಕೊಂಡು ಒಯ್ಯುತ್ತಿದ್ದರು. 'ಮಾರಾಂತರನೇಕರಂ ತವಿಸಿ ವಸ್ತುಗಳಂ ಮದವಾರಣಂಗಳಂ ಕಾನ್ತೆಯರಂ ತುರಂಗ ಚಯಮಂ ಪಿಡಿದಿತ್ತು..." (ಎಸ್.ಐ.ಐ. XX ೧೮ ಪರಸಿಗಡ, ಸೌಂದತ್ತಿ (ತಾ) ಕ್ರಿ.ಶ. ೯೮೦) ; ರಟ್ಟ ಕಾರ್ತವೀರ್ಯನ ಸೆರೆಯಲ್ಲಿ 'ವಾಜಿಚಯ ಕರಿಸಂಕುಳ ವಿಳಾಸಿನೀ ಲೋಕ'ವಿದ್ದಿತು (ಎ.ಇ. XIII ನಂ. ೩, ಬೆಳಗಾವಿ, ಕ್ರಿ.ಶ. ೧೨೦೪); ಹೊಯ್ಸಳರ ವೀರಬಲ್ಲಾಳ ಉಚ್ಚಂಗಿ ಕೋಟೆಯನ್ನು ಮುತ್ತಿ ಅಲ್ಲಿನ 'ಭಣ್ಡಾರಮುಂ ಸ್ತ್ರೀಯರಂ ತುರಗವ್ರಾತಮುಮಂ ಸಮನ್ತು' ಹಿಡಿದಿದ್ದ (ಶಾ.ಶಾ.ಸಂ. ೮೧ ಶ್ರವಣಬೆಳಗೊಳ, ಕ್ರಿ.ಶ. ೧೧೮೨) ಎಂದಿರುವ ಶಾಸನದ ಉಧೃತಗಳನ್ನು ಗಮನಿಸಬಹುದು.

ರಾಜನ ಸೇವೆಯನ್ನು ಮಾಡಿಕೊಂಡು ಇರುತ್ತಿದ್ದ ವಂಶಪಾರಂಪರ್ಯವಾಗಿ ಬಂದ ವೇಶ್ಯಾ ಸಮೂಹ ಇರುತ್ತಿತ್ತು. 'ಗಣಿಕೆ'ಯರು ಎಂದೂ ಇವರನ್ನು ಕರೆಯಲಾಗುತ್ತಿತ್ತು. ರಾಜನ ಪರಿವಾರವಾಗಿ ಅವನೊಡನೆ ಇರುತ್ತಿದ್ದ ಸ್ತ್ರೀಸಮೂಹವನ್ನು ಅನೇಕ ಸೂಕ್ಷ್ಮ ಸ್ಥಾನಮಾನಗೌರವಗಳೊಡನೆ ಪರಿಗಣಿಸಬೇಕಾಗುತ್ತದೆ. ಏಕೆಂದರೆ ಅವನೊಡನೆ, ಪಟ್ಟದರಾಣಿ, ಪ್ರೇಯಸಿಯರು ಅಥವಾ ಉಪಪತ್ನಿಯರು, ಇದರಲ್ಲಿ ವಂಶ ಪಾರಂಪರಗತವಾಗಿ ಬಂದ ವೇಶ್ಯೆಯರು, ವಂಶಪಾರಂಪರರಲ್ಲದ ವೇಶ್ಯೆಯರು, ಗಣಿಕಾ ಸ್ತ್ರೀಯರು ಎಂದೆಲ್ಲಾ ಪ್ರತ್ಯೇಕ ವರ್ಗಗಳಿಗೆ ಸೇರಿದ ಸ್ತ್ರೀಯರಿರುತ್ತಿದ್ದರು.

ಸೂಳೆಯರು ಎಂಬ ಪದ ಪ್ರಯೋಗ ಬಾದಾಮಿ ಚಾಲುಕ್ಯರ ಮನೆತನಕ್ಕೆ ಸಂಬಂಧಪಟ್ಟ ಶಾಸನದಲ್ಲಿ ಪ್ರಪ್ರಥಮವಾಗಿ ಉಲ್ಲೇಖಿತವಾಗಿದೆ. ಮಹಾಕೂಟ ಶಾಸನ (ಕ್ರಿಶ. ೭೩೩)ದಲ್ಲಿ "ವಿಜಯಾದಿತ್ಯ ಸತ್ಯಾಶ್ರಯ ಶ್ರೀ ಪ್ರಿಥಿವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟಾರರಾ ಪ್ರಾಣವಲ್ಲಭೆ ವಿನಾಪೊಟಿಗಳೆನ್ಭೊರ್ ಸೂಳೆಯರ್"ಎಂಬುದಾಗಿ ರಾಜವೇಶ್ಯೆಯ ಪ್ರಸ್ತಾಪವಿದೆ. ರಾಜವೇಶ್ಯೆಯರು ರಾಜನ ವಿಲಾಸ ಜೀವನಕ್ಕೆ ಮಾತ್ರ ಸೀಮಿತವಾಗಿರದೆ ದೇವಾಲಯ, ತಟಾಕ, ನಿರ್ಮಾಣ ಜೀರ್ಣೋದ್ಧಾರ ಮೊದಲಾದ ಪುಣ್ಯ ಕಾರ್ಯಗಳಲ್ಲಿಯೂ ಭಾಗಿಯಾಗಿದ್ದಾರೆ. ವಿಜಯ ಮಹಾದೇವಿ ಎರಡು ದತ್ತಿಗಳನ್ನು ಬಿಟ್ಟಿದ್ದಾಳೆ (ಜೆ.ಬಿ.ಬಿ.ಆರ್ ಎ.ಎಸ್ iii ಭಾ ೨ ಕ್ರೋಚಿ ತಾಮ್ರಪಟ...) ಬಿಂನಪೋಟಿ ವೀರಗಲ್ಲು ನಿಲ್ಲಿಸಿದ್ದಾಳೆ (ಎಸ್.ಐ.ಐ xviii ೩೦೯, ದೇವಿ ಹೊಸೂರು, ಹಾವೇರಿ ತಾ. ಕ್ರಿ.ಶ. ೮೦೦); ಅಯ್ಯಣಯ್ಯನ ವಾರವಧು, ವಿಜಯಬ್ಬೆ ದೇವಸ್ಥಾನಕ್ಕೆ ಸ್ತಂಭ ದಾನ ಮಾಡಿದ್ದಾಳೆ (ವಿ.ಜಿ.ಶಾ.ಸೂ ಪು.೪, ವಿಜಾಪುರ, ಕ್ರಿ.ಶ. ೧೨೦೦). ವೇಶ್ಯೆಯರ ಮಕ್ಕಳಿಗೆ ಕೂಡ ಸಮಾಜದಲ್ಲಿ ತಕ್ಕಮಟ್ಟಿನ ಗೌರವವಿತ್ತು. ರಾಜನಿಗೆ ವಿಪತ್ಕಾಲದಲ್ಲಿ ನೆರವನ್ನು ನೀಡಿ ಆ ಮಕ್ಕಳು ತಮ್ಮ ಕೃತಜ್ಞತೆಯನ್ನು ಮೆರೆದಿದ್ದಾರೆ. ಪೃಥುವೀಗಂಗನ ಸೂಳೆ ಬೀರಕ್ಕನ ಮಗ ಎರೆಕಳಿಂಗ ದೊರೆಗೆ ತಲೆಯರ್ಪಿಸಿ ಕಾಪಾಡಿದ ಸಂದರ್ಭವನ್ನು ಬೇವಿನ ಕುಪ್ಪೆ ಗ್ರಾಮದ ಶಾಸನ ಉಲ್ಲೇಖಿಸಿದೆ. (ಎಂ.ಎ.ಆರ್. ೧೯೪೪, ೧೦) "....ರಾಜ ವ್ಯಕ್ತಿಗಳ ವೈಯಕ್ತಿಕ ಸೂಳೆಯರನ್ನು ಮುಕ್ತವಾಗಿ ಉಲ್ಲೇಖಿಸುವಂತೆ ಶಾಸನಗಳು ಇಲ್ಲಿಂದ ಕೆಳವರ್ಗದ ವ್ಯಕ್ತಿಗಳ ವೈಯಕ್ತಿಕ ಸೂಳೆಯರನ್ನು ಉಲ್ಲೇಖಿಸುವುದಿಲ್ಲ. ಆದರೆ 'ಪರವಾರ ನಾರಿಯೊಳ್ ನೆರೆದಂ' ಎಂಬ ಕವಿರಾಜಮಾರ್ಗದ ಉಲ್ಲೇಖ ಮಾತ್ರ ಒಬ್ಬನ ವೈಯಕ್ತಿಕ ಸೂಳೆಯನ್ನು ಬೇರೊಬ್ಬ ಬಳಸುತ್ತಲಿದ್ದುದಕ್ಕೆ ಸೂಚನೆ ನೀಡುತ್ತದೆ (ಶಾಸನಗಳಲ್ಲಿ ಸ್ತ್ರೀ ಸಮಾಜ, ಪು. ೫೨). ಒಟ್ಟಿನಲ್ಲಿ ಶಾಸನಗಳಲ್ಲಿ ವೈಯಕ್ತಿಕ ಸೂಳೆಯರ ಪ್ರಸ್ತುತ ತೀರಾ ಕಡಿಮೆ.

'ಧಾರ್ಮಿಕ ವರ್ಗದಲ್ಲಿ ಪ್ರಸ್ತಾಪ ಮಾಡಬೇಕಾದ ವೇಶ್ಯೆಯರು ದೇವದಾಸಿಯರು. ದೇವರ ಸೇವಾ ಕೈಂಕರ್ಯ ಮಾಡುವವರಲ್ಲಿ ದೇವದಾಸಿಯರೂ ಸೇರಿರುತ್ತಿದ್ದರು. ದೇವರಿಗೆ 'ಅಂಗಭೋಗ' ಮತ್ತು 'ರಂಗಭೋಗ' ಎಂಬ ಎರಡು ಬಗೆಯ ಸೇವೆಗಳನ್ನು ಸಲ್ಲಿಸಲಾಗುತ್ತಿತ್ತು. ದೇವರ ಸ್ನಾನ, ಪೂಜೆ, ನೈವೇದ್ಯ ಮೊದಲಾದ ಕ್ರಿಯೆಗಳಿಗೆ ನೆರವು ನೀಡುತ್ತಿದ್ದವರು ಅಂಗಭೋಗದವರು, ಪೂಜಾಕಾರ್ಯದ ಒಂದು ಸೇವಾಭಾಗವಾಗಿ ನಡೆಸಲಾಗುತ್ತಿದ್ದ ನೃತ್ಯವನ್ನು ನಡೆಸಿಕೊಡುತ್ತಿದ್ದವರು ರಂಗಭೋಗದವರು. ಇದಲ್ಲದೆ

ರಂಗಭೋಗದ ಸೂಳೆಯರಲ್ಲಿ ಕಂಬದ ಸೂಳೆ, ಮಾಡದ ಸೂಳೆ, ಚಾಮರದ ಸೂಳೆ, ಪಾತ್ರದ ಸೂಳೆ ಮೊದಲಾದ ಹೆಸರಿನಿಂದ ಕರೆಯಲ್ಪಡುತ್ತಿದ್ದ ನಿರ್ದಿಷ್ಟ ಕರ್ತವ್ಯಗಳನ್ನು ನಿರ್ವಹಿಸಿಸುತ್ತಿದ್ದ ಸೂಳೆಸಮಾಜವೇ ಇರುತ್ತಿತ್ತು.

ಬಸವಿ ಬಿಡುವ ಪದ್ಧತಿ ಕೂಡ ಅಸ್ತಿತ್ವದಲ್ಲಿತ್ತು. ದೇವರಿಗೆ ಬಸವನನ್ನು ಬಿಡುವ ರೀತಿಯಲ್ಲಿಯೇ ಸ್ತ್ರೀಯನ್ನು ಬಿಡುವ ಪದ್ಧತಿಗೆ ಬಸವಿ ಪದ್ಧತಿ ಎಂಬ ಹೆಸರು ರೂಢಿಗೆ ಬಂದಿರಬೇಕು. ದೇವಾಲಯದ ಸೂಳೆಯರಿಗೆ ಬಸವಿ ಎಂದು ಪರ್ಯಾಯ ಪದ ಬಳಕೆಯಾಗುತ್ತ ಬಂದಿದೆ. ಸಿದ್ಧಮಲ್ಲಿಕಾರ್ಜುನ ದೇವರಲ್ಲಿ ಹಾಡುವ ಮಹಾದೇವಿ ಮತ್ತು ತಾಳದ ಮಾಕಜ್ಜಿಯರನ್ನು ದೇವರ ಬಸವಿಯರೆಂದು ಕರೆದಿದೆ (ಎ.ಕ. xii, ಗುಬ್ಬಿ, ೨೯, ಸಂಪಿಗೆ ಕ್ರಿ.ಶ. ೧೩೫೦). ಕನ್ಯೆಯರನ್ನು ದೇವಸ್ಥಾನಗಳಿಗೆ ಸೂಳೆಯರಾಗಿ ಸೇವೆಸಲ್ಲಿಸಲು ದಾನವಾಗಿ ನೀಡುತ್ತಿದ್ದರು. 'ದೇವರ ತೊತ್ತು' ಎಂದು ಇವರನ್ನು ಕರೆಯಲಾಗಿದೆ.

ಸೂಳೆಯರ ವಾಸಸ್ಥಾನಕ್ಕೆಂದು ಸೂಳೆಗೇರಿಗಳಿರುತ್ತಿದ್ದವು. ದೇವಾಲಯಕ್ಕೆ ಸಂಬಂಧಿಸದ ಸೂಳೆಯರ ಕೇರಿ ದೇವಾಲಯದ ಸಮೀಪದಲ್ಲಿರುತ್ತಿತ್ತು. ಈ ಸ್ಥಳವನ್ನು 'ಪುರ' ಅಥವಾ 'ದೇವರಾಪುರ'ಎಂದು ಕರೆಯಲಾಗಿದೆ. ಸೂಳೆಗೇರಿಗೆ ದಾನಗಳನ್ನು ಕೊಡುತ್ತಿದ್ದ ಉಲ್ಲೇಖವುಂಟು ; ಸೂಳೆಯರ ತರಬೇತಿಗಾಗಿ 'ನಾಗವಾಸ'ವೆಂಬ ತರಬೇತಿ ಶಾಲೆಗಳಿರುತ್ತಿದ್ದವು. 'ಆ ಸೂಳೆಗೇರಿಯ ಕೆಲಬಲದೊಳು ನಾಗಾವಾಸದ ಕೇರಿಗಳೊಪ್ಪಿದವು ...' ಎಂಬ ಉಲ್ಲೇಖವನ್ನು (ಎ.ಕ. iii ಮಂಡ್ಯ, ಬಸರಾಳು ಕ್ರಿ.ಶ. ೧೨೩೫) ಗಮನಿಸಬಹುದು. ಸೂಳೆಯರು ದಾನದತ್ತಿಗಳನ್ನು ನೀಡುತ್ತಿದ್ದರು. 'ಸೂಳೆದೆರ' ಎಂಬ ತೆರಿಗೆಯನ್ನು ಅವರಿಗೆ ಹಾಕಲಾಗುತ್ತಿತ್ತು. 'ಗಣಿಕಾಧ್ಯಕ್ಷ' ಎಂಬ ಅಧಿಕಾರಿಯನ್ನು ನೇಮಿಸಲಾಗಿದ್ದ ಸಂಗತಿಯನ್ನು ಕೌಟಿಲ್ಯನ ಅರ್ಥಶಾಸ್ತ್ರ ತಿಳಿಸುತ್ತದೆ.

'ತೊತ್ತು' ಪದ್ಧತಿ ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿತ್ತು. ಸಾಮಾನ್ಯ ವರ್ಗದ ಬಡ ಹೆಣ್ಣುಗಳು ತೊತ್ತಾಗಿ ಜೀವನ ಸಾಗಿಸುತ್ತಿದ್ದರು. 'ತೊತ್ತುದೆರ' ಕೂಡ ಹಾಕಲ್ಪಡುತ್ತಿದ್ದುದನ್ನು ಶಾಸನ ಉಲ್ಲೇಖಿಸಿದೆ ('ಎ.ಕ. iv ಹುಣಸೂರು, ೧೩೭, ಧರ್ಮಾಪುರ).

ಧಾರ್ಮಿಕ ಕ್ಷೇತ್ರದಲ್ಲಿ ಹೆಣ್ಣು ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಅಪರೂಪದ ಉದಾಹರಣೆಗಳು ಶಾಸನದಲ್ಲಿ ದೊರೆಯುತ್ತವೆ. ಕಂತಿಯರು, ಶ್ರಾವಕಿಯರುಗಳ ಉದಾಹರಣೆಯನ್ನು ನೋಡಬಹುದು. ನಿಷಧಿ ಮರಣ ಹೊಂದಿದ ಜೈನೆಯರಿದ್ದಾರೆ. 'ಕುಮಾರ ಪಂಡಿತ ದೇವರ ಗುಡ್ಡಿ ಪೆಕ್ಕಮಸೆಟ್ಟಿಯ ಹೆಂಡತಿ ಮಲ್ಲವೆಯ ನಿಷಧಿ' (ಎ.ಕ. viii, ಸಾಗರ ೧೭೧ ಹರಕೆರೆ ಕ್ರಿ.ಶ. ೧೨೪೯)ಯ ಉದಾಹರಣೆಯನ್ನು ನೋಡಬಹುದು. ಹೆಣ್ಣುಮಕ್ಕಳಿಗೂ ಸ್ಮಾರಕಗಳನ್ನು ನಿಲ್ಲಿಸಿದ ಉದಾಹರಣೆಗಳಿವೆ.

ಆಶ್ರಯ ನೀಡಿದ ರಾಜನ ರಕ್ಷಣೆ, ಊರಳಿವು, ಪೆಣ್ಬುಯ್ಯಲು ಮುಂತಾದ ಅನೇಕ ಸಾಹಸ ಕಾರ್ಯಗಳಲ್ಲಿ ಮೃತರಾದ ವೀರರ ಪತ್ನಿಯರು ಸಹಗಮನ ಮಾಡುತ್ತಿದ್ದುದು ಮತ್ತು ಅವರ ಸ್ಮರಣಾರ್ಥ 'ಮಾಸ್ತಿಕಲ್ಲು'ಗಳನ್ನು ನಿಲ್ಲಿಸುತ್ತಿದ್ದುದು ಶಾಸನ ಕ್ಷೇತ್ರದಲ್ಲಿ ಹೇರಳವಾಗಿ ಲಭ್ಯವಾಗುತ್ತದೆ.

### ವಿದ್ಯಾಭ್ಯಾಸ :

ಪ್ರಾಚೀನ ಕಾಲದಿಂದಲೂ ವಿದ್ಯಾಭ್ಯಾಸಕ್ಕೆ ವ್ಯವಸ್ಥಿತವಾದ ಕ್ರಮವೊಂದು ರೂಢಿಯಲ್ಲಿ ಇದ್ದಿತೆಂಬುದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಕ್ರಿ.ಪೂರ್ವ ಮೂರನೆಯ ಶತಮಾನದ ಹೊತ್ತಿಗಾಗಲೆ ಬೌದ್ಧವಿಹಾರಗಳು ವಿದ್ಯಾಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದುದಕ್ಕೆ ದಾಖಲೆಗಳು ದೊರೆಯುತ್ತವೆ. ಬೌದ್ಧ ಭಿಕ್ಷುಭಿಕ್ಷುಣಿಯರಿಗೆ ಮಾತ್ರ ಸೀಮಿತವಾಗಿದ್ದ ಈ ಕೇಂದ್ರಗಳು ಕ್ರಮೇಣ ಇತರರ ಪ್ರವೇಶಕ್ಕೂ ಅವಕಾಶ ಮಾಡಿಕೊಟ್ಟವು. ಬೌದ್ಧರಲ್ಲಿದ್ದ ಈ ವಿದ್ಯಾಕೇಂದ್ರಗಳ ಪ್ರೇರಣೆಯಿಂದ ಹಿಂದೂಗಳು

ವ್ಯವಸ್ಥಿತ ವಿದ್ಯಾಕೇಂದ್ರಗಳನ್ನು ರೂಪಿಸಿಕೊಂಡರು ಎಂದು ಡಾ. ಅಲ್ಟೇಕರ್ ಅಭಿಪ್ರಾಯಪಡುತ್ತಾರೆ. ಹಿಂದೂಗಳಲ್ಲಿ ಇಂಥ ವಿದ್ಯಾಕೇಂದ್ರಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಣೆಗೆ ತೊಡಗಿದ್ದು ಕ್ರಿ.ಶ. ೯ ನೆಯ ಶತಮಾನದಿಂದೀಚೆಗೆ.

ಕರ್ನಾಟಕದಲ್ಲಿ ವಿದ್ಯಾಕೇಂದ್ರಗಳ ಪಾತ್ರವನ್ನು ವಹಿಸಿದ್ದು 'ದೇವಸ್ಥಾನಗಳು'. ದೇವಸ್ಥಾನಗಳಿಗೂ ಮೊದಲು ವಿದ್ಯಾಭ್ಯಾಸ ಗುರುಗಳ ಮನೆಗಳಲ್ಲಿಯೇ ನಡೆಯುತ್ತಿತ್ತು. ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕಥೆ ಇದನ್ನು ಸಮರ್ಥಿಸುತ್ತದೆ. ಕ್ರಿ.ಶ. ೭ ನೇ ಶತಮಾನಕ್ಕಿಂತಲೂ ಹಿಂದೆ ವಿದ್ಯಾಭ್ಯಾಸ ಗುರುಮನೆಯಲ್ಲಿ ನಡೆಯುತ್ತಿತ್ತು. ಪ್ರಾಚೀನ ಕರ್ನಾಟಕದ ಶಾಸನಗಳಲ್ಲಿ ಗುರುಕುಲ ಪದ್ಧತಿಯನ್ನು ಕುರಿತ ಮಾಹಿತಿ ಲಭ್ಯವಾಗುವುದಿಲ್ಲ.

ವಿದ್ಯಾದಾನವು 'ಅಗ್ರಹಾರ', 'ದೇವಸ್ಥಾನ' ಅಥವಾ 'ಮಠ ಬ್ರಹ್ಮಪುರಿ', 'ಘಟಿಕಾಸ್ಥಾನ' ಎಂಬ ನಾಲ್ಕು ಕೇಂದ್ರಗಳಲ್ಲಿ ನಡೆಯುತ್ತಿತ್ತು. ಬ್ರಾಹ್ಮಣರಿಗೆ ಗ್ರಾಮಗಳನ್ನು ದಾನವಾಗಿ ನೀಡುವ ಪದ್ಧತಿ ಇತ್ತು. ಹೀಗೆ ದಾನವಾಗಿ ನೀಡಲ್ಪಟ್ಟ ಗ್ರಾಮ-ಭಾಗವೇ ಅಗ್ರಹಾರ. ಅಗ್ರಹಾರದಲ್ಲಿ ಇರುತ್ತಿದ್ದುದು ಬ್ರಾಹ್ಮಣ ವರ್ಗ. ಇವರನ್ನು 'ಮಹಾಜನ' ಎಂದೂ ಕರೆಯಲಾಗುತ್ತಿತ್ತು. ಇವರಲ್ಲದೆ ಇತರ ವರ್ಗದವರ ವಾಸ್ತವ್ಯವೂ ಇರುತ್ತಿತ್ತು. ಈ ಅಗ್ರಹಾರಗಳು ವೈದಿಕ ಸಂಪ್ರದಾಯದ ವಿದ್ಯಾಕೇಂದ್ರಗಳಾಗಿ ವರ್ತಿಸಿವೆ. 'ಕಿರಿಯ ಪಂದಿಗೊಳು ಎಂಬ ಅಗ್ರಹಾರವನ್ನು ವರ್ಣಿಸುತ್ತ ಅದು ವಿದ್ವಾಂಸರಿಂದಲೂ, ಅಧ್ಯಯನದಲ್ಲಿ ತೊಡಗಿರುವ ವಿದ್ಯಾರ್ಥಿಗಳ ಉದ್ಘೋಷದಿಂದಲೂ ಕೂಡಿತ್ತು ಎಂದು ಒಂದು ಶಾಸನ ಹೇಳುತ್ತದೆ (ಬಿ.ಕೆ. ಐ, ii, ೧೪೭, ಕ್ರಿ.ಶ. ೧೦೮೯). ಅಧ್ಯಯನ ಮತ್ತು ಅಧ್ಯಾಪನಕ್ಕೆ ಅನುಕೂಲವಾಗಲೆಂದು ಆ ಗ್ರಾಮಗಳಿಗೆ ಸಾಕಷ್ಟು ದತ್ತಿಗಳನ್ನು ಬಿಡಲಾಗುತ್ತಿತ್ತು. 'ವ್ಯಾಖ್ಯಾನದ ಉಪಾಧ್ಯಾಯರಿಗೆ ಎಂಟು ಗದ್ಯಾಣ, ಪುರಾಣ ಹೇಳುವ ಭಟ್ಟರಿಗೆ ಎಂಟು ಗದ್ಯಾಣ, ಋಗ್ವೇದ ಮತ್ತು ಯಜುರ್ವೇದಗಳನ್ನು ಬೋಧಿಸುವ ಉಪಾಧ್ಯಾಯರಿಗೆ ತಲಾ ಆರು ಗದ್ಯಾಣಗಳನ್ನು ಬಿಟ್ಟುಕೊಟ್ಟ ವಿಷಯವನ್ನು ಶಾಸನವೊಂದು (ಎಸ್.ಐ.ಐ. ix, i, ೧೭೫, ಕ್ರಿ.ಶ. ೧೧೦೭) ತಿಳಿಸುತ್ತದೆ. ಸತ್ರಗಳಿಲ್ಲದ ಅಗ್ರಹಾರಗಳಲ್ಲಿ ವಿದ್ಯಾರ್ಥಿಗಳು ಭಿಕ್ಷಾ ವೃತ್ತಿಯನ್ನು ಅವಲಂಬಿಸಿ ವ್ಯಾಸಂಗ ಮುಂದುವರೆಸುತ್ತಿದ್ದರು.

"ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ ಬ್ರಹ್ಮಪುರಿ". ಅಗ್ರಹಾರಗಳಿಗಿಂತ ಬ್ರಹ್ಮಪುರಿಗಳ ಸಂಖ್ಯೆ ಕಡಿಮೆ. ಬ್ರಹ್ಮಪುರಿಗಳಲ್ಲೂ ಬ್ರಾಹ್ಮಣ ವರ್ಗವೇ ಪ್ರಧಾನ ವಾಸಿಕರಾಗಿದ್ದರು. ಅಗ್ರಹಾರದ ಬ್ರಾಹ್ಮಣರಿಗಿದ್ದ ಅಧಿಕಾರ ಬ್ರಹ್ಮಪುರಿಯ ಜನರಿಗೆ ಇರುತ್ತಿರಲಿಲ್ಲ. ರಾಜರು ದಂಡನಾಯಕರು ಬ್ರಹ್ಮಪುರಿಗಳನ್ನೂ ಸ್ಥಾಪಿಸುತ್ತಿದ್ದರು. ಪುಲಿಗೆರೆಯಲ್ಲಿ 'ಬದ್ದೆಗ ಬ್ರಹ್ಮಪುರಿ' ಎಂಬ ಹೆಸರಿನ ಬ್ರಹ್ಮಪುರಿಯನ್ನು ಸ್ಥಾಪಿಸಿ ವಿಷಯ ಪ್ರಸ್ತಾಪಿತವಾಗಿದೆ (ಇ.ಐ. xv, ಪು. ೭೫, ಕ್ರಿ.ಶ. ೯೨೦). ಅಗ್ರಹಾರಗಳಲ್ಲಿ ಬ್ರಾಹ್ಮಣರು ವಾಸಿಸುತ್ತಿದ್ದ ಭಾಗಗಳನ್ನು ಬ್ರಹ್ಮಪುರಿಗಳೆಂದು ಕೆಲವು ಶಾಸನಗಳು ಕರೆದಿವೆ (ಬಿ.ಕೆ.ಐ. I, ii, ೧೬೩, ಕ್ರಿಶ. ೧೧೧೩), ವಿದ್ಯಾಭ್ಯಾಸದ ದೃಷ್ಟಿಯಿಂದ ಬ್ರಹ್ಮಪುರಿಗಳ ಕೊಡುಗೆ ಮಹತ್ವದ್ದೇನಲ್ಲ.

ದೇವಸ್ಥಾನಗಳು ವಿದ್ಯಾಕೇಂದ್ರಗಳಾಗಿ ಮಹತ್ವದ ಸ್ಥಾನವನ್ನು ಪಡೆದಿವೆ. ದೇವಸ್ಥಾನದ ಯತಿಗಳು ವೈಯಕ್ತಿಕವಾದ ತಮ್ಮ ಅಧ್ಯಾತ್ಮ ಸಾಧನೆಯ ಜೊತೆ ವಿದ್ಯಾದಾನದ ಕೈಂಕರ್ಯವನ್ನೂ ಕೈಗೊಂಡಿದ್ದರು. ಭಕ್ತರು ದೇವಸ್ಥಾನದ ಪೂಜಾದಿಗಳಿಗೆ ದತ್ತಿ ಬಿಡುವಂತೆ ದೇವಸ್ಥಾನದಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿಯೂ ದತ್ತಿಗಳನ್ನು ಬಿಡುತ್ತಿದ್ದರು. ದೇವಸ್ಥಾನಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿ ಸಮೂಹವನ್ನು 'ವಿದ್ಯಾರ್ಥಿ ತಪೋಧನ'ರು ಮತ್ತು 'ವಿದ್ಯಾರ್ಥಿ ಮಾಣಿ'ಯರು ಎಂದು ಎರಡು ಭಾಗವಾಗಿ ವಿಭಾಗಿಸಿ ನೋಡಬಹುದಾಗಿದೆ (ಇ.ಸಿ. xi ಚಿತ್ರದುರ್ಗ ೭೭, ಕ್ರಿ.ಶ. ೯೪೦). ವಿದ್ಯಾರ್ಥಿ ತಪೋಧನರು ನೈಷ್ಠಿಕ ಬ್ರಹ್ಮಚಾರಿಗಳು. ಅಜೀವ ಪರ್ಯಂತ ಬ್ರಹ್ಮಚರ್ಯ ಕೈಗೊಂಡ ಇವರು ವಿದ್ಯಾಭ್ಯಾಸದ ನಂತರ ಬೇರೆ ಬೇರೆ ಮಠಗಳಲ್ಲಿ 'ಸ್ಥಾನಪತಿ'ಗಳಾಗುತ್ತಿದ್ದರು. ವಿದ್ಯಾರ್ಥಿ ಮಾಣಿಯರೆಂದರೆ, ಆ ದೇವಾಲಯದಲ್ಲಿ ವ್ಯಾಸಂಗ ಮುಗಿಸಿದ ನಂತರ ಗೃಹಸ್ಥರಾಗುತ್ತಿದ್ದವರು.

ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನಿಸಿ ಆಯಾ ದೇವಾಲಯಗಳಿಗೆ ದತ್ತಿಗಳನ್ನು ಬಿಡಲಾಗುತ್ತಿತ್ತು. ಒಂದು ದೇವಾಲಯಕ್ಕೆ ವಿದ್ಯಾರ್ಥಿಗಳ ಜೀವನಕ್ಕಾಗಿ ನೀಡಿದ ದತ್ತಿಗಳ ವಿವರ ಹೀಗಿದೆ ಗಮನಿಸಿ -

| | | |
|---|---|---|
| ಉಪ್ಪು ಎಣ್ಣೆಗಳಿಗೆ | - | ೧೬ ಗದ್ಯಾಣ |
| ಹದಿನಾರು ಬಟ್ಟೆಗಳಿಗೆ | - | ೧೨ ಗದ್ಯಾಣ |
| ಎಂದಿರಿಂಗೆ (ಎಂದಿರು = ಅಕ್ಕಿತುಪ್ಪ ಇತ್ಯಾದಿ ಪದಾರ್ಥ) | - | ೪ ಗದ್ಯಾಣ |
| ಅಪರ ಪಕ್ಷದ ಪಂಚಮಯ ಭೋಜನಕ್ಕೆ | - | ೨ ಗದ್ಯಾಣ |
| ತಟ್ಟೆಗಳಿಗೆ | - | ೨ ಗದ್ಯಾಣ |
| ಉಪ್ಪಿನ ಕಾಯಿಗೆ | - | ೨ ಗದ್ಯಾಣ |

ತರಗತಿಗಳು ದೇವಸ್ಥಾನದಲ್ಲಿಯೇ ನಡೆಯುತ್ತಿದ್ದಂತೆ ತಿಳಿದುಬರುತ್ತದೆ.

ಬಳ್ಳಿಗಾವೆಯ ಕೇದಾರೇಶ್ವರ ಮಠ ಅಥವಾ ಕೋಡಿಮಠ ಅತ್ಯಂತ ಪ್ರಸಿದ್ಧವಾಗಿದ್ದ ಒಂದು ವಿದ್ಯಾಕೇಂದ್ರ. ಈ ಮಠವು ೧೧ ನೇ ಶತಮಾನದ ಉತ್ತರಾರ್ಧದಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಮಠದ ಮೂಲ ಸ್ಥಾಪಕನಾದ ಕೇದಾರೇಶ್ವರನು 'ವಿದ್ಯಾಬ್ಧಿ' ಎಂಬ ಬಿರುದಿನಿಂದ ಗೌರವಿಸಲ್ಪಟ್ಟಿದ್ದನು. ಕೇದಾರೇಶ್ವರ ಮಠವು 'ಭವಾನಿ ಭವನದಂತೆ ಬ್ರಹ್ಮಚಾರಿ ಸದಾಚಾರ ಸಂಭಾವಿತಮುಂ ಕುರುಕ್ಷೇತ್ರದಂತೆ ಸರಸ್ವತೀ ವಿಳಸಿತಮುಂ ಖಚರ ಲೋಕದಂತೆ ವಿದ್ಯಾಧರಾಧೀಶ್ವರ ಪರಿವೃತ"ವೂ ಆಗಿತ್ತು. ಅಲ್ಲಿಯ ಗುರುಗಳು ತಮ್ಮ ವಿದ್ವತ್ತು ಮತ್ತು ಪಾಠ ಪ್ರವಚನದ ವೈಖರಿಯಿಂದ ವಿದ್ಯಾರ್ಥಿಗಳನ್ನು ಸೆಳೆಯುತ್ತಿದ್ದರು. ವೇದಗಳು, ವ್ಯಾಕರಣಗಳು, ಯೋಗಶಾಸ್ತ್ರಗಳು, ಪುರಾಣ, ಕಾವ್ಯ, ನಾಟಕ ಮುಂತಾದ ಶಾಸ್ತ್ರ-ಸಾಹಿತ್ಯಗಳ ಅಧ್ಯಯನ ಅಲ್ಲಿ ನಡೆಯುತ್ತಿತ್ತು. "ಮಠಗಳು ಮಧ್ಯಯುಗದ ಯೂರೋಪಿನ ಕ್ರೈಸ್ತ ವಿಹಾರಗಳನ್ನು ಹೋಲುತ್ತವೆ" ಎಂಬ ಮಾತು ಕರ್ನಾಟಕದ ಮಠಗಳಿಗೂ ಅನ್ವಯವಾಗುತ್ತದೆ.

ಘಟಿಕಾಸ್ಥಾನಗಳು ಕೂಡ ಪ್ರಮುಖವಾದ ವಿದ್ಯಾಕೇಂದ್ರಗಳು. 'ಧರ್ಮಕ್ಕೆ ನೆರ್ಮಮುಂ ಭೋಗಕ್ಕಾಗರಮುಮಾದ ಘಟಿಕಾಸ್ಥಾನ'ಗಳಿದ್ದಂತೆ (ಶಿವಮೊಗ್ಗ ಜಿಲ್ಲೆಯ ಉತ್ತರ ಭಾಗ) ಶಾಸನವೊಂದು (ಇಸಿ. vii, ಶಿಕಾರಿಪುರ, ಕ್ರಿ.ಶ. ೧೧೮೨) ತಿಳಿಸುತ್ತದೆ. ಹೂವಿನ ಬಾಗೆಯೆಂಬ ಅಗ್ರಹಾರ 'ಮಹಾಘಟಿಕಾಸ್ಥಾನ' ವಾಗಿತ್ತು (Inscriptions in North Karnataka and Kolhapur State ಪು. 16, 1127 A.D). ಗುಲಬರ್ಗ ಜಿಲ್ಲೆಯ ನಾಗಾವಿ ಇಂಥದೊಂದು ಘಟಿಕಾಸ್ಥಾನ. ಧಾರವಾಡ ಜಿಲ್ಲೆಯ ಹೊಟ್ಟೂರು ಹನ್ನೊಂದನೇ ಶತಮಾನದಲ್ಲಿ. ಒಂದು ಘಟಿಕಾಸ್ಥಾನವಾಗಿ ಮೆರೆಯುತ್ತಿತ್ತು. "ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕೂಡಿ ಚರ್ಚೆ ನಡೆಸುತ್ತಿದ್ದ ಮತ್ತು ಮಹಾವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ಸಾಹಿತ್ಯದಲ್ಲಿ ಅತ್ಯುತ್ತಮ ಜ್ಞಾನವನ್ನು ಪಡೆಯಲು ಸಾಧ್ಯವಾಗಿದ್ದ ಶ್ರೇಷ್ಠತಮ ಸಂಸ್ಥೆಯೇ ಘಟಿಕಾಸ್ಥಾನ" ಎಂಬ ಒಂದು ಅಭಿಪ್ರಾಯವಿದೆ. ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನವಾದ ಘಟಿಕಾಸ್ಥಾನ ಗುಲಬರ್ಗಾ ಜಿಲ್ಲೆಯ 'ನಾಗಾವಿ'ಯದು. ಅಲ್ಲಿ ಆರು ಜನ ಉಪಾಧ್ಯಾಯರು ಒಬ್ಬ ಸರಸ್ವತೀ ಭಂಡಾರಿ (Librarian) ಮತ್ತು ೨೦೦ ವಿದ್ಯಾರ್ಥಿಗಳು ಇದ್ದರು. ಅಧ್ಯಾಪಕರಲ್ಲಿ ಮೂವರು 'ವೇದಮನೋದಿಸುವ'ವರು; ಒಬ್ಬರು 'ಭಟ್ಟದರ್ಶನ (ಕುಮಾರಿಲಭಟ್ಟನ ದರ್ಶನ); ಒಬ್ಬರು 'ನ್ಯಾಸ' (ವ್ಯಾಕರಣಕ್ಕೆ ಸಂಬಂಧಿಸಿದ ವ್ಯಾಖ್ಯಾನ); ಮತ್ತೊಬ್ಬರು 'ಪ್ರಾಭಾಕರ' (ಪ್ರಭಾಕರ ಎಂಬ ಮೀಮಾಂಸಕನ)ಕ್ಕೆ ವ್ಯಾಖ್ಯಾನ ಹೇಳುತ್ತಿದ್ದರು. 'ಘಟಿಕಾ' ಎಂಬ ಪದಕ್ಕೆ 'ಮಣ್ಣಿನ ಪಾತ್ರೆ' ಎಂಬ ಒಂದು ಅರ್ಥವಿದೆ. ಕಾಲವನ್ನು ನಿರ್ಧರಿಸಲು ರಂಧ್ರವಿರುವ ಮಣ್ಣಿನ ಪಾತ್ರೆಯನ್ನು ಉಪಯೋಗಿಸಲಾಗುತ್ತಿತ್ತು. ಇದರಲ್ಲಿ ನೀರು ಅಥವಾ ಮರಳನ್ನು ತುಂಬಿ ಅದು ಸುರಿಯುವ ಸಮಯವನ್ನು

ಆಧರಿಸಿ ಕಾಲವನ್ನು ಅರಿಯುತ್ತಿದ್ದರು. ಈ ಬಗೆಯ ಕಾಲಮಾಪನ ಯಂತ್ರಗಳು ಘಟಿಕಾಸ್ಥಾನಗಳಲ್ಲಿ ಇರುತ್ತಿದ್ದುದಕ್ಕೆ ಶಾಸನಗಳಲ್ಲಿ ಆಧಾರಗಳು ದೊರೆಯುತ್ತವೆ.

ವಿದ್ಯಾಭ್ಯಾಸ ಮಾಡಿಸುವಾಗ 'ಓಂ ನಮಃ ಸಿದ್ಧಂ' ಎಂದು ಹೇಳಿಸಿ ಅಕ್ಷರಾಭ್ಯಾಸ ಮಾಡಿಸುವ ಪದ್ಧತಿಯಿತ್ತು. ವಿದ್ಯಾರ್ಥಿಯ ನಿಜವಾದ ವಿದ್ಯಾಭ್ಯಾಸ ಆರಂಭವಾಗುತ್ತಿದ್ದುದು ಅವನ ಉಪನಯನ ಸಂಸ್ಕಾರದ ನಂತರ ಎಂದು ತಿಳಿಯಲಾಗಿತ್ತು. ಉಪನಯನ ಎಂದರೆ ಗುರುವಿನ ಬಳಿಗೆ ಕರೆದುಕೊಂಡು ಹೋಗುವುದು ಎಂದರ್ಥ. ತಾಳುಗುಂದದ ಶಾಸನವೊಂದರಲ್ಲಿ ವೇದ್ಯಾಧ್ಯಯನ ಮುಂತಾದ ಶಿಕ್ಷಣವನ್ನು ನೀಡುವುದರ ಜೊತೆಗೆ 'ಕನ್ನಡಕ್ಷರ ಸಿ(ಶಿ)ಕ್ಷೆ' ದತ್ತಿಬಿಟ್ಟ ಪ್ರಸಂಗವಿದೆ. ಇದರಿಂದ ಅಕ್ಷರಾಭ್ಯಾಸದಿಂದ ವಿದ್ಯಾಭ್ಯಾಸ ಮೊದಲಾಗುತ್ತಿತೆಂದು ಭಾವಿಸಲು ಅವಕಾಶವಿದೆ. 'ಕನ್ನಡುಪಾಧ್ಯ' ಎಂಬ ಪದಪ್ರಯೋಗ (ಇ.ಸಿ. vii ಶಿಕಾರಿಪುರ, ಕ್ರಿಶ. ೧೧೫೮)ವನ್ನು ನೋಡಿದರೆ ಕನ್ನಡ ಅಕ್ಷರಗಳನ್ನು ಹೇಳಿಕೊಡುತ್ತಿದ್ದ ಗುರುವಿಗಿದ್ದ ಹೆಸರು ಇದು ಎಂದು ಊಹಿಸಬಹುದಾಗಿದೆ. 'ಭಟ್ಟವೃತ್ತಿ' ಎಂಬ ದತ್ತಿಯನ್ನು ಬಿಟ್ಟ ಪ್ರಸ್ತಾವನ್ನು ಶಾಸನಗಳು ಮಾಡಿವೆ. ಪ್ರೌಢ ವ್ಯಾಸಂಗದ ವಿದ್ಯಾರ್ಥಿಗಳಿಗಾಗಿ ನೀಡುವ ದತ್ತಿಯಿದು. ಮಹಾದೇವ ಚಮೂಪತಿಯು ಇಟ್ಟಗಿಯಲ್ಲು ಮಹಾದೇವನ ದೇವಾಲಯವನ್ನು ಮಾಡಿಸಿ, ಇತರ ದತ್ತಿಗಳ ಜೊತೆಗೆ 'ಭಟ್ಟವೃತ್ತಿ'ಗೂ ದತ್ತಿ ಬಿಟ್ಟ ಪ್ರಸ್ತಾಪವಿದೆ (ಇಐ. xiii, ಪು. ೪೧, ಕ್ರಿ.ಶ. ೧೧೧೨).

ಭಟ್ಟವೃತ್ತಿಗೆ ಸಂಬಂಧಿಸಿದ ವಿವರಗಳು ಕನ್ನಡ ಶಾಸನದಲ್ಲಿ ದೊರೆಯುವುದು ವಿರಳ. ಈ ವೃತ್ತಿಯನ್ನು ಪಡೆಯುವಾತ ಬಹುದೊಡ್ಡ ವಿದ್ವಾಂಸನಾಗಿರಬೇಕಿತ್ತು ಎಂಬುದು ಮುಖ್ಯವಾಗಿ ಗಮನಿಸಬೇಕಾದ ಸಂಗತಿ. ತಮಿಳುನಾಡಿನ ಚಿಂಗಲಪೇಟೆ ಜಿಲ್ಲೆಯ ಕ್ರಿ.ಶ. ೯೯೯ ರ ಶಾಸನವೊಂದು ಭಟ್ಟ ವೃತ್ತಿಯನ್ನು ಸ್ವೀಕರಿಸುವವನ ಅರ್ಹತೆಯನ್ನು ಪಟ್ಟಿಮಾಡಿಕೊಟ್ಟಿದೆ.

೧. ಅವನು ಸಾಮವೇದಿಯ ಮಗನಾಗಿರಬೇಕು.

೨. ಅದೇ ಊರಿನವನಾಗಿರ ಕೂಡದು, ಬೇರೆ ಊರಿನಿಂದ ಬಂದು ನೆಲೆಸಿದವನಾಗಿರಬೇಕು.

೩. ಎರಡು ವೇದಗಳನ್ನೂ ಸರಾಗವಾಗಿ ಬೋಧಿಸಲು ಶಕ್ತನಾಗಿರಬೇಕು.

೪. ಅಷ್ಟಾಧ್ಯಾಯಿಯನ್ನೂ, ಅಲಂಕಾರ ಶಾಸ್ತ್ರವನ್ನೂ ಬೋಧಿಸಲು ಸಮರ್ಥನಿರಬೇಕು.

೫. ಇಪ್ಪತ್ತು ಅಧ್ಯಾಯಗಳ ಮೀಮಾಂಸಾ ಶಾಸ್ತ್ರವನ್ನು ಬೋಧಿಸುವ ಸಾಮರ್ಥ್ಯವಿರಬೇಕು.

೬. ನಾಲ್ವರು ವಿದ್ಯಾರ್ಥಿಗಳನ್ನು ಆರಿಸಿಕೊಂಡು, ಅವರಿಗೆ ದಿನಕ್ಕೆ ಒಂದು ಹೊತ್ತು ಊಟವನ್ನು ಕೊಟ್ಟು ಮೇಲಿನ ವಿಷಯಗಳನ್ನು ಬೋಧಿಸಿ ಅವುಗಳಲ್ಲಿ ಪರಿಣತರನ್ನಾಗಿ ಮಾಡಿ ಕಳುಹಬೇಕು.

ಭಟ್ಟ ವೃತ್ತಿಗಳನ್ನು ಅಗ್ರಹಾರಗಳ ಮಹಾಜನಗಳ ಸಭೆಗಳು ನಿರ್ವಹಿಸುತ್ತಿದ್ದವು.

ವೇದಗಳು, ವೇದಾಂಗಗಳು, ವೇದೋಪಾಂಗಗಳು ವೇದಾಧ್ಯಯನದ ವಿಷಯಗಳಾಗಿದ್ದವು. ವೇದಗಳನ್ನು ಭಾಗಶಃ ಅಧ್ಯಯನ ಮಾಡುವುದನ್ನು 'ವೇದಖಂಡಿಕ'ವೆಂದು ; ಅದನ್ನು ಪಾಠ ಹೇಳುವವನ್ನು 'ಖಂಡಿಕೋಪಾಧ್ಯಾಯ'ನೆಂದೂ, ಅಂತಹ ವಿದ್ಯಾರ್ಥಿಯನ್ನು 'ಖಂಡಿಕ ವಿದ್ಯಾರ್ಥಿ' ಎಂದು ಕರೆಯಲಾಗುತ್ತಿತ್ತು.

ಬ್ರಾಹ್ಮಣರು ಸ್ವಲ್ಪಮಟ್ಟಿಗೆ ಕ್ಷತ್ರಿಯರೂ ವೇದಾಧ್ಯಯನ ಮಾಡುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ವ್ಯಾಕರಣ, ತರ್ಕ, ಜ್ಯೋತಿಷ, ಪುರಾಣ, ಭರತಶಾಸ್ತ್ರ, ವಾತ್ಸ್ಯಾಯನನ ಕಾಮಸೂತ್ರ, ಸ್ಮೃತಿಗಳು, ಷಡ್ದರ್ಶನಗಳು ಅಭ್ಯಾಸದ ವಿಷಯಗಳಾಗಿದ್ದವು.

ಕಷ್ಟಕರವಾದ ಗ್ರಂಥಗಳಿಗೆ ಸಂಸ್ಕೃತದಲ್ಲಿ ವ್ಯಾಖ್ಯಾನಗಳನ್ನು ರಚಿಸಲಾಗುತ್ತಿತ್ತು. ಸಂಸ್ಕೃತ ಗ್ರಂಥಗಳಿಗೆ ಕನ್ನಡದಲ್ಲಿ ವ್ಯಾಖ್ಯಾನ ಬರೆಯುವ ಸಂಪ್ರದಾಯವೂ ಇತ್ತು. (ಇ.ಸಿ. viii, ನಗರ, ೫೭, ಕ್ರಿ.ಶ. ಸು. ೧೦೭೭).

ಕ್ಷತ್ರಿಯರು ಮುಖ್ಯವಾಗಿ ಯುದ್ಧ ಮತ್ತು ಆಡಳಿತಕ್ಕೆ ಸಂಬಂಧಿಸಿದ ವಿದ್ಯೆಯನ್ನು ಕಲಿಯುತ್ತಿದ್ದರು. ಹಲವರು ಶಾಸ್ತ್ರ ಜ್ಞಾನವನ್ನೂ ಪಡೆದ ರಾಜರಿದ್ದರು. ಗಜಶಾಸ್ತ್ರ, ಹಯಶಾಸ್ತ್ರ, ಧನುರ್ವಿದ್ಯೆಗಳಲ್ಲಿ ಕ್ಷತ್ರಿಯರು ಪರಿಣತಿ ಪಡೆಯುತ್ತಿದ್ದರು. ಸಂಗೀತ ವೈದ್ಯಗಳ ಶಿಕ್ಷಣವೂ ನಡೆಯುತ್ತಿತ್ತು. ರತ್ನ ಪರೀಕ್ಷೆಯಂತಹ ವಿದ್ಯೆಗಳು ಕಲಿಯಲ್ಪಡುತ್ತಿದ್ದವು.

ಕುಂಬಾರಿಕೆ, ನೇಕಾರಿಕೆ, ವ್ಯಾಪಾರ, ವೈದ್ಯ ಮೊದಲಾದ ವೃತ್ತಿಸಂಬಂಧಿ ವಿದ್ಯೆಯ ಕಲಿಕೆ ಇತ್ತು. ಇದು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಕುಟುಂಬದವರ ಮೂಲಕ ಸಾಗುತ್ತಿತ್ತು. ಶೂದ್ರರು ಈ ವಿದ್ಯೆಗಳನ್ನು ಕಲಿಯಲು ಅಭ್ಯಂತರವಿರಲಿಲ್ಲ. ಶಿಲ್ಪಶಾಸ್ತ್ರವೂ ಇಂತಹ ಪಾರಂಪರ್ಯ ವಿದ್ಯೆಯಾಗಿ ಕಲಿಯಲ್ಪಡುತ್ತಿತ್ತು.

ಸ್ತ್ರೀಯರು ವಿದ್ಯಾಭ್ಯಾಸದಲ್ಲಿ ಪಾಲ್ಗೊಳ್ಳುತ್ತಿದ್ದುದು ವಿರಳ. ಸ್ತ್ರೀಯರು ಅಧ್ಯಯನ ನಡೆಸುತ್ತಿದ್ದ ಯಾವ ಗುರುಕುಲಗಳ ಹೆಸರೂ ಲಭ್ಯವಾಗುವುದಿಲ್ಲ. ಆದರೂ ಸ್ತ್ರೀಯರು ವಿದ್ಯೆಗಳನ್ನು ಕಲಿತ ಬೆರಳೆಣಿಕೆಯ ಉದಾಹರಣೆಗಳು ಸಿಗುತ್ತವೆ. ಜನಸಾಮಾನ್ಯರಿಗಿಂತ ರಾಜಮನೆತನದ ಮತ್ತು ಶ್ರೀಮಂತರ ಸ್ತ್ರೀಯರು ವಿದ್ಯೆಯ ಸೌಲಭ್ಯವನ್ನು ಪಡೆದಿದ್ದರು. ವೇದೋಪನಿಷತ್ತುಗಳ ಕಾಲದಲ್ಲಿಯೇ ಸ್ತ್ರೀ ವಿದ್ಯೆ ಕಲಿತ ಆಧಾರಗಳಿದ್ದರೂ ಅದರ ಪ್ರಮಾಣ ಪ್ರಭಾವ ತೀರ ಗೌಣವಾಗಿಯೇ ಇದೆ. ಕಂತಿಯೇ (ಹನ್ನೆರಡನೆ ಶತಮಾನ) ಕನ್ನಡದ ಮೊದಲ ಕವಯಿತ್ರಿ. ಆನಂತರ ವಚನಕಾರ್ತಿಯರಿದ್ದಾರೆ. ಹೊನ್ನಮ್ಮನಂತಹ ಕೆಲವು ಹೆಸರುಗಳನ್ನು ನೋಡಬಹುದು.

## ಸಾರ್ವಜನಿಕ ಚಟುವಟಿಕೆಗಳು :

ತನ್ನ ಜೀವನವನ್ನು ಹಸನಾಗಿಟ್ಟುಕೊಳ್ಳುವವನು ಉತ್ತಮ ವ್ಯಕ್ತಿ. ಇದರೊಂದಿಗೆ ಇತರ ಜೀವನವೂ ಹಸನಾಗಿರಲು ನೆರವಾಗುವವನು ಅತ್ಯುತ್ತಮ ವ್ಯಕ್ತಿ. ವ್ಯಕ್ತಿಯ ಜೀವನ ಹೆಚ್ಚು ಸಾರ್ಥಕವಾಗುವುದೇ ಅವನು ಪರರಿಗೆ ಉಪಕಾರಿಯಾದಾಗ ಮಾತ್ರ. ಈ ಜೀವ ಇರುವುದೇ ಪರೋಪಕಾರಾರ್ಥವಾಗಿ ಎಂಬ ಮಾತೊಂದಿದೆ. "ಪರೋಪಕಾರಮಿದಂ ಶರೀರಂ..." ಎಂಬ ಆರ್ಯೋಕ್ತಿಯನ್ನು ನೀವು ಕೇಳಿರಬಹುದು. ಸಾರ್ವಜನಿಕರಿಗೆ ಉಪಯೋಗವಾಗುವ ಯಾವುದೇ ಚಟುವಟಿಕೆಯನ್ನೂ ನಾವು ಪರೋಪಕಾರವೆಂಬ 'ಮೌಲ್ಯ'ವಾಗಿ ಸ್ವೀಕರಿಸಿ ಗೌರವಿಸಬಹುದು. ಇದೊಂದು 'ಧರ್ಮ' ಕಾರ್ಯ. ಇಂಥ ಧರ್ಮಕಾರ್ಯಗಳನ್ನು ಎಸಗಿದ ಅನೇಕ ಉದಾಹರಣೆಗಳು ಶಾಸನಗಳಲ್ಲಿ ಹೇರಳವಾಗಿ ದೊರೆಯುತ್ತವೆ. ರಾಜ ಮಹಾರಾಜ ಸಾಮಂತ ಮಾಂಡಳಿಕ ಅಧಿಕಾರಿ ಶ್ರೀಮಂತ ಗಂಡು ಹೆಣ್ಣು ಬಡವರೆನ್ನದೆ ಎಲ್ಲರೂ ಈ ಧರ್ಮಕಾರ್ಯಗಳಲ್ಲಿ ನಿರತರಾಗಿ ಮೆರೆದ ಉದಾಹರಣೆಗಳು ಸಾಲು ದೀಪಗಳಂತೆ ನಮಗೆ ಸಾರ್ಥಕದಾರಿ ತೋರುತ್ತ ನಿಂತಿವೆ.

ಧರ್ಮವೆಂದರೆ ಮತಧರ್ಮವಲ್ಲ "ಎಲ್ಲರಿಗೂ ಸಮಾನವಾದ, ಎಲ್ಲ ಧರ್ಮಗಳೂ ಒತ್ತಿ ಹೇಳುವ ದಾನ, ಕೆರೆಯನ್ನು ಕಟ್ಟಿಸುವುದು, ದೇವಸ್ಥಾನ ನಿರ್ಮಾಣ ಇತ್ಯಾದಿ ಪುಣ್ಯ ಕಾರ್ಯಗಳು". ಚಟ್ಟಲದೇವಿಯು 'ಧರ್ಮಂ ಪ್ರಾಗೇವ ಚಿಂತಯೇತ್' (=ನಾವು ಮೊದಲು ಧರ್ಮವನ್ನು ಚಿಂತಿಸಬೇಕು) ಎಂದು ಭಾವಿಸಿ "ಕೆರೆ, ಬಾವಿ, ಬಸದಿ, ದೇಗುಲ, ಅರವಂಟಿಗೆ, ತೀರ್ಥ, ಚಕ್ರ, ಆರವೆ (.... ತೋಪು) 'ಮೊದಲಾದಱಕೆಯ ಧರ್ಮಾದಿಗಳ'ನ್ನು ಮಾಡಿಸಿದಂತೆ ಶಾಸನ ದಾಖಲೆ ಒದಗಿಸುತ್ತದೆ. (ಇ.ಸಿ. VI, ಮೂಡಗೆರೆ ೩೬, ಕ್ರಿ.ಶ. ೭೪೯). "ಕಲಿಯುಗದಲ್ಲಿ ಧರ್ಮವೆಂಬ ವೃಷಭವು ಕೆಸರಲ್ಲಿ ಹೂತುಹೋಗಿದೆ" ಎಂದು ನಂಬಿದ್ದರು (ಅಲ್ಲೇ) ; ಉದಾರಿಗಳು ದಾನವನ್ನು ಮಾಡಿ ಔದಾರ್ಯವನ್ನು ಪ್ರಕಟಿಸಿದಾಗ 'ಕಾಳಂ ಕೃತಯುಗಮುಮಾಯ್ತು' ಎಂದು ಉದ್ಗಾರವನ್ನು ಕೆಲವೆಡೆ ತೆಗೆದಿರುವುದುಂಟು (ಇ.ಸಿ. VII, ಶಿಕಾರಿಪುರ, ೧೩೬, ಕ್ರಿ.ಶ. ೧೦೬೮).

ದಾನಧರ್ಮಗಳನ್ನು ಮಾಡಿದರೆ ಪುಣ್ಯಫಲ ಪ್ರಾಪ್ತಿಯಾಗುವುದೆಂದು ನಂಬಲಾಗುತ್ತಿತ್ತು. ಹಾಗಾಗಿ ರಾಜರು ಶ್ರೀಮಂತರು ಉದಾರವಾಗಿ ದಾನ ಧರ್ಮಗಳನ್ನು ಮಾಡಿ ದತ್ತಿಗಳನ್ನು ಬಿಡುತ್ತಿದ್ದರು. ತುಲಾಪುರುಷ, ಹಿರಣ್ಯಗರ್ಭ, ಕಲ್ಪವೃಕ್ಷ, ಗೋಸಹಸ್ರ ಮೊದಲಾದ ಮಹಾದಾನಗಳನ್ನು ಮಾಡಿದ ಉಲ್ಲೇಖಗಳನ್ನು ಶಾಸನಗಳು ಒಳಗೊಂಡಿವೆ. ಅಗ್ಗಿಷ್ಟಿಕೆ, ಪ್ರಪೆ, ಸತ್ರ ಮತ್ತು ಆರಾಮಗಳನ್ನು ಮಾಡಿಸಿದವನಿಗೆ ಪರಮಸಿದ್ಧಿ ಲಭಿಸುವುದೆಂದು ಅಭಿಲಷಿತಾರ್ಥ ಚಿಂತಾಮಣಿ (೧.೭೨) ಹೇಳುತ್ತದೆ.

**ಆರಾಮ :** ಸಾರ್ವಜನಿಕ ಉದ್ಯಾನವನಗಳನ್ನು 'ಆರಾಮ'ವೆಂದು ಕರೆಯಲಾಗುತ್ತದೆ. ಆರವೆಗಳನ್ನು ಧರ್ಮಾರ್ಥವಾಗಿ ಬಿಟ್ಟುಕೊಟ್ಟ ವಿಚಾರಗಳನ್ನು ಕೆಲವು ಶಾಸನಗಳಿಂದ ತಿಳಿಯಬಹುದಾಗಿದೆ. ಚಟ್ಟಲ ದೇವಿ ಆರವೆಯನ್ನು ಮಾಡಿಸಿದ ಉಲ್ಲೇಖ (ಇಸಿ VIII, ನಗರ, ೩೫, ಕ್ರಿ.ಶ. ೧೦೭೭)ವಿದೆ. ನಾಣಿಮಯ್ಯನೆಂಬಾತ ತನ್ನ ಆರವೆಯಲ್ಲಿ ಅರವಟ್ಟಿಗೆಯನ್ನಿಟ್ಟಿದ್ದನೆಂಬ ಪ್ರಸ್ತಾಪವಿದೆ. (ಬಿ.ಕೆ.ಐ ೧೯೬, ಕ್ರಿ.ಶ. ೧೧೨೧.)

**ಅಗ್ಗಿಷ್ಟಗೆ :** ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ, ಉದಾಹರಣೆಗೆ ಊರಿನ ಯಾರಾದರೂ ಒಬ್ಬರ ಮನೆಯಲ್ಲಿ, ಮಠದಲ್ಲಿ ಅಥವಾ ದೇವಸ್ಥಾನದಲ್ಲಿ ಅಗ್ನಿಯನ್ನು ಸದಾಕಾಲ ಕಾಯ್ದುಕೊಳ್ಳುವ ವ್ಯವಸ್ಥೆ ಇರುತ್ತಿತ್ತು. ಇಲ್ಲಿಂದ ಪ್ರತಿಯೊಬ್ಬರೂ ಪ್ರತಿನಿತ್ಯ ಅಗ್ನಿಯನ್ನು ಕೊಂಡೊಯ್ಯುತ್ತಿದ್ದರು. ಹೀಗೆ ಅಗ್ನಿಯನ್ನು ಕಾಯ್ದುಕೊಳ್ಳುವ ಕಾಯಕ ಅಥವಾ ಜವಾಬ್ದಾರಿಯನ್ನು ಹೊತ್ತವರಿಗೆ ದತ್ತಿಗಳನ್ನು ಬಿಡುತ್ತಿದ್ದ ದಾಖಲೆಗಳಿವೆ. "ಅಗ್ನಿಷ್ಟಗೆಯ ಧರ್ಮಕ್ಕೆಂದು ಬಿಟ್ಟ ಕಟ್ಟಲೆಯ ಕೆಯಿಕಮ್ಮ ಮೂವತ್ತು. ಅಗ್ಗಿಷ್ಟಿಗೆಯುಂ ಮಠಮುಂ ರಕ್ಷಿಸಿದವರ್ಗೆ ಅನಂತ ಪುಣ್ಯ. ಅಗ್ನಯೇ ನಃ" (ಇಸಿ. vii, ಶಿಕಾರಿಪುರ ೭೪, ಕ್ರಿ.ಶ. ೧೦೧೦). ಮತ್ತೊಂದು ಶಾಸನದಲ್ಲಿ (ಇ.ಐ. XII, ಪು ೨೭೩, ಸು.ಕ್ರಿ.ಶ. ೧೦೮೦) ಮುದ್ದಲ ದೇವಿ ಎಂಬಾಕೆ ಶಿವಪುರದ ಅಗ್ರಹಾರದ ಜನಗಳಿಗೆ ಆರು ಗದ್ಯಾಣಗಳನ್ನು ಕೊಟ್ಟು, ಅದರ ಬಡ್ಡಿಯಿಂದ ಅಗ್ಗಿಷ್ಟೆಯನ್ನು ನಡೆಸಿದ ಉಲ್ಲೇಖವಿದೆ. ಇತರ ದತ್ತಿಗಳ ಜೊತೆಗೆ ಅಗ್ಗಿಷ್ಟಗೆಗೆಂದೂ ಹಣವನ್ನು ದಾನವಾಗಿ ನೀಡುತ್ತಿದ್ದರು. ತುಂಬುಳವೆಂಬ ಅಗ್ರಹಾರದಲ್ಲೂ ವಿದ್ಯಾದಾನಕ್ಕೆ ಕೊಟ್ಟ ದತ್ತಿಯ ಜೊತೆಯಲ್ಲಿ 'ಅಗ್ಗಿಷ್ಟಗೆ ಬ್ರಾಹ್ಮಣ'ನಿಗೆ ಎರಡು ಗದ್ಯಾಣ ನೀಡಿದ ವಿಚಾರವಿದೆ (ಎಸ್.ಐ.ಐ. IX, i, ೧೭೫, ಕ್ರಿ.ಶ. ೧೧೦೭). ಬೆಂಕಿಯನ್ನು ಕಾಯ್ದುಕೊಳ್ಳಲು ಮತ್ತು ಅದನ್ನು ಊರಿನವರಿಗೆ ವಿತರಣೆ ಮಾಡಲು ಒಬ್ಬ ವ್ಯಕ್ತಿಯನ್ನು ನೇಮಿಸಲಾಗುತ್ತಿತ್ತು ಎಂಬ ಅಂಶ ಇದರಿಂದ ವ್ಯಕ್ತವಾಗುತ್ತದೆ. ಬೆಂಕಿಪೊಟ್ಟಣಗಳು ಚಾಲ್ತಿಗೆ ಬರುವ ಮೊದಲು ಊರಿನ ಯಾರಾದರೊಬ್ಬರು ತಮ್ಮ ಮನೆಯಲ್ಲಿ ಬೆರಣಿಗಳ ಸಹಾಯದಿಂದ ಬೆಂಕಿಯನ್ನು ಆರದಂತೆ ನೋಡಿಕೊಳ್ಳುತ್ತಿದ್ದ ವ್ಯವಸ್ಥೆ ಇದ್ದಂತೆ ತಿಳಿಯುತ್ತದೆ.

**ಅರವಟ್ಟಿಗೆ :** ದೂರದ ಊರುಗಳಿಗೆ ಪ್ರಯಾಣ ಬೆಳಸುವ ಪ್ರಯಾಣಿಕರ ನೀರಿನ ದಾಹವನ್ನು ಇಂಗಿಸುವ ಸಲುವಾಗಿ ಇರುತ್ತಿದ್ದ ನೀರ್ದಾಣಗಳೇ ಅರವಟ್ಟಿಗೆಗಳು. ಸಾಮಾನ್ಯವಾಗಿ ಸತ್ರ ಅಥವಾ ದೇವಸ್ಥಾನಗಳಿಗೆ ಇವು ಹೊಂದಿಕೊಂಡಿರುತ್ತಿದ್ದವು. ಪೆರ್ಗಡೆನೊಕ್ಕಯ್ಯ 'ಅರವಂಟಿಗೆ'ಗಳನ್ನಿಡಿಸಿದ ಉಲ್ಲೇಖವಿದೆ (ಇ.ಸಿ vii, ಶಿವಮೊಗ್ಗ ೧೦, ಸು.ಕ್ರಿ.ಶ. ೧೦೮೫). ಅರವಟ್ಟಿಗೆಯಲ್ಲಿ ನೀರೆರೆಯಲು ಬಾಲಕರನ್ನು ನೇಮಿಸುತ್ತಿದ್ದ ಸಂಗತಿಯನ್ನು ಶಾಸನಗಳು ತಿಳಿಸುತ್ತವೆ. ನೀರೆರೆಯು ನವಯೌವನೆಯರೂ ಇರುತ್ತಿದ್ದ ವಿಚಾರವನ್ನು ನಮ್ಮ ಕಾವ್ಯಗಳು ದಾಖಲಿಸಿವೆ. ಅರವಟ್ಟಿಗೆಗಳನ್ನು ನಡೆಸಲು ತಗಲುವ ವೆಚ್ಚವನ್ನು ಭರಿಸಲು ದತ್ತಿಗಳನ್ನು ಬಿಡಲಾಗುತ್ತಿತ್ತು. ತಾಳಗುಂದದ ಅಗ್ರಹಾರದಲ್ಲಿ "ಅರವಂಟಿಗೆಯಲಂಬಲಿಗಂ ನೀರೆಱೆವ ಮಾಣಿಗಂ" ದಾನಗಳನ್ನು ನೀಡಿದ ವಿಚಾರವಿದೆ (ಇ.ಸಿ. VII, ಶಿಕಾರಿಪುರ, ೧೯೨, ಕ್ರಿ.ಶ. ೧೧೦೭).

ಅರವಟ್ಟಿಗೆಗಳು ವರ್ಷದ ಎಲ್ಲಾ ಮಾಸಗಳಲ್ಲೂ ಇರದೆ ಬೇಸಿಗೆಯ ಕಾಲದಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಂತೆ ಕಾಣುತ್ತದೆ. ಚೈತ್ರ ಮಾಸದಿಂದ ಮೊದಲುಗೊಂಡು ಮೂರು ನಾಲ್ಕು ತಿಂಗಳ ಅವಧಿಯನ್ನು ಶಾಸನಗಳು ಸೂಚಿಸುತ್ತವೆ. ಪ್ರವಾಸಿಗರಿಗೆ,

ದಾಹಪರಿಹರಿಸಿಕೊಳ್ಳಲು ಅಗತ್ಯವಿರುವ ನೀರನ್ನು ಕೊಡುವ ಮಂಟಪಗಳನ್ನು ಕಟ್ಟುವುದು ಶ್ರೇಯಸ್ಕರವೆಂದು 'ಭವಿಷ್ಯೋತ್ತರ ಪುರಾಣ' ಶಿಫಾರಸ್ಸು ಮಾಡುತ್ತದೆ.

**ಸತ್ರ :** ಪ್ರಯಾಣಿಕರಿಗೆ ಅನ್ನಾಹಾರಗಳನ್ನು ವಿಶ್ರಾಂತಿಯನ್ನು ಒದಗಿಸುವ ಧಾಮಗಳೇ ಸತ್ರಗಳು. ಅನ್ನದಾನ ಶ್ರೇಷ್ಠ ದಾನಗಳಲ್ಲಿ ಒಂದೆಂದು ಪರಿಗಣಿತವಾಗಿತ್ತು. ಅದನ್ನು 'ಮೌಲ್ಯ'ವಾಗಿ ಗೌರವಿಸಲಾಗುತ್ತಿತ್ತು. ಚಂದಗೌಡ ಎಂಬಾತನನ್ನ 'ಅನ್ನದಾನ ಸಂಪೂರ್ಣ'ನೆಂದು ಶಾಸನ ಸ್ತುತಿಸಿದೆ (ಇ.ಸಿ. VI, ಕಡೂರು ೨೮, ಕ್ರಿ.ಶ. ೧೧೫೪). ತಾಳಗುಂದದ ಕೇಶವ ದಂಡನಾಯಕ ದೇವಸ್ಥಾನಕ್ಕೆ ಭೂದಾನಾದಿಗಳನ್ನು ಮಾಡಿ ಆ ದೇವಸ್ಥಾನದ ಅಂಗವಾಗಿದ್ದ ಸತ್ರಕ್ಕೂ ಭೂಮಿಯನ್ನು ದತ್ತಿಬಿಟ್ಟುದನ್ನು ತಿಳಿಯಬಹುದು (ಇ.ಸಿ. vii ಶಿಕಾರಿಪುರ, ೧೮೫, ಕ್ರಿ.ಶ. ೧೧೫೮). ನಾಗವರ್ಮಯ್ಯ ಎಂಬಾತ ತಾನು ಕಟ್ಟಿಸಿದ್ದ ದೇವಾಲಯಕ್ಕೆ ಹೊಂದಿಕೊಂಡಂತೆ ಒಂದು ಸತ್ರವನ್ನೂ ಮಾಡಿಸಿದನಂತೆ (ಬಿ.ಕೆ.ಐ. I, i, ೮೪, ಕ್ರಿ.ಶ. ೧೦೯೪). ಸತ್ರಗಳು ದೇವಸ್ಥಾನಗಳಲ್ಲದೆ ಬೇರೆ ಪ್ರತ್ಯೇಕ ಮನೆಗಳಲ್ಲಿಯೂ ಇರುತ್ತಿದ್ದವು (ಇಸಿ. iv, ಕೊಪ್ಪ ೩, ಕ್ರಿ.ಶ. ಸು. ೧೧೨೫..). ಪ್ರವಾಸಿಗರಿಗಲ್ಲದೆ ಮಠಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಿಗೂ ಸತ್ರಗಳು ಊಟದ ಮೂಲ ನೆಲೆಯಾಗಿದ್ದವು. ಸತ್ರಗಳಿಗೆ ಬಿಟ್ಟಿರುವ ದತ್ತಿಯನ್ನು ಆಧರಿಸಿ ಅಲ್ಲಿ ಊಟ ಮಾಡಬೇಕಾದವರ ಸಂಖ್ಯೆಗಳನ್ನು ನಿರ್ಧರಿಸಲಾಗುತ್ತಿತ್ತು. ಮಾಣಿಕಸೆಟ್ಟಿ ಎಂಬಾತ ಕೊಟ್ಟ ಅರವತ್ತು ಗಳೆಯ ಗದ್ದೆಯ ಭತ್ತದಿಂದ ಐದು ಹಬ್ಬಗಳೂ ಸೇರಿದಂತೆ ವರ್ಷದಲ್ಲಿ ಸಾವಿರದ ಇನ್ನೂರು ಜನರಿಗೆ ಸತ್ರದಲ್ಲಿ ಊಟದ ಅವಕಾಶವಿದ್ದಿತು (ಇ.ಸಿ. vii ಶಿಕಾರಿಪುರ, ೨೯೪, ಕ್ರಿ.ಶ. ೧೧೦೮).

ಸತ್ರದಲ್ಲಿ ಊಟ ಮಾಡುವ ಪ್ರತಿಯೊಬ್ಬ ಬ್ರಾಹ್ಮಣನಿಗೂ ಸಲ್ಲಬೇಕಾದ ವಸ್ತುಗಳ ವಿವರಗಳನ್ನುಳ್ಳ ಅಪರೂಪದ ಶಾಸನವಿದೆ (ಎಸ್.ಐ.ಐ. IX.i, ೨೪೫, ಕ್ರಿ.ಶ. ೧೧೪೬). ಅದರಲ್ಲಿ ಒಬ್ಬೊಬ್ಬ ಬ್ರಾಹ್ಮಣನಿಗೆ ಅಕ್ಕಿ ಐದು ಮಾನ, ಹೆಸರು ಒಂದು ಮಾನ, ತುಪ್ಪ ಎರಡು ಸೊಳಸಿಗೆ, ಮೊಸರು ಒಂದು 'ಬ', ಮಜ್ಜಿಗೆ ಒಂದು 'ಬ', ಅಡಕೆ ಎರಡು, ಎಲೆ ನಾಲ್ಕು - ಹೀಗೆ ಪ್ರತಿ ಹದಿನಾರು ಬ್ರಾಹ್ಮಣರಿಗೆ ಪಡಿ ಸಲ್ಲಬೇಕು ಎಂದಿದೆ. "ಕೆಲವು ಸತ್ರಗಳು ಬ್ರಾಹ್ಮಣರಿಗೆ ಮಾತ್ರಮೀಸಲಾಗಿದ್ದರೆ, ಇನ್ನು ಕೆಲವು ಸತ್ರಗಳಲ್ಲಿ ಎಲ್ಲ ಜಾತಿಯ ಜನರಿಗೆ ಅವಕಾಶವಿದ್ದಿತು. ಸತ್ರದಲ್ಲಿ ದವಸ ಧಾನ್ಯ ನೋಡಿಕೊಳ್ಳುತ್ತಿದ್ದವನು 'ದವಸಿಗ'ನೆಂದು ಒಂದು ಕಡೆ ಕರೆದಿದೆ. ಅಲ್ಲಿಯೇ ಸತ್ರದಲ್ಲಿ ಅಡುಗೆ ಮಾಡುವ ಹೆಂಗಸರ ಜೀವನೋಪಾಯಗಳಿಗೆ ಮತ್ತು ಅವರ ವಸ್ತ್ರಗಳಿಗೆ ಗದ್ಯಾಣಗಳನ್ನು ಬಿಟ್ಟುಕೊಟ್ಟ ವಿಷಯವಿದೆ (ಇಸಿ VII, ಶಿಕಾರಿಪುರ, ೧೮೫, ಕ್ರಿ.ಶ. ೧೧೫೮). ಉತ್ತರ ಭಾರತದಲ್ಲಿಯೂ ಸತ್ರಗಳು ದೇವಸ್ಥಾನಗಳಿಗೆ ಹೊಂದಿಕೊಂಡಂತೆ ಇದ್ದು ಪ್ರವಾಸಿಗರಿಗೂ, ಸಂಚಾರಿಗಳಾಗಿದ್ದ ವಿದ್ವಾಂಸರಿಗೂ, ಕುರುಡರಿಗೂ, ಅನಾಥರಿಗೂ ಅನ್ನವನ್ನು ರಕ್ಷಣೆಯನ್ನೂ ಕೊಡುತ್ತಿದ್ದುವು" (ಉಧೃತ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. -೪೪೮) ಸತ್ರಗಳ ಇರುವಿಕೆ ಅತಿಥಿ ಸತ್ಕಾರದ ವಿಸ್ತೃತ ರೂಪದಂತೆ ಕಾಣುತ್ತದೆ.

**ತಟಾಕ ನಿರ್ಮಾಣ :** ಮನುಷ್ಯನನ್ನೂ ಒಳಗೊಂಡಂತೆ ದನಕರುಗಳಾದಿಯಾಗಿ ಪಕ್ಷಿ ಸಂಕುಲಗಳಿಗೂ ನೀರಿನ ಸೌಕರ್ಯ ಒದಗಿಸಿಕೊಡುವ ಉದ್ದೇಶದಿಂದ ಕಟ್ಟಿಸುತ್ತಿದ ಜಲಾನಯನಗಳೇ ತಟಾಕಗಳು. 'ಕೆರೆ'ಗಳೆಂದೂ ಕರೆಯಬಹುದು. ತಟಾಕ ನಿರ್ಮಾಣ ಪುಣ್ಯ ಕಾರ್ಯಗಳಲ್ಲಿ ಒಂದಷ್ಟೇ ಅಲ್ಲ, ಶ್ರೇಷ್ಠವಾದುದು ಕೂಡ. ಸತ್ತವನ ಪ್ರೇತವು ಬಾಯಾರಿಕೆಯಿಂದ ಬಳಲುವುದು. ತಟಾಕ ನಿರ್ಮಾಣ ಮುಂತಾದ ಧರ್ಮಕಾರ್ಯಗಳಿಂದ ಅವನ ಬಾಯಾರಿಕೆ ಹಿಂಗುವುದು ಎಂದು ಜನ ನಂಬಿದ್ದರು (Economic conditions in South India, II, p-738). ತಟಾಕಗಳ ನಿರ್ಮಾಣ ಮಾಡಿ ಪಶುಪಕ್ಷಿ ಪ್ರಾಣಿಗಳ ಬಾಯಾರಿಕೆ ಹಿಂಗಿಸುವವನು ಅಶ್ವಮೇಧ ಯಾಗವನ್ನು ಮಾಡಿದ ಫಲವನ್ನು ಪಡೆಯುತ್ತಾನೆ ಎನ್ನುತ್ತದೆ ಮಹಾಭಾರತ. (ಅಲ್ಲೇ). ಹಳೆಯಬೀಡಿನ ಕೆರೆಯೊಂದಕ್ಕೆ ತೂಬನಿಕ್ಕಿಸಿದ ವಿನಯಾದಿತ್ಯ ಪೊಯ್ಸಳನನ್ನು "ಜೀವದಯೋಪೇತನ್" ಎಂದು ಹೊಗಳಿದ ಶಾಸನವಿದೆ (ಎಂ.ಎ.ಆರ್. (೧೯೨೯) ಪು. ೭೩, ಕ್ರಿ.ಶ. ೧೦೬೨). "ಕೆರೆಯನ್ನು ಕಟ್ಟಿಸಿದರೆ ತನಗೆ ಮಾತ್ರವಲ್ಲ, ತನ್ನ ತಾಯಿ ತಂದೆಗಳಿಗೂ ಪುಣ್ಯವು ಲಭಿಸುತ್ತದೆಯೆಂದು ನಾಣಿಮಯ್ಯ

ನಾಯಕ ಕೆರೆಗಳನ್ನು ಕಟ್ಟಿಸಿದ್ದಲ್ಲದೆ ಒಂದು ಹೊಕ್ಕರಣೆಯನ್ನೂ (ಸಂ. ಪುಷ್ಕರಣಿ) ಅಗೆಯಿಸಿದ ವಿಷಯ ಒಂದು ಶಾಸನದಲ್ಲಿದೆ" (ಬಿ.ಕೆ.ಐ. I. ii, ೧೯೬, ಕ್ರಿಶ. ೧೧೨೧). ಕೆರೆಯ ಜೀರ್ಣೋದ್ಧಾರ ಕಾರ್ಯ ಕೂಡ ಕೆರೆಯನ್ನು ಕಟ್ಟಿಸಿದ ಪುಣ್ಯಕ್ಕೆ ಸಮಾನವಾದುದಾಗಿತ್ತು. ತಾವು ಕಟ್ಟಿಸಿದ ದೇವಸ್ಥಾನಗಳಿಗೆ ತಮ್ಮ ಹೆಸರನ್ನಿಡುತ್ತಿದ್ದಂತೆ, ತಾವು ಕಟ್ಟಿಸಿದ ಕೆರೆಗಳಿಗೂ ತಮ್ಮ ಹೆಸರನ್ನಿಡುವ ಪರಿಪಾಠವಿತ್ತು. ಪಟ್ಟಣಸ್ವಾಮಿ ನೊಕ್ಕಯ್ಯನೆಂಬಾತ ಕಟ್ಟಿಸಿದ ಕೆರೆಗೆ 'ಪಟ್ಟಣ ಸ್ವಾಮಿಗೆಱೆ' ಎಂದು ಕರೆದ ಉಲ್ಲೇಖವಿದೆ (ಇಸಿ viii ನಗರ, ೫೮, ಕ್ರಿ.ಶ. ೧೦೬೨). ರಟ್ಟ ವಂಶದ ಸಾಮಂತ ಎಚೆಯಮ್ಮ 'ಹೆಸರಿನಲ್ಲಿ' 'ರಟ್ಟ ಸಮುದ್ರ'ವೆಂಬ ಕೆರೆಯ ನಿರ್ಮಾಣವಾಗಿದೆ (ಬಿಕೆಐ, I. i, ೭೪, ೧೦೪೧). ಕೆರೆಯನ್ನು ಸಾಮಾನ್ಯವಾಗಿ ರಾಜರು, ಅಧಿಕಾರಿಗಳು, ಶ್ರೀಮಂತರು, ಪ್ರಭಾವಶಾಲಿ ಸನ್ಯಾಸಿಗಳು ಕಟ್ಟಿಸುತ್ತಿದ್ದರು. ಚಿಲ್ಲುಕ ಭಟಾರ ಎಂಬ ಪ್ರಸಿದ್ಧ ಶೈವ ಸನ್ಯಾಸಿ ಐದು ಕೆರೆಗಳನ್ನು ಕಟ್ಟಿಸಿದ್ದನಂತೆ (ಇಸಿ xii, ಶಿರಾ ೯, ಕ್ರಿ.ಶ. ೧೦೬೨). ಮದುವೆ ಉಪನಯನ ಮೊದಲಾದ ಶುಭ ಸಂದರ್ಭಗಳಲ್ಲಿ ಬರುವ 'ಒಸಗೆದ್ರಮ್ಮ'ದಿಂದ ಕೆರೆಯ ರಕ್ಷಣೆ ಮಾಡುತ್ತಿದ್ದರು. ಅಲ್ಲದೆ ಪ್ರಾಯಶ್ಚಿತ್ತ ರೂಪದಲ್ಲಿ ಕೊಡುತ್ತಿದ್ದ ಹಣವೂ ಕೆರೆಯ ಜೀರ್ಣೋದ್ಧಾರಕ್ಕೆ ವಿನಿಯೋಗವಾಗುತ್ತಿತ್ತು. ಮನೆವೆರ್ಗಡೆ ದಂಡನಾಯಕ ವಾಮದೇವಯ್ಯನೆಂಬಾತ ಆ ಊರಿನ ದಂಡವೆಲ್ಲವೂ ಅದೇ ಕರೆಗೆ ಸೇರುವಂತೆ ಮಾಡುತ್ತಾನೆ. ತಪ್ಪು ಮಾಡಿದವರಿಗೆ ವಿಧಿಸಿದ ದಂಡ ತಟಾಕದ ರಕ್ಷಣೆಗೆ ವಿನಿಯೋಗವಾಗುತ್ತಿತ್ತು. 'ಕೆಱೆಗೆಂದುಂ ದಂಡವಾಗಿ ನಡೆವುದು ನಿಯತ' ಎಂಬ ಹೇಳಿಕೆಯನ್ನು (ಐ.ಎ. XII, ಪು. ೨೨೨, ಕ್ರಿ.ಶ. ೯೨೯-೩೦) ನೋಡಬಹುದು. ಕೆರೆಯನ್ನು ಕಟ್ಟಿಸುವಾಗ ಬಲಿ ಕೊಟ್ಟು ಅದನ್ನು ಉಳಿಸಿಕೊಳ್ಳುತ್ತಿದ್ದ ವದಂತಿಗಳಿವೆ. ವಿಜಯನಗರದ ಕೃಷ್ಣದೇವರಾಯ ಕಟ್ಟಿಸಿದ ಕೆರೆಗೆ ಅರವತ್ತು ಜನರನ್ನು ಬಲಿಕೊಡಲಾಯಿತೆಂದು ಪ್ರವಾಸಿಗರ ಹೇಳಿಕೆಗಳಿವೆ (Sewell : A Forgotten Empire, p. 163). ಹೀಗೆ ಬಲಿಯಾದ ವ್ಯಕ್ತಿಯನ್ನು ಕೆರೆಯ ರಕ್ಷಕ ದೇವತೆಯಾಗಿ ಗೌರವಿಸಲಾಗುತ್ತಿತ್ತು.

## 115.5 ಶಾಸನಗಳ ಸಾಹಿತ್ಯಕ ಗುಣ

ಶಾಸನಗಳು ಅಂದಂದಿನ ಕಾಲದ ಜನಜೀವನ ಕಟ್ಟುಕಟ್ಟಳೆ ರಾಜನೇಮಗಳನ್ನು ಒಳಗೊಂಡ ದಾಖಲೆಗಳಂತೆ ಕಂಡು ಬಂದರೂ ಕೆಲವು ಶಾಸನಗಳು ಅಪೂರ್ವ ಸಾಹಿತ್ಯಕ ಸೌಂದರ್ಯದಿಂದ ಕಂಗೊಳಿಸುತ್ತವೆ. ತನ್ನ ಕಾಲದ ಸಾಹಿತ್ಯ ನಿರ್ಮಿತಿಯ ಶಕ್ತಿಯನ್ನು ಅವು ಪ್ರತಿಬಿಂಬಿಸುತ್ತವೆ. ಆಯಾ ಕಾಲದ ಭಾಷೆ ಅದರ ಸ್ವರೂಪಗಳ ದರ್ಶನ ಮಾಡಿಸುತ್ತವೆ. ವಿವಿಧ ಛಂದೋ ರೂಪಗಳ ಪರಿಚಯ ಮಾಡಿಸುತ್ತವೆ. ಈ ಎಲ್ಲಾ ಕಾರಣಗಳಿಂದ ಶಾಸನಗಳು ಸಾಹಿತ್ಯಕ ಹಿನ್ನೆಲೆಯಿಂದಲೂ ಗಮನಿಸಬೇಕಾದ ಆಕರಗಳಾಗಿವೆ.

ನಮಗೆ ಮೊತ್ತಮೊದಲನೆಯದಾಗಿ ದೊರೆತಿರುವ ಹಲ್ಮಿಡಿ ಶಾಸನ ಒಂದು ಗದ್ಯ ಶಾಸನ. ಗಾತ್ರದಲ್ಲಿ ಚಿಕ್ಕದು. ಸಾಹಿತ್ಯಕ ಸೌಂದರ್ಯದ ದೃಷ್ಟಿಯಿಂದ ಪರಿಗಣನೆಗೆ ತೆಗೆದುಕೊಳ್ಳಬೇಕಾದುದೇನಲ್ಲವಾದರೂ ಅದು ಆ ಕಾಲದ ಭಾಷಿಕ ಸ್ವರೂಪ ತಿಳಿಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರ ನಂತರ ಸುಮಾರು ೭ನೆಯ ಶತಮಾನದ ಬಾದಾಮಿಯ ಶಾಸನ ಸಾಹಿತ್ಯಕ ಸೌಂದರ್ಯದಿಂದ ಕೂಡಿದೆ. ಇದರಲ್ಲಿ ಅಚ್ಚ ಕನ್ನಡದ ದೇಸಿ ಛಂದಸ್ಸಾದ 'ತ್ರಿಪದಿ'ಯ ಪ್ರಯೋಗವಿದೆ.

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ
......
ಕಟ್ಟಿದ ಸಿಂಗಮನ್ ಕೆಟ್ಟೊಡೇನೆಮಗೆಂದು
ಬಿಟ್ಟವೊಲ್ಕಲಿಗೆ ವಿಪರೀತಂಗಹಿತರ್ಕಳ್
ಕೆಟ್ಟರ್ ಮೇಣ್ ಸತ್ತರವಿಚಾರಮ್

ಕಪ್ಪೆ ಅರಭಟ್ಟನ ಶೌರ್ಯ ಪರಾಕ್ರಮ ಔದಾರ್ಯಗಳನ್ನು ಈ ಶಾಸನ ಅತ್ಯಂತ ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ತ್ರಿಪದಿಗಳಲ್ಲದೆ ರಗಳೆ, ವೃತ್ತ, ಕಂದ ಮೊದಲಾದ ಛಂದೋ ಬಂಧಗಳು ಶಾಸನಗಳಲ್ಲಿ ಪ್ರಯೋಗಗೊಂಡಿವೆ. ಚಂಪೂ ಪ್ರಯೋಗವೂ ಉಂಟು ಕ್ರಿ.ಶ. ೧೦೫೫ರಲ್ಲಿ ರಚಿತವಾದ ಕೋಗಳಿ ಶಾಸನದಲ್ಲಿ ರಗಳೆ ಪ್ರಯೋಗವಿದೆ. ಜೈನಯತಿ ರುದ್ರಶಕ್ತಿಯ ವರ್ಣನೆ ಹೀಗಿದೆ.

ಶ್ರೀಮದರುಹಚ್ಚರಣ ಸರಸಿರುಹ ಭೃಂಗನಂ
ಭೂಮಿ ಕೀರ್ತಿಸೆ ನೆಗಳಂ ಗುಣಗಣೋತ್ತುಂಗನಂ

ಇಟಗಿಯ ಶಾಸನ (ಕ್ರಿ.ಶ. ೧೧೧೨) "ರಮ್ಯವಾದ ವರ್ಣನೆಗಳಿಂದಲೂ, ಸಾಲಂಕೃತವಾದ ಶೈಲಿಯಿಂದಲೂ ಕೂಡಿ ಚಿಕ್ಕ ಚಂಪೂ ಕಾವ್ಯವೆಂಬಂತಿದೆ". ದೇವಾಲಯ ನಿರ್ಮಾಣದ ವಿಷಯ ಪ್ರಸ್ತಾಪವಿದೆ. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ರಚಿತವಾದ ಶಾಸನವಿದು. ಅದರಲ್ಲಿ ವಿಕ್ರಮಾದಿತ್ಯನ ಬಾಹುಬಲದ ವರ್ಣನೆ ಸೊಗಸಾಗಿ ಚಿತ್ರಿತವಾಗಿದೆ. ಭೂಮಿಯು ಅವನ ಪರಾಕ್ರಮಕ್ಕೆ ಶರಣಾಗಿ ಕೈಸೇರಿತೆಂಬ ಸಂಗತಿಯು ಶ್ಲೇಷೆಯಿಂದ ಹೇಳಲ್ಪಟ್ಟಿದೆ.

ಕಮಠಾಧೀಶನ ಬೆನ್ನೊಳಿರ್ದು ಫಣಿರಾಜೋದ್ಯತ್ಫಣಾಗ್ರಕ್ಕೆ ವಂ
ದು ಮಹೀ ಕಾಮಿನಿ ದಿಗ್ಗಜ ಬ್ರಜದ ಕುಂಭಾಗ್ರಂಗಳಂ ಮೆಟ್ಟಿ ವಿ
ಕ್ರಮ ಚಕ್ರೇಶನುದಗ್ರವಪ್ಪ ಭುಜಮಂ ಬಂದೇಱಿದಳ್ ರಾಗದಿಂ
ದಮಿದೇನುನ್ನತಮಾಯ್ತೊ ದಕ್ಷಿಣಭುಜಂ ಚಾಲುಕ್ಯ ಚಕ್ರೇಶನಾ

ಭೂದೇವಿಯು ಮೊದಲು ಕಮಠನ (ಆಮೆ) ಬೆನ್ನ ಮೇಲಿದ್ದಳು. ಅಲ್ಲಿಂದ ಆದಿಶೇಷನ ಹೆಡೆಯ ಮೇಲೆ ಬಂದಳು. ಅನಂತರ ದಿಗ್ಗಜಗಳ ಕುಂಭಾಗ್ರವನ್ನು ಮೆಟ್ಟಿದಳು. ಕೊನೆಯಲ್ಲಿ ಇವೆಲ್ಲವನ್ನೂ ಬಿಟ್ಟು ಚಾಲುಕ್ಯ ಚಕ್ರೇಶ್ವರನ ಭುಜವನ್ನು ಏರಿದಳಂತೆ!

ಎಂಥ ಸುಂದರವಾದ ಕಲ್ಪನೆ. ಶಾಸನಗಳಲ್ಲಿಯೂ ಇಂತಹ ಪ್ರತಿಭಾವಿಲಾಸ ಮೆರೆದಿದೆ. ಶಾಸನಗಳಲ್ಲಿ ವಿಷಯದ ವಿವರಕ್ಕೆ ಸ್ಥಳಾವಕಾಶ ತೀರಾ ಕಡಿಮೆ ಇರುತ್ತದೆ. ಹೇಳಬೇಕಾದ್ದನ್ನು ನೇರವಾಗಿ ಹೇಳಬೇಕಾದ ಅನಿವಾರ್ಯತೆ ಶಾಸನಗಳದ್ದು. ಹೀಗಿದ್ದೂ ಅವು ಕಾವ್ಯ ಸೌಂದರ್ಯದಿಂದ ಕೂಡಿರುವುದು ಶ್ಲಾಘನೀಯ. ಶಾಸನಗಳ ಸಾಹಿತ್ಯ ಬಹುಮಟ್ಟಿಗೆ ಸಾಮಾನ್ಯ ಅಕ್ಷರವಂತರಿಂದ ಸಿದ್ಧವಾಗುತ್ತಿದ್ದುದೇ ಹೆಚ್ಚು. ಕವಿಗಳೂ ಶಾಸನಕ್ಕೆ ಸಾಹಿತ್ಯ ಒದಗಿಸಿರುವರಾದರೂ ಅವು ಸಂಖ್ಯೆಯಲ್ಲಿ ಪ್ರಮಾಣದಲ್ಲಿ ಕಡಿಮೆಯೇ.

ಶಾಸನಗಳಲ್ಲಿ ಬಹುಪಾಲು 'ವೀರಗಲ್ಲು'ಗಳದ್ದು. 'ಪ್ರಶಸ್ತಿ ಶಾಸನ'ಗಳೂ ಉಂಟು. ಈ ಎರಡೂ ಬಗೆಯ ಸಸಾನಗಳಲ್ಲಿ ವೀರ ಪರಾಕ್ರಮ ಕುರಿತ ವರ್ಣನಾ ಭಾಗಗಳು ಹೆಚ್ಚಾಗಿ ಬರುತ್ತವೆ. ದಾನಿಯ, ರಾಜನ, ಅಧಿಕಾರಿಯ ಸ್ತುತಿಗಳಿಗೆ ಹೆಚ್ಚಿನ ಒತ್ತು ಇರುತ್ತದೆ. ಅವರ ಶೌಚ ಸತ್ಯ ದಾನಶೀಲತೆ ಪರನಾರಿ ಸೋದರತ್ವ ಇಂಥ ಗುಣಗಳ ಪ್ರಶಂಸೆ ಶಾಸನಗಳಲ್ಲಿ ಆದ್ಯತೆ ಪಡೆಯುತ್ತದೆ. ಈ ಕೆಲವು ಉದಾಹರಣೆಗಳನ್ನು ಗಮನಿಸಿ :

ತಕ್ಕೋಲದ ಯುದ್ಧದಲ್ಲಿ ಬೂತುಗ ತೋರಿದ ಪರಾಕ್ರಮ ಹೀಗಿದೆ :

ಉಱದಿದಿರಾನ್ತ ಚೋಳಚತುರಙ್ಗ ಬಲಙ್ಗಳನಟ್ಟಿ ಮುಟ್ಟಿ ತ
ಳ್ತಿಱಿವೆಡೆಗೊರ್ವರ ಪ್ರೌಢಮಿದಿರ್ಚುವ ಗಣ್ಡರನಾಮ್ಮೆವೆನ್ದು ಪೊ
ಟ್ಟಳಿಸುವ ಬೀರಮಂ ನೆಱೆಯೆ ಕಾಣಮೆ ಚೋಳನ ಸಕ್ಕಿಯಾಗೆ ತ
ಳ್ತಿಱಿದುದನಾಮೆ ಕಣ್ಡೆವೆನೆ - ಮೆಚ್ಚದೊರಾರ್ಸ್ವಗರ ತ್ರಿಣೇತ್ರನಂ

(ಉಲ್ಲೇಖ : ಸಾಹಿತ್ಯ ಸಂಶೋಧನೆ, ದ.ರಾ.ಬೇಂದ್ರೆ, ಪು. ೧೨೩, ೧೯೪೦)

ರಾಷ್ಟ್ರಕೂಟರ ಇಂದ್ರ ರಾಜನ (೧೦ ಶತ) ಮರಣವನ್ನು ಪ್ರಸ್ತಾಪಿಸುವ ಶಾಸನದಲ್ಲಿ ಅವನ ದಾನ, ಶಾಚ, ಶೌರ್ಯಗಳ ವರ್ಣನೆಯಿದೆ.

**ಕಿಡದ ಜನಕ್ಕೆ ತಾನೆ ಗುಱಿಯಾದ ಚಲಂ ನೆರೆದರ್ಥಿಗರ್ತ್ಥಮಂ**
**ಕುಡುವ ಚಲಂ ತೊದಳ್ನುಡಿಯದಿರ್ಪ ಚಲಂ ಪರವೆಣ್ಣೊಳೋತೊಡಂ**
**ಬಡದ ಚಲಂ ಶರಣ್ಗೆವರೆ ಕಾವಚಲಂ ಪರಸೈನ್ಯಮಂ ಪೆಱಿಂ**
**ಗೆಡೆಗುಡದಟ್ಟಿ ಕೊಲ್ವ ಚಲಮನಾಳ್ದ ಚಲಂ ಚಲದಂಕಕಾರನಾ**

ಬಿಜ್ಜರಸ ಮತ್ತು ಅವನ ತಮ್ಮ ಗೋನರಸರ ಪರಾಕ್ರಮದ ವರ್ಣನೆ ಮಾಡುವ ಶಾಸನವೊಂದಿದೆ (ಇಸಿ. VIII, ಸಾಗರ ೧೧೯). ವೀರರಸ ಪ್ರಧಾನವಾದ ವರ್ಣನೆ, ಗೋನರಸನನ್ನು ಕುರಿತು ಹೇಳುವ ಈ ಮಾತುಗಳನ್ನು ಗಮನಿಸಿ

**ತೊಡರ್ವ ವಿರೋಧಿಗೆಂಟೆರ್ದಯೇ ಮೀರುವ ವೈರಿಗೆ ಮೂಱು ಕಣ್ಣೆ ಮಾ**
**ರ್ನುಡಿವವನೇಂ ಚತುರ್ಭುಜನೇ ಮಚ್ಚರಿಪಣ್ಣಲೆ ಬರ್ಮನೊಳ್ಪರಂ**
**ಪಿಡಿದನೆ ಮೀಱಿ ಬಾಳ್ವಡವನೇಂ ಜವನೇ ಕಡಿಕೆಯ್ದು ಕಾದಲೆಂ**
**ದೊಡರಿಸುವಾತನೇಂ ಭುಜಗಮರ್ದನನೇ ಕಲಿ ಗೋನ ಭೂಪನೊಳ್**

ಮತ್ತೊಬ್ಬ ರಾಜ ಗೋವಿನ್ದರನನ್ನು ಸ್ತುತಿಸುವ ಪದ್ಯ ಹೀಗಿದೆ -

**ಪ್ರತಿಬಿಂಬಂ ರೂಪಿನೊಳ್ ಪೋಲ್ಕುಮೆ ಗುಣದೊಳದಾರ್ ಪೋಲ್ತಪರ್ ನಿನ್ನನೆಂಬೀ**
**ಸ್ತುತಿಯಂ ನಿಶ್ಚಯಿಸಿ ಗೋವಿನ್ದರ ಬೆಸೆಯದಿರ್ ಎನ್ತೆಂಬ ನಿನ್ನಂತೆ ನೋಡು**
**ನ್ನತಿಯೊಳ್ ಹೇಮಾಚಲಂ ಕ್ಷಂತಿಯೊಳವನಿತಳಂ ಮೇರೆಯೊಳ್ ವಾರ್ಧಿ ಶೌಚ**
**ಬ್ರತದೊಳ್ ಸಿನ್ಧೂದ್ಭವಂ ಸತ್ಯದೊಳಿನತನಯಂ ಶೌರ್ಯದೊಳ್ ಭೀಮಸೇನಂ**

"ಶಾಸನಗಳಲ್ಲಿ ರಾಜರ ಪ್ರಶಸ್ತಿ ಬಿರುದಾವಳಿಗಳನ್ನು ತಿಳಿಸುವ ಗದ್ಯ ಶೈಲಿ ಗಂಭೀರ ನಿನದದಿಂದ ಮೊಳಗುತ್ತದೆ. ಈ ಬಿರುದಾವಳಿಗಳು ರಾಜರ ಆಸ್ಥಾನಗಳಲ್ಲಿ ವಂದಿಗಳಿಬ್ಬರು ಒಬ್ಬರಾದಮೇಲೊಬ್ಬರು ಒಂದೊಂದು ಬಿರುದನ್ನು ಉಗ್ಗಡಿಸಿ ಹೊಗಳಲ ಕಲಿಸುವಂತೆ ಜೋಡಿಜೋಡಿಯಾಗಿದ್ದು ಲಯಬದ್ಧ ನುಡಿಕಟ್ಟುಗಳಿಂದ ಕೂಡಿ ವಿಶಿಷ್ಟವಾಗಿರುತ್ತದೆ. ಕಾಲಕ್ರಮದಲ್ಲಿ ಇವು ವಿಸ್ತಾರವಾಗುತ್ತ ಹೋಗುವುದಲ್ಲದೆ ಇಂಥ ಬಿರುದಾವಳಿಗಳನ್ನು ರಾಜರ ಸಾಮಂತರ ಅಧಿಕಾರಿಗಳ ದಾನ ಪಡೆದ ಮಹಿಮರ ಸ್ತುತಿಮಾಲಿಕೆಗಳಲ್ಲಿಯೂ ಕಾಣಬಹುದು" (ಶಾಸನ ಸಾಹಿತ್ಯ ಕಸಾಚ ಪು. ೨೮೦) ಈ ಎರಡು ಶಾಸನ ಭಾಗಗಳನ್ನು ಗಮನಿಸಿ - ಮೊದಲಿನದು ವಿಷ್ಣುವರ್ಧನನ ಬಿರುದಾವಳಿ, ಎರಡನೆಯದು ತಾಳಗುಂದದ ಮೂವತ್ತಿರ್ಚ್ಛಾಸಿರರ ಬಿರುದಾವಳಿ

೧. ಸಮಧಿಗತ ಪಂಚಮಹಾ ಶಬ್ದ ಮಹಾ ಮಂಡಳೇಶ್ವರಂ ದ್ವಾರಾವತಿ ಪುರವರಾಧೀಶ್ವರಂ ಯಾದವಕುಲಾಂಬರದ್ಯುಮಣಿ ಸಮ್ಯಕ್ತ್ವ ಚೂಡಾಮಣಿ ಮಲಪರ್ಗ್ಗೊಣ್ಡ ಚಲಕೆ ಆಳಿಂ ಮುನ್ನಿಱಿವ ಶೌರ್ಯಮಂ ಮೆಱೆವ ತಳಕಾಡುಗೊಂಡ ಗಂಡ ಪ್ರಚಂಡ.....

೨. ಸಮಸ್ತ ಭುವನ ಸಂಸ್ತೂಯಮಾನಾಶೇಷ ಲೋಕೈಕ ಪಿತಾಮಹ ಹಿರಣ್ಯಗರ್ಭ ಬ್ರಹ್ಮ ಸಂಸ್ಥಾಪಿತ ಶ್ರೀಮತ್ತ್ರೈಲೋಕ್ಯನಾಥ ಪ್ರಣಮೇಶ್ವ ದೇವಾಧಿಷ್ಠಿತ ವಿಶಿಷ್ಟಾಗ್ರಹಾರಾಧೀಶ್ವರರ್ ಅಹಿಚ್ಛತ್ರಸಮಾಗತರ್

ಇಂಥ ಬಿರುದಾವಳಿಗಳಲ್ಲೆಲ್ಲ ಸಂಸ್ಕೃತ ಮಯನಾದ ಭಾಷೆ ವಿಶೇಷವಾಗಿ ಬಳಕೆಯಾಗುವುದನ್ನು ಗಮನಿಸಿ.

ಅಚ್ಚಗನ್ನಡದ ಕಂಪು ಹೆಚ್ಚಾಗಿ ಕಾಣುವಂತಹ ರಚನೆಗಳೂ ಶಾಸನದಲ್ಲಿವೆ. ಪಾಂಡ್ಯದೊರೆ ತ್ರಿಭುವನ ಮಲ್ಲರಾಯ ಪಾಂಡ್ಯನು ಚಾಳುಕ್ಯರ ಸಾಮಂತನಾಗಿ ಆಳುತ್ತಿದ್ದಾಗ ಪಲ್ಲವರಾಯ ಬಿಳಿಚಿಯೆಪ್ಪತ್ತನ್ನಾಳುತ್ತಿದ್ದ ಕಾಲದಲ್ಲಿ ಕೇಶಿರಾಜ ದಂಡನಾಯಕ ಮತ್ತು ಜಾಕಿಯಬ್ಬೆಯರಿಗೆ 'ಇರುಗ' ಮಗನಾಗಿ ಹುಟ್ಟುತ್ತಾನೆ. ಅವನಿಗೆ ಆ ತಾಯಿ ಮೊಲೆಯುಣ್ಣಿಸುವ ಸಮಯದಲ್ಲಿ ಕಲಿಸಿದ ನಡತೆಯನ್ನು ಶಾಸನ ಹೀಗೆ ವರ್ಣಿಸುತ್ತದೆ (ಇ.ಸಿ. VII, ಚನ್ನಗಿರಿ, ೬೧)

**ನುಡಿವುದು ಸತ್ಯದೊಳ್ ನಡೆವುದುತ್ತಮ ಧರ್ಮದೊಳೊಳ್ಪಿನೇಳ್ಗೆಯಂ**
**ಪಿಡಿ ಪಿಡಿದಂತುಟಂ ಬಿಡದಿರೆಂದಿರುಗಂ ಮೊಲೆಯುಣ್ಬ ಕಾಲದೊಳ್**
**ತಡೆಯದೆ ಕೇಳುದಾತ್ತಗುಣ ನೀಂ ತಿಳಿಯೆಮ್ಮವನೆಂದು ಗಲ್ಲಮಂ**
**ಮಿಡಿಮಿಡಿದಂದು ತಾಯ್ ಕಲಿಸೆ ಕಲ್ತನಖಿಣ್ಣಿತ ಚಂಡ ವಿಕ್ರಮಂ**

ಮಹಾಕಾವ್ಯಗಳಲ್ಲಿ ಬಳಕೆಯಾಗುವ ಸಮುದ್ರ ವರ್ಣನೆ, ಪರ್ವತ, ಋತುಗಳ ವರ್ಣನೆ ಶಾಸನಗಳಲ್ಲಿ ದೊರೆಯುತ್ತದೆ. ಹದಿನೆಂಟು ವರ್ಣನೆಗಳಲ್ಲಿ ಒಂದಾದ 'ಪುರವರ್ಣನೆ'ಯು ಈ ಶಾಸನವನ್ನು ನೋಡಿ. ತಮ್ಮ ನಾಡು- ನುಡಿಗಳನ್ನು ಕುರಿತ ಅಭಿಮಾನ ಆ ಭಾಗದ ಜನರಲ್ಲಿ ಹೇಗೆ ದಟ್ಟವಾಗಿತ್ತೆಂಬುದನ್ನು ಇಂಥ ಪದ್ಯಗಳು ಧ್ವನಿಸುತ್ತವೆ. ಇಲ್ಲೊಂದು ಪದ್ಯವನ್ನು ನೋಡಿ. ಇದು 'ಇಟ್ಟಿಗೆ' ಎಂಬ ಪುರವೊಂದರ ವರ್ಣನೆ -

**ಇದು ಕನಕಾದ್ರಿಯಂತೆ ವಿಬುಧಾಶ್ರಿಯಮಿಂತಿದು ನೋಡಾ ನಾಗಾಲೋ**
**ಕದವೊಲನಂತ ಭೋಗಿಜನ ಸೇವಿತಮಿಂತಿದು ದುಗ್ಧವಾರ್ಧಿಯಂ**
**ದದೆ ಪುರುಷೋತ್ತಮ ಸ್ಥಿತಿಕರಂ ಧನದಾಚಳದಂದದಿಂದಮಿಂ**
**ತಿದುವೆ ಮಹೇಶ್ವರಾವಸಥಮೆನ್ನದರಾರೊ ತದಗ್ರಹಾರಮಂ**

ಶ್ಲೇಷಾಲಂಕಾರದಿಂದ ಪುರದ ವರ್ಣನೆಯಲ್ಲಿ ಇಲ್ಲಿ ಮಾಡಲಾಗಿದೆ.

ಶಾಸನಗಳು ಸ್ಥಳಾವಕಾಶದ ಅಭಾವದಿಂದಾಗಿ ಸಂಕ್ಷಿಪ್ತವಾಗಿರುವುದೇ ಹೆಚ್ಚು. ಆದರೆ ಕೆಲವು ಶಾಸನಗಳು ದೀರ್ಘವಾಗಿಯೂ ಇರುವುದುಂಟು. ಹೊಯ್ಸಳರ ಕಾಲದಲ್ಲಿ ಇಂತಹ ದೀರ್ಘ ಶಾಸನಗಳ ಸಂಖ್ಯೆ ಅಧಿಕವಾಗಿದೆ. ಇಂತಹ ದೀರ್ಘ ಶಾಸನಗಳಲ್ಲಿ ವರ್ಣನೆ - ವಿವರಣೆಗೆ ಹೆಚ್ಚಿನ ಅವಕಾಶವಿರುವುದರಿಂದ ಸಹಜವಾಗಿಯೇ ಅಂಥವೂ ಸಾಹಿತ್ಯಿಕ ಸೌಂದರ್ಯದಿಂದಲೂ ಗಮನ ಸೆಳೆಯುತ್ತವೆ. ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಆ ಊರಿನ ಹರಿಹರ ದೇವರನ್ನು ಪ್ರತಿಷ್ಠಾಪನೆ ಮಾಡಿದ ಸಂಗತಿಯನ್ನು ವರ್ಣಿಸುವ ಬೇಲೂರು ತಾಲೂಕಿನ ಕೊಡ್ಲೂರಿನ ಶಾಸನವನ್ನು ಇಂಥ ದೀರ್ಘ ಶಾಸನಕ್ಕೆ ಉದಾಹರಣೆಯಾಗಿ ನೋಡಬಹುದು.

ಸೊರಬದ ಒಂದು ಶಾಸನ (ಶಾಸನ ಪದ್ಯಮಂಜರಿ, ನಂ. ೬೩) ಚಮತ್ಕಾರಿಕ ಶೈಲಿಯಿಂದ ಕೂಡಿ ಚಟ್ಟಗಾವುಂಡನೆಂಬುವನ ಶೀಲ ಮತ್ತು ಚಾರಿತ್ರಗಳನ್ನು ವರ್ಣಿಸಿದೆ.

ಚಟ್ಟಂ ಪರವನಿತೆಯರಂ
ಮುಟ್ಟಂ ವಿತರಣಮಮರ ಭೂರುಹದೊಳ್ ಕೋ
ಡಿಟ್ಟಂ ಪಾಪದ ಪಥಮಂ
ಮೆಟ್ಟಂ ಶಾಶ್ವತ ಪದಕ್ಕೆ ಕಳಶಮನಿಟ್ಟಂ

ರಾಜಮಹಾರಾಜಾದಿ ಪುರುಷರನ್ನು ಮಾತ್ರವಲ್ಲದೆ ಶಾಸನಗಳು, ಉನ್ನತ ಜೀವನ ಸಾಧಿಸಿದ ಸ್ತ್ರೀಯರನ್ನೂ ತಪ್ಪದೆ ಸ್ತುತಿಸಿವೆ. ಸಿಗ್ಗಾವಿ ಶಾಸನದಲ್ಲಿ (ಶಾಸನ ಪದ್ಯಮಂಜರಿ, ನಂ. ೨೪) ಲಚ್ಚಲದೇವಿ ಎಂಬಾಕೆಯ ವ್ಯಕ್ತಿತ್ವವನ್ನೂ ಕೊಂಡಾಡಿದ ಪದ್ಯ ಹೀಗಿದೆ :

ವಿನಯದ ಮೊರೆ, ಧರ್ಮದ ತವರ್ಮನೆ, ಸತ್ಯದ ಜನ್ಮಭೂಮಿ, ಮಾ
ತನ ದಗುಂತಿ, ಚಾಗದ ಮಹಾನಿಧಿ, ಪೆಂಪಿನ ರತ್ನ ರಾಶಿ ಸ
ಜ್ಜನಿಕೆಯ ರಮ್ಯಹರ್ಮ್ಯಮೆಟಿವಿಂಗೆಜೆವಟ್ಟು ವಿದಗ್ಧ ಮುಗ್ಧೆ ಸ
ಜ್ಜನನುತೆಯೆಂದು ಬಣ್ಣಿಪುದು ಲಚ್ಚಲದೇವಿಯನೀ ಜಗಜ್ಜನಂ

"ಧರ್ಮ ರಕ್ಷಕಿಯರಾಗಿ, ಸಂಸ್ಕೃತಿಯ ಪ್ರತೀಕಗಳಾಗಿ ಕಂಗೊಳಿಸುವಂತೆ ಶಾಸನ ಕವಿಗಳ ಅವರನ್ನು ಚಿತ್ರಿಸಿ ಅಮರರನ್ನಾಗಿಸಿದ್ದಾರೆ" (ಶಾಸನಗಳಲ್ಲಿ ಸಂಸ್ಕೃತಿ, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪು. ೩೧೧).

ಶಾಸನದಲ್ಲಿ ಉತ್ತಮವಾದ ಸಾಹಿತ್ಯಕ ಗುಣ ಇರುವುದಕ್ಕೆ ಪ್ರಮುಖವಾದ ಕಾರಣ, ಅನೇಕ ವೇಳೆ ಶಾಸನದ ವಿಷಯವನ್ನು ಪ್ರಸಿದ್ಧವಾದ ಕವಿಗಳೇ ರಚಿಸಿಕೊಡುತ್ತಿದ್ದುದು. "ಅತಕೂರು, ಮಾವನೂರು ಶಾಸನಗಳನ್ನು ಪೊನ್ನ (ಇಐ VI ಪು. ೧೭೧, ಕ್ರಿ.ಶ. ೯೫೦), ಹರಿಹರರು (ಇ.ಸಿ. XV ಹೊಳೆನರಸಿಪುರ ೧೧೨, ಕ್ರಿ.ಶ. ೧೨೮೪); ಲಕ್ಕುಂಡಿ, ವಿಜಾಪುರ - ಬೆಳ್ಗೊಳ - ಪಂಚಲಿಂಗಾಲ ಶಾಸನಗಳನ್ನು ರನ್ನ (ಎಸ್.ಐ.ಐ. XI-i, ೫೨ ಮತ್ತು ೫೩), ನಾಗಚಂದ್ರ [ಕಕಚ (೧೯೬೧) ಪು. ೧೧೬ ಮತ್ತು ೧೨೧) ; ದಾನವುಲಿ ಪಾಡ, ಹೊಟ್ಟೂರ - ಕೋಟಮಚಗಿ, ಕಳ್ಳಿಹಾಳ ನೆಲಮಂಗಲ ಶಾಸನಗಳನ್ನು ಗುಣವರ್ಮ (ಎಂ.ಎ.ಎಸ್.ಐ XIII, 3, ಕ್ರಿ.ಶ. ೯೧೫), ಚಂದ್ರಭಟ್ಟ [ಕಕಚ (೧೯೬೧) ಪು.೯೮ ಮತ್ತು ಅನು.೨ ಪು.೧೧], ಮನಸಿಜ (ಅದೇ, ಅನು. ೧, ಪು. ೨), ಮಲ್ಲಿಕಾರ್ಜುನರು (ಇಸಿ iii-i ಮಂಡ್ಯ ೧೨೧ ಬಸುರಾಳು (೧೨೩೫) ಮಂಡ್ಯ ೧೨೨ ಬಸರಾಳು (೧೨೩೭) ಬರೆದಿರಬಹುದೆಂದು ಊಹೆ. ಈ ಊಹೆ - ಅರೆ ಊಹೆಗಳನ್ನು ಬಿಟ್ಟರೆ 'ಸುಕುಮಾರ ಚರಿತೆ'ಯ ಶಾಂತಿನಾಥನು ಬೆಳ್ಳಿಗಾವಿ ಶಾಸನ (ಇಸಿ VIII-i ಶಿಕಾರಿಪುರ, ೧೩೬, ಕ್ರಿ.ಶ. ೧೦೬೮), 'ಯಶೋಧರ ಚರಿತೆ'ಯ ಜನ್ನನು ಅಮೃತಾಪುರ ಮತ್ತು ಅನೆಕೆರೆ ಶಾಸನ (ಇಸಿ V-ii ಚೆನ್ನರಾಯಪಟ್ಟಣ ೧೭೯, ಕ್ರಿ.ಶ. ೧೧೯೦), 'ಪಾರ್ಶ್ವನಾಥಪುರಾಣ'ದ ಪಾರ್ಶ್ವಕವಿಯು ಕಲ್ಲಹಳ್ಳಿ ಗ್ರಾಮದ ಶಾಸನ (ಜೆ.ಬಿ.ಬಿ.ಆರ್.ಎ.ಎಸ್ x, ೨೨೦, ಕಲ್ಲಹಳ್ಳಿ - ಬೆಳಗಾವ ಜಿಲ್ಲೆ), 'ಧರ್ಮನಾಥ ಪುರಾಣ'ದ ಮಧುರನು ಹಂಪೆಯ ಶಾಸನ (ಎಸ್.ಐ.ಪಿ. IV, ೨೬೭, ಹಂಪೆ ಬಳ್ಳಾರಿ ಜಿಲ್ಲೆ ಕ್ರಿ.ಶ. ೧೪೧೧). ಸುಜನೋತ್ತಂಸ ಬಿರುದಿನ ಬೊಪ್ಪಣಪಂಡಿತನು ಶ್ರವಣಬೆಳ್ಗೊಳ ಶಾಸನ (ಇಸಿ II, ೨೩೪ ಕ್ರಿ.ಶ. ೧೧೮೦)ಗಳನ್ನು ಬರೆದಿರುವರು" (ಮಾರ್ಗ, ಕಲುಬುರ್ಗಿ, ಪು. ೨೧೩).

ಕವಿಗಳೇ ಹೀಗೆ ಶಾಸನ ಪಾಠ ರಚಿಸಿಕೊಟ್ಟಿರುವುದಲ್ಲದೆ ಕೆಲವು ಶಾಸನಗಳಲ್ಲಿ ಪ್ರಸಿದ್ಧ ಕವಿಗಳ ಪದ್ಯಗಳನ್ನು ಶಾಸನ ರಚನೆಯ ಸಂದರ್ಭದಲ್ಲಿ ಬಳಸಿಕೊಂಡ ಉದಾಹರಣೆಗಳಿವೆ. ಶಾಸನ ಕವಿಗಳು ಸಮಾಜದಲ್ಲಿ ಉನ್ನತವಾದ ಸ್ಥಾನಮಾನಗಳನ್ನು ಹೊಂದಿದ್ದರೆಂದು ತಿಳಿಯುವ ಆಧಾರಗಳು ಲಭ್ಯವಿವೆ. ಅನೇಕ ಬಿರುದು ಬಾವಲಿಗಳಿಂದ ಶಾಸನ ಕವಿಗಳನ್ನು ಗೌರವಿಸಿದ ಉದಾಹರಣೆಗಳಿವೆ. ಕವಿರಾಜರಾಜ, ಶ್ರೀಮತ್ಕವಿರಾಜವಲ್ಲಭಂ, ಕವಿತಾಮನೋಹರಂ, ಸುಕರ ಕವಿ, ಸಹಜಕವಿ, ಕಡು ಜಾಣಂ,

ಕುಕವಿ ಮುಖ ಮುದ್ರ - ಸುಕವಿ ಪದ್ಮ ಪ್ರಭಾಕರ, ಕಂಠಾಭರಣ ಎಂದು ಮುಂತಾದ ಬಿರುದುಗಳು ಶಾಸನ ಕವಿಗಳಿದ್ದುದಾಗಿ ತಿಳಿದುಬರುತ್ತದೆ.

ವೈವಿಧ್ಯಮಯವಾದ ಛಂದೋ ರೂಪಗಳು, ಗದ್ಯ ಪ್ರಯೋಗ ಪದ್ಯ ಪ್ರಯೋಗ, ಚಂಪೂ ಪ್ರಯೋಗ ಮೊದಲಾದ ಸ್ವರೂಪದಲ್ಲಿ ಕಾಣಸಿಗುವ ಶಾಸನಗಳು ಅನೇಕ ವೇಳೆ ಉತ್ತಮ ಸಾಹಿತ್ಯಕ ಗುಣಗಳನ್ನು ಹೀಗೆ ಹೊಂದಿರುವುದು ನಾವು ಗುರಿತಿಸಿ ಗೌರವಿಸಬೇಕಾದ ವಿಚಾರವಾಗಿದೆ.

## 115.6 ಸಮಾರೋಪ

ಒಂದು ನಾಡಿನ ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯ ಸ್ವರೂಪ, ಕಾಲಕಾಲಕ್ಕೆ ಅವುಗಳಲ್ಲಿ ಆದ ಬದಲಾವಣೆ ಬೆಳವಣಿಗೆ, ಅವುಗಳ ಇತಿಮಿತಿಗಳು ಮೊದಲಾದ ಬಹಳ ಮಹತ್ವದ ಸಂಗತಿಗಳನ್ನು ಶಾಸನಗಳು ದಾಖಲಿಸಿಕೊಡುತ್ತವೆ. ಮೇಲ್ಕಂಡ ವಿಷಯಗಳ ಅಧ್ಯಯನಕ್ಕೆ ಮುಖ್ಯ ಆಕರಗಳಾಗಿ ಶಾಸನಗಳು ನಿಲ್ಲುತ್ತವೆ.

## 115.7 ಅಭ್ಯಾಸ ಪ್ರಶ್ನೆಗಳು

1. ರಾಜಕೀಯ ಚರಿತ್ರೆಯ ಅಧ್ಯಯನಕ್ಕೆ ಶಾಸನಗಳು ನೆರವಾಗುವ ಬಗೆ ಹೇಗೆ ? ವಿವರಿಸಿ.
2. ಧಾರ್ಮಿಕ ಸ್ಥಿತಿಗಳು ಶಾಸನಗಳಲ್ಲಿ ಹೇಗೆ ವ್ಯಕ್ತವಾಗುತ್ತವೆ? ಸೋದಾಹರಣವಾಗಿ ವಿವರಿಸಿ.
3. ಶಾಸನಗಳ ಅಧ್ಯಯನದಿಂದ ದೊರೆಯುವ ಸಾಮಾಜಿಕ ಜೀವನವನ್ನು ವಿಶದಪಡಿಸಿ
4. ಶಾಸನಗಳ ಸಾಹಿತ್ಯ ಸೌಂದರ್ಯ ಕುರಿತು ಪ್ರಬಂಧ ಬರೆಯಿರಿ.

## 115.8 ಪರಾಮರ್ಶನ ಗ್ರಂಥಗಳು


1. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಎಂ. ಚಿದಾನಂದಮೂರ್ತಿ
2. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ : ಚನ್ನಕ್ಕ ಸಿ. ಎಲಿಗಾರ
3. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಎಚ್. ತಿಪ್ಪೇರುದ್ರಸ್ವಾಮಿ
4. ಶಾಸನ ಮತ್ತು ಗದ್ಯ : ಹು.ಕ. ಜಯದೇವ
5. ಮಾರ್ಗ - ೨ : ಎಂ.ಎಂ. ಕಲಬುರ್ಗಿ

## ಕೋರ್ಸ್ - X : ಕನ್ನಡ ಶಾಸನಗಳ ಅಧ್ಯಯನ (ತತ್ತ್ವ ಮತ್ತು ಆಯ್ದ ಪಠ್ಯ ಶಾಸನಗಳು)

## ಬ್ಲಾಕ್ - 29 : ತತ್ತ್ವಗಳು

# ಘಟಕ - 116

# ಶಾಸನಗಳ ವರ್ಗೀಕರಣ ; ಶಾಸನ ಸಾಮಗ್ರಿಗಳು ; ಶಾಸನಗಳ ಸಿದ್ಧತೆ ಮತ್ತು ಸಂರಕ್ಷಣೆ

**ರಚನೆ**


116.0 ಘಟಕದ ಉದ್ದೇಶ

116.1 ಪೀಠಿಕೆ

116.2 ಶಾಸನಗಳ ವರ್ಗೀಕರಣ

116.3 ಫ್ಲೀಟರ ವರ್ಗೀಕರಣ ವಿಧಾನ

- 116.3.1 ಕೇವಲ ಘಟನೆಗಳನ್ನು ನಿರೂಪಿಸುವ ಶಾಸನಗಳು
- 116.3.2 ಧಾರ್ಮಿಕ ಉದ್ದೇಶವನ್ನುಳ್ಳ ಶಾಸನಗಳು
- 116.3.3 ಧಾರ್ಮಿಕ ದತ್ತಿಗಳನ್ನು ಹೇಳುವ ಶಾಸನಗಳು
- 116.3.4 ಲೌಕಿಕ ದಾನಗಳನ್ನು ಹೇಳುವ ಶಾಸನಗಳು

116.4 ಶಾಸನ ಸಾಮಗ್ರಿಗಳು : ಲೋಹ

- 116.4.1 ತಾಮ್ರ
- 116.4.2 ಕಬ್ಬಿಣ
- 116.4.3 ಚಿನ್ನ ಮತ್ತು ಬೆಳ್ಳಿ
- 116.4.4 ಕಂಚು
- 116.4.5 ಹಿತ್ತಾಳೆ

116.5 ಶಾಸನ ಸಾಮಗ್ರಿಗಳು : ಶಿಲೆ

- 116.5.1 ಬಂಡೆಗಳು
- 116.5.2 ಸ್ತಂಭಗಳು
- 116.5.3 ಅವಶೇಷ ಪಾತ್ರೆಗಳು

116.5.4 ಸ್ತೂಪಗಳ ಹೊರ ಭಾಗಗಳು

116.5.5 ಗುಹೆಗಳು

116.5.6 ಪ್ರತಿಮೆಗಳು

116.5.7 ಪಟ್ಟಿಕೆಗಳು

116.6 ಶಾಸನ ಸಾಮಗ್ರಿಗಳು : ಮಣ್ಣಿನ ವಸ್ತುಗಳು

116.6.1 ಇಟ್ಟಿಗೆಗಳು

116.6.2 ಪಾತ್ರೆಗಳು

116.6.3 ಫಟ್ಟಿಕೆಗಳು

116.6.4 ಮುದ್ರೆಗಳು

116.7 ಶಾಸನ ಸಾಮಗ್ರಿಗಳು : ಇತರ ಪದಾರ್ಥಗಳು

116.7.1 ಸ್ಫಟಿಕ

116.7.2 ಚಿಪ್ಪುಗಳು ಇತ್ಯಾದಿ

116.8 ಶಾಸನ ಸಿದ್ಧತೆ ಮತ್ತು ಸಂರಕ್ಷಣೆ

116.8.1 ಶಾಸನ ಸಿದ್ಧತೆ

116.8.2 ಶಾಸನ ಸಂರಕ್ಷಣೆ

116.9 ಉಪಸಂಹಾರ

116.10 ಅಭ್ಯಾಸ ಪ್ರಶ್ನೆಗಳು

116.11 ಪರಾಮರ್ಶನ ಗ್ರಂಥಗಳು

## 116.0 ಘಟಕದ ಉದ್ದೇಶ

- ಶಾಸನಗಳ ವರ್ಗೀಕರಣವನ್ನು ಯಾವ ಆಧಾರಗಳ ಹಿನ್ನೆಲೆಯಿಂದ ಮಾಡಲಾಗುತ್ತದೆ ಎಂಬುದನ್ನು ಗುರುತಿಸುವ ಸಾಮರ್ಥ್ಯ ಪಡೆಯುವುದು.
- ಶಾಸನಗಳನ್ನು ಯಾವ ವಸ್ತುವಿನ ಮೇಲೆ ಕೊರೆಯಿಸಲಾಗುತ್ತಿತ್ತು ಅಥವಾ ಬರೆಯಿಸಲಾಗುತ್ತಿತ್ತು ಎಂಬುದನ್ನು ತಿಳಿಯುವುದು.
- ವಿವಿಧ ವಸ್ತುಗಳ ಮೇಲೆ ರಚಿತವಾದ ಶಾಸನಗಳ ಮತ್ತು ಅವು ದೊರೆತ ಸ್ಥಳಗಳ ಮಾಹಿತಿ ಸಂಗ್ರಹಿಸುವುದು.
- ಶಾಸನಗಳನ್ನು ರಚಿಸುವಾಗಿನ ವಿಧಾನ - ಕ್ರಮವನ್ನು ಅರಿಯುವುದು.
- ಶಾಸನ ರಚನೆಯಲ್ಲಿ ಭಾಗಿಯಾಗುವ ಮುಖ್ಯ ವ್ಯಕ್ತಿಗಳು ಯಾರು ಯಾರು ಎಂಬುದನ್ನು ತಿಳಿಯುವುದು.
- ಶಾಸನ ಸಂರಕ್ಷಣೆಗಾಗಿ ಕೈಗೊಂಡಿದ್ದ ಕ್ರಮಗಳು ಯಾವುವು ಎಂಬುದನ್ನು ಗುರುತಿಸಿ ತೋರಲು ಸಮರ್ಥನಾ(ಳಾ)ಗುವುದು.

## 116.1 ಪೀಠಿಕೆ

ಪ್ರಸ್ತುತ ಘಟಕದಲ್ಲಿ ಶಾಸನ ಶಾಸ್ತ್ರಕ್ಕೆ ಸಂಬಂಧಿಸಿದ ತಾತ್ತ್ವಿಕ ವಿಚಾರಗಳ ಪ್ರಸ್ತಾಪವೇ ಮುಂದುವರಿದಿದೆ. ಈ ಘಟಕದಲ್ಲಿ ಮೂರು ಮುಖ್ಯವಾದ ವಿಷಯಗಳನ್ನು ನಿಮಗೆ ಪರಿಚಯಿಸಲಾಗುತ್ತಿದೆ. ಒಂದು, ಶಾಸನ ವರ್ಗೀಕರಣವನ್ನು ಯಾವ ಆಧಾರಗಳ ಹಿನ್ನೆಲೆಯಲ್ಲಿ ಹೇಗೆ ಮಾಡಲಾಗುತ್ತಿತ್ತು ಎಂಬುದು ; ಇನ್ನೊಂದು ಶಾಸನಗಳನ್ನು ರಚಿಸುವಾಗ ಅವುಗಳನ್ನು ಬರೆಯಲು ಯಾವ ಯಾವ ವಸ್ತು ವಿಶೇಷಗಳನ್ನು ಬಳಸುತ್ತಿದ್ದರು ಎಂಬುದು. ಮತ್ತೊಂದು, ಶಾಸನಗಳನ್ನು ಸಿದ್ಧಪಡಿಸುವಾಗ ಯಾವಯಾವ ವ್ಯಕ್ತಿಗಳು ಬಹು ಮುಖ್ಯವಾದ ಪಾತ್ರಗಳನ್ನು ವಹಿಸುತ್ತಿದ್ದರು ಎಂಬುದು. ಈ ಮೂರು ಸಂಗತಿಗಳನ್ನು ಕುರಿತು ದೊರೆಯುವ ಪ್ರಮುಖ ಅಂಶಗಳನ್ನು ಭಾರತಾದ್ಯಂತ ದೊರೆಯುವ ಶಾಸನಗಳನ್ನು ಆಧರಿಸಿ ಇಲ್ಲಿ ನಿರೂಪಿಸಲಾಗಿದೆ. ಕನ್ನಡ ಶಾಸನಗಳನ್ನೂ ಉದಾಹರಣೆಯಾಗಿ ನೀಡಿದೆ.

## 116.2 ಶಾಸನಗಳ ವರ್ಗೀಕರಣ

ಶಾಸನಗಳನ್ನು ಹೇಗೆ ವರ್ಗೀಕರಿಸಬಹುದೆಂಬುದು ಈಗ ನಾವು ಗಮನಿಸುವ ಮುಖ್ಯ ವಿಷಯ. ಶಾಸನಗಳ ವರ್ಗೀಕರಣ ಮೂರು ದೃಷ್ಟಿಗಳಿಂದ ಸಾಧ್ಯ :

**(೧) ಶಾಸನಗಳನ್ನು ಹಾಕಿಸಿದವರು ಯಾರು ಎಂಬ ದೃಷ್ಟಿಯಿಂದ**

**(೨) ಶಾಸನಗಳು ಒಳಗೊಂಡಿರುವ ವಿಷಯದ ದೃಷ್ಟಿಯಿಂದ**

**(೩) ಶಾಸನಗಳು ಉತ್ಕೀರ್ಣವಾಗಿರುವ ಸಾಮಗ್ರಿ (material)ಗಳ ದೃಷ್ಟಿಯಿಂದ.**

(೧) ಶಾಸನಗಳನ್ನು ಹಾಕಿಸಿದವರು ಯಾರು ಎಂಬುದರ ಆಧಾರದ ಮೇಲೆ ಅವುಗಳನ್ನು ಎರಡು ಸ್ಥೂಲ ವರ್ಗಗಳಾಗಿ ವಿಂಗಡಿಸಬಹುದು :

**(ಅ) ರಾಜನ ಪರವಾದ ಶಾಸನಗಳು** | **(ಆ) ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಯ ಪರವಾದ ಶಾಸನಗಳು.**

ರಾಜನಾಗಲಿ, ಅವನ ಪರವಾಗಿ ಇತರರಾಗಲಿ (ಮಾಂಡಲಿಕರು ಮತ್ತು ಉನ್ನತಾಧಿಕಾರಿಗಳು) ಕೆತ್ತಿಸಿದ ಶಾಸನಗಳು ಬಹುಮುಖ್ಯವಾದವು. ಇಂತಹ ರಾಜಶಾಸನಗಳನ್ನು 'ಶುದ್ಧ ರಾಜಾಜ್ಞೆ'ಗಳು (ಉದಾ : ಅಶೋಕನ ಶಾಸನಗಳು), 'ಪ್ರಶಸ್ತಿ ಶಾಸನಗಳು', 'ದಾನ ಶಾಸನಗಳು', 'ಸಂಕೀರ್ಣ ಶಾಸನಗಳು' ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ದಾನ ಶಾಸನಗಳ ಸಂಖ್ಯೆ ಹೆಚ್ಚು.

ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಯ ಪರವಾಗಿ ಹಾಕಿಸಿದ ಬಹುಪಾಲು ಶಾಸನಗಳೂ ದಾನವನ್ನೇ ಕುರಿತವಾಗಿವೆ. ದೇವಾಲಯಕ್ಕೆ ದಾನಕೊಟ್ಟುದನ್ನೊ ವಿಗ್ರಹ ಪ್ರತಿಷ್ಠಾಪನೆ ಮಾಡಿಸಿದ್ದನ್ನೊ ಅವು ಹೇಳುತ್ತವೆ ; ದಾನ ಮಾಡಿದ ಅಥವಾ ಪ್ರತಿಷ್ಠಾಪಿಸಿದ ವಸ್ತುಗಳ ಮೇಲೆ ಇಂಥ ಶಾಸನಗಳನ್ನು ನೋಡುತ್ತೇವೆ. ಇವು ಸಾಮಾನ್ಯವಾಗಿ ದೀರ್ಘವಾಗಿರುವುದಿಲ್ಲ. ಕೆಲವೊಮ್ಮೆ ಅವು ಯಾವ ರಾಜನ ಆಳಿಕೆಯಲ್ಲಿ ದಾನ ಅಥವಾ ಪ್ರತಿಷ್ಠಾಪನೆ ನಡೆಯಿತೆಂಬುದನ್ನು ತಿಳಿಸುತ್ತವೆ. ಭುವನೇಶ್ವರ, ದ್ರಾಕ್ಷಾ ರಾಮ, ಸಿಂಹಾಚಲ, ಶ್ರೀರಂಗ, ಕಂಚೀಪುರ ಮುಂತಾದ ಕಡೆಗಳಲ್ಲಿ ದೇವಾಲಯಗಳ ಗೋಡೆಗಳ ಮೇಲೆ ಯಾತ್ರಿಕರ ಅಸಂಖ್ಯ ಸಮರ್ಪಣ ಶಾಸನಗಳಿವೆ. ಯಾತ್ರಿಕರು ಸ್ವಪ್ರಶಸ್ತಿಗಳನ್ನು ಬರೆದು ತಂದು ದೇವಾಲಯದ ಗೋಡೆಗಳ ಮೇಲೆ ಕೆತ್ತಿರುವುದೂ ಉಂಟು.

ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳು ಕೆರೆಯನ್ನೊ ದೇವಾಲಯವನ್ನೊ ನಿರ್ಮಿಸಿದಾಗ ಪ್ರಶಸ್ತಿಗಳನ್ನು ಶಿಲಾಪಟ್ಟಿಕೆಗಳ ಮೇಲೆ ಅಥವಾ ಸ್ತಂಭಗಳ ಮೇಲೆ ಕೆತ್ತಿರುವುದಕ್ಕೆ ನಿದರ್ಶನಗಳಿವೆ. ಖಾಸಗಿ ವ್ಯಕ್ತಿಗಳು ಅಥವಾ ಅಧಿಕಾರಿಗಳು ಹಾಕಿಸಿದ ಇಂತಹ ಶಾಸನಗಳಲ್ಲೂ ಸಾಮಾನ್ಯವಾಗಿ ರಾಜನ ಉಲ್ಲೇಖವಿರುತ್ತದೆ. ಆದ್ದರಿಂದ ಖಾಸಗಿ ಶಾಸನಗಳೂ ಚಾರಿತ್ರಿಕ ದೃಷ್ಟಿಯಿಂದ ಅಮೂಲ್ಯವಾಗಿವೆ. ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೦ನೆಯ ಶತಮಾನದ ಸ್ಥಳೀಯ ಗ್ರಾಮಾಡಳಿತದ ಮೇಲೆ ಬೆಳಕು ಚೆಲ್ಲುವ ಉತ್ತರ ಮೇರೂರು ಶಾಸನಗಳು ಖಾಸಗಿ ಶಾಸನಗಳೆಂಬುದು ಗಮನಾರ್ಹ. ವೀರಗಲ್ಲು, ನಿಸಿದಿಗಲ್ಲು, ಮಾಸ್ತಿಕಲ್ಲುಗಳೂ ಈ ವರ್ಗದವೇ. (ಇವುಗಳ ಬಗ್ಗೆ ಮುಂದಿನ ಸಂಚಿಕೆಗಳಲ್ಲಿ ವಿವರವಾಗಿ ತಿಳಿಯಲಿದ್ದೀರಿ.)

(೨) ವಿಷಯದ ದೃಷ್ಟಿಯಿಂದ ಶಾಸನಗಳನ್ನು ಪ್ರಶಸ್ತಿ ಶಾಸನಗಳು, ದಾನ ಶಾಸನಗಳು ಎಂದು ಎರಡು ಪ್ರಮುಖ ವರ್ಗಗಳನ್ನಾಗಿ ಮಾಡಬಹುದು. ಖಾಸಗಿ ಶಾಸನಗಳಾದ ವೀರಗಲ್ಲು, ನಿಸಿದಿಗಲ್ಲು, ಮಾಸ್ತಿ, ಗಲ್ಲುಗಳೂ ಒಂದು ಬಗೆಯ ಪ್ರಶಸ್ತಿ ಶಾಸನಗಳೇ.

ಪ್ರಶಸ್ತಿ ಶಾಸನ ಹಾಗೂ ದಾನಶಾಸನಗಳು ವಿಭಿನ್ನ ವರ್ಗಗಳಾದರೂ ರಾಜರ ದಾನಶಾಸನಗಳಲ್ಲಿ ಪ್ರಶಸ್ತಿಯ ಅಂಶ ಈಚೀಚೆಗೆ ಸೇರಿಕೊಂಡಿತ್ತೆಂಬುದು ಲಕ್ಷಿಸಬೇಕಾದ ಸಂಗತಿ. ಮೊದಮೊದಲು ಪ್ರಶಸ್ತಿ ವಿಶೇಷವಾಗಿ ಶಿಲೆಯ ಮೇಲೆ - ಬಂಡೆಗಳು, ಪಟ್ಟಿಕೆಗಳು ಮತ್ತು ಸ್ತಂಭಗಳ ಮೇಲೆ - ಕಂಡುಬರುತ್ತದೆ. ಕಾಲಕ್ರಮದಲ್ಲಿ ಅದು ತಾಮ್ರಪಟಗಳ ಮೇಲಿನ ದಾನಶಾಸನಗಳಲ್ಲೂ ಸ್ಥಾನ ಪಡೆದುಕೊಳ್ಳತೊಡಗಿತು - ದಾನಿಯ ಮತ್ತು ಅವನ ಪೂರ್ವಜರ ಹೊಗಳಿಕೆಯ ರೂಪದಲ್ಲಿ. ಕೇವಲ ಪ್ರಶಸ್ತಿಯನ್ನೊಳಗೊಂಡ ತಾಮ್ರಪಟಗಳೂ ಸಿಕ್ಕಿವೆ.

(೩) ಸಾಮಗ್ರಿಗಳ ದೃಷ್ಟಿಯಿಂದ ಶಾಸನಗಳಲ್ಲಿ ಮುಖ್ಯವಾಗಿ ಶಿಲಾಶಾಸನಗಳು, ಲೋಹಶಾಸನಗಳು ಎಂದು - ಇನ್ನೂ ನಿಷ್ಕೃಷ್ಟವಾಗಿ ಹೇಳುವುದಾದರೆ ಶಿಲಾಶಾಸನಗಳು, ತಾಮ್ರಶಾಸನಗಳು ಎಂದು - ಪ್ರಭೇದಗಳನ್ನು ಕಲ್ಪಿಸಬಹುದು.

ಶಿಲಾಶಾಸನಗಳು ಮತ್ತೆ ಸ್ತಂಭಶಾಸನಗಳು, ಬಂಡೆ (ಪ್ರಸ್ತರ) ಶಾಸನಗಳು ಎಂದು ಎರಡು ಪ್ರಮುಖ ವರ್ಗಗಳಾಗುತ್ತವೆ. ಅಶೋಕನ ಕೆಲವು ಶಾಸನಗಳು, ಸಮುದ್ರಗುಪ್ತನ ಅಲಹಾಬಾದ್ ಶಾಸನ, ಮಾಳವದ ಮಂದಸೋರದಲ್ಲಿರುವ ಯಶೋಧರ್ಮನ ಶಾಸನ - ಇವು ಸ್ತಂಭ ಶಾಸನಗಳಿವೆ ನಿದರ್ಶನಗಳಾದರೆ, ಅಶೋಕನ ಇನ್ನು ಕೆಲವು ಪ್ರಸಿದ್ಧ ಪ್ರಸ್ತರ ಶಾಸನಗಳು ಬಂಡೆಶಾಸನಗಳಿಗೆ ಉದಾಹರಣೆಯಾಗುತ್ತವೆ. ಭರತಖಂಡದ ಬಹುಪಾಲು ಶಾಸನಗಳು ಶಿಲಾಶಾಸನಗಳು.

ಲೋಹವಸ್ತುಗಳಲ್ಲಿ ತಾಮ್ರ ಮತ್ತು ಕಬ್ಬಿಣ ಬಹಳ ಗಣ್ಯವಾಗಿದೆ. ಸಾಮಾನ್ಯವಾಗಿ ರಾಜರ ದಾನಶಾಸನಗಳು ತಾಮ್ರಪಟಗಳ ಮೇಲಿರುತ್ತವೆ. ದೆಹಲಿಯ ಹತ್ತಿರವಿರುವ ಮೆಹರೌಲಿಯ ಸ್ತಂಭಶಾಸನವನ್ನು ಕಬ್ಬಿಣದ ಬಳಕೆಗೆ ಉದಾಹರಿಸಬಹುದು.

ಶಿಲಾಪಟ್ಟಿಕೆಗಳು, ದೇವಾಲಯಗಳ ಮತ್ತಿತರ ಕಟ್ಟಡಗಳ ಗೋಡೆ ಕಂಬ ಮುಂತಾದ ಭಾಗಗಳು, ವಿಗ್ರಹ ಪೀಠಗಳು, ಆಭರಣಗಳು, ಆಯುಧಗಳು, ದೇವಸೇವೋಪಕರಣಗಳು, ಅವಶೇಷ ಕರಂಡಗಳು, ಪಾತ್ರೆಗಳು, ಕುಂಭಗಳು, ಚಿಪ್ಪುಗಳು, ದಂತಫಲಕ, ಹರಳು ಮುಂತಾದ ವಸ್ತುಗಳ ಮೇಲೆಲ್ಲ ಶಾಸನಗಳು ದೊರೆತಿವೆ ; ಮರದ ಪಟ್ಟಿಕೆಗಳ ಮೇಲೆ ಮಸಿಯಲ್ಲಿ ಬರೆದವೂ, ಜೇಡಿಮಣ್ಣು ಇಟ್ಟಿಗೆಗಳ ಮೇಲೆ ಮುದ್ರಿತವಾದವೂ ಉಂಟು. (ಚೀಣದಲ್ಲಿ ಮೂಳೆಗಳ ಮೇಲೆ ಬರೆದಿರುವ ಶಾಸನಗಳೂ ಇವೆಯೆನ್ನಲಾಗಿದೆ). ವಿಶೇಷತಃ ಕರ್ನಾಟಕದಲ್ಲಿ ಶಿಲೆ, ಸ್ತಂಭಗಳು, ದೇವಸ್ಥಾನಗಳ ಗೋಡೆಗಳು, ವಿಗ್ರಹಗಳ ಪೀಠಗಳು, ಪಾತ್ರಗಳು, ತಾಮ್ರಪಟಗಳು - ಇವುಗಳ ಮೇಲೆ ಶಾಸನಗಳು ಕಂಡುಬಂದಿವೆ (ಇತ್ತೀಚೆಗೆ ಕೋಲಾರದ ಹತ್ತಿರ ಮಡಕೆಯ ಮೇಲೆ ಶಾಸನವೊಂದು ಸಿಕ್ಕಿದ್ದನ್ನು ನೆನೆಯಬಹುದು.)

## 116.3 ಫ್ಲೀಟ್ ವರ್ಗೀಕರಣ ವಿಧಾನ

ಈಗ ಶಾಸನಗಳ ವಿಷಯಾನುಗುಣವಾದ ವರ್ಗೀಕರಣವನ್ನು ವಿವರವಾಗಿ, ಸೋದಾಹರಣವಾಗಿ ನೋಡಬಹುದು. ಈ ದಿಶೆಯಲ್ಲಿ ಜೆ.ಎಫ್. ಫ್ಲೀಟರು ಶಾಸನಗಳನ್ನು ಹೀಗೆ ವಿಂಗಡಿಸಿದ್ದಾರೆ : (೧) ಕೇವಲ ಘಟನೆಗಳನ್ನು ನಿರೂಪಿಸುವ ಶಾಸನಗಳು, (೨) ಧಾರ್ಮಿಕವಾದ ಉದ್ದೇಶವನ್ನುಳ್ಳ ಶಾಸನಗಳು, (೩) ಧಾರ್ಮಿಕ ದತ್ತಿಗಳನ್ನು ಹೇಳುವ ಶಾಸನಗಳು, (೪) ಲೌಕಿಕ ದಾನಗಳನ್ನು ಹೇಳುವ ಶಾಸನಗಳು. (ದಾನಗಳನ್ನು ಧಾರ್ಮಿಕ, ಲೌಕಿಕ ಎಂದು ಪ್ರತ್ಯೇಕಿಸುವುದು ವಿವೇಚನೆಯ ಸೌಕರ್ಯಕ್ಕಾಗಿ ಮಾಡಿಕೊಂಡ ಔಪಚಾರಿಕ ವರ್ಗೀಕರಣವೆನಿಸುತ್ತದೆ ; ಎರಡಕ್ಕೂ ಪ್ರೇರಣೆ ಒಂದೇ.)

### 116.3.1 ಕೇವಲ ಘಟನೆಗಳನ್ನು ನಿರೂಪಿಸುವ ಶಾಸನಗಳು

ಈ ವರ್ಗದ ಶಾಸನಗಳಲ್ಲಿ ದಾನಧರ್ಮಗಳ ಉಲ್ಲೇಖ ಇರಬಹುದಾದರೂ ಅದು ಮುಖ್ಯವಲ್ಲ. ಉಳಿದ ವರ್ಗಗಳಿಗೆ ಹೋಲಿಸಿದಾಗ ಈ ವರ್ಗದ ಶಾಸನಗಳು ಅಲ್ಪಸಂಖ್ಯಾತವಾಗಿದ್ದು, ಭಾರತೀಯರ ಐತಿಹಾಸಿಕ ಪ್ರವೃತ್ತಿಯನ್ನು ಗಣನೀಯವಾಗಿ ದ್ಯೋತಿಸುತ್ತವೆ.

ಸಮುದ್ರಗುಪ್ತನ ಅಲಹಾಬಾದ್, (ಉತ್ತರ ಪ್ರದೇಶ) ಶಾಸನ, ಯಶೋಧರ್ಮನ ಮಂದಸೋರ್ ಶಾಸನ, ಪುಲಿಕೇಶಿಯ ಐಹೊಳೆ ಶಾಸನ ಮುಂತಾದ ಪ್ರಶಸ್ತಿ ಶಾಸನಗಳನ್ನು ಈ ವರ್ಗದಲ್ಲಿ ಹೆಸರಿಸಬೇಕು. ದಿಗ್ವಿಜಯ ವರ್ಣನೆಯೆ ಅವುಗಳ ಮುಖ್ಯೋದ್ದೇಶವಾಗಿದ್ದರೂ, ಅವು ಯಾವುದೋ ಧಾರ್ಮಿಕ ಸಂದರ್ಭದಲ್ಲಿ ರಚಿತವಾಗಿದ್ದಿರಬೇಕೆಂಬ ಊಹೆಗೆ ಅವಕಾಶವಿದೆ. ಉದಾಹರಣೆಗೆ ಐಹೊಳೆ ಶಾಸನ ಪುಲಿಕೇಶಿಯ ರಾಜಕೀಯ ಸಾಧನೆಗಳ ನಿರೂಪಣೆಯಾಗಿದ್ದರೂ ರವಿಕೀರ್ತಿ ಐಹೊಳೆಯಲ್ಲಿ ಜಿನಾಲಯವೊಂದನ್ನು ಕಟ್ಟಿಸಿದ್ದು ಅದರ ರಚನೆಯ ಹಿನ್ನೆಲೆ.

ಸಮುದ್ರಗುಪ್ತನ ಶಾಸನದಲ್ಲಿ ಅವನ ವಂಶಾವಳಿಯೂ ಉತ್ತರ ಭಾರತ ವಿಜಯವೂ ವರ್ಣಿತವಾಗಿವೆ. ಅವನ ಸಂಬಂಧವಿದ್ದ ಕೆಲವು ವಿದೇಶೀ ಕುಲಗಳನ್ನು ಆ ಶಾಸನ ಹೆಸರಿಸಿ, ದಕ್ಷಿಣ ಭಾರತದ ರಾಜಕೀಯ ಚಿತ್ರವೊಂದನ್ನು - ಕೊಡುತ್ತದೆ. ಯಶೋಧರ್ಮನ ವಿಜಯಗಳನ್ನೂ ವಿದೇಶೀ ಆಕ್ರಮಣಕಾರ ಮಿಹಿರಕುಲನನ್ನು ಅವನು ಸೋಲಿಸಿದ್ದನ್ನೂ ಮಂದಸೋರ್ ಶಾಸನ ನಿರೂಪಿಸುತ್ತದೆ.

ಈ ವರ್ಗದಲ್ಲಿ ಶುದ್ಧ ಚಾರಿತ್ರಿಕ ನಿರೂಪಣೆಯ ಒಂದು ಅತ್ಯುತ್ತಮ ನಿದರ್ಶನವೆಂದರೆ ಕಳಿಂಗದ ಖಾರವೇಲನ ಹಾಥಿಗುಂಫ ಶಾಸನ. ಅದು ಅವನ ಜೀವನ ವೃತ್ತಾಂತವನ್ನು ಅವನ ಆಳಿಕೆಯ ಹದಿಮೂರನೆಯ ವರ್ಷದವರೆಗೆ ಸಕ್ರಮವಾಗಿ ತಿಳಿಸಿಕೊಡುತ್ತದೆ.

ಸಾರ್ವಜನಿಕ ಕಾರ್ಯಗಳ ನಿರ್ವಹಣೆಯನ್ನು ಹೇಳುವ ಕೆಲವು ಶಾಸನಗಳೂ ಈ ವರ್ಗದಲ್ಲೆ ಬರುತ್ತವೆ. ಉದಾಹರಣೆಗೆ, ಜುನಾಗಢದ ಎರಡು ಪ್ರಸ್ತರ ಶಾಸನಗಳು ; ರುದ್ರದಾಮನ ಕಾಲದಲ್ಲಿ ಮತ್ತು ಫ್ಯೂಸ್ ಸ್ಕಂದಗುಪ್ತನ ಕಾಲದಲ್ಲಿ ನಡೆದ ಸುದರ್ಶನ ಮಹಾಸರೋವರದ ಏರಿಯ ದುರಸ್ತಿಯನ್ನು ಹೇಳತಕ್ಕವು. ತಾಳಗುಂದ ಶಾಸನವೂ ಇಂಥದೇ ; ಕೆರೆಯೊಂದರ ನಿರ್ಮಾಣವನ್ನು ಹೇಳುವುದು ಅದರ ಮುಖ್ಯೋದ್ದೇಶವಾಗಿದ್ದು, ಬನವಾಸಿಯ ಕದಂಬರ ಚರಿತ್ರೆ ಅದರ ಪ್ರಾರಂಭದಲ್ಲಿ ಬಂದಿದೆ (ಆದ್ದರಿಂದ ಅದು ಪ್ರಶಸ್ತಿ ಶಾಸನವೂ ಹೌದು).

ಕೆಲವು ಸ್ಮಾರಕಗಳನ್ನೂ ಇದೇ ವರ್ಗದಲ್ಲಿ ಪರಿಗಣಿಸಬೇಕು. ಉದಾಹರಣೆಗೆ, ಮೆಹರೌಲಿಯ ಸ್ತಂಭದ ಮೇಲಿರುವ ಇಮ್ಮಡಿ ಚಂದ್ರಗುಪ್ತನ ಸ್ಮಾರಕ, ಶ್ರವಣಬೆಳಗೊಳದಲ್ಲಿರುವ ಪಶ್ಚಿಮ ಗಂಗರಾಜ ಮಾರಸಿಂಹನ ಹಾಗೂ ಜೈನಾಚಾರ್ಯರಾದ ಪ್ರಭಾಚಂದ್ರ, ಮಲ್ಲಿಷೇಣರ ಸ್ಮಾರಕಗಳು ಇಲ್ಲಿ ಸೇರತಕ್ಕವಾಗಿವೆ.

ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸಾವನ್ನು ಹೇಳುವ ಸ್ಮರಕ ಸ್ತಂಭಗಳೂ ವೀರಗಲ್ಲುಗಳೂ, ಅಂತೆಯೆ ಸ್ತ್ರೀಯರ ಸಹಗಮನ, ಅನುಗಮನಗಳನ್ನು ಹೇಳುವ ಮಾಸ್ತಿಕಲ್ಲುಗಳೂ ಇದೇ ವರ್ಗಕ್ಕೆ ಸೇರುತ್ತವೆ. ಭಾನುಗುಪ್ತನೆಂಬ ದೊರೆಯ ಅನುಯಾಯಿ ಗೋಪರಾಜ ಸಮರದಲ್ಲಿ ಸತ್ತುದನ್ನೂ ಅವನ ಹೆಂಡತಿ ಸಹಗಮನ ಮಾಡಿದ್ದನ್ನೂ ಏರಣ್‌ನ ಪುಟ್ಟ ಸ್ತಂಭವೊಂದರ ಮೇಲಿನ ಶಾಸನ ಹೇಳುತ್ತದೆ. ತುರುಗಾಳಗದಲ್ಲಿ ಹೋರಾಡಿ ಮಡಿದ ಮಾಚ, ಗೋಮ ಎಂಬ ಇಬ್ಬರು ಸೋದರನ್ನು ಪ್ರಶಂಸಿಸುವ ಅಬ್ಬಲೂರು ಶಾಸನ, ಅಂತಹ ಇತರ ವೀರರನ್ನು ಕುರಿತ ಕೀಟ್-ಮುತ್ತುಗೂರು, ಆಂಬೂರು, ನರೇಗಲ್, ಬಂಗವಾಡಿ ಮುಂತಾದ ಕಡೆಗಳಲ್ಲಿನ ಶಾಸನಗಳು ವೀರಗಲ್ಲುಗಳಿಗೆ ಉದಾಹರಣೆಗಳು : ತಮಿಳ್ನಾಡಿನ 'ತೇರಹಿ' ಶಾಸನಗಳೂ ಈ ಬಗೆಯವೆಂದು ಹೇಳಲಾಗಿದೆ. ಸ್ಥಳೀಯ ಮಾಂಡಲಿಕನೊಬ್ಬನ ಹೆಂಡತಿ ಅಗ್ನಿಪ್ರವೇಶದಿಂದ ಅನುಮರಣಗೊಂಡುದರ ಪರಿಣಾಮಕಾರಿ ನಿರೂಪಣೆಯಿದೆ ಕ್ರಿ.ಶ. ೧೦೫೭ರ ಬೆಳತೂರು ಶಾಸನದಲ್ಲಿ. (ಈ ಶಾಸನದಲ್ಲಿ, ಅನುಗಮನ ಮಾಡಿದ ದೇಕಬ್ಬೆಯನ್ನು "ಇಂತೀ ನಾರಿಜನರನ್ನಮನದಾರೊ ಮಜೆವರ್" ಎಂದು ಶಾಸನಕರ್ತ ಕೈವಾರಿಸಿದ್ದಾನೆ ; ಇಲ್ಲಿ ಪ್ರಶಸ್ತಿಯ ಅಂಶ ಸ್ಪಷ್ಟವಾಗಿ ಬಂದಿದೆ.) ಜೋಳವಾಟಿ, ವೇಳೆವಾಟಿ, ಲೆಂಕವಾಟಿ ಮುಂತಾದ ಆತ್ಮ ಬಲಿಯ ಪ್ರಕಾರಗಳಿಗೆ ಸಂಬಂಧಿಸಿದ ಶಾಸನಗಳೂ ಈ ವರ್ಗದಲ್ಲೆ ಸೇರುತ್ತವೆ. (ನಿದರ್ಶನಗಳಿಗೆ ಡಾ. ಚಿದಾನಂದಮೂರ್ತಿಯವರ ಗ್ರಂಥದ 'ಆತ್ಮಬಲಿಯ ಹಲವು ಪ್ರಕಾರಗಳು' ಎಂಬ ಅಧ್ಯಾಯವನ್ನು ನೋಡಿ.)

ವಾಹನ ಸಂಚಾರವುಳ್ಳ ಮೂರು ಹೆದ್ದಾರಿಗಳ ಸಂಗಮದಲ್ಲಿ ಎರಡು ಉಗ್ರಾಣಗಳ ಸ್ಥಾಪನೆಯನ್ನು ಹೇಳುವ ಸೋಹ್‌ಗೌರಾ ಶಾಸನ, ಆದಿತ್ಯಸೇನ ರಾಜನ ಹೆಂಡತಿ ಕೋಣಾದೇವಿಯ ಅಪ್ಪಣೆಯಂತೆ ಕೆರೆಯೊಂದರ ನಿರ್ಮಾಣವನ್ನು ಹೇಳುವ ಮಂದಾರ್‌ಗಿರಿ ಪ್ರಸ್ತರ ಶಾಸನಗಳು, ಹಸ್ತಿನ್ ಮತ್ತು ಶರ್ವನಾಥ ಎಂಬ ರಾಜರ ಪ್ರದೇಶಗಳ ಗಡಿಯನ್ನು ಗುರುತಿಸುವ ಭುಮರಾ ಸ್ತಂಭಶಾಸನ, ಶೈವಸನ್ಯಾಸಿಯೊಬ್ಬನ ಅಗ್ನಿಪ್ರವೇಶವನ್ನು ಹೇಳುವ ಕೊಟೂರಂ ಶಾಸನ - ಇತ್ಯಾದಿಗಳೆಲ್ಲ ಈ ವರ್ಗದ ಸಂಕೀರ್ಣ ದಾಖಲೆಗಳಿಗೆ ದೃಷ್ಟಾಂತಗಳು.

೧೨ನೆಯ ಶತಮಾನದ ಸ್ವಾರಸ್ಯಪೂರ್ಣವಾದ ಅಪರಾಧ ಕಾನೂನಿನ ಪರಿಚಯ ಮಾಡಿಕೊಡುವ ಶೀಯಮಂಗಳಂ ಮತ್ತು ತಿರುವೊತ್ತೂರಿನ ಎರಡು ಶಾಸನಗಳೂ ರಾಜಕೀಯ ಕರಾರುಗಳನ್ನು ಉಲ್ಲೇಖಿಸುವ ಚಂಗಮದ ಎರಡು ಶಾಸನಗಳೂ ಇಲ್ಲಿ ಗಮನಾರ್ಹ.

## 116.3.2 ಧಾರ್ಮಿಕವಾದ ಉದ್ದೇಶವನ್ನುಳ್ಳ ಶಾಸನಗಳು

ಇವು ಕೇವಲ ಧಾರ್ಮಿಕ ಪ್ರೇರಣೆಗಳಿಂದ ಹುಟ್ಟಿದ ಶಾಸನಗಳು. ಅಶೋಕನ ಶಾಸನಗಳು ಈ ವರ್ಗದಲ್ಲಿ ಅಗ್ರಸ್ಥಾನ ಪಡೆಯುತ್ತವೆ. ಭರತ ಖಂಡದಾದ್ಯಂತ ವಿವಿಧ ಮುಖ್ಯ ಸ್ಥಳಗಳಲ್ಲಿ ಹರಡಿಕೊಂಡಿರುವ ಅಶೋಕನ ಸುಪ್ರಸಿದ್ಧ ಪ್ರಸ್ತರ ಮತ್ತು ಸ್ತಂಭ ಶಾಸನಗಳು ಧರ್ಮ ನೀತಿಗಳ ಪ್ರಸಾರಕ್ಕಾಗಿ ಉದ್ದಿಷ್ಟವಾದುವು ; ತಮ್ಮನ್ನು ಅವು 'ಧಮ್ಮಲಿಪಿ'ಗಳೆಂದೆ ಕರೆದುಕೊಂಡಿವೆ. ಅವು ಅಶೋಕನ ಸಮಕಾಲೀನರಾದ ಕೆಲವರು ವಿದೇಶೀ ದೊರೆಗಳನ್ನು ಹೆಸರಿಸುತ್ತವೆ. ಆತಂರಿಕ ಚರಿತ್ರೆಗೆ ಸಂಬಂಧಿಸಿದ ಸಂಗತಿಗಳನ್ನು ಉಲ್ಲೇಖಿಸುತ್ತವೆ : ಅವನ ಕೆಲವು ಅಡಳಿತಕ್ರಮಗಳನ್ನು ಹೇಳುತ್ತವೆ ; ಪಾಟಲಿಪುತ್ರದಲ್ಲಿದ್ದ ಅವನ ರಾಜಧಾನಿಯನ್ನೂ ಉಜ್ಜಯಿನಿ ತಕ್ಷಶಿಲೆಗಳಲ್ಲಿದ್ದ ಅವನ ಪ್ರತಿನಿಧಿಗಳ ಸ್ಥಾನವನ್ನೂ ಗುರುತಿಸುತ್ತವೆ ; ಭಾರತದ ಕೆಲವು ಮುಖ್ಯ ಜನಾಂಗಗಳನ್ನು - ಮುಖ್ಯವಾಗಿ ಚೋಳ ಪಾಂಡ್ಯ ಆಂಧ್ರರನ್ನು - ಹೆಸರಿಸುತ್ತವೆ ; ಅವನ ಬದುಕಿಗೆ ಹೊಸ ತಿರುವು ಕೊಟ್ಟ ಕಳಿಂಗವಿಜಯವನ್ನು ಪ್ರಸ್ತಾಪಿಸುತ್ತವೆ.

ಸಾಂಚಿ, ಸೋನಾರಿಗಳಲ್ಲಿ ಸಿಕ್ಕಿರುವ ಕೊತೀಪುತ್ತ - ಕಸ್ಸಪಗೊತ್ತ, ಕೊಡಿನೀಪುತ್ತ - ಮಜ್ಝಿಮ ಹಾಗೂ ಗೋತೀಪುತ್ತ - ದುಂದುಭಿಸ್ಸರರ ಅವಶೇಷಕರಂಡಗಳ ಮೇಲಿನ ಶಾಸನಗಳನ್ನು ಈ ವರ್ಗಕ್ಕೇ ಸೇರಿಸಬೇಕು. ಅಶೋಕನ ಕಾಲದಲ್ಲಿ ಬೌದ್ಧಧರ್ಮ ಪ್ರಚಾರಕ್ಕೆ ಸಂಬಂಧಿಸಿದಂತೆ ಸಿಲೋನಿನ 'ದೀಪವಂಶ'ದಲ್ಲಿ ಬರುವ ವಿವರಗಳನ್ನು ಈ ಶಾಸನಗಳು ಪುಷ್ಟೀಕರಿಸುತ್ತವೆ.

ಬುದ್ಧ ಹುಟ್ಟಿದ ಜಾಗದಲ್ಲಿ, ಅವನ ಸ್ಮೃತಿಯನ್ನು ಗೌರವಿಸುವುದಕ್ಕಾಗಿ ಸಿದ್ಧವಾದದ್ದು ಅಶೋಕನ ರುಮ್ಮಿಂದೈ ಸ್ತಂಭಶಾಸನ. ಲುಮ್ಮಿನಿ ಗ್ರಾಮಕ್ಕೆ ಕೆಲವು ತೆರಿಗೆಗಳನ್ನು ಅಶೋಕ ತಪ್ಪಿಸಿದನೆಂದೂ ಆ ಶಾಸನದಲ್ಲಿ ಹೇಳಿದೆ. ಮತ್ರದ ಸಿಂಹಶಿರಸ್ಸಿನ ಮೇಲಿರುವ ಕ್ರಿ.ಶ. ೧೫ ರ ಶಾಸನಗಳೂ ಬುದ್ಧಾವಶೇಷಗಳಿಗೆ ಸಂಬಂಧಿಸಿವೆ ; ಇಬ್ಬರು ಸತ್ರಪರಾಜರನ್ನು ಅವು ಹೇಳುತ್ತವೆ.

ಇದುವರೆಗೆ ಸಿಕ್ಕಿರುವ ಭಾರತೀಯ ಶಾಸನಗಳಲ್ಲಿ ಪ್ರಾಚೀನತಮವಾದ ಪಿಪ್ರಹ್ವ ಶಾಸನ - ಒಂದು ಅವಶೇಷಕರಂಡದ ಮೇಲಿರತಕ್ಕದ್ದು - ಬುದ್ಧ ಬಾಂಧವರಾದ ಶಾಕ್ಯರ ಸ್ಮೃತಿಯನ್ನು ಕಾಪಿಡುವುದಕ್ಕಾಗಿ ಹುಟ್ಟಿದ್ದು ; ಕಪಿಲವಸ್ತುವನ್ನು ಅದು ಗುರುತಿಸುತ್ತದೆ.

ಭಾರೂತಿನ ಸ್ತೂಪದ ದ್ವಾರವೊಂದರ ನಿರ್ಮಾಣವನ್ನು ಹೇಳುವ ಶಾಸನವೊಂದರಲ್ಲಿ ಶುಂಗವಂಶದ ಅಸ್ತಿತ್ವ ಸಮರ್ಥನೆಗೊಂಡಿದೆ. ತೋರಮಾನನ ಕುರಶಾಸನ ಬೌದ್ಧ ಮಠವೊಂದರ ನಿರ್ಮಾಣವನ್ನು ಹೇಳುತ್ತದೆ. ಸಾತವಾಹನ ಸಾತಕಣಿಯ ನಾನಾಘಾಟ್ ಶಾಸನದಲ್ಲಿ ರಾಣಿ ನಾಯಕನಿಗೆ ಮಾಡಿದ ಮಹಾ ಯಾಗಗಳೂ ಅವಳಿತ್ತ ಅಪಾರ ದಕ್ಷಿಣೆಗಳೂ ಉಕ್ತವಾಗಿವೆ. ಏರಣ್‌ನಲ್ಲಿ ಶಿಲಾವರಾಹದ ಎದೆಯ ಮೇಲಿರುವ ತೋರಮಾನನ ಶಾಸನವು ದೇವಾಲಯ ನಿರ್ಮಾಣಕ್ಕೆ ಸಂಬಂಧಿಸಿದ್ದು, ಅವನ ಮಧ್ಯಭಾರತ ವಿಜಯವನ್ನು ಹೇಳುತ್ತದೆ. ಅಂತೆಯೆ ದೇವಾಲಯವೊಂದರ ಜೀರ್ಣೋದ್ಧಾರ ಮಂದಸೋರ್ ಶಾಸನದ ವಿಷಯ.

ಕಾನಿಷ್ಕನ ಕಾಲವನ್ನು ಕ್ರಿ.ಪೂ. ೫೩ ಎಂದು ಹೇಳುವ ಮತ್ರಶಾಸನಕ್ಕೆ ಹಾಗೂ ಹುವಿಷ್ಕನ ಕಾಲವನ್ನು ಕ್ರಿ.ಪೂ. ೨೪ ಎಂದು ಹೇಳುವ ಅಲ್ಲಿಯದೇ ಇನ್ನೊಂದು ಶಾಸನಕ್ಕೆ ಜೈನ ತೀರ್ಥಂಕರ ವರ್ಧಮಾನನ ಪ್ರತಿಮೆಯ ಹಾಗೂ ಬೋಧಿಸತ್ವನ ಪ್ರತಿಮೆಯ ಸ್ಥಾಪನೆ ಕಾರಣ. ಸೇತ್ ಮಹೇತ್ ದಾಖಲೆಯೂ ಬೋಧಿಸತ್ವನ ಮತ್ತೊಂದು ಪ್ರತಿಮೆಯ ಸ್ಥಾಪನೆಯಿಂದ ಪ್ರೇರಿತವಾಗಿದ್ದು, ಪ್ರಾಚೀನ ನಗರವಾದ ಶ್ರಾವಸ್ತಿಯ ಮೇಲೆ ಬೆಳಕು ಚೆಲ್ಲುತ್ತದೆ. ಆದಿತ್ಯಸೇನನ ಕಾಲವನ್ನು ಕ್ರಿ.ಶ. ೬೭೨-೭೩ ಎಂದು ಹೇಳುವ ಷಾಹಪುರ್ ಶಾಸನದ ವಿಷಯ ಸೂರ್ಯಪ್ರತಿಮೆಯ ಪ್ರತಿಷ್ಠಾಪನೆಗೆ ಸಂಬಂಧಿಸಿದೆ. ಕ್ರಿ.ಶ. ೮೪೨ ರ ಧೋಲ್‌ಪುರ ಶಾಸನದ ವಿಷಯ ಸೂರ್ಯ ದೇವಾಲಯವೊಂದರ ನಿರ್ಮಾಣ.

ಕ್ರಿ.ಶ. ೪೬ ರ ಗೊಂಡೊಫರ್ನೆಸನ ತಖ್ತ್-ಇ-ಬಹಯೀ ಶಾಸನ ಕ್ರೈಸ್ತಧರ್ಮ ಪ್ರಚಾರದ ಬಗೆಗೆ ಸ್ವಾರಸ್ಯಪೂರ್ಣವಾದ ವಿವರಗಳನ್ನೊದಗಿಸುತ್ತದೆ.

ಜಮೀನೊಂದರ ಒಡೆತನವನ್ನು ಕುರಿತ ಇಬ್ಬರು ಪುರೋಹಿತರ ವ್ಯಾಜ್ಯ 'ದಿವ್ಯ'ದಿಂದ ಇತ್ಯರ್ಥಗೊಂಡುದನ್ನು ಕಿತ್ತೂರಿನ ಶಾಸನವೊಂದು ತಿಳಿಸುತ್ತದೆ. ಬುಕ್ಕರಾಯ ಜೈನರಿಗೂ ವೈಷ್ಣವರಿಗೂ ರಾಜಿ ಮಾಡಿಸಿ, ಮತೀಯ ವಿವಾದವೊಂದನ್ನು ಪರಿಹರಿಸಿದ ವಿಷಯ, ಅವನ ಮಹತ್ವಪೂರ್ಣವಾದ ಶ್ರವಣಬೆಳಗೊಳ ಶಾಸನದಲ್ಲಿ (ಕ್ರಿ.ಶ.೧೩೬೮) ಉಕ್ತವಾಗಿದೆ.

ಸಾಂಚಿ, ಭಾರೂತ್‌ಗಳಲ್ಲಿನ ಅನೇಕ ಶಾಸನಗಳು ಯಾತ್ರಾಸ್ಥಳ ಸಂದರ್ಶನದ ಸ್ಮಾರಕಗಳಷ್ಟೆ. ಯಾತ್ರಿಕರ ಈ ದಾಖಲೆಗಳು ಭೌಗೋಳಿಕ ದೃಷ್ಟಿಯಿಂದ ಉಪಯುಕ್ತವೆಂದು ಹೇಳಲಾಗಿದೆ.

ಭಟ್ಟಿಪ್ರೋಲು ಸ್ತೂಪದಲ್ಲಿ ಸಿಕ್ಕಿರುವ ಬುದ್ಧಾವಶೇಷ ಸಂಬಂಧವಾದ ಅನೇಕ ಶಾಸನಗಳು ಬ್ರಾಹ್ಮಿ ಲಿಪಿಯ ವಿಶಿಷ್ಟ ಪ್ರಕಾರವೊಂದನ್ನೊಳಗೊಂಡಿದ್ದು, ಭಾರತದಲ್ಲಿ ಬರವಣಿಗೆಯ ಕಲೆ ಬೆಳೆದುಬಂದ ಬಗೆಯನ್ನು ಅಭ್ಯಸಿಸುವಲ್ಲಿ ಮುಖ್ಯವಾಗಿವೆ.

## 116.3.3 ಧಾರ್ಮಿಕ ದತ್ತಿಗಳನ್ನು ಹೇಳುವ ಶಾಸನಗಳು

ದೇವತೆಗಳಿಗೆ, ದೇವಾಲಯಗಳ ಪರವಾಗಿ ಅರ್ಚಕರಿಗೆ, ಸಂಘ ಸಂಸ್ಥೆಗಳಿಗೆ ನೀಡಿದ ದತ್ತಿಗಳನ್ನು ಹೇಳುವ ಶಾಸನಗಳು ಈ ವರ್ಗದಲ್ಲಿ ಅಳವಡುತ್ತವೆ. ಚರಿತ್ರೆ ಇವುಗಳಲ್ಲಿ ಆನುಷಂಗಿಕ ಸಾಮಗ್ರಿಯಾಗಿ ಮಾತ್ರ ಕಾಣಿಸಿಕೊಳ್ಳುತ್ತದೆ.

ಬರಾಬರ್ ಹಾಗೂ ನಾಗಾರ್ಜುನಿ ಬೆಟ್ಟಗಳ ಮೇಲಿನ ಗುಹೆಗಳಲ್ಲಿ ಸಿಕ್ಕಿದ ದಶರಥನೆಂಬ ದೊರೆಯ ಶಾಸನಗಳು ಆಜೀವಕ ಸನ್ಯಾಸಿಗಳ ಸಂಘವೊಂದಕ್ಕೆ ಆ ಗುಹೆಗಳ ಸಮರ್ಪಣವನ್ನು ಉಲ್ಲೇಖಿಸುತ್ತವೆ. ಕ್ಷಹರಾತ ರಾಜ ನಹಪಾನನ ಅಳಿಯ ಉಷವದಾತನ ನಾಸಿಕ್ ಶಾಸನ (ಕ್ರಿ.ಶ. ೧೨೦) ಬೌದ್ಧ ಭಿಕ್ಷು ಸಂಘವೊಂದಕ್ಕೆ ಆ ಗುಹೆಯನ್ನು ಧನ ಮತ್ತು ತೆಂಗಿನ ತೋಟದೊಡನೆ ಸಮರ್ಪಿಸಿದ್ದನ್ನು ಹೇಳುತ್ತದೆ. ಸ್ಕಂದಗುಪ್ತನ ಭಿತರಿ ಸ್ತಂಭ ಶಾಸನದಲ್ಲಿ ವಿಷ್ಣುವಿಗೂ, ಒಂದನೆಯ ಪರಮೇಶ್ವರವರ್ಮನ ಕೂರಂ ಶಾಸನದಲ್ಲಿ ಶಿವನಿಗೂ ಗ್ರಾಮಗಳ ಅರ್ಪಣೆಯನ್ನು ಹೇಳಲಾಗಿದೆ. ಸ್ಕಂದಗುಪ್ತನ ಕಾಲದ ಇಂದೂರ್ ಶಾಸನ (ಕ್ರಿ.ಶ. ೪೬೬) ಸೂರ್ಯ ದೇವಾಲಯವೊಂದಕ್ಕೆ ದೀಪದ ಎಣ್ಣೆಗಾಗಿ ದತ್ತಿಬಿಟ್ಟುದನ್ನು ಹೇಳುತ್ತದೆ. ಬನವಾಸಿಯ ಕದಂಬರ ಕೆಲವು ಶಾಸನಗಳಲ್ಲಿ ಜಿನೇಂದ್ರನಿಗೂ ಅನೇಕ ಜೈನ ಪಂಥಗಳ ಸದಸ್ಯರಿಗೂ ಭೂಮಿಯನ್ನೂ, ಗ್ರಾಮಗಳನ್ನೂ ದಾನ ಮಾಡಿದ ವಿಷಯ ದಾಖಲಾಗಿದೆ.

ಆತಕೂರು ಶಾಸನದ (ಕ್ರಿ.ಶ. ೯೪೯-೫೦) ಮುಖ್ಯ ದಾಖಲೆ ಶಿವಾಲಯಕ್ಕೆ ಮಾಡಲಾದ ಭೂದಾನವನ್ನು ಉಲ್ಲೇಖಿಸುತ್ತದೆ; ಕಾಳಿಯೆಂಬ ನಾಯಿಗೂ ಒಂದು ಕಾಡುಹಂದಿಗೂ ಕಾಳಗವಾಗಿ, ಹಂದಿ ನಾಯಿಗಳೆರಡೂ ಸತ್ತ ಸಂದರ್ಭ ಆ ದಾನಕ್ಕೆ ಪ್ರೇರಣೆ.

ಭಾಸ್ಕರ ರವಿವರ್ಮನ ಕೊಚಿನ್ ಶಾಸನದಲ್ಲಿ ಯಹುದ್ಯರಿಗೆ ಗ್ರಾಮವೊಂದರ ನೀಡಿಕೆ ಉಕ್ತವಾಗಿದೆ. ಏಕಾಂತದ ರಾಮಯ್ಯ ತಾನು ಕಟ್ಟಿಸಿದ ದೇವಾಲಯಗಳಿಗೆ ಕೊಟ್ಟ ಗ್ರಾಮಗಳನ್ನು ಹೆಸರಿಸುತ್ತದೆ ಅಬ್ಲೂರು ಶಾಸನ (ಕ್ರಿ.ಶ. ಸು. ೧೨೦೦). ವಿಷ್ಣುವರ್ಧನನ ಬೇಲೂರು ಶಾಸನವೂ (೧೧೧೭) ದೇವಾಲಯಕ್ಕೆ ದತ್ತಿಬಿಟ್ಟುದನ್ನು ಮುಖ್ಯ ವಿಷಯವಾಗಿ ಉದ್ದೇಶಿಸಿದೆ. (ಅದು ಪ್ರಶಸ್ತಿ ಶಾಸನವೂ ಹೌದು).

## 116.3.4 ಲೌಕಿಕ ದಾನಗಳನ್ನು ಹೇಳುವ ಶಾಸನಗಳು

ಖಾಸಗಿ ವ್ಯಕ್ತಿಗಳಿಗೆ ನೀಡಿದ ಲೌಕಿಕ ದಾನಗಳನ್ನು ದಾಖಲು ಮಾಡುವ ಶಾಸನಗಳು ಈ ವರ್ಗದಲ್ಲಿ ಬರುತ್ತವೆ. ಕದಂಬ ದೊರೆ ಕಾಕುಸ್ಥವರ್ಮನ ಹಲಸಿ ಶಾಸನ ಶ್ರುತಕೀರ್ತಿಯೆಂಬ ಸೇನಾಪತಿಗೆ ಬಹುಮಾನವಾಗಿ ಭೂದಾನ ಮಾಡಿದ್ದನ್ನು ಹೇಳುತ್ತದೆ. ಆತಕೂರು ಶಾಸನದ ಪೂರಕ ದಾಖಲೆಯಲ್ಲಿ ಪಶ್ಚಿಮ ಗಂಗರಾಜ ಇಮ್ಮಡಿ ಬೂತುಗನಿಗೆ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣ ಅನೇಕ ಪ್ರಾಂತಗಳನ್ನು ನೀಡಿದ ವಿಷಯ ದಾಖಲಾಗಿದೆ.

ಹಾರಿತೀಪುತ್ತ ದೊರೆಯ ಮಳವಳ್ಳಿ ಸ್ತಂಭಶಾಸನ ಒಬ್ಬ ಬ್ರಾಹ್ಮಣನಿಗೆ ಗ್ರಾಮ ಸಮೂಹದ ದಾನವನ್ನು ದಾಖಲು ಮಾಡುತ್ತದೆ. ಅದೇ ಸ್ತಂಭದ ಮೇಲಿರುವ ಕದಂಬರಾಜ ಶಿವ-ಸ್ಕಂದವರ್ಮನ ಶಾಸನದಲ್ಲಿ ಆ ದಾನದ ನವೀಕರಣವಿದೆ.

ಪಲ್ಲವರಾಜ ಶಿವಸ್ಕಂದವರ್ಮನ ಮಯಿದವೋಲು ಶಾಸನ ಮತ್ತು ಜಯವರ್ಮನ ಕೊಂಡಮುಡಿ ಶಾಸನ ಬ್ರಾಹ್ಮಣರಿಗೆ ದಾನ ಕೊಟ್ಟುದನ್ನು ಹೇಳುತ್ತವೆ. ಬ್ರಾಹ್ಮಣರಿಗೆ ಗ್ರಾಮಾರ್ಧವನ್ನೂ ಸ್ವಲ್ಪ ಭೂಮಿಯನ್ನೂ ಕೊಟ್ಟುದನ್ನು ಹೇಳುವುದು ಕ್ರಿ.ಶ. ೭೫೪ ರ ಪಟ್ಟದಕಲ್ಲು ಸ್ತಂಭಶಾಸನದ ಉದ್ದೇಶ.

ಹರ್ಷವರ್ಧನನ ಮಧುಬನ್ ಶಾಸನದ (ಕ್ರಿ.ಶ. ೬೩೦-೩೧) ಉದ್ದೇಶ, ಕೃತಕ ದಾಖಲೆಯೊಂದರ ಮೂಲಕ ಯಾರೋ ಪಡೆದುಕೊಂಡಿದ್ದ ಒಂದು ಗ್ರಾಮದ ಹಿಡುವಳಿಯನ್ನು ತಪ್ಪಿಸಿ, ಅದೇ ಗ್ರಾಮವನ್ನು ಬೇರೆ ಇಬ್ಬರು ಬ್ರಾಹ್ಮಣರಿಗೆ ಅಧಿಕೃತವಾಗಿ ಕೊಟ್ಟುದನ್ನು ಪ್ರಕಟಿಸುವುದು.

ವಾಕಾಟಕ ದೊರೆ ಇಮ್ಮಡಿ ಪ್ರವರಸೇನನ ಚಮ್ಮಕ್ ಶಾಸನ ಆ ಗ್ರಾಮವನ್ನು ಒಂದು ಸಾವಿರ ಮಂದಿ ಬ್ರಾಹ್ಮಣರಿಗೆ ದಾನಕೊಟ್ಟುದರ ದಾಖಲೆಯಾಗಿದೆ. ಕ್ರಿ.ಶ. ೧೨೭೨ ರ ಪೈಠಾಣ್‌ಪಟಗಳು ೫೭ ಮಂದಿ ಬ್ರಾಹ್ಮಣರಿಗೆ ಕೆಲವು ಗ್ರಾಮಗಳನ್ನು ಕೊಡುವುದಕ್ಕಾಗಿ ಹೊರಡಿಸಿದವು. ಕ್ರಿ.ಶ. ೭೫೭ ರ ವಕ್ಕಲೇರಿ ಪಟಗಳಲ್ಲಿ, ಗ್ರಾಮವೊಂದನ್ನು ಒಬ್ಬ ಬ್ರಾಹ್ಮಣನಿಗೆ ಕೊಟ್ಟ ಸಂಗತಿ ದಾಖಲಾಗಿದೆ.

ರಾಷ್ಟ್ರಕೂಟ ದೊರೆ ೧ನೆಯ ಅಮೋಘವರ್ಷ, ಬೆಣ್ಣೆಯ ಅಥವಾ ತುಪ್ಪದ ಮೇಲಿನ ತೆರಿಗೆ ಗ್ರಾಮದ ಮಹಾಜನರಿಗೆ ಸಲ್ಲಬೇಕೆಂದು ಆಜ್ಞೆ ಹೊರಡಿಸಿದ್ದನ್ನು ದಾಖಲು ಮಾಡುತ್ತದೆ ಕ್ರಿ.ಶ. ೮೬೬ ರ ನೀಲಗುಂದ್ ಶಾಸನ. ಬಹುಪಾಲು ವೀರಗಲ್ಲುಗಳೂ ಈ ವರ್ಗದಲ್ಲಿ ಸೇರುತ್ತವೆ. ಅವು ವೀರರ ಮರಣಗಳನ್ನು ಸ್ಮರಿಸುತ್ತವೆ ಮಾತ್ರವಲ್ಲದೆ, ಭೂಮಿದಾನವನ್ನೂ ಹೇಳುತ್ತವೆ. ನಿದರ್ಶನಕ್ಕೆ, ಕ್ರಿ.ಶ. ೯೦೮-೩೮ ರ ಅವಧಿಯ ಬೇಗೂರು ಶಾಸನ, ಕದನವೊಂದರಲ್ಲಿ ಮಡಿದ ನಾಗತ್ತರ ಸೇನೆಯ ದಂಡನಾಯಕನ ಮರಣವನ್ನು ಹೇಳುವುದಲ್ಲದೆ, ಅವನ ಉತ್ತರಾಧಿಕಾರಿಯ ನೇಮಕವನ್ನೂ ಅವನಿಗೆ ಅನೇಕ ಗ್ರಾಮಗಳ ದಾನವನ್ನೂ ದಾಖಲು ಮಾಡುತ್ತದೆ.

ಈ ತೆರನಾದ ಲೌಕಿಕ ದಾನಗಳಿಗೆ ಸಂಬಂಧಿಸಿದಂತೆ ಯೋಧನ ಕತ್ತಿಯನ್ನು ತೊಳೆಯುವ ವಿಧಿ ಆಚರಣೆಯಲ್ಲಿತ್ತೆಂದು ತಿಳಿದುಬರುತ್ತದೆ. ಧಾರ್ಮಿಕ ದಾನಗಳನ್ನಿತ್ತಾಗ, ಅದನ್ನು ಸ್ವೀಕರಿಸುವ ಪುರೋಹಿತನ ಪಾದ ತೊಳೆಯುವ ವಿಧಿ ಪ್ರಚಲಿತವಾಗಿತ್ತೆಂದೂ ಅಂತೆಯೆ ಲೌಕಿಕ ದಾನಗಳಲ್ಲಿ ಖಡ್ಗಪ್ರಕ್ಷಾಲನ ನಡೆಯುತ್ತಿತ್ತೆಂದೂ ಹೇಳಲಾಗಿದೆ. ಹಲ್ಮಿಡಿ ಶಾಸನದಲ್ಲಿ ಬರುವ 'ಬಾಳ್ಗಚ್ಚು' ಎಂಬ ಮಾತು ಮೂಲತಃ ಈ ಖಡ್ಗಪ್ರಕ್ಷಾಲನ ಸಮಾರಂಭವನ್ನು ಸೂಚಿಸುವಂಥದು (ಆಮೇಲೆ ಅದಕ್ಕೆ 'ದತ್ತಿ' ಎಂಬ ಅರ್ಥ ಪ್ರಾಪ್ತವಾಯಿತು.)

* * *

ಶಾಸನ ಸಮುದಾಯದಲ್ಲಿ ದಾನಶಾಸನಗಳ ಸಂಖ್ಯೆಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ದಾನಶಾಸನಗಳಲ್ಲೂ, ರಾಜದಾನಗಳನ್ನು ಹೇಳುವ ಶಾಸನಗಳು ಬಹುಸಂಖ್ಯಾತವಾಗಿವೆ ('ಶಾಸನ' ಶಬ್ದಕ್ಕಿರುವ 'ರಾಜಾಜ್ಞೆ' ಎಂಬ ಮೂಲಾರ್ಥ ಇವುಗಳಿಗೆ ಸಂಗತವಾಗುತ್ತದೆ ಎಂಬುದನ್ನು ನೆನೆಯಬೇಕು). ಇವು ಸಾಮಾನ್ಯವಾಗಿ ತಾಮ್ರಪಟಗಳ ಮೇಲಿರತಕ್ಕ ಶಾಸನಗಳು ಎಂಬುದು ಗಮನಾರ್ಹ. (ಎಷ್ಟೋ ಶಿಲಾಶಾಸಗಳೂ ರಾಜದಾನಗಳನ್ನು ಹೇಳುತ್ತಿದ್ದು, ತಾಮ್ರಪಟಗಳ ಏಕಕಾಲೀನ ಕೊಡುಗೆಯನ್ನು ಅವುಗಳಲ್ಲಿ ಕೆಲವು ಉಲ್ಲೇಖಿಸುವುದುಂಟು. ಇಂಥ ಶಿಲಾಶಾಸನಗಳು ದಾನದ ಸಾರ್ವಜನಿಕ ಸೂಚನೆಗಳು. ಹಲ್ಮಿಡಿ ಶಿಲಾಶಾಸನ ದಾನಸಂಬಂಧವಾದುದೆಂಬುದನ್ನು ಗಮನಿಸಬಹುದು.) ಆದ್ದರಿಂದ, ತಾಮ್ರಪಟಗಳು ದಾನ ತೆಗೆದುಕೊಂಡವರ ಪಾಲಿಗೆ ಹಕ್ಕಿನ ಪತ್ರ (title deed)ಗಳಾಗಿರುತ್ತವೆ ; ಅವುಗಳದು ಅಧಿಕೃತ ಸ್ವರೂಪ.

ರಾಜದಾನಗಳನ್ನು ಹೇಳುವ ಶಾಸನಗಳನ್ನು ಸ್ವತಃ ರಾಜರೋ ಅಥವಾ ರಾಜ್ಯದ ಭೂಮಿಯನ್ನು ದಾನಮಾಡಲು ರಾಜನಿಂದ ಅಧಿಕಾರಪಡೆದವರೋ ಹೊರಡಿಸಿರುತ್ತಾರೆ. ರಾಜನೇ ಸ್ವತಃ ಶಾಸನ ಹಾಕಿಸಿದಾಗ ಅವನ ವೃತ್ತಾಂತ ಮತ್ತು ಶಾಸ್ತ್ರೋಕ್ತವಾಗಿ ಅವನ ವಂಶಾವಳಿ ಅದರಲ್ಲಿ ಬಂದೇ ಬರುವುದು ಸಹಜ. ರಾಜನ ಪರವಾಗಿ ಒಬ್ಬ ಮಾಂಡಳಿಕನೊ ಉನ್ನತಾಧಿಕಾರಿಯೋ ಭೂದಾನಮಾಡಿ ಶಾಸನ ಹಾಕಿಸಿದಾಗಲೂ ಆಯಾ ರಾಜನ ವಿಷಯ ಅದರಲ್ಲಿ ಉಕ್ತವಾಗುತ್ತದೆ ; ಏಕೆಂದರೆ ದಾನ ಮಾಡುವವರು ತಮ್ಮ ಕಾರ್ಯಗಳಿಗೆ ಅಧಿಕಾರ ತೋರಿಸಬೇಕು. ಹೀಗಾಗಿ ಇಂತಹ ರಾಜದಾನ ಶಾಸನಗಳಲ್ಲಿ ಚಾರಿತ್ರಿಕ ಸಂಗತಿಗಳು ದಟ್ಟವಾಗಿ ಹಣೆದೋರುತ್ತವೆ.

ಭಾರತೀಯ ದೊರೆಗಳು ಪುಣ್ಯಾರ್ಜನೆಗಾಗಿ ಯಾಗಗಳ ಸ್ಥಾನದಲ್ಲಿ ದಾನಗಳನ್ನು ಮಾಡತೊಡಗಿದರೆಂದು ಹೇಳಲಾಗಿದೆ. ಆದ್ದರಿಂದ ಧಾರ್ಮಿಕ ಮನೋಭಾವವೆ ಭರತಖಂಡದ ಬಹುಪಾಲು ಶಾಸನಗಳ ಹಿನ್ನೆಲೆಯೂ ಬೆನ್ನೆಲುಬೂ ಆಗಿದೆ. "ಬಹುಪಾಲು ಶಾಸನ ಸಾಮಗ್ರಿಗಳು ನಮಗೆ ಉಳಿದು ಬಂದಿರುವುದಕ್ಕೆ ಕಾರಣ, ಹಿಂದೂಗಳ ಯಾವುದೇ ಐತಿಹಾಸಿಕ ಪ್ರವೃತ್ತಿಯಲ್ಲ. ಅವರ ಸ್ವಭಾವದ ಧಾರ್ಮಿಕ ಪಾರ್ಶ್ವ ಮತ್ತು ಸಾಧ್ಯವಾದ ಪ್ರತಿಯೊಂದು ಸಂದರ್ಭಗಳಲ್ಲೂ ದಾನಗಳನ್ನು ಕೊಡಬೇಕೆಂಬ ಅವರ ಆಸೆ" ಎಂಬ ಫ್ಲೀಟರ ಮಾತುಗಳನ್ನು ಲಕ್ಷಿಸಬಹುದು. ಚರಿತ್ರೆಯನ್ನು ಶಾಸನಗಳು ಉದ್ದೇಶಿಸದಿದ್ದರೂ, ಇಂದು ಚರಿತ್ರೆಯ ರಚನೆಗೆ ಅವೇ ಅತ್ಯಂತ ಉಪಾದೇಯ ಪರಿಕರಗಳು.

"ಧರ್ಮಸಂಬಂಧವಾದುದೆಲ್ಲದರ ಪ್ರಾಮುಖ್ಯವನ್ನು ಹೆಚ್ಚಿಸುವುದಕ್ಕಾಗಿ (ಚರಿತ್ರೆಯನ್ನು ಸಂರಕ್ಷಿಸುವ ಸ್ಪಷ್ಟೋದ್ದೇಶದಿಂದಲ್ಲ) ಶಾಸನ ದಾಖಲೆಗಳ ಸಮಗ್ರರಾಶಿ ಕಾಲಕ್ರಮದಲ್ಲಿ ಸಂಚಿತವಾಯಿತು ; ಮುಖ್ಯವಾಗಿ ಅದರಿಂದಲೇ ಈಗ ಭಾರತದ ಪ್ರಾಚೀನ ಇತಿಹಾಸವನ್ನು ಸಂಕಲಿಸುತ್ತಿರುವುದು" ಎಂಬ ಫ್ಲೀಟರ ಹೇಳಿಕೆ ಮನನಯೋಗ್ಯ.

## 116.4 ಶಾಸನ ಸಾಮಗ್ರಿಗಳು : ಲೋಹ

ಶಾಸನ ಸಾಮಗ್ರಿಗಳಲ್ಲಿ ಲೋಹಗಳು, ಶಿಲೆ, ಮಣ್ಣಿನ ವಸ್ತುಗಳು ಮತ್ತು ಇತರ ಪದಾರ್ಥಗಳು ಎಂದು ಅನೇಕ ಪ್ರಕಾರಗಳನ್ನು ಕಲ್ಪಿಸಬಹುದು. ಇವುಗಳನ್ನು ಈಗ ನಿದರ್ಶನಪೂರ್ವಕವಾಗಿ ಅವಲೋಕಿಸೋಣ.

### 116.4.1 ತಾಮ್ರ

ಶಾಸನಗಳಿಗೆ ಸಂಬಧಿಸಿದಂತೆ ತಾಮ್ರ ಅತ್ಯಂತ ಜನಪ್ರಿಯವಾದ ಲೋಹಸಾಮಗ್ರಿಯಾಗಿತ್ತು ; ಆದ್ದರಿಂದ ಲೋಹ ಶಾಸನಗಳಲ್ಲಿ ಬಹುಪಾಲು ತಾಮ್ರ ಶಾಸನಗಳೇ ಆಗಿದ್ದು, ತಾಮ್ರಪಟಗಳ ಮೇಲೆ ಕೊರೆಯಲ್ಪಟ್ಟಿವೆ. ಇವು ಆಕಾರದಲ್ಲಿ ಸುಮಾರು $2\ ^1/_2$ X $1\ ^7/_8$ ಅಂಗುಲದಿಂದ ಹಿಡಿದು ೨ ಅಡಿ ೬ ಅಂಗುಲ ಚದರದವರೆಗೆ ವ್ಯಾಪ್ತಿಯುಳ್ಳವಾಗಿವೆ.

ಬ್ರಾಹ್ಮಣರ ಮತ್ತು ಜೈನರ ಯಂತ್ರಗಳೂ ಸ್ಮಾರಕಾರ್ಥವಾದ ಮತ್ತು ಸಮರ್ಪಣಪರವಾದ ಕೆಲವು ದಾಖಲೆಗಳೂ ತಾಮ್ರಪಟಗಳ ಮೇಲೆ ಕಂಡುಬಂದಿವೆ. ಗ್ರಂಥಗಳನ್ನು ಕೂಡ ತಾಮ್ರಪಟಗಳ ಮೇಲೆ ಕೊರೆದಿಡುವ ಪದ್ಧತಿ ಹಿಂದೆ ಇತ್ತೆಂದು ತಿಳಿದುಬರುತ್ತದೆ. ಕಾನಿಷ್ಕ ಕೆಲವು ಬೌದ್ಧ ಧರ್ಮಗ್ರಂಥಗಳನ್ನು ತಾಮ್ರಫಲಕಗಳ ಮೇಲೆ ಕೊರೆಸಿದನೆಂದು ಹಿಯಾನ್‌ತ್ಸಾಂಗನ ಹೇಳಿಕೆ. ಸಾಯಣನ ವೇದಭಾಷ್ಯ ತಾಮ್ರಪಟಗಳ ಮೇಲಿತ್ತೆಂದು ಒಂದು ಐತಿಹ್ಯವಿದೆ. ಹಲವಾರು ತಾಮ್ರಪಟಗಳ ಮೇಲೆ ಕೊರೆಯಲಾಗಿರುವ ಕೆಲವು ತೆಲುಗು ಕೃತಿಗಳು ತಿರುಪತಿಯಲ್ಲಿ ಇಂದಿಗೂ ಸುರಕ್ಷಿತವಾಗಿವೆಯೆನ್ನಲಾಗಿದೆ. ತಾಮ್ರದ ಪ್ರತಿಮೆಗಳ ಬುಡದಲ್ಲಿ ಶಾಸನಗಳಿರುವುದೂ ಗೃಹೋಪಯೋಗಿ ತಾಮ್ರವಸ್ತುಗಳ ಮೇಲೆ ಮಾಲೀಕರ ಹೆಸರು ಕೆತ್ತಿರುವುದೂ ಸಾಮಾನ್ಯ.

ಮುಖ್ಯವಾಗಿ, ರಾಜರು ಮತ್ತು ಸಾಮಂತರು ಕೊಟ್ಟ ದಾನಗಳನ್ನು ಹೇಳುವ ಶಾಸನಗಳು ತಾಮ್ರಪಟಗಳ ಮೇಲೆ ಕಂಡುಬರುತ್ತವೆ. ದಾನಪರವಾದ ತಾಮ್ರಪಟಗಳು ಭಾರತದ ಬೌದ್ಧ ಮಠಗಳಲ್ಲಿದ್ದುವೆಂದೂ ಅವುಗಳಲ್ಲಿ ಕೆಲವು ಬುದ್ಧನ ಕಾಲದಿಂದ ಬಂದುವೆಂದೂ ಫಾಹಿಯಾನನ (ಕ್ರಿ.ಶ. ಸು. ೪೦೦) ಹೇಳಿಕೆ. ಇದು ಎಷ್ಟರಮಟ್ಟಿಗೆ ಸತ್ಯವೋ ಹೇಳುವುದು ಕಷ್ಟ. ಆದರೆ ತಾಮ್ರಪಟಗಳ ಮೇಲೆ ದಾನಶಾಸನಗಳನ್ನು ಹೊರಡಿಸುವ ಪದ್ಧತಿ ಬಹಳ ಪ್ರಾಚೀನವಾದುದೆಂಬುದರಲ್ಲಿ ಸಂಶಯವಿಲ್ಲ.

ದಾನಶಾಸನಗಳನ್ನೊಳಗೊಂಡ ತಾಮ್ರಪಟಗಳು ಪತ್ರಸಂಖ್ಯೆಯಲ್ಲಿ, ಆಕಾರದಲ್ಲಿ ಮತ್ತು ವಿಷಯ ವ್ಯವಸ್ಥೆಯಲ್ಲಿ ಕಾಲದೇಶಾನುಗುಣವಾಗಿ ವೈವಿಧ್ಯಪೂರ್ಣವಾಗಿವೆ. ಅನೇಕ ತಾಮ್ರಪಟಗಳು ಚಿಕ್ಕವೂ ತೆಳುವೂ ಹಗುರವೂ ಆಗಿದ್ದರೆ ಮತ್ತೆ ಕೆಲವು ದೊಡ್ಡವೂ ದಪ್ಪವೂ ಭಾರವೂ ಆಗಿವೆ. ಉದಾಹರಣೆಗೆ, ಪತಿಕನ ತಕ್ಷಶಿಲಾ ತಾಮ್ರಪಟ ಕೇವಲ ಮೂರೂವರೆ ಔನ್ಸ್ ತೂಕವಿದ್ದರೆ, ಕ್ರಿ.ಶ. ೧೨೭೨ ರ ಪೈಠಾಣ್ ತಾಮ್ರ ಶಾಸನ ೫೯ ಪೌಂಡು ೨ ಔನ್ಸು ಭಾರವಿದ್ದು ಒಂದು ಶಾಸನ ಕೌತುಕವೆನಿಸಿದೆ. ಅದಕ್ಕಿಂತಲೂ ಅದ್ಭುತವಾದದ್ದು ೧ ನೆಯ ರಾಜರಾಜೇಂದ್ರ ಚೋಳನ ತಿರುವಾಲಂಗಾಡು ಶಾಸನ (೧೧ ನೆಯ ಶ.) ; ೩೧ ಫಲಕಗಳನ್ನುಳ್ಳ ಈ ದಾಖಲೆ ಒಟ್ಟು ಸುಮಾರು ಎಂಟು ಮಣ ತೂಕವುಳ್ಳದ್ದೆಂದು ಹೇಳಲಾಗಿದೆ.

ತಾಮ್ರಪಟಗಳ ಆಕಾರ ಮುಖ್ಯವಾಗಿ ಕರಡುಪ್ರತಿಗಳ ಆಕಾರವನ್ನು ಅವಲಂಬಿಸುತ್ತಿತ್ತು. ಕರಡುಪ್ರತಿಗಳು ತಾಳಪತ್ರಗಳ ಮೇಲಿದ್ದಾಗ ತಾಮ್ರಪಟಗಳು ಕಿರಿದಾಗಿ ಉದ್ದವಾಗಿರುತ್ತಿದ್ದುವು ; ಕರಡು ಭೂರ್ಜಪತ್ರಗಳ ಮೇಲಿದ್ದಾಗ ಪಟಗಳು ಅಗಲವಾಗಿದ್ದು, ಹೆಚ್ಚು ಕಡಿಮೆ ಚಚ್ಚೌಕವಾಗಿರುತ್ತಿದ್ದುವು. ಪ್ರಶಸ್ತಿಯ ಅಂಶ ಹೆಚ್ಚಿದಷ್ಟೂ ತಾಮ್ರಪಟಗಳ ಆಕಾರ ವಿಸ್ತರಿಸುತ್ತಿತ್ತು ; ವಲಭಿಯ ಮೈತ್ರಕ ರಾಜರ ದಾಖಲೆಗಳು ಇದಕ್ಕೆ ಸಾಕ್ಷಿ. ಸಾಮಾನ್ಯವಾಗಿ ತಾಮ್ರಪಟಗಳದು ದೀರ್ಘ ಚತುರಸ್ರಾಕಾರ (ಉದ್ದ ಹೆಚ್ಚು, ಅಗಲ ಕಡಿಮೆ).

ಅನೇಕ ಉತ್ತರ ಭಾರತೀಯ ರಾಜವಂಶಗಳು ಏಕೈಕ ತಾಮ್ರಪಟದ ಮೇಲೆ ಒಂದು ಪಾರ್ಶ್ವದಲ್ಲಿ ಅಥವಾ ಎರಡು ಪಾರ್ಶ್ವಗಳಲ್ಲಿ ಶಾಸನ ಕೊರೆಸುತ್ತಿದ್ದುವು. ಆದರೆ ಬಹುಪಾಲು ದಕ್ಷಿಣ ಭಾರತೀಯ ರಾಜವಂಶಗಳು ಅನೇಕ ತಾಮ್ರಪಟಗಳನ್ನು ಬಳಸುತ್ತಿದ್ದುವು ; (ಅಸ್ಸಾಮಿನ ಭೌಮನಾರಕರಂತಹ ಉತ್ತರ ಭಾರತದ ದೊರೆಗಳೂ ಅನೇಕ ಪಟಗಳನ್ನು ಬಳಸುತ್ತಿದ್ದುದುಂಟು). ಕ್ರಿ.ಶ.ಸು. ೭೩೩-೭೪೭ ರ ಪಲ್ಲವರಾಜ ಪಲ್ಲವಮಲ್ಲ ನಂದಿವರ್ಮನ ಕಶಾಕೂಡಿ ಶಾಸನದಲ್ಲಿ ಹನ್ನೊಂದು ಪಟಗಳಿವೆ. ಎರಡು ತಾಮ್ರಪಟಗಳ ಒಳಭಾಗಗಳಲ್ಲಿ ಮಾತ್ರ ಶಾಸನ ಕೊರೆಸುವುದು ಕೆಲವು ಪಶ್ಚಿಮ ಭಾರತೀಯ ರಾಜವಂಶಗಳ ಪದ್ಧತಿಯಾಗಿತ್ತು. ಒಂದಕ್ಕಿಂತ ಹೆಚ್ಚು ತಾಮ್ರಪಟಗಳು ಬಳಕೆಗೊಂಡಾಗ, ಅವುಗಳನ್ನು ಎಡಗಡೆಯ ಅಥವಾ ಮೇಲ್ಭಾಗದ ರಂಧ್ರಗಳ ಮೂಲಕ ಹಾಯುವ ಒಂದು ಅಥವಾ ಎರಡು ತಾಮ್ರದ ಉಂಗುರಗಳಿಂದ ಕೂಡಿಸಲಾಗುತ್ತಿತ್ತು.

ಬಹುಮಟ್ಟಿಗೆ ಪರಸ್ಪರ ನಕಲುಗಳಾಗಿರುವ ಮೂರು ಪ್ರತ್ಯೇಕ ದಾಖಲೆಗಳಿದ್ದ ಸಂದರ್ಭದಲ್ಲಿ ಅವುಗಳನ್ನು 'ತ್ರಿಫಲೀ ತಾಮ್ರಶಾಸನ'ವೆಂದು ಕರೆಯುತ್ತಿದ್ದರು.

ಅನೇಕ ಪಟಗಳಿದ್ದಾಗ ಅವಕ್ಕೆ ಅಂಕಿ ಹಾಕುತ್ತಿದ್ದುದೂ ಉಂಟು; ಆದರೆ ಬರಹದ ಪಂಕ್ತಿಗಳಿಗೆ ಅಂಕಿ ಹಾಕುತ್ತಿರಲಿಲ್ಲ. (ಕೆಲವು ಶಿಲಾಶಾಸನಗಳಲ್ಲಿ ಪಂಕ್ತಿಗಳಿಗೆ ಅಂಕಿ ಹಾಕಿರುವುದು ಕಂಡುಬರುತ್ತದೆ) ತಾಮ್ರಪಟಗಳ ಮೇಲಿನ ಬರಹ ಅಡ್ಡಾದಿಡ್ಡ ಲಾಗಿರುವುದೂ ಉಂಟು.

ತಾಮ್ರಶಾಸನಗಳು ಹಕ್ಕಿನ ಪತ್ರಗಳಾಗಿದ್ದು ವೈಯಕ್ತಿಕ ವಶಕ್ಕೆ ಹೋಗುತ್ತಿದ್ದುದರಿಂದ, ಸ್ಥಿರವಾದ ಶಿಲಾಶಾಸನಗಳಂತಲ್ಲದೆ ಕಾಲಾನುಕ್ರಮದಲ್ಲಿ ಹಸ್ತಾಂತರಗೊಂಡು ತಮ್ಮ ಮೂಲಸ್ಥಾನಗಳಿಂದ ದೂರ ಸಾಗಿರುವುದಕ್ಕೆ ಎಷ್ಟೋ ನಿದರ್ಶನಗಳಿವೆ. (ಶಿಲಾಸ್ತಂಭಗಳೂ ಕಬ್ಬಿಣದ ಸ್ತಂಭಗಳೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಣೆಗೊಂಡಿರುವುದರ ವಿರಳ ನಿದರ್ಶನಗಳುಂಟು ; ನೋಡಿ ; ಫ್ಲೀಟರ 'ಶಾಸನಶಾಸ್ತ್ರ ಪರಿಚಯ', ಪು. ೬೬.) ಇಮ್ಮಡಿ ಕೀರ್ತಿವರ್ಮನ ಕ್ರಿ.ಶ. ೭೫೭ ರ ವಕ್ಕಲೇರಿ ಪಟಗಳನ್ನು ಇಲ್ಲಿ ಹೆಸರಿಸಬಹುದು. ಅವು ಸಿಕ್ಕಿದ್ದು ಕೋಲಾರ ಜಿಲ್ಲೆಯ ವಕ್ಕಲೇರಿಯಲ್ಲಾದರೂ, ಅವು ಮೂಲತಃ ಧಾರವಾಡ ಜಿಲ್ಲೆಯ ಸುಳ್ಳಿಯೂರಿಗೆ ಸಂಬಧಿಸಿದವು. ಆದ್ದರಿಂದ ಅವುಗಳಿಗೆ ಸುಳ್ಳಿಯೂರು ಪಟಗಳೆಂದು ನಾಮಕರಣ ಮಾಡುವುದು ಸೂಕ್ತ. ಮೌಖರಿ ದೊರೆ ಶರ್ವವರ್ಮನ ಮುದ್ರೆ ಉತ್ತರ ಭಾರತದ ದಾಖಲೆಯಾದರೂ, ಅದು ದೊರೆತುದು ಮಧ್ಯಪ್ರಾಂತಗಳ ಆಶೀರ್ಗರ್‌ನಲ್ಲಿ. ಹೀಗಾಗಿ, ಎಷ್ಟೋ ತಾಮ್ರ ದಾಖಲೆಗಳು ತಾವು ಉಪಲಬ್ಧವಾದ ಸ್ಥಳಗಳಿಗೆ ಮೂಲತಃ ಸಂಬಂಧಿಸಿದವಾಗಿರುವುದಿಲ್ಲ.

### 116.4.2 ಕಬ್ಬಿಣ

ದೆಹಲಿಯ ಬಳಿ ಮೆಹರೌಲಿಯಲ್ಲಿರುವ ಕಬ್ಬಿಣದ ಸ್ತಂಭದ ಮೇಲೆ ಇಮ್ಮಡಿ ಚಂದ್ರಗುಪ್ತನ (ಕ್ರಿ.ಶ. ೩೭೬-೪೧೩) ಶಾಸನವೊಂದಿದೆ ; ಅದರ ಕಾಲ ಸು. ೪೧೫. ಮಧ್ಯಭಾರತದ ಧಾರ್‌ನಲ್ಲಿರುವ ಮತ್ತೊಂದು ಕಬ್ಬಿಣದ ಸ್ತಂಭ ಅಕ್ಬರನ ಒಂದು ಪರ್ಷಿಯನ್ ಶಾಸನವನ್ನೊಳಗೊಂಡಿದೆ. ಅಬುಪರ್ವತದ ಅಚಲೇಶ್ವರ ದೇವಾಲಯದಲ್ಲಿರುವ ಕಬ್ಬಿಣದ ಬೃಹತ್ ತ್ರಿಶೂಲವೊಂದರ ಮೇಲೆ ವಿಕ್ರಮ ೧೪೬೮ ರ ಶಾಸನವೊಂದಿದೆ.

### 116.4.3 ಚಿನ್ನ ಮತ್ತು ಬೆಳ್ಳಿ

ಇವು ಅತ್ಯಮೂಲ್ಯ ಲೋಹಗಳಾದ್ದರಿಂದ, ಶಾಸನೋದ್ದೇಶಗಳಿಗೆ ಬಳಕೆಗೊಂಡಿರುವುದು ಬಹು ವಿರಳ. ಶ್ರೀಮಂತ ವರ್ತಕರ, ದೊರೆಗಳ ಮತ್ತು ಧಾರ್ಮಿಕ ಸಂಸ್ಥೆಗಳ ವಂಶ ದಾಖಲೆಗಳು ಸುವರ್ಣಫಲಕಗಳ ಮೇಲಿರುತ್ತಿದ್ದುವೆಂಬುದಕ್ಕೆ ಬೌದ್ಧ ಸಾಹಿತ್ಯದಲ್ಲಿ ಆಧಾರವಿದೆ. ರಾಜಪತ್ರಗಳನ್ನೂ ದತ್ತಿಗಳನ್ನೂ ಇಂಥ ಫಲಕಗಳ ಮೇಲೆ ಕೆತ್ತುತ್ತಿದ್ದರೆಂದು ಬೂಲರರ ಹೇಳಿಕೆ. ತಕ್ಷಶಿಲಾ ಅವಶೇಷಗಳಲ್ಲಿ ಮತ್ತು ಪಂಜಾಬಿನ ಗಂಗುವಿನಲ್ಲಿರುವ ಸ್ತೂಪವೊಂದರಲ್ಲಿ ಹರಕೆಯನ್ನು ಹೇಳುವ ಕೆಲವು ಬೌದ್ಧ ದಾಖಲೆಗಳು - ಚಿನ್ನದವು - ಸಿಕ್ಕಿವೆ.

ಬೆಳ್ಳಿಯ ಪಟಗಳ ಮೇಲಿರುವ ಕೆಲವು ಶಾಸನಗಳು ಭಟ್ಟಿಪ್ರೋಲು ಮತ್ತು ತಕ್ಷಶಿಲೆಯಲ್ಲಿ ಸಿಕ್ಕಿವೆ. ಮಾಣಿಕಿಯಾಲದ ಒಂದು ಸ್ತೂಪದಲ್ಲಿ ದೊರೆತ ಬೆಳ್ಳಿಯ ಶಾಸನವನ್ನೂ ಇಲ್ಲಿ ಹೆಸರಿಸಬಹುದು. ಕೆಲವು ಜೈನ ಬಸದಿಗಳಲ್ಲಿ ಬೆಳ್ಳಿಯ ತಗಡುಗಳ ಮೇಲೆ ಬರೆಯಲಾದ ಯಂತ್ರಗಳು ಕಂಡುಬಂದಿವೆ. ಬೆಳ್ಳಿಯ ಪದಾರ್ಥಗಳ ಮೇಲೆ ಅವುಗಳ ಮಾಲಿಕರ ಹೆಸರು ಕೆತ್ತಲ್ಪಡುವುದು ಹಿಂದಿನಿಂದಲೂ ಬಂದಿರುವ ಪದ್ಧತಿ.

### 116.4.4 ಕಂಚು

ತಾಮ್ರಪಟಗಳಿಗೆ ಲಗತ್ತಿಸಲಾಗುತ್ತಿದ್ದ ಬಹುಪಾಲು ಮುದ್ರೆಗಳು ತಾಮ್ರದವಾಗಿರದೆ ಕಂಚಿನವಾಗಿರುತ್ತಿದ್ದುವು ಎಂಬುದು ಗಮನಾರ್ಹ. (ತಾಮ್ರದ ಎರಕದಲ್ಲಿ ವಿವರಗಳು ಸ್ಫುಟವಾಗಿ ಮೂಡುತ್ತಿರಲಿಲ್ಲ). ಅನೇಕ ಕಂಚಿನ ವಿಗ್ರಹಗಳ ಪೀಠಗಳ ಮೇಲೆ ಶಾಸನಗಳು ಕಂಡುಬಂದಿವೆ. ಮಾಣಿಕಿಯಾಲದಲ್ಲಿ ಒಂದು ಶಾಸನಯುಕ್ತ ಕಂಚಿನ ಕರಡು ದೊರಕಿದೆ. ಸೋಹ್‌ಗೌರಾ ತಾಮ್ರಪಟ ಎಂದು ಕರೆಯಲ್ಪಡುವ ಶಾಸನ ನಿಜವಾಗಿ ಕಂಚಿನ ಫಲಕದ ಮೇಲಿದೆ. ಪೆಷಾವರ್‌ನಲ್ಲಿ ಸಿಕ್ಕಿದ ಒಂದು ಕಂಚಿನ ಶಿರದ ಸುತ್ತ ಒಂದು ಶಾಸನವಿದೆ. ಅನೇಕ ದೇವಾಲಯಗಳ ಘಂಟೆಗಳ ಮೇಲೆ ಅವುಗಳ ಕೊಡುಗೆಗೆ ಸಂಬಂಧಿಸಿದ ಬರಹ ಕೆತ್ತಲ್ಪಟ್ಟಿರುತ್ತದೆ.

### 116.4.5 ಹಿತ್ತಾಳೆ

ವರ್ದಕ್‌ನಲ್ಲಿರುವ ಸ್ತೂಪವೊಂದರಲ್ಲಿ ಹಿತ್ತಾಳೆಯ ಒಂದು ಅವಶೇಷ ಕಲಶದ ಮೇಲೆ ಶಾಸನವಿದೆ ; ಅದರ ಕಾಲ ಕ್ರಿ.ಪೂ. ೬. ಗಯಾದ ಹತ್ತಿರ ಸಿಕ್ಕಿದ ಬುದ್ಧನ ಹಿತ್ತಾಳೆ ವಿಗ್ರಹವೊಂದರ ಪೀಠದ ಮೇಲೆ ಶಾಸನವೊಂದಿದ್ದು, ಆ ಪ್ರತಿಮಯ ದಾನವನ್ನು ಹೇಳುತ್ತದೆ. ಚಂಬಾ ಪ್ರಾಂತದಲ್ಲಿ ಸಿಕ್ಕಿದ ಹಲವು ಹಿತ್ತಾಳೆ ಪ್ರತಿಮೆಗಳ ಮೇಲೆ ಅವುಗಳನ್ನು ಮಾಡಿಸಿದ ದೊರೆಯ ಮತ್ತು ಮಾಡಿದ ಕೆಲಸಗಾರರ ಹೆಸರುಗಳನ್ನು ಕೆತ್ತಲಾಗಿದೆ. ಶಾಸನಯುಕ್ತ ಹಿತ್ತಾಳೆ ಫಲಕಗಳನ್ನು ದೇವಾಲಯಗಳ ಬಾಗಿಲುಗಳ ಮೇಲೆ ಮೊಳೆ ಬಡಿದು ಲಗತ್ತಿಸಿರುವುದುಂಟು.

## 116.5 ಶಾಸನ ಸಾಮಗ್ರಿಗಳು : ಶಿಲೆ

ಬರಹವನ್ನು 'ಚಿರಸ್ಥಿತಿಕ'ವಾಗಿ ಮಾಡುವುದಕ್ಕೋಸುಗ ಶಿಲೆಯ ಮೇಲೆ ಕೆತ್ತಿಸುವ ರೂಢಿ ಬಹಳ ಹಿಂದಿನಿಂದಲೂ ಬಂದದ್ದು. ಈ ಶಿಲಾ ಸಾಮಗ್ರಿಯಲ್ಲಿ ಪ್ರಧಾನವಾಗಿ ಬಂಡೆಗಳು, ಸ್ತಂಭಗಳು, ಅವಶೇಷ ಪಾತ್ರೆಗಳು, ಸ್ತೂಪಗಳ ಹೊರಭಾಗಗಳು, ಗುಹೆಗಳು, ಪ್ರತಿಮೆಗಳು ಮತ್ತು ಪಟ್ಟಿಕೆಗಳ (tablet) ಮೇಲೆ ಶಾಸನಗಳನ್ನು ನೋಡುತ್ತೇವೆ.

### 116.5.1 ಬಂಡೆಗಳು

ಬಂಡೆಗಳ ಮೇಲಿನ ಶಾಸನಗಳಲ್ಲಿ ಬಹಳ ಪ್ರಸಿದ್ಧವಾದವು ಅಶೋಕನ ಶಾಸನಗಳು - ಮಾನ್‌ಸೆಹ್ರ, ಷಾಬಾಸ್‌ಗಡಿ, ಕಾಲ್ಸಿ, ಗಿರ್ನಾರ್, ಧೌಲಿ, ಜೌಗಡಗಳಲ್ಲಿರತಕ್ಕವು. ಇವುಗಳಲ್ಲಿ ಗಿರ್ನಾರ್ ಪ್ರಸ್ತರ ಅಶೋಕನ ಶಾಸನವನ್ನು ಮಾತ್ರವಲ್ಲದೆ ರುದ್ರದಾಮ, ಸ್ಕಂದ ಗುಪ್ತರ ಶಾಸನಗಳನ್ನೂ ಒಳಗೊಂಡಿದೆ. ಸಹಸ್ರಾಂ, ರೂಪನಾಥ್ ಮತ್ತು ಬೈರಾತ್, ಕರ್ನಾಟಕದ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರ - ಇಲ್ಲಿಯೂ ಅಶೋಕನ ಬಂಡೆಶಾಸನಗಳಿವೆ. ತನ್ನ ಪ್ರಸ್ತರ ಹಾಗೂ ಸ್ತಂಭಶಾಸನಗಳಲ್ಲಿ "ಅಶೋಕನು ತನ್ನ ಪ್ರಜೆಗಳ ಮಾರ್ಗದರ್ಶನಕ್ಕಾಗಿ ಧರ್ಮನೀತಿಗಳನ್ನು ಕುರಿತು ಹೊರಡಿಸಿದ ಮತ್ತು ಪಟ್ಟಣಗಳ ಒಳಗೆ ಅಥವಾ ಹತ್ತಿರದಲ್ಲಿ ಎಲ್ಲರಿಗೂ ಗೋಚರಿಸುವ ಸ್ಥಳಗಳಲ್ಲಿ ಅಥವಾ ಪ್ರವಾಸಿಗಳೂ ವ್ಯಾಪಾರಿಗಳೂ ತಿರುಗುವ ಹೆದ್ದಾರಿಗಳ ಸಮೀಪದಲ್ಲಿ ಅಥವಾ ಯಾತ್ರಿಕರು ಬರುವ ಪವಿತ್ರ ಸ್ಥಳಗಳ ಆಸುಪಾಸಿನಲ್ಲಿ ದಾಖಲು ಮಾಡಿಟ್ಟ ಪ್ರಕಟನೆಗಳನ್ನು ಕಾಣುತ್ತೇವೆ". ಬಂಡೆಗಳ ಮೇಲೆ ಶಾಸನಗಳನ್ನು ಹಾಕಿಸುವಲ್ಲಿ ಅವನು ಪರ್ಷಿಯದ ಡೇರಿಯಸ್ ಚಕ್ರವರ್ತಿಯ ಪ್ರಕಟನೆಗಳಿಂದ ಪ್ರೇರಿತನಾಗಿದ್ದಾನೆಂದು ಫ್ಲೀಟ್ ಹೇಳುತ್ತಾರೆ. ಬಂಡೆಗಳ ಮೇಲಿನ ಇತರ ಗಮನಾರ್ಹ ಶಾಸನಗಳೆಂದರೆ, ಕುಡಿ ಮಿಯಾಮಲೈ ಶಾಸನ, ಬೆಳಗಾಂ ಜಿಲ್ಲೆಯ ಎಕ್ಕೇರಿಯಲ್ಲಿರುವ ಇಮ್ಮಡಿ ಪುಲಿಕೇಶಿಯ ಶಾಸನ, ಶ್ರವಣಬೆಳ್ಗೊಳದ ಹಲವು ಶಾಸನಗಳು - ಇತ್ಯಾದಿ.

### 116.5.2 ಸ್ತಂಭಗಳು

ಅನೇಕ ಶಾಸನಗಳು ಧ್ವಜಸ್ತಂಭ, ಜಯಸ್ತಂಭ, ಕೀರ್ತಿಸ್ತಂಭ, ಯೂಪಸ್ತಂಭಗಳ ಮೇಲೆ ಕಂಡುಬಂದಿವೆ ; ಶಾಸನೋದ್ದೇಶಕ್ಕಾಗಿಯೆ ಶಿಲಾಸ್ತಂಭಗಳು ರೂಪುಗೊಂಡಿರುವುದೂ ಉಂಟು.

ಅಶೋಕನ ಏಳು ಸುಪ್ರಸಿದ್ಧ ಸ್ತಂಭಶಾಸನಗಳು ಅಲಹಾಬಾದ್, ದೆಹಲಿ, ರಾಧಿಯಾ, ಮಥಿಯಾ, ರಾಂಪೂರ್ವ - ಈ ಸ್ಥಳಗಳಲ್ಲಿ ಸಿಕ್ಕಿವೆ. ನೇಪಾಳದಲ್ಲಿ ದೊರೆತ ಅವನ ರುಮ್ಮಿಂದ್ಯೆ ಶಾಸನವನ್ನೂ ಗಮನಿಸಬೇಕು. ಅಶೋಕನ ಎರಡು ಪುಟ್ಟ ಶಾಸನಗಳನ್ನೂ ಕ್ರಿ.ಶ. ೩೭೫ ರ ಸಮುದ್ರಗುಪ್ತನ ಶಾಸನವನ್ನೂ ಒಳಗೊಂಡಿರುವ ಸ್ತಂಭ ಬಹಳ ಮುಖ್ಯವಾದುದು.

ಕ್ರಿ.ಶ. ೪೮೪ ರ ಬುಧಗುಪ್ತನ ಏರಣ್ ಶಾಸನ, ಯಶೋಧರ್ಮನ ಮಂದಸೋರ್ ಶಾಸನ, ತಾಳಗುಂದ ಶಾಸನ, ಕ್ರಿ.ಶ. ೬೦೨ ರ ಮಂಗಳೇಶನ ಮಹಾಕೂಟಶಾಸನ, ಕ್ರಿ.ಶ. ೭೫೪ ರ ಕೀರ್ತಿವರ್ಮನ ಪಟ್ಟದಕಲ್ಲು ಶಾಸನ, ಶ್ರವಣಬೆಳ್ಗೊಳದಲ್ಲಿರುವ ಕ್ರಿ.ಶ. ಸು. ೯೭೫ ರ ಮಾರಸಿಂಹನ ಮತ್ತು ಕ್ರಿ.ಶ. ೧೧೨೬ ರ ಮಲ್ಲಿಷೇಣನ ಸಮಾಧಿ ಲೇಖಗಳು - ಇವು ಸ್ತಂಭಗಳ ಮೇಲಿರುವ ಇತರ ಗಣ್ಯವಾದ ದಾಖಲೆಗಳು.

## 116.5.3 ಅವಶೇಷ ಪಾತ್ರೆಗಳು

ಬೌದ್ಧ ಸ್ತೂಪಗಳೊಳಗೆ ದೊರೆತ ಅವಶೇಷಪಾತ್ರೆಗಳ ಮೇಲಿನ ಶಾಸನಗಳಲ್ಲಿ ಬಹುಮುಖ್ಯವಾದುದು ಪಿಪ್ರಹ್ವ ದಾಖಲೆ; ಇದು ಉಪಲಬ್ಧ ಭಾರತೀಯ ಶಾಸನಗಳಲ್ಲಿ ಪ್ರಾಚೀನತಮವಾಗಿದ್ದು ಬುದ್ಧಾವಸಾನವಾದ ಒಂದು ಶತಮಾನದೊಳಗೆ ಹುಟ್ಟಿರಬಹುದೆನ್ನಲಾಗಿದೆ.

ಸಾಂಚಿಯ ಸ್ತೂಪವೊಂದರಲ್ಲಿ ಎರಡು ಸಾಬೂನುಗಲ್ಲಿನ ಕರಂಡಗಳು ಕಲ್ಲಿನ ಪೆಟ್ಟಿಗೆಗಳೊಳಗೆ ಸಿಕ್ಕಿವೆ, ಕರಂಡಗಳ ಮುಚ್ಚಳಗಳ ಒಳ ಭಾಗದಲ್ಲಿ 'ಸ' ಮತ್ತು 'ಮ' ಎಂದು ಮಸಿಯಲ್ಲಿ ಸಂಕೇತಾಕ್ಷರಗಳನ್ನು ಬರೆಯಲಾಗಿದೆ. ಪೆಟ್ಟಿಗೆಯ ಮುಚ್ಚಳಗಳ ಮೇಲೆ 'ಸಾರಿಪುತ' ಹಾಗೂ 'ಮೊಗಲಾನ' ಎಂಬ ಶಾಸನಗಳಿವೆ. ಬುದ್ಧನ ಆ ಇಬ್ಬರು ಶಿಷ್ಯ ಮುಖ್ಯರ ಸ್ಮಾರಕಗಳಿವು.

ಸೋನಾರಿಯ ಸ್ತೂಪಗಳಲ್ಲಿ ಶಾಸನಯುಕ್ತ ಸಾಬೂನುಗಲ್ಲಿನ ಕಳಶಗಳು ಸಿಕ್ಕಿವೆ ; ಅವು 'ಎಲ್ಲ ಹಿಮವತ್ ಪ್ರಾಂತದ ಆಚಾರ್ಯನಾದ ಸಂತ ಕೊತೀಪುತ-ಕಾಸಪಗೊತ' ಮುಂತಾದವರ ಅವಶೇಷಗಳನ್ನೊಳಗೊಂಡಿವೆ. ಸಾಂಚಿಯ ಸ್ತೂಪವೊಂದರಲ್ಲಿ ದೊರೆತ ಇನ್ನೊಂದು ಸಾಬೂನುಗಲ್ಲಿನ ಕರಂಡದ ಮೇಲಿನ ಶಾಸನ 'ಸಂತ ಮೊಗಲಿಪುತ'ನ ಅವಶೇಷಗಳನ್ನು ಹೇಳುತ್ತದೆ. ಅವನ ಮತ್ತೊಂದು ಸ್ಮಾರಕ ಅಂಧೇರ್‌ನ ಸ್ತೂಪವೊಂದರಲ್ಲಿ ಸಿಕ್ಕಿದ ಕಲಶವೊಂದರ ಮೇಲಿದೆ. ಅಶೋಕನ ಕಾಲದ ಒಬ್ಬ ಮಹಾಗುರು ಈ ಮೊಗಲಿಪುತ್ತ - ತಿಸ್ಸ.

ಅಂಧೇರ್‌ನ ಇನ್ನೊಂದು ಸ್ತೂಪದಲ್ಲಿ ಸಿಕ್ಕಿದ ಸಾಬೂನುಗಲ್ಲಿನ ಕರಂಡದ ಮೇಲ್ಭಾಗದಲ್ಲಿ 'ಸಂತ ಹಾರಿತೀಪುತ್ತ' ಎಂದು ಕೊರೆದಿದ್ದರೆ, ಅದರ ಮುಚ್ಚಳದ ಒಳಭಾಗದಲ್ಲಿ 'ಅಸದೇವನ ಕೊಡುಗೆ' ಎಂದು ಬರೆಯಲಾಗಿದೆ.

ಭಟ್ಟಿಪ್ರೋಲು ಸ್ತೂಪದಲ್ಲಿಯೂ ಮೂರು ಶಿಲಾ ಅವಶೇಷಪಾತ್ರೆಗಳು ದೊರೆತಿದ್ದು, ಅವುಗಳ ಮೇಲೆ ಒಂಬತ್ತು ಪುಟ್ಟಿ ಶಾಸನಗಳಿವೆ. ಇವುಗಳಲ್ಲಿ ಕುಬಿರಕ (ಅಥವಾ ಖುಬಿರಕ) ಎಂಬ ರಾಜನ ಉಲ್ಲೇಖವಿದೆ ; ಬುದ್ಧನ ಅವಶೇಷಗಳ ಪ್ರಸ್ತಾಪವಿದೆ. ಲಿಪಿಯ ದೃಷ್ಟಿಯಿಂದಲೂ ಇವು ಕುತೂಹಲಕಾರಿಯಾಗಿದೆ.

## 116.5.4 ಸ್ತೂಪಗಳ ಹೊರಭಾಗಗಳು

ಭಾರೂತ್‌ನಲ್ಲಿರುವ ಸ್ತೂಪದ ಪೂರ್ವದ್ವಾರದ ಸ್ತಂಭದ ಮೇಲೆ ಶಾಸನವೊಂದಿದ್ದು, ಧನಭೂತಿಯಿಂದ ದ್ವಾರದ ನಿರ್ಮಾಣವಾಯಿತೆಂಬುದನ್ನು ಹೇಳುತ್ತದೆ. ಶುಂಗವಂಶಕ್ಕೆ ಸಂಬಂಧಿಸಿದಂತೆ ಇದುವರೆಗೆ ತಿಳಿದುಬಂದಿರುವ ಏಕೈಕ ಶಾಸನವಾಗಿ ಇದು ಮಹತ್ವದ್ದಾಗಿದೆ.

ಸಾಂಚಿಯ ಸ್ತೂಪವೊಂದರ ದಕ್ಷಿಣದ್ವಾರದ ಮೇಲುತೊಲೆಯಲ್ಲಿ ಸಿಕ್ಕಿದ ಶಾಸನವೊಂದು ಪ್ರಾಚೀನದೊರೆ ಸಿರಿ ಸಾತಕಣಿಯನ್ನು ಹೆಸರಿಸುತ್ತದೆ. ಸಾಂಚಿಕೆ ಸ್ತೂಪಗಳಲ್ಲಿ ಇನ್ನೂ ಅನೇಕ ಪುಟ್ಟ ಶಾಸನಗಳಿದ್ದು, ಅನೇಕ ಆಧುನಿಕ ನಗರಗಳನ್ನು ಪ್ರಾಚೀನಕಾಲಕ್ಕೆ

ಕೊಂಡೊಯ್ಯುತ್ತವೆ. ಭಾರೂತ್ ಸ್ತೂಪದ ವಿವಿಧ ಭಾಗಗಳ ಮೇಲೆ ಸಿಕ್ಕಿದ ಕೆಲವು ದಾಖಲೆಗಳು ಭೌಗೋಳಿಕ ದೃಷ್ಟಿಯಿಂದ ಗಮನಾರ್ಹವಾಗಿವೆ.

ಶಿಲ್ಪಗಳನ್ನು ಹೆಸರಿಸುವ ಶಾಸನಗಳೆಷ್ಟೋ ಉಂಟು. ಅವು ಬೇರೆ ದೃಷ್ಟಿಗಳಿಂದಲೂ ಉಪಯುಕ್ತವಾಗಿವೆ ; ಕೆಲವರು ಪ್ರಾಚೀನ ರಾಜರನ್ನು ಹೇಳುವುದರಿಂದ. ಮತ್ರದ ಸೂಪ್ತವೊಂದರಲ್ಲಿ ಸಿಂಹಸ್ತಂಭಾಗ್ರದ ಮೇಲೆ ಶಾಸನಗಳಿವೆ ; ಹುವಿಷ್ಕನ ಕಾಲವಾದ ಮೇಲೆ ವಾಯುವ್ಯದಿಂದ ಒಂದು ಶಕ್ತಿ ಬಂದು ಭಾರತದ ಆ ಭಾಗವನ್ನು ಆಕ್ರಮಿಸಿಕೊಂಡಿತ್ತೆಂಬುದನ್ನು ಅವು ತಿಳಿಸುತ್ತವೆ. ಸಾಂಚಿಯ ಸ್ತೂಪವೊಂದರ ಪೂರ್ವದ್ವಾರದ ಹೊರಗಿನ ಕಂಬಿಯೊಂದರಲ್ಲಿ ಇಮ್ಮಡಿ ಚಂದ್ರಗುಪ್ತನ ಕಾಲವನ್ನು ಕ್ರಿ.ಶ. ೪೧೨ ಎಂದು ಹೇಳುವ ಶಾಸನವೊಂದಿದೆ.

## 116.5.5 ಗುಹೆಗಳು

ಗುಹೆಗಳ ವಿವಿಧ ಭಾಗಗಳ ಮೇಲೆ ಶಾಸನಗಳು ದೊರೆತಿವೆ. ಬಂಗಾಳದ ಬಾರಾಬರದಲ್ಲಿ ಮತ್ತು ನಾಗಾರ್ಜುನೀ ಬೆಟ್ಟಗಳಲ್ಲಿ ದಶರಥನೆಂಬ ದೊರೆಯ ಕೆಲವು ಶಾಸನಗಳು ಕಂಡುಬಂದಿವೆ.

ಒರಿಸ್ಸದ ಕಟಕ್ಕಿನ ಬಳಿಯಿರುವ ಹಾಥಿಗುಂಫ ಗುಹೆಯಲ್ಲಿ ಕಳಿಂಗದ ಖಾರವೇಲನ ಕ್ರಿ.ಪೂ. ೧೫೬-೫೫ ರ ಶಾಸನವೂ ನಾನಾಘಾಟ್ ಕಣಿವೆಯಲ್ಲಿನ ಒಂದು ಗುಹೆಯಲ್ಲಿ ಸಾತವಾಹನ - ಸಾತಕಣಿ ದೊರೆಯೊಬ್ಬನ ಪತ್ನಿಯಾದ ರಾಣಿ ನಾಯನಿಕೆಯ ಶಾಸನವೂ ಸಿಕ್ಕಿವೆ. ನಾಸಿಕ್, ಜುನ್ನರ್, ಕಾರ್ಲೆಯ ಗುಹೆಗಳಲ್ಲಿ ಕ್ಷಹರಾತ ದೊರೆ ನಹಪಾನನ ಮತ್ತು ಅವನ ಅಳಿಯ ಉಷವದಾತನ, ಗೋತಮೀಪುತ - ಸಾತಕಣಿಯ ಮತ್ತು ಅವನ ಮಗ ವಾಸಿಠೀಪುತ-ಪುಳುಮಾಯಿಯ ಶಾಸನಗಳು ಕಂಡುಬಂದು, ಕ್ರಿ.ಶ. ೧-೨ ನೆಯ ಶತಮಾನಗಳ ಪಶ್ಚಿಮಭಾರತದ ಚರಿತ್ರೆಯ ರಚನೆಗೆ ಬಹಳ ಸಹಾಯಕವಾಗಿವೆ.

## 116.5.6 ಪ್ರತಿಮೆಗಳು

ಪ್ರತಿಮೆಗಳ ಪೀಠಗಳು ಮುಂತಾದ ಭಾಗಗಳ ಮೇಲೆ ಕಂಡುಬಂದಿರುವ ಶಾಸನಗಳಲ್ಲಿ ವಿಶೇಷ ಗಮನಾರ್ಹವಾದವು ಇವು. ಬುದ್ಧಗಯೆಯಲ್ಲಿ ಬುದ್ಧನ ಬೃಹದ್‌ವಿಗ್ರಹದ ಬುಡದಲ್ಲಿರುವ ತುರಾಮಲನೆಂಬ ದೊರೆಯ ಕ್ರಿ.ಶ. ೨ ಅಥವಾ ೮ ರ ಶಾಸನ ; ಮತ್ರದ ಜೈನ ತೀರ್ಥಂಕರ ವಿಗ್ರಹದ ಬುಡದಲ್ಲಿರುವ ಕ್ರಿ.ಶ. ೨೨ ರ ಶಾಸನ ; ಮಂಕುವಾರಿನ ಬುದ್ಧಪ್ರತಿಮೆಯ ಪೀಠದ ಮೇಲಿರುವ ೧ ನೆಯ ಕುಮಾರಗುಪ್ತನ ಕಾಲದ ಕ್ರಿ.ಶ. ೪೪೮ ರ ಶಾಸನ : ಕೋಸಂನ ಶಿವಪಾರ್ವತೀ ವಿಗ್ರಹದ ಮೂಲದಲ್ಲಿರುವ ಭೀಮವರ್ಮನ ಶಾಸನ ; ಏರಸ್‌ನಲ್ಲಿ ಬೃಹದ್ ವರಾಹಮೂರ್ತಿಯ ಮೇಲಿರುವ ತೋರಮಾನನ ಕಾಲದ ಶಾಸನ ; ಷಾಹ್‌ಪುರದಲ್ಲಿರುವ ಸೂರ್ಯ ಪ್ರತಿಮೆಯೊಂದರ ಪೀಠದ ಮೇಲಿರುವ ಆದಿತ್ಯಸೇನನ ಕಾಲದ ಕ್ರಿ.ಶ. ೬೭೨ ರ ಶಾಸನ ; ಕಾಸಿಯಾದ ಹತ್ತಿರ ಸಿಕ್ಕಿದ ಬೃಹದ್ ವಿಗ್ರಹದ ಮೇಲಿರುವ ಕ್ರಿ.ಶ.ಸು ೫ ನೆಯ ಶ.ದ ಶಾಸನ - ಇತ್ಯಾದಿ. ಶ್ರವಣಬೆಳ್ಗೊಳ, ಕಾರ್ಕಳ, ವೇಣೂರುಗಳಲ್ಲಿರುವ ಗೊಮ್ಮಟ ವಿಗ್ರಹಗಳ ಮೇಲೂ ಶಾಸನಗಳಿವೆ.

## 116.5.7 ಪಟ್ಟಿಕೆಗಳು

ವಿಶೇಷವಾಗಿ ಸಿದ್ಧಗೊಳಿಸಲಾದ ಫಲಕಗಳ ಮತ್ತು ಪಟ್ಟಿಕೆಗಳ ಮೇಲೆ ವೀರಶಾಸನಗಳೂ (ವೀರಗಲ್ಲುಗಳು) ಮಹಾಸತಿ ಶಾಸನಗಳೂ (ಮಾಸ್ತಿಕಲ್ಲುಗಳು) ಅಸಂಖ್ಯವಾಗಿ ಕಂಡುಬಂದಿವೆ. ಇವು "ಗ್ರಾಮನಿವೇಶನಗಳ ಗೋಚರ ಸ್ಥಳಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ನಿಲ್ಲಿಸಿದಂಥವು ಮತ್ತು ಎಷ್ಟೋ ಸಂದರ್ಭಗಳಲ್ಲಿ ಅಲ್ಲಿಯೇ ಕಾಲಕ್ರಮೇಣ ಹೂತು ಹೋದಂಥವು.

ದೇವಾಲಯಗಳ ಗೋಡೆ, ತೊಲೆ, ಕಂಬ, ಮತ್ತಿತರ ಭಾಗಗಳಲ್ಲೂ ಶಾಸನಗಳನ್ನು ಕೆತ್ತಿರುವುದುಂಟು. ಶಿಲಾಮುದ್ರೆಗಳನ್ನೂ ಇಲ್ಲಿ ಲಕ್ಷಿಸಬಹುದು.

ಸಾಮಾನ್ಯವಾಗಿ ಶಿಲಾಶಾಸನ ಏಕಶಿಲಾಖಂಡದ ಮೇಲಿರುತ್ತದೆ ; ಆದರೆ ಪ್ರಶಸ್ತಿಯನ್ನೊ ಕಾವ್ಯವನ್ನೊ ಕೆತ್ತಿದಾಗ ಅದು ಅನೇಕ ಶಿಲಾ ಖಂಡಗಳವರೆಗೆ ವ್ಯಾಪಿಸುವುದು ಸಹಜ. ಉದಾಹರಣೆಗೆ, ೨೪ ಸರ್ಗಗಳನ್ನುಳ್ಳ 'ರಾಜಪ್ರಶಸ್ತಿ ಕಾವ್ಯ' ೨೪ ಶಿಲಾಖಂಡಗಳ ಮೇಲೆ ಉತ್ಕೀರ್ಣವಾಗಿದೆ.

## 116.6 ಶಾಸನ ಸಾಮಗ್ರಿಗಳು : ಮಣ್ಣಿನ ವಸ್ತುಗಳು

### 116.6.1 ಇಟ್ಟಿಗೆಗಳು

ಇತರ ಕೆಲವು ದೇಶಗಳಲ್ಲಿರುವಂತೆ ಭಾರತದಲ್ಲಿ ಇಟ್ಟಿಗೆಗಳನ್ನು ಶಾಸನೋದ್ದೇಶಗಳಿಗಾಗಿ ಬಳಸುವ ಸಾರ್ವತ್ರಿಕ ಪದ್ಧತಿ ಇರಲಿಲ್ಲದೆಂದು ಹೇಳಲಾಗಿದೆ. ಆದರೂ ಈ ದಿಶೆಯಲ್ಲಿ ಕೆಲವು ಶಾಸನಗಳು ಸಿಕ್ಕಿವೆ. ಮಣ್ಣನ್ನು ಇಟ್ಟಿಗೆಯಾಗಿ ಸುಡುವುದಕ್ಕೆ ಮೊದಲೇ ಶಾಸನಗಳನ್ನು ಒಂದು 'ಕಂಟ'ದಿಂದ ಕೊರೆಯಲಾಗುತ್ತಿತ್ತು ಅಥವಾ ಅಚ್ಚಿಯಿಂದ ಒತ್ತಲಾಗುತ್ತಿತ್ತು.

ಭಿತರಿಯಲ್ಲಿ 'ವಿಖ್ಯಾತ ಕುಮಾರಗುಪ್ತ'ನೆಂಬ ಶಾಸನವನ್ನುಳ್ಳ ಅನೇಕ ಇಟ್ಟಿಗೆಗಳು ದೊರಕಿವೆ. ಪಂಜಾಬಿನ ಷೋರ್‌ಕೋಟ್‌ನಲ್ಲಿ ಉಪ್ಪಾರರಿಗೆ ಸೂಚನೆಗಳನ್ನೊಳಗೊಂಡ ಇಟ್ಟಿಗೆಗಳೂ ಗೋರಖ್‌ಪುರ್ ಜಿಲ್ಲೆಯ ಗೋಪಾಲಪುರದಲ್ಲಿ ಬೌದ್ಧ ಸೂತ್ರಗಳನ್ನುಳ್ಳ ಕೆಲವು ಇಟ್ಟಿಗೆಯ ಪಟ್ಟಿಕೆಗಳೂ ಕಂಡುಬಂದಿವೆ. ಕೆಲವು ಜಮೀನುಗಳನ್ನು ಒತ್ತೆಯಿಟ್ಟುದನ್ನು ಹೇಳುವ ಕ್ರಿ.ಶ. ೧೨೧೭ ರ ಶಾಸನವೊಂದು ಇಟ್ಟಿಗೆಯ ಪಟ್ಟಿಕೆಯ ಮೇಲೆ ಲಭ್ಯವಾಗಿದೆ. ಅಶ್ವಮೇಧದಂತಹ ಸಾಧನೆಗಳನ್ನು ದಾಖಲು ಮಾಡುವ ರಾಜ ಶಾಸನಗಳೂ ಇಟ್ಟಿಗೆಗಳ ಮೇಲೆ ಉಂಟೆನ್ನಲಾಗಿದೆ.

### 116.6.2 ಪಾತ್ರೆಗಳು

ಸಾಂಚಿಯ ಹತ್ತಿರದ ಭೋಜ್‌ಪುರದಲ್ಲಿ ಮತ್ತು ಅಂಧೇರ್‌ನಲ್ಲಿ ಅನೇಕ ಮಣ್ಣಿನ ಅವಶೇಷ ಪಾತ್ರೆಗಳ ಮೇಲೆ ಶಾಸನಗಳಿವೆ. ಮಸಿಯಲ್ಲಿ ಬರೆದ ಶಾಸನಗಳನ್ನೊಳಗೊಂಡ ಮೂರು ಮಣ್ಣಿನ ಹೂಜಿಗಳು ವಾಯುವ್ಯ ಸರಹದ್ದಿನ ಚಾರ್‌ಸಡದಲ್ಲಿ ಸಿಕ್ಕಿವೆ. ಕಾಥೇವಾಡದಲ್ಲಿ ದೊರೆತ ದೊಡ್ಡ ಕೊಡದ ತುಣುಕೊಂದರ ಮೇಲೆ ವಲಭಿಯ ಮೈತ್ರಕ ರಾಜ 'ಪ್ರಸಿದ್ಧ ಗುಹಸೇನ'ನನ್ನು ಹೆಸರಿಸುವ ಶಾಸನವಿದೆ. ಅದರ ಕಾಲ ಕ್ರಿ.ಶ. ೫೬೬-೬೭.

### 116.6.3 ಪಟ್ಟಿಕೆಗಳು

ಶಾಸನ ಕೊರೆದ ಪುಟ್ಟ ಜೇಡಿಮಣ್ಣಿನ ಪಟ್ಟಿಕೆಗಳು ಭಾರತದ ವಿವಿಧ ಭಾಗಗಳಲ್ಲಿ ವಿಪುಲವಾಗಿ ಸಿಕ್ಕಿವೆ. ಇವುಗಳಲ್ಲಿ ಬಹುಪಾಲು ಬೌದ್ಧರದಾಗಿದ್ದು, ಹರಕೆಯ ಸಮರ್ಪಣಗಳಾಗಿವೆ. ಇವುಗಳಲ್ಲಿ ಶಾಸನದ ಜೊತೆಗೆ ಸ್ತೂಪಗಳ, ಘಂಟೆಗಳ ಮತ್ತು ಬುದ್ಧನ ಚಿಹ್ನೆಗಳಿರುವುದುಂಟು. ಕೆಲವು ಸಂದರ್ಭಗಳಲ್ಲಿ ಈ ಬೌದ್ಧ ಹರಕೆಯ ಪಟ್ಟಿಕೆಗಳು ಅರಗು ಅಥವಾ ಮೇಣದವಾಗಿವೆಯೆಂದು ಹೇಳಲಾಗಿದೆ.

### 116.6.4 ಮುದ್ರೆಗಳು

ಪಂಜಾಬಿನ ಸೆನೆತ್‌ನಲ್ಲಿ ಅನೇಕ ಜೇಡಿಮಣ್ಣಿನ ಮುದ್ರೆಗಳು ದೊರಕಿವೆ. ಇವುಗಳಲ್ಲಿ ಕೆಲವು 'ಶಂಕರನಿಗೆ ಮತ್ತು ನಾರಾಯಣನಿಗೆ' ಎಂಬ ಸಮರ್ಪಣವನ್ನಷ್ಟೆ ಒಳಗೊಂಡಿದ್ದರೆ, ಮತ್ತೆ ಕೆಲವು ಅರ್ಪಣೆಯ ಜೊತೆಗೆ ಅರ್ಪಣಕಾರನ ಹೆಸರನ್ನೂ ಹೇಳುತ್ತವೆ (ಉದಾ : 'ಪ್ರಸಿದ್ಧನಾದ ವಿಷ್ಣುದಾಸನ ಅರ್ಪಣೆ'). ಉಳಿದವುಗಳಲ್ಲಿ ಅರ್ಪಣಕಾರನ ಹೆಸರಷ್ಟೆ ಇರುತ್ತದೆ.

ಬಂಗಾಳದ ಬಸಾರ್‌ನಲ್ಲಿ ನಡೆದ ಭೂಶೋಧನೆಗಳಲ್ಲಿ ಸ್ವಾರಸ್ಯಪೂರ್ಣವಾದ ಜೇಡಿಮಣ್ಣಿನ ಮುದ್ರೆಗಳು ಹೇರಳವಾಗಿ ಸಿಕ್ಕಿದುವು. ಇವು ಅಧಿಕಾರಿಗಳ, ಖಾಸಗಿ ವ್ಯಕ್ತಿಗಳ, ದೇವಸ್ಥಾನಗಳ, ಧಾರ್ಮಿಕ ಸಂಸ್ಥೆಗಳ ಮತ್ತು ವರ್ತಕಶ್ರೇಣಿ ಮುಂತಾದುವುಗಳ ಮುದ್ರೆಗಳು. ಅವುಗಳಲ್ಲೊಂದರ ಮೇಲೆ 'ಪ್ರಸಿದ್ಧನಾದ ಘಟೋತ್ಕಚಗುಪ್ತನದು' ಎಂಬ ಶಾಸನವಿದೆ (ಇವನು ೧ ನೆಯ ಚಂದ್ರಗುಪ್ತನ ತಂದೆ). ಇಮ್ಮಡಿ ಚಂದ್ರಗುಪ್ತನ ಪತ್ನಿ ಧ್ರುವ ಸ್ವಾಮಿನಿಯ ಮತ್ತು ಗೋವಿಂದಗುಪ್ತನ ಹೆಸರುಗಳು ಕೆಲವು ಮುದ್ರೆಗಳ ಮೇಲಿವೆ.

ಕಾಸಿಯಾದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಜೇಡಿಮಣ್ಣಿನ ಮುದ್ರೆಗಳ ಸಂಗ್ರಹವೊಂದು ಲಭ್ಯವಾಯಿತು. ಇವುಗಳಲ್ಲಿ ಕೆಲವು ಕ್ರಿ.ಶ.ಸು. ೪೦೦ ರಷ್ಟು ಹಿಂದಕ್ಕೆ ಹೋಗುತ್ತವೆ.

"ಯಾರ ರಾಜವಂಶಾವಳಿ ಅವಿಚ್ಛಿನ್ನವಾಗಿ ಜಯಸ್ಕಂಧನವರೆಗೆ ಹೋಗುತ್ತದೋ ಅಂತಹ ಪ್ರಸಿದ್ಧ ರಾಜನಾದ ಅಹಿವರ್ಮನ ಮಗ, ರಾಜಪುತ್ರ ಹಾಗೂ ದಂಡನಾಯಕ ಪುಷ್ಯೇನನ (ಮುದ್ರೆ)" ಎಂಬ ಅರ್ಥದ ಶಾಸನವನ್ನು ಕೊರೆಯಲಾಗಿರುವ ಮಹತ್ವದ ಮುದ್ರೆಯೊಂದು ಕಾಥೇವಾಡದಲ್ಲಿ ಸಿಕ್ಕಿದೆ. ಬುಲಂದ್ ಷಹರ್‌ನಲ್ಲಿ ದೊರೆತ ಗಟ್ಟಿಮಣ್ಣಿನ ಮುದ್ರೆಯೊಂದರ ಮೇಲೆ ಮತ್ತಿಲ (ಮತಿಲ) ಎಂಬ ದೊರೆಯ ಉಲ್ಲೇಖವಿದೆ.

ಹರಪ್ಪ-ಮಹೆಂಜೊದಾರೊಗಳಲ್ಲಿ ಸಿಕ್ಕಿದ ಮಣ್ಣಿನ ಮುದ್ರೆಗಳನ್ನೂ ಇಲ್ಲಿ ಲೆಕ್ಕಿಸಬೇಕು. ಅವುಗಳ ಮೇಲಿನ ಲಿಪಿಯನ್ನು ಇನ್ನೂ ಓದಲಾಗಿಲ್ಲ. ಕಾಸಿಯಾದಲ್ಲಿ ಕಂಡುಬಂದ ಬುದ್ಧನ ಗಟ್ಟಿಮಣ್ಣಿನ ಪ್ರತಿಮೆಯೊಂದರ ಮೇಲೆ ಕ್ರಿ.ಶ. ೫ ನೆಯ ಶತಮಾನದ ಒಂದು ಶಾಸನವಿದೆ.

## 116.7 ಶಾಸನ ಸಾಮಗ್ರಿಗಳು : ಇತರ ಪದಾರ್ಥಗಳು

### 116.7.1 ಸ್ಫಟಿಕ

ಶಾಸನಸಾಮಗ್ರಿಯಾಗಿ ಬಳಕೆಗೊಳ್ಳಲು ಸ್ಫಟಿಕ ಅನುಕೂಲವಾದುದಲ್ಲ. ಆದ್ದರಿಂದ ಒಂದೇ ಒಂದು ಶಾಸನ ಸ್ಫಟಿಕದ ಮೇಲೆ ಸಿಕ್ಕಿದೆಯೆಂದು ಹೇಳಲಾಗಿದೆ. ಭಟ್ಟಿಪ್ರೋಲುವಿನ ಬೌದ್ಧ ಸ್ತೂಪವೊಂದರ ಅವಶೇಷಗಳಲ್ಲಿ ಸಿಕ್ಕಿದ ಷಣ್ಮುಖ ಸ್ಫಟಿಕ ಖಂಡವೊಂದರ ಮೇಲೆ ಶಾಸನವೊಂದನ್ನು ಗೀಚಲಾಗಿದೆ. ಹರಕೆಗೆ ಸಂಬಂಧಿಸಿದ ದಾನವನ್ನು ಅದು ಹೇಳುವಂತೆ ತೋರುತ್ತದೆ. ಭಟ್ಟಿಪ್ರೋಲು, ಸೋನಾರಿ, ಕೊಲ್ಹಾಪುರ ಮುಂತಾದ ಸ್ಥಳಗಳ ಬೌದ್ಧಸ್ತೂಪಗಳ ಅವಶೇಷಗಳಲ್ಲಿ ಸ್ಫಟಿಕದ ಸೀಸೆಗಳೂ ಕರಂಡದೊಳಗಿದ್ದ ಕಲ್ಲಿನ ತುಂಡಿನ ಮೇಲೂ ಕರಂಡವನ್ನೊಳಗೊಂಡ ಕಲ್ಲಿನ ಪೆಟ್ಟಿಗೆಯ ಮುಚ್ಚಳದ ಮೇಲೂ ಶಾಸನಗಳು ಕಂಡುಬಂದಿವೆ.

### 116.7.2 ಚಿಪ್ಪುಗಳು ಇತ್ಯಾದಿ

ಶಾಸನಗಳನ್ನು ಕೊರೆದ ಕೆಲವು ಶಂಖದ ಚಿಪ್ಪುಗಳು - ಹರಕೆ ಸಂಬಂಧಿಸಿದವು - ಆಂಧ್ರಪ್ರದೇಶದ ಶಾಲಿ ಹುಂಡಂನ ಬೌದ್ಧಮಠವೊಂದರ ಅವಶೇಷಗಳಲ್ಲಿ ದೊರೆತುವು. ಆಮೆಯ ಚಿಪ್ಪುಗಳ ಮೇಲೆ ಮಂತ್ರಗಳನ್ನು ಕೊರೆದಿರುವುದುಂಟು.

ದಂತದಿಂದ ಮಾಡಿದ ಮುದ್ರೆಗಳೂ ಸಿಕ್ಕಿವೆ. ತೊಲೆಗಳು, ಕಂಬಗಳು ಮುಂತಾದ ಮರದ ಸಾಮಗ್ರಿಯ ಮೇಲೂ ಶಾಸನಗಳನ್ನು ಕಾಣಬಹುದು.

## 116.8 ಶಾಸನಗಳ ಸಿದ್ಧತೆ ಮತ್ತು ಸಂರಕ್ಷಣೆ

ಶಾಸನಗಳನ್ನು ಹೇಗೆ ಸಿದ್ಧಗೊಳಿಸಬೇಕು ಎಂಬುದನ್ನು ತಿಳಿಸುವ ಕೆಲವು ಕೈಪಿಡಿಗಳು ಪ್ರಾಚೀನ ಭಾರತದಲ್ಲಿದ್ದುವು. ಕ್ಷೇಮೇಂದ್ರ ವ್ಯಾಸದಾಸನ 'ಲೋಕಪ್ರಕಾಶ', 'ಲೇಖಪಂಚಾಶಿಕಾ', 'ಲೇಖಪದ್ಧತಿ' - ಇತ್ಯಾದಿ.

ಶಾಸನಗಳನ್ನು ಸಿದ್ಧಗೊಳಿಸುವಲ್ಲಿ ಸಾಮಾನ್ಯವಾಗಿ ಮೂವರು ಪಾತ್ರ ವಹಿಸುತ್ತಿದ್ದರು : ಕೃತಿಕಾರ, ಲಿಪಿಕಾರ ಹಾಗೂ ಶಿಲ್ಪಿ. ಕೃತಿಕಾರ (ಕವಿ ಅಥವಾ ಒಬ್ಬ ಉನ್ನತಾಧಿಕಾರಿ) ಶಾಸನದ ಕರಡನ್ನು ತಾಳಪತ್ರ ಅಥವಾ ಭೂರ್ಜ ಪತ್ರದ ಮೇಲೆ ಸಿದ್ಧಪಡಿಸುತ್ತಿದ್ದ ; ಅದನ್ನು ಲಿಪಿಕಾರ (copyist) ಶಿಲೆಯ ಮೇಲೆ ಅಥವಾ ತಾಮ್ರಪಟದ ಮೇಲೆ ಬಳಪದಿಂದಲೊ ಮಸಿಯಿಂದಲೊ ಬಣ್ಣದಿಂದಲೊ ಬರೆದು ಕೊಡುತ್ತಿದ್ದ ; ಶಿಲ್ಪಿ ಅದನ್ನು ಕೊರೆಯುತ್ತಿದ್ದ. (ಕೊರೆಯುವುದು ಎಂಬ ಅರ್ಥದಲ್ಲಿ 'ಉತ್ಕೀರ್ಣ' ಎಂಬ ಶಬ್ದ ಸಂಸ್ಕೃತದಲ್ಲಿ ಪ್ರಯುಕ್ತವಾಗಿದೆ. ('ಉತ್ಕೀಲಿತ' ಎಂಬುದೂ ವಿರಳವಾಗಿ ಉಂಟು) ಕೆಲವು ಪ್ರಾಚೀನ ತಾಮ್ರಶಾಸನಗಳಲ್ಲಿ ಅಕ್ಷರಗಳನ್ನು ಪೂರ್ತಿ ಕೆತ್ತದೆ, ಚುಕ್ಕಿಗಳ ರೂಪದಲ್ಲಿ ಕೆತ್ತಿರುವುದುಂಟು. ದಕ್ಷಿಣ ಭಾರತದ ಕೆಲವು ತಾಮ್ರಪಟಗಳಲ್ಲಿ ಕಂಡರಣೆ ಅಷ್ಟೇನೂ ಆಳವಾಗಿರದೆ ಅಕ್ಷರಗಳನ್ನು ತಾಳೆಗರಿಗಳ ಮೇಲೆ ಹೇಗೊ ಹಾಗೆ ಗೀಚಿದಂತಿದೆ ಎಂದು ಹೇಳುತ್ತಾರೆ, ಕನಿಷ್ಠ ಪಕ್ಷ ಇಬ್ಬರಾದರೂ ಶಾಸನ ಸಿದ್ಧತೆಗೆ ಬೇಕಾಗುತ್ತಿತ್ತು. ಕೃತಿಕಾರನೇ ಶಾಸನ ಪಾಠವನ್ನು ಶಿಲೆ ಅಥವಾ ತಾಮ್ರಪಟದ ಮೇಲೆ ಬರೆದುಕೊಡುತ್ತಿದ್ದುದುಂಟು.(ಸಮರ್ಥರಲ್ಲದ ಶಿಲ್ಪಿಗಳು ಶಾಸನಪಾಠವನ್ನು ಮೊದಲು ಶಿಲೆಯ ಮೇಲೆ ಬರೆಸಿಕೊಳ್ಳದೆ ಅಥವಾ ಬರೆದುಕೊಳ್ಳದೆ ಅಲಕ್ಷ್ಯಪೂರ್ವಕವಾಗಿ ಕೆತ್ತಿರುವ ಎಷ್ಟೋ ಪ್ರಕರಣಗಳುಂಟೆಂದು ಹೇಳಲಾಗಿದೆ. ಹೀಗಾಗುವುದು ಖಾಸಗಿ ಶಾಸನಗಳಲ್ಲಿ ಮಾತ್ರ. ಕವಿಯೆ ಶಾಸನ ಪಾಠವನ್ನು ಶಿಲೆಯ ಮೇಲೆ ಬರೆದು ಕೊಟ್ಟಿರುವುದಕ್ಕೆ ಪ್ರಸಿದ್ಧವಾದ ಉದಾಹರಣೆ ತಾಳಗುಂದ ಶಾಸನ ; ಅದರಲ್ಲಿ "ಕುಬ್ಜ ತನ್ನ ಕಾವ್ಯವನ್ನು ಕಲ್ಲಿನ ಮೇಲೆ ಬರೆದನು" (ಕುಬ್ಜಃ ಸ್ವಕಾವ್ಯಮಿದಮಶ್ಮತಲೇ ಲಿಲೇಖ) ಎಂದು ಸ್ಪಷ್ಟವಾಗಿ ಹೇಳಿದೆ. (ಅದನ್ನು ಕೆತ್ತಿದ ಶಿಲ್ಪಿಯ ಹೆಸರು ತಿಳಿಯದು) ಅಂತೂ ಶಾಸನ ವಿಷಯವನ್ನು ರಚಿಸುವ ಮತ್ತು ಕೊರೆಯುವ ವ್ಯಕ್ತಿಗಳು ಸಂಪೂರ್ಣವಾಗಿ ಬೇರೆ ಬೇರೆ ; ಅವರಿಲ್ಲದೆ ಶಾಸನವೆ ಆಗುತ್ತಿರಲಿಲ್ಲ. ಇವರ ನಡುವೆ ಬರುವ ಲಿಪಿಕಾರ ಕೂಡ ಒಂದು ಪ್ರತ್ಯೇಕ ಪ್ರಮುಖ ವರ್ಗವಾದರೂ, ಅವನು ಉಳಿದ ಇಬ್ಬರಷ್ಟು ಅನಿವಾರ್ಯವಾಗಿರಲಿಲ್ಲವೆಂದು ತೋರುತ್ತದೆ.

ಕರ್ತೃ, ಲಿಪಿಕಾರ, ರೂವಾರಿ ಮೂವರ ಹೆಸರುಗಳನ್ನೂ ಹೇಳುವ ಶಾಸನಗಳು ಬೇಕಾದಷ್ಟಿವೆ. ನಿದರ್ಶನಕ್ಕೆ : ಗದುಗು ತಾಲ್ಲೂಕಿನ ಕುರ್ತುಕೋಟಿಯ ಕ್ರಿ.ಶ. ೧೦೮೨ ರ ಶಿಲಾಶಾಸನವೊಂದನ್ನು ರಚಿಸಿದವನು ನಾಗದೇವ, ಶಿಲೆಯ ಮೇಲೆ ಬರೆದವನು ಕುಲಕರಣಿ ಮಾಬಲಾರ್ಯ, ಕೊರೆದವನು ಅಯ್ಯಣ ; ಚನ್ನರಾಯಪಟ್ಟಣದ ೧೨೭ ನೆಯ ತಾಮ್ರ ಶಾಸನವನ್ನು ರಚಿಸಿದ ಕವಿ ಜನ್ನ, ಬರೆದವನು ದಾವಣ್ಣ, ಕಂಡರಿಸಿದವನು ಮಲ್ಲೋವಜ ; ೧೧೪೮ ರ ಒಂದು ಶಿಲಾಶಾಸನದಲ್ಲಿ ಮಧುಸೂದನದೇವ ಶಾಸನ ಕೃತಿಯನ್ನು ರಚಿಸಿದನೆಂದೂ ಶಂಕದೇವ ಅದನ್ನು ಬರೆದನೆಂದೂ ಸೋಮ ಕೆತ್ತಿದನೆಂದೂ ಉಕ್ತವಾಗಿದೆ.

ಹಿಂದಿನ ಕಾಲದಲ್ಲಿ ಲಿಪಿಕಾರರ ಕೆಲಸ ಒಂದು ವೃತ್ತಿಯೇ ಆಗಿದ್ದಿತೆಂದು ಊಹಿಸಬಹುದು. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ "ಚಪಡೇನ ಲಿಖಿತಂ ಲಿಪಿಕರೇಣ" ಎಂದಿರುವುದು ಗಮನಾರ್ಹ. "ಇದರಿಂದ ಆ ಶಾಸನವನ್ನು ಬಂಡೆಯ ಮೇಲೆ ಬರೆದವನು ಚಪಡನೆಂದು ತಿಳಿಯುವುದಲ್ಲದೆ ಅವನು ವೃತ್ತಿಯಲ್ಲಿ ಲಿಪಿಕಾರನಾಗಿದ್ದನೆಂದೂ ತಿಳಿಯುತ್ತದೆ." ಆಸ್ಥಾನ ಕವಿಗಳಿಗೆ ಮತ್ತು ಶಿಲ್ಪಿಗಳಿಗೆ ಹೇಗೋ ಹಾಗೆ ಲಿಪಿಕಾರರಿಗೂ ಪ್ರತಿಫಲ ಸಿಕ್ಕುತ್ತಿದ್ದಿರಬೇಕು. 'ಲಿಪಿಕಾರ' ಎಂಬ ಅರ್ಥದಲ್ಲಿ 'ಲೇಖಕ' ಎಂಬ ಶಬ್ದ ಮೊದಲು ಬಳಕೆಯಲ್ಲಿತ್ತೆಂದೂ

'ಲಿಪಿಕಾರ' ಎಂಬುದು ಈಚೆಗೆ ಬಂದುದೆಂದೂ ಹೇಳುತ್ತಾರೆ. 'ಲಿಪಿ' ಎಂಬುದು 'ದಿಪಿ' ಎಂಬ ಪರ್ಷಿಯನ್ ಶಬ್ದದಿಂದ ಬಂದಿದೆಯೆಂದೂ 'ಲೇಖಕ' ಎಂಬರ್ಥದ 'ದಬಿರ್' ಎಂಬ ಪರ್ಷಿಯನ್ ಶಬ್ದ ಕೂಡ ಭಾರತೀಯ ಶಾಸನಗಳಲ್ಲಿ 'ದಿಬಿರ' ಅಥವಾ 'ದಿವಿರ' ಎಂಬ ರೂಪದಲ್ಲಿ ಕಂಡುಬರುತ್ತದೆಂದೂ ಹೇಳಲಾಗಿದೆ. ಕೆಲವು ಸಂದರ್ಭಗಳಲ್ಲಿ ಮಹಾಸಂಧಿವಿಗ್ರಹಾಧಿಕಾರಿಗಳು ಲಿಪಿಕಾರರ ಕಾರ್ಯ ನಿರ್ವಹಿಸುತ್ತಿದ್ದಂತೆ ಕಾಣುತ್ತದೆ. 'ರಾಜ ಲಿಪಿಕಾರ' ಎಂಬ ಮಾತು ಕೆಲವು ಪ್ರಾಚೀನ ಶಾಸನ ಶಾಸನಗಳಲ್ಲಿ ಬಂದಿದೆ. ಎ.ಎಲ್. ಬಾಷಾಂ ಹೇಳುವಂತೆ. "The royal cribes were often important Personages". ಲೇಖಕ ಅಥವಾ ಲಿಪಿಕಾರ ಎಂಬರ್ಥದಲ್ಲಿ ಕಾಯಸ್ಥ, ಕರಣ, ಕರಣಿಕ ಮೊದಲಾದ ಶಬ್ದಗಳೂ ಶಾಸನಗಳಲ್ಲಿ ಬಳಕೆಗೊಂಡಿವೆ. ('ಕರಣ' ಎಂಬುದು ಮೂಲತಃ ಒಂದು ಜಾತಿಯಾಗಿದ್ದು ಅವರು ಭಾರತದ ಕೆಲಭಾಗಗಳಲ್ಲಿ ಲೇಖಕ ವೃತ್ತಿಯನ್ನು ಹಿಡಿದರೆಂದೂ 'ಕಾಯಸ್ಥರು' ಮೂಲತಃ ಗಣಕ-ಲೇಖಕ ವೃತ್ತಿಯವರಾಗಿದ್ದರೆಂದೂ ಈಚೆಗೆ ಎರಡೂ ಲೇಖಕ ವರ್ಗಗಳು ಕಾಯಸ್ಥ ಅಥವಾ ಕರಣವೆಂಬ ಜಾತಿಯಾಗಿ ರೂಪುಗೊಂಡುವೆಂದೂ ಡಿ.ಸಿ. ಸರ್ಕಾರರ ಹೇಳಿಕೆ.)

ಶಿಲೆಯ ಮೇಲೆ ಶಾಸನ ವಿಷಯವನ್ನು ಕೆತ್ತುತ್ತಿದ್ದ ಶಿಲ್ಪಿಗೆ ಸೂತ್ರಧಾರ. ಶಿಲಾಕೂಟ, ರೂಪಕಾರ (ರೂಪಕಾರಿ > ರೂವಾರಿ) ಮುಂತಾದ ಹೆಸರುಗಳೂ ಇದ್ದುವು. ಅಂತೆಯೆ ತಾಮ್ರಪಟಗಳ ಮೇಲೆ ಶಾಸನಗಳನ್ನು ಕೊರೆಯುತ್ತಿದ್ದವರು ಲೋಹಕಾರ, ಅಯಸ್ಕಾರ, ಸೂತ್ರಧಾರ, ಹೇಮಕಾರ, ಸೂನಾರ (ಸುವರ್ಣಕಾರ), ಶಿಲ್ಪಿ, ವಿಜ್ಞಾನಿ, ಅಕ್ಕಸಾಲೆ ಇತ್ಯಾದಿಯಾಗಿ ಕರೆಯಲ್ಪಡುತ್ತಿದ್ದರು. ಕನ್ನಡ ಶಾಸನಗಳಲ್ಲಿ ಇವರ ಹೆಸರುಗಳು ಸಾಮಾನ್ಯವಾಗಿ ಆಚಾರಿ, ಓಜ ಎಂದು ಅಂತ್ಯಗೊಳ್ಳುತ್ತವೆ. ಶಿಲ್ಪಶಾಸ್ತ್ರ ಪಾರಂಗತರಾದ ಈ ರೂವಾರಿಗಳು ತಮ್ಮನ್ನು 'ಸರಸ್ವತೀ ಗಣದಾಸಿ'ಗಳೆಂದೂ ಕರೆದುಕೊಂಡಿರುವುದುಂಟು. ತಾವು 'ತ್ವಷ್ಟ್ಟ' ಕುಲದವರೆಂದೂ ವಿಶ್ವಕರ್ಮ ತಮ್ಮ ಅಧಿದೈವವೆಂದೂ ಇವರ ಹೇಳಿಕೆ.

ಶಾಸನಗಳನ್ನು ಕೊರೆಯುವ ಕೆಲಸ ಒಂದು ಕಲೆಯೇ ಆಗಿತ್ತು. ಕೆಲವರು ಶಿಲ್ಪಿಗಳು ಅಕ್ಷರಗಳಿಗೆ ಹೊಂದಿಕೊಂಡಂತೆ ಪ್ರಾಣಿಗಳ ಆಕೃತಿಗಳನ್ನು ಬಿಡಿಸಿ 'ಅಲಂಕಾರ ಲಿಪಿ'ಯನ್ನು ಮೂಡಿಸಿರುವುದುಂಟು. ಎಷ್ಟೋ ಮಂದಿ ಶಿಲ್ಪಿಗಳು 'ಬಿರುದ ರೂವಾರಿ' ಇತ್ಯಾದಿಯಾಗಿ ತಮ್ಮ ಪ್ರಶಸ್ತಿಯನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಈ ಶಿಲ್ಪಿಗಳಿಗೆ ಸಮಾಜದಲ್ಲಿ ಗೌರವಾಸ್ಪದ ಸ್ಥಾನವಿತ್ತೆಂದು ಹೇಳಬಹುದು. ನಶ್ವರವಾದ ಬರಹವನ್ನು ತಮ್ಮ ಕಂಡರಣೆಯಿಂದ ಶಾಶ್ವತಗೊಳಿಸುತ್ತಿದ್ದವರು ಅವರು. ಆದ್ದರಿಂದಲೇ ಅವರಿಗೆ ಭೂಮಿ, ತೋಟ ಮುಂತಾದುವನ್ನು ಪ್ರತಿಫಲವಾಗಿ ಕೊಡುತ್ತಿದ್ದರು. ತಾಮ್ರಪಟವೊಂದನ್ನು ಕೊರೆಯುವುದಕ್ಕಾಗಿ ನಾಲ್ಕು ಖಂಡಂಗ ಬತ್ತದ ಭೂಮಿಯನ್ನೂ ಎರಡು ಹೊಲಗಳನ್ನೂ ತಾನು ಪಡೆದುದಾಗಿ ಶಿಲ್ಪಿಯೊಬ್ಬ ಕ್ರಿ.ಶ. ೭೪೯ ರ ಒಂದು ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಬಂಗಾಳದ ವಿಜಯಸೇನನ ದಿಯೋಪದ ಶಿಲಾಶಾಸನವನ್ನು ತೂಲಪಾಣಿಯೆಂಬ ವಿಖ್ಯಾತ ಶಿಲ್ಪಿ ಕೊರೆದನಂತೆ. ಅವನು ಉತ್ತರ ಬಂಗಾಳದ ಶಿಲ್ಪಿಗಳ ಶ್ರೇಣಿಯ ಮುಖ್ಯಸ್ಥನಾಗಿದ್ದು, 'ರಾಣಕ' ಎಂಬ ಬಿರುದು ಪಡೆದಿದ್ದನೆಂದು ಹೇಳಲಾಗಿದೆ. ಇದರಿಂದ ಶಿಲ್ಪಿಗಳಿಗಿದ್ದ ಸ್ಥಾನಮಾನಗಳ ಕಲ್ಪನೆಯುಂಟಾಗಬಹುದು.

ಕಲ್ಹಣನ 'ರಾಜತರಂಗಿಣಿ'ಯ ಪ್ರಕಾರ, ಕಾಶ್ಮೀರದ ರಾಜಾಸ್ಥಾನದಲ್ಲಿ ಶಾಸನಗಳ ಸಿದ್ಧತೆಯ ಮೇಲ್ವಿಚಾರಣೆ 'ಪಟ್ಟೋಪಾಧ್ಯಾಯ'ನೆಂಬ ಅಧಿಕಾರಿಯದಾಗಿತ್ತು ; ಅವನು 'ಅಕ್ಷಪಟಲ'ವೆಂಬ ವಿಭಾಗಕ್ಕೆ ಸೇರಿದವನು. 'ಅಕ್ಷಪಟಲ'ವೆಂದರೆ Accountant General's Office ಎಂದೂ Record Office ಎಂದೂ ಭಿನ್ನಾಭಿಪ್ರಾಯಗಳಿವೆ. 'ಅಕ್ಷಪಟಲಿಕ' ಎಂಬ ಮಾತು ತಾಮ್ರಪಟಗಳಲ್ಲೂ ಬಂದಿದೆ. "ರಾಜಶಾಸನಗಳನ್ನು ನೋಡಿಕೊಳ್ಳುತ್ತಿದ್ದವನು ಇವನೇ" ಶಾಸನಗಳಲ್ಲಿ ಬರುವ ಧರ್ಮ ಲೇಖಿನ್, ಶಾಸನಿಕ, ಶಾಸನಾಧಿಕಾರಿಕ, ಶಾಸನಾಧಿಕಾರಿ ಮುಂತಾದ ಮಾತುಗಳೂ ಇಂತಹ ಅಧಿಕಾರಿಯನ್ನೇ ನಿರ್ದೇಶಿಸುತ್ತವೆ.

ಅನೇಕ ಶಾಸನಗಳಲ್ಲಿ ವಿವಿಧ ಚಿತ್ರಗಳನ್ನು ಬಿಡಿಸಿರುವುದು ಕಂಡುಬರುತ್ತದೆ. ಪದ್ಮಬಂಧ, ಸರ್ಪಬಂಧ ಮುಂತಾದ ಅಕ್ಷರ ಬಂಧಗಳನ್ನು ಕೆಲವು ಮಧ್ಯಕಾಲೀನ ಶಾಸನಗಳಲ್ಲಿ ಕಾಣಬಹುದು. ಕೆಲವೊಮ್ಮೆ ಅಕ್ಷರಗಳೇ ಇಲ್ಲದೆ ಪದ್ಮಾಕೃತಿಯನ್ನು ಬಿಡಿಸಿರುವುದುಂಟು. ಅಕ್ಷರಗಳಿಗೇ ಅಲಂಕಾರ ವಿನ್ಯಾಸವನ್ನು ಕೊಟ್ಟಿರುವ ನಿದರ್ಶನಗಳೂ ಇವೆ.

ಶಾಸನಗಳಲ್ಲಿ ದೇವತಾ ಚಿತ್ರಗಳನ್ನೂ ಮಂಗಳಚಿಹ್ನಗಳನ್ನೂ ನೋಡಬಹುದು. ಶೈವಶಾಸನಗಳಾದರೆ ಶಿವಲಿಂಗ ಅಥವಾ ನಂದಿ, ಜೈನಶಾಸನವಾದರೆ ಅರ್ಹಂತ, ವೈಷ್ಣವ ಶಾಸನವಾದರೆ ಶಂಖ ಚಕ್ರಾದಿ ಚಿಹ್ನೆಗಳು, ಗಜಲಕ್ಷ್ಮಿ ಇತ್ಯಾದಿ. ಗರುಡ, ಮೀನು, ಸೂರ್ಯಚಕ್ರ ಮುಂತಾದ ಚಿಹ್ನೆಗಳೂ ಕಂಡುಬರುತ್ತವೆ. ಶಾಸನ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳು ವಿಶೇಷ ಗಮನಾರ್ಹ. ಅನೇಕ ಶಾಸನಗಳಲ್ಲಿ ಸೂರ್ಯ- ಚಂದ್ರರನ್ನೊ ನಕ್ಷತ್ರಗಳನ್ನೊ ಕೆತ್ತಿರುತ್ತಾರೆ ; ಕೊಟ್ಟ ದಾನ ಆಚಂದ್ರತಾರಾರ್ಕವಾಗಿರಲೆಂಬುದು ಇವರ ಅಭಿಪ್ರಾಯವೆಂಬುದು ಸ್ಪಷ್ಟ. ಕೆಲವು ಶಿಲಾಶಾಸನಗಳಲ್ಲಿ ಹೆಣ್ಣುಹಂದಿಯ ಮತ್ತು ಹೇಸರಕತ್ತೆಯ ಚಿತ್ರಗಳನ್ನೂ ಕೊರೆದಿದ್ದಾರಂತೆ ; ದಾನವನ್ನು ಅಪಹರಿಸಿದವನ ತಂದೆ ಹೇಸರಕತ್ತೆಯಾಗಿಯೂ ತಾಯಿ ಹೆಣ್ಣುಹಂದಿಯಾಗಿಯೂ ಹುಟ್ಟುವರೆಂದು ಇದರ ಇಂಗಿತ.

ಮಾಸ್ತಿಕಲ್ಲುಗಳಲ್ಲಿ ಮತ್ತು ವೀರಗಲ್ಲುಗಳಲ್ಲಿ ಚಿತ್ರಗಳಿರುವುದು ಸಾಮಾನ್ಯ. ಮಾಸ್ತಿಕಲ್ಲುಗಳಲ್ಲಿ ತೋಳನ್ನು ಮೇಲೆತ್ತಿರುವ ಸ್ತ್ರೀಯ ಅಥವಾ ಸ್ತ್ರೀಯರ ಚಿತ್ರವಿರುತ್ತದೆ ; ಕೇವಲ ಎತ್ತಿದ ತೋಳುಗಳನ್ನೆ ಚಿತ್ರಿಸಿರುವುದೂ ಉಂಟು. (ಹೀಗೆ ಬರಿಯ ತೋಳಿರುವ ಮಾಸ್ತಿಕಲ್ಲನ್ನು 'ವ್ಯಾಸನ ತೋಳು' ಎಂದು ಕರೆಯುತ್ತಾರಂತೆ). ಸಹಗಮನ ಮಾಡಿದವರು ಸ್ವರ್ಗ ಸೇರಿದರೆಂಬುದನ್ನು ಇದು ಸೂಚಿಸಬಹುದು. ಕೆಲವು ಮಾಸ್ತಿಕಲ್ಲುಗಳಲ್ಲಿ 'ಮಹಾಸತಿ'ಯ ಗಂಡನ ಚಿತ್ರವೂ ಇರುವುದುಂಟು. ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಮೂರು ಭಾಗಗಳಿರುತ್ತವೆ ; ಕೆಳಗಿನ ಭಾಗದಲ್ಲಿ ವೀರನು ಹೋರಾಟದಲ್ಲಿ ತೊಡಗಿರುವುದನ್ನೂ ಮಧ್ಯಭಾಗದಲ್ಲಿ ಅವನನ್ನು ದೇವತೆಗಳು ಸ್ವರ್ಗಕ್ಕೆ ಒಯ್ಯುತ್ತಿರುವುದನ್ನೂ ಮೇಲ್ಭಾಗದಲ್ಲಿ ಅವನು ಭಗವತ್ ಸನ್ನಿಧಿಯಲ್ಲಿರುವುದನ್ನೂ ಚಿತ್ರಿಸಲಾಗಿರುತ್ತದೆ. ಅನೇಕ ಪ್ರಕರಣಗಳಲ್ಲಿ, ಮಾಸ್ತಿಕಲ್ಲು ವೀರಗಲ್ಲುಗಳು ಬರಹವೇನನ್ನೂ ಒಳಗೊಂಡಿರದೆ, ಹಿಂದೆ ಹೇಳಿದ ಚಿತ್ರಗಳಿಂದಲೇ ತಮ್ಮ ಆಶಯವನ್ನು ತಿಳಿಸುವುದುಂಟು. ಇತರ ಕೆಲ ಬಗೆಯ ಸ್ಮಾರಕಶಾಸನಗಳಲ್ಲೂ ಸಂಬಂಧಪಟ್ಟ ವ್ಯಕ್ತಿಯ ಚಿತ್ರವಿರುವುದುಂಟು : ಉದಾಹರಣೆಗೆ, ದೇವತೆಗಳಿಗೆ ತಮ್ಮ ತಲೆಯನ್ನು ಸಮರ್ಪಿಸುತ್ತಿರುವ ಭಕ್ತರ ಚಿತ್ರಗಳು. ಕೆಲವು ಮಧ್ಯಕಾಲಿನ ತಾಮ್ರಪಟಗಳಲ್ಲಿ ಮುದ್ರೆಯ ಬದಲು ರಾಜಶಿರದ ಚಿತ್ರವಿದೆಯೆಂದು ಹೇಳಲಾಗಿದೆ.

ಶಾಸನಗಳಲ್ಲಿ ಲಿಪಿಕಾರ ಯಾವುದಾದರೊಂದು ಅಕ್ಷರವನ್ನು ಬರೆಯದೆ ಬಿಟ್ಟಿದ್ದರೆ, ಅದನ್ನು ಆಯಾ ಪಂಕ್ತಿಯ ಮೇಲೆ ಅಥವಾ ಕೆಳಗೆ ಲೋಪಸ್ಥಾನದ ಹತ್ತಿರ ಬರೆಯಲಾಗುತ್ತಿತ್ತು. ಶಬ್ದಗಳೇ ಬಿಟ್ಟು ಹೋಗಿದ್ದಾಗ ಅವನ್ನು ಅಂಚಿನಲ್ಲಿ ಕೆತ್ತುತ್ತಿದ್ದರು. ಕೆಲವೊಮ್ಮೆ ಲೋಪಸ್ಥಾನವನ್ನು ಕಾಕಪಾದ, ಹಂಸಪಾದ, ಸ್ವಸ್ತಿಕ ಮುಂತಾದ ಚಿಹ್ನೆಗಳಿಂದ ಸೂಚಿಸಲಾಗುತ್ತಿತ್ತು. ತಪ್ಪಾಗಿ ಕೆತ್ತಿದ ಅಕ್ಷರದ ಸುತ್ತ ವೃತ್ತವೊಂದನ್ನೆಳೆದು, ಅದನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಸೂಚಿಸಿರುವುದೂ ಉಂಟು. ಈ ಪದ್ಧತಿಯ ಉಲ್ಲೇಖ ಶ್ರೀಹರ್ಷನ 'ನೈಷಧೀಯ' ಕಾವ್ಯದಲ್ಲೂ ಇದೆ.

ಅಶೋಕನ ಕಲ್ಸೀ ಶಿಲಾಶಾಸನದ ೩೧ ನೆಯ ಪಂಕ್ತಿಯಲ್ಲಿ "ತಿ ಅಪಶಲಹಾ ವಾ" ಎಂದು ಮೂಲತಃ ತಪ್ಪಾಗಿ ಬರೆದಿದ್ದುದನ್ನು ಹೊಡೆದು ಹಾಕಿ ಪಂಕ್ತಿಯ ಮೇಲುಗಡೆ "ಪಲಪಾಶಂಡ-ಗಲಹಾವಾ" ಎಂದು ಸರಿಯಾಗಿ ಕೆತ್ತಲಾಗಿದೆ. ತಾಮ್ರಪಟಗಳಲ್ಲಾದರೆ ಇಂತಹ ತಪ್ಪಾದ ಭಾಗವನ್ನು ಉಜ್ಜಿ ಅಥವಾ ಕುಟ್ಟಿ ಅದರ ಮೇಲೆ ತಿದ್ದುಪಾಟು ಮಾಡಲಾಗುತ್ತಿತ್ತು. ತಪ್ಪಾದ ಅಕ್ಷರಗಳನ್ನು ಅಳಿಸಿಹಾಕದೆಯೆ ಅವನ್ನು ಬೇರೆ ಅಕ್ಷರಗಳಾಗಿ ರೂಪಾಂತರಿಸುತ್ತಿದ್ದುದೂ ಉಂಟು.

ಹಳೆಯವಾದ ಮತ್ತು ನಿರುಪಯುಕ್ತವಾದ ತಾಮ್ರಪಟಗಳನ್ನು ಕರಗಿಸಿ ಹೊಸ ಪಟಗಳನ್ನು ತಯಾರಿಸುತ್ತಿದ್ದರು ; ಆದರೆ ಒಮ್ಮೊಮ್ಮೆ ತಾಮ್ರಪಟದ ಮೇಲಿನ ಬರಹವನ್ನು ಸುತ್ತಿಗೆಯಿಂದ ಕುಟ್ಟಿಹಾಕಿ ಬೇರೆ ಶಾಸನವನ್ನು ಕೊರೆಯುತ್ತಿದ್ದರೆಂಬುದಕ್ಕೆ ನಿದರ್ಶನಗಳಿವೆ.

ತಾಮ್ರ ಶಾಸನಗಳಲ್ಲಿ ಎರಡಕ್ಕಿಂತ ಹೆಚ್ಚು ತಾಮ್ರಪಟಗಳು ಬಳಕೆಗೊಂಡಾಗ ಅವುಗಳಿಗೆ ಸಂಖ್ಯೆ ಹಾಕಿರುವುದು ಕೆಲವೊಮ್ಮೆ ಕಂಡುಬರುತ್ತದೆ. ಬಹುಫಲಕ ತಾಮ್ರ ಶಾಸನಗಳು ಭಾರತದ ಕೇಂದ್ರ ಹಾಗೂ ದಕ್ಷಿಣ ಭಾಗಗಳಲ್ಲಿ ಹೆಚ್ಚು ಜನಪ್ರಿಯವಾಗಿದ್ದುವು ; ಅವುಗಳಲ್ಲಿ ಕೆಲವು ಶಾಸನಗಳ ಪಟಗಳಿಗೆ ಮಾತ್ರ ಸಂಖ್ಯೆ ಹಾಕಲಾಗಿದೆ. ಸಾಮಾನ್ಯವಾಗಿ ಪಟಗಳ ಒಂದು ಪಾರ್ಶ್ವಕ್ಕೆ ಮಾತ್ರ ಸಂಖ್ಯೆ ಹಾಕುತ್ತಿದ್ದರು ; ಈಗಿನ ಪುಸ್ತಕದ ಹಾಳೆಗಳಂತೆ ಎರಡೂ ಪಾರ್ಶ್ವಗಳಲ್ಲಿ ಸಂಖ್ಯೆ ನಮೂದಾಗುತ್ತಿದ್ದ ನಿದರ್ಶನಗಳು ವಿರಳ.

## 116.9 ಶಾಸನಗಳ ಸಂರಕ್ಷಣೆ

ದಾನ ಪಡೆದವನ ಮತ್ತು ಅವನ ವಂಶಜರ ಪಾಲಿಗೆ ತಾಮ್ರ ಶಾಸನಗಳು ಅತ್ಯಮೂಲ್ಯ ದಾಖಲೆಗಳಾಗಿದ್ದುದು ಸಹಜ ; ಅವು ಕಳೆದು ಹೋದರೆ ಅಥವಾ ನಾಶಗೊಂಡರೆ ಅವರು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದರು (ಮೂಲಶಾಸನ ದೂರದೇಶದಲ್ಲಿ ಉಳಿದುಹೊದರೆ, ಅಸ್ಪಷ್ಟವಾಗಿದ್ದರೆ, ಕಳೆದುಹೋದರೆ, ಅಪಹೃತವಾದರೆ, ಭಗ್ನವಾದರೆ, ದಗ್ಧವಾದರೆ, ಅಥವಾ ಹರಿದುಹೋದರೆ ಅದರ ಸ್ಥಾನದಲ್ಲಿ ಮತ್ತೊಂದನ್ನು ಹಾಕಿಸಿಕೊಡಬಹುದೆಂದು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೇಳಿದೆ. ತಾಳೆಗರಿಗಳ ಅಥವಾ ತಾಮ್ರಪಟಗಳ ಮೇಲಿದ್ದ ದಾಖಲೆಗಳು ಬೆಂಕಿಯ ಅಪಘಾತದಿಂದ ಅಳಿದಾಗ, ಈಚಿನ ರಾಜರು ಮತ್ತೆ ಹೊಸ ತಾಮ್ರಪಟಗಳನ್ನು ಸಿದ್ಧಗೊಳಿಸಿಟ್ಟಿರುವುದಕ್ಕೆ ನಿದರ್ಶನಗಳಿವೆ) ಎಂತಲೇ ಅವುಗಳನ್ನು ಅವರು ಎಚ್ಚರಿಕೆಯಿಂದ ಸಂರಕ್ಷಿಸಿಕೊಂಡು ಬರುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ.

ಗುಹಾವಾಸಿಗಳಾದ ಸಂನ್ಯಾಸಿಗಳು ತಮಗೆ ಬಂದ ದಾನಗಳಿಗೆ ಸಂಬಂಧಿಸಿದ ತಾಮ್ರಶಾಸನಗಳನ್ನು ಗುಹಾಭಿತ್ತಿಗಳ ಮೇಲೆ ಕೆತ್ತಿ ನಕಲು ಮಾಡುತ್ತಿದ್ದರು. ಪ್ರಾಚೀನ ವಲಭಿ ನಗರದ ಅವಶೇಷಗಳಲ್ಲಿ ಹಲವಾರು ತಾಮ್ರಪಟಗಳು ಸಿಕ್ಕಿವೆ ಅವುಗಳನ್ನು ದಾನಗ್ರಾಹಕರ ಅಥವಾ ಅವರ ವಂಶಸ್ಥರ ಮನೆಗಳ ಗೋಡೆಗಳಲ್ಲಿ ಅಥವಾ ಅಡಿಪಾಯಗಳಲ್ಲಿ ಹುದುಗಿಸಲಾಗಿತ್ತು ; ಅನೇಕ ಕಡೆ ತಾಮ್ರಪಟಗಳನ್ನು ದಾನಕೊಟ್ಟ ಭೂಮಿಯಿಂದ ಅಗೆದು ತೆಗೆಯಲಾಗಿದೆ. ಇದರಿಂದ, ದಾನ ಪಡೆದವರು ತಾಮ್ರಪಟಗಳನ್ನು ಹೇಗೆ ರಕ್ಷಿಸಿಡುತ್ತಿದ್ದರೆಂಬುದು ವ್ಯಕ್ತವಾಗುತ್ತದೆ.

ಹಲವಾರು ಶಾಸನಗಳು ಒಟ್ಟಿಗೆ ಸಂರಕ್ಷಿತವಾಗುತ್ತಿದ್ದುದೂ ಉಂಟು. ಉದಾಹರಣೆಗೆ, ಆಂಧ್ರದ ಶ್ರೀಕಾಕುಳು ಜಿಲ್ಲೆಯ ಅಂಧಾವರು ಗ್ರಾಮದಲ್ಲಿ ಒಂದು ಮರದ ಬುಡದಲ್ಲಿ ನಾಲ್ಕು ತಾಮ್ರ ಶಾಸನಗಳನ್ನೊಳಗೊಂಡ ಮಡಕೆಯೊಂದು ದೊರಕಿತು. ಅವು ಬೇರೆ ಬೇರೆ ದೊರೆಗಳು ವಿಭಿನ್ನ ಕಾಲಗಳಲ್ಲಿ ಬೇರೆ ಬೇರೆ ವ್ಯಕ್ತಿಗಳಿಗೆ ಕೊಟ್ಟ ದಾಖಲೆಗಳು. ಅವುಗಳ ಒಡೆಯರು ತೀರ್ಥಯಾತ್ರೆಗೆ ಹೋಗುವಾಗ ಅವುಗಳನ್ನು ಹಾಗೆ ಒಂದೆಡೆ ನೆಲದಲ್ಲಿ ಬಚ್ಚಿಟ್ಟಿದ್ದಿರಬೇಕು. ಪಟಗಳನ್ನು ಉಂಗುರಗಳ ಮೂಲಕ ತೂರಿಸಲಾದ ಸಲಾಕಿಯೊಂದಕ್ಕೆ ನೇತು ಹಾಕಲಾಗಿತ್ತು. ಮಡಕೆಗೆ ಮುಚ್ಚಳವಿದ್ದುದರಿಂದಲೂ ಪಟಗಳನ್ನು ಬತ್ತದ ಹೊಟ್ಟಿನೊಳಗೆ ಹುದುಗಿಸಿದ್ದರಿಂದಲೂ ಅವು ಸಂರಕ್ಷಿತ ಸ್ಥಿತಿಯಲ್ಲಿದ್ದುವು.

ಕೆಲವು ಸಂದರ್ಭಗಳಲ್ಲಿ ತಾಮ್ರಪಟಗಳನ್ನು ವಿಶೇಷವಾಗಿ ತಯಾರಿಸಿದ ಶಿಲಾಕರಂಡದೊಳಗೆ ರಕ್ಷಿಸುತ್ತಿದ್ದರು. ನಿದರ್ಶನಕ್ಕೆ, ಯಾದವ ಮಹಾದೇವನ ಕಲೆಗಾನ್ ತಾಮ್ರಪಟಗಳು. ಅವುಗಳನ್ನೊಳಗೊಂಡ ಸುಭದ್ರವಾದ ಕಲ್ಲಿನ ಪೆಟ್ಟಿಗೆಯೊಂದನ್ನು ಭೂಮಿಯಿಂದ ಅಗೆದು ತೆಗೆಯಲಾಯಿತು.

ತಾಮ್ರಶಾಸನಗಳು, ಅವುಗಳನ್ನು ಹೊರಡಿಸಿದ ಸ್ಥಳಗಳಿಂದ ಬಹು ದೂರದಲ್ಲಿ ಸಿಕ್ಕಿರುವುದುಂಟು : ಉದಾಹರಣೆಗೆ, ಅಸ್ಸಾಮಿನ ವೈದ್ಯ ದೇವನ ಕಮೌಲಿ ತಾಮ್ರಪಟ ; ಅದು ಸಿಕ್ಕಿದ್ದು ಬನಾರಸಿನ ಹತ್ತಿರ. ದಾನ ಗ್ರಾಹಕನೊ ಅವನ ವಂಶದವರೊ ಬನಾರಸಿಗೆ ಹೋಗಿ ನೆಲಸಿರಬೇಕು ; ಅಥವಾ ಅವರು ಬನಾರಸಿಗೆ ತೀರ್ಥಯಾತ್ರೆಗಾಗಿ ಹೋದಾಗ ಅಮೂಲ್ಯವಾದ ಶಾಸನವನ್ನೂ ತಮ್ಮೊಡನೆ ತೆಗೆದುಕೊಂಡು ಹೋಗಿದ್ದು, ಅಲ್ಲಿಯೇ ಅಕಸ್ಮಾತ್ ಮರಣಹೊಂದಿರಬೇಕು. ವಕ್ಕಲೇರಿ ತಾಮ್ರಪಟವನ್ನೂ ಇಲ್ಲಿ ನೆನೆಯಬಹುದು.

ತಾಮ್ರ ಶಾಸನಗಳ ಕರಡುಗಳು ಮೂಲತಃ ತಾಳಪತ್ರ, ಭೂರ್ಜಪತ್ರ ಮುಂತಾದುವುಗಳ ಮೇಲಿರುತ್ತಿದ್ದುವೆಂಬುದನ್ನು ನೋಡಿದ್ದೇವೆ. ಈ ಮೂಲಪತ್ರಗಳು 'ಅಕ್ಷಪಟಲಿಕ'ನೆಂಬ ಪೂರ್ವೋಕ್ತ ಅಧಿಕಾರಿಯ ವಶದಲ್ಲಿರುತ್ತಿದ್ದುವು. ದೊರೆಯ 'ಅಕ್ಷಪಟಲ' ವಿಭಾಗದಲ್ಲಿರುತ್ತಿದ್ದ ಮೂಲ ದಾಖಲೆಗಳ ಕಛೇರಿಯನ್ನು ಕ್ರಿ.ಶ. ೨ನೆಯ ಶತಮಾನದ ನಾಸಿಕ್ ಶಾಸನವೊಂದರಲ್ಲಿ 'ಫಲಕವಾರ' ಎಂದು ಕರೆದಿರುವಂತೆ ತೋರುತ್ತದೆ.

ಒರಿಸ್ಸದ ಭೌಮಾಕರ ದೊರೆಗಳ ಶಾಸನಗಳಲ್ಲಿ 'ಪುಸ್ತಪಾಲ' ಅಥವಾ 'ಪುಸ್ತಕಪಾಲ' (keeper of records) ಎಂಬ ಕಿರಿಯ ಅಧಿಕಾರಿಯೊಬ್ಬನ ಪ್ರಸ್ತಾಪವಿದೆ. ಅವೇ ಶಾಸನಗಳು 'ಪೆಟ್ಟಪಾಲ' (Keeper of boxes containing records) ಎಂಬ ಅಧಿಕಾರಿಯೊಬ್ಬನನ್ನು ಹೇಳುತ್ತವೆ ; ಇವನು ಪ್ರಾಯಶಃ 'ಪುಸ್ತಕಪಾಲ'ನ ಕೈ ಕೆಳಗಿದ್ದಿರಬೇಕು.

## 116.9 ಉಪಸಂಹಾರ

ಶಾಸನಗಳನ್ನು ಸಾಮಾನ್ಯವಾಗಿ, ಬಹುಕಾಲ ಬಾಳಿಕೆ ಬರುವಂತಹ ವಸ್ತುಗಳ ಮೇಲೆ ಕೊರೆಯಿಸಲಾಗುತ್ತಿತ್ತು. ಅಥವಾ ಬರೆಯಿಸಲಾಗುತ್ತಿತ್ತು ಎಂಬುದು ಗಮನಿಸಬೇಕಾದ ಸಂಗತಿ. ದೀರ್ಘ ಬಾಳಿಕೆ ಬರುವ ಇಂಥ ವಸ್ತುಗಳಾಗಿ ಆಯ್ಕೆ ಮಾಡಿಕೊಂಡದ್ದು ಮುಖ್ಯವಾಗಿ ಶಿಲೆ, ಲೋಹ, ಮಣ್ಣಿನ ವಸ್ತುಗಳನ್ನು. ಸ್ಫಟಿಕ, ಶಂಖದ ಚಿಪ್ಪುಗಳು, ದಂತ, ಮೂಳೆ, ಮರದ ತೊಲೆ, ಕಂಬಗಳಂಥ ವಸ್ತುಗಳನ್ನೂ ಅಪರೂಪಕ್ಕೆ ಬಳಸಲಾಗಿದೆ. ಶಾಸನಗಳನ್ನು ಹೊರತುಪಡಿಸಿದರೆ ಭಾರತದಲ್ಲಿ ಬರವಣಿಗೆಯ ಸಾಮಗ್ರಿಗಳಾಗಿ ತಾಳಪತ್ರ, ಭೂರ್ಜಪತ್ರ, ಅಗರು ತೊಗಟೆ, ವಸ್ತ್ರ, ಚರ್ಮ, ಕಾಗದ ಮತ್ತು ಮರ ಬಳಕೆಯಾಗುತ್ತಿದ್ದುದಾಗಿ ತಿಳಿದುಬರುತ್ತದೆ. ಲೇಖನಿಯಾಗಿ 'ಲೋಹ ಕಂಟಕ'ಗಳ ಬಳಕೆ ಇತ್ತು. ಬಿದಿರಿನ ಲೇಖನಿಯು ಉಪಯೋಗದಲ್ಲಿದ್ದ ಉದಾಹರಣೆಗಳು ದೊರೆತಿವೆ. ಮಸಿಯ ಬಳಕೆ ಭಾರತದಲ್ಲಿ ಕ್ರಿ.ಪೂ. ೪ ನೆಯ ಶತಮಾನದಲ್ಲೇ ಇದ್ದ ದಾಖಲೆ ದೊರೆಯುತ್ತದೆ. ಬಣ್ಣಬಣ್ಣದ, ಮುಖ್ಯವಾಗಿ ಕೆಂಪು ಹಸುರು ಮತ್ತು ಹಳದಿ ಬಣ್ಣದ ಮಸಿಗಳ ಬಳಕೆ ಕೆಲವೊಮ್ಮೆ ಇದ್ದುದಾಗಿ ತಿಳಿಯುತ್ತದೆ.

ಶಾಸನಗಳ ಸಿದ್ಧತೆಯ ಸಂದರ್ಭದಲ್ಲಿ ಕರ್ತೃ, ಲಿಪಿಕಾರ ಮತ್ತು ರೂವಾರಿ ಎಂಬುದಾಗಿ ಮೂವರು ವ್ಯಕ್ತಿಗಳು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಕರ್ತೃ ಮತ್ತು ಲಿಪಿಕಾರ ; ಅಥವಾ ಲಿಪಿಕಾರ ಮತ್ತು ರೂವಾರಿ ಒಬ್ಬನೇ ವ್ಯಕ್ತಿ ಆಗಿರುವ ಸಾಧ್ಯತೆಯೂ ಇದೆ. ಆದ್ದರಿಂದ ಈ ಮೂವರಲ್ಲಿ ರೂವಾರಿ ಸೇರಿದಂತೆ ಇಬ್ಬರಾದರೂ ಶಾಸನ ರಚನೆಯಲ್ಲಿ ಅನಿವಾರ್ಯವಾಗಿ ಇರಬೇಕಾಗುತ್ತದೆ. ಶಾಸನಗಳನ್ನು ಕೆತ್ತುವ ರೂವಾರಿಗೆ ಸಮಾಜದಲ್ಲಿ ತಕ್ಕಮಟ್ಟಿನ ಗೌರವಯುತವಾದ ಸ್ಥಾನಮಾನಗಳು ಇದ್ದಂತೆ ತಿಳಿಯುತ್ತದೆ. ರೂವಾರಿಯು ಶಿಲ್ಪಕಲಾವಿದನೂ ಆಗಿರುವ ಸಾಧ್ಯತೆಯಿತ್ತು. ಶಾಸನಗಳಲ್ಲಿ ಕೆತ್ತಲ್ಪಟ್ಟಿರುವ ಚಿತ್ರಗಳೇ ಇದಕ್ಕೆ ಸಾಕ್ಷಿಯೊದಗಿಸುತ್ತವೆ. ಶಾಸನಗಳ 'ರಕ್ಷಣೆ'ಗೆ ವಿಶೇಷವಾದ ಗಮನಕೊಟ್ಟ ವಿಧಾನಗಳು ತಿಳಿದುಬರುತ್ತವೆ. 'ಅಕ್ಷಪಟಲಿಕ' 'ಪುಸ್ತಕಪಾಲ' ಎಂಬ ಅಧಿಕಾರಿಗಳು ರಾಜ ಶಾಸನಗಳ ದಾಖಲೆ-ರಕ್ಷಣೆಗೆ ನೇಮಕಗೊಳ್ಳುತ್ತಿದ್ದರು ಎಂಬುದು ಗಮನಿಸಬೇಕಾದ ಸಂಗತಿ.

## 116.10 ಅಭ್ಯಾಸ ಪ್ರಶ್ನೆಗಳು

1. ಶಾಸನಗಳ ವರ್ಗೀಕರಣ ವಿಧಾನ ಕುರಿತು ಬರೆಯಿರಿ.
2. ಫ್ಲೀಟರು ಸೂಚಿಸಿರುವ ಶಾಸನ ವರ್ಗೀಕರಣ ವಿಧಾನವನ್ನು ವಿವರಿಸಿ.
3. ಶಾಸನ ಸಾಮಗ್ರಿಗಳು ಯಾವುವು? ಸೋದಾಹರಣವಾಗಿ ಪರಿಚಯಿಸಿ.
4. ಶಾಸನಗಳ ಸಿದ್ಧತೆ ಮತ್ತು ಸಂರಕ್ಷಣೆಯ ವಿಧಾನಗಳನ್ನು ನಿರೂಪಿಸಿ.

## 116.11 ಪರಾಮರ್ಶನ ಗ್ರಂಥಗಳು


| | | | |
|---|---|---|---|
| 1. | **Indian Epigraphy** | : | D.C. Sircar |
| 2. | **ಭಾರತೀಯ ಶಾಸನ ಶಾಸ್ತ್ರ ಪರಿಚಯ** | : | ಜೆ.ಎಫ್. ಫ್ಲೀಟ್ (ಅನು : ಸಿ.ಪಿ.ಕೆ) |
| 3. | **ಕರ್ನಾಟಕ ಶಾಸನ ಸಮೀಕ್ಷೆ** | : | ಕೆ.ವಿ. ರಮೇಶ್ |
| 4. | **ಕನ್ನಡ ನಾಡಿನ ಶಾಸನಗಳು** | : | ಪಿ.ಬಿ. ದೇಸಾಯಿ |


* * * *

# ಘಟಕ - 117

# ಶಾಸನಗಳಲ್ಲಿ ವಿಷಯಾನುಪೂರ್ವಿ

ರಚನೆ

117.0 ಉದ್ದೇಶ

117.1 ಪ್ರಸ್ತಾವನೆ

117.2 ಶಾಸನಗಳಲ್ಲಿ ವಿಷಯಾನು ಪೂರ್ವಿ

117.2.1 ಪೀಠಿಕೆ

117.2.2 ಪ್ರಕಟಣೆ

117.2.3 ಮುಕ್ತಾಯ

117.3 ಸಾರಾಂಶ

117.4 ಅಭ್ಯಾಸಕ್ಕೆ ಪ್ರಶ್ನೆಗಳು

## 117.0 ಉದ್ದೇಶ

- ಕನ್ನಡ ಶಾಸನ ಅಧ್ಯಯನಕ್ಕೆ ಪ್ರವೇಶಿಸುವ ಮುನ್ನ ಅದರ ತಾತ್ವಿಕ ವಿಚಾರಗಳನ್ನು ಅರಿಯುವುದು ಬಹುಮುಖ್ಯ. ಶಾಸನಗಳ ರಚನೆಯಲ್ಲಿ ಅನುಸರಿಸಬಹುದಾದ ಮೂಲಭೂತ ಅಂಶಗಳನ್ನು ಇಲ್ಲಿ ಮನಗಾಣುವಿರಿ.
- ತಾಮ್ರ ಪಟಗಳ ಮೇಲೆ, ಶಿಲಾಪಟ್ಟಿಕೆಗಳ ಮೇಲೆ, ದಾನಶಾಸನ ಅರ್ಥಾತ್ ರಾಜಶಾಸನಗಳ ಮೇಲೆ ಉತ್ಕೀರ್ಣವಾಗುವ ವಿಷಯಗಳಾದ 'ಮಂಗಳ' 'ಸಿದ್ಧಂ' 'ಸ್ವಸ್ತಿ' ಮುಂತಾದ ವಿಷಯಾನುಪೂರ್ವಿ ಅಂಶಗಳನ್ನು ಅರಿಯುವಿರಿ.
- ಮುಕ್ತಾಯಗಳೆಂಬ ಮೂರು ಭಾಗಗಳ ವಿವರಗಳನ್ನು ಇಲ್ಲಿ ಅರಿಯುವಿರಿ.

## 117.1 ಪ್ರಸ್ತಾವನೆ

ಕೋರ್ಸ್ - Xರ ಕನ್ನಡ ಶಾಸನ ಅಧ್ಯಯನ ಎಂಬುದು ಕನ್ನಡ ಎಂ.ಎ. ದ್ವಿತೀಯ ವರ್ಷದ ಪತ್ರಿಕೆ ವಿಷಯ. ಇದು 30ನೆಯ ಬ್ಲಾಕಿನ 117ನೆಯ ಘಟಕ. ಈ ಬ್ಲಾಕಿನಲ್ಲಿ ಶಾಸನ ಅಧ್ಯಯನದ ತತ್ತ್ವಗಳನ್ನು ಕುರಿತು ವಿವರಿಸಲಾಗಿದೆ. ಶಾಸನಗಳಲ್ಲಿ ಪ್ರಸ್ತಾಪಿಸಲ್ಪಡುವ ಸಂಗತಿಗಳನ್ನು 'ವಿಷಯಾನುಪೂರ್ವಿ' ಎಂದು ಕರೆದು, ಶಾಸನಗಳ ಸ್ವರೂಪಗಳನ್ನು ವಿವರಿಸಲಾಗಿದೆ. ಈ ಘಟಕದಲ್ಲಿ ದಾನ ಶಾಸನಗಳಲ್ಲಿ ಸಮಾವೇಶಗೊಳ್ಳುವ ವಿಷಯಗಳನ್ನು ೧. ಪೀಠಿಕೆ, ೨. ಪ್ರಕಟಣೆ, ೩. ಮುಕ್ತಾಯ ಎಂದು ಮೂರು ಭಾಗ ಮಾಡಿಸಿಕೊಂಡು ಶಾಸನ ಸ್ವರೂಪದ ವಿಷಯಗಳನ್ನು ವಿವರಿಸಲಾಗಿದೆ. ಶಾಸನಾಧ್ಯಯನಕ್ಕೆ ಇವು ಪೂರಕ ವಿಚಾರಗಳು. ಪೂರ್ವಭಾವಿಯಾಗಿ ತಿಳಿದಿದ್ದಲ್ಲಿ ಶಾಸನ ವಿಷಯಕ್ಕೆ.

## 117.2 ಶಾಸನಗಳಲ್ಲಿ ವಿಷಯಾನುಪೂರ್ವಿ

ವಿಶೇಷವಾಗಿ ತಾಮ್ರಪಟಗಳ ಮೇಲೆ ವಿರಳವಾಗಿ ಶಿಲಾಪಟ್ಟಿಕೆಗಳ ಮೇಲೆ, ಉತ್ಕೀರ್ಣವಾಗುತ್ತಿದ್ದ ರಾಜಶಾಸನಗಳಲ್ಲಿ - ಅರ್ಥಾತ್ ದಾನಶಾಸನಗಳಲ್ಲಿ - ಸಮಾವೇಶಗೊಳ್ಳುವ ವಿಷಯಗಳನ್ನು ಸ್ಥೂಲವಾಗಿ ಮೂರು ಭಾಗ ಮಾಡಬಹುದು : (೧) ಪೀಠಿಕೆ (Preamble) (೨) ಪ್ರಕಟಣೆ (Notification) (೩) ಮುಕ್ತಾಯ Conclusion). ಈ ವಿಭಾಗಗಳ ವಿವರಗಳಲ್ಲಿ ವ್ಯತ್ಯಾಸಗಳು ಕಂಡುಬರಬಹುದಾದರೂ, ಒಟ್ಟಿನಲ್ಲಿ ದಾನಶಾಸನಗಳ ಸ್ವರೂಪ ಒಂದೇ ಆಗಿರುತ್ತದೆ.

ಪೀಠಿಕೆಯಲ್ಲಿ ಈ ಅಂಶಗಳಿರುತ್ತವೆ : (ಅ) ಪ್ರಾರ್ಥನೆ (ಆ) ಶಾಸನವನ್ನು ಹೊರಡಿಸಿದ ಸ್ಥಳದ ಹೆಸರು (ಇ) ದಾನಿಯ ಮತ್ತು ಅವನ ಪೂರ್ವಜರ ಹೆಸರು (ಈ) ದಾನಕ್ಕೆ ಸಂಬಂಧಿಸಿದಂತೆ ಆದೇಶ. ಪ್ರಕಟಣೆ ಈ ಅಂಶಗಳನ್ನೊಳಗೊಂಡಿರುತ್ತದೆ : (ಅ) ದಾನದ ಸ್ಪಷ್ಟೀಕರಣ (ಆ) ದಾನ ಗ್ರಾಹಕನ ರ್‍ರ ಹೆಸರು (ಇ) ದಾನ ಕೊಟ್ಟ ಸಂದರ್ಭ (ಈ) ದಾನದ ಉದ್ದೇಶ (ಉ) ದಾನವಿತ್ತ ಭೂಮಿಯ ಚಕ್ಕುಬಂದಿ. ಮುಕ್ತಾಯ ಭಾಗದವು ಈ ಅಂಶಗಳು : (ಅ) ದಾನಕ್ಕೆ ಸಂಬಂಧಿಸಿದಂತೆ ಎಚ್ಚರಿಕೆ ('ದಾನಚ್ಛೇದೋಪವರ್ಣನ') (ಆ) ಶಾಸನ ಸಿದ್ಧತೆಗೆ ಕಾರಣರಾದ ಅಧಿಕಾರಿಗಳ ಮತ್ತು ಇತರರ ಹೆಸರು (ಇ) ಕಾಲನಿರ್ದೇಶ[1] ಮತ್ತು ಅಧಿಕೃತತ್ವ ಸ್ಥಾಪನೆ.

### 117.2.1 ಪೀಠಿಕೆ

೬ ಇತರ ರಚನೆಗಳಂತೆ ಶಾಸನಗಳೂ ಸಾಮಾನ್ಯವಾಗಿ 'ಮಂಗಳ'ದಿಂದ ಮೊದಲಾಗುತ್ತವೆ. ಅನೇಕ ಪ್ರಾಚೀನ ಶಾಸನಗಳ ಆರಂಭದಲ್ಲಿ 'ಸಿದ್ಧಂ' ಎಂಬ ಮಂಗಳ ವಾಚಕ ಪ್ರಯುಕ್ತವಾಗಿದೆ. 'ಸಿದ್ಧಿರಸ್ತು' (ಸಿದ್ಧಿಯುಂಟಾಗಲಿ) ಎಂದು ಇದರ ಅರ್ಥ. 'ಸಿದ್ಧಂ'

1. ಇದು ಶಾಸನದ ಮುಕ್ತಾಯ ಭಾಗದಲ್ಲೇ ಬರಬೇಕೆಂದಿಲ್ಲ, ಪೀಠಿಕಾ ಭಾಗದಲ್ಲಿ ಅಥವಾ ಪ್ರಕಟಣೆಯ ಭಾಗದಲ್ಲಿ ಬರಲೂಬಹುದು.

ಎಂಬುದರ ಬದಲು 'ಸ್ವಸ್ತಿ' ಎಂಬುದು ಬಳಕೆಗೊಂಡಿರುವುದೂ ಉಂಟು. ಮುಂದೆ 'ಸಿದ್ಧಂ'ಶಬ್ದವನ್ನು ವಿವಿಧಾಕಾರದ ಚಿಹ್ನವೊಂದರಿಂದ ಸೂಚಿಸತೊಡಗಿದರು.[2] ಆ ಚಿಹ್ನದ ತರುವಾಯ 'ಸ್ವಸ್ತಿ' ಶಬ್ದವೂ ಒಮ್ಮೊಮ್ಮೆ ಬರತೊಡಗಿತು. 'ಸಿದ್ಧಂ' ಚಿಹ್ನದ ಮತ್ತು ಇತರ ಪ್ರಾರ್ಥನಾ ಭಾಗಗಳ ಜೊತೆಗೆ, ಮಧ್ಯಕಾಲೀನ ಶಾಸನಗಳ ಆರಂಭದಲ್ಲಿ 'ಓಂ' ಎಂಬುದು ಕೂಡ ಕಾಣಿಸಿಕೊಳ್ಳುವುದುಂಟು.

ಕಾಲಕ್ರಮದಲ್ಲಿ 'ಮಂಗಳ' ಹೆಚ್ಚು ಹೆಚ್ಚು ವಿಸ್ತೃತವಾಯಿತು; ಕೇವಲ ಸಂಕೇತಗಳ ಮತ್ತು ಶಬ್ದಗಳ ರೂಪದಲ್ಲಿದ್ದುದು ಸುದೀರ್ಘವಾದ ಗದ್ಯ ಪದ್ಯಾತ್ಮಕ ದೇವತಾಸ್ತೋತ್ರಗಳ ರೂಪವನ್ನು ತಳೆಯಿತು ಉದಾಹರಣೆಗೆ, ಪ್ರಾಚೀನ ಪಶ್ಚಿಮ ಗಂಗರ ಶಾಸನಗಳ ಆದಿಯಲ್ಲಿ 'ಸಿದ್ಧಂ' ಚಿಹ್ನವೂ ಬಳಿಕ "ಜಿತಂ ಭಗವತಾ ಗತಘನಗಗನಾಭೇನ" ಪದ್ಮನಾಭೇದ ಎಂಬ ವಿಷ್ಣು ಸ್ತುತಿ ಭಾಗವೂ ಬರುತ್ತವೆ. 'ಮಂಗಳ' ದೀರ್ಘತರವಾಗಿ ಪರಿಣಮಿಸಿರುವುದಕ್ಕೆ ನಿದರ್ಶನ ತ್ರೈಲೋಕ್ಯಮಲ್ಲನ ರೇವಾಪಟಗಳು : ಈ ಶಾಸನದಲ್ಲಿ "ಓಂ ನಮಃ ಶಿವಾಯ ಗಣಪತಯೇ ನಮಃ" ಎಂಬುದಾದ ಮೇಲೆ ಕ್ರಮವಾಗಿ ಕೃಷ್ಣ, ಶಿವ, ಸರಸ್ವತಿಯರನ್ನು ಸ್ತುತಿಸುವ ಮೂರು ಪದ್ಯಗಳು ಬಂದಿವೆ. ಕೆಲವೊಮ್ಮೆ ಒಂದು ರಾಜವಂಶದ ಅಥವಾ ಪ್ರಾಂತದ ಅನೇಕ ಶಾಸನಗಳಲ್ಲಿ ಒಂದೇ ಪ್ರಾರ್ಥನಾ ಪದ್ಯ ಕಾಣಿಸಿಕೊಳ್ಳಬಹುದು; ಅಲ್ಲದೆ, ಅದು ಯಾವುದಾದರೊಂದು ಪ್ರಸಿದ್ಧ ಕಾವ್ಯದಿಂದ ಎತ್ತಿಕೊಂಡದ್ದಾಗಿರಬಹುದು. ಉದಾಹರಣೆಗೆ ಸರಸ್ವತಿಯನ್ನು ಸ್ತುತಿಸುವ

**ಚತುರ್ಮುಖ ಮುಖಾಂಭೋಜ ವನಹಂಸವಧೂರ್ಮಮ**
**ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ**

ಎಂಬ ಶ್ಲೋಕ ದಂಡಿಯ 'ಕಾವ್ಯಾದರ್ಶ'ದ್ದು ; ಅಂತೆಯೇ ಬಾಣನ 'ಹರ್ಷಚರಿತ'ದಿಂದ ತೆಗೆದುಕೊಂಡ ಕೆಳಗಿನ ಶಿವಸ್ತುತಿಪರವಾದ ಶ್ಲೋಕ ವಿಶೇಷವಾಗಿ ದಕ್ಷಿಣಭಾರತದ ಶಾಸನಗಳಲ್ಲಿ ಗೋಚರಿಸುತ್ತದೆ :

**ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ**
**ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ**

ಸಾಮಾನ್ಯವಾಗಿ ಶಾಸನದ ಮಂಗಳ ಪದ್ಯ ದಾನಿಯ ಮನೆ ದೇವತೆಯನ್ನು ಕುರಿತುದಾಗಿರುತ್ತದೆ. ಆದರೆ ಬನವಾಸಿಯ ಪ್ರಾಚೀನ ಕದಂಬರ ಶಾಸನಗಳಂತಹ ದಾಖಲೆಗಳಲ್ಲಿ ಒಬ್ಬನೇ ರಾಜನ ವಿವಿಧ ದೇವತೆಗಳನ್ನು ಸ್ತುತಿಸುತ್ತವೆ. ಇಂಥ ಸಂದರ್ಭಗಳಲ್ಲಿ ಪ್ರಾರ್ಥನೆ ಸಂದಿರುವುದು ಶಾಸನಪಾಠವನ್ನು ಸಿದ್ಧಗೊಳಿಸಿದ ವ್ಯಕ್ತಿಯ ಉಪಾಸ್ಯ ದೇವತೆಗೆ ಎಂದು ಊಹಿಸಬಹುದು. "ದೇವನೊಬ್ಬ, ನಾಮ ಹಲವು" ಎಂದು ನಂಬಿದ್ದ ಉದಾರ ಮನೋಧರ್ಮದ ದೊರೆಗಳೂ ಇದ್ದರು ಎಂಬುದನ್ನು ಮರೆಯಬಾರದು.

ಈಗ ಕನ್ನಡ ಶಾಸನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ 'ಮಂಗಳ' ಭಾಗವನ್ನು ತುಸು ಅವಲೋಕಿಸಬಹುದು.[3] ಕನ್ನಡ ಶಾಸನಗಳ ಆರಂಭದಲ್ಲಿ ಬರುವ ಪ್ರಾರ್ಥನಾ ಪದ್ಯಗಳು ಸಾಮಾನ್ಯವಾಗಿ ಸಂಸ್ಕೃತದಲ್ಲಿರುತ್ತವೆ. ಹಲ್ಮಿಡಿ ಶಾಸನದ ಹೊರತು ಪ್ರಾಚೀನ ಕನ್ನಡ ಶಿಲಾಶಾಸನಗಳಲ್ಲಿ ಪ್ರಾರ್ಥನಾ ಶ್ಲೋಕ ಕಂಡುಬರುವುದಿಲ್ಲ. (ಹಲ್ಮಿಡಿ ಶಾಸನದ ಆದಿಯಲ್ಲಿ, ಅಂತೆಯೆ ಕದಂಬರ ಕೆಲವು ಪ್ರಾಚೀನ ತಾಮ್ರ ಪಟಗಳಲ್ಲಿ ವಿಷ್ಣುವಿನ ಪ್ರಾರ್ಥನೆಯಿದೆ). ಅವುಗಳ ಮೊದಲಲ್ಲಿ ಸ್ವಸ್ತಿ, ಸ್ವಸ್ತಿಶ್ರೀ, ಶ್ರೀ, ಸಿದ್ಧಂ ಮುಂತಾದ

---

2. ಈ ಚಿಹ್ನವನ್ನು ಆಲ್‌ಬೆರೂನಿ 'ಪ್ರಣವ' ಸಂಕೇತವೆಂದು ಭಾವಿಸಿದ್ದಾನಂತೆ. ಅದನ್ನು 'ಓಂ ಸಿದ್ಧಿಃ' ಎಂದು ಉಚ್ಚರಿಸುತ್ತಿದ್ದರಾದರೂ, ಅದು ಪ್ರಣವದ ಅಥವಾ ಓಂಕಾರದ ಸೂಚಕವಲ್ಲ ಎನ್ನುತ್ತಾರೆ.

* ಚಾರಿತ್ರಿಕ ಅಧ್ಯಯನದ ವಿದ್ಯಾರ್ಥಿಗಳಿಗೆ ಮಾತ್ರ.

3. ಇಲ್ಲಿ ಉಕ್ತವಾಗಿರುವ ವಿಷಯಗಳನ್ನು ಡಾ. ಚಿದಾನಂದಮೂರ್ತಿಯವರ ಪೂರ್ವೋಕ್ತ ಗ್ರಂಥದಿಂದ ಸಂಗ್ರಹಿಸಲಾಗಿದೆ.

ಮಂಗಳವಾಚಕಗಳಷ್ಟೇ ಬರುತ್ತವೆ; ಬರದಿರುವುದೂ ಉಂಟು. ಪ್ರಾರ್ಥನಾ ಶ್ಲೋಕಗಳು ಹೆಚ್ಚು ಹೆಚ್ಚಾಗಿ ವೈವಿಧ್ಯಪೂರ್ಣವಾಗಿ ಗೋಚರಿಸತೊಡಗಿದ್ದು ಸು. ೮ - ೯ನೆಯ ಶತಮಾನದ ಶಿಲಾಶಾಸನಗಳಲ್ಲಿ.

ಶೈವ ಶಾಸನಗಳಾದರೆ ಶಿವಸ್ತುತಿಯಿಂದಲೂ ವೈಷ್ಣವ ಶಾಸನಗಳಾದರೆ ವಿಷ್ಣುಸ್ತುತಿಯಿಂದಲೂ ಜೈನ ಶಾಸನಗಳಾದರೆ ಜಿನಸ್ತುತಿಯಿಂದಲೂ ಮೊದಲಾಗುತ್ತವೆ. ವಿಷ್ಣು ಸ್ತುತಿ ಪದ್ಯ ಸಾಮಾನ್ಯವಾಗಿ ಇದು :

ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ

ವರಾಹಾವತಾರವನ್ನು ಕುರಿತ ಈ ಶ್ಲೋಕ ಕ್ರಿ.ಶ. ೯೩೦ರ ಕಳಸ ಶಾಸನದಲ್ಲಿ ಕಂಡುಬರುತ್ತದೆ. "ವಿಷ್ಣುವಿನ ವರಾಹಾವತಾರವು ಕನ್ನಡಿಗರ ಮನಸ್ಸನ್ನು ಬಹುವಾಗಿ ಆಕರ್ಷಿಸಿದೆ."

ಶೈವಾಶಾಸನಗಳ ಆದಿಯ "ನಮಸ್ತುಂಗ ಶಿರಶ್ಚುಂಬಿ..." ಎಂಬ ಶ್ಲೋಕ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಕನ್ನಡ ಶಾಸನಗಳ ಮಂಗಳ ಶ್ಲೋಕವಾಗಿ ಬಾಣನ ಈ ಪದ್ಯ ಪಡೆದುಕೊಂಡಿರುವಷ್ಟು ಜನಪ್ರಿಯತೆಯನ್ನು ಮತ್ತಾವ ಪದ್ಯವೂ ಪಡೆದುಕೊಂಡಿಲ್ಲ. ಇದು ಮೊದಲು ಗೋಚರಿಸುವುದು ಕ್ರಿ.ಶ. ೯ನೆಯ ಶತಮಾನದ ಶಾಸನಗಳಲ್ಲಿ ಎಂದು ತೋರುತ್ತದೆ. ಇದನ್ನೇ ಅನುಕರಿಸಿ,

ನಮಸ್ತುಂಗ ಜಟಾಚಂದ್ರ ಚಂದ್ರಿಕಾಭೋಗಭೂತಯೇ
ಭವಾನೀದೋರ್ಲತಾಗಾಢ ಪರಿರಂಭಾಯ ಶಂಭವೇ

ಮುಂತಾದ ಶಿವಸ್ತೋತ್ರಗಳು ರಚಿತವಾಗಿವೆ. ಶಿವನನ್ನು ಪ್ರಾರ್ಥಿಸುವ ಇತರ ಪದ್ಯಗಳಲ್ಲಿ ಇದೊಂದು :

ಪ್ರತ್ಯಕ್ಷ ವಸ್ತು ವಿಷಯಾಯ ಜಗದ್ಧಿತಾ
ವಿಶ್ವಸ್ಥಿತಿ ಪ್ರಳಯ ಸಂಬವ ಕಾರಣಾಯ
ಸರ್ವಾತ್ಮನೇ ವಿಜಿತ ಕೋಪ ಮನೋಭವಾಯ
ತುಭ್ಯಂ ನಮಃ ತ್ರಿಭುವನ ಪ್ರಭವೇ ಶಿವಾಯ

ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಒಟ್ಟಿಗೆ ಹೊಗಳುವ ಅನೇಕ ಶ್ಲೋಕಗಳಿದ್ದರೂ, ಬ್ರಹ್ಮನನ್ನು ಪ್ರತ್ಯೇಕವಾಗಿ ಸ್ತುತಿಸುವ ಮಂಗಳ ಶ್ಲೋಕ/ಎಲ್ಲೂ ಬರುವಂತೆ ತೋರುವುದಿಲ್ಲ.

ಹೊಯ್ಸಳರ ಶಾಸನಗಳಲ್ಲಿ ಬರುವ ಈ ಶ್ಲೋಕ - ವಿಷ್ಣು ಶಿವ ಇಬ್ಬರನ್ನೂ ಅಭಿನ್ನಗೊಳಿಸಿ ಸ್ತುತಿಸುವಂಥದು ಗಮನಾರ್ಹವಾಗಿದೆ :

ಶ್ರೀ ಮತ್ತ್ರೈಲೋಕ್ಯ ಪೂಜ್ಯಾಯ ಸರ್ವಕರ್ಮ ಸುಸಾಕ್ಷಿಣೇ
ಫಲದಾಯ ನಮೋ ನಿತ್ಯಂ ಕೇಶವಾಯ ಶಿವಾಯ ಚ

ಪ್ರಾಚೀನ ಜೈನ ಶಾಸನಗಳ ಆದಿಯಲ್ಲಿ 'ಭದ್ರಮಸ್ತು ಜಿನ ಶಾಸನಾಯ' ಎಂದು ಮಾತ್ರ ಇದ್ದರೆ, ಸು. ೬೦೦ರ ಜೈನ ಶಾಸನಗಳಲ್ಲಿ ಪ್ರಾರ್ಥನಾ ಶ್ಲೋಕಗಳು ಕಾಣಿಸಿಕೊಳ್ಳತೊಡಗುತ್ತವೆ. ೧೧ನೆಯ ಶತಮಾನದ ಬಳಿಕ, ಅಕಳಂಕನ 'ಪ್ರಮಾಣ ಸಂಗ್ರಹದ ಈ ಮಂಗಳ ಶ್ಲೋಕ ಜೈನಶಾಸನಗಳ ಆರಂಭದಲ್ಲಿ ವಿಶೇಷವಾಗಿ ಬರುತ್ತದೆ :

ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ
ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ

ಶಿವ ಬ್ರಹ್ಮ ವಿಷ್ಣು ಬುದ್ಧ ಜಿನರ ಅಭೇದವನ್ನು ಹೇಳುವ ಕೆಳಗಿನ ಮಂಗಳ ಪದ್ಯ ಕರ್ನಾಟಕದ ಧಾರ್ಮಿಕ ಸಹಿಷ್ಣುತೆಗೆ ಉಜ್ವಲ ಸಾಕ್ಷಿಯಾಗಿದ್ದು, ಕುತೂಹಲಕರವಾಗಿದೆ :

ಜಯಂತಿ ಯಸ್ಯಾವದತೋಪಿ ಭಾರತೀ
ವಿಭೂತಯ ಸ್ತೀರ್ಥ ಕೃತೋಪಿ ನೈಹ್ರಿತೇ (?)
ಶಿವಾಯ ಧಾತ್ರೇ ಸುಗತಾಯ ವಿಷ್ಣವೇ
ಜಿನಾಯ ತಸ್ಮೈ ಸಕಲಾತ್ಮನೇ ನಮಃ

ಒಟ್ಟಿನಲ್ಲಿ, "ಶಾಸನಗಳ ಆರಂಭದಲ್ಲಿ ಬರುವ ಪ್ರಾರ್ಥನಾ ಶ್ಲೋಕಗಳ ಅಧ್ಯಯನವೇ ನಾಡಿನ ಸಂಸ್ಕೃತಿಯನ್ನು ತಕ್ಕಮಟ್ಟಿಗೆ ಬಿಂಬಿಸಬಲ್ಲುದು."[4]

ಶಾಸನವನ್ನು ಹೊರಡಿಸಿದ ಸ್ಥಳದ ಹೆಸರು ಒಮ್ಮೊಮ್ಮೆ 'ಮಂಗಳ'ದ ಬಳಿಕ ಉಕ್ತವಾಗುವುದುಂಟು. (ದಾನಿಯ ಹೆಸರಿನ ಹಿಂದೆ ಅಥವಾ ಮುಂದೆ ಬರಲೂಬಹುದು.) ಸಾಮಾನ್ಯವಾಗಿ ರಾಜಧಾನಿಯಿಂದ ಶಾಸನಗಳನ್ನು ಹೊರಡಿಸುತ್ತಿದ್ದರು; ಅಂಥ ಸಂದರ್ಭಗಳಲ್ಲಿ ಸ್ಥಳದ ಹೆಸರು ಉಕ್ತವಾಗುವ ಅಗತ್ಯ ಅಷ್ಟಾಗಿರಲಿಲ್ಲ. ಎಂತಲೇ ಈ ಅಂಶ ಎಷ್ಟೋ ಶಾಸನಗಳಲ್ಲಿ ಬಿಟ್ಟು ಹೋಗಿದೆ. ಆದರೆ ದಾನಿ ದಿಗ್ವಿಜಯಕ್ಕೆ ಅಥವಾ ತೀರ್ಥಯಾತ್ರೆಗೆ ಹೋಗಿ ಎಲ್ಲೋ ಬೀಡುಬಿಟ್ಟಿದ್ದಾಗ ದಾನ ಕೊಟ್ಟಿದ ಪಕ್ಷದಲ್ಲಿ, ಆ ಸ್ಥಳದ ಹೆಸರು ಶಾಸನದಲ್ಲಿ ನಿಯತವಾಗಿ ಉಕ್ತವಾಗಿರುತ್ತದೆ. ನಿದರ್ಶನಕ್ಕೆ, ಕಲಚುರಿ ದೊರೆ ಕರ್ಣ ತನ್ನ ತಂದೆಯ ವಾರ್ಷಿಕ ಶ್ರಾದ್ಧಕ್ಕೆ ಸಂಬಂಧಿಸಿದಂತೆ ಪ್ರಯಾಗಕ್ಕೆ ಯಾತ್ರೆ ಹೋಗಿದ್ದಾಗ, ಅಲ್ಲಿ ಅವನ ಬನಾರಸ್ ತಾಮ್ರ ಪಟಗಳು ಹೊರಡಿಸಲ್ಪವು.

ಮೊದಮೊದಲಿನ ಶಾಸನಗಳಲ್ಲಿ ರಾಜಧಾನಿಯ ಅಥವಾ ಬೀಡಿನ ಹೆಸರು ಮಾತ್ರ ಉಲ್ಲೇಖಗೊಂಡಿದ್ದರೆ, ಈಚಿನ ಶಾಸನಗಳಲ್ಲಿ ಅದರ ವಿಸ್ತೃತ ವರ್ಣನೆ ಕಂಡುಬರುವುದುಂಟು. ಉದಾಹರಣೆಗೆ : ಪ್ರಾಚೀನ ಪಶ್ಚಿಮ ಗಂಗದೊರೆ ೧ನೆಯ ಮಾಧವವರ್ಮನ ಸಸನಕೋಟಿ ತಾಮ್ರ ಪಟಗಳಲ್ಲಿ ಈ ಅಂಶವೇ ಇಲ್ಲ; ಗುರ್ಜರ ದೊರೆ ೩ನೆಯ ದಡ್ಡನ ತಾಮ್ರ ಶಾಸನದಲ್ಲಿ ಬರುಕಚ್ಛ ನಗರದ ಹೆಸರಷ್ಟೆ ಬಂದಿದೆ; ಕಾಂತಿದೇವನ ಚಿತ್ತಗಾಂಗ್ ಪಟದಲ್ಲಿ ವರ್ಧಮಾನ ನಗರದ ಹೆಸರು ಎರಡೇ ಎರಡು ವಿಶೇಷಣಗಳೊಡನೆ ಉಕ್ತವಾಗಿದೆ. ಆದರೆ ಸೋಮವಂಶಿ ದೊರೆ ೧ನೆಯ ಮಹಾಭವಗುಪ್ತನ ಸೋನ್‌ಪುರ್ ತಾಮ್ರಪಟದಂತಹ ದಾಖಲೆಗಳಲ್ಲಿ ದಾನದ ಆಜ್ಞೆಯನ್ನು ಹೊರಡಿಸಿದ ಸ್ಥಳದ ದೀರ್ಘ ವರ್ಣನೆಯನ್ನು ನೋಡಬಹುದು. (ಈ ಶಾಸನದಲ್ಲಿ ಅದು ೯ ಪಂಕ್ತಿಗಳಷ್ಟಿದೆ).

ಮುಂದೆ, ದಾನಿಯ ಹೆಸರು ಹಾಗೂ ಅವನ ವಂಶಾವಳಿ ರಾಜಕೀಯ ಚರಿತ್ರೆಯ ದೃಷ್ಟಿಯಿಂದ ಬಹಳ ಮುಖ್ಯವಾದ ಭಾಗ. ಪ್ರಾಚೀನ ಶಾಸನಗಳಲ್ಲಿ ದಾನಿಯ ಹೆಸರು ಮಾತ್ರ - ಒಮ್ಮೊಮ್ಮೆ ಅವನ ತಂದೆ, ತಾತಂದಿರ ಹೆಸರಿನೊಡನೆ - ಉಕ್ತವಾಗಿರುತ್ತದೆ; ಬಿರುದು ಇರಬಹುದು, ಇಲ್ಲದಿರಬಹುದು. ಶಾತವಾಹನರಂಥ ದೊರೆಗಳ ದಾಖಲೆಗಳಲ್ಲಿ ರಾಜರ ಹೆಸರು ಕೂಡ ಉಕ್ತವಾಗದೆ, 'ಗೌತಮೀ ಪುತ್ರ' ಎಂಬ ಗೋತ್ರ ಸೂಚಕ ಶಬ್ದವಷ್ಟೆ ಕಂಡುಬರುವುದುಂಟು. ಆದರೆ ಕ್ರಮೇಣ ಈ ಅಂಶ ವಿಸ್ತಾರಗೊಂಡು, ಕಲ್ಪನೆ ಉತ್ಪ್ರೇಕ್ಷೆಗಳಿಂದ ಕೂಡಿದ 'ಪ್ರಶಸ್ತಿ'ಗೆ ಎಡೆಗೊಡತೊಡಗಿತು. ಈಚಿನ ಶಾಸನಗಳಲ್ಲಿ ದಾನಿಗೆ ವಿಶೇಷಣಗಳ ಮತ್ತು ಬಿರುದುಗಳ ಮಾಲಿಕೆಗಳು ಸಂದಿವೆ; ಅವರ ವಂಶಾವಳಿಗಳು ದೀರ್ಘವಾಗಿ ಪರಿಕೀರ್ತಿತವಾಗಿವೆ ; ಗದ್ಯದಲ್ಲಿ ಅಥವಾ ಪದ್ಯದಲ್ಲಿ ಅಥವಾ ಗದ್ಯಪದ್ಯ

4. ಅದೇ, ಪುಟ ೫೨

ಮಿಶ್ರಿತ ಶೈಲಿಯಲ್ಲಿ ಅಲಂಕಾರಮಯವಾದ ವರ್ಣನೆಗಳು ಸೇರಿಕೊಂಡಿವೆ. ಆಸ್ಥಾನ ಕವಿಗಳು ಸಂಬಂಧಪಟ್ಟ ರಾಜವಂಶವನ್ನು ಕಾಲ್ಪನಿಕ ಪೌರಾಣಿಕ ವ್ಯಕ್ತಿಯಿಂದ ಆರಂಭಿಸಿರುವುದುಂಟು ; ದೊರೆಗಳ ದಿಗ್ವಿಜಯ, ಸಾಧನೆಗಳನ್ನೂ ಗುಣಗಣವನ್ನೂ ಉತ್ಸಾಹದಿಂದ ಕೊಂಡಾಡಿರುವುದುಂಟು. ಇಲ್ಲಿ ಕೆಲವು ನಿದರ್ಶನಗಳನ್ನು ಕೊಡಬಹುದು. ಸಸನಕೋಟ ತಾಮ್ರಪಟಗಳ ಒಟ್ಟು ೨೪ ಪಂಕ್ತಿಗಳಲ್ಲಿ ೧೧ ಪಂಕ್ತಿಗಳು ದಾನಿಯ ವಿಷಯಕ್ಕೆ ಮೀಸಲಾಗಿವೆ :'ಮಂಗಳ'ವಾದ ಮೇಲೆ ಜಾಹ್ನವೇಯ ಕುಲದ, ಕಾಣ್ವಾಯನ ಗೋತ್ರದ ಹಾಗೂ ದಾನಿಯ ತಂದೆಯಾದ ಕೊಂಗುಣಿವರ್ಮನ ಪ್ರಸ್ತಾಪ ಬಂದಿದೆ ; ಅನಂತರ ದಾನಿಯ (೧ನೆಯ ಮಾಧವವರ್ಮನ) ಹೆಸರು ಉಕ್ತವಾಗಿದೆ; ಈ ನಡುವೆ ತಂದೆ, ಮಕ್ಕಳ ಬಿರುದುಗಳು ವಿಪುಲವಾಗಿ ಬಂದಿವೆ. ಇವುಗಳಲ್ಲಿ ಎಷ್ಟೋ ಬಿರುದುಗಳು ಚರಿತ್ರೆಗೆ ನಿರುಪಯುಕ್ತ. ಚಿತ್ತಗಾಂಗ್ ತಾಮ್ರಪಟದಲ್ಲಿ ಕಾಂತಿದೇವನ ಮತ್ತು ಅವನ ತಂದೆ-ತಾಯಿಯ ವರ್ಣನೆ ಆರು ಪ್ರೌಢ ಪದ್ಯಗಳಲ್ಲೂ ಒಂದು ಗದ್ಯ ಭಾಗದಲ್ಲೂ ಹರಿದಿದೆ. ಡಡ್ಡನ ಶಾಸನದಲ್ಲಿ ಒಟ್ಟು ೩೦ ಸಾಲುಗಳಿದ್ದು, ಅವನ ವಂಶಾವಳಿ ೧೪ ಸಾಲುಗಳ ಪ್ರೌಢ ಗದ್ಯ ಭಾಗದಲ್ಲಿ ನಿರೂಪಿತವಾಗಿದೆ.

ಪೂರ್ವಗಂಗ, ಕಳಚುರಿ, ರಾಷ್ಟ್ರಕೂಟ, ಚೋಳ, ಚಾಳುಕ್ಯ, ಪರಮಾರ, ಪಾಲರಂತಹ ರಾಜವಂಶಗಳ ಶಾಸನಗಳಲ್ಲಿ ವಂಶಾವಳಿ ದೀರ್ಘವಾಗಿ ವರ್ಣಿತವಾಗಿದೆ. ನಿದರ್ಶನಕ್ಕೆ : ಒರಿಸ್ಸದ ೨ನೆಯ ಗಂಗ ನರಸಿಂಹನ ಅಸಂಖಲಿ ಪಟಗಳಲ್ಲಿ ಒಟ್ಟು ೨೧೨ ಪಂಕ್ತಿಗಳಿದ್ದು, ವಂಶಾವಳಿಯೆ ೧೬೫ ಪಂಕ್ತಿಗಳನ್ನು ನುಂಗಿದೆ; ಅದು ವಿವಿಧ ಛಂದಸ್ಸುಗಳ ೧೦೫ ಪದ್ಯಗಳಲ್ಲೂ ಒಂದು ಗದ್ಯ ಭಾಗದಲ್ಲೂ ಹರಡಿಕೊಂಡಿದೆ. ಅಲ್ಲಿ ಉಕ್ತರಾಗಿರುವ ದಾನಿಯ ಪೂರ್ವಜರಲ್ಲಿ ಕೆಲವರು ಕಾಲ್ಪನಿಕವೆಂದೂ ಶಾಸನ ನಿಜವಾಗಿ ಪ್ರಾರಂಭಗೊಳ್ಳುವುದು ೧೬೫ನೆಯ ಪಂಕ್ತಿಯಲ್ಲೆಂದೂ ಹೇಳಲಾಗಿದೆ. ಅನೇಕ ತಾಮ್ರಪಟಗಳಲ್ಲಿ ಪೀಠಿಕಾಭಾಗ - ಮುಖ್ಯವಾಗಿ ವಂಶಾವಳಿ - ಮಾತ್ರ ಉತ್ಕೀರ್ಣವಾಗಿರುವುದು ಗಮನಾರ್ಹ. ಅದನ್ನು ಮೊದಲೇ ಸಿದ್ಧಗೊಳಿಸಿಟ್ಟಿರುತ್ತಿದ್ದರು ; ದಾನಸಂಬಂಧವಾದ ಭಾಗ ಆಮೇಲೆ ಸೇರ್ಪಡೆಗೊಳ್ಳುತ್ತಿತ್ತು.

ಒರಿಸ್ಸದ ಪೂರ್ವ ಗಂಗರಂತಹ ರಾಜವಂಶಗಳ ಶಾಸನಗಳಲ್ಲಿ ಬೇರೆ ಬೇರೆ ದೊರೆಗಳ ಆಳ್ವಿಕೆಯ ಅವಧಿಯೂ ಪೂರ್ಣ ವರ್ಷಗಳಲ್ಲಿ ಉಲ್ಲೇಖಗೊಂಡಿರುತ್ತದೆ ; ಪೂರ್ವ ಚಾಲುಕ್ಯ ದೊರೆಗಳ ದಾಖಲೆಗಳು ಅದನ್ನು ವರ್ಷ, ತಿಂಗಳು, ದಿನಗಳಲ್ಲಿ ನಿಖರವಾಗಿ ಹೇಳುವುದುಂಟು.

ಒಟ್ಟಿನಲ್ಲಿ, ದಾನಿಯನ್ನೂ ಅವನ ವಂಶಾವಳಿಯನ್ನೂ ಕುರಿತ ಭಾಗದಲ್ಲಿ ಕಲ್ಪನೆ ಎಷ್ಟೇ ಕೆಲಸ ಮಾಡಿದ್ದರೂ, ಸತ್ಯಸಂಗತಿಗಳು ಕೂಡ ಬೆರೆತಿರುತ್ತವೆ ಎಂಬುದನ್ನು ಮರೆಯಬಾರದು. ಚರಿತ್ರೆಯ ರಚನೆಗೆ ಅವು ಉಪಯುಕ್ತ ಸಾಮಗ್ರಿಯಾಗುತ್ತವೆ.

ದಾನಕ್ಕೆ ಸಂಬಂಧಿಸಿದ ಆಜ್ಞೆ ದಾನಿಯ ಕೈಕೆಳಗಿನವರನ್ನು, ಅಧಿಕಾರಿಗಳನ್ನು ಮತ್ತು ದಾನವಿತ್ತ ಭೂಮಿಯ ಅಥವಾ ಗ್ರಾಮದ ಪರಿಸರದಲ್ಲಿ ವಾಸಿಸುವ ಜನರನ್ನು ಉದ್ದೇಶಿಸಿ ಪ್ರಣೀತವಾಗಿರುತ್ತದೆ. ಕೆಲವು ಪ್ರಾಚೀನ ಶಾಸನಗಳಲ್ಲಿ ಈ ಅಂಶವೇ ಇಲ್ಲ ; ಇದ್ದರೂ, ರಾಜಾಜ್ಞೆ ಪ್ರಾಂತಾಧಿಕಾರಿ ಅಥವಾ ಗ್ರಾಮಸ್ಥರನ್ನು ಮಾತ್ರ ಕುರಿತುದಾಗಿರುತ್ತದೆ. ಈಚಿನ ಶಾಸನಗಳಲ್ಲಿ ವಿಶೇಷವಾಗಿ ಉತ್ತರ ಭಾರತವು - ರಾಜ್ಯದ ಅಧಿಕಾರಿಗಳ ದೊಡ್ಡ ಪಟ್ಟಿಯೆ ಇರುತ್ತದೆ ; ಅವುಗಳಲ್ಲಿ ಸಾಮಂತರೂ ಕಂದಾಯ, ರಕ್ಷಣೆ ನ್ಯಾಯಾಂಗ, ಸೈನಿಕ ಮುಂತಾದ ಅನೇಕ ಇಲಾಖೆಗಳ ಅಧಿಕಾರಿಗಳೂ ಸೇರಿರುವುದುಂಟು ; ಅರಮನೆಯ ವ್ಯಕ್ತಿಗಳೂ ಒಮ್ಮೊಮ್ಮೊ ಅಂಥ ಪಟ್ಟಿಯಲ್ಲಿರಬಹುದು. ಇವರೆಲ್ಲರಿಗೂ ರಾಜಾಜ್ಞೆ ಉದ್ದಿಷ್ಟವಾಗಿರುತ್ತದೆ.

ಆಜ್ಞೆಗೆ ಮೊದಲು ದೊರೆ ಸಂಬಂಧಪಟ್ಟವರ ಕುಶಲವನ್ನು ಕೇಳುತ್ತಾನೆ. ಆಜ್ಞೆಯನ್ನು ಹೇಳುವ ಶಬ್ದಗಳೆಂದರೆ ಸಾಮಾನ್ಯವಾಗಿ 'ಸಮಾದಿಶತಿ' ಅಥವಾ 'ಆದಿಶತಿ'; ಅದಕ್ಕೆ ಬೋಧಯತಿ, ಮಾನಯತಿ, ಕುಶಲಯತಿ ಎಂಬ ಶಬ್ದಗಳು ಸೇರಿರುವುದೂ ಉಂಟು.

ದಾನಿಗೆ ಸಾಮಾನ್ಯವಾಗಿ 'ಕುಶಲಿ' ಎಂಬ ವಿಶೇಷಣ ಪ್ರಯುಕ್ತವಾಗಿರುತ್ತದೆ; ಹಾಗೆ ವರ್ಣಿಸಬೇಕೆಂದು ಕಾನೂನಿನ ನಿಯಮವೇ ಇದ್ದಿತು. ದಾನ ಕೊಟ್ಟಾಗ ದಾನಿ ಸಂಪೂರ್ಣವಾಗಿ ಸ್ವಸ್ಥ ಚಿತ್ತನೂ ಅರೋಗಿಯೂ ಅಪ್ರಮತ್ತನೂ ಆಗಿದ್ದನೆಂದೂ ತತ್ಕಾರಣದಿಂದ ದಾಖಲೆ ಊರ್ಜಿತ ಮತ್ತು ಪ್ರಶ್ನಾತೀತವೆಂದೂ ಇದರ ಅಭಿಪ್ರಾಯ. ಮುಂದೆ ಬರುವ ಪ್ರಕಟಣೆಯತ್ತ ಗಮನ ಸೆಳೆಯುವ ಮಾತುಗಳಿವು : ವಿದಿತಮಸ್ತು ವಃ, ವಿದಿತಮಸ್ತು ಭವತಾಂ, ಅಸ್ತು ವಃ ಸಂವಿದಿತಂ, ಮತಂ ಅಸ್ತು ಭವತಾಂ - ಇತ್ಯಾದಿ. ('ನಿಮಗೆ ತಿಳಿದಿರಲಿ' ಎಂಬುದು ಇವುಗಳ ಅರ್ಥ).

ಈ ರೀತಿ ಅಧಿಕಾರಿಗಳು ಮುಂತಾದವರನ್ನು ಸಂಬೋಧಿಸಿ ಆಜ್ಞೆ ಮಾಡುವ ಅಂಶ ಎಷ್ಟೋ ಶಾಸನಗಳಲ್ಲಿ - ಉದಾಹರಣೆಗೆ ಮಾಧವ ವರ್ಮನ ಸಸನಕೋಟ ತಾಮ್ರಪಟಗಳು ಮತ್ತು ಕ್ರಿ.ಶ.೯ನೆಯ ಶತಮಾನದ ಅಸ್ಸಾಮಿನ ವನಮಾಲಾವರ್ಮನ ಸಜಾತೀಯ ಪಟಗಳು - ಕಂಡುಬರುವುದಿಲ್ಲ. ಐಪುರ್ ಪಟಗಳಲ್ಲಿ ದಾನಕೊಟ್ಟ ಗ್ರಾಮದ ನಿವಾಸಿಗಳಿಗೆ ಮಾತ್ರ ಆಜ್ಞೆ ಉದ್ದಿಷ್ಟವಾಗಿದೆ. ಡಡ್ಡನ ದಾಖಲೆಯಲ್ಲಿ ಸಂಭೋಧಿತರಾಗಿರತಕ್ಕವರು ಗ್ರಾಮಸ್ಥರಲ್ಲ; ದಾನಿಯ ಸಾಮಂತರು ಮತ್ತು ಅಧಿಕಾರಿಗಳು. ಕೆಲವು ಶಾತವಾಹನ ಮತ್ತು ಪ್ರಾಚೀನ ಪಲ್ಲವ ಶಾಸನಗಳಲ್ಲಿ, ದಾನವಿತ್ತ ಭೂಮಿಯಿರುವ ಜಿಲ್ಲೆಯ ಆಡಳಿತಾದಿಕಾರಿಗೆ ಆಜ್ಞೆ ಸಂಬಂಧಿಸಿರುತ್ತದೆ. ಕಾಂತಿದೇವನ ಚಿತ್ತಗಾಂಗ್ ತಾಮ್ರ ಪಟದಲ್ಲಿ ಹೀಗಿದೆ : "ಕುಶಲಿಯಾದ ಕಾಂತಿದೇವ ಹರಿಕೆಲಾ ಮಂಡಲದ ಭಾವೀ ದೊರೆಗಳಿಗೆ, ಅವರ ಹಿತಕ್ಕಾಗಿಯೇ, ಮುಂದೆ ಉಕ್ತವಾಗಿರುವಂತೆ ತಿಳಿಸುತ್ತಾನೆ. ನಿಮಗದು ತಿಳಿದಿರಲಿ."

ಉದ್ದಿಷ್ಟರಾದ ಅಧಿಕಾರಿಗಳ ಮತ್ತು ಇತರರ ಸುದೀರ್ಘವಾದ ಪಟ್ಟಿ ಉತ್ತರ ಮತ್ತು ಪೂರ್ವಭಾರತದ ಕೆಲವು ಭಾಗಗಳ ಪ್ರಾಚೀನ ಹಾಗೂ ಮಧ್ಯಕಾಲೀನ ಶಾಸನಗಳಲ್ಲಿ - ಉದಾಹರಣೆಗೆ, ಬಂಗಾಳ ಬಿಹಾರಗಳ ಪಾಲ ಮತ್ತು ಸೇನ ದೊರೆಗಳವು - ಕಂಡುಬರುತ್ತವೆ. ಲಕ್ಷ್ಮಣ ಸೇನನ ಅನುಲಿಯ ತಾಮ್ರಪಟದಲ್ಲಿ ೨೫ ವರ್ಗಗಳಿಗೆ ಆಜ್ಞೆ ಉದ್ದಿಷ್ಟವಾಗಿದ್ದರೆ, ೧ನೆಯ ಮಹೀಪಾಲನ ಬಂಗಢ್ ಪಟದಲ್ಲಿ ಆ ಸಂಖ್ಯೆ ೪೪ಕ್ಕೇರಿದೆ.

## 117.2.2 ಪ್ರಕಟಣೆ

ಹಿಂದೆ ಹೇಳಿದಂತೆ ಈ ಭಾಗದಲ್ಲಿ ಐದು ಅಂಶಗಳು ಸಮಾವೇಶಗೊಳ್ಳುತ್ತವೆ. ಅವು ಎಲ್ಲ ಶಾಸನಗಳಲ್ಲೂ ಪೂರ್ವೋಕ್ತ ಕ್ರಮದಲ್ಲೆ ಬರುತ್ತವೆಂದು ಹೇಳಲಾಗುವುದಿಲ್ಲ; ಅಲ್ಲದೆ ವಿವರಗಳಲ್ಲಿ ಅವು ವ್ಯತ್ಯಾಸವಾಗುವುದೂ ಉಂಟು.

ಸಾಮಾನ್ಯವಾಗಿ ದೊರೆಗಳು ಒಂದು ಜಮೀನನ್ನು ಅಥವಾ ಅನೇಕ ಜಮೀನುಗಳನ್ನು, ಒಂದು ಗ್ರಾಮವನ್ನು ಅಥವಾ ಅನೇಕ ಗ್ರಾಮಗಳನ್ನು ದಾನವಾಗಿ ಕೊಡುತ್ತಿದ್ದರು. ದಾನದ ಭೂಮಿ ಎಲ್ಲಿದೆಯೆಂಬುದನ್ನು ಹೇಳುವಾಗ, ಸಂಬಂಧಿಸಿದ ಗ್ರಾಮ, ವಿಷಯ, ಮಂಡಲ ಇತ್ಯಾದಿಗಳನ್ನು ನಮೂದಿಸಲಾಗುತ್ತದೆ. ಭೂಮಿಯ ಪ್ರಮಾಣವನ್ನು ಸಾಮಾನ್ಯವಾಗಿ ಹಲ, ನಿವರ್ತನ, ಪಾದಾವರ್ತ, ಕುಲ್ಯವಾಪ, ದೋಣವಾಪ, ನಾಳಿಕಾವಾಪ, ಕಲಸಿಕಾವಾಪ ಮುಂತಾದ ಅಳತೆಗಳಲ್ಲಿ ಸೂಚಿಸುತ್ತಾರೆ. ಈ ಅಳತೆಗಳ ಪ್ರಕಾರ ಭೂಮಿಯ ಪ್ರಮಾಣ ಎಷ್ಟೆಂಬುದನ್ನು ಇಂದು ನಿರ್ಧರಿಸುವುದು ಕಷ್ಟ. ಆದರೆ 'ವಾಪ'ದಿಂದ ಕೊನೆಗೊಳ್ಳುವ ಶಬ್ದಗಳು ಏನನ್ನು ಸೂಚಿಸುತ್ತವೆಂದು ಊಹಿಸಬಹುದು : ಆಯಾ ಪ್ರಮಾಣದ ಬೀಜಗಳನ್ನು ಹಿಡಿಸುವಷ್ಟು ಭೂಮಿಯನ್ನು ಅವು ಹೇಳುತ್ತವೆ. ಉದಾಹರಣೆಗೆ, 'ದ್ರೋಣ'ವಾಪವೆಂದರೆ ಒಂದು ದ್ರೋಣದಷ್ಟು ಬೀಜರಾಶಿಗೆ ಅವಕಾಶವಿರುವಷ್ಟು ಅಳತೆಯ ಭೂಮಿ. ಕನ್ನಡ ಶಾಸನಗಳಲ್ಲಿ ಬರುವ 'ಎರಡು ಸಲಗೆ ಗದ್ದೆ' (ಎರಡು ಸಲಗೆಯಷ್ಟು ಬೀಜ ಬಿತ್ತಬಹುದಾದ ಗದ್ದೆ), 'ಇಕ್ಕಂಡುಗ ಬೆದ್ದಲ್' (ಎರಡು ಖಂಡುಗ ಬೀಜ ಹಿಡಿಸುವಷ್ಟು ಹೊಲ) ಎಂಬ ಮಾತುಗಳನ್ನು ಲಕ್ಷಿಸಬೇಕು.[5]

5. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂದಿಗೂ ಆ ಅಳತೆಯ ವಿಧಾನವೆ ಬಳಕೆಯಲ್ಲಿದೆಯಂತೆ.

ಕೆಲವೊಮ್ಮೆ ನಿರ್ದಿಷ್ಟವಾದ ಅಳತೆಗೋಲುಗಳಿಂದಲೂ ಭೂ ಪ್ರಮಾಣವನ್ನು ಸೂಚಿಸಿರುವುದುಂಟು. ಮೊಳದುದ್ದದ ಮಾನದಂಡಗಳು ಕೂಡ ಬಳಕೆಯಲ್ಲಿದ್ದುವು. ಕನ್ನಡ ಶಾಸನಗಳಲ್ಲಿ ವಿವಿಧ ಅಳತೆಗೋಲುಗಳ ಪ್ರಸ್ತಾಪವಿದೆ. ಈ ಅಳತೆಗೋಲುಗಳಿಂದ ಹೊಲಗಳನ್ನು 'ಮತ್ತರು', 'ಕಂಬ' ಎಂಬುದಾಗಿ ಅಳೆಯುತ್ತಿದ್ದರು.[6]

ದಾನ ಪಡೆದವರು ಒಬ್ಬರಾಗಿರಬಹುದು ಅಥವಾ ಹಲವರಾಗಿರಬಹುದು. ಅನೇಕರಿಗೆ ಭೂದಾನವಿತ್ತಾಗ, ಒಬ್ಬೊಬ್ಬರಿಗೂ ಸಲ್ಲಬೇಕಾದ ಪಾಲನ್ನು ನಿರ್ದಿಷ್ಟವಾಗಿ ತಿಳಿಸಿರುವುದುಂಟು. ವಾಕಾಟಕ ಇಮ್ಮಡಿ ಪ್ರವರ ಸೇನನ ಚಮ್ಮಕ್ ತಾಮ್ರಪಟಗಳಲ್ಲಿ ಗ್ರಾಮವೊಂದನ್ನು ೪೯ ಮಂದಿ ಬ್ರಾಹ್ಮಣರಿಗೆ ದಾನ ಕೊಡಲಾಗಿದೆ; ಆದರೆ ಅಲ್ಲಿ ಪ್ರತಿಯೊಬ್ಬರ ಪಾಲನ್ನು ಸ್ಪಷ್ಟಪಡಿಸಿಲ್ಲ; ಎಲ್ಲರಿಗೂ ಸಮಪಾಲು ಎಂಬುದು ತಾತ್ಪರ್ಯವಿರಬಹುದು. ಭಾಸ್ಕರವರ್ಮನ ನಿಧರ್‌ಪುರ್ ಪಟಗಳಲ್ಲಿ ಭೂದಾನಗ್ರಾಹಕರ ಸಂಖ್ಯೆ ೨೦೦ಕ್ಕೂ ಹೆಚ್ಚು' ಒಬ್ಬೊಬ್ಬರು ಪಾಲನ್ನೂ ಅಲ್ಲಿ ನಿಗದಿ ಮಾಡಲಾಗಿದೆ. ದಾನ ಗ್ರಾಹಕರ ಪರಮಾವಧಿ ಸಂಖ್ಯೆ ಕಂಡುಬರುವುದು ೧ನೆಯ ರಾಜೇಂದ್ರಚೋಳನ ಕರಂದೈ ತಾಮ್ರಪಟಗಳಲ್ಲಿ ; ೧೦೭೩ ಮಂದಿ ಬ್ರಾಹ್ಮಣರಿಗೆ ಅಲ್ಲಿ ದಾನ ಸಂದಿದೆ.

ದೊರೆಗಳಿಂದ ದಾನ ಪಡೆಯುತ್ತಿದ್ದವರು ಸಾಮಾನ್ಯವಾಗಿ ಬ್ರಾಹ್ಮಣರು. ಶಾಸನಗಳಲ್ಲಿ ಅವರ ಹೆಸರುಗಳೂ ಅವರ ತಂದೆ, ತಾತ, ಮುತ್ತಾತಂದಿರ ಹೆಸರುಗಳೂ ಅವರ ಗೋತ್ರ, ಪ್ರವರ, ಚರಣ, ವೇದ ಶಾಖೆಗಳೂ ಉಕ್ತವಾಗಿರುತ್ತವೆ. ದಾನಗ್ರಾಹಕರ ವಂಶ ಮೂಲತಃ ಎಲ್ಲಿಂದ ಬಂತೆಂಬುದನ್ನೂ ಈಚಿನ ಕೆಲವು ಶಾಸನಗಳು ಹೇಳುವುದುಂಟು. ಈ ಭಾಗ ಸಾಮಾಜಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಸಾಧ್ಯತೆಯಿದೆ.

ದಾನಗ್ರಾಹಕನಿಂದ ಅಥವಾ ಅವನ ಹಿರಿಯರಿಂದ ಸಂದ ಸೇವೆಗೆ ಪ್ರತಿಫಲ ರೂಪವಾಗಿ ದಾನಕೊಟ್ಟಿರುವ ಪ್ರಕರಣಗಳೂ ಬೇಕಾದಷ್ಟಿವೆ. ಇಂಥ ಕಡೆ ದಾನಗ್ರಾಹಕರು ಸಾಮಾನ್ಯವಾಗಿ ಬ್ರಾಹ್ಮಣರಾಗಿರುವುದಿಲ್ಲ. ಗಂಗದೊರೆ ೩ನೆಯ ವಜ್ರಹಸ್ತನ ಪೆದ್ದಬಮ್ಮಿಡಿ ತಾಮ್ರಪಟಗಳು ಬ್ರಾಹ್ಮಣೇತರನೊಬ್ಬನಿಗೆ ಅವನ ಸೈನಿಕ ಸೇವೆಗಾಗಿ ಒಂದು ಗ್ರಾಮವನ್ನು ದಾನಕೊಟ್ಟುದನ್ನು ಹೇಳುತ್ತವೆ. ಚಂದೇಲ ರಾಜ ತ್ರೈಲೋಕ ವರ್ಮನ ಗರ್ರ ಪಟಗಳಲ್ಲಿ ಭೂಮಿಯನ್ನು ಒಬ್ಬ ವ್ಯಕ್ತಿಗೆ 'ಮೃತ್ಯುಕವೃತ್ತಿ'ಯಾಗಿ ಕೊಟ್ಟುದರ ದಾಖಲೆಯಿದೆ. ಆ ವ್ಯಕ್ತಿಯ ತಂದೆ ದೊರೆಯ ಪರವಾಗಿ ಮಹಮದೀಯರೊಡನೆ ಹೋರಾಡಿ ಮಡಿದನಂತೆ. ಕನ್ನಡ ಶಾಸನಗಳಲ್ಲಿ ಬರುವ 'ಬಾಳ್ಗಲ್ಚು', 'ನೆತ್ತರು ಕೊಡುಗೆ', 'ಬೀರಗೂಳ್' ಎಂಬ ಮಾತುಗಳನ್ನೂ[7] 'ಬಾಳ್ಗಲ್ಚು'ವಿಗೆ ದೃಷ್ಟಾಂತವಾಗಿ ಹಲ್ಮಿಡಿ ಶಾಸನವನ್ನೂ ಇಲ್ಲಿ ಸ್ಮರಿಸಬಹುದು.

ದೇವಾಲಯದಂಥ ಧಾರ್ಮಿಕ ಸಂಸ್ಥೆಗೆ ದತ್ತಿ ಕೊಟ್ಟಾಗ ದೇವತೆಯ ಹೆಸರು ಉಕ್ತವಾಗಿರುತ್ತದೆ; ಕೆಲವೊಮ್ಮೆ ಪುರೋಹಿತನ (ರ) ಹೆಸರೂ ಸೇರಿರುತ್ತದೆ.

ಪುಣ್ಯಾರ್ಜನೆಯೇ ದಾನ ಕೊಡುವುದರ ಉದ್ದೇಶವಾಗಿತ್ತು ಕೆಲವು ಶಾಸನಗಳಲ್ಲಿ ಆ ಉದ್ದೇಶವನ್ನಾಗಲಿ ದಾನದ ಸಂದರ್ಭವನ್ನಾಗಲಿ ನಿರ್ದಿಷ್ಟವಾಗಿ ಉಲ್ಲೇಖಿಸಿರುವುದಿಲ್ಲ. ಆದರೆ ಬಹುಪಾಲು ದಾನಗಳನ್ನು ಸಂಕ್ರಾಂತಿ, ಸೂರ್ಯಗ್ರಹಣ, ಚಂದ್ರಗ್ರಹಣ, ಹಬ್ಬ, ತೀರ್ಥಯಾತ್ರೆ, ಮುಂತಾದ ಸಂದರ್ಭಗಳಲ್ಲಿ ಕೊಟ್ಟಿರುವುದು ತಿಳಿದುಬಂದಿದೆ. ದಾನಿ ಪವಿತ್ರ ತೀರ್ಥದಲ್ಲಿ ಮಿಂದು ದಾನವಿತ್ತಂತೆ ಕೆಲವು ಶಾಸನಗಳು ಹೇಳುತ್ತವೆ. (ಉದಾ : 'ವಿಧವದ್ ಗಂಗಾಯಾಂ ಸ್ನಾತ್ವಾ'). ರಾಜನ ಮನೆದೈವದ ಹೆಸರಿನಲ್ಲಿ ದಾನಗಳು ಕೊಡಲ್ಪಟ್ಟಿರುವ ನಿದರ್ಶನಗಳಿವೆ (ಉದಾ : 'ಭಗವಂತಂ ಬುದ್ಧಭಟ್ಟಾರಕಂ ಉದ್ದಿಶ್ಯ'). ದಾನಗಳನ್ನು ಜಲಧಾರಾಪೂರ್ವಕವಾಗಿ ಕೊಟ್ಟಂತೆ ಬಹುಪಾಲು ಶಾಸನಗಳು ಹೇಳುತ್ತವೆ.

---

6. ವಿವರಗಳಿಗೆ ನೋಡಿ : ಡಾ. ಚಿದಾನಂದಮೂರ್ತಿ, ಪೂರ್ವೋಕ್ತ ಗ್ರಂಥ, ಪು. ೩೯೨ - ೯೩.

7. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂದಿಗೂ ಈ ಅಳತೆಯ ವಿಧಾನವೆ ಬಳಕೆಯಲ್ಲಿದೆಯಂತೆ.

. ದೊರೆಗಳು ಬೇರೊಬ್ಬರ - ಎಂದರೆ ತಾಯಿ, ಪತ್ನಿ, ಇನ್ನಾರೊ ಸಂಬಂಧಿ, ಅಧಿಕಾರಿ. ಸಾಮಂತ ಅಥವಾ ಅನ್ಯರಾಜ - ಕೋರಿಕೆಯ ಪ್ರಕಾರ ದಾನ ಕೊಡುತ್ತಿದ್ದುದಕ್ಕೆ ಉದಾಹರಣೆಗಳಿವೆ.

ದಾನದ ಉದ್ದೇಶ - ಪುಣ್ಯ ಸಂಪಾದನೆ - ಎಷ್ಟೋ ಶಾಸನಗಳಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ. ದಾನಿಯ ದೀರ್ಘಾಯುಷ್ಯ, ಶಕ್ತಿ, ಕೀರ್ತಿ, ಅಭ್ಯುದಯಗಳಿಗಾಗಿ ದಾನ ಕೊಡಲ್ಪಟ್ಟಿದ್ದನ್ನು ಅನೇಕ ಪ್ರಾಚೀನ ಶಾಸನಗಳು ಹೇಳುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ದಾನ ಗ್ರಾಹಕನ - ಅವನು ಬ್ರಾಹ್ಮಣನಾಗಿದ್ದರೆ - ನಿತ್ಯವಿಧಿಗಳ ಅನುಷ್ಠಾನ, ದೇವತಾಪೂಜೆಯ ನಿರ್ವಹಣೆ, ದೇವಾಲಯ ಜೀರ್ಣೋದ್ಧಾರ, ಸಂನ್ಯಾಸಿಗಳ ಅಶನವ್ಯವಸ್ಥೆ ಮುಂತಾದ ಉದ್ದೇಶಗಳಿಗಾಗಿ ದಾನ ಕೊಟ್ಟಿರುವುದು ಕಂಡುಬರುತ್ತದೆ; ದಾನ ಕೊಟ್ಟ ಭೂಮಿಯಿಂದ ಬರುವ ಆದಾಯವನ್ನು ಆ ಕಾರ್ಯಗಳಿಗಾಗಿ ವಿನಿಯೋಗಿಸಬೇಕಿತ್ತು.

ದಾನಕೊಟ್ಟ ಜಮೀನಿನ ಅಥವಾ ಗ್ರಾಮದ ಮೇರೆಗಳು ಸುಪರಿಚಿತವಾಗಿದ್ದಾಗ, ಶಾಸನಗಳಲ್ಲಿ ಅವುಗಳನ್ನು ನಮೂದಿಸುತ್ತಿರಲಿಲ್ಲ; "ಎಲ್ಲರಿಗೂ ಗೊತ್ತಿರುವ ಮೇರೆಗಳೊಡನೆ" ಎಂದಷ್ಟೆ ಹೇಳಲಾಗುತ್ತಿತ್ತು. ಆದರೆ ಇತರ ಸಂದರ್ಭಗಳಲ್ಲಿ ಭೂಮಿಯ ಚಕ್ಕುಬಂದಿಯನ್ನು ನಿರ್ದಿಷ್ಟವಾಗಿ ಸೂಚಿಸಿರುವುದು ಕಂಡುಬರುತ್ತದೆ. ಗುಡ್ಡ, ತೊರೆ, ಮರ ಮುಂತಾದ ನೈಸರ್ಗಿಕ ಮೇರೆಗಳನ್ನು ಸಾಮಾನ್ಯವಾಗಿ ಇರಿಸಿಕೊಳ್ಳುತ್ತಿದ್ದರು; ಎಷ್ಟೋ ಸಲ ಗೂಟ ನೆಡುವುದು ಮುಂತಾದ ವಿಧಾನಗಳಿಂದ ಮೇರೆಗಳನ್ನು ನಿರ್ಧರಿಸಲಾಗುತ್ತಿತ್ತು. ದಕ್ಷಿಣ ಭಾರತದ ಚೋಳ ಪಾಂಡ್ಯರಂತಹ ದೊರೆಗಳ ಶಾಸನಗಳಲ್ಲಿ 'ಕರಿಣೀಭ್ರಮಣ'ವೆಂಬ ವಿಶಿಷ್ಟ ವಿಧಾನದ ಮೂಲಕ ದಾನದ ಭೂಮಿಯ ಗಡಿಗಳನ್ನು ನಿಷ್ಕರ್ಷಿಸುತ್ತಿದ್ದ ವಿಷಯ ತಿಳಿದುಬರುತ್ತದೆ. ಒಬ್ಬ ಉನ್ನತಾಧಿಕಾರಿ ಹೆಣ್ಣಾನೆಯ ಮೇಲೆ ಕುಳಿತು ದಾನಕೊಟ್ಟ ಭೂಮಿಯ ಸುತ್ತ ಬರುತ್ತಿದ್ದನೆಂದೂ ಕೈಕೆಳಗಿನ ಅಧಿಕಾರಿಗಳು ಅವನನ್ನು ಹಿಂಬಾಲಿಸಿ, ಮೇರೆಗಳನ್ನು ಗುರುತಿಸಿ ವಿವರಗಳನ್ನು ದಾಖಲು ಮಾಡಿಕೊಳ್ಳುತ್ತಿದ್ದರೆಂದೂ ಹೇಳಲಾಗಿದೆ.

ದಾನ ಪಡೆದವರ ಮತ್ತು ಅವರ ವಂಶಸ್ಥರ ಹಕ್ಕು ಬಾಧ್ಯತೆಗಳು ಶಾಸನಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಂಡಿರುತ್ತವೆ; ಅವುಗಳ ವಿವರಗಳು ಮಾತ್ರ ಕಾಲದೇಶಾನುಸಾರ ವ್ಯತ್ಯಸ್ತವಾಗುವುದುಂಟು. ಪ್ರಾಚೀನ ಪಲ್ಲವ ಶಾಸನಗಳಲ್ಲಿ ದಾನಗ್ರಾಹಕನಿಗೆ ಮುಂದಿನ 'ಪರಿಹಾರ'ಗಳನ್ನು ಹೇಳಲಾಗಿದೆ : 'ಅವಲಣಖಾತಕ' (ಉಪ್ಪಿಗಾಗಿ ಅಗೆಯತಕ್ಕದ್ದಲ್ಲ); 'ಅರಾಷ್ಟ್ರ ಸಾಂವಿನಯಿಕ' (ಜಿಲ್ಲೆಯ ಇತರ ಭಾಗಗಳಿಗಿಂತ ಬೇರೆಯಾಗಿ ಭಾವಿಸತಕ್ಕದ್ದು); 'ಅಭಟ ಪ್ರವೇಶ' (ಭಟರು ಪ್ರವೇಶಿರತಕದ್ದಲ್ಲ); 'ಅಪರಂಪರಾ ಒಲೀವರ್ದ' (ಪ್ರವಾಸ ಬಂದ ಅಧಿಕಾರಿಗಳಿಗೆ ಗ್ರಾಮಸ್ಥರು ಒಂದೇ ಸಮನೆ ಎತ್ತುಗಳನ್ನು ಒದಗಿಸಬೇಕಿಲ್ಲ); ಅಧಿಕಾರಿಗಳಿಗೆ ಅನ್ನ, ಕಟ್ಟಿಗೆ, ಮಂಚ, ಹಾಲು, ಮೊಸರು, ತರಕಾರಿ ಮುಂತಾದುವನ್ನು ಸರಬರಾಜು ಮಾಡಬೇಕಿಲ್ಲ; ಅನೇಕ ಬಗೆಯ ತೆರಿಗೆಗಳಿಂದ ಮುಕ್ತಿ ಇತ್ಯಾದಿ. ವಾಕಾಟಕ ಶಾಸನಗಳಲ್ಲಿ ಈ ಅಂಶಗಳಿವೆ : 'ಅಕರದಾಯಿ' (ತೆರಿಗೆ ವಿನಾಯಿತಿ ಕೊಟ್ಟಿದೆ), 'ಅಭಟಚ್ಛಾತ್ರ ಪ್ರವೇಶ' (ರಾಜಭಟರು ಹೋಗುವಂತಿಲ್ಲ), 'ಅಪುಷ್ಪಕ್ಷೀರಸಂದೋಹ' (ಹೂವು ಹಾಲುಗಳನ್ನು ಒದಗಿಸಬೇಕಿಲ್ಲ), 'ಅವಲಣಕ್ಲಿನ್ನಕ್ರೇಣಿಖನಕ' (ಉಪ್ಪು ಮುಂತಾದುವುಗಳಿಗಾಗಿ ಅಗೆಯುವಂತಿಲ್ಲ), 'ಸನಿಧಿ, ಸೋಪನಿಧಿ' (ಗುಪ್ತನಿಧಿ ನಿಕ್ಷೇಪಗಳ ಸಹಿತ), ಸೂರ್ಯ ಚಂದ್ರರಿರುವತನಕ ಮಕ್ಕಳಿಗೆ ಮೊಮ್ಮಕ್ಕಳಿಗೆ ಪರಂಪರಿತವಾಗಿ ಹೋಗತಕ್ಕದ್ದು - ಇತ್ಯಾದಿ. ಪಾಲರ ಶಾಸನಗಳು ಹೀಗೆ ಹೇಳುತ್ತವೆ : 'ಸ್ವಸೀಮಾತೃಣಯೂತಿ ಗೋಚರಪರ್ಯಂತ' (ಹುಲ್ಲುಗಾವಲು ಸಹಿತ, ಮೇರೆಗಳವರೆಗೆ) ; 'ಸತಲ' (ನೆಲಸಹಿತ), 'ಸೋದ್ದೇಶ' (ಆಕಾಶ ಸಹಿತ); 'ಸಚೌರೋದ್ಧರಣ' (ಕಳ್ಳರಿಂದ ವಶಪಡಿಸಿಕೊಂಡ ಸಹಿತ) ಭಾಗ ಭೋಗ ಕರ ಹಿರಣ್ಯ ಸಹಿತ - ಇತ್ಯಾದಿ.

ಕೆಲವೊಮ್ಮೆ ದಾನಗ್ರಾಹಕರು ಕೆಲವು ನಿಯಮಗಳನ್ನು ಪಾಲಿಸಬೇಕಿತ್ತು. ದಾನ ಪಡೆದ ಭೂಮಿಯನ್ನು ಅವರು ಮಾರುವುದಾಗಲಿ ಅಡವು ಮಾಡುವುದಾಗಲಿ ನಿಷಿದ್ಧ; ಆ ಭೂಮಿಯಲ್ಲಿ ಅವರು ವೇಶ್ಯಾ ವೃತ್ತಿಗಾಗಲಿ ಸಶಸ್ತ್ರ ಚಟುವಟಿಕೆಗಳಿಗಾಗಲಿ ಜೂಜಾಟಕ್ಕಾಗಲಿ ಅವಕಾಶ ಕೊಡಕೂಡದು. ದೊರೆಗಳಿಗೆ ದಾನಗ್ರಾಹಕರು ನಿಷ್ಠರಾಗಿರಬೇಕು ಮತ್ತು ನೆರೆಹೊರೆಯವರೊಡನೆ ಒಳ್ಳೆಯ

ಸಂಬಂಧವನ್ನಿಟ್ಟುಕೊಂಡಿರಬೇಕು. ಈ ನಿಯಮಗಳನ್ನು ಮೀರಿದರೆ ದಾನಕೊಟ್ಟ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದೂ ಕೆಲವು ದಾಖಲೆಗಳಲ್ಲಿ ಷರತ್ತು ಹಾಕಲಾಗಿದೆ. ಕೆಲವು ಸಂದರ್ಭಗಳಲ್ಲಿ ದಾನಗ್ರಾಹಕರು ಕೆಲಬಗೆಯ ತೆರಿಗೆಗಳನ್ನು ಕೊಡಬೇಕಾಗಿತ್ತೆಂದು ತಿಳಿದು ಬರುತ್ತದೆ; ಕಳ್ಳರು, ಕಾನೂನು ಮುರಿದವರು ಮೊದಲಾದವರು ವಸೂಲು ಮಾಡಿದ ದಂಡದ ಹಣವನ್ನು ಅವರು ಸಾಮಾನ್ಯರಿಂದವಾಗಿ ಅನುಭವಿಸುವಂತಿರಲಿಲ್ಲ.

ಮೊತ್ತದಲ್ಲಿ ಪ್ರಕಟಣೆಯ ಭಾಗದ ಬಗ್ಗೆ ಹೇಳುವುದಾದರೆ : "ಸಾಮಾಜಿಕ ಜೀವನವನ್ನೂ ಸಂಸ್ಕೃತಿಯನ್ನೂ ಅರಿಯಲು ವಿಶೇಷವಾಗಿ ಸಹಾಯ ಮಾಡುವ ಭಾಗವು ಇದೇ. ಆ ಕಾಲದ ಹಳ್ಳಿಗಳು, ನಗರಗಳು, ಅಗ್ರಹಾರಗಳು, ಅವುಗಳ ಆಡಳಿತ ವಿಧಾನ; ಯುದ್ಧ, ವಿರಮನೋಭಾವ, ಆ ಕಾಲದ ಸಾಮಾಜಿಕ ಮೌಲ್ಯಗಳು - ಇತ್ಯಾದಿಗಳ ಪರಿಚಯವಾಗುವುದೂ ಇಲ್ಲಿಯೇ."[8]

### 117.2.3 ಮುಕ್ತಾಯ

ಪ್ರಕಟಣೆಯ ಭಾಗವಾದ ಮೇಲೆ ಸಾಮಾನ್ಯವಾಗಿ 'ದಾನಚ್ಛೇ ದೋಪವರ್ಣನ' ಬರುತ್ತದೆ.[9] ತಾನು ಕೊಟ್ಟ ದಾನವನ್ನು ಅಪಹರಿಸಕೂಡದೆಂದೂ ತನ್ನ ಆಜ್ಞೆಯನ್ನು ಉಲ್ಲಂಘಿಸಿದರೆ ಪಾಪ ತಟ್ಟುತ್ತದೆಂದೂ ಮುಂದಿನ ಹಾಗೂ ಸಮಕಾಲೀನ ರಾಜರಿಗೆ, ತನ್ನ ವಂಶಸ್ಥರಿಗೆ ಅಧಿಕಾರಿಗಳಿಗೆ, ಪ್ರಜೆಗಳಿಗೆ ಮತ್ತು ದಾನವಿತ್ತ ಭೂಮಿಯ ಪರಿಸರದ ನಿವಾಸಿಗಳಿಗೆ ದಾನಿ ಹೇಳುವ ಎಚ್ಚರಿಕೆಯ ಮಾತುಗಳನ್ನು ಈ ಭಾಗ ಒಳಗೊಳ್ಳುತ್ತದೆ. ಇವರೆಲ್ಲರೂ ದಾನವನ್ನು ಗೌರವಿಸಬೇಕೆಂದು ದಾನಿಯ ಕೋರಿಕೆ. ದಾನವಿತ್ತ ಗ್ರಾಮದ ನಿವಾಸಿಗಳು ದಾನಗ್ರಾಹಕರಿಗೆ ತೆರಿಗೆಯನ್ನು ನಿಯತವಾಗಿ ಕೊಡಬೇಕೆಂದು ತಿಳಿಸಿರುವುದೂ ಉಂಟು. ದಾನವನ್ನು ಕಾಪಾಡಿಕೊಂಡು ಬರಬೇಕೆಂದು ಹೇಳುವ ಈ ಸಂದರ್ಭದಲ್ಲಿ, ಐಶ್ವರ್ಯದ ಮತ್ತು ಇಹಜೀವನದ ನಶ್ವರತೆಯನ್ನೂ ಭೂದಾನದಂಥ ಪವಿತ್ರ ಕಾರ್ಯದ ಶಾಶ್ವತ ಸ್ವರೂಪವನ್ನೂ ದಾನ ಕೊಡುವವರಿಗೆ ಮತ್ತು ಅದನ್ನು ಕಾಪಾಡುವವರಿಗೆ ಬರುವ ಪುಣ್ಯವನ್ನೂ ಕಿತ್ತುಕೊಳ್ಳುವವರಿಗೆ ಬರುವ ಪಾಪವನ್ನು ಹೇಳುವ ಕೆಲವು ನಿಡಿದಾದ ಗದ್ಯಪದ್ಯ ಭಾಗಗಳು ಸೇರಿಕೊಂಡಿರುವುದು ಎಷ್ಟೋ ಶಾಸನಗಳಲ್ಲಿ ಕಂಡುಬರುತ್ತದೆ.

ಈ ಭಾಗದಲ್ಲಿ ಬರುವ ಪದ್ಯಗಳ ಸಂಖ್ಯೆ ೧ರಿಂದ ೨೦ರವರೆಗಿರಬಹುದು. ದಾನವನ್ನು ರಕ್ಷಿಸಿದವನು ದಾನ ಕೊಟ್ಟವನಷ್ಟೇ ಪುಣ್ಯ ಭಾಜನನಾಗುತ್ತಾನೆ ಎಂದು ಹೇಳುವ ಪದ್ಯ ಸಾಮಾನ್ಯವಾಗಿ ಬಂದೇ ಬರುತ್ತದೆ. "ದೊರೆಗಳು ಈ ಧರ್ಮಕಾರ್ಯವನ್ನು ಸಂರಕ್ಷಿಸಬೇಕು; ಹಾಗೆ ಮಾಡದವರು ವಾರಾಣಾಸಿಯಲ್ಲಿ ಸಾವಿರ ಗೋವುಗಳನ್ನು ಕೊಂದ ಪಾಪಕ್ಕೆ ಗುರಿಯಾಗುತ್ತಾರೆ" ಎಂಬ ಅಭಿಪ್ರಾಯದ ಹೇಳಿಕೆ ದಕ್ಷಿಣಭಾರತದ ಹಲವಾರು ಶಾಸನಗಳ ಅಂತ್ಯದಲ್ಲಿ ಕಾಣಿಸುತ್ತದೆ.

ದಾಮೋದರ್ ಪುರ್ ಪಟಗಳಂತಹ ಕೆಲವು ಪ್ರಾಚೀನ ದಾಖಲೆಗಳಲ್ಲಿ 'ದಾನಚ್ಛೇದೋಪವರ್ಣನ' ಇಲ್ಲವೇ ಇಲ್ಲ; ಇತರ ಕೆಲವು ಪ್ರಾಚೀನ ಶಾಸನಗಳಲ್ಲಿ ಅದು ಸರಳವಾಗಿ ಗೋಚರಿಸುತ್ತದೆ. ಐಪುರ್ ತಾಮ್ರಪಟಗಳಲ್ಲಿ, ದಾನವನ್ನು ಕಾಪಾಡಿಕೊಂಡು ಬರುವಂತೆ ದೊರೆ ತನ್ನ ಅಧಿಕಾರಿಗಳಿಗೆ ಹೇಳಿದ್ದಾನೆ; ಅಲ್ಲಿ ಒಂದೇ ಒಂದು ಶ್ಲೋಕ ಉದ್ಧೃತವಾಗಿದೆ. ಸಸನಕೋಟ ಪಟಗಳಲ್ಲಿ, ದಾರವನ್ನು ಅಪಂಹರಿಸಿದವನು ಪಂಚನಮಹಾಪಾತಕಗಳಿಗೆ ಪಕ್ಕಾಗುವನೆಂದು ಗದ್ಯದಲ್ಲಿ ಹೇಳಿದೆ;[10] ಅನಂತರ ಮೂರು ಶ್ಲೋಕಗಳು ಬಂದಿವೆ. ಡಡ್ಡನ ಶಾಸನದಲ್ಲಿ ಈ ಭಾಗ ಮತ್ತಷ್ಟು ವಿಸ್ತೃತವಾಗುತ್ತದೆ ಒಟ್ಟು ೩೦ ಪಂಕ್ತಿಗಳಲ್ಲಿ ೯ ಪಂಕ್ತಿಗಳು 'ದಾನಚ್ಛೇದೋಪವರ್ಣನ'ಕ್ಕೆ ಸಂಬಂಧಿಸಿವೆ.

---

8. ಡಾ. ಚಿದಾನಂದಮೂತಿ, ಪೂರ್ವೋಕ್ತ, ಪು. ೫೩.
9. 'ದಾನಚ್ಛೇದೋಪವರ್ಣನೆ' ಎಂದರೆ 'ದಾನಾಪಹಾರವನ್ನು ವಿರೋಧಿಸುವ ಸ್ಮೃತಿವಾಕ್ಯಗಳ ಉದ್ಧರಣ' ಎಂದೂ, 'ದಾನವನ್ನು ಕೆಡಿಸಿದರೆ ಬರುವ ಪಾಪಗಳ ವರ್ಣನೆ' ಎಂದೂ ವ್ಯಾಖ್ಯಾನಿಸಲಾಗಿದೆ.
10. ಎಷ್ಟೋ ಶಾಸನಗಳಲ್ಲಿ ಪಂಚಮಾಹಪಾತಕಗಳ ಜೊತೆಗೆ ಉಪಪಾತಕಗಳನ್ನೂ ಸೇರಿಸಿರುವುದುಂಟು. (ಉಪಪಾತಕಗಳ ಸಂಖ್ಯೆ ೫೧).

'ದಾನಚ್ಛೇದೋಪವರ್ಣನ' ಶ್ಲೋಕಗಳಲ್ಲಿ ಕೆಲವು 'ಉಕ್ತಂ ಚ' ಎಂಬ ಹೇಳಿಕೆಯೊಡನೆ ಉದ್ಧೃತವಾಗಿದ್ದರೆ, ಬಹುಪಾಲು ಶ್ಲೋಕಗಳು ವ್ಯಾಸರಿಗೂ ಮನುವಿಗೂ ಆರೋಪಿತವಾಗಿ, ಅತ್ರ ಮನುಗೀತಾ ಶ್ಲೋಕಾ ಭವಂತಿ, ಉಕ್ತಂ ಚ ಧರ್ಮಶಾಸ್ತ್ರೇಷು, ಅಪಿ ಚಾತ್ರ ಮನು ಪಠಿತೌ ಶ್ಲೋಕೌ, ಉಕ್ತಂ ಚ ಭಗವತಾ ವೇದವ್ಯಾಸೇನ ವ್ಯಾಸೇನ, ವ್ಯಾಸವಾಕ್ಯಂ, ವ್ಯಾಸಗಿತಾಂಶ್ಚಾತ್ರ ಶ್ಲೋಕಾನ್ ಉದಾಹರಂತಿ, ಉಕ್ತಂ ಚ ಮಹಾ ಭಾರತೇ.... ಇತ್ಯಾದಿ ಪೀಠಿಕಾವಾಕ್ಯಗಳೊಡನೆ ಉದ್ಧೃತವಾಗಿವೆ. ಈ ಶ್ಲೋಕಗಳಲ್ಲಿ ಕೆಲವು ಮಾತ್ರ ಮಹಾಭಾರತದಲ್ಲಿ (ಅನುಶಾಸನಪರ್ವದ ದಾನ ಧರ್ಮ ವಿಭಾಗದಲ್ಲಿ ) ಕಂಡುಬರುವುದುಂಟು. ಮನು ಮಾತ್ರವಲ್ಲದೆ ಬ್ರಹ್ಮ, ಬೃಹಸ್ಪತಿ, ಅಂಗಿರಸ, ಗೌತಮ, ಯಾಜ್ಞವಲ್ಕ್ಯ ಮುಂತಾದವರ ತಲೆಗೂ ಅನೇಕ ಶ್ಲೋಕಗಳನ್ನು ಕಟ್ಟಿದ್ದಾರೆ. ಕೆಲವೊಮ್ಮೆ ಅವು 'ಮಾನವ ಧರ್ಮಶಾಸ್ತ್ರ' ಅಥವಾ 'ವೈಷ್ಣವ ಧರ್ಮಶಾಸ್ತ್ರ' ದಿಂದ, ವಿಶೇಷವಾಗಿ ಧರ್ಮಶಾಸ್ತ್ರಗಳಿಂದ ಎತ್ತಿಕೊಂಡವೆಂದು ಹೇಳಿದೆ; ಸ್ಮೃತಿ ಪುರಾಣಗಳಿಂದ ಉದ್ಧೃತವೆಂದು ಹೇಳಿರುವುದು ವಿರಳ.

ಮಹಾಭಾರತ ಮತ್ತು ಪುರಾಣಗಳು ಒಟ್ಟಿಗೇ ಧರ್ಮ ಶಾಸ್ತ್ರವೆಂದೂ ವ್ಯಾಸಕೃತವೆಂದೂ ಪರಿಗಣಿತವಾಗಿರುವುದರಿಂದ, ದಾನಶಾಸನಗಳಲ್ಲಿ ಬರುವ ಕೆಲವು ಶ್ಲೋಕಗಳನ್ನು ಅವುಗಳಲ್ಲಿ ಗುರುತಿಸಲಾಗಿದೆ. ಈ ಶ್ಲೋಕಗಳಿಗೆ ಆಕರವಾದ ಪುರಾಣಗಳೆಂದರೆ ಪದ್ಮಪುರಾಣ, ಭವಿಷ್ಯಪುರಾಣ, ಬ್ರಹ್ಮಪುರಾಣ, ವಿಷ್ಣುಧರ್ಮೋತ್ತರ ಇತ್ಯಾದಿ. ಮಹಾಭಾರತವೆಂದು ಹೇಳಲಾಗಿರುವ ಎಲ್ಲ ಶ್ಲೋಕಗಳೂ ಈಗ ಅದರಲ್ಲಿ ಸಿಕ್ಕುವುದಿಲ್ಲ; ಆ ಶ್ಲೋಕಗಳಿದ್ದ ಮಹಾಭಾರತದ ಪಾಠ ಬಹುಶಃ ನಷ್ಟವಾಗಿರಬೇಕು. ಕೆಲವು ಶ್ಲೋಕಗಳು ವಸಿಷ್ಠಸ್ಮೃತಿ, ಬೃಹಸ್ಪತಿ ಸ್ಮೃತಿ ಮುಂತಾದ ಸ್ಮೃತಿಗಳಲ್ಲಿ ದೊರಕುತ್ತವೆ.

ಕೆಲವು ಶ್ಲೋಕಗಳನ್ನು 'ಮಾನವಧರ್ಮಶಾಸ್ತ್ರ' (ಮನುಧರ್ಮ ಶಾಸ್ತ್ರ)ಕ್ಕೆ ಆರೋಪಿಸುವುದು ತಪ್ಪೆಂದೂ ಮನುವಿಗೂ ಅವುಗಳಿಗೂ ಯಾವ ಸಂಬಂಧವೂ ಇಲ್ಲವೆಂದೂ ಹೇಳಲಾಗಿದೆ. ಧರ್ಮ ಶಾಸ್ತ್ರವೆಂದರೆ ಮನುಧರ್ಮಶಾಸ್ತ್ರವೆಂಬ ತಪ್ಪು ತಿಳುವಳಿಕೆಯಿಂದ ಅಂತಹ ಸಂಬಂಧ ಕಲ್ಪಿತವಾಗಿರಬೇಕು. ಮನುಶಾಸನಕ್ಕೆ ಜನ ಹೆದರಿ ನಡೆಯುತ್ತಾರೆಂಬ ಭಾವನೆಯಿಂದ ಅವನ ಹೆಸರನ್ನು ಬಳಸಿಕೊಂಡಿರಲೂಬಹುದು. ಈಚೆಗೆ ಆಸ್ಥಾನ ಕವಿಗಳೆ ಹಲವಾರು ಶ್ಲೋಕಗಳನ್ನು ಕಟ್ಟಿ, ವ್ಯಾಸರಿಗೆ, ಮನುವಿಗೆ ಅಥವಾ ಹಿಂದೆ ಹೇಳಿದ ಇತರ ಆಕರಗಳಿಗೆ ಆರೋಪಿಸಿದ್ದರೆ ಆಶ್ಚರ್ಯವಿಲ್ಲ. ಪುರಾಣೋಕ್ತಿ, ಋಷಿವಾಕ್ಯ ಎಂದರೆ ಜನ ಗೌರವಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತು.

ಪ್ರಾಚೀನತಮ ಶಾಸನಗಳಲ್ಲಿ ಶ್ಲೋಕಗಳ ಉದ್ಧೃತಿ ಕಂಡುಬರುವುದಿಲ್ಲ; ಅದರ ಅಗತ್ಯ ಉಂಟಾದುದು ಈಚೆಗೆ, ದಾನಾಪಹಾರ ಪ್ರವೃತ್ತಿ ಹೆಚ್ಚಿದ ಮೇಲೆ ಎಂದು ತೋರುತ್ತದೆ. ಕನ್ನಡ ಶಾಸನಗಳನ್ನು ತೆಗೆದುಕೊಂಡರೆ, ಪ್ರಾಚೀನ ಶಾಸನಗಳಲ್ಲಿ ಶ್ಲೋಕಗಳು ಗೋಚರಿಸುವುದಿಲ್ಲ. ಹಲ್ಮಿಡಿ ಶಾಸನದಲ್ಲಿ "ಕಳ್ದೋನ್ ಮಹಾಪಾತಕನ್" ಎಂದಷ್ಟೇ ಉಕ್ತವಾಗಿದೆ ; ಮುಂದೆ, "ಅಟಿವೊನ್ ಪಂಚಮಹಾಪಾತಕನಕುಂ ಏಟನೆಯ ನರಕದಾ ಪುೞು ಅಕುಂ", "ಇದಾನ್ ಅೞಿದೋರ್ ಪೂತಿ ಎಸ್ವ ನರಕಕ್ಕೆ ಸಲ್ವೋರ್" ಮೊದಲಾದ ಮಾತುಗಳು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಧರ್ಮಶಾಸ್ತ್ರ, ಪುರಾಣಗಳಿಂದ ಶ್ಲೋಕಗಳನ್ನು ಉದ್ಧರಿಸುವ ಪದ್ಧತಿ ತಾಮ್ರ ಪಟಗಳಲ್ಲಿ ಮೊದಲು ಕಂಡುಬರುವುದೆಂದೂ ಸು. ೮೦೦ ರಿಂದೀಚೆಗೆ ಶಿಲಾಶಾಸನಗಳೂ ಅದರಿಂದ ಪ್ರಭಾವಿತವಾಗಿರಬಹುದೆಂದೂ ಹೇಳಲಾಗಿದೆ.

ಸು. ೪೫೦ ರ ತಾಮ್ರಪಟಗಳ ಅಂತ್ಯದಲ್ಲಿ ಈ ಶ್ಲೋಕಗಳಿವೆ : [11]

**ಅತ್ರಮನುಗೀತಾ ಶ್ಲೋಕಾ ಭವಂತಿ -**

**ಬಹುಭಿರ್ವಸುಧಾ ಭುಕ್ತಾ ರಾಜಭಿಸ್ಸಗರಾದಿಭಿಃ**

---

11. ಡಾ. ಚಿದಾನಂದಮೂರ್ತಿಯವರ ಪೂರ್ವೋಕ್ತ ಗ್ರಂಥದಿಂದ ಇವುಗಳನ್ನೆತ್ತಿಕೊಳ್ಳಲಾಗಿದೆ. ಇವಲ್ಲದೆ ಸಂಬಂಧಪಟ್ಟ ಇನ್ನೂ ಹಲವಾರು, ಶ್ಲೋಕಗಳನ್ನು ಅವರು ಪಟ್ಟಿ ಮಾಡಿದ್ದಾರೆ (ಪು. ೫೫). ಸರ್ಕಾರ್ ಅವರ ಗ್ರಂಥದ 'stanzas on Bhumidana' ಎಂಬ ಇಡೀ ಅಧ್ಯಾಯ ಇಂತಹ ಶ್ಲೋಕಗಳಿಗೆ ಮೀಸಲಾಗಿದೆ.

ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಂ
ಸ್ವದಾತುಂ ಸಮಹಚ್ಛಕ್ಯಂ ದುಃಖಮನ್ಯಸ್ಯ ಪಾಲನಂ
ದಾನಂ ವಾ ಪಾಲನಂ ವೇತಿ ದಾನಾತ್ ಶ್ರೇಯೋನುಪಾಲನಂ
ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ

ಷಷ್ಟಿರ್ವರ್ಷಸಹಸ್ರಾಣಿ ಘೋರೇ ತಮಸಿ ಪಚ್ಯತೇ[12]
ಅದ್ಭಿರ್ದತ್ತಂ ತ್ರಿಭಿರ್ಭುಕ್ತಂ ಸದ್ಭಿಶ್ಚ ಪರಿಪಾಲಿತಂ
ಏತಾನಿ ನ ನಿವರ್ತಂತೇ ಪೂರ್ವರಾಜಕೃತಾನಿ ಚ

(ಗದ್ಯ) ಯೋಽಸ್ಯ ಲೋಭಾತ್ ಮೋಹಾದ್ವಾಭಿಹರ್ತಾ ಸ ಪಂಚಮಹಾ
ಪಾತಕ ಸಂಯುಕ್ತೋ ಭವತಿ ... ಸ್ವಸ್ತ್ಯಸ್ತು ಗೋಬ್ರಾಹ್ಮಣೇಭ್ಯಃ.

ತಾವಾಗಿ ದಾನ ಕೊಡುವುದು ಸುಲಭ, ಬೇರೆಯವರು ಕೊಟ್ಟುದನ್ನು ಪರಿಪಾಲಿಸುವುದು ಕಷ್ಟ, ದಾನಕ್ಕಿಂತ ಅದರ ರಕ್ಷಣೆ ಶ್ರೇಯಸ್ಕರವಾದುದು ಎಂಬ ಹೇಳಿಕೆಗಳನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು.

ಸಂಸ್ಕೃತ ಶ್ಲೋಕಗಳ ತಾತ್ಪರ್ಯವನ್ನು ಕನ್ನಡದಲ್ಲಿ ತಿಳಿಸಿರುವುದೂ ಉಂಟು : "ಈ ಧರ್ಮಕ್ಕೆ ತಪ್ಪಿದವರು ಏಳನೆಯ ನರಕಕೆ ಹೋಹರು ಹೋಹರು ಹೋಹರು"; "ಶಾಸನಮಿದಾವುದೆಲ್ಲಿಯ ಸಲಿಸುವ ನಾನೀ ಶಾಸನಮೆಂಬ ಪಾತಕನಾ ಸಕಳಂ ರೌರವಕ್ಕೆ ಶಾಸನಮಾರಿತ್ತರೇಕೆ ಗಳಗಳನಿಳಿಗುಂ"; "ಈ ಧರ್ಮವ ಕಿಡಿಸಿದ ಲಿಂಗಭೇದಿ ಇಕ್ಕತ್ತಿಗೆಯ ಕವಿಲೆಯ ಕೊಂದ" - ಇತ್ಯಾದಿ.[13] ಕೆಲವೆಡೆಗಳಲ್ಲಿ "ಈಯಾಣೆಯಂ ಮೀರಿದವನಂ ಕೆಡಹಿ ಕೊಲ್ವುದು ಅವಂ ಸತ್ತೆಡೆ ಹಂದಿ ಸತ್ತುದು ನಾಯಿ ಸತ್ತುದು" ಎಂಬಂತಹ ಬಿರುನುಡಿಗಳೂ ತಲೆ ಹಾಕಿವೆ.

ದಾನ ಸಂಬಂಧವಾದ ರಾಜಾಜ್ಞೆಯನ್ನು ಯಾವಾಗಲೂ ದೊರೆಯೆ ಸ್ವತಃ ಹೊರಡಿಸುತ್ತಿರಲಿಲ್ಲ; ಒಮ್ಮೊಮ್ಮೆ ಅವನ ಪರವಾಗಿ ಮಧ್ಯವರ್ತಿಯೊಬ್ಬ - ಒಬ್ಬ ಉನ್ನತಾಧಿಕಾರಿ ಅಥವಾ ರಾಜಪುತ್ರ - ಆ ಕೆಲಸವನ್ನು ಮಾಡುತ್ತಿದ್ದುದುಂಟು. ಇಂತಹ ಮಧ್ಯವರ್ತಿಯನ್ನು ಉತ್ತರ ಭಾರತದ ಶಾಸನಗಳಲ್ಲಿ 'ದೂತ' ಅಥವಾ 'ದೂತಕ'ನೆಂದೂ ದಕ್ಷಿಣ ಭಾರತದ ಶಾಸನಗಳಲ್ಲಿ 'ಆಜ್ಞಾ', 'ಆಜ್ಞಪ್ತಿ' ಅಥವಾ 'ಆಜ್ಞಾಪ್ತಿ' ಎಂದೂ ಕರೆಯಲಾಗಿದೆ. ಸ್ವತಃ ರಾಜನೆ ಆಜ್ಞೆ ಹೊರಡಿಸಿದಾಗ, 'ಅಜ್ಞಾಸ್ವಯಂ', 'ಸ್ವಮುಖಾಜ್ಞಯಾ' ಮುಂತಾದ ಮಾತುಗಳು ಅದನ್ನು ಸೂಚಿಸುತ್ತವೆ. ಕ್ರಿ.ಶ. ೭೮೬ರ ಜೆತ್ವಾಯಿ ತಾಮ್ರಪಟಗಳಲ್ಲಿ ಶಂಖಯ್ಯನನ್ನು 'ದೂತಕ'ನೆಂದು ಹೆಸರಿಸಲಾಗಿದೆ; ಐಪುರ್ ಪಟಗಳಲ್ಲಿ ದಾನಿಯ ಮಗನಾದ ಮಂಚಣ್ಣ ಭಟ್ಟಾರಕ, ಸ್ವಲ್ಪವೆಲುರ ಶಾಸನದಲ್ಲಿ ಮಹಾಸಾಮಂತ ಅಶೋಕದೇವ 'ದೂತಕ'ರಾಗಿ ಉಕ್ತರಾಗಿದ್ದಾರೆ. ಕೆಲವು ಪ್ರಾಂತ್ಯಗಳಲ್ಲಿ ಮತ್ತು ಕೆಲವು ಕಾಲಾವಧಿಗಳಗಲ್ಲಿ 'ದೂತಕ'ನೆ ಶಾಸನದ ನಿಜವಾದ ಕಾರ್ಯನಿರ್ವಾಹಕನಾಗಿದ್ದನೆಂದು ಹೇಳಲಾಗಿದೆ.

---

12. ಈ ಪದ್ಯದ ಉತ್ತರಾರ್ಧಕ್ಕೆ "ವಿಷ್ಟಾಯಾಂ ಜಾಯತೇಃ ಕ್ರಿಮಿಃ" ಎಂದು ಪಾಠಾಂತರವುಂಟು.

13. ಮೊದಲ ಎರಡು ಹೇಳಿಕೆಗಳಲ್ಲಿ ಕಾವ್ಯಾಂಶ ಕಾಣಿಸಿಕೊಂಡಿರುವುದನ್ನು ಗಮನಿಸಬಹುದು. "ಹೋಹರು ಹೋಹರು ಹೋಹರು" ಎಂಬ ಪುನರುಕ್ತಿ ಪರಿಣಾಮಕಾರಿಯಾಗಿದೆ. "ಶಾಸನಮಿದಾವುದು..." ಎಂಬ ಹೇಳಿಕೆಯೂ ನಾಟಕೀಯ ಭಂಗಿಯಿಂದ ಸ್ವಾರಸ್ಯಪೂರ್ಣವಾಗಿದ್ದು, ನರಕಪತನವನ್ನು ಅನುಕರಣವಾಚಕದಿಂದ ಅಭಿನಯಿಸಿ ತೋರುತ್ತಿದೆ.

ಶಾಸನಗಳಲ್ಲಿ ಬರುವ ಕಾಲನಿರ್ದೇಶದ ಭಾಗ ಐತಿಹಾಸಿಕ ದೃಷ್ಟಿಯಿಂದ ಮಹತ್ವಪೂರ್ಣವಾದುದು. ಅನೇಕ ಶಾಸನಗಳು ತಮ್ಮ ಕಾಲವನ್ನು ಹೇಳಿಕೊಂಡಿಲ್ಲ ; ಕೆಲವು ತಪ್ಪಾಗಿ ಹೇಳಿಕೊಂಡಿವೆ; ಮತ್ತೆ ಕೆಲವು ವರ್ಷವನ್ನು ಮಾತ್ರ ಹೇಳಿಕೊಂಡಿವೆ. ಕೆಲವು ಕಡೆ ಅಕ್ಷರ ಅಂಕಿ ಎರಡರಲ್ಲೂ ಕಾಲ ಉಕ್ತವಾಗಿದೆ. ಪ್ರಕಟಣೆಯ ಭಾಗದಲ್ಲಿ ಅಕ್ಷರಗಳಲ್ಲಿ ಉಕ್ತವಾಗಿರುವ ಕಾಲವನ್ನು ಮುಕ್ತಾಯ ಭಾಗದಲ್ಲಿ ಮತ್ತೆ ಅಂಕಿಗಳಲ್ಲಿ ಕೊಡುವುದೂ ಉಂಟು. ಆಯಾ ಕಾಲದಲ್ಲಿ, ಪ್ರಾಂತದಲ್ಲಿ ಪ್ರಚಲಿತವಾಗಿದ್ದ ಶಕದಲ್ಲಿ ವರ್ಷವನ್ನು ಹೇಳಿರಬಹುದು ಅಥವಾ ಆಯಾ ದೊರೆಯ ಆಳ್ವಿಕೆಯ ವರ್ಷಗಣನೆಯ ಪ್ರಕಾರ ಹೇಳಿರಬಹುದು. ಕರ್ನಾಟಕದ ಶಾಸನಗಳಲ್ಲಿ ಸಾಮಾನ್ಯವಾಗಿ ಶಾಲಿವಾಹನ ಶಕವರ್ಷವನ್ನು ಉಲ್ಲೇಖಿಸಲಾಗಿದೆ. ಮಾಸ, ಪಕ್ಷ, ದಿವಸವನ್ನು, ಒಮ್ಮೊಮ್ಮೆ ವಾರವನ್ನು ಈಚಿನ ಶಾಸನಗಳು ಹೇಳುವುದುಂಟು. ಎಷ್ಟೋ ದಾಖಲೆಗಳಲ್ಲಿ ನಕ್ಷತ್ರದಂತಹ ವಿವರಗಳೂ ಸೇರಿಕೊಂಡಿರುತ್ತವೆ. ವಾರದ ಹೆಸರನ್ನು ಹೇಳಿದಾಗ ಅದು ಕಾಲನಿರ್ಧಾರಕ್ಕೆ ಬಹಳ ಸಹಾಯಕವಾಗುತ್ತದೆ. ಭೂದಾನಕ್ಕೆ ಪ್ರಶಸ್ತವೆಂದು ಪರಿಗಣಿತವಾದ ಹುಣ್ಣಿಮೆ, ಅಮಾವಾಸ್ಯೆ, ಸೂರ್ಯಗ್ರಹಣ, ಚಂದ್ರಗ್ರಹಣ, ವಿಷುವ, ಸಂಕ್ರಾಂತಿ, ವ್ಯತೀಪಾತ ಮುಂತಾದ ಸಂದರ್ಭಗಳು ಶಾಸನಗಳಲ್ಲಿ ದಾಖಲಾಗಿವೆ. ನಿರ್ದಿಷ್ಟ ತಿಥಿಗಳಲ್ಲಿಯೂ ದಾನಗಳನ್ನು ಕೊಟ್ಟಿರುವುದುಂಟು.

ಮುಂದೆ, ಕೃತಿಕಾರ ಲಿಪಿಕಾರರ ಮತ್ತು ಶಿಲ್ಪಿಯ ಹೆಸರುಗಳು ದಾನ ಶಾಸನಗಳಲ್ಲಿ ಉಕ್ತವಾಗುತ್ತವೆ. (ಮೂವರ ಹೆಸರುಗಳನ್ನು ಹೇಳುವ ಶಾಸನಗಳ ಸಂಖ್ಯೆ ಕಡಿಮೆ). ಶಾಸನದ ಕರಡನ್ನು ಉನ್ನತಾಧಿಕಾರಿಯೊಬ್ಬ ಸಿದ್ಧಪಡಿಸುತ್ತಿದ್ದ. ಅವನ ಹೆಸರು ಅನೇಕ ಸಂದರ್ಭಗಳಲ್ಲಿ ಅವನ ಪದವಿಯೊಡನೆ ಹಾಗೂ ಅವನ ತಂದೆಯ ಹೆಸರಿನೊಡನೆ ಉಕ್ತವಾಗಿದೆ. ಸಸನ ಕೋಟ ತಾಮ್ರಪಟಗಳಲ್ಲಿ "ಸೋಮಶರ್ಮನಿಂದ ಲಿಖಿತವಾದ ತಾಮ್ರಪಟ್ಟಿಕಾ" ಎಂದಿದೆ; ಡಡ್ಡನ ಶಾಸನದಲ್ಲಿ "ದುರ್ಗಭಟನ ಮಗ, ಮಹಾ ಸಾಂಧಿವಿಗ್ರಹಿಕ ಸಂಗುಲ್ಲನಿಂದ ಲಿಖಿತ"[14]ವೆಂದಿದೆ.

ಅನೇಕ ಶಾಸನಗಳಲ್ಲಿ ಶಾಸನವನ್ನು ಕೊರೆದ ಶಿಲ್ಪಿಯ ಹೆಸರು ಅವನ ಬಿರುದಿನೊಡನೆ ಮತ್ತು ತಂದೆಯ ಹೆಸರಿನೊಡನೆ ಉಕ್ತವಾಗಿದೆ. ಭರತ ಬಲನ ಬಹಮನಿ ಪಟಗಳಲ್ಲಿ "ಈಶ್ವರನ ಮಗ ನಿಹಿರಕನಿಂದ ಉತ್ಕೀರ್ಣ"ವೆಂದಿದೆ. 'ವರ್ಣಘಟನಾ ವೈದಗ್ಧಿ ವಿಶ್ವಕರ್ಮ' ಮುಂತಾದ ಬಿರುದುಗಳು ಈ ರೂವಾರಿಗಿದ್ದುವು. ಲಿಪಿಕಾರ, ರೂವಾರಿ ಇಬ್ಬರೂ ತಮ್ಮ ಸೇವೆಗೆ ಪ್ರತಿಫಲವಾಗಿ ಸಮಪ್ರಮಾಣವಾದ ಭೂದಾನ ಪಡೆಯುತ್ತಿದ್ದರೆಂಬ ಸಂಗತಿ ಪೂರ್ವಗಂಗರ ಮತ್ತು ಚೋಳರ ಶಾಸನಗಳಿಂದ ವಿದಿತವಾಗುತ್ತದೆ.

ಶುಭಾಕರನ ನೆಯುಲ್‌ಪುರ್ ದಾಖಲೆಯನ್ನು ಮಹಾಕ್ಷಪಟಲಿಕ ಭೋಗಿಕ ಬ್ರಹ್ಮದತ್ತ ಬರೆದನೆಂದೂ ಪೆಟ್ಟಪಾಲ ನಾರಾಯಣ ಕಾಯಿಸಿದನೆಂದೂ ಏಡದತ್ತ ಕೊರೆದನೆಂದೂ ಹೇಳಲಾಗಿದೆ. ಭಂಜ ದೊರೆ ವಿದ್ಯಾಧರ ಭಂಜ ಅಮೋಘಕಲಶನ ಗಂಜಂ ಪಟಗಳಂತಹ ಶಾಸನಗಳಲ್ಲಿ 'ಲಾಂಛಿತ' ಎಂಬ ಮಾತು ಬೇರೊಂದು ಕಾರ್ಯವನ್ನು - ಮುದ್ರೆಯೊತ್ತುವುದನ್ನು -ಸೂಚಿಸುತ್ತದೆ; ಆ ದಾಖಲೆಯಲ್ಲಿ, "ತ್ರಿಕಲಿಂಗ ಮಹಾದೇವಿ, ಮಂತ್ರಿ ಭಟ್ಟ ಕೇಶವದೇವ ಮತ್ತು ವಾರ್ಗುಲಿಕ ಚಾಚಿಕರಿಂದ ಲಾಂಛಿತ" ಸಾಂಧಿವಿಗ್ರಹಿಕ ಸ್ತಂಭನಿಂದ; ಲಿಖಿತ, ಅಕ್ಕಸಾಲೆ ಕುಮಾರ ಚಂದ್ರನಿಂದ ಉತ್ಕೀರ್ಣ" ಎಂದು ಉಕ್ತವಾಗಿದೆ. ಭಾಸ್ಕರವರ್ಮನ ನಿಧನ್‌ಪುರ್ ಪಟಗಳಲ್ಲಿ 'ಆಜ್ಞಾ' (ಕಾರ್ಯ ನಿರ್ವಾಹಕ), 'ಸೀಮಾಪ್ರದಾತೃ' (ಗಡಿಗಳನ್ನು ಗುರುತಿಸುವವನು), 'ಶಾಸಯಿತೃ' (ಕೃತಿಕಾರ), 'ಲೇಖಯಿತೃ' (ಲಿಪಿಕಾರ), 'ಸೆಕ್ಕಕಾರ' (ಶಿಲ್ಪಿ) ಎಂಬ ವಿವಿಧ ಪದನಾಮೆಗಳು ಉಲ್ಲೇಖಗೊಂಡಿರುವುದು ಕುತೂಹಲಕಾರಿ.

ಕಡೆಯದಾಗಿ, ಕೆಲವು ದಾನ ಶಾಸನಗಳಲ್ಲಿ ಅಧಿಕೃತತ್ವದ ಗುರುತಾಗಿ ದೊರೆಯ ಸ್ವಹಸ್ತಾಕ್ಷರ (ರುಜು) ಕಂಡುಬರುತ್ತದೆ. (ವಿವರಗಳನ್ನು ಮುಂದೆ ಕೊಡಲಾಗಿದೆ).

---

14. 'ಲಿಖಿತ' ಎಂಬ ಮಾತು ಕೃತಿಕಾರನಿಗೆ ಅನ್ವಯಿಸುತ್ತದೆಯೊ ಲಿಪಿಕಾರನಿಗೆ ಅನ್ವಯಿಸುತ್ತದೆಯೊ ಎಂಬುದು ಕೆಲವು ಕಡೆ ಸಂಶಯಾಸ್ಪದ. ಕೆಲವು ಶಾಸನಗಳಲ್ಲಿ ಈ ಅಂಶ ನಿಸ್ಸಂದಿಗ್ಧವಾಗಿದೆ : ಉದಾಹರಣೆಗೆ, ಶ್ರೀಪುರುಷನ ಸಲೆಂ ಪಟಗಳಲ್ಲಿ "ಚಿತ್ರಕಲಾಪರಿಣತನಾದ ಗುರುಶಿಷ್ಯನಿಂದಃ ಲಿಖಿತ" ಎಂದಿದೆ ; ಇದು ಲಿಪಿಕಾರನನ್ನು ಕುರಿತದ್ದು. ಕನ್ನಡ ಶಾಸನಗಳಲ್ಲಿ ಬರುವ 'ಬರಹ' ಎಂಬ ಮಾತು ಸಾಮಾನ್ಯವಾಗಿ ಲಿಪಿಕಾರನಿಗೇ ಅನ್ವಯಿಸುತ್ತದೆ ಎಂಬುದನ್ನೂ ಗಮನಿಸಬಹುದು.

## 117.3 ಸಾರಾಂಶ

ಶಾಸನ ಅಧ್ಯಯನಕ್ಕೆ ಪೂರಕವಾದ ತತ್ತ್ವ ವಿಚಾರಗಳನ್ನು ಈವರೆವಿಗೂ ಮನಗಂಡಿರಿ. 'ಶಾಸನಗಳಲ್ಲಿ ವಿಷಯಾನುಪೂರ್ವಿ' ವಿಷಯಕ್ಕೆ ಸಂಬಂಧಿಸಿದಂತೆ ಉಳಿದ ತಾತ್ವಿಕ ವಿಚಾರಗಳನ್ನು ಮುಂದಿನ ಘಟಕದಲ್ಲಿ ಮುಂದುವರಿಸಿಲಾಗಿದೆ. ಮತ್ತಷ್ಟು ಅಂಶಗಳನ್ನು ಮನಗಾಣುವಿರಿ.

## 117.4 ಅಭ್ಯಾಸಕ್ಕೆ ಪ್ರಶ್ನೆಗಳು

1. ಶಾಸನಗಳಲ್ಲಿ ವಿಷಯಾನುಪೂರ್ವಿ ಸಮಾವೇಶಗೊಳ್ಳುವ ಪೀಠಿಕೆಯಲ್ಲಿ ಪ್ರಸ್ತಾಪಿಸಲ್ಪಡುವ ಅಂಶಗಳು ಯಾವುವು ಪೀಠಿಕೆ ಅಂಶಗಳನ್ನು ವಿಶದಪಡಿಸಿರಿ.
2. ಪ್ರಕಟಣೆ ಭಾಗದಲ್ಲಿ ಸಮಾವೇಶಗೊಳ್ಳುವ ಅಂಶಗಳನ್ನು ವಿವರಿಸಿರಿ.
3. ಮುಕ್ತಾಯದ ಅಂಶಗಳನ್ನು ವಿವರಿಸಿರಿ.

# ಘಟಕ - 118

# ಶಾಸನಗಳಲ್ಲಿ ವಿಷಯಾನುಪೂರ್ವಿ : ಅಧಿಕೃತತ್ವದ ಸೂಚನೆಗಳು

ರಚನೆ

118.0 ಉದ್ದೇಶ

118.1 ಪ್ರಸ್ತಾವನೆ

118.2 ಶಾಸನಗಳಲ್ಲಿ ವಿಷಯಾನುಪೂರ್ವಿ : ಅಧಿಕೃತತ್ವದ ಸೂಚನೆಗಳು

118.2.1 ಮುದ್ರೆಗಳು

118.2.2 ಸ್ವಹಸ್ತಾಕ್ಷರ

118.3 ಶಾಸನ ಪದ್ಧತಿಯ ಅವನತಿ

118.4 ಸಾರಾಂಶ

118.5 ಅಭ್ಯಾಸಕ್ಕೆ ಪ್ರಶ್ನೆಗಳು

## 118.0 ಉದ್ದೇಶ

- ಶಾಸನಗಳಲ್ಲಿ ವಿಷಯಾನುಪೂರ್ವಿ ತತ್ತ್ವಗಳಲ್ಲಿ ಸಮಾವೇಶಗೊಳ್ಳುವ ಉಳಿದ ಅಂಶಗಳನ್ನು ಮನಗಾಣುವಿರಿ.
- ಅಧಿಕೃತತತ್ವದ ಸೂಚನೆಗಳಲ್ಲಿ ಪ್ರಸ್ತಾಪಿಸಲ್ಪಡುವ ಮುದ್ರೆಗಳು, ಸ್ವಹಸ್ತಾಕ್ಷರ ಅಂಶಗಳನ್ನು ಮನಗಾಣುವಿರಿ.
- ಶಾಸನ ಪದ್ಧತಿಯ ಅವನತಿ ಅಂಶಗಳನ್ನು ಇಲ್ಲಿ ಮನಗಾಣುವಿರಿ.

## 118.1 ಪ್ರಸ್ತಾವನೆ

ಕೋರ್ಸ್ - Xರ ಕನ್ನಡ ಶಾಸನ ಅಧ್ಯಯನ ಪಠ್ಯವಿಷಯಕ್ಕೆ ಸಂಬಂಧಿಸಿದ 30ನೇ ಬ್ಲಾಕಿನ 118ನೇ ಘಟಕ. ಇದರಲ್ಲಿ ಶಾಸನ ಅಧ್ಯಯನದ ತತ್ತ್ವ ವಿಚಾರಗಳನ್ನು ವಿವರಿಸಲಾಗಿದೆ. ಆಯ್ದ ಪಠ್ಯ ಶಾಸನಗಳ ಅಧ್ಯಯನಕ್ಕೆ ಈ ಅಂಶಗಳು ಪೂರಕವಾದುದು. ಹಿಂದಿನ ಘಟಕದ ಉಳಿದ ತಾತ್ವಿಕ ವಿಚಾರಗಳನ್ನು ಮುಂದೆ ವಿವರಿಸಲಾಗಿದೆ.

## 18.2 ಶಾಸನಗಳಲ್ಲಿ ವಿಷಯಾನುಪೂರ್ವಿ : ಅಧಿಕೃತತತ್ವದ ಸೂಚನೆಗಳು

ತಾಮ್ರಪಟ ದಾಖಲೆಗಳು ರಾಜಾಜ್ಞೆಗಳಾದುದರಿಂದ, ಅವುಗಳನ್ನು ಅಧಿಕೃತಗೊಳಿಸಬೇಕಿತ್ತು. ಹೀಗೆ ಅಧಿಕೃತತತ್ವವನ್ನು ಸ್ಥಾಪಿಸುವ ಸಾಮಾನ್ಯ ವಿಧಾನವೆಂದರೆ, ರಾಜಮುದ್ರೆಗಳ ತಾಮ್ರದ ಅಥವಾ ಕಂಚಿನ ಪ್ರತಿಕೃತಿಗಳನ್ನು ತಾಮ್ರಪಟಗಳಿಗೆ ಲಗತ್ತಿಸುವುದು. ಕೆಲವು ವೇಳೆ ರಾಜನ ಸ್ವಹಸ್ತಾಕ್ಷರದಿಂದ ಇನ್ನೂ ಹೆಚ್ಚಿನ ಅದಿಕೃತತತ್ವವನ್ನು ಒದಗಿಸಲಾಗುತ್ತಿತ್ತು.

### 118.2.1 ಮುದ್ರೆಗಳು

ತಾಮ್ರಪಟ ಮುದ್ರೆಗಳು ಸಮೃದ್ಧವೂ ಸ್ವಾರಸ್ಯಪೂರ್ಣವೂ ಆಗಿವೆ. ಶಾಸನ ಏಕೈಕ ಪಟದ ಮೇಲಿದ್ದಾಗ, ಮುದ್ರೆಯನ್ನು ಪಟಕ್ಕೇ ಬೆಸೆಯುವುದು ಪದ್ಧತಿಯಾಗಿತ್ತು ; ಪಟದ ಎಡಪಾರ್ಶ್ವದಲ್ಲಿ ಅಥವಾ ಮೇಲ್ಭಾಗದಲ್ಲಿ ಅದನ್ನು ಲಗತ್ತಿಸಲಾಗುತ್ತಿತ್ತು. ಹೀಗೆ ಪಟಗಳಿಗೆ ಲಗತ್ತಾಗಿದ್ದು ಅನಂತರ ಬೇರ್ಪಟ್ಟ ಮುದ್ರೆಗಳಿಗೆ ನಿದರ್ಶನವಾಗಿ ಇಮ್ಮಡಿ ಕುಮಾರಗುಪ್ತನ ಭಿತರಿ ಮುದ್ರೆಯನ್ನೂ ಮೌಖರಿ ದೊರೆ ಶರ್ವವರ್ಮನ ಅಶೀರ್ಗರ್ ಮುದ್ರೆಯನ್ನೂ ಹೆಸರಿಸಬಹುದು. ದಾಖಲೆ ಒಂದಕ್ಕಿಂತ ಹೆಚ್ಚು ಪಟಗಳ ಮೇಲಿದ್ದಾಗ, ಪಟಗಳನ್ನು ಕೂಡಿಸುವ ಉಂಗುರಕ್ಕೆ - ಎರಡು ಉಂಗುರಗಳಿದ್ದಾಗ ಅವುಗಳಲ್ಲಿ ಒಂದಕ್ಕೆ -ಮುದ್ರೆಯನ್ನು ಬೆಸೆಯಲಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಮುದ್ರೆ ಅಧಿಕೃತತತ್ವದ ಕುರುಹಾಗುವುದರ ಜೊತೆಗೆ ರಕ್ಷಣಾಸಾಧನವೂ ಆಗುತ್ತಿತ್ತು : ಉದ್ದೇಶಪೂರ್ವಕವಾಗಿ ಉಂಗುರವನ್ನು ಬೇರ್ಪಡಿಸದೆ ದಾಖಲೆಯ ಭಾಗಗಳನ್ನು ಬೇರ್ಪಡಿಸುವುದು ಶಕ್ಯವಿರಲಿಲ್ಲ.

ಮುದ್ರೆಗಳು ವಿವಿಧಾಕಾರದವೂ ವಿವಿಧ ಪ್ರಮಾಣದವೂ ಆಗಿವೆ. ಸಾಮಾನ್ಯವಾಗಿ ಅವುಗಳದು ವೃತ್ತಾಕಾರ ಅಥವಾ ಅಂಡಾಕರ; ಕೆಲವು ಪದ್ಮಾಕೃತಿಯಲ್ಲಿವೆ. ಕೆಲವು ಮುದ್ರೆಗಳಲ್ಲಿ ಚಿಹ್ನ (device) ಮಾತ್ರವಿದ್ದರೆ, ಮತ್ತೆ ಕೆಲವರಲ್ಲಿ ಆಲೇಖ (ಬರಹ, legend) ಮಾತ್ರವಿದೆ; ಎಷ್ಟೋ ಮುದ್ರೆಗಳು ಎರಡನ್ನೂ ಒಳಗೊಂಡು ಕೆಲವೊಮ್ಮೆ ಬಹಳ ವಿವರಪೂರ್ಣವಾಗಿವೆ.

ಸಣ್ಣ ಮುದ್ರೆಗಳಲ್ಲಿ ಸಾಮಾನ್ಯವಾಗಿ ಚಿಹ್ನ ಮಾತ್ರವಿದ್ದು, ಅದು ರಾಜಲಾಂಛನವೆ ಆಗಿರುತ್ತದೆ. ಕೆಲವು ವೇಳೆ ಈ ಚಿಹ್ನದೊಡನೆ ರಾಜನ ಹೆಸರು ಇರುವುದುಂಟು. ಇಂತಹ ಚಿಹ್ನಗಳು ಆಯಾ ರಾಜವಂಶದ ಧರ್ಮಕ್ಕನುಸಾರವಾಗಿರುತ್ತವೆ. ಶೈವಧರ್ಮಕ್ಕೆ ಸಂಬಂಧಿಸಿದ ನಂದಿಯ ಚಿಹ್ನ ಬಹುಪಾಲು ಮುದ್ರೆಗಳಲ್ಲಿ ಕಂಡುಬರುತ್ತದೆ. ವರಾಹ್ನ ಗರುಡ, ಹನುಮಂತ, ಲಕ್ಷ್ಮಿ, ಶಿವ, ವಿಷ್ಣು, ಧರ್ಮಚಕ್ರ

ಮುಂತಾದುವೂ ಮುದ್ರೆಗಳ ಮೇಲಿವೆ. ಧರ್ಮಸಂಬಂಧವಲ್ಲದ ಆನೆ, ಹುಲಿ, ಮತ್ಸ್ಯ ಮಿಥುನ ಮುಂತಾದ ಪ್ರಾಣಿ ರೂಪಗಳನ್ನು ಕೆಲವು ರಾಜವಂಶಗಳ ಮುದ್ರೆಗಳು ಪ್ರದರ್ಶಿಸುತ್ತವೆ.

ಈ ಲಾಂಛನಗಳು ಆಯಾ ದೊರೆಗಳ ನಾಣ್ಯಗಳ ಮೇಲೂ ಕೆಲವೊಮ್ಮೆ ಕುಂಡುಬಂದಿವೆ.[1] ಆದರೆ ಇವು ಆಯಾ ರಾಜವಂಶದ ಧ್ವಜ ಚಿಹ್ನಗಳಿಂದ ಬೇರೆಯಾಗಿರುತ್ತಿದ್ದುವು. ಉದಾಹರಣೆಗೆ, ಸೌಂದತ್ತಿಯ ಮತ್ತು ಬೆಳಗಾವಿಯ ರಟ್ಟರದು ಸುವರ್ಣಗರುಡಧ್ವಜ, ಆದರೆ ಸಿಂಧುರ ಲಾಂಛನ ; ಬನವಾಸಿಯ ಮತ್ತು ಗೋವೆಯ ಕದಂಬರದು ವಾನರಧ್ವಜ ಆದರೆ ಸಿಂಹಲಾಂಛನ. ಕೆಲವು ಪ್ರಕರಣಗಳಲ್ಲಿ ಒಂದೇ ಚಿಹ್ನ ಮುದ್ರೆಗಳ ಮೇಲೂ ಧ್ವಜಗಳ ಮೇಲೂ ಬಳಕೆಗೊಂಡಿರುವುದುಂಟು : ಪಲ್ಲವ, ಗಂಗ, ಚಾಳುಕ್ಯ ಚೋಳ, ಪಾಂಡ್ಯರ ಧ್ವಜಚಿಹ್ನಗಳು ಕ್ರಮವಾಗಿ ನಂದಿ, ಆನೆ, ವರಾಹ, ಹುಲಿ ಮತ್ತು ಮೀನು. ಆದರೆ ಪಲ್ಲವರ ಮುದ್ರೆಗಳಲ್ಲಿ ನಂದಿಯೂ ಪಶ್ಚಿಮ ಗಂಗರ ಮುದ್ರೆಗಳಲ್ಲಿ ಆನೆಯೂ ಕಾಣಿಸಿಕೊಳ್ಳುತ್ತವೆ. ಪೂರ್ವ ಚಾಳುಕ್ಯರ ಮುದ್ರೆಗಳ ಮೇಲೆ ವರಾಹವಿರುವುದು ಪ್ರಸಿದ್ಧ ಸಂಗತಿ. ಚೋಳ ಪಾಂಡ್ಯರ ಮುದ್ರೆಗಳಲ್ಲೂ ಹೀಗೆಯೆ ಆಗಿದೆ.

ಕೆಲವು ಸಂದರ್ಭಗಳಲ್ಲಿ ರಾಜಮುದ್ರೆಗಳು ದೊಡ್ಡವಾಗಿದ್ದು, ಅವುಗಳ ಆಲೇಖದಲ್ಲಿ ದೊರೆಯ ಹೆಸರು ಮಾತ್ರವಲ್ಲದೆ ಅವನ ಪೂರ್ವಜರ ಹೆಸರುಗಳೂ ಉಕ್ತವಾಗುವುದುಂಟು. ಕೆಲವು ದೊಡ್ಡ ಮುದ್ರೆಗಳಲ್ಲಿ ಮೇಲಿನ ಅರ್ಧಭಾಗ ಚಿಹ್ನಕ್ಕೂ ಕೆಳಗಿನ ಅರ್ಧಭಾಗ ಆಲೇಖಕ್ಕೂ ಮೀಸಲಾಗಿದೆ.

ನಿದರ್ಶನಾರ್ಥವಾಗಿ ಇಲ್ಲಿ ಕೆಲವು ತಾಮ್ರಪಟ ಮುದ್ರೆಗಳನ್ನು ನೋಡಬಹುದು. ಸಸನಕೋಟ ತಾಮ್ರಪಟಗಳ ಮುದ್ರೆಯಲ್ಲಿ ಆನೆಯ ಚಿಹ್ನವಿದೆ, ಬರಹವೇನೂ ಇಲ್ಲ. ಕೆಲವು ರಾಜವಂಶಗಳ ಮುದ್ರೆಯಲ್ಲಿ ಚಿಹ್ನವಿಲ್ಲದ ಆಲೇಖವಷ್ಟೆ ಇರುವುದುಂಟು. ಉದಾಹರಣೆಗೆ, ವಾಕಟಕ ಇಮ್ಮಡಿ ಪ್ರವರಸೇನನ ಶಾಸನಗಳ ಮುದ್ರೆಗಳ ಆಲೇಖವಾಗಿ ಈ ಶ್ಲೋಕ ನಾಲ್ಕು ಸಾಲುಗಳಲ್ಲಿ ಬಂದಿದೆ :

**ವಾಕಾಟಕ ಲಲಾಮಸ್ಯ ಕ್ರಮಪ್ರಾಪ್ತ ನೃಪಶ್ರಿಯಃ**
**ರಾಜ್ಞಃ ಪ್ರವರಸೇನಸ್ಯ ಶಾಸನಂ ರಿಪುಶಾಸನಂ**

ಕಾಂತಿದೇವನ ಶಾಸನದ ಮುದ್ರೆ, ಐಪುರ್ ಪಟಗಳ ಮುದ್ರೆ ಚೋಳ ದೊರೆಗಳ ಮುದ್ರೆ ಮುಂತಾದುವೆಲ್ಲ ಚಿಹ್ನದ ವಿಷಯದಲ್ಲಿ ಹೆಚ್ಚು ಸಂಕೀರ್ಣವಾಗಿವೆ.[2] ಒರಿಸ್ಸದ ಗಂಗರಂತಹ ರಾಜವಂಶಗಳ ಮುದ್ರೆಯಲ್ಲಿ ಆಲೇಖವಿಲ್ಲದೆ, ಅನೇಕ ಚಿಹ್ನಗಳು ಕಂಡುಬರುತ್ತವೆ. ಕೆಲವು ಉತ್ತರಭಾರತದ ರಾಜವಂಶಗಳ ಮುದ್ರೆಗಳಲ್ಲಿ ಆಲೇಖ ವಿಸ್ತೃತವಾಗಿ ಬಂದಿದೆ : ಉದಾಹರಣೆಗೆ, ಗುಪ್ತರ ಮುದ್ರೆಗಳಲ್ಲಿ ೮ ಪಂಕ್ತಿಗಳಷ್ಟು, ಹರ್ಷನ ಮುದ್ರೆಯಲ್ಲಿ ೧೩ ಪಂಕ್ತಿಗಳಷ್ಟು ಬರಹವುಂಟು.

ಕೆಲವು ರಾಜವಂಶಗಳ ಮುದ್ರೆಗಳ ಮೇಲಿನ ಅಲೇಖ ಸಂಬಂಧಪಟ್ಟ ರಾಜನ ಹೆಸರನ್ನು ಹೇಳುವುದಿಲ್ಲ. ನಿದರ್ಶನಕ್ಕೆ, ವಲಭಿಯ ಮೈತ್ರಕ ರಾಜರ ಮುದ್ರೆಗಳಲ್ಲಿ 'ಶ್ರೀ ಭಟಕ್ಕಃ' (ಶ್ರೀ ಭಟಾರ್ಕ) ಎಂದಿದೆ ; ಇಲ್ಲಿ 'ಭಟಾರ್ಕ' ಎಂಬವನು ಆ ರಾಜವಂಶದ

---

1. ಪ್ರಾಯೇಣ ಗುರಾಣಿಗಳ ಮೇಲೂ ಅವು ಬಳಕೆಗೊಳ್ಳುತ್ತಿದ್ದುವೆಂದು ಹೇಳುವ ಫ್ಲೀಟ್ ಅಲರು, ಬಳ್ಳಿಗಾಮೆಯ ಶಿಲಾಶಾಸನವೊಂದನ್ನು ಆಧಾರವಾಗಿ ಕೊಡುತ್ತಾರೆ.

2. ರಾಜೇಂದ್ರಚೋಳನ ಮುದ್ರೆಯ ಆಲೇಖವಿದು :

ಏತದ್ ರಾಜೇಂದ್ರ ಚೋಳಸ್ಯ ಪರಕೇಸರಿವರ್ಮಣಃ
ರಾಜದ್ ರಾಜನ್ಯಮುಕುಟಂ ಶ್ರೇಣಿ ರತ್ನೇಷು ಶಾಸನಂ

ಇಂಥ ಆಲೇಖಗಳಲ್ಲಿ ರಾಜನ ಹೆಸರು ಸಾಮಾನ್ಯವಾಗಿ ಷಷ್ಠಿ ವಿಭಕ್ತಿಯಲ್ಲಿ ಅಂತ್ಯಗೊಳ್ಳುತ್ತದೆ ; ವಿರಳವಾಗಿ ಪ್ರಥಮಾವಿಭಕ್ತಿಯಲ್ಲೂ ಬರುವುದುಂಟು

ಮೂಲಪುರುಷ. ಅಂತೆಯೆ ಕೆಲವರು ಪೂರ್ವ ಚಾಲುಕ್ಯರಾಜರ ಮುದ್ರೆಗಳಲ್ಲಿ 'ಶ್ರೀ ತ್ರಿಭುವನಾಂಕುಶ' ಎಂಬ ಆಲೇಖವಿದೆ. ಭಟಾರ್ಕ, ತ್ರಿಭುವನಾಂಕುಶ ಎಂಬವು ಆಯಾ ವಂಶದ ದೊರೆಗಳಿಗೆಲ್ಲ ಇದ್ದ ಸಾಮಾನ್ಯ ನಾಮಧೇಯೆಗಳೆ ಎಂಬ ಸಂದೇಹಕ್ಕೂ ಅವಕಾಶವಿದೆ.

ಕೆಲವು ದಾಖಲೆಗಳಲ್ಲಿ, ಮುದ್ರೆಯನ್ನು ಲಗತ್ತಿಸುವುದರ ಬದಲು ರಾಜಲಾಂಛನವನ್ನು ಪಟ್ಟದ ಮೇಲೆಯೆ ಕೆತ್ತಿರುವುದುಂಟು. ಪರಮಾರ ಜಯಸಿಂಹ ಜಯವರ್ಮನ ಮಂಧಾತ ತಾಮ್ರಪಟಗಳು (ಕ್ರಿ.ಶ. ೧೨೭೪) ಮತ್ತು ಚಂದೇಲ ದೊರೆಗಳ ದಾಖಲೆಗಳು ಇದಕ್ಕೆ ದೃಷ್ಟಾಂತ.

ಮುದ್ರೆಯ ಬದಲು ಪ್ರತಿಮೆಯನ್ನು ಕೆಲವು ಪ್ರಕರಣಗಳಲ್ಲಿ ಬಳಸಿರುವುದು ಕಂಡುಬಂದಿದೆ.[3] ಉದಾಹರಣೆಗೆ, ಶಿಲಾಹಾರ ರಟ್ಟರಾಜನ ಕ್ರಿ.ಶ. ೧೦೦೮ರ ಖಾರೇಪಟಣ್ ಪಟಗಳನ್ನು ಕೂಡಿಸಿರುವ ಉಂಗುರದ ತುದಿಗಳನ್ನು ಗರುಡನ ಒಂದು ಪುಟ್ಟ ವಿಗ್ರಹಕ್ಕೆ ಬೆಸೆಯಲಾಗಿತ್ತು ; ದೇವಗಿರಿ ಯಾದವ ರಾಜ ರಾಮಚಂದ್ರನ ಪೈಠಣ್ ಶಾಸನದಲ್ಲಿ, ಪಟ್ಟಗಳನ್ನು ಸೇರಿಸಿರುವ ಸಾಧಾರಣ ಉಂಗುರದ ಮೇಲೆ ಇನ್ನೊಂದು ಉಂಗುರ ಸು. ಎಂಟೂವರೆ ಅಂಗುಲ ಎತ್ತರದ ಗಡರುವಿಗ್ರಹವೊಂದರ ಹಿಂಬದಿಗೆ ಹಾದುಹೋಗಿದೆ (ಈ ವಿಗ್ರಹದ ತೂಕವೆ ಸು.೧೧ ಪೌಂಡು); ಪ್ರಾಗ್ಜ್ಯೋತಿಷದ ವೈದ್ಯದೇವ ರಾಜನ ಕಮೌಲಿ ದಾಖಲೆಯಲ್ಲಿ, ಪಟಗಳನ್ನು ಸೇರಿಸುವ ಉಂಗುರವನ್ನು ಭದ್ರಪಡಿಸಿರುವ ಚಮಚದಾಕಾರದ ಕೋಶವೊಂದರಲ್ಲಿ ಗಣಪತಿಯ ವಿಗ್ರಹವಿದೆ.

ರಾಜಮುದ್ರೆಗಳಿಲ್ಲದೆ, ಅಧಿಕಾರಿಗಳು ಖಾಸಗಿ ವ್ಯಕ್ತಿಗಳು ಧಾರ್ಮಿಕ ಸಂಸ್ಥೆಗಳು ಮುಂತಾದವರಿಗೆ ಸಂಬಂಧಿಸಿದ ಜೇಡಿಮಣ್ಣಿನ ಮತ್ತು ಇತರ ಸಾಮಗ್ರಿಗಳ ಮುದ್ರೆಗಳು ಉತ್ತರಭಾರತದ ನಾನಾ ಸ್ಥಳಗಳಲ್ಲಿ - ಬಸಾರ್, ಕಸಿಯ, ಸಹೇತ್‌ಮಹೇತ್, ಭಿತ, ನಳಂದ, ರಾಜಘಾಟ್, ಕೌಶಾಂಬಿ ಇತ್ಯಾದಿ - ಹೇರಳವಾಗಿ ಸಿಕ್ಕಿವೆ. ಅವುಗಳಲ್ಲಿ ಬಹುಪಾಲು ಮುದ್ರೆಗಳ ಮೇಲೆ ಖಾಸಗಿ ವ್ಯಕ್ತಿಗಳು ಮತ್ತು ದೇವತೆಗಳು, ದೇವಾಲಯಗಳು, ಮಠಗಳು, ವರ್ತಕಶ್ರೇಣಿಗಳು ಮೊದಲಾದುವುಗಳ ಹೆಸರುಗಳಿವೆ ; ಅನೇಕ ವಿಷಯಗಳ ಮೇಲೆ ಅವು ಬೆಳಕು ಚೆಲ್ಲುತ್ತವೆ. ಈ ಮುದ್ರೆಗಳಲ್ಲಿ ಕೆಲವು 'ಅಭಿಜ್ಞಾನ'ಗಳಾಗಿದ್ದು, ಪರಿಚಯ ಪತ್ರಗಳ ಕಾರ್ಯವನ್ನು ನಿರ್ವಹಿಸುತ್ತಿದ್ದುವು.

### 118.2.2 ಸ್ವಹಸ್ತಾಕ್ಷರ

ದೊರೆ ಹಾಕಿಕೊಟ್ಟ ಶಾಸನದಲ್ಲಿ ಅವನ ಸ್ವಹಸ್ತಾಂಕಿತವಿರಬೇಕೆಂದು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ವಿಧಿಸಲಾಗಿದೆ : "ಸ್ವಹಸ್ತ ಕಾಲಸಂಪನ್ನಂ ಶಾಸನಂ ಕಾರಯೇತ್ ಸ್ಥಿರಃ.[4] ಹೀಗಾಗಿ, ಹಲವು ಪ್ರಕರಣಗಳಲ್ಲಿ, ಮೂಲದಾಖಲೆಯಲ್ಲಿದ್ದ ದೊರೆಯ ರುಜುವನ್ನು ತಾಮ್ರಪಟದ ಅಂತ್ಯದಲ್ಲೂ ನಕಲು ಮಾಡಿ ಕೆತ್ತಿರುವುದನ್ನು ಕಾಣುತ್ತೇವೆ. ಹರ್ಷನ ಶಾಸನದಲ್ಲಿ "ಸ್ವಹಸ್ತೋ ಮಮ ಮಹಾರಾಜಾಧಿರಾಜ ಶ್ರೀ ಹರ್ಷಸ್ಯ" ಎಂದೂ ಡಡ್ಡನ ಶಾಸನದಲ್ಲಿ "ಸ್ವಹಸ್ತೋ ಮಮ ಶ್ರೀ' ಡಡ್ಡಸ್ಯ" ಎಂದೂ ಆಯಾ ದೊರೆಯ ಸಹಿಯಿದೆ. ಕೆಲವೊಮ್ಮೆ 'ಸ್ವಹಸ್ತ' ಎಂಬುದರ ಅರ್ಥವನ್ನೇ ಕೊಡುವ "ಮತಂ ಮಮ" ಎಂಬ ಮಾತೂ ಬಳಕೆಗೊಂಡಿರುವುದುಂಟು. ಚಂದೇಲ ರಾಜ ಮದನವರ್ಮನ ಶಾಸನದಲ್ಲಿ ಎರಡೂ ಕಂಡುಬರುತ್ತವೆ: "ಸ್ವಹಸ್ತೋಯಂ ಶ್ರೀಮನ ಮದನವರ್ಮದೇವಸ್ಯ ಮತಂ ಮಮ".

ಮೂಲ ದಾಖಲೆಯ ಮೇಲಿದ್ದ ದೊರೆಯ ಹಸ್ತಾಕ್ಷರ ಬಹುಪಾಲು ತಾಮ್ರಪಟಗಳಲ್ಲಿ ಬಿಟ್ಟುಹೋಗಿದೆ. ಕೆಲವು ಮಧ್ಯಕಾಲೀನ ಶಾಸನಗಳಲ್ಲಿ ದಾನಿಯ ಹೆಸರಿರದೆ ಮನೆದೈವದ ಹೆಸರಿರುವುದು ಗಮನಾರ್ಹ ವಿಜಯನಗರದ ದೊರೆಗಳ ತಾಮ್ರಪಟಗಳಲ್ಲಿ ಅವರ ಮನೆದೇವತೆಯಾದ ವಿರೂಪಾಕ್ಷನ ಅಂಕಿತವಿದೆ. ಮತ್ತೆ ಕೆಲವು ಮಧ್ಯಕಾಲೀನ ಶಾಸನಗಳಲ್ಲಿ ದಾನಿಯ ರುಜುವಿನ ಸ್ಥಾನದಲ್ಲಿ 'ಶ್ರೀ'

---

3. ಕೆಲವೊಮ್ಮೆ ಧ್ವಜದಂಡದ ತುದಿಯಲ್ಲೂ ಪ್ರತಿಮೆಯನ್ನು ಲಾಂಛನವಾಗಿ ಸ್ಥಾಪಿಸುತ್ತಿದ್ದಂತೆ ತೋರುತ್ತದೆ.

4. ಸ್ವಹಸ್ತಕಾಲ ಸಂಪನ್ನಂ ಎಂಬುದಕ್ಕೆ ವಿಜ್ಞಾನೇಶ್ವರನ ವ್ಯಾಖ್ಯಾನವಿದು : "ಸ್ವಹಸ್ತೇನ ಸ್ವಹಸ್ತಲಿಖಿತೇನ ಮತಂ ಮೇ ಅಮುಕನಾಮ್ನಃ ಅಮುಕ ಪುತ್ರಸ್ಯ ಯದತ್ರೋಪರಿ ಲೇಖಿತಮಿತ್ಯನೇನ ಸಂಪನ್ನಂ ಯುಕ್ತಂ."

ಅಥವಾ 'ಸಹೀ' ಎಂದೆಷ್ಟೆ ಇದೆ. ಒರಿಸ್ಸದ ಸೂರ್ಯವಂಶಿ ಗಜಪತಿ ದೊರೆಗಳ ದಾಖಲೆಗಳಲ್ಲಿ ಅಂಥ ಕಡೆ ಕತ್ತಿ ಅಥವಾ ಕಠಾರಿಯ ಆಕೃತಿಯನ್ನು ಕೆತ್ತಲಾಗಿದೆ.

ಸ್ವಹಸ್ತಾಂಕಿತ, ಶಾಸನ ಯಾವ ಲಿಪಿಯಲ್ಲಿದೆಯೋ ಅದೇ ಲಿಪಿಯಲ್ಲಿರಬಹುದು. ಅಥವಾ ಭಿನ್ನ ಲಿಪಿಯಿರಬಹುದು. ಗುಜರಾತಿನಲ್ಲಿ ೯ನೆಯ ಶತಮಾನದಲ್ಲಿ ಆಳುತ್ತಿದ್ದ ರಾಷ್ಟ್ರಕೂಟರ ತಾಮ್ರಪಟಗಳು ನಾಗರಿ ಮುಂತಾದ ಲಿಪಿಗಳಲ್ಲಿ ಸಂಸ್ಕೃತ ಭಾಷೆಯಲ್ಲಿದ್ದರೂ ಸ್ವಹಸ್ತಾಂಕಿತ ಮಾತ್ರ ಕನ್ನಡ ಲಿಪಿಯಲ್ಲಿದೆ. ವಿಜಯನಗರದ ರಾಜರ ಶಾಸನಗಳು ನಂದಿ ನಾಗರಿ ಲಿಪಿಯಲ್ಲಿದ್ದರೂ ಅವುಗಳ ಕಡೆಯಲ್ಲಿ 'ಶ್ರೀ ವಿರೂಪಾಕ್ಷ' ಎಂಬ ಅಂಕಿತ ಕನ್ನಡ ಅಕ್ಷರಗಳಲ್ಲಿದೆ.

ಕೆಲವು ಶಾಸನಗಳಲ್ಲಿ 'ಲಾಂಛಿತ' ಎಂಬ ಮಾತು ಬಂದಿದೆ. ಇದು ವಿಶೇಷವಾಗಿ ಒರಿಸ್ಸ - ಆಂಧ್ರಗಳ ಗಡಿಯಲ್ಲಿರುವ ಗಂಜಂ-ಶ್ರೀ ಕಾಕುಳಂ ಪ್ರಾಂತದ ಶಾಸನಗಳಲ್ಲಿ ಕಂಡುಬರುತ್ತದೆ : ಉದಾಹರಣೆಗೆ, ಸ್ವಲ್ಪವೆಲುರ ದಾಖಲೆ ; ಅದರಲ್ಲಿ "ಮಹಾದೇವಿ ಶ್ರೀವಾಸ ಭಟ್ಟಾರಿಕೆಯಿಂದ ಲಾಂಛಿತ"ವೆಂದಿದೆ. ಮೂಲ ದಾಖಲೆಯ ಮೇಲೆ ರಾಜಲಾಂಛನವುಳ್ಳ ಮುದ್ರೆಯನ್ನೊತ್ತುವ ಕ್ರಿಯೆಯನ್ನು ಇದು ಸೂಚಿಸುತ್ತದೆ. ತಾಮ್ರಪಟಗಳಿಗೆ ಲಗತ್ತಾಗುತ್ತಿದ್ದುದು ಈ ಮುದ್ರೆಯ ಲೋಹಾಕೃತಿಯೆ.

ಪೂರ್ವಭಾರತದ ಕೆಲವು ಮಧ್ಯಕಾಲೀನ ಶಾಸನಗಳಲ್ಲಿ - ನಿದರ್ಶನಕ್ಕೆ, ಸೇನರವು - 'ಶ್ರೀ-ನಿ', 'ಶ್ರೀ-ನಿಮಹಾಸಾ-ನಿ', 'ಶ್ರೀ ನಿಮಹಾಸಾಂಕರಣ-ನಿ' ಮುಂತಾದ ಸಂಕ್ಷೇಪಗಳು ಕಂಡುಬರುತ್ತವೆ. ಇಲ್ಲಿ 'ನಿ' ಎಂದರೆ 'ನಿಬದ್ಧ' (registered) ಎಂಬರ್ಥ 'ನಿರೀಕ್ಷಿತ' (ನೋಡಿ ಒಪ್ಪಿಗೆ ಕೊಟ್ಟಿದೆ) ಎಂದೂ ಆಗಬಹುದು. 'ಶ್ರೀ' ಎಂಬುದು 'ಶ್ರೀ ಹಸ್ತ' ಅಥವಾ 'ಶ್ರೀ ಚರಣ' (ಅರ್ಥಾತ್ ರಾಜ) ಎಂಬುದರ ಸಂಕ್ಷೇಪ. 'ಮಹಾಸಾ' ಅಥವಾ 'ಮಹಾಸಾಂ' ಎಂಬುದು 'ಮಹಾಸಾಂಧಿವಿಗ್ರಹಿಕ'ನನ್ನೂ 'ಮಹಾಸಾಂಕರಣ' ಎಂಬುದು 'ಮಹಾಸಾಂಧಿ ವಿಪ್ರಹಾಧಿಕರಣ' ನನ್ನೂ ಸೂಚಿಸುತ್ತವೆ. ಇತರ ಅಧಿಕಾರಿಗಳ ಪದನಾಮೆಗಳೂ ಇಂಥ ದಾಖಲೆಗಳಲ್ಲಿ ಉಕ್ತವಾಗುವುದುಂಟು. "ಶ್ರೀ ಹಸ್ತ ನಿರೀಕ್ಷಿತಂ ತದನು ಮಹಾಕ್ಷ ಪಟಲಿಕ ನಿರೀಕ್ಷಿತಂ" ಎಂಬ ವಾಕ್ಯವೂ ಒಮ್ಮೊಮ್ಮೆ ಬರುವುದುಂಟು; " ದೊರೆಯೂ ಅನಂತರ ಮಹಾಕ್ಷ ಪಟಲಿಕನೂ ನೋಡಿದ್ದಾರೆ" ಎಂಬುದು ಇದರ ಅರ್ಥ.

ಕರ್ಣಾಟಕದ ಶಾಸನಗಳನ್ನು ತೆಗೆದುಕೊಂಡರೆ, ಸುಮಾರು ೧೨ನೆಯ ಶತಮಾನದತನಕ ರಾಜರ ಹಸ್ತಾಂಕಿತಗಳು[5] ಕಂಡುಬರುವುದಿಲ್ಲವೆಂದೂ ಅವುಗಳನ್ನು ಹಾಕುವ ಪದ್ಧತಿ ಬಹುಶಃ ೧೨ನೆಯ ಶತಮಾನದ ಅಂತ್ಯ ಅಥವಾ ೧೩ನೆಯ ಶ.ದ ಆದಿಯಲ್ಲಿ ಮೊದಲಾಯಿತೆಂದೂ ಹೇಳಲಾಗಿದೆ.[6]

೧೧೯೦ರ ಹೊಯ್ಸಳರ ಒಂದು ತಾಮ್ರಪಟದಲ್ಲಿ "ಶ್ರೀ ಮಲಪರೊಳ ಗಂಡ" ಎಂಬ ಸಹಿ ಕಂಡುಬರುತ್ತದೆ. ಸು. ೧೨೩೦ರ ಶಾಸನವೊಂದರ ಕಡೆಯಲ್ಲಿ "ಶ್ರೀ ವೀರನಾರಸಿಂಹ ದೇವಸ್ಯ" ಎಂದೂ ೧೨೫೪ರ ಶಾಸನವೊಂದರ ಕಡೆಯಲ್ಲಿ "ಶ್ರೀ ಮಲಪರೊಳ್ಗಂಡ ಸ್ರೀ ವೀರಸೋಮೇಶ್ವರ ದೇವಸ್ಯ" ಎಂದೂ ಹಸ್ತಾಂಕಿತವಿದೆ. ೧೪ನೆಯ ಶತಮಾನದ ಅಂತ್ಯದ ಶಾಸವೊಂದರ ಕೊನೆಯಲ್ಲಿ ಶ್ರೀ ಗಂಡ ಮಂತ್ರಿವರ" ಎಂದು ಮಂತ್ರಿಯ ರುಜುವಿದೆ. ಸ್ವಹಸ್ತಾಂಕಿತ ವಾಸ್ತವವಾಗಿ ಉತ್ಕೀರ್ಣವಾಗಿರದೆ ಬರಿಯ ಹೇಳಿಕೆಯ ರೂಪದಲ್ಲಿ ಬಂದಿರಲೂಬಹುದು.

---

5. ಒಪ್ಪ ಎಂಬುದು ಸ್ವಹಸ್ತಾಕ್ಷರಕ್ಕೆ ಕನ್ನಡ ಶಬ್ದ. ಪತ್ರದಲ್ಲಿ ಉಕ್ತವಾಗಿರುವ ವಿಷಯಕ್ಕೆ ತನ್ನ ಒಪ್ಪಿಗೆಯಿದೆ ಎಂದು ಸೂಚಿಸಲು ಹಾಕಿರುವ ಸ್ವಹಸ್ತಾಂಕಿತವೇ ಒಪ್ಪು ಅಥವಾ ಒಪ್ಪ.

6. ನೋಡಿ : ಡಾ. ಚಿದಾನಂದಮೂರ್ತಿ, ಪೂರ್ವೋಕ್ತ ಗ್ರಂಥ, ಪು. ೬೩-೬೫.

## 118.3 ಶಾಸನಪದ್ಧತಿಯ ಅವನತಿ

ಮಧ್ಯಕಾಲದಲ್ಲಿ ಭಾರತದ ಬಹು ಭಾಗವನ್ನು ಆಕ್ರಮಿಸಿಕೊಂಡ ಇಸ್ಲಾಂ ಧರ್ಮಾನುಯಾಯಿಗಳಾದ ವಿದೇಶಿಯರಿಗೆ ಶಾಸನಗಳ ಬಗ್ಗೆ ಒಲವಿರಲಿಲ್ಲ; ಎಂದರೆ, ಶಿಲೆಯ ಮೇಲೆ ಮತ್ತು ತಾಮ್ರಪಟಗಳ ಮೇಲೆ ಆಜ್ಞೆಗಳನ್ನು ಹೊರಡಿಸುವ ಪ್ರವೃತ್ತಿ ಅವರಲ್ಲಿ ಕಡಿಮೆ. ಚರಿತ್ರೆಯ ಪುಸ್ತಕಗಳನ್ನು ಬರೆಯುವುದು ಮತ್ತು ಕಾಗದದ ಮೇಲೆ 'ಫರ್ಮಾನು'ಗಳನ್ನು ಹೊರಡಿಸುವುದು ಅವರ ವಾಡಿಕೆಯಾಗಿತ್ತು. ಕಾಗದವನ್ನು ಭರತಖಂಡದಲ್ಲಿ ಲೇಖ್ಯ ಸಾಮಾಗ್ರಿಯಾಗಿ ಜನಪ್ರಿಯಗೊಳಿಸಿದವರೇ ಮುಸ್ಲಿಮರು. ಹೀಗಾಗಿ, ಕಾಗದದ ಬಳಕೆ ಹೆಚ್ಚಿದಂತೆಲ್ಲ, ಶಿಲೆ ಹಾಗೂ ತಾಮ್ರ ಪಟಗಳ ಮೇಲೆ ಶಾಸನಗಳನ್ನು ಕೆತ್ತಿಸುವ ಪದ್ಧತಿ ಹಿಂದೆ ಬೀಳುತ್ತ ಹೋದುದು ಸಹಜ. ಅಲ್ಲದೆ, ಪ್ರಾಚೀನ ಪರಂಪರೆಯಲ್ಲಿ ನಿಷ್ಠೆಯುಳ್ಳ ಸ್ವತಂತ್ರ ಹಿಂದೂ ದೊರೆಗಳ ಸಂಖ್ಯೆಯೂ ಇಳಿಮುಖವಾಗತೊಡಗಿತು. ಬ್ರಿಟಿಷ್ ಪ್ರಭುತ್ವ ಸ್ಥಾಪಿತವಾದ ಮೇಲಂತೂ, ಮುದ್ರಣ ಯಂತ್ರಗಳು ಬಂದುದರಿಂದ ಮತ್ತು ದಾಖಲೆಗಳನ್ನು 'ರಿಜಿಸ್ಟರ್' ಮಾಡಿಸುವ ವ್ಯವಸ್ಥೆ ಜಾರಿಗೆ ಬಂದುದರಿಂದ ಶಿಲೆಯ ಮೇಲೆ ಪ್ರಶಸ್ತಿಗಳನ್ನು ಕೆತ್ತಿಸುವ ಪದ್ಧತಿಗೂ ತಾಮ್ರಪಟಗಳ ಮೇಲೆ ದಾನ ಪತ್ರಗಳನ್ನು ಕೆತ್ತಿಸುವ ಪದ್ಧತಿಗೂ ಅಂತ್ಯವುಂಟಾಯಿತು. ಇಷ್ಟಾದರೂ, ೧೮ನೆಯ ಶತಮಾನದಷ್ಟು ಈಚಿನ ಕಾಲದಲ್ಲಿ ಕೂಡ ತ್ರಿಪುರ, ಅಸ್ಸಾಂಗಳ ದೊರೆಗಳು ತಾಮ್ರ ಪಟಗಳನ್ನು ಹೊರಡಿಸಿರುವುದುಂಟು; ಯಾತ್ರಿಕರು ಪವಿತ್ರ ಸ್ಥಳಗಳಲ್ಲಿ ತಮ್ಮ ಹೆಸರು ಇತ್ಯಾದಿಗಳನ್ನು ಕೊರೆಯಿಸುವುದು ಇಂದಿಗೂ ಕಂಡುಬರುತ್ತದೆ.

## 118.4 ಸಾರಾಂಶ

ಈವರೆವಿಗೂ 'ವಿಷಯಾನುಪೂರ್ವಿ' ಎಂಬ ಶೀರ್ಷಿಕೆಯಲ್ಲಿ ಶಾಸನ ಅಧ್ಯಯನಕ್ಕೆ ಪೂರ್ವಭಾವಿಯಾದ ತಾತ್ವಿಕ ವಿಚಾರಗಳನ್ನು ಮನಗಂಡಿರಿ. ಶಾಸನಗಳಲ್ಲಿ ಮೂಲಭೂತವಾಗಿ ಗುರುತಿಸಬಹುದಾದ ಅಧಿಕೃತ ಮುದ್ರೆಗಳು, ಸ್ವಹಸ್ತಾಕ್ಷರಗಳ ಅಂಶಗಳನ್ನು ತಿಳಿದುಕೊಂಡಿರಿ. ಮುಂದಿನ ಘಟಕದಲ್ಲಿ ಶಾಸನಗಳಲ್ಲಿ ಕಾಲಗಣನೆ ಮುಂತಾದ ವಿಚಾರಗಳನ್ನು ಅರಿಯುವಿರಿ.

## 118.5 ಅಭ್ಯಾಸಕ್ಕೆ ಪ್ರಶ್ನೆಗಳು

1. ಅಧಿಕೃತ ಸೂಚನೆಗಳೆಂದರೆ ಯಾವುವು ?

2. 'ಮುದ್ರೆಗಳು' ಶಾಸನಗಳ ಮಹತ್ವವನ್ನು ಹೇಗೆ ಹೆಚ್ಚಾಗುತ್ತವೆ ?

3. ಶಾಸನಗಳಲ್ಲಿ 'ಸ್ವಹಸ್ತಾಕ್ಷ'ಗಳು ಕಂಡುಬರುವ ರೀತಿಯನ್ನು ವಿವರಿಸಿ ?

## ಬ್ಲಾಕ್ - 30 : ಶಾಸನ ತತ್ತ್ವಗಳು

# ಘಟಕ - 119
# ಶಾಸನಗಳಲ್ಲಿ ಕಾಲಗಣನೆ

ರಚನೆ


119.0 ಉದ್ದೇಶ

119.1 ಪ್ರಸ್ತಾವನೆ

119.2 ಶಾಸನಗಳಲ್ಲಿ ಕಾಲಗಣನೆ

119.2.1 ಭಾರತೀಯ ದೊರೆಗಳ ಆಳ್ವಿಕೆ ವರ್ಷಗಳ ಸೂಚನೆ

119.2.2 ಶಕಗಳು ಹೇಗೆ ರೂಪುಗೊಂಡವು?

119.3 ವಿಕ್ರಮ ಶಕ

119.4 ಶಾಲಿವಾಹನಶಕ ಅಥವಾ ಶಕ

119.5 ಶಾಸನಗಳ ಭಾಷೆ

119.6 ಪ್ರಾಕೃತ ಮತ್ತು ಸಂಸ್ಕೃತ

119.7 ಕನ್ನಡ ಭಾಷೆ

119.8 ಕೂಟ ಶಾಸನಗಳು

119.9 ಸಾರಾಂಶ

## 119.0 ಉದ್ದೇಶ

ಶಾಸನ ಅಧ್ಯಯನದ ತತ್ತ್ವಗಳಲ್ಲಿ ಈ ಕೆಳಗಿನ ಅಂಶಗಳನ್ನು ಮನಗಾಣುವಿರಿ :

- ಶಾಸನಗಳಲ್ಲಿ ಕಾಲಗಣನೆ ಬಗೆಗೆ ಅರಿಯುವುದು.
- ಶಕಗಳ ರೂಪುಗೊಂಡ ಬಗೆ ? ಭಾರತೀಯ ದೊರೆಗಳ ಆಳ್ವಿಕೆ ವರ್ಷಗಳನ್ನು ಅರಿಯುವಿರಿ.
- ಶಾಸನಗಳ ಭಾಷೆಯ ವಿಚಾರ ತಿಳಿಯುವಿರಿ.
- ಕೂಟ ಶಾಸನಗಳೆಂದರೇನು ಎಂಬುದನ್ನು ತಿಳಿಯುವಿರಿ.

## 119.1 ಪ್ರಸ್ತಾವನೆ

ಕೋರ್ಸ್ - Xರ 30ನೇ ಬ್ಲಾಕಿನ 119ನೇ ಘಟಕ : ಇದರಲ್ಲಿ ಶಾಸನಗಳ ಕಾಲಗಣನೆ, ವಿಕ್ರಮಶಕ, ಶಾಲಿವಾಹನಶಾಕ, ಶಾಸನಗಳ ಭಾಷೆ ಮುಂತಾದ ತಾತ್ತ್ವಿಕ ವಿಚಾರಗಳನ್ನು ಇಲ್ಲಿ ನಿರೂಪಿಸಲಾಗಿದೆ.

## 119.2 ಶಾಸನಗಳಲ್ಲಿ ಕಾಲಗಣನೆ

ಭರತಖಂಡದ ಪ್ರಾಚೀನತಮ ಶಾಸನಗಳಲ್ಲಿ ಹಾಗೂ ಈಚಿನ ಬಹುಪಾಲು ಶಾಸನಗಳಲ್ಲಿ, ಆಯಾ ರಾಜನ ಆಳ್ವಿಕೆಯ ವರ್ಷಗಣನೆಯ ಪ್ರಕಾರ ಕಾಲನಿರ್ದೇಶ ಕಂಡುಬರುತ್ತದೆ. ವಿವಿಧ ಶಕ (era)ಗಳಲ್ಲಿ ಕಾಲವನ್ನು ಹೇಳಿಕೊಳ್ಳುವ ಪದ್ಧತಿ ಸುಮಾರು ಕ್ರಿಸ್ತಶಕದ ಆರಂಭದಿಂದ ಮೊದಲಾಯಿತೆಂದು ಹೇಳಬಹುದು. ಪ್ರಭವ ಮುಂತಾದ ಸಂವತ್ಸರಗಳ ಹೆಸರು ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ.

ಎಷ್ಟೋ ಶಾಸನಗಳಲ್ಲಿ ದಿವಸವೂ ನಿರ್ದಿಷ್ಟವಾಗಿ ಉಕ್ತವಾಗುವುದುಂಟು. ಪ್ರಾಚೀನ ಶಾಸನಗಳಲ್ಲಿ ಯಾವುದಾದರೊಂದು ಋತುವಿನ[1] ಎಂಟು, ಪಕ್ಷಗಳಲ್ಲಿ ಒಂದಕ್ಕೆ ಸಂಬಂಧಿಸಿದಂತೆ ದಿವಸದ ಸಂಖ್ಯೆಯನ್ನು ಹೇಳಲಾಗಿದೆ. ಈಚಿನ ಶಾಸನಗಳಲ್ಲಿ ವರ್ಷದ ೧೨ ಮಾಸಗಳಲ್ಲಿ ಒಂದಕ್ಕೆ ಅಥವಾ ಮಾಸದ ಎರಡು ಪಕ್ಷಗಳಲ್ಲಿ ಒಂದಕ್ಕೆ ಸಂಬಂಧಿಸಿದಂತೆ ದಿವಸದ ಉಲ್ಲೇಖ ಕಂಡುಬರುತ್ತದೆ. ವಾರದ ಹೆಸರನ್ನು (ಸೋಮವಾರ ಮಂಗಳವಾರ ಇತ್ಯಾದಿ) ಹೇಳುವ ಪದ್ಧತಿ ಕ್ರಮೇಣ ಜನಪ್ರಿಯವಾಯಿತು. ವಾರದ ಹೆಸರು ಮೊತ್ತಮೊದಲು ಗೋಚರಿಸುವುದು ಬುಧಗುಪ್ತನ ಕಾಲದ ಕ್ರಿ.ಶ. ೪೮೪ರ ಏರಣ್ ಶಾಸನದಲ್ಲಿ (ಆದರೆ 'ವಾರ' ಎಂಬ ಮಾತು ಕ್ರಿ.ಶ. ೧೩೦ರ ಅಂಧೌ ಶಾಸನಗಳಲ್ಲೇ ಬಂದಿದೆ). ಕೆಲವು ಶಾಸನಗಳಲ್ಲಿ ವರ್ಷ ದಿವಸಗಳು ಮಾತ್ರವಲ್ಲದೆ ನಕ್ಷತ್ರ, ಯೋಗ, ಕರಣ, ಲಗ್ನಾದಿಗಳೂ ಉಲ್ಲೇಖಗೊಂಡಿವೆ.

ಭಾರತೀಯ ಶಾಸನಗಳ ಕಾಲನಿರ್ದೇಶನದ ಒಂದು ವೈಶಿಷ್ಟವೆಂದರೆ ಸಂಕ್ಷೇಪಗಳ ಬಳಕೆ. ಶಾಸನಗಳಲ್ಲಿ ಸಂಕ್ಷೇಪಗಳು ಮೊದಲು ಕಾಣಿಸಿಕೊಳ್ಳುವುದು ಕಾಲನಿರ್ದೇಶನಕ್ಕೆ ಸಂಬಂಧಿಸಿದಂತೆ ಎನ್ನಲಾಗಿದೆ, ಉದಾಹರಣೆಗೆ : ವರ್ಷ (ವತ್ಸರ), ಸಂವತ್ಸರ, ಕಾಲ ಹೇಮಂತ, ದಿವಸ, ಫಾಲ್ಗುಣ ಸೋಮವಾರ ಇವುಗಳಿಗೆ ಕ್ರಮವಾಗಿ ವ, ಸ್ಯ (ಸಂಪತ್)[2] ಕಾ, ಹೇ ದಿ (ದಿವ), ಫಾ, ಸೋ ಎಂಬುವು ಸಂಕ್ಷೇಪಗಳು.

---

1. ಮೊದಲು ಗ್ರೀಷ್ಮ, ವರ್ಷ, ಹೇಮಂತ - ಈ ಮೂರು ಋತುಗಳಿಂದ ಒಂದು ವರ್ಷವಾಗುತ್ತಿತ್ತು; ಆಮೇಲೆ ಶರದೃತುವೂ ಸೇರಿಕೊಂಡಿತು.
2. 'ಸಂವತ್' ಎಂಬುದನು 'ಶಕ' ಎಂಬರ್ಥದಲ್ಲಿ ಈಚೆಗೆ ಬಳಸಿರುವುದೂ ಉಂಟು. ಗಳೆಷ್ಟೋ ಇವೆ. ಪ್ರಾಚೀನ ಶಾಸನಗಳಲ್ಲಿ ಬ್ರಾಹ್ಮಿ ಮತ್ತು ಖರೋಷ್ಠಿ ಸಂಕೇತಕಗಳಲ್ಲಿ ಅಂಕಿಗಳನ್ನು ಕೊಡಲಾಗುತ್ತಿತ್ತು ; ೧ರಿಂದ ೯ರವರೆಗಿನ ಅಂಕಿಗಳಿಗೆ ನಿರ್ದಿಷ್ಟ ಚಿಹ್ನೆಗಳನ್ನೂ, ಸೊನ್ನೆಯನ್ನೂ ಬಳಸುವ ದಶಮಾಂಶ ಪದ್ಧತಿ ಕ್ರಿ.ಶ.ಸು. ೫ನೆಯ ಶತಮಾನದಲ್ಲಿ ಭಾರತದಲ್ಲಿ ಹುಟ್ಟಿತೆಂದೂ ಬಹುಶಃ ಉಜ್ಜಯಿನಿ ಪಂಥದ ಖಗೋಳಶಾಸ್ತ್ರಜ್ಞರು ಅದನ್ನು ಜಾರಿಗೆ ತಂದರೆಂದೂ ಹೇಳಲಾಗಿದೆ.

ಪ್ರಾಚೀನತಮ ಶಾಸನಗಳಲ್ಲಿ - ನಿದರ್ಶನಕ್ಕೆ ಅಶೋಕನವು - ವರ್ಷ ಮೊದಲಾದುವುಗಳ ಸಂಖ್ಯೆಯನ್ನು ಅಕ್ಷರಗಳಲ್ಲಿ ಕೊಡಲಾಗಿದೆ. ಆದರೆ ಈಚೆಗೆ ಅವುಗಳನ್ನು ಅಂಕಿಗಳಲ್ಲಿ ಕೊಡುವ ಪ್ರವೃತ್ತಿ ಬೆಳೆಯಿತು. ಅಕ್ಷರ, ಅಂಕಿ ಎರಡರಲ್ಲೂ ಸಂಖ್ಯೆಯನ್ನು ನಮೂದಿಸುವ ದಾಖಲೆಗಳೆಷ್ಟೋ ಇವೆ. ಪ್ರಾಚೀನ ಶಾಸನಗಳಲ್ಲಿ ಬ್ರಾಹ್ಮಿ ಮತ್ತು ಖರೋಷ್ಠಿ ಸಂಕೇತಗಳಲ್ಲಿ ಅಂಕಿಗಳನ್ನು ಕೊಡಲಾಗುತ್ತಿತ್ತು ೧ರಿಂದ ೯ರವರೆಗಿನ ಅಂಕಿಗಳಿಗೆ ನಿರ್ದಿಷ್ಟ ಚಿಹ್ನೆಗಳನ್ನೂ, ಸೊನ್ನೆಯನ್ನೂ ಬಳಸುವ ದಶಮಾಂಶ ಪದ್ಧತಿ ಕ್ರಿ.ಶ.ಸು. ೫ನೆಯ ಶತಮಾನದಲ್ಲಿ ಭಾರತದಲ್ಲಿ ಹುಟ್ಟಿತೆಂದೂ ಬಹುಶಃ ಉಜ್ಜಯಿನಿ ಪಂಥದ ಖಗೋಳಶಾಸ್ತ್ರಜ್ಞರು ಅದನ್ನು ಜಾರಿಗೆ ತಂದರೆಂದೂ ಹೇಳಲಾಗಿದೆ.

ನಿರ್ದಿಷ್ಟವಾದ ಸಂಸ್ಕೃತ ಶಬ್ದಗಳಿಂದ ನಿರ್ದಿಷ್ಟ ಸಂಖ್ಯೆಯನ್ನು ಸೂಚಿಸುವ ವಿಧಾನವೂ ಇದ್ದಿತೆಂಬುದನ್ನು ಗಮನಿಸಬೇಕು. ಉದಾಹರಣೆಗೆ, 'ಕರ'ದ ಅರ್ಥವನ್ನು ಕೊಡುವ ಶಬ್ದಗಳೆಲ್ಲ 'ಎರಡು' ಎಂಬ ಸಂಖ್ಯೆಯನ್ನೂ 'ಬಾಣ'ದ ಅರ್ಥವನ್ನುಳ್ಳ ಶಬ್ದಗಳೆಲ್ಲ ಐದನ್ನೂ ಸೂಚಿಸುತ್ತವೆ.[3] ವರ್ಣಮಾಲೆಯ ನಿರ್ದಿಷ್ಟವಾದ ಅಕ್ಷರಗಳಿಂದಲೂ ಸಂಖ್ಯೆಗಳನ್ನು ಸೂಚಿಸುತ್ತಿದ್ದರು; ಈ ಪದ್ಧತಿ ಕ್ರಿ.ಶ. ೪೯೯ ರಿಂದೀಚಿನದ್ದು ಮಧ್ಯಕಾಲದ ದಕ್ಷಿಣಭಾರತೀಯ ಶಾಸನಗಳಲ್ಲಿ 'ಕಟಪಯಾದಿ' ಎಂಬ ಕ್ರಮವೊಂದು ಕಂಡುಬರುತ್ತದೆ. ಇದರ ಪ್ರಕಾರ, 'ಕ' ರಿಂದ 'ಞ'ದವರೆಗಿನ ಮತ್ತು 'ಟ' ದಿಂದ 'ನ' ದವರೆಗಿನ ಅಕ್ಷರಗಳು ೧ ರಿಂದ ೧೦ರವರೆಗಿನ ಸಂಖ್ಯೆಗಳನ್ನೂ ಸೊನ್ನೆಯನ್ನೂ ಸೂಚಿಸುತ್ತವೆ ; ಅಂತೆಯೆ 'ಪ' ದಿಂದ 'ಮ'ದವರೆಗಿನ ಅಕ್ಷರಗಳು ೧-೫ ಸಂಖ್ಯೆಗಳನ್ನೂ 'ಯ' - 'ಳ'ಗಳು ೧-೧೦ನ್ನೂ ಸೂಚಿಸುತ್ತವೆ. ಇಲ್ಲಿ 'ವಾಮಗತಿ ತತ್ವ'ವೂ ಉಂಟು. ('ಅಂಕಾನಾಂ ವಾಮತೋ ಗತಿ'). ನಿದರ್ಶನಕ್ಕೆ, ಕೊದವರ್ಮನ ಕಂದಿಯೂರ್ ಶಾಸನವನ್ನು ನೋಡಬಹುದು. ಅದರಲ್ಲಿ ಕಲಿಯುಗದ ೧೫೧೧೫೭೪ನೆಯ ದಿನವನ್ನು 'ಕಟಪಯಾದಿ' ಕ್ರಮದಿಂದ 'ವಿಷಮಂ ಪುಣ್ಯಮೇಕಮ್' ಎಂದು ಹೇಳಲಾಗಿದೆ. ಇಲ್ಲಿ ವ....೪, ಸ...೭, ಮ...೫, ಪ...೧, ಯ...೧, ಮ...೫, ಕ...೧ ಎಂದು ಅರ್ಥ ಮಾಡಿಕೊಂಡು, ಈ ಅಂಕಿಗಳನ್ನು ಬಲದಿಂದ ಎಡಕ್ಕೆ ಓದಿಕೊಳ್ಳಬೇಕು.

ಇಂದು ಖಚಿತವಾಗಿ ಕಾಲವನ್ನು ನಿರ್ಧರಿಸಲು ಅನುಕೂಲಿಸುವಂತೆ ಪ್ರಾಚೀನ ಶಾಸನಗಳಲ್ಲಿ ಸಾಕಷ್ಟು ವಿವರಗಳು ಅಳವಟ್ಟಿರುವುದಿಲ್ಲ. ವಾರ, ಮಾಸ, ಪಕ್ಷ ಶಕವರ್ಷ - ಈ ವಿವರಗಳೆಲ್ಲ ಬಂದಿರುವುದು ಸಾಮಾನ್ಯವಾಗಿ ಈಚಿನ ದಾಖಲೆಗಳಲ್ಲಿ.

ಏಳು ದಿನಗಳನ್ನೊಳಗೊಂಡ ವಾರದ ಕಲ್ಪನೆ ಪ್ರಾಚೀನತಮ ಭಾರತೀಯ ಸಾಹಿತ್ಯದಲ್ಲಿ ಕಂಡುಬರುವುದಿಲ್ಲವೆಂದೂ ಅದು ಗ್ರೀಕ್ ಖಗೋಳ ಶಾಸ್ತ್ರಗಳಿಂದ ಭಾರತೀಯರು ಪಡೆದುಕೊಂಡದ್ದೆಂದೂ ಹೇಳುತ್ತಾರೆ.

ಅನೇಕ ಶಾಸನಗಳ ಕಾಲ ನಿರೂಪಣೆಯಲ್ಲಿ ಕಂಡುಬರುವ ದೋಷಗಳಿಗೆ ಗ್ರಾಮಗಳಲ್ಲೂ ರಾಜಾಸ್ಥಾನಗಳಲ್ಲೂ ಇದ್ದ ಜೋತಿಷಿಗಳೇ ಬಹುಮಟ್ಟಿಗೆ ಕಾರಣ. ೧೯ನೆಯ ಶತಮಾನಕ್ಕಿಂತ ಹಿಂದೆ ಭಾರತೀಯ ಸಾಮಾಜಿಕ ಜೀವನದಲ್ಲಿ ಜ್ಯೋತಿಷಿಗಳಿಗೆ ಮಹತ್ವದ ಸ್ಥಾನವಿತ್ತು. ಆದರೆ ಅವರು ಸಮರ್ಥ ಖಗೋಳ ಶಾಸ್ತ್ರಜ್ಞರಾಗಿರಲಿಲ್ಲವೆಂಬ ಸಂಗತಿ. ಕಲಚುರಿ ಇಮ್ಮಡಿ ರತ್ನದೇವನ ೧೧೨೮ರ ಸರ್ಖೊ ತಾಮ್ರಪಟಗಳಂತಹ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಅಸಮರ್ಪಕ ಕಾಲನಿರ್ದೇಶನವನ್ನುಳ್ಳ ಶಾಸನಗಳು ಸಾಚಾ ಶಾಸನಗಳಲ್ಲವೆಂಬ ಅಭಿಪ್ರಾಯ ಕೆಲವರು ಶಾಸನಶಾಸ್ತ್ರಜ್ಞರಲ್ಲಿದೆ; ಆದರೆ ಅದು ಸರಿಯಲ್ಲವೆಂದು ಇನ್ನೊಂದು ಪಕ್ಷದವರ ವಾದ. ಶಾಸನಗಳು ಅಸಮರ್ಪಕ ಕಾಲ ನಿರೂಪಣೆಗೂ ಅವುಗಳ ಸಾಚಾತನಕ್ಕೂ ಯಾವ ಸಂಬಂಧವೂ ಇಲ್ಲವೆಂದೂ, ಅಂತಹ ಅಸಮರ್ಪಕತೆ

---

3. ವಿಭಾನ್ನಾರ್ಥಗಳುಳ್ಳ ಶಬ್ದಗಳಿಂದಲೂ ಒಂದೇ ಸಂಖ್ಯೆಯನ್ನು ಸೂಚಿಸಬಹುದು. ಉದಾ. : ಚಂದ್ರ, ಭೂಮಿ, ಆತ್ಮ, ಪರಬ್ರಹ್ಮ ಮುಂತಾದವು ಒದನ್ನೂ ವೇದ, ಸಮುದ್ರ ಇತ್ಯಾದಿಗಳು ನಾಲ್ಕನ್ನೂ ರಸ, ದರ್ಶನ ಇತ್ಯಾದಿಗಳು ಆರನ್ನೂ ಪರ್ವತ, ಋಷಿ ಮುಂತಾದವು ಏಳನ್ನೂ ಹೇಳುತ್ತವೆ. (ಈ ಬಗ್ಗೆ ಸುದೀರ್ಘವಾದ ಪಟ್ಟಿಯೊಂದನ್ನು ಡಿ.ಸಿ. ಸರ್ಕಾರ್ ತಮ್ಮ ಪುಸ್ತಕದಲ್ಲಿ (ಪು. ೨೩೦ - ೩೩) ಕೊಟ್ಟಿದ್ದಾರೆ.) ಹಿಂದೆ ಖಗೋಳ, ಗಣಿತ ಮುಂತಾದ ಶಾಸ್ತ್ರಗಳನ್ನೂ ಪದ್ಯ ರೂಪದಲ್ಲೆ ರಚಿಸುತ್ತಿದ್ದುದರಿಂದ ಛಂದಸ್ಸಿನ ಸೌಕರ್ಯಕ್ಕಾಗಿ ಹೀಗೆ ಸಂಖ್ಯೆಗಳನ್ನು ವಿವಿಧ ಶಬ್ದಗಳಿಂದ ಅಭಿವ್ಯಕ್ತಿಸುತ್ತಿದ್ದರೆಂಬುದು ಸ್ಪಷ್ಟ. ಅಲ್ಲದೆ ಇದರಿಂದ ಶಾಸ್ತ್ರಕ್ಕೂ ಅಲ್ಪಸ್ವಲ್ಪ ಕಾವ್ಯದ ಲೇಪ ಒದಗಿ, ಶುಷ್ಕ ಗಣಿತದ ಬೇಸರದಿಂದ ಓದುಗ ಪಾರಾಗಲು ತಕ್ಕಮಟ್ಟಿಗೆ ಅವಕಾಶವಿತ್ತು.

ಅದಕ್ಷರಾದ ಜ್ಯೋತಿಷಿಗಳ ತಪ್ಪು ಲೆಕ್ಕಾಚಾರದಿಂದ ಉದ್ಭವಿಸಿದ್ದೆಂದೂ ಹೇಳಬೇಕಾಗುತ್ತದೆ. ಅದಕ್ಕೆ ಇತರ ಕಾರಣಗಳೂ ಇರಬಹುದು.

### 119.2.1 ಭಾರತೀಯ ದೊರೆಗಳ ಆಳ್ವಿಕೆ ವರ್ಷಗಳ ದಾಖಲೆ

ಭಾರತೀಯ ದೊರೆಗಳ ಪ್ರಾಚೀನ ದಾಖಲೆಗಳ ಕಾಲನಿರ್ದೇಶನದಲ್ಲಿ ಯಾವುದೇ ಶಕದ ಬಳಕೆ ಕಂಡುಬರುವುದಿಲ್ಲ. (ಎಷ್ಟೋ ಶಾಸನಗಳು ಕಾಲವನ್ನೇ ಹೇಳಿಕೊಂಡಿಲ್ಲವೆಂಬ ಮಾತು ಬೇರೆ.) ಅವು ಆಯಾ ರಾಜನ ಆಳ್ವಿಕೆಯ ವರ್ಷಗಣನೆಯನ್ನು ಆಧರಿಸಿ ವರ್ಷವನ್ನು ಹೇಳಿಕೊಂಡಿವೆ. ಇಲ್ಲಿ ಕೆಲವು ನಿರ್ದೇಶನಗಳನ್ನು ಕೊಡಬಹುದು.

೧) ಅಶೋಕನ (ಕ್ರಿ.ಪೂ.ಸು. ೨೭೨ - ೩೨) ಮೂರನೆಯ ಪ್ರಸ್ತರ ಶಾಸನ - "ದ್ವಾದಸವಾಸಾಭಿತೇನ ಮಯಾ ಇದಂ ಅಜ್ಞಾಪಿತಂ" (ನನ್ನ ಪಟ್ಟಾಭಿಷೇಕವಾಗಿ ೧೨ ವರ್ಷಗಳು ಕಳೆದಾಗ ಈ ಆಜ್ಞೆಯನ್ನು ಹೊರಡಿಸಿದ್ದೇನೆ.

೨) ಭಾಗಭದ್ರನ ಕಾಲದ ಬೆಸ್ನಗರ್ ಶಾಸನ (ಕ್ರಿ.ಪೂ.ಸು. ೨ನೆಯ ಶತಮಾನದ ಅಂತ್ಯ) - "ರಾಜ್ಞೋ ಕಾಸೀ ಪುತ್ರಸ್ಯ ಭಾಗ ಭದ್ರ ಸತ್ರಾತಾರಸ ವಸೇನ ಚತುದಸೇನ ರಾಜೇನ ವಧಮಾನಸ". (... ಆಳ್ವಿಕೆಯ ೧೪ ವರ್ಷಗಳು ಕಳೆದನಂತರ).

೩) ಉದಾಕನ ಕಾಲದ ಪ್ರಭೋಸ ಶಾಸನ (ಕ್ರಿ.ಪೂ.ಸು ೧ನೆಯ ಶತಮಾನದ ಅಂತ್ಯ) - "ಉದಾಕಸ ದಸಮ - ಸವಚ್ಛರೇ" (ಉದಾಕನ ಆಳ್ವಿಕೆಯ ೧೦ನೆಯ ವರ್ಷದಲ್ಲಿ).

೪) ಖಾರವೇಲನ ಹಾಥಿಗುಂಫಾ ಶಾಸನ ಕ್ರಿ.ಪೂ.ಸು. ೧ನೆಯ ಶತಮಾನದ ಅಂತ್ಯ) ... "ಅಭಿಸಿತ ಮತೋ ಚ ಪಧವೇ ವಸೇ". (ಆಳ್ವಿಕೆಯ ಪ್ರಥಮ ವರ್ಷದಲ್ಲಿ).

೫) ಗೌತಮೀಪುತ್ರ ಶಾತಕರ್ಣಿಯ (ಕ್ರಿ.ಪೂ.ಸು. ೧೦೬ - ೩೦) ನಾಸಿಕ್ ಶಾಸನ - "ಸವಚರೇ ೧೮ ವಾಸ-ಪಖೇ ೨ ದಿವಸೇ ೧." (ಆಳ್ವಿಕೆಯ ೧೮ನೆಯ ವರ್ಷದ ವರ್ಷರ್ತುವಿನ ೨ನೆಯ ಪಕ್ಷದ ಮೊದಲ ದಿವಸದಲ್ಲಿ).

೬) ಶಾಂತಮೂಲನ ಕ್ರಿ.ಶ.ಸು. ೨೮೦-೩೩೫) ನಾಗಾರ್ಜುನ ಕೊಂಡದ ಶಾಸನ - "ಎಹುವುಲ ಶಾಂತಮೂಲಸ ಸಂವಚರಂ ಬಿತಿಯಂ ಗಿಮ್ಮ - ಪಕ್ಕಮ್ ಚಠಮ್ ೬ ದಿವಸಂ ದಶಮಂ ೧೦" (... ಆಳ್ವಿಕೆಯ ೨ನೆಯ ವರ್ಷದ ಗ್ರೀಷ್ಮರ್ತುವಿನ ೬ನೆಯ ಪಕ್ಷದ ೧೦ನೆಯ ದಿವಸದಲ್ಲಿ).

ಇಂತಹ ನಿದರ್ಶನಗಳನ್ನು ನೋಡಿದರೆ, ಆಳ್ವಿಕೆಯ ವರ್ಷವನ್ನು ಮಾತ್ರ ಹೇಳುವುದು ಮೊದಮೊದಲಿನ ಭಾರತೀಯ ಪದ್ಧತಿಯೆಂದೂ, ಅನಂತರ ದೇಶದ ಕೆಲವು ಭಾಗಗಳಲ್ಲಿ ದಿವಸದ ಉಲ್ಲೇಖವೂ ಬರತೊಡಗಿತೆಂದೂ ಗೊತ್ತಾಗುತ್ತದೆ. ಅಂತೂ ಭಾರತೀಯ ರಾಜರ ಪ್ರಾಚೀನತಮ ಶಾಸನಗಳಲ್ಲಿ ಯಾವುದೇ ಶಕದ ಅಸ್ತಿತ್ವಕ್ಕೆ ಆಧಾರವಿಲ್ಲವೆಂಬುದು ಗಮನಾರ್ಹ. ಕ್ರಿ.ಪೂ. ೪ನೆಯ ಶತಮಾನಕ್ಕಿಂತ ಹಿಂದೆ ಹೋಗುವ ಕೆಲವು ಭಾರತೀಯ ಶಕಗಳೇನೋ ಉಂಟು : ಕ್ರಿ.ಪೂ. ೩೧೦೨ರ ಕಲಿಯುಗಶಕ, ಕ್ರಿ.ಪೂ. ೪೫೭ರ ಶ್ರೀ ಹರ್ಷಶಕ (ಇದನ್ನು ಆಲ್‌ಬೆರೂನಿ ಪ್ರಸ್ತಾಪಿಸಿದ್ದಾನೆ) ಹಾಗೂ ಬೌದ್ಧರ ಮತ್ತು ಜೈನರ ಪರಿನಿರ್ವಾಣ ಶಕಗಳು. ಆದರೆ ಇವು ಜನಪ್ರಿಯವಾಗಿರಲಿಲ್ಲ; ಅಲ್ಲದೆ, ಅವುಗಳ ಚಾರಿತ್ರಿಕತೆಯ ವಿಷಯದಲ್ಲೂ ಸಂದೇಹಗಳಿವೆ.

ನಿಯತವಾಗಿ ಶಕಗಳ ಬಳಕೆ ಮೊದಲು ಕಂಡುಬರುವುದು ವಿದೇಶೀಯ ದೊರೆಗಳ ಶಾಸನಗಳಲ್ಲಿ ಮತ್ತು ನಾಣ್ಯಗಳಲ್ಲಿ ಎಂಬುದನ್ನು ಲಕ್ಷಿಸಬೇಕು. ಆದ್ದರಿಂದ, ನಿರ್ದಿಷ್ಟ ಶಕಗಳಲ್ಲಿ ವರ್ಷವನ್ನು ಉಲ್ಲೇಖಿಸುವ ಪದ್ಧತಿ ಮೂಲತಃ ಭಾರತೀಯವಾದುದಲ್ಲ, ಹೊರಗಿನಿಂದ ಬಂದದ್ದು ಎಂಬ ಸಂಗತಿ ಇದುವರೆಗಿನ ವಿವೇಚನೆಯಿಂದ ಸಿದ್ಧವಾಗುತ್ತದೆ. ಅಭಾರತೀಯ ಮೂಲವುಳ್ಳ ಸಿಥೊ - ಪಾರ್ಥಿಯನ್ನರು ಮತ್ತು ಕುಶಾನರಂತಹ ದೊರೆಗಳು ಪ್ರಾಯಃ ಶಾಸನಗಳಲ್ಲಿ ಶಕಗಳ ಬಳಕೆಯನ್ನು ಆರಂಭಿಸಿ ಜನಪ್ರಿಯಗೊಳಿಸಿದರೆಂದು ಹೇಳಬೇಕಾಗುತ್ತದೆ. ('ಶಕ' ಎಂಬ ಪದವೇ ಮೂಲತಃ ಭಾರತೀಯವಲ್ಲ ಎಂಬುದನ್ನು ಗಮನಿಸಬಹುದು).

ದಕ್ಷಿಣ ಭಾರತದ ಚೋಳ ಪಾಂಡ್ಯರು, ಬಂಗಾಳದ ಪಾಲರು ಮತ್ತು ಚಂದ್ರರು, ಅಸ್ಸಾಮಿನ ಬ್ರಹ್ಮಪಾಲ ದೊರೆಗಳು ಮೊದಲಾದವರು, ಅನ್ಯಪ್ರಾಂತಗಳಲ್ಲಿ ಶಕಗಳ ಉಪಯೋಗ ಬಹಳ ಜನಪ್ರಿಯವಾಗಿದ್ದಾಗಲೂ ತಮ್ಮ ಶಾಸನಗಳಲ್ಲಿ ಆಳ್ವಿಕೆಯ ವರ್ಷಗಣನೆಗನುಸಾರವಾಗಿಯೆ ಕಾಲ ನಿರೂಪಣೆ ಮಾಡಿರುವುದನ್ನು ಸ್ಮರಿಸಬಹುದು. ಬಂಗಾಳ ಅಸ್ಸಾಂಗಳಲ್ಲಿ ಗುಪ್ತಶಕೆ ಬಳಕೆಗೆ ಬಂದಮೇಲೂ ಅಲ್ಲಿನ ರಾಜವಂಶಗಳು ಆಳ್ವಿಕೆಯ ವರ್ಷಗಣನೆಯನ್ನೆ ಆಶ್ರಯಿಸಿರುವುದುಂಟು. ಈ ಅಚ್ಚ ಭಾರತೀಯ ವಿಧಾನ ಈಚೆಗೆ ಕೂಡ ತನ್ನ ಪ್ರಭಾವವನ್ನು ಸಂಪೂರ್ಣವಾಗಿ ಕಳೆದುಕೊಳ್ಳಲಿಲ್ಲವೆಂಬುದು ಈ ಉದಾಹರಣೆಗಳಿಂದ ವಿದಿತವಾಗುತ್ತದೆ.

## 119.2.2 ಶಕಗಳು ಹೇಗೆ ರೂಪುಗೊಂಡವು ?

ಶಕಗಳು ಮೊದಮೊದಲು ಹೇಗೆ ರೂಪುಗೊಳ್ಳುತ್ತಿದ್ದುವೆಂಬುದನ್ನು ನೋಡಬಹುದು. ರಾಜರು ತಮ್ಮ ಹೆಸರಿನಲ್ಲಿ ಶಕಗಳನ್ನು ವಿಧಿವತ್ತಾಗಿ ಸ್ಥಾಪಿಸಬೇಕಾಗಿರಲಿಲ್ಲ. ಪ್ರಾಚೀನ ಶಕವೆಂದರೆ ಇಷ್ಟೆ : ಒಬ್ಬ ಸ್ವತಂತ್ರ ರಾಜನ ಆಳ್ವಿಕೆಯ ವರ್ಷ ಗಣನೆ, ಅವನ ವಂಶಜರಿಂದ ಮುಂದುವರಿದದ್ದು. ಉದಾಹರಣೆಗೆ : ಗುಪ್ತರಾಜರು ತಮ್ಮ ಸ್ವಂತ ಆಳ್ವಿಕೆಯ ಮೊದಲ ವರ್ಷದಿಂದ ದಾಖಲೆಯ ವರ್ಷವನ್ನು ಗಣಿಸದೆ, ತಮ್ಮ ಪೂರ್ವಿಕನೊಬ್ಬನ ಆಳ್ವಿಕೆಯ ಪ್ರಥಮವರ್ಷದಿಂದ ಗಣಿಸಿದ್ದರಿಂದ, ಆ ಗಣನೆಯೆ ಒಂದು ಶಕವಾಗಿ ಪರಿಣಮಿಸಿತು ; ಆ ಪೂರ್ವಿಕ ಸ್ವತಃ ಅದನ್ನು ಸ್ಥಾಪಿಸದೆಯೆ ಅದರ ಮೂಲ ಪುರುಷನಾದ. ಈಚೆಗೆ, ದೊರೆಗಳು ಡಂಗುರ ಪ್ರಕಟಣೆಯ ಮೂಲಕ ವಿಧಿವತ್ತಾಗಿ ಶಕಗಳನ್ನು ಸ್ಥಾಪಿಸಿರುವುದಕ್ಕೆ ನಿದರ್ಶನಗಳಿವೆ.

ನಿಯತವಾದ ಅರ್ಥದಲ್ಲಿ ಅತ್ಯಂತ ಪ್ರಾಚೀನವಾದ ಐತಿಹಾಸಿಕ ಶಕವೆಂದರೆ ಕ್ರಿ.ಪೂ. ೩೧೨ರ ಸೆಲ್ಯೂಸಿಡ್ ಶಕವೆಂದು ತೋರುತ್ತದೆ; ಅದು ಮೌರ್ಯ ಸಾಮ್ರಾಜ್ಯದ ವಾಯವ್ಯ ಗಡಿಗೆ ಹೊಂದಿಕೊಂಡಿದ್ದ ಪಶ್ಚಿಮ ಏಷ್ಯಾದ ಗ್ರೀಕ್ ಸಾಮ್ರಾಜ್ಯದಲ್ಲಿ ಪ್ರಚಲಿತವಾಗಿತ್ತು. ಬಹುಶಃ ಇಂಡೋ - ಗ್ರೀಕ್ ದೊರೆಗಳು ಅದನ್ನು ಬಳಸುತ್ತಿದ್ದರು. ಅನಂತರ ಕಂಡುಬರತಕ್ಕದ್ದು ಕ್ರಿ.ಪೂ. ೨೪೮ರ ಪಾರ್ಥಿಯನ್ ಶಕ. ಅದರ ಬಳಕೆ ಸಿಥೊ - ಪಾರ್ಥಿಯನ್ನರ ಕಾಲದಲ್ಲಿ ಜನಪ್ರಿಯವಾದಂತೆ ತೋರುತ್ತದೆ. ವಿದೇಶೀಯ ವಂಶದಿಂದ ಸ್ಥಾಪಿತವಾದ ಇನ್ನೊಂದು ಶಕವನ್ನು ಇಲ್ಲಿ ಗಮನಿಸಬೇಕು : ಕಾನಿಷ್ಕ ಶಕ[4] ; ಕುಶಾನ ದೊರೆಗಳ ಹಲವಾರು ಶಾಸನಗಳಲ್ಲಿ ಇದರ ಬಳಕೆಯಿದೆ.

ಮೇಲುನೋಟಕ್ಕೆ ಭಾರತೀಯ ಶಕಗಳೆಂದು ತೋರುವ, ಅತ್ಯಂತ ಪ್ರಾಚೀನವೂ ಚಾರಿತ್ರಿಕವೂ ಆದ ಶಕಗಳು ಎರಡು : ಕ್ರಿ.ಪೂ. ೫೮ರ ವಿಕ್ರಮಶಕ ಮತ್ತು ಕ್ರಿ.ಶ. ೭೮ರ 'ಶಕ' (ಮುಂದೆ ಇದು 'ಶಾಲಿವಾಹನ ಶಕ'ವಾಗುತ್ತದೆ). ಇವೆರಡೂ ಭಾರತೀಯ ಇತಿಹಾಸದ ಸಿಥೊ - ಪಾರ್ಥಿಯನ್ ಹಾಗೂ ಕುಶಾನ ಯುಗಗಳಿಗೆ ಸರಿಹೋಗುತ್ತವೆಂಬುದು ಕುತೂಹಲಾಸ್ಪದವಾದ ಅಂಶ.

"ಭಾರತೀಯ ಮೂಲದ ಪ್ರಾಚೀನ ದೊರೆಗಳು ಶಕವನ್ನು ಬಳಸುತ್ತಿರಲಿಲ್ಲವೆಂಬುದನ್ನೂ ಕ್ರಿ.ಪೂ. ೨ನೆಯ ಶತಮಾನದ ಹಾಗೂ ಕ್ರಿ.ಶ. ೩ನೆಯ ಶತಮಾನದ ನಡುವೆ ಭರತಖಂಡವನ್ನಾಳಿದ ವಿದೇಶೀಯ ದೊರೆಗಳು ಸಾಕಷ್ಟು ಕಾಲಾಂತರವನ್ನುಳ್ಳ ಎರಡು ಭಿನ್ನ ಶಕಗಳನ್ನು ಬಳಸುತ್ತಿದ್ದರೆಂಬುದನ್ನೂ ಭಾರತದ ಎರಡು ಪ್ರಾಚೀನತಮ ಐತಿಹಾಸಿಕ ಶಕಗಳ ನಡುವೆ ೧೩೫ ವರ್ಷಗಳ ಅಂತರವಿದ್ದು, ಅವು ಕ್ರಿ.ಪೂ. ೧ನೆಯ ಶತಮಾನಕ್ಕೆ ಮತ್ತು ಕ್ರಿ.ಶ. ೧ನೆಯ ಶತಮಾನಕ್ಕೆ ಸರಿ ಹೋಗುತ್ತವೆಂಬುದನ್ನೂ ಪರಿಗಣಿಸಿದಾಗ, ವಿಕ್ರಮ ಮತ್ತು ಶಕಗಣನೆಗಳು ಶಾಸನಗಳಿಂದ ತಿಳಿದುಬರುವ ಎರಡು ವಿದೇಶೀಯ ಶಕಗಳೊಡನೆ (ಸಿಥೊ - ಪಾರ್ಥಿಯನ್ ಹಾಗೂ ಕಾನಿಷ್ಕ ಶಕಗಳೊಡನೆ) ಅಭಿನ್ನವಾಗಿರಬಹುದೆಂದು ಭಾವಿಸುವುದು ಕೇವಲ ಸಹಜವಾಗಿದೆ"[5] ವಿಕ್ರಮ ಶಕ - ಸಿಥೊಪಾರ್ಥಿಯನ್ ಶಕ, ಶಕಾಬ್ದ ಕಾನಿಷ್ಕಶಕ ಎರಡೂ ಬೇರೆ ಎಂದು ವಾದಿಸುವವರೂ ಇದ್ದಾರೆ ; ಹಾಗೆ ವಾದಿಸುವುದು ಸುಲಭವೂ ಹೌದು. ಆದರೂ ಅವೆರಡಕ್ಕೂ,

---

4. ಕಾನಿಷ್ಕನ ಕಾಲದ ಬಗ್ಗೆ ಚರ್ಚೆಯಿದೆ ; ಕಾನಿಷ್ಕರೂ ಅನೇಕರಿದ್ದಾರೆ. ಶಕವನ್ನು ಸ್ಥಾಪಿಸಿದ ಕಾನಿಷ್ಕನ ಕಾಲ ಕ್ರಿ.ಶ. ೧ನೆಯ ಶತಮಾನವೆಂದು ನಿಶ್ಚಯಿಸಬಹುದು.
5. D.C. Sircar, Indian Epigraphy, p.248.

ಇವೆರಡಕ್ಕೂ ಅಭೇದ ಕಲ್ಪಿಸುವುದು ಹೆಚ್ಚು ತರ್ಕಬದ್ಧವೆನಿಸುತ್ತದೆ. ಶಕಾಬ್ದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಆ ಹೆಸರೇ ವಿದೇಶೀಯವಾದದ್ದು ; ಸಿಥೊ ಪಾರ್ಥಿಯನ್ ಮತ್ತು ವಿಕ್ರಮಶಕಗಳು ಭಿನ್ನವಲ್ಲ ಎಂಬುದಕ್ಕೆ ತಖ್ತ್-ಇ-ಬಹಯಿ ಶಾಸನ ಸಾಕ್ಷಿ ಎನ್ನಲಾಗಿದೆ.

ಭಾರತೀಯ ಶಾಸನಗಳ ಕಾಲನಿರೂಪಣೆಯಲ್ಲಿ ವಿಶೇಷವಾಗಿ ಬಳಕೆಗೊಂಡಿರುವ ಶಕಗಳೆಂದರೆ ಈ ವಿಕ್ರಮಶಕ ಮತ್ತು ಶಾಲಿವಾಹನ ಶಕ. (ಎರಡನೆಯದನ್ನು ಕೇವಲ 'ಶಕ' ಎಂದು ಹೆಸರಿಸಿರುವುದೂ ಉಂಟು).

## 119.3 ವಿಕ್ರಮಶಕ (ಕ್ರಿ.ಪೂ. ೫೮)

ಸಿಥೊ - ಪಾರ್ಥಿಯನ್ ಶಕ, ವಿಕ್ರಮಶಕಗಳು ಒಂದೇ ಎಂದು ಹೇಳುವುದಾದರೆ, ಈ ಶಕಕ್ಕೆ ವಿಕ್ರಮಾದಿತ್ಯನ ಹೆಸರು ಹೇಗೆ ಅಂಟಿಕೊಂಡಿತೆಂಬ ಸಮಸ್ಯೆ ಏಳುತ್ತದೆ. ಇಲ್ಲಿ ಅನೇಕ ಘಟ್ಟಗಳು ಕಂಡುಬರುತ್ತವೆ. ಈ ಶಕದಲ್ಲಿ ಕಾಲವನ್ನು ಹೇಳಿಕೊಂಡಿರುವ ಅನೇಕ ಪ್ರಾಚೀನ ಶಾಸನಗಳು ಅದಕ್ಕೆ ಯಾವ ನಿರ್ದಿಷ್ಟ ನಾಮವನ್ನೂ ಕೊಟ್ಟಿಲ್ಲ. ಅದಕ್ಕೊಂದು ಹೆಸರನ್ನು - 'ಕೃತ' ಎಂಬುದನ್ನು - ಕೊಟ್ಟಿರುವ ಪ್ರಾಚೀನ ಶಾಸನಗಳೆಂದರೆ ರಾಜಾಸ್ಥಾನದವು. ಇನ್ನೂ ಈಚಿನ ಶಾಸನಗಳಲ್ಲಿ ಆ ಶಕಕ್ಕೆ 'ಮಾಳವಾಧೀಶ'ನ ಸಂಪರ್ಕ ಕಲ್ಪಿತವಾಗಿದೆ. ಕಡೆಯ ಹಂತದಲ್ಲಿ, ಕ್ರಿ.ಶ. ೮ನೆಯ ಶತಮಾನದಲ್ಲಿ ಅದಕ್ಕೆ ವಿಕ್ರಮಾದಿತ್ಯನ ಹೆಸರು ಆರೋಪಿತವಾಯಿತು.

ವಿಕ್ರಮಶಕಕ್ಕೆ ಮೊದಲು ಕೃತಕವೆಂಬ ಹೆಸರಿದ್ದು, ಅದು ರಾಜಾಸ್ಥಾನ ಮಾಳವಗಳಲ್ಲಿ ಪ್ರಚಲಿತವಾಗಿತ್ತು. ಎಂತಲೇ ಅದಕ್ಕೆ ಮಾಳವಜನಾಂಗದ ಸಾಹಚರ್ಯವುಂಟಾಗಿ, 'ಮಾಳವಶಕ' ಎನಿಸಿಕೊಂಡು, ಇನ್ನೂ ಸ್ವಲ್ಪ ಕಾಲವಾದ ಮೇಲೆ ವಿಕ್ರಮಾದಿತ್ಯನ ಸಂಬಂಧವನ್ನದು ಪಡೆಯಿತು. ಆ ಕತೆ ಹೀಗಿದೆ : ಅಲೆಕ್ಸಾಂಡರ್ ಕ್ರಿ.ಪೂ. ೪ನೆಯ ಶತಮಾನದಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದಾಗ ಮಾಳವ ಜನಾಂಗ ಪಂಜಾಬಿನಲ್ಲಿ ಸಿಥೊ ಪಾರ್ಥಿಯನ್ನರ ಆಳಿಕೆಗೊಳಪಟ್ಟಿತ್ತು. ಅನಂತರ ಅವರು ರಾಜಾಸ್ಥಾನದತ್ತ ವಲಸೆ ಹೋಗಿ, ಮುಂದೆ ಅವಂತಿ ಆಕರಗಳಂತಹ ಪ್ರಾಚೀನ ಜನಪದಗಳಲ್ಲಿ ನೆಲಸಿದರು ; ಆ ನೆಲೆಯೇ ಮಾಳವ ಎನಿಸಿಕೊಂಡಿತು. ಹೀಗಾಗಿ, ಮಾಳವಜನಾಂಗದವರು ಕೃತ ಅಥವಾ ಸಿಥೊ-ಪಾರ್ಥಿಯನ್ ಶಕವನ್ನು ಪಂಜಾಬಿನಿಂದ ರಾಜಾಸ್ಥಾನ, ಮಾಳವಗಳಿಗೆ ಒಯ್ದರು. ಅನಂತರ ಮಾಳವ ಪ್ರಾಂತವನ್ನೆಲ್ಲ ಗುಪ್ತ ಚಕ್ರವರ್ತಿ ಚಂದ್ರಗುಪ್ತ ಇಮ್ಮಡಿ ವಿಕ್ರಮಾದಿತ್ಯ (ಕ್ರಿ.ಶ. ೩೭೬ - ೪೧೪) ಗುಪ್ತ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಅಲ್ಲಿಂದೀಚೆಗೆ ಮಾಳವದ ಉಜ್ಜಯಿನಿ ಗುಪ್ತರ ದ್ವಿತೀಯ ರಾಜಧಾನಿಯಾಯಿತು ; ಇಮ್ಮಡಿ ಚಂದ್ರಗುಪ್ತ 'ವಿಕ್ರಮಾದಿತ್ಯ ಶಕಾರಿ' ಎಂಬ ಹೆಸರಿನಿಂದ ಭಾರತೀಯ ಪರಂಪರೆಯಲ್ಲಿ ಮತ್ತು ಜನಪದ ಸಾಹಿತ್ಯದಲ್ಲಿ ಪ್ರಸಿದ್ಧನಾದ. ಇತರ ವಿಕ್ರಮಾದಿತ್ಯರ ಸಾಧನೆಗಳೂ ಅವನ ಕಥಾನಕದಲ್ಲೆ ವಿಲೀನವಾದುವು. ಹೀಗಾಗಿ, ಮಾಳವಾಧೀಶ'ನೆಂದರೆ - ಅವನ ಹೆಸರಿನೊಡನೆ ಕೃತಯುಗದ ಸಂಬಂಧವಿತ್ತು - ಇಮ್ಮಡಿ ಚಂದ್ರಗುಪ್ತನೇ ಎನ್ನುವಂತಾಯಿತು. ಇದೆಲ್ಲದರ ಪರಿಣಾಮವೆಂದರೆ, ಕೃತ ಅಥವಾ ಸಿಥೊ - ಪಾರ್ಥಿಯನ್ ಶಕವಿಕ್ರಮಶಕವಾಯಿತು. ಅದು ವಿಕ್ರಮಾದಿತ್ಯನೇ ಸ್ಥಾಪಿಸಿದ್ದು ಎಂಬ ಭಾವನೆಗೂ ಇಂಬು ದೊರೆಯಿತು. ಕ್ರಿ.ಶ. ೪ನೆಯ ಶತಮಾನಕ್ಕಿಂತ ಹಿಂದೆ ಯಾವ ವಿಕ್ರಮಾದಿತ್ಯನೂ ಇರಲಿಲ್ಲವೆಂಬುದನ್ನೂ ಕ್ರಿ.ಶ. ೮ನೆಯ ಶತಮಾನಕ್ಕೆ ಮೊದಲು ಶಾಸನಗಳಲ್ಲಿ ಯಾವ ಶಕಕ್ಕೂ ವಿಕ್ರಮಾದಿತ್ಯನ ಸಂಬಂಧವಿಲ್ಲವೆಂಬುದನ್ನೂ ಲಕ್ಷಿಸಬೇಕು.

ಈ ಶಕದ ವಿಕಾಸದಲ್ಲಿ ಉಜ್ಜಯಿನಿಪಂಥದ ಖಗೋಳಶಾಸ್ತ್ರಜ್ಞರ ಪಾತ್ರವೂ ಇದೆ. ಅವರು ವಿಕ್ರಮಶಕ, ಶಕಾಬ್ದ ಎರಡನ್ನೂ ಪುರಸ್ಕರಿಸಿದಂತೆ ತೋರುತ್ತದೆ. ಅವರಲ್ಲಿ ಕೆಲವರಿಗೆ ಕ್ರಿ.ಪೂ. ೫೮ರ ವಿಕ್ರಮಶಕದ ಬಗ್ಗೆ ಹೆಚ್ಚಿನ ಒಲವಿತ್ತು. ಅದರ ವಿದೇಶೀ ಸಾಹಚರ್ಯ ಬಹಳ ಹಿಂದೆಯೇ ಮರೆತು ಹೋಗಿ, ಅದು ಭಾರತೀಯವೆಂಬ ಭಾವನೆಯೇ ಬೇರೂರಿದ್ದಿರಬೇಕು.

## 119.4 ಶಾಲಿವಾಹನಶಕ ಅಥವಾ 'ಶಕ' (ಕ್ರಿ.ಶ. ೭೮)

ಇದು ವಾಸ್ತವವಾಗಿ ಕಾನಿಶ್ಕ ಶಕ ; ಆದರೆ ಇದಕ್ಕೆ ಕುಶಾನರ ಹೆಸರು ಬರದೆ ಶಕರ ಹೆಸರು ಬಂದದ್ದೇಕೆ, ಇತ್ತೀಚೆಗೆ ಶಾಲಿವಾಹನನ ಹೆಸರು ಇದಕ್ಕೆ ಗಂಟುಬಿದ್ದುದೆಂತು ಎಂಬ ಪ್ರಶ್ನೆಗಳನ್ನು ಬಿಡಿಸಬೇಕಾಗುತ್ತದೆ.

ಈ ಶಕಕ್ಕೆ ಮೊದಲು 'ಅಬ್ದ' (ವರ್ಷ) ವೆಂದಷ್ಟೆ ಹೆಸರಿತ್ತು. ಅದಕ್ಕೆ ಶಕರ ಸಂಬಂಧವನ್ನು ಕಲ್ಪಿಸುವ ಪ್ರಾಚೀನತಮ ಶಾಸನಗಳೆಂದರೆ ಬಾದಾಮಿಯ ಚಾಲುಕ್ಯರವು. ಕ್ರಿ.ಶ. ೬ - ೭ನೆಯ ಶತಮಾನಗಳ ಚಾಲುಕ್ಯ ಶಾಸನಗಳಲ್ಲಿ 'ಶಕವರ್ಷ', 'ಶಕನೃಪರಾಜ್ಯಾಭಿಷೇಕ ಸಂವತ್ಸರ' ಮುಂತಾದ ಮಾತುಗಳು ಬರುತ್ತವೆ. ಇಲ್ಲಿ ಶಕರೆಂದರೆ ಸುಮಾರು ಮೂರು ಶತಮಾನಗಳ ಕಾಲ ಪಶ್ಚಿಮ ಭಾರತವನ್ನಾಳಿದ ದೊರೆಗಳು. ಇಮ್ಮಡಿ ಚಂದ್ರಗುಪ್ತ ಅವರನ್ನು ಕ್ರಿ.ಶ. ೪ನೆಯ ಶತಮಾನದ ಹೊತ್ತಿಗೆ ನಿರ್ಮೂಲ ಮಾಡಿದ. ಈ ಶಕರಿಗೆ ಕ್ಷತ್ರಪ, ಮಹಾಕ್ಷತ್ರಪರೆಂದೂ ಹೆಸರು. ಶಕಸತ್ರಪರು ೧ನೆಯ ಕಾನಿಷ್ಕನ ಆಳ್ವಿಕೆಯ ಕಾಲದಲ್ಲಿ ಕುಶಾನರಿಗೆ ಅಧೀನರಾಗಿದ್ದು; ಅವನ ಮರಣಾನಂತರ ಸ್ವಲ್ಪ ಸ್ವತಂತ್ರರಾದರು ಕ್ರಿ.ಶ. ೨ನೆಯ ಶತಮಾನದ ಮಧ್ಯ ಭಾಗದ ವೇಳೆಗೆ ಕುಶಾನರ ಸಾಮ್ರಾಜ್ಯ ಕುಸಿಯತೊಡಗಿತು ; ಕ್ಷತ್ರಪದೊರೆ ರುದ್ರರಾಮ ಕುಶಾನರಿಂದ ಸಂಪೂರ್ಣ ಸ್ವತಂತ್ರನಾದ ಅವನ ವಂಶಸ್ಥರು ಕುಶಾನರ 'ಅಬ್ದ'ವನ್ನು ತಮ್ಮ ಹೆಸರಿನಲ್ಲಿ ಬಳಸತೊಡಗಿದರು. ಹೀಗಾಗಿ, ಕಾನಿಷ್ಕನ ಕುಶಾನಗಣನೆಗೆ ಶಕಾಬ್ದವೆಂದು ಹೆಸರಾಯಿತು. ಕುಶಾನರನು ಶಕರೆಂದು ಭಾರತೀಯರು ಭ್ರಮಿಸಿದ್ದೂ ಉಂಟು.

ಮಧ್ಯಕಾಲದಲ್ಲಿ ಶಕಾಬ್ದದ ವಿದೇಶೀ ಮೂಲ ಮರೆತುಹೋಗಿ, 'ಶಕ'ವೆಂಬುದು ಕಾಲಾರ್ಥದಲ್ಲಿ ಬಳಕೆಗೊಳ್ಳತೊಡಗಿತು. ಮುಂದಿನ ಬೆಳವಣಿಗೆಯೆಂದರೆ, ೧೩ನೆಯ ಶತಮಾನದಿಂದೀಚೆಗೆ ಅದು ಶಾಲಿ ವಾಹನನೊಡನೆ ಸಂಬಂಧಗೊಂಡದ್ದು. ಭಾರತೀಯ ಪರಂಪರೆಯಲ್ಲಿ ಮತ್ತು ಜನಪದಸಾಹಿತ್ಯದಲ್ಲಿ ಇವನೊಬ್ಬ ಜನಪ್ರಿಯ ವೀರಪುರುಷ. ಅವನನ್ನು ಕುರಿತ ಪರಂಪರೆ ವಿಶೇಷವಾಗಿ ಕನ್ನಡ ನಾಡಿನಲ್ಲಿ ಬೆಳೆದಂತೆ ಕಾಣುತ್ತದೆ. ಸ್ವಾರಸ್ಯವೇನೆಂದರೆ, ಶಕಾಬ್ದಕ್ಕೂ ಶಾಲಿವಾಹನನಿಗೂ ಪ್ರಪ್ರಥಮ ಸಂಬಂಧ ಕಂಡುಬರುವುದು ಸೋಮರಾಜನ ಕನ್ನಡ ಕೃತಿ 'ಉದ್ಭಟ ಕಾವ್ಯ'ದಲ್ಲಿ (ಕ್ರಿ.ಶ. ೧೨೨೨) ಹಾಗೂ ಯಾದವ ದೊರೆ ಕೃಷ್ಣನ ತಾಸ್‌ಗಾನ್ ಪಟಗಳಲ್ಲಿ (ಕ್ರಿ.ಶ. ೧೨೫೧) ಎಂದು ಹೇಳಲಾಗಿದೆ. ಕರ್ಣಾಟಕದ ರಾಜಮನೆತನಗಳ ಶಾಸನಗಳಲ್ಲಿ ಶಾಲಿವಾಹನ ಶಕದ ಉಪಯೋಗ ಹೆಚ್ಚು ; ಇಲ್ಲಿಂದ ಅದು ಭಾರತದ ನಾನಾ ಭಾಗಗಳಿಗೆ ಹಬ್ಬಿದಂತೆ ತಿಳಿದುಬರುತ್ತದೆ.

ಶಾಲಿವಾಹನವೆಂದರೆ ಶಾತವಾಹನ ದೊರೆ ಗೌತಮೀಪುತ್ರ ಶಾತಕರ್ಣಿಯೆಂದು ತೋರುತ್ತದೆ. ಅವನು ಶಕರು ಮುಂತಾದವರನ್ನು ನಾಶಗೊಳಿಸಿದನು. ಸಿಥೊ - ಪಾರ್ಥಿಯನ್ ಶಕ ಹೇಗೆ ಅಂತಿಮವಾಗಿ ವಿಕ್ರಮಾದಿತ್ಯನೊಡನೆ ಸಂಬಂಧಗೊಂಡಿತೋ ಹಾಗೆಯೇ ಕಾನಿಷ್ಕಶಕಶಾಲಿವಾಹನನೊಡನೆ ಸಂಬಂಧಗೊಂಡಿತು ; ಎರಡು ಪ್ರಕರಣಗಳಲ್ಲೂ ಸಾಮ್ಯವಿದೆ ; ವಿಕ್ರಮಾದಿತ್ಯ, ಶಾಲಿವಾಹನ ಇಬ್ಬರೂ ಭಾರತೀಯ ಐತಿಹ್ಯ ಪರಂಪರೆಯಲ್ಲಿ ಹೆಸರಾಂತ ವ್ಯಕ್ತಿಗಳು. ವಿಕ್ರಮಶಕ, ಶಾಲಿವಾಹನ ಶಕ ಎರಡೂ ಒಟ್ಟಿನಲ್ಲಿ ದೇಶಿಯ, ವಿದೇಶೀಯ ಅಂಶಗಳ ಮಿಶ್ರಣಗಳೆನ್ನಬಹುದು ; ಉಸಿರಿನಲ್ಲಿ ಅವು ವಿದೇಶೀಯ, ಹೆಸರಿನಲ್ಲಿ ಭಾರತೀಯ.

ವಿಕ್ರಮಶಕ, ಶಾಲಿವಾಹನ ಶಕಗಳು ಇಂದಿಗೂ ಭರತಖಂಡದಲ್ಲಿ ಬಳಕೆಯಲ್ಲಿವೆ ; ಅಂತೆಯೇ ಕೊಲ್ಲಂ ಶಕ, ನೇವಾರಿ ಶಕ, ಲಕ್ಷ್ಮಣಸೇನ ಶಕ, ಕ್ರಿಸ್ತಶಕ ಇತ್ಯಾದಿಗಳೂ ಪ್ರಚಲಿತ. ಈಗ ಬಳಕೆಯಲ್ಲಿಲ್ಲದ ಗತ ಶಕಗಳು : ಕಲಚುರಿ ಶಕ, ಗುಪ್ತ ಅಥವಾ ವಲಭಿ ಶಕ, ಗಂಗ ಶಕ, ಹರ್ಷಶಕ, ಭೌಮಾಕರಶಕ, ಚಾಲುಕ್ಯ ವಿಕ್ರಮಶಕ (ಕ್ರಿ.ಶ. ೧೦೭೬), ಸಿಂಹಶಕ, ಇಲಾಹಿಶಕ, ಶಿವಾಜಿ ಪಟ್ಟಾಭಿಷೇಕ ಶಕ ಇತ್ಯಾದಿ.

## 119.5 ಶಾಸನಗಳ ಭಾಷೆ : ವಿದೇಶೀಯ ಭಾಷೆಗಳು

'ಭರತಖಂಡದ ಶಾಸನಗಳಲ್ಲಿ ಪ್ರಯುಕ್ತವಾಗಿರುವ ಭಾಷೆಗಳನ್ನು ವಿದೇಶಿಯ ಮತ್ತು ಭಾರತೀಯ ಎಂದು ಸ್ಥೂಲವಾಗಿ ಎರಡೂ ವರ್ಗ ಮಾಡಬಹುದು. ಭಾರತೀಯ ಶಾಸನಗಳಲ್ಲಿ ಪ್ರಾಚೀನವಾಗಿ ಬಳಕೆಗೊಂಡಿರುವ ಭಾಷೆಯೆಂದರೆ ಅರಾಮೆಯಿಕ್. ವಾಯುವ್ಯ ಪ್ರಾಂತದಲ್ಲಿ (ಈಗಿನ ಪಶ್ಚಿಮ ಪಾಕಿಸ್ತಾನ) ಸಿಕ್ಕಿದ ಈ ಭಾಷೆಯ ಶಾಸನಗಳು ಸು.ಕ್ರಿ.ಪೂ. ೩ನೆಯ ಶತಮಾನಕ್ಕೆ ಸೇರಿದವು. ವಾಯುವ್ಯ ಭಾರತವನ್ನಾಳುತ್ತಿದ್ದ ಇಂಡೋ - ಗ್ರೀಕರ ಮತ್ತು ಇತರ ವಿದೇಶೀ ದೊರೆಗಳ ನಾಣ್ಯಗಳ ಮೇಲೆ ಗ್ರೀಕ್ ಬರಹವಿದೆ. ರೋಮನ್ ಆಲೇಖವನ್ನುಳ್ಳ ನಾಣ್ಯಗಳೂ ಭಾರತದಲ್ಲಿ ಸಿಕ್ಕಿವೆ. ಗ್ರೀಕ್ ಮತ್ತು ಅರಾಮೆಯಿಕ್‌ಗಳಲ್ಲಿ ಬರೆಯಲಾದ ಅಶೋಕನ ದ್ವಿಭಾಷಾ ಶಾಸನವೊಂದು ಈಚೆಗೆ ಅಫ್ಘಾನಿಸ್ತಾನದಲ್ಲಿ ದೊರಕಿತು. ಮುಸ್ಲಿಂ ದೊರೆಗಳ ಬಹುಪಾಲು ಶಾಸನಗಳ ಭಾಷೆ ಅರ್‍ಯಾಬಿಕ್ ಮತ್ತು ಪರ್ಷಿಯನ್. ಟಿಬೆಟನ್ ಬರ್ಮೀ ಮುಂತಾದ ಭಾಷೆಗಳ ಶಾಸನಗಳೂ ಭಾರತದಲ್ಲಿ ಉಪಲಬ್ಧವಾಗಿವೆ.

## 119.6 ಭಾರತೀಯ ಭಾಷೆಗಳು : ಪ್ರಾಕೃತ ಮತ್ತು ಸಂಸ್ಕೃತ

ಭಾರತೀಯ ಮೂಲದ ರಾಜರ ಪ್ರಾಚೀನತಮ ಶಾಸನಗಳಿರುವುದು ಪ್ರಾಕೃತದಲ್ಲಿ. ವಾಸ್ತವಾಗಿ, ಭರತಖಂಡದ ಶಾಸನಭಾಷೆ ಮೂಲತಃ ಪ್ರಾಕೃತವೇ ಆಗಿತ್ತು : ಶಾಸನಗಳು ಸಾಮಾಜಿಕ ಪ್ರಕಟಣೆಗಳಾದುದರಿಂದ, ಪ್ರಾಕೃತ ಜನಭಾಷೆಯಾಗಿದ್ದುದರಿಂದ ಈ ಸಂಗತಿ ಸಹಜವೇ. ಸಂಸ್ಕೃತ ಉತ್ತರಭಾರತದ ಶಾಸನಗಳಲ್ಲಿ ಮೊದಲು ಕಾಣಸಿಕೊಳ್ಳುವುದು ಕ್ರಿ.ಪೂ. ಸು. ೧ನೆಯ ಶತಮಾನದ ಉತ್ತರಾರ್ಧದಲ್ಲಿ. ಅನಂತರಅದು ದೇಶಾದ್ಯಂತ ವ್ಯಾಪಿಸಿ ಪ್ರಾಕೃತವನ್ನು ಹಿಂದೊತ್ತಿತು. ಉತ್ತರ ಭಾರತದ ಶಾಸನಗಳಲ್ಲಿ ಸಂಸ್ಕೃತ ಕ್ರಿ.ಶ. ೩ನೆಯ ಶತಮಾನದ ಹೊತ್ತಿಗಾಗಲೆ ಪಟ್ಟಭದ್ರವಾಗಿತ್ತು : ಆದರೆ ದಕ್ಷಿಣ ಭಾರತದಲ್ಲಿ ಅದು ಪ್ರಾಕೃತದ ಸ್ಥಾನವನ್ನು ಸಂಪೂರ್ಣವಾಗಿ ಆಕ್ರಮಿಸಲು ಇನ್ನೂ ಒಂದು ಶತಮಾನ ಬೇಕಾಯಿತು. ಅಂತೂ ಕ್ರಿ.ಶ. ೪ನೆಯ ಶತಮಾನದ ಅಂತ್ಯದ ವೇಳೆಗೆ ಭರತ ಖಂಡದ ಶಾಸನ ಕ್ಷೇತ್ರಗಳಲ್ಲಿ ಪ್ರಾಕೃತದ ಬದಲು ಸಂಸ್ಕೃತ ನೆಲೆಗೊಂಡುದನ್ನು ನೋಡುತ್ತೇವೆ.

ಅಶೋಕನ ಸ್ತಂಭಶಾಸನಗಳು ಮತ್ತು ಪ್ರಸ್ತರ ಶಾಸನಗಳು ಪ್ರಾಕೃತದ ಬೇರೆ ಬೇರೆ ಪ್ರಕಾರಗಳಲ್ಲಿವೆಯೆಂಬುದನ್ನು ನೆನೆಯಬೇಕು. ಆದರೆ ವಾಯುವ್ಯ ಭಾರತದಲ್ಲಿ ಸಿಕ್ಕಿರುವ ಅವನ ಶಾಸನಗಳ ಭಾಷೆ ಸಂಸ್ಕೃತಕ್ಕೆ ಹೆಚ್ಚು ನಿಕಟವಾಗಿದೆ.

ವಾಯುವ್ಯ ಭಾರತದ ಸಿಥೊ - ಪಾರ್ಥಿಯನ್ ಮತ್ತು ಕುಶಾನ ದೊರೆಗಳ ಕೆಲವು ಶಾಸನಗಳ ಭಾಷೆ ಪ್ರಾಕೃತ ಸಂಸ್ಕೃತಗಳ ಮಿಶ್ರಣ. ಶಕ ಜನಾಂಗದ ವಿದೇಶೀಯ ದೊರೆಗಳ ಕೆಲವು ಶಾಸನಗಳು ಸಂಸ್ಕೃತದಲ್ಲಿದ್ದು, ಪ್ರಾಚೀನತಮ ಸಂಸ್ಕೃತ ಶಾಸನಗಳ ಸಾಲಿನಲ್ಲಿ ನಿಲ್ಲುತ್ತವೆ. ಉದಾಹರಣೆಗೆ, ಶಕ ಶೊಡಾಸನ ಕಾಲದ ಮದುರಾ ಶಾಸನ (ಕ್ರಿ.ಶ. ೧ನೆಯ ಶತಮಾನದ ಪೂರ್ವಾರ್ಧ)ದಲ್ಲಿ ಅನೇಕ ಪ್ರೌಢ ಸಂಸ್ಕೃತ ಪದ್ಯಗಳಿವೆ ; ಶಕ ರುದ್ರದಾಮನ ಜುನಾಗಢ್ ಶಾಸನವೂ (ಕ್ರಿ.ಶ. ೧೫೦) ಪ್ರೌಢವಾದ ಸಂಸ್ಕೃತ ಗದ್ಯವನ್ನು ಪ್ರದರ್ಶಿಸುತ್ತದೆ.[6] ಇದರಿಂದ ನಿರ್ಧರಿಸಬಹುದಾದ ಸಂಗತಿಯೇನೆಂದರೆ : ವಾಯುವ್ಯ ಭರತ ವರ್ಷದ ವಿದೇಶೀಯ ದೊರೆಗಳ ಆಸ್ಥಾನದಲ್ಲಿ ಸಂಸ್ಕೃತಕ್ಕೆ ಆಶ್ರಯ ಪೋಷಣೆಗಳು ಸಿಕ್ಕಿ, ಅದು ಜನಪ್ರಿಯವಾಗಿ ದೇಶದ ಎಲ್ಲೆಡೆ ಹರಡಿರಬೇಕು.[7] ಕ್ರಿ.ಶ. ೧ - ೨ ನೆಯ ಶ.ದ ಶಕ

6. ಕ್ರಿ.ಪೂ. ೧ನೆಯ ಶ.ದ ಉತ್ತರಾರ್ಧದಲ್ಲಿದ್ದ ಭಾರತೀಯ ರಾಜರ ಕೆಲವು ಶಾಸನಗಳು ಸಂಸ್ಕೃತದಲ್ಲಿದ್ದರೂ ಪ್ರಾಕೃತದ ಪ್ರಭಾವಕ್ಕೊಳಗಾಗಿವೆ; ಉದಾಹರಣೆಗೆ ಧನದೇವನ ಆಯೋಧ್ಯಾ ಶಾಸನ.

7. ಜನಭಾಷೆಯಾದ ಪ್ರಾಕೃತದ ಬದಲು ಪಂಡಿತ ಭಾಷೆಯಾದ ಸಂಸ್ಕೃತವನ್ನು ಮೊದಲು ಶಾಸನಭಾಷೆಯಾಗಿ ಜಾರಿಗೆ ತಂದವರು ಈ ವಿದೇಶೀಯರೇ; ಅನಂತರ ಭಾರತೀಯ ದೊರೆಗಳೂ ಸಂಸ್ಕೃತವನ್ನು ಅವಲಂಭಿಸಿದರು. ಆಧುನಿಕ ಕಾಲದಲ್ಲಿ, ಆಂಗ್ಲರಿಂದ ಜಾರಿಗೆ ಬಂದ ಇಂಗ್ಲಿಷ್ ಮಾಧ್ಯಮ ಹೇಗೆ ದೇಶ ಭಾಷೆಗಳನ್ನು ತುಳಿದು ತನ್ನ ಸರ್ವಾಧಿಕಾರವನ್ನು ಸ್ಥಾಪಿಸಿಕೊಂಡಿತೆಂಬ ಸಂಗತಿಯನ್ನು ಇಲ್ಲಿ ಹೋಲಿಕೆಯಾಗಿ ಸೂಚಿಸಬಹುದು. ಜನತೆಯನ್ನು ಅವರಿಗೆ ಅರ್ಥವಾಗದ ಭಾಷೆಯ ಮೂಲಕ ಅಧೀನದಲ್ಲಿಟ್ಟುಕೊಂಡು ಆಳುವುದು ಸುಲಭ !

ದೊರೆಗಳ ಶಾಸನಗಳಲ್ಲಿ ಸಂಸ್ಕೃತ ಪ್ರಯುಕ್ತವಾಗಿದ್ದರೂ, ಅವರ ಕೆಲವು ಪಶ್ಚಿಮ ಭಾರತೀಯ ಶಾಸನಗಳಲ್ಲಿ ಸಂಸ್ಕೃತ ಪ್ರಾಕೃತಗಳ ಮಿಶ್ರಣವುಂಟು.

ರಾಜಾಸ್ಥಾನಗಳಲ್ಲಿ ಸಂಸ್ಕೃತ ಗಳಿಸಿದ ಜನಪ್ರಿಯತೆಗೆ ವೈಯಾಕರಣರ ಪ್ರಭಾವವೂ ಕಾರಣವೆಂದು, ಹೇಳಲಾಗಿದೆ. ಅವರಲ್ಲಿ ಮುಖ್ಯನಾದವನು ವಾಯುವ್ಯ ಭಾರತದ ಗಾಂಧಾರದವನಾದ ಪಾಣಿನಿ (ಕ್ರಿ.ಪೂ. ೫ನೆಯ ಶತಮಾನದ). ಆದರೆ ಭಾರತೀಯ ದೊರೆಗಳ ಆಸ್ಥಾನಗಳಲ್ಲಿ ಈ ವೈಯಾಕರಣರ ಪ್ರಭಾವ ಮಂದಗತಿಯಲ್ಲಿ ಕೆಲಸ ಮಾಡುತ್ತಿತ್ತು ; ಪಾಣಿನಿಯ 'ಅಷ್ಟಾಧ್ಯಾಯಿ'ಯ ಪ್ರಭಾವ ಸಂಪೂರ್ಣವಾಗಿ ಊರ್ಜಿತವಾದುದು ಕ್ರಿ.ಶ. ೩ನೆಯ ಶ.ದ ಹೊತ್ತಿಗೆ ಎನ್ನಬಹುದು.

ಕ್ರಿ.ಶ. ೨ನೆಯ ಶ.ದ ಪೂರ್ವಭಾರತದ ಶಾಸನಗಳನ್ನು ತೆಗೆದುಕೊಂಡರೆ, ಆರ್ಯವಿಶಾಖಮಿತ್ರನ ಕ್ರಿ.ಶ. ೧೮೬ರ ಕೈಲನ್ ಶಾಸನ ಪ್ರಾಕೃತ ಸಂಸ್ಕೃತಗಳ ಮಿಶ್ರಣವನ್ನೊಳಗೊಂಡಿದೆ ; ೨ - ೩ನೆಯ ಶತಮಾನಗಳಲ್ಲಿದ್ದ ಕೌಸಾಂಬಿಯ ರಾಜರ ದಾಖಲೆಗಳ ಭಾಷೆ ಪ್ರಾಕೃತದಿಂದ ಪ್ರಭಾವಿತವಾದ ಸಂಸ್ಕೃತ. ಕ್ರಿ.ಶ. ೩ನೆಯ ಶ.ದ. ಅಂತ್ಯದಲ್ಲಿದ್ದಿರಬಹುದಾದ ಶೀಲವರ್ಮನ ಜಲ್ಲಿತ್ಪುರ್ ಇಟ್ಟಿಗೆ ಶಾಸನಗಳು ಸಂಸ್ಕೃತ ಪದ್ಯ ರೂಪದಲ್ಲಿವೆ. ಪಾಟಲಿಪುತ್ರದ ಗುಪ್ತರ ಅಭ್ಯುದಯದ ಹೊತ್ತಿಗೆ ಎಂದರೆ ಕ್ರಿ.ಶ. ೪ನೆಯ ಶತಮಾನ - ಸಂಸ್ಕೃತ ಉತ್ತರ ಭಾರತದ ಶಾಸನರಂಗದಲ್ಲಿ ಸುಸ್ಥಾಪಿತವಾಗಿತ್ತು. ಗುಪ್ತರು ಸಂಸ್ಕೃತ ಸಾಹಿತ್ಯದ ಮಹಾಪೋಷಕರೆನಿಸಿಕೊಂಡಿರುವುದನ್ನೂ ಸ್ಮರಿಸಬಹುದು.

ದಕ್ಷಿಣ ಭಾರತಕ್ಕೆ ಬಂದರೆ, ಇಲ್ಲಿನ ಪ್ರಾಚೀನತಮ ಸಂಸ್ಕೃತ ಶಾಸನಗಳು ನಾಗಾರ್ಜುನಕೊಂಡದಲ್ಲಿ ಸಿಕ್ಕಿದ ಇಕ್ಷ್ವಾಕು ದೊರೆ ಎಹುವುಲ ಶಾಂತ ಮೂಲನವು (ಕ್ರಿ.ಶ. ೩ನೆಯ ಶ.ದ ಅಂತ್ಯ ಮತ್ತು ೪ನೆಯ ಶ.ದ ಪೂರ್ವಾರ್ಧ). ಆದರೆ ದಕ್ಷಿಣ ಭಾರತದ ರಾಜರ ಆಸ್ಥಾನಗಳಲ್ಲಿ ಪ್ರಾಕೃತ ಕ್ರಿ.ಶ. ೪ನೆಯ ಶತಮಾನದ ಕಡೆಯವರೆಗೂ ಜನಪ್ರಿಯವಾಗಿ ಮುಂದುವರಿಯಿತೆಂಬುದಕ್ಕೆ ಆಧಾರಗಳಿವೆ. ಆಂಧ್ರದ ವೆಂಗೀಯ ಶಾಲಂಕಾಯನರ ಶಾಸನಗಳಲ್ಲೂ ಇದೇ ಸಂಗತಿ ಕಂಡುಬರುತ್ತದೆ. ಅವರ ಪ್ರಾಚೀನತಮ ಶಾಸನಗಳು (ಕ್ರಿ.ಶ. ೪ನೆಯ ಶತಮಾನ) ಪ್ರಾಕೃತದಲ್ಲಿವೆ ; ಆದರೆ ೫ ನೆಯ ಶತಮಾನದವು ಸಂಸ್ಕೃತದಲ್ಲಿವೆ. ದಕ್ಷಿಣದಲ್ಲಿ ತೀರ ಇತ್ತೀಚಿನ ಪ್ರಾಕೃತ ಶಾಸನವೆಂದರೆ ಕರ್ನಾಟಕದ ಕದಂಬ ದೊರೆ ಮಯೂರಶರ್ಮನ ಚಂದ್ರವಳ್ಳಿ ಶಾಸನ (ಕ್ರಿ.ಶ. ೪ನೆಯ ಶ.ದ ಮಧ್ಯಭಾಗ). ಆದರೆ ಅವನ ಮರಿಮಗ ಕಾಕುತ್ಸ್ಥ ವರ್ಮನ ಹಲಸಿ ಪಟಗಳು (ಕ್ರಿ.ಶ. ೫ನೆಯ ಶತಮಾನ) ಸಂಸ್ಕೃತದಲ್ಲಿವೆ.

ಕಂಚಿಯ ಪಲ್ಲವರ ಶಾಸನಗಳದೂ ಇದೇ ಕತೆ. ಶಿವಸ್ಕಂದವರ್ಮದ ಮೈದವೋಲು ಮತ್ತು ಹಿರೇಹಡಗಲಿ ಪಟಗಳ (ಕ್ರಿ.ಶ. ೪ನೆಯ ಶ.ದ. ಮಧ್ಯಭಾಗ) ಭಾಷೆ ಪ್ರಾಕೃತವಾದರೆ, ಅವುಗಳ ಮುದ್ರೆಯ ಆಲೇಖ ಸಂಸ್ಕೃತದಲ್ಲಿದೆ. ಹಿರೇಹಡಗಲಿ ಶಾಸನದ ಅಂತ್ಯದಲ್ಲಿರುವ 'ಮಂಗಳ'ವೂ ಸಂಸ್ಕೃತದಲ್ಲಿದೆ. ಕ್ರಿ.ಶ. ೫ - ೭ನೆಯ ಶತಮಾನಗಳ ಪಲ್ಲವರ ದಾಖಲೆಗಳ ಭಾಷೆ ಸಂಸ್ಕೃತ.

ಒಟ್ಟಿನ ಮೇಲೆ, ದಕ್ಷಿಣ ಭಾರತದ ಶಾಸನ ಕ್ಷೇತ್ರದಲ್ಲಿ ಸಂಸ್ಕೃತ ಪ್ರಾಕೃತವನ್ನು ಓಡಿಸಿದ್ದು ಕ್ರಿ.ಶ. ೪ನೆಯ ಶ.ದ ಉತ್ತರಾರ್ಧದಲ್ಲಿ ಎಂದು ಹೇಳಬಹುದು.

ಖಾರವೇಲನ ಹಾಥಿಗುಂಫ ಶಾಸನ (ಕ್ರಿ.ಪೂ. ೧ನೆಯ ಶ.ದ ಅಂತ್ಯ), ಪುಳುಮಾವಿಯ ನಾಸಿಕ್ ಶಾಸನ (ಕ್ರಿ.ಶ. ೨ನೆಯ ಶ.ದ ಮಧ್ಯಭಾಗ) ಮುಂತಾದ ಪ್ರಾಚೀನ ಪ್ರಾಕೃತ ಶಾಸನಗಳೂ ಅನೇಕ ಸಂಸ್ಕೃತ ಶಾಸನಗಳಂತೆ ಕಾವ್ಯಾತ್ಮಕವಾಗಿವೆಯೆಂಬ ಅಂಶವನ್ನು ಲಕ್ಷಿಸಬಹುದು. ಪಿಪ್ರಹ್ವಕಳಶ ಶಾಸನ ಒಂದು ಪ್ರಾಕೃತ ಪದ್ಯವನ್ನೊಳಗೊಂಡಿದೆಯೆಂದು ಸರ್ಕಾರರ ಊಹೆ.

ಕೆಲವು ಮಧ್ಯಕಾಲೀನ ಶಾಸನಗಳೂ ಪ್ರಾಕೃತದಲ್ಲಿರುವುದು ಕಂಡುಬಂದಿದೆ ; ಉದಾಹರಣೆಗೆ, ಪ್ರತೀಹಾರ ಕಕ್ಕುಕನ ಕ್ರಿ.ಶ. ೮೬೨ರ ಘಟಿಯಾಲ ಶಾಸನ. ಕೆಲವು ಮಧ್ಯಕಾಲೀನ ಸಂಸ್ಕೃತ ಶಾಸನಗಳಲ್ಲೂ ಪ್ರಾಕೃತದ ಬಳಕೆಯನ್ನು ಕಾಣಬಹುದು. ಧಾರ್ ಶಾಸನಗಳಲ್ಲಿ 'ಕೂರ್ಮಶತಕ'ವೆಂಬ ಪ್ರಾಕೃತ ಕಾವ್ಯವುಂಟು.

## 119.7 ಕನ್ನಡ

ಕನ್ನಡದಲ್ಲಿ ಇದುವರೆಗೆ ಸಿಕ್ಕಿರುವ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ ಹಲ್ಮಿಡಿ ಶಾಸನ.[8] ; ಇದರ ಕಾಲ ಕ್ರಿ.ಶ. ಸು. ೪೫೦ (ಅದು ಇನ್ನೂ ಈಚಿನದು ಎನ್ನುವವರೂ ಉಂಟು). ಚಾಲುಕ್ಯ ಮಂಗಳೇಶನ (ಕ್ರಿ.ಶ. ೫೯೮ - ೬೧೦) ಬಾದಾಮಿ ಗುಹಾಶಾಸನವೊಂದು ಕನ್ನಡದಲ್ಲಿದೆ. ಐಹೊಳೆ ಶಾಸನದ ಕಡೆಯಲ್ಲಿರುವ ಅನುಮೋದನೆ ಕನ್ನಡದಲ್ಲಿದ್ದರೂ, ಅದು ಮೂಲ ದಾಖಲೆಗಿಂತ ಈಚಿನದು ಎನ್ನಲಾಗಿದೆ. ಬಾದಾಮಿ ಚಾಲುಕ್ಯರ ತಾಮ್ರಪಟಗಳೆಲ್ಲ ಸಂಸ್ಕೃತದಲ್ಲಿದ್ದರೂ, ಅವರ ಕಾಲದ ಶಿಲಾಶಾಸನಗಳು ಕನ್ನಡ ಭಾಷೆಯಲ್ಲಿವೆ. ಚಾಲುಕ್ಯ ವಿನಯಾದಿತ್ಯನ ಶಾಸನವೊಂದರ (ಕ್ರಿ.ಶ. ೬೯೯) ಪೀಠಿಕಾ ಭಾಗ ಸಂಸ್ಕೃತದಲ್ಲಿದ್ದು, ದಾನದ ವಿವರಗಳನ್ನು ಹೇಳುವ ಮುಂದಿನ ಭಾಗ ಕನ್ನಡದಲ್ಲಿದೆ. ಆ ದಾಖಲೆಯಲ್ಲಿ ಕನ್ನಡವನ್ನು 'ಪ್ರಾಕೃತ ಭಾಷಾ' ಎಂದು ಕರೆದಿರುವುದು ಕುತೂಹಲಕರವಾದ ಅಂಶ.

ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚುರಿಗಳು ಮುಂತಾದ ಈಚಿನ ರಾಜವಂಶಗಳ ಬಹುಪಾಲು ತಾಮ್ರಪಟಗಳು ಸಂಸ್ಕೃತದಲ್ಲಿ, ಅವರ ಕಾಲದ ಶಿಲಾಶಾಸನಗಳು ಕನ್ನಡದಲ್ಲಿ ಕಂಡುಬರುತ್ತವೆ. ರಾಷ್ಟ್ರಕೂಡರ ಕಾಲದ ತಾಮ್ರಪಟಗಳಲ್ಲಿ ಕೆಲವು ನಿದರ್ಶನಕ್ಕೆ ೩ನೆಯ ಗೋವಿಂದನ ಕ್ರಿ.ಶ. ೮೦೪ರ ಪಟ - ಕನ್ನಡದಲ್ಲಿವೆ. ೪ನೆಯ ಗೋವಿಂದನ ಕಾಲದ ಕೆಳಸ ಶಾಸನ (ಕ್ರಿ.ಶ. ೯೩೦) ದಲ್ಲಿ ಪ್ರೌಢವಾದ ಕನ್ನಡ ಪದ್ಯಗಳಿವೆ. ವಿಜಯನಗರದ ದೊರೆಗಳ ಶಾಸನಗಳು ಸಂಸ್ಕೃತ, ಕನ್ನಡ ಎರಡು ಭಾಷೆಗಳಲ್ಲೂ ಉಂಟು. ಇತ್ತೀಚಿನ ಕೆಳದಿಯ ರಾಜರು ಮತ್ತು ಮೈಸೂರರಸರು ತಮ್ಮ ದಾಖಲೆಗಳಲ್ಲಿ ಕನ್ನಡವನ್ನೆ ಬಳಸಿದ್ದಾರೆ.

ಕನ್ನಡ ನಾಡಿನ ಖಾಸಗಿ ಶಿಲಾಶಾಸನಗಳು ಮಾತ್ರ ವಿಶೇಷತಃ ಕನ್ನಡ ಭಾಷೆಯಲ್ಲೆ ಉತ್ಕೀರ್ಣವಾಗಿವೆ[9] ; ಅವುಗಳಲ್ಲಿ ಸಂಸ್ಕೃತವೂ ಭಾಗಶಃ ಬರುವುದುಂಟು.

ಶಾಸನಗಳಲ್ಲಿ ಬರುವ ಇತರ ಭಾರತೀಯ - ದ್ರಾವಿಡ ಹಾಗೂ ಇಂಡೋ ಆರ್ಯನ್ - ಭಾಷೆಗಳ ವಿಷಯ ಇಲ್ಲಿ ಅಪ್ರಕೃತ.[10]

## 119.8 ಕೂಟ ಶಾಸನಗಳು

ಕೂಟ ಶಾಸನಗಳೆಂದರೆ ಕೃತಕ ಶಾಸನಗಳು, ಖೋಟಾ ಶಾಸನಗಳು (fogeries). ಈಗಿನ ಕಾಲದಲ್ಲಿ ಹೇಗೊ ಹಾಗೆ ಹಿಂದಿನ ಕಾಲದಲ್ಲೂ ವಂಚಕರು ಇದ್ದೇ ಇದ್ದರು. ಅಂಥ ಜನ, ತಮ್ಮ ಪೂರ್ವಿಕರಿಗೆ ಯಾರೋ ಒಬ್ಬ ಯಾವುದೋ ಕಾಲದಲ್ಲಿ ಯಾವುದೋ ಭೂಮಿಯನ್ನು ದತ್ತಿಯಾಗಿ ಕೊಟ್ಟಂತೆ ಕೃತಕ ದಾಖಲೆಗಳನ್ನು ಸೃಷ್ಟಿಸಿ, ತನ್ಮೂಲಕ ಆ ಭೂಮಿಯನ್ನು ಮೋಸದಿಂದ ಪಡೆದುಕೊಳ್ಳುತ್ತಿದ್ದರು. ಶಿಲಾಶಾಸನಗಳು ಕೂಟ ಶಾಸನಗಳಾಗಿರುವ ಸಂಭವ ಕಡಿಮೆ ; ಏಕೆಂದರೆ ಅವು ಬಹಿರಂಗವಾಗಿ, ಸಾರ್ವಜನಿಕ ಸ್ಥಳಗಳಲ್ಲಿರುತ್ತಿದ್ದ ದಾಖಲೆಗಳು. ಆದರೆ ತಾಮ್ರಪಟಗಳು ಕೂಟ ಶಾಸನಗಳಾಗಿರುವ ಸಾಧ್ಯತೆ ಹೆಚ್ಚು ; ಅವು ವೈಯಕ್ತಿಕ ವಶದಲ್ಲಿರುತ್ತಿದ್ದುದರಿಂದ, ಒಂದು ವೇಳೆ ಕೃತಕವಾಗಿದ್ದರೂ ಸಲಭವಾಗಿ ಸಂದೇಹಾಸ್ಪದವಾಗುತ್ತಿರಲಿಲ್ಲ. ಅಂತೂ ಭರತ ಖಂಡದ

8. ಕನ್ನಡ ಭಾಷೆ ಸಾಹಿತ್ಯಗಳ ಪ್ರಾಚೀನತೆಗೆ ಸಂಬಂಧಿಸಿದಂತೆ ಶಾಸನಾಧಾರಗಳನ್ನು ಕುರಿತು ಎಂ. ಗೋವಿಂದ ಪೈ, ರಂ. ಶ್ರೀ ಮುಗಳಿ ಮುಂತಾದ ವಿದ್ವಾಂಸರ ವಾದವಿವಾದಗಳು ಕನ್ನಡ ಸಾಹಿತ್ಯ ಚರಿತ್ರೆಯ ವಿದ್ಯಾರ್ಥಿಗಳಿಗೆ ಸುಪರಿಚಿತವಾಗಿವೆ.

9. ತಾಮ್ರಪಟಗಳು ರಾಜಶಾಸನಗಳಾದ್ದರಿಂದ, ಅವು ರಾಜಭಾಷೆಯಾಗಿದ್ದ ಸಂಸ್ಕೃತದಲ್ಲಿ ಹೆಚ್ಚಾಗಿರುವುದೂ, ಶಿಲಾಶಾಸನಗಳು - ಅದರಲ್ಲೂ ಖಾಸಗಿ ಶಾಸನಗಳು - ಜನಸಾಮಾನ್ಯರಿಗೆ ಸಂಬಂಧಿಸಿದವಾದ್ದರಿಂದ, ಕನ್ನಡದಲ್ಲಿರುವುದೂ ಸ್ವಾಭಾವಿಕ.

10. ಈ ಬಗ್ಗೆ ಸರ್ಕಾರರ ಗ್ರಂಥದಲ್ಲಿ ವಿಪುಲವಾದ ವಿವರಗಳಿವೆ.

ಎಲ್ಲ ಭಾಗಗಳಲ್ಲೂ, ಎಲ್ಲ ಕಾಲಗಳಲ್ಲೂ ಕೃತಕ ತಾಮ್ರಪಟಗಳು ಹುಟ್ಟಿಕೊಂಡಿರುವುದು ಶಾಸನ ಶಾಸ್ತ್ರಜ್ಞರಿಗೆ ಸುಪರಿಚಿತವಾದ ಸಂಗತಿ. ಅದರಲ್ಲೂ ಕರ್ನಾಟಕದ ದಕ್ಷಿಣ ಭಾಗದಲ್ಲಿ ಇಂತಹ ಕೂಟ ಶಾಸನಗಳ ಬೆಳೆ ಹುಲುಸೆಂದು ಹೇಳಲಾಗಿದೆ.[11]

ಕೂಟ ಶಾಸನಗಳ ವಿಷಯ ಹಿಂದಿನ ಸ್ಮೃತಿ ಗ್ರಂಥಗಳಲ್ಲೆ ಪ್ರಸ್ತಾಪಗೊಂಡಿದೆ ; ಅವು ಕೂಟ ಶಾಸನಗಳನ್ನು ಪತ್ತೆ ಮಾಡುವ ವಿಧಾನವನ್ನು ಉಲ್ಲೇಖಿಸುವುದು ಮಾತ್ರವಲ್ಲದೆ, ಅಂಥ ಶಾಸನಗಳನ್ನು ಸೃಷ್ಟಿಸುವವರಿಗೆ ಮರಣದಂಡನೆ ವಿಧಿಸಬೇಕೆಂದೂ ಹೇಳುತ್ತವೆ.

ಕೃತಕ ಶಾಸನಗಳನ್ನು ಅಪ್ಪಟ ಶಾಸನಗಳಿಂದ ಪ್ರತ್ಯೇಕಿಸುವಲ್ಲಿ ಅವಲಂಬಿಸಬಹುದಾದ ಕೆಲವು ತತ್ವಗಳನ್ನು ವಿದ್ವಾಂಸರು ಸೂಚಿಸಿದ್ದಾರೆ[12] : (೧) ಲಿಪಿಸ್ವರೂಪ : ಲಿಪಿಸ್ವರೂಪದಿಂದ ಶಾಸನದ ಕಾಲವನ್ನು ನಿರ್ಧರಿಸಬಹುದು. (೨) ಭಾಷಾಸ್ವರೂಪ : ಯಾವುದೇ ಶಾಸನದಲ್ಲಿ ಉಕ್ತವಾದ ಕಾಲದ ಭಾಷಾವಸ್ಥೆ ಆ ಶಾಸನದಲ್ಲಿಯೇ ಎಂಬುದನು ನೋಡಬೇಕು ; ಇಲ್ಲದಿದ್ದಲ್ಲಿ ಶಾಸನದ ನೈಜತೆ ಸಂಶಯಾಸ್ಪದ. (೩) ನಿರ್ದಿಷ್ಟವಾದ ಕಾಲ : 'ತಿಥಿನಿರ್ದೇಶದಲ್ಲಿ ಅಸಂಬದ್ಧವಾದ ವ್ಯತ್ಯಾಸವು ಕಂಡುಬಂದರೆ ಸಂಶಯಕ್ಕೆ ಎಡೆಯುಂಟು.' ಮೊದಮೊದಲು ಶಾಸನಗಳಲ್ಲಿ ಮಾಸ, ತಿಥಿ, ವಾರ, ನಕ್ಷತ್ರಗಳನ್ನು ಹೇಳುತ್ತಿರಲಿಲ್ಲ ; ಆದ್ದರಿಂದ ಯಾವುದೇ ಶಾಸನದಲ್ಲಿ ಶಕವರ್ಷವನ್ನು ಮಾಸ, ತಿಥಿ, ವಾರ ನಕ್ಷತ್ರಗಳೊಡನೆ ಉಲ್ಲೇಖಿಸಿದ್ದರೆ ಅದು ಈಚಿನ ಕೂಟ ಶಾಸನವೆಂದು ಹೇಳಬೇಕಾಗುತ್ತದೆ. (೪) ಐತಿಹಾಸಿಕ ಪ್ರತಿಕೂಲಗಳು : "ಶಾಸನದ ಕಾಲದಲ್ಲಿ ಜರುಗಲಶಕ್ಯವಾದ ಸಂಗತಿಗಳನ್ನು ಒಳಗೊಂಡಿದ್ದರೆ, ಅಂಥ ಶಾಸನವು ಕೃತಕವೆಂದು ತಿಳಿಯಬೇಕು."

ಕೃತಕ ತಾಮ್ರಪಟಗಳಲ್ಲಿ ಅತಿ ಪ್ರಾಚೀನವಾದುದೆಂದರೆ ಸಮುದ್ರ ಗುಪ್ತನ (ಕ್ರಿ.ಶ. ಸು. ೩೩೫ - ೭೬) ನಳಂದ ಮತ್ತು ಗಯಾ ಪಟಗಳು. ಕರ್ನಾಟಕದ ಗಂಗರ ತಾಮ್ರಪಟಗಳೆಲ್ಲ ಕೃತಕವೆಂದು ಫ್ಲೀಟರು ವಾದಿಸಿದರೆ, ರೈಸರದು ತದ್ವಿರುದ್ಧವಾದ ನಿಲುವು. ಗಂಗರ ಪಟಗಳಲ್ಲಿ ಕೆಲವು ಕೃತಕವೆಂದೂ ಕೆಲವು ಸಾಚಾ ಎಂದೂ ಈಚಿನ ವಿದ್ವಾಂಸರು ನಿರ್ಣಯಿಸಿದ್ದಾರೆ.

ಬಿಹಾರದ ಸಸರಂ ಹತ್ತಿರದ ಕ್ರಿ.ಶ. ೧೧೬೯ರ ಬಂಡೆಶಾಸನವೊಂದರಲ್ಲಿ ಒಂದು ಸ್ವಾರಸ್ಯಕರ ಸಂಗತಿ ಉಕ್ತವಾಗಿದೆ : ಸ್ವರ್ಣಹಲದ ಬ್ರಾಹ್ಮಣರು ಕನೂಜಿನ ಗಾಹಡವಾಲ ದೊರೆ ವಿಜಯಚಂದ್ರನ (ಕ್ರಿ.ಶ.ಸು. ೧೧೫೦-೭೦) ಅಧಿಕಾರಿಗೆ ಲಂಚಕೊಟ್ಟು, ಕೂಟಶಾಸನವೊಂದನ್ನು ತಯಾರಿಸಿ, ಎರಡು ಗ್ರಾಮಗಳನ್ನು ಲಪಟಾಯಿಸಿದರಂತೆ ; ಆ ಕೃತಕ ದಾಖಲೆಯ ಬಗ್ಗೆ ಎಚ್ಚರಿಕೆಯಿಂದಿರಲು ಸ್ಥಳೀಯ ರಾಜ ಪ್ರತಾಪಧವಳ ತನ್ನ ವಂಶದ ಮುಂದಿನ ದೊರೆಗಳಿಗೆ ಸೂಚಿಸಿದ್ದಾನೆ. ವಿಜಯಚಂದ್ರನ ಹೆಸರಿನಲ್ಲಿರುವ ಪ್ರಸ್ತುತ ತಾಮ್ರಪಟ ಈಚೆಗೆ ಸುನಹರ (ಸ್ವರ್ಣಹಲ)ದ ಬ್ರಾಹ್ಮಣವಂಶವೊಂದರ ವಶದಲ್ಲಿದ್ದುದು ಪತ್ತೆಯಾಯಿತು. ಕೃತಕ ಶಾಸನವೊಂದರ ಮೂಲಕ ಯಾರೋ ಗಿಟ್ಟಿಸಿಕೊಂಡಿದ್ದ ಒಂದು ಗ್ರಾಮದ ಹಿಡುವಳಿಯನ್ನು ಅವರಿಂದ ತಪ್ಪಿಸಿ, ಅದೇ ಗ್ರಾಮವನ್ನು ಬೇರೆಯವರಿಗೆ ಅಧಿಕೃತವಾಗಿ ಕೊಡುವುದಕ್ಕಾಗಿ ಹೊರಡಿಸಿದ್ದು ಹರ್ಷನ ಕ್ರಿ.ಶ. ೬೩೦-೩೧ರ ಮಧುಬನ್ ತಾಮ್ರಪಟ.

ಭೂದಾನವನ್ನು ದಕ್ಕಿಸಿಕೊಳ್ಳುವ ಉದ್ದೇಶದಿಂದ ಶಿಲಾಶಾಸನಗಳನ್ನು ಕೃತಕವಾಗಿ ಸೃಜಿಸುವುದು ಸಾಧ್ಯವಿರದಿದ್ದರೂ, ಬೇರೆ ಉದ್ದೇಶಗಳಿಂದ ಹಾಗೆ ಮಾಡಿರುವುದಕ್ಕೆ ನಿದರ್ಶನಗಳಿವೆ.

ಕೆಲವರ್ಷಗಳ ಹಿಂದೆ, ಖರೋಷ್ಠಿ ಲಿಪಿಯ ಶಾಸನವನ್ನೊಳಗೊಂಡ ಕಲ್ಲಿನ ಬೋಗುಣಿಯೊಂದು ಸಿಕ್ಕಿತು. ಅದರಲ್ಲಿರುವ ಖರೋಷ್ಠಿ ಲಿಪಿ ಹಾಗೂ ಭಾಷೆಯ ಅಸಮರ್ಪಕ ಸ್ವರೂಪವನ್ನು ನೋಡಿದರೆ, ಅದು ಕೃತಕ ದಾಖಲೆಯೆಂಬುದು ಸ್ಪಷ್ಟವಾಗುತ್ತದೆ. ಭಾರತೀಯ ವಸ್ತು ಸಂಗ್ರಹಾಲಯಗಳಲ್ಲಿ ಖರೋಷ್ಠಿ ಶಾಸನಗಳಿಗೆ ವಿಶೇಷವಾದ ಬೇಡಿಕೆ ಇರುವುದರಿಂದ - ಹಿಂದೆ ಖರೋಷ್ಠಿ ಭಾಷೆ ಬಳಕೆಯಲ್ಲಿದ್ದ ಭಾಗ ಈಗ ಪಾಕಿಸ್ತಾನಕ್ಕೆ ಸೇರಿದೆ - ಹಣದ ಆಸೆಗಾಗಿ ಇಂಥ ಕೃತಕ ದಾಖಲೆ ಸೃಷ್ಟಿವಾಯಿತೆಂಬುದರಲ್ಲಿ ಸಂದೇಹವಿಲ್ಲ.

---

11. ಡಿ.ಸಿ. ಸರ್ಕಾರ್, ಪೂರ್ವೋಕ್ತ ಗ್ರಂಥ, ಪು. ೪೩೪.

12. ಆರ್.ಎಸ್. ಪಂಚಮುಖಿ, ಕರ್ನಾಟಕದ ಶಾಸನಗಳು, ಪು. ೧೭.

ಅಶೋಕನ ರುಮ್ಮಿಂದ್ಯೆ ಸ್ತಂಭ ಶಾಸನದ ಕೃತಕ ಪ್ರತಿಕೃತಿಯೊಂದರ ವಿಷಯದಲ್ಲೂ ಇಂಥದೇ ಹಿನ್ನೆಲೆ ಕಂಡುಬರುತ್ತದೆ. ೧೯೨೮ರಲ್ಲಿ ಒರಿಸ್ಸದ ಕಪಿಲೇಶ್ವರದಲ್ಲಿ ಬ್ರಾಹ್ಮೀ ಲಿಪಿಯ ಒಂದು ಶಾಸನವನ್ನೊಳಗೊಂಡ ಶಿಲಾ ಪಟ್ಟಿಕೆಯೊಂದು ಬೀರೇಂದ್ರನಾಥರೇ ಎಂಬುವರಿಗೆ ಸಿಕ್ಕಿತು. ಅದನ್ನು ಓದಿದ ಹರಣಚಂದ್ರ ಚಕ್ಲದಾರ್ ಅವರು, ಅದು ರುಮ್ಮಿಂದ್ಯೆ ಶಾಸನದ ಪಾಠವನ್ನೇ ಒಳಗೊಂಡಿರುವುದಾಗಿ ಸಾರಿದರು. ಅಶೋಕನ ಅನೇಕ ಶಾಸನಗಳು ವಿವಿಧ ಆವೃತ್ತಿಗಳಲ್ಲಿ ದೇಶಾದ್ಯಂತ ಚದುರಿ ಹೋಗಿರುವುದರಿಂದ, ಈ ಕಪಿಲೇಶ್ವರ ಶಾಸನ ರುಮ್ಮಿಂದ್ಯೆ ದಾಖಲೆಯ ನಿಜವಾದ ಪ್ರತಿಕೃತಿಯೆಂದೇ ಅವರು ಭಾವಿಸಿದರು (ವಾಸ್ತವವಾಗಿ ರುಮ್ಮಿಂದ್ಯೆ ಶಾಸನದ ಪ್ರತಿಕೃತಿ ಬೇರೆ ಕಡೆ ಇರಬೇಕಾದ ಅಗತ್ಯವೇ ಇಲ್ಲ; ಅದೊಂದು ವಿಶಿಷ್ಟ ಶಾಸನ. ಈ ಅಂಶವನ್ನು ಚಕ್ಲದಾರ್ ಗಮನಿಸಲಿಲ್ಲ. ಇದರಿಂದ, ಬುದ್ಧನ ಜನ್ಮಸ್ಥಾನ ಒರಿಸ್ಸವೆಂಬ ವಾದಕ್ಕೂ ಅವಕಾಶವಾಯಿತು. ಆದರೆ ಈ ಕಪಿಲೇಶ್ವರ ಶಾಸನವೊಂದು ಕೂಟ ಶಾಸನವೆಂದೂ ಅದರ ಸೃಷ್ಟಿ ಈಚಿನದೆಂದೂ ಹೇಳಬೇಕಾಗುತ್ತದೆ.

ಬ್ರಾಹ್ಮಿ, ಖರೋಷ್ಠಿಗಳಲ್ಲಿರುವ ಪ್ರಾಚೀನ ಶಾಸನಗಳನ್ನು ಲಿಪಿ ಶಾಸ್ತ್ರಜ್ಞರಲ್ಲದವರು ತೃಪ್ತಿಕರವಾಗಿ ನಕಲು ಮಾಡುವುದು ಸಾಧ್ಯವಿಲ್ಲ ; ಏಕೆಂದರೆ ಅವುಗಳಲ್ಲಿ ಅಕ್ಷರಗಳು ಸ್ಫುಟವಾಗಿರುವುದಿಲ್ಲ. ಆದರೆ ಅಶೋಕನ ರುಮ್ಮಿಂದ್ಯೆ ಸ್ತಂಭ ಶಾಸನವೊಂದು ಅಪವಾದ ; ಅದರಲ್ಲಿ ಎಲ್ಲ ಅಕ್ಷರಗಳೂ ಸ್ಫುಟವಾಗಿದ್ದು, ಅದರ ನಕಲುಗಳು ಅನೇಕ ಪಠ್ಯಪುಸ್ತಕಗಳಲ್ಲಿ ಸಿಗುತ್ತಿದ್ದವು. ಹೀಗಾಗಿ, ಕಪಿಲೇಶ್ವರ ದಾಖಲೆಯ ನಿರ್ಮಾಣಕ್ಕೆ ಆಸ್ಪದವಾಯಿತು; ಅದರ ಕಾಲ ೧೯೨೮ಕ್ಕಿಂತ ಹಿಂದೆ ಹೋಗುವುದಿಲ್ಲ ಎನ್ನಲಾಗಿದೆ.

ಖರೋಷ್ಠಿ ಲಿಪಿಯಲ್ಲಿರುವ ಅಶೋಕನ ಶಾಸನವೊಂದು ಕಲ್ಲಿನ ಬೋಗುಣಿಯ ಮೇಲೆ ಲಭ್ಯವಾಗಿದೆಯೆಂದೂ ಮುಂಬಯಿನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ಅದನ್ನು ಸಂಪಾದಿಸಿದೆಯೆಂದೂ ೧೯೬೩ರ ಜೂನ್ ೧೯ರ ಪತ್ರಿಕೆಗಳಲ್ಲಿ ಸುದ್ದಿಯೊಂದು ಪ್ರಕಟವಾಯಿತೆಂಬ ಸಂಗತಿ ಕುತೂಹಲಕಾರಿಯಾಗಿದೆ. ವಾಸ್ತವವಾಗಿ ಅದೊಂದು ಕೂಟಶಾಸನ. ಅಶೋಕ ಕಲ್ಲಿನ ಬೋಗುಣಿಗಳ ಮೇಲೆ ಶಾಸನ ಕೆತ್ತಿಸಿದನೆಂಬುದಕ್ಕೆ ಯಾವ ಆಧಾರಗಳೂ ಇಲ್ಲ. ಬ್ರಾಹ್ಮಿಗಿಂತಲೂ ಖರೋಷ್ಠಿಯ ಬರವಣಿಗೆ ಕಠಿಣವಾದುದೆಂದು ಹೇಳುತ್ತಾರೆ. ಹೀಗಿದ್ದೂ 'ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ದಾಖಲೆ' ಸಿದ್ಧವಾದದ್ದು ಭಾರತ ಸರ್ಕಾರದ ಪ್ರಕಟಣೆಯಾದ 'Inscriptions of Ashoka' ಎಂಬ ಗ್ರಂಥದ ಸಹಾಯದಿಂದ ಎಂದು ಹೇಳಲಾಗಿದೆ. ಆ ಪುಸ್ತಕದಲ್ಲಿ ಕೊಟ್ಟಿರುವ ಅಶೋಕನ ಏಳನೆಯ ಬಂಡೆ ಶಾಸನದ ಷಾಬಾಸ್‌ಗಾಡಿ ಆವೃತ್ತಿಯ ಪ್ರತಿಕೃತಿಯನ್ನು ಆ ದಾಖಲೆಯಲ್ಲಿ ನಕಲು ಮಾಡಲಾಗಿದೆಯಂತೆ. ಅದು ೧೯೫೭-೧೯೬೩ರ ನಡುವಣ ಅವಧಿಯಲ್ಲಿ ನಿರ್ಮಿತವಾಗಿರಬೇಕು.

ಒರಿಸ್ಸದ ಅನೇಕ ಪ್ರಾಚೀನ ಅಥವಾ ಮಧ್ಯಕಾಲೀನ ವಿಗ್ರಹಗಳ ಮೇಲಿನ ಶಾಸನಗಳು ಇತ್ತೀಚೆಗೆ ಕೆತ್ತಿದವೆಂದೂ ಮೂಲತಃ ಅವು ಇರಲಿಲ್ಲವೆಂದೂ ಹೇಳುತ್ತಾರೆ. ಶಾಸನಯುಕ್ತ ವಿಗ್ರಹಗಳು ಬರಿಯ ವಿಗ್ರಹಗಳಿಗಿಂತ ಆರ್ಥಿಕವಾಗಿ ಲಾಭದಾಯಕವೆಂಬುದು ಸಹಜ.

## 119.9 ಸಾರಾಂಶ

ಈವರೆವಿಗೂ ಈ ಘಟಕದಲ್ಲಿ ಶಾಸನಗಳಲ್ಲಿ ವಿಷಯಾನುಪೂರ್ವಿ ತಾತ್ತ್ವಿಕ ವಿಚಾರಗಳಿಗೆ ಸಂಬಂಧಿಸಿದಂತೆ ಕಾಲಗಣನೆ, ಶಕವಿಚಾರ, ಕೂಟ ಶಾಸನಗಳ ಬಗೆಗೆ ತಿಳಿದುಕೊಂಡಿರಿ. ಮುಂದಿನ ಘಟಕದಲ್ಲಿ ವಿವಿಧ ಬಗೆಯ ಶಾಸನಗಳ ಬಗ್ಗೆ ತಿಳಿದುಕೊಳ್ಳುವಿರಿ.

## ಕೋರ್ಸ್ - X : ಕನ್ನಡ ಶಾಸನಗಳ ಅಧ್ಯಯನ (ತತ್ತ್ವ ಮತ್ತು ಆಯ್ದ ಪಠ್ಯ ಶಾಸನಗಳು)

## ಬ್ಲಾಕ್ - 30 : ಶಾಸನ ಅಧ್ಯಯನ ತತ್ವಗಳು

# ಘಟಕ - 120

# ವೀರಗಲ್ಲು, ಮಾಸ್ತಿಗಲ್ಲು, ನಿಸಿಧಿಗಲ್ಲು

**ರಚನೆ**


120.0 ಉದ್ದೇಶ

120.1 ಪ್ರಸ್ತಾವನೆ

120.2 ವೀರಗಲ್ಲು

120.3 ಮಾಸ್ತಿಗಲ್ಲು

120.4 ನಿಸಿಧಿಗಲ್ಲು

120.5 ಸಾರಾಂಶ

120.6 ಅಭ್ಯಾಸಕ್ಕೆ ಪ್ರಶ್ನೆಗಳು

120.7 ಅಭ್ಯಾಸಕ್ಕೆ ಗ್ರಂಥಗಳು

## 120.0 ಉದ್ದೇಶ

ಶಾಸನ ಅಧ್ಯಯನಕ್ಕೆ ಪೂರಕವಾದ ತಾತ್ತ್ವಿಕ ವಿಚಾರಗಳಿಗೆ ಸಂಬಂಧಿಸಿದಂತೆ ಈ ಮುಂದಿನ ಅಂಶಗಳನ್ನು ಮನಗಾಣುವಿರಿ:

- ವೀರಗಲ್ಲು ಎಂದರೇನು? ಶಾಸನ ಬಗೆಗಳಲ್ಲಿ ಅದರ ಮಹತ್ತ್ವವೇನೆಂಬುದನ್ನು ತಿಳಿಯುವಿರಿ.
- ಮಾಸ್ತಿಗಲ್ಲು ಎಂದರೇನೆಂದು ತಿಳಿಯುವಿರಿ.
- ನಿಸಿಧಿ ಗಲ್ಲುಗಳ ಪ್ರಾಮುಖ್ಯವೇನೆಂದು ತಿಳಿಯುವಿರಿ.

## 120.1 ಪ್ರಸ್ತಾವನೆ

ಇದು ಕೋರ್ಸ್ - Xರ 30ನೇ ಬ್ಲಾಕ್‌ನ 120 ಘಟಕ. ಇದರಲ್ಲಿ ಶಾಸನಗಳ ಪ್ರಮುಖ ಬಗೆಗಳಾದ ವೀರಗಲ್ಲು, ಮಾಸ್ತಿಗಲ್ಲು ಮತ್ತು ನಿಸಿಧಿಗಲ್ಲುಗಳ ವಿಚಾರಗಳನ್ನು ನಿರೂಪಿಸಲಾಗಿದೆ. ಡಾ. ಚಿದಾನಂದ ಮೂರ್ತಿ ಅವರ ಕೃಪೆಯಾಚನೆಯೊಂದಿಗೆ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಸಂಶೋಧನಾ ಗ್ರಂಥದಿಂದ ವಿಷಯ ಸಂಗ್ರಹಿಸಲಾಗಿದೆ.

## 120.2 ವೀರಗಲ್ಲುಗಳು

ವೀರಗಲ್ಲುಗಳು ಕನ್ನಡ ನಾಡಿನ ಶಾಸನಗಳ ಒಂದು ವೈಶಿಷ್ಟ್ಯ. ಇವುಗಳ ಜೊತೆಗೆ ಮಾಸ್ತಿ ಕಲ್ಲುಗಳನ್ನೂ ಸೇರಿಸಬಹುದು. ಮಾಸ್ತಿ ಅಥವಾ ಮಹಾಸತಿ ಕಲ್ಲುಗಳೆಂದರೆ ಮೃತ್ಯುವಶನಾದ ಪತಿಯನ್ನು ಹಿಂಬಾಲಿಸಿ ಸಹಗಮನ ಮಾಡಿದ ಮಹಾಸತಿಯ ಸ್ಮಾರಕಕ್ಕಾಗಿ ನಿಲ್ಲಿಸಿದವುಗಳು. ಊರಿನ ಹಿತಕ್ಕಾಗಿಯೋ ದುಷ್ಟಶಿಕ್ಷಣಕ್ಕಾಗಿಯೋ, ಸ್ವಾಮಿನಿಷ್ಠೆಯಿಂದಲೋ ಹೋರಾಡಿ ಮಡಿದ ವೀರಪುರುಷರ ಸ್ಮಾರಕಕ್ಕಾಗಿ ರಚಿತವಾದ ಶಾಸನವನ್ನುಳ್ಳವು ವೀರಗಲ್ಲುಗಳು. ಈ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಒಂದು ವಿಶಿಷ್ಟ ಬಗೆಯ ಸ್ಮಾರಕಗಳು.

ಕನ್ನಡ ಜನ ಸಾಮಾನ್ಯವಾಗಿ ಮೊದಲಿನಿಂದಲೂ ಶೂರರಾಗಿದ್ದರೆಂಬುದಕ್ಕೆ ನಾಡಿನ ಇತಿಹಾಸವೇ ಸ್ಪಷ್ಟವಾದ ಸಾಕ್ಷಿಯಾಗಿದೆ. ಇಡೀ ದಕ್ಷಿಣ ಭಾರತವನ್ನೆಲ್ಲಾ ಒಂದು ಆಡಳಿತದ ಕೆಳಗೆ ತಂದ ಕೀರ್ತಿ ಕೆಲವು ಕನ್ನಡ ರಾಜರದು. ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರದ ಅರಸುಗಳ ಚರಿತ್ರೆಯಲ್ಲಿ ಅದನ್ನು ಹಿಂದೆಯೇ ನೋಡಿದ್ದೇವೆ. ಕನ್ನಡ ರಾಜರುಗಳ ಆ ಮಹತ್ಸಾಧನೆಗೆ ಬೆಂಬಲವಾಗಿ ನಿಂತ ಜನತೆಯ ಪರಾಕ್ರಮವೂ ಅದಕ್ಕೆ ಕಾರಣವೆಂಬುದನ್ನು ನಾವು ಮರೆಯುವಂತಿಲ್ಲ. ಚಕ್ರವರ್ತಿಗಳ ಮತ್ತು ಮಂಡಲಾಧೀಶ್ವರರ ಪರಾಕ್ರಮದ ವರ್ಣನೆ ಶಾಸನಗಳಲ್ಲಿ ವಿಪುಲವಾಗಿ ಬರುತ್ತದೆ. ಆದರೆ ಅಷ್ಟು ಮಾತ್ರದಿಂದಲೇ ಅವು ತೃಪ್ತವಾಗದೆ ಊರೊಡೆಯರು, ಊರಗಾವುಂಡರು, ನಾಯಕರು ಮತ್ತು ಇನ್ನೂ ಕೆಳಗಿನ ಸಾಮಾನ್ಯ ಜನರ ಪರಾಕ್ರಮಕ್ಕೆ ಗಮನವನ್ನಿತ್ತು ಅವುಗಳನ್ನು ವರ್ಣಿಸಿದೆ ಸ್ಮಾರಕಗಳನ್ನು ನಿಲ್ಲಿಸಿವೆ. ನಿಸ್ವಾರ್ಥ ಸಾಧನೆಯ ಪರಾಕ್ರಮಕ್ಕೆ ಕೊಟ್ಟ ಪುರಸ್ಕಾರವನ್ನು ಇದು ತೋರಿಸುತ್ತದೆ.

ಕನ್ನಡದಲ್ಲಿ ಅತ್ಯಂತ ಪ್ರಾಚೀನವಾದ ಹಲ್ಮಿಡಿ ಶಾಸನವು ಪರಾಕ್ರಮವನ್ನು ಪುರಸ್ಕರಿಸುವುದಕ್ಕಾಗಿಯೇ ಹುಟ್ಟಿದುದು. ಇದು ಸತ್ತವರ ಸ್ಮಾರಕಕ್ಕಾಗಿ ನೆಟ್ಟ ವೀರಗಲ್ಲು; ಆದರೆ ಹೋರಾಡಿ ಗೆದ್ದವರ ಪುರಸ್ಕಾರಕ್ಕಾಗಿ ಕೊಟ್ಟ ದಾನಪತ್ರ. ಅದರ ಪೂರ್ಣ ಪಾಠ ಹೀಗಿದೆ[1] :

**ಜಯತಿ ಶ್ರೀ ಪರಿಷ್ವಙ್ಗ [ಮ್ಯಾನತಿ] ರಚ್ಯುತಃ |**
**ದಾನ ವಾಕ್ಷ್ಣೋರ್ಯಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ ||**

1. ಶಾಸನ ಸಾಹಿತ್ಯ ಸಂಚಯ



80

ನಮಃ, ಶ್ರೀಮತ್ಕದಂಬಪನ್ತ್ಯಾಗ ಸಂಪನ್ನನ್ಕಲಭೋರ [ನಾ] ಅರಿ ಕಕುಸ್ಥಭಟ್ಟೋರನಾಳೆ, ನರಿದಾವಿಳೆ ನಾಡುಳ್ ಮೃಗೇಶ ನಾಗೇನ್ದ್ರಾ ಭೀಳಭ್ರ್ಟಟ ಹರಫ್ಟೋರ್, ಶ್ರೀ ಮೃಗೇಶ ನಾಗಹ್ವಯರಿರ್ವರಾ ಬಟರಿ ಕುಲಾಮಲವ್ಯೋಮತಾರಾಧಿನಾಥನ್ನಳಪಗಣ ಪಶುಪತಿಮಾ ದಕ್ಷಿಣಾಪಥ ಬಹುಶತ ಹವನಾಹದುಳ್ ಪಶುಪ್ರಧಾನ ಶೌರ್ಯೋದ್ಯಮಭರಿತೋ [ನ್ದಾನ] ಪಶುಪತಿಯೆನ್ದು ಪೊಗಟೆಪೊಟ್ಟಣ ಪಶುಪತಿ ನಾಮಧೇಯ ನಾಸರಕ್ಕೆಲ್ಲ ಭಟರಿಯಾ ಪ್ರೇಮಾಲಯ ಸಂತನ್ಗೆ ಸೇನ್ದ್ರಕ ಬಣೋಭಯ ದೇಶದಾ ವೀರಾಪುರುಷ ಸಮಕ್ಷದೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನಾ ವಿಜಅರಸನೆ ಬಾಳ್ಗಟ್ಟು ಪಲ್ಮಡಿಉಂ ಮೂಟಿವಳ್ಳಿಉಂ ಕೊಟ್ಟಾರ್. ಬಟಾರಿಕುಲದೊನಳು ಕದಮ್ಬನಳ್ದೋನ್ ಮಹಾಪಾತಕನ್. ಇರ್ವ್ವರುಂ ನಟ್ಟಬಿಜ್ಗದರ್ ವಿಚಾರಸರುಂ ಪಲ್ಮಡಿಗೆ ಕುಱುಮ್ಬಿಡಿವಿಟ್ಟಾರ್. ಅದಾನಳಿವೊನ್ಗೆ ಮಹಾಪಾತಕಮ್. ಸ್ವಸ್ತಿ. ಭಟ್ಟರ್ಗ್ಗಿೀಗಟ್ದೆ ಒಡ್ಡಲಿ ಅಪತ್ತೊನ್ದಿ ವಿಟ್ಟಾರಕರ."

ಕನ್ನಡ ಭಾಷೆಯಲ್ಲಿ ಇದುವರೆಗೆ ನಮಗೆ ಸಿಕ್ಕಿರುವ ಮೊಟ್ಟಮೊದಲನೆಯ ಗದ್ಯದ ಮಾದರಿ ಇದು. ಈ ದೃಷ್ಟಿಯಿಂದ ಇದಕ್ಕೆ ವಿಶೇಷ ಮಹತ್ವವಿದೆ. ಅಲ್ಲದೆ ಇಲ್ಲಿ ಬರುವ ರಾಜರೂಗಳ ಸೂಚನೆಯೂ ರಾಜಕೀಯ ಇತಿಹಾಸಕ್ಕೆ ಮಹತ್ವವಾದುದು. ಆ ಅಂಶಗಳನ್ನು ಇಲ್ಲಿ ಗಮನಿಸದೆ ಪ್ರಕೃತ ವಿಷಯವನ್ನಷ್ಟೇ ಗಮನಿಸಿ ಈ ಶಾಸನವನ್ನು ನೋಡಿದರೆ, ಇಲ್ಲಿ ಉಕ್ತವಾಗಿರುವ ಮುಖ್ಯ ವಿಷಯವಿಷ್ಟು : ಕದಂಬ ಕಕುಸ್ಥನ ಆಳ್ವಿಕೆಯಲ್ಲಿ ನರಿದಾವಿಳೆನಾಡನ್ನು ಮೃಗೇಂದ್ರ ಮತ್ತು ನಾಗ ಎನ್ನುವವರು ಆಳುತ್ತಿದ್ದರು. ಆಗ ಎಲ್ಲ ಭಟಾರಿಯ ಮಗ ವಿಜಅರಸ ಎಂಬುವನು ಸೇಂದ್ರಕ ಮತ್ತು ಬಣ (ಬಾಣ) ಈ ಎರಡು ವಂಶದ ವೀರರ ಸಮ್ಮುಖದಲ್ಲಿ ಕೇಕಯ ಮತ್ತು ಪಲ್ಲವರೊಡನೆ ಯುದ್ಧಮಾಡಿ ಗೆದ್ದನು. ಅದಕ್ಕೆ ಮೆಚ್ಚಿ ಮೃಗೇಂದ್ರ ಮತ್ತು ನಾಗ ಎಂಬುವರು ಪಲ್ಮಿಡಿಯನ್ನೂ ಮತ್ತು ಮೂಟಿವಳ್ಳಿಯನ್ನೂ ಅವನಿಗೆ ದಾನವಾಗಿ ಕೊಟ್ಟರು - ಎಂಬುದು ಈ ಶಾಸನದ ಸಾರ. ವೀರರಿಗೆ ರಾಜರು ತೋರಿಸುವ ಪುರಸ್ಕಾರದ ಪರಂಪರೆ ಬಹು ಪ್ರಾಚೀನವಾದುದೆಂಬುದು ಇದರಿಂದ ವಿದಿತವಾಗುತ್ತದೆ. ಪ್ರಾರಂಭದ ಸಂಸ್ಕೃತ ಶ್ಲೋಕವೂ ಗಮನಾರ್ಹವಾದುದಾಗಿದೆ. ದುಷ್ಟ ನಿಗ್ರಹ, ಶಿಷ್ಟಾನುಗ್ರಹಗಳು ರಾಜಧರ್ಮವೆಂಬ ಧ್ವನಿ ಆ ಶ್ಲೋಕದಲ್ಲಿದೆ.

ಇನ್ನು ವೀರಗಲ್ಲುಗಳಿಗೆ ಬಂದರೆ, ಅವು ಒಂದು ವಿಶಿಷ್ಟವಾದ ರೂಪದಲ್ಲಿ ಬೆಳೆದು ಬಂದಿರುವುದು ಕಾಣುತ್ತದೆ. ಕಲ್ಲಿನ ಮೇಲಿರುವ ಶಿಲ್ಪವೂ ಪರಾಕ್ರಮದ ಸಂಕೇತದಂತೆ ತೋರುತ್ತದೆ. ಹೋರಾಟ ನಡೆದು ಅದರಲ್ಲಿ ನಾಯಕನು ಬಿದ್ದಂತೆಯೂ, ಸ್ವರ್ಗದಿಂದ ಅಪ್ಸರೆಯರು ಬಂದು, ಅವನನ್ನು ವಿಮಾನದಲ್ಲಿಟ್ಟು ಕೊಂಡೊಯ್ಯುತ್ತಿರುವಂತೆಯೂ ಇರುವ ಶಿಲ್ಪದಿಂದ ವೀರಗಲ್ಲುಗಳು ಅಲಂಕೃತವಾಗಿರುತ್ತವೆ ; ಅನಂತರ ಅದರ ಕೆಳಗೆ ಶಾಸನ. ಇದು ಸಾಮಾನ್ಯವಾಗಿ ವೀರಗಲ್ಲುಗಳ ಸ್ಥೂಲರೂಪ. ಸಾಮಾನ್ಯ ಗದ್ಯದ ನೇರ ನಿರೂಪಣೆಯಲ್ಲಿರುವ ವೀರಗಲ್ಲುಗಳೇ ಹೆಚ್ಚು. ಇವುಗಳಲ್ಲಿ ಚಕ್ರವರ್ತಿಯ ಅಥವಾ ಸಾಮಂತರಾಜನ ನಾಮನಿರ್ದೇಶನ ಮತ್ತು ಶಾಸನ ರಚಿತವಾದ ಕಾಲ ಮೊದಲುತ್ತವೆ. ಅನಂತರ ವೀರಗಲ್ಲಿನ ನಾಯಕ ಎದುರಿಸಬೇಕಾಗಿ ಬಂದ ಹೋರಾಟದ ಸ್ವರೂಪ ಮತ್ತು ಅವನು ಅದನ್ನು ಎದುರಿಸಿ "ಸುರಲೋಕಪ್ರಾಪ್ತನಾದ" ಬಗೆ - ಇವುಗಳ ನಿರೂಪಣೆ ಬರುತ್ತದೆ. ಕೊನೆಯಲ್ಲಿ ಸಾಮಾನ್ಯವಾಗಿ ಈ ಶ್ಲೋಕದಿಂದ ಮುಕ್ತಾಯವಾಗುತ್ತದೆ ವೀರಗಲ್ಲುಗಳು :

> "ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ |
> ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ ||"

- ಜಯಶಾಲಿಯಾದರೆ ಲಕ್ಷ್ಮಿ ಲಭಿಸುತ್ತಾಳೆ. ಮೃತನಾದರೆ ಸುರಾಂಗನೆಯರು ನಿಮಿಷದಲ್ಲಿ ಅಳಿಯುವ ಈ ದೇಹಕ್ಕೆ ಕಾಳೆಗದಲ್ಲಿ ಅಳಿವೆನೆಂಬ ಕೊರಗೇಕೆ ? - ಇದು ಕನ್ನಡ ನಾಡಿನ ವೀರರ ಮಂತ್ರವಾಗಿತ್ತು. ಅಂತಹ ವೀರರ ವೀರಮರಣವನ್ನು ಘೋಷಿಸುತ್ತವೆ ವೀರಗಲ್ಲುಗಳು.

ಧರ್ಮಕ್ಕಾಗಿ ದೇಹವನ್ನೊಪ್ಪಿಸಬೇಕಾಗಿ ಬರುವ ಪ್ರಸಂಗಗಳು ಪ್ರಾಚೀನ ಜನ ಜೀವನದಲ್ಲಿ ಹಲವಾರು ರೂಪದಲ್ಲಿ ತಲೆದೋರುತ್ತಿದ್ದುವು. ಕಳ್ಳರು ಇದ್ದಕ್ಕಿದ್ದಂತೆಯೇ ಊರಿನ ಮೇಲೆ ಧಾಳಿಮಾಡಿ ಗೋವುಗಳನ್ನು ಅಟ್ಟಿಸಿಕೊಂಡು ಹೋಗುವುದು - ಇವುಗಳಲ್ಲಿ ಬಹಳ ಸಾಮಾನ್ಯವಾದುದಾಗಿತ್ತೆಂದು ತೋರುತ್ತದೆ. ಸೆರೆಹಿಡಿದ ತುರುಗಳನ್ನು ಮರಳಿಸುವ ಸಾಹಸದಲ್ಲಿ ಸತ್ತ ವೀರರನ್ನು ಕುರಿತ ಸ್ಮಾರಕದ ಕಲ್ಲುಗಳು ಹೇರಳವಾಗಿ ದೊರೆಯುತ್ತವೆ. ಉದಾಹರಣೆಗೆ :

**"ಸ್ವಸ್ತಿ ಶ್ರೀ ಚಾಲುಕ್ಯ ವಿಕ್ರಮ ಕಾಲದ ೫೧ ಪರಾಭವ ಸಂವಚ್ಛರದ ಜೇಷ್ಠ ಸುದ್ಧ ೯, ವಡವಾರದಂದು ಶ್ರೀಮತು ಮಹಾಗ್ರಾಮ ತಿಳಿವಳಿಯವುಱುವ ಮನೆಯ ಮಹಾರಾಜನವರು ಕೊಂಡು ಎಡುಗ ಸಾಸಿರ್ವರ ಬೆಸದಿ ಗಡ ಕೊಡ್ಡಳಿದ ಪಡೆ ಮುಟ್ಟಿ ಗಂಡ ಮಾರ್ಕೋಳ್ವರ ಗಂಡ, ಬಂಟ ಸಾಸಿರ್ವರ ಬಂಟ, ಮಾಸಳೆಯ ಬಮ್ಮಂ ತುಱುವ ಮಗುಟ್ಚಿ ಪಱಿಗಕೊಂಡು ಸುರಲೋಕ ಪ್ರಾಪ್ತನಾದನಾತನ್ಮಕ್ಕಳುಗೆ ಸಾಸಿರ್ವರು ಬಳಿಯಂ ಕೊಟ್ಟಗರ್ದೆ"**[2].

- ಇಲ್ಲಿ ಮಾಸಳೆಯ ಬಮ್ಮ ಎನ್ನುವನು ತುರುಗಳನ್ನು ಹಿಂದಿರುಗಿಸುವ ಸಾಹಸದಲ್ಲಿ ಮಡಿದುದರ ನಿರೂಪಣೆಯಿದೆ. ತಿಳಿವಳ್ಳಿಯ ಸಾಸಿರ್ವರು ಅವನ ಸಾಹಸವನ್ನು ಮೆಚ್ಚಿ ಗದ್ದೆಯನ್ನು ದಾನವಾಗಿ ಅವನ ವಂಶದವರಿಗೆ ಕೊಟ್ಟ ಮಾತು ಕೊನೆಯಲ್ಲಿ ಬರುತ್ತದೆ.

ಹಾಗಯೇ ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿ ಹೋಬಳಿಯಲ್ಲಿ ಸಿಕ್ಕ ಕೆಲವು ವೀರಗಲ್ಲುಗಳನ್ನು ನೋಡಬಹುದು. ಆಗ ಆ ಗ್ರಾಮಕ್ಕೆ ಬೆಳಗುವರ್ತಿ ಎಂಬ ಹೆಸರಿದ್ದಂತೆ ತಿಳಿದುಬರುತ್ತದೆ. ಮಹಾಮಂಡಲೇಶ್ವರನಾದ ದೇವರಸನು ರಾಜ್ಯಭಾರವನ್ನು ಗೈಯುತ್ತಿರಲು ಚಟ್ಟನಾಯಕನೆಂಬುವನು, ತುರುಗಳನ್ನು ಕಳ್ಳರಿಂದ ಬಿಡಿಸಿ ಹಿಂದಿರುಗಿಸುವುದಕ್ಕಾಗಿ ಹೋರಾಡಿ ದೇಹವಿಟ್ಟ ಕಥೆ ಒಂದು ವೀರಗಲ್ಲಿನಲ್ಲಿದೆ.[3] ಅದೇ ಗ್ರಾಮದ ಇನ್ನೊಂದು ವೀರಗಲ್ಲು ಅಂತಹದೇ ಇನ್ನೊಂದು ಘಟನೆಯನ್ನು ಸುಂದರವಾಗಿ ವರ್ಣಿಸುತ್ತಿದೆ.[4]

"ಶ್ರೀಗೋವಿಂದಾಯ ನಮಃ .... ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ ಮಹಾ ಮಂಡಲೇಶ್ವರ ಮಲ್ಲಿದೇವರಸರು ಬೆಳಗುವರ್ತಿಯೊಳು ಸುಖಸಂಕಥಾ ವಿನೋದದಿಂ ರಾಜ್ಯನಿಗೆಯ್ಯುತ್ತುಮಿರೆ ಶಕ ವರ್ಷದ ೧೧೧೮ನೆಯ ನಳಸಂವತ್ಸರ ಚೈತ್ರ ಬಹುಳ ಏಕಾದಸೀ ಸೋಮವಾರದಂದು :

ಕಂ ||
**ತೊಟ್ಟೆಸಲುಮ್ಮಾ ಬಾಯಿಯಾ**
**ಕಟ್ಟಾಳ್ಗಳ್ ಕುದುರೆವೆರಸು ತುಱುಗೊಳೆ ಕೆಟ್ಟಾ |**
**ಗಟ್ಟಿಯ ನಾಯಕನುಱದಿಱ**
**ದೊಟ್ಟಜೆಯಿಂದಾಸ್ತವಂ ಮಗುಳ್ಚಿದ ನಾಗಳ್ ||**

ವೃ ||
**ಬೊಪ್ಪಾದೇವಿ ಸಮೇತವಿರ್ದು ಬೆಸಸಲು ಮಲ್ಲಕ್ಷಮಾ ಪಾಳನಿಂ |**
**ತೊಪ್ಪಂ ಬೆತ್ತಿದಿರಾಂತ ವೈರಿಬಲಮಂ ಬೆಂಕೊಂಡು ತೀವ್ರಾಸಿಯಿಂ ||**
**ತೊಪ್ಪೆಂದೋವದೆ ಪೊಯ್ದು ನಂಗಂಕರೊಳು ಬಲ್ಲಾಳ್ಕರಂ ಗಟ್ಟಿಯುಂ |**
**ಬಾಪ್ಪೆಂದೀಧರೆ ಬಣ್ಣಿಸಲ್ಕೆ ಪಡೆದಂ ಸ್ವರ್ಗಾಪವರ್ಗಂಗಳಂ ||**

---

2. Karnatak Incriptions, Vol. II (Tilivalli No. 17.)
3. E.C. Vol. VII, (Honnali Taluk) No. 35.
4. ಅದೇ ನಂ. ೩೬.

ಭರದಿಂ ಮಲ್ಲೆಯನಾಯಕ ಪ್ರಿಯಸುತಂ ಗಟ್ಟಿಯ್ಯನುಗ್ರಾಜಿಯೊಳ್ |
ತುರಗಂ ಮುತ್ತಿದೊಡಿಕ್ಕಿ ತತ್ತುರಗಮಂ ಬಲ್ಲಾಳ್ಗಳಂ ಖಡ್ಗದಿಂ ||
ಕರುಳುಂ ಕಂಡಮುಮಾರಿ ಸೂಸುವಿನೆಗಂ ಶ್ರೀರಂಗ ಗೋವಿಂದೆನು
ತ್ತುರತೇಜಂ ಪಡೆದಪ್ಸರೋ ಗಣಯುತಂ ವೈಕೊಂತಮಂ ಪೊರ್ದಿದಂ ||

ಇಂತು ಕಾದಿ ಪಲರಂ ಕೊಂದು ತುಱುವ ಮಗುರ್ಚಿ ಯಂಗರಿಕ ಮಲ್ಲೆಯ ನಾಯಕ ಮಾಚೆಯ ನಾಯಕರ ಮಗಂ ಗಟ್ಟೆಯ ನಾಯಕ ಸುರಲೋಕಪ್ರಾಪ್ತನಾದ. ಶ್ರೀಮನ್ ಮಲ್ಲಿದೇವರಸರು ಸಮಸ್ತ ಪ್ರಧಾನರುಂ, ಮೂಲಿಗ ಬಮ್ಮ ಗಾವುಂಡನುಂ ಸಹಿತವಾಗಿರ್ದು, ಗಟ್ಟಿಯನಾಯಕನಾಳುತನಕ್ಕೆ ಮೆಚ್ಚಿಯುಬ್ಬರ ಮಾನಿಯಲು ಗದ್ದೆ ಕಂಬ ೧೦, ಸೋವ ಬಱಿಸಿಯ ಕೆಱೆಯ ಬೆದ್ದಲೆ ಕಂಬ ೨೦, ಸಲಿಸುವರ್"

- ಹೀಗೆ ತುರುಗಳನ್ನು ಹಿಂದಿರುಗಿಸಲು ಗಟ್ಟೆಯನಾಯಕನು ತೋರಿದ ಪರಾಕ್ರಮವನ್ನು ಈ ಶಾಸನ ವರ್ಣಿಸುತ್ತಿದೆ. ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಗದ್ಯದ ಸಂಕ್ಷೇಪ ನಿರೂಪಣೆ ಇರುತ್ತದೆಯೇ ಹೊರತು, ಪದ್ಯದಲ್ಲಿ ಇಷ್ಟು ಪರಿಣಾಮಕಾರಿಯಾಗಿ ವರ್ಣಿಸಿರುವುದು ಕಡಿಮೆ.

ಅದೇ ಬೆಳಗುವರ್ತಿಯಲ್ಲಿ ಮಲ್ಲಿದೇವರಸನನಂತರ ಈಶ್ವರ ದೇವರಸರು (ಶಕ ೧೧೩೮) ಆಳುತ್ತಿರುವಾಗ ಸಹಣಿಯಚಿಣ್ಣ ಎಂಬುವನು ತೋರಿದ ಸಾಹಸ ಇನ್ನೊಂದು ಶಾಸನದಲ್ಲಿ ವರ್ಣಿತವಾಗಿದೆ. ಸಹಣಿಯಚಿಣ್ಣನು, ಬೇಡಪಡೆ ತುರುಗಳನ್ನು ಕೊಂಡೊಯ್ಯಲು, ಮಂಡಲೇಶ್ವರರ ಅಪ್ಪಣೆಯಂತೆ ಬೇಡರನ್ನು ಬೆನ್ನಟ್ಟಿ ಸೋಲಿಸಿ ತುರುವನ್ನು ಮರಳಿಸಿ - ಆ ಕಾರ್ಯದಲ್ಲಿಯೇ ಸ್ವರ್ಗಸ್ಥನಾಗಲು ಆ ಡಿಂಗರಿಗ ವೃತ್ತಿಯ ಕೃತಜ್ಞತೆಗಾಗಿ ಆತನ ತಮ್ಮ ಮತ್ತು ಮಕ್ಕಳಿಗೆ ಗದ್ದೆಯನ್ನು ಬಿಟ್ಟುಕೊಟ್ಟುದು ಆ ವೀರಗಲ್ಲಿನಲ್ಲಿ ಬರುತ್ತದೆ.[5]

ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆಯ ಒಂದು ವೀರಗಲ್ಲಿನಲ್ಲಿ ತುರುಗಳನ್ನು ಹಿಂದಿರುಗಿಸುವ ಸಾಹಸದಲ್ಲಿ ದೇಹವಿಟ್ಟ ವೀರನ ಕಥೆ ಉಕ್ತವಾಗಿದೆ : [6]

**"ಗೋವಿಂದರಸರು ಬನವಸೆ ಪನ್ನಿಚ್ಛಾಸಿರಮುಮನಾಳುತ್ತಿರೆ ಶ್ರೀ ದಂಡನಾಯಕ ಗೋವಿಂದರಸರ ಬೆಸದಿಂದೆ ಬಳ್ಳಿಗಾಮೆಯ ತುಱು ಪರಿಯಲು ಕಾದ ಕಣೆಯ ರೇವಯ್ಯ ನಾಯಕಂ ಪಲಂಬರು ಮಲೆಹರಂ ಕೊಂದು ತುಱುವಂ ಮಗುಳ್ಚಿ ಸುರಲೋಕ ಪ್ರಾಪ್ತನಾದ.**

**ಜಿತೇನ ಲಭ್ಯತೇ ಲಕ್ಷ್ಮೀರ್ಮೃತೇನಾಪಿ ಸುರಾಂಗನಾ**
**ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ."**

- ಹೀಗೆ ಅನೇಕ ಶಾಸನಗಳು ಸಿಕ್ಕುತ್ತವೆ. ಇವನ್ನು ನೋಡಿದರೆ ತುರುಗಳನ್ನು ಅಪಹರಿಸುವ ಬೇಡಪಡೆ ಅಂದಿನ ಸಮಾಜದ ನೆಮ್ಮದಿಯನ್ನು ಕಲಕುವ ಸಮಸ್ಯೆಯಾಗಿದ್ದಿತೆಂದು ತೋರುತ್ತದೆ. ತುರುಗಳನ್ನು ಅವರಿಂದ ರಕ್ಷಿಸುವ ಸಾಹಸದಲ್ಲಿ ಹುತಾತ್ಮರಾದ ವೀರರ ಸ್ಮರಣೆಯು ಅತಿ ಹೆಚ್ಚಿನ ಸಂಖ್ಯೆಯ ವೀರಗಲ್ಲುಗಳಿಗೆ ಕಾರಣವಾಗಿದೆ.

ಇನ್ನು ಕೆಲವು ವೇಳೆಗಳಲ್ಲಿ ತುರುಗಳ್ಳರಲ್ಲದೆ ಇತರ ರೀತಿಯ ಪುಂಡರೂ, ಕಳ್ಳಕಾಕರೂ ಊರುಗಳ ಮೇಲೆ ಧಾಳಿ ಮಾಡುತ್ತಿದ್ದುದುಂಟು. ಅವರನ್ನು ಎದುರಿಸಿ ಜನರನ್ನು ರಕ್ಷಿಸಲು ವೀರರು ಸದಾ ಸಿದ್ಧರಾಗಿರುತ್ತಿದ್ದರು. ಬಳ್ಳಿಗಾವೆಯ ಒಂದು ಶಾಸನದಲ್ಲಿ ಕಳ್ಳರನ್ನು ಸೋಲಿಸಿ ಹಿಮ್ಮೆಟ್ಟಿಸಿದ ವೀರನ ಪರಾಕ್ರಮ ವರ್ಣಿತವಾಗಿದೆ : [7]

5. ಅದೇ ನಂ. ೪೮.
6. ಅದೇ ನಂ. ೧೪೯ (Shikaripur Taluk).
7. ಅದೇ ನಂ. ೧೫೦.

''ಓಂ ನಮಃ ಶಿವಾಯ ... ಶ್ರೀಮತು ಕಳಚೂರ್ಯ ಭುಜಬಲ ಚಕ್ರವರ್ತಿ ರಾವು ಮುರಾರಿ ಸೋವಿದೇವ, ವರ್ಷದ ನಾಲ್ಕನೆಯ ಖರ ಸಂವತ್ಸರದ ಶ್ರಾವಣ ಬಹುಳದಮವಾಸ್ಯೆಯ ಸೋಮವಾರಂದಂದು...''

- ಎಂದು ಪ್ರಾರಂಭವಾಗುವ ಆ ಶಾಸನ ಮುಂದುವರಿದು ಹೆಲ್ಲಿಗನ ಪರಾಕ್ರಮವನ್ನು ವರ್ಣಿಸುತ್ತದೆ. ಕಳ್ಳರು ತಾಗಲು, ಹೆಲ್ಲಿಗನು ಅವರನ್ನು ಕೊಂದು ಸುರಲೋಕ ಪ್ರಾಪ್ತನಾದನು - ಎಂಬುದು ಈ ವೀರಗಲ್ಲಿನ ಮುಖ್ಯ ವಿಷಯ. ಇಲ್ಲಿ ಗಮನಿಸಬೇಕಾದುದು ಹೆಲ್ಲಿಗನ ಪರಾಕ್ರಮದ ವರ್ಣನೆ.

''ಉರವರಿಯಿಂದ ದೂರದೊಳು ತಾಗಿದ ವೀರಧನುರ್ಧರರ್ಕಳಂ |
ತ್ವರಿತದಿನೆಚ್ಚು ಕೂರ್ಗಣೆಗಳಿಂ, ಧರೆಗಿಕ್ಕ ಕರಂ ಕಡಂಗಿ ಭೋ ||
ರ್ಗರೆದಿರದೆಯ್ದಿ ಗೋಣ್ಗಳನೆ ಕಿತ್ತಿಜಿವಂಕದ ನಾಯಕರ್ಕಳಂ |
ಸುರಿಗೆಯನಾಂತು ಕೊಂದು ಧುರದೊಳಿಳ್ದಳಿದಂ ಪಡೆಮೆಚ್ಚೆ ಹೆಲ್ಲಿಗ.

ಮೆಚ್ಚೆಮಗೆಂದಾಗಸದಿಂ
ಚೆಚ್ಚೆರಮಿಜಿತಂದು ಕೊಂಡುಪೋದರ್ನಲವಿಂ |
ದಚ್ಚರಸೆಯರಾದರದಿಂ
ದಚ್ಚರಿವಡೆ ಭೂಜನಂಗಳಾ ಹೆಲ್ಲಿಗನಂ ||''

- ಎಂದು ಹುತಾತ್ಮನಾದ ವೀರ ಹೆಲ್ಲಿಗನನ್ನು ಆ ಶಾಸನ ವರ್ಣಿಸಿದೆ. ಹಾಗೆಯೇ ಚನ್ನರಾಯಪಟ್ಟಣದ ಒಂದು ವೀರಗಲ್ಲಿನಲ್ಲಿ ಕೇತಮಲ್ಲನ ಪರಾಕ್ರಮವೂ, ಬೇಲೂರಿನ ಒಂದು ಶಾಸನದಲ್ಲಿ ಮಾಚಿಗವುಂಡನ ಮಗ ಕಲಿರಾಯನ ಪರಾಕ್ರಮವೂ ವರ್ಣಿತವಾಗಿವೆ. ಮತ್ತು ಬೋಕಣ, ನಾಗ, ಬೊಮ್ಮೆಯ ನಾಯಕ, ಮೊದಲಾದ ವೀರರು ತಮ್ಮ ತಮ್ಮ ಊರಿನ ರಕ್ಷಣೆಗಾಗಿ ಹೋರಾಡಿ ಜೀವ ತೆತ್ತ ಉದಾಹರಣೆಗಳನ್ನು ವೀರಗಲ್ಲುಗಳು ಸಾರಿ ಹೇಳುತ್ತಿವೆ.

ಇನ್ನು ಕೆಲವು ವೀರಗಲ್ಲುಗಳು, ತಮ್ಮ ರಾಜರ ಪರವಾಗಿ ನಿಂತು ಶತ್ರುಗಳೊಡನೆ ಹೋರಾಡಿ ಮರಣವನ್ನಪ್ಪಿದ ಸ್ವಾಮಿನಿಷ್ಠರ ಪರಾಕ್ರಮವನ್ನು ವರ್ಣಿಸುತ್ತವೆ. ಕಾಯ್ಕಿಣಿಯ ಒಂದು ಶಾಸನವನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು :[8] (ಕಾಲ : ೧೩೯೮).

''ಶ್ರೀಮದ್ರಾಯ ರಾಯ ರಾಜಗುರುಧಾಯ ವಾದಿ ಪಿತಾಮಹನುಂ, ಶ್ರೀವೀರ ಹರಿಹರರಾಯ ರಾಜ್ಯವ ಪ್ರತಿಪಾಲಿಸುವ ಬಹುಧಾನ್ಯ ಸಂವತ್ಸರದ ಪುಸ್ಯ ಶುದ್ಧ ಪಾಡ್ಯ ಗುರುವಾರದಲೂ ಮಹಾಪ್ರಧಾನಿ ಮಂಗಪ ದಣಾಯಕರು ತುಬುರಾಜ್ಯದ ಮೇಲೆ ದಂಡೆತ್ತಿ ಬಂಕು ಬಿದಿರೆಯಲು ಪಾಳೆಯ ಬಿಟ್ಟು ಚವಟರ ಕೆಡಹಿ ತಾವು ಪಾಳೆಯವೆತ್ತಿ ಬಹಲ್ಲಿ, ಶ್ರೀಮನು ಮಹಾ ಮಂಡಳೇಸ್ವರಂ ಹರಿಯವರಸ ಒಡೆಯರ ಮಂದಿಯುನು ಹಿಂದಕೆ ನೀವು ಅತು ಬನ್ನಿಯೆಂದು ಮಂಗಪ ದಣಾಯಕರು ನಿರೂಪವ ಕೊಟ್ಟು ತೆಗೆದು ಬಹಲ್ಲಿ, ಗಾವಣೆಗರ ಬಳಿಯ ರಾಜಗುರು ಜಕ್ಕಣನಾಯಕನ ಮಗ ಹೊಲೆಯ ಬಳಿಯ ಬಿರಿದು, ತೆಂಗಬಕ ಕಡೆಯ ಮೂಜುಕಂ ನಾಗೂಜೆಯ ಹರಿಗೆಯ ಹಿಡಿದು ತಮ್ಮ ನಾಯಕ ತಂದೆಯ ಸಂಘಾತ ತಿರುಗಿನಿಂದು ಚವಟರ ಅಳಿಯ ಕೂಡಿಕೊಂಡು ಬಂದು ಹಾಯದಲಿ ತಂದೆಯ ಸಂಘಾತ ಹಾಯಿದು, ಹಾಯಿಸಿಕೊಂಡು ತಾನು ತಂದೆಯ ಸಂಘಾತ ಸ್ವರ್ಗಸ್ಥನಾದಲ್ಲಿ ಆತನ ಕಿಜಿಯ ತಂದೆ ತಮ್ಮ ನಾಯಕನೂ ಆತನ ತಮ್ಮ ಬೊಮ್ಮಣನಾಯಕನ ಕೂಡಿಕೊಂಡು ಆತನಜಿದ ಕತ್ತಿಯನು ಮಾಡಿ ಆತನ ವೀರಗಲ್ಲನು ಸ್ಥಾಪಿಸಿದರೂ ಮಂಗಳ ಮಹಾ...''

8. R.S. Panchamukhi, Karnatak Inscriptions.

ಇದು ಶಾಸನ. ನಿರೂಪಣೆಯೇ ಅಸ್ಪಷ್ಟವಾಗುವಷ್ಟು ಸಂದಿಗ್ಧವಾಗಿದೆ ಇದರ ಭಾಷೆ. ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ, ದಾನ ಶಾಸನಾದಿಗಳಲ್ಲಿ ಕಾಣುವಂತೆ ಪ್ರೌಢವಾದ ಸಾಹಿತ್ಯ ಭಾಷೆಯನ್ನು ಕಾಣುವುದಿಲ್ಲ. ನೇರವಾದ ಗದ್ಯ ನಿರೂಪಣೆಯೇ ಹೆಚ್ಚು. ಕೆಲವು ವೇಳೆ ಮೇಲಿನಂತೆ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲಾರದ ನಿರೂಪಣೆಯೂ ಉಂಟು. ಮೇಲಿನ ಶಾಸನದಲ್ಲಿ ಗಮನಿಸಬೇಕಾದ ಮುಖ್ಯವಾದ ಮಾತೆಂದರೆ ವೀರಗಲ್ಲನ್ನು ಸ್ಥಾಪಿಸಿದರು" ಎಂದು ಉಕ್ತವಾಗಿರುವುದು. "ವೀರಗಲ್ಲು"ಎಂಬ ಹೆಸರು ಕೂಡಾ ಅತಿ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದ್ದಿತೆಂಬುದು ತಿಳಿಯುತ್ತದೆ. ಮೇಲಿನ ಶಾಸನದಲ್ಲಿ ಉಕ್ತವಾಗಿರುವ ಅಂಶ ಇಷ್ಟು : ತಮ್ಮ (ತಿಮ್ಮ) ನಾಯಕನು ತನ್ನ ತಂದೆಯಾದ ಜಕ್ಕಣನಾಯಕನ ಜೊತೆಯಲ್ಲಿ ಚೆವಟರೊಡನೆ ಸೇರಿಕೊಂಡು ಶತ್ರುಗಳ ವಿರುದ್ಧ ಹೋರಾಡಿ ತಂದೆಯೊಡನೆ ದೇಹವನ್ನು ಬಿಟ್ಟನು. ಅವನ ಚಿಕ್ಕಪ್ಪ ತಮ್ಮನಾಯಕ ಮತ್ತು ಅವನ ತಮ್ಮ ಬೊಮ್ಮಣನಾಯಕ ಇವರು ಸೇರಿ ಅವನ ಸ್ಮರಣಾರ್ಥವಾಗಿ ವೀರಗಲ್ಲನ್ನು ಸ್ಥಾಪಿಸಿದರು.

ಅದೇ ಕಾಯ್ಕಿಣಿಯ ಇನ್ನೊಂದು ವೀರಗಲ್ಲಿನಲ್ಲಿ "ಅಚ್ಯುತರಾಯ ಮಹಾರಾಯ ಗುರುರಾಯ ವೊಡೆಯರು ಹಾಡುವಳ್ಳಿಯಲ್ಲಿ ರಾಜ್ಯವನ್ನು ಪ್ರತಿಪಾಲಿಸುತ್ತಿರುವಾಗ ನಡೆದ ಹೋರಾಟದ ಘಟನೆಯಿದೆ. ಬೊಮ್ಮಣನಾಯಕನ ಮಗ ಈಶ್ವರ ದೇವನಾಯಕನು ಯುದ್ಧದಲ್ಲಿ ಗೆದ್ದು ಚಿನ್ನದ ಕಕ್ಕಡೆಯನ್ನು ಪಡೆದು ಕೊನೆಯಲ್ಲಿ "ತನುವೋರಲಿಯಾಡಿ"ಅಸುನೀಗಿದ ಪ್ರಸಂಗ ವರ್ಣಿತವಾಗಿದೆ. ಹೀಗೆ ತಮ್ಮ ಸ್ವಾಮಿಗೋಸ್ಕರವಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ಕಡುಗಲಿಗಳು ಕನ್ನಡ ನಾಡಿನಲ್ಲಿ ಅಸಂಖ್ಯಾತರು.

ಕೆಲವು ವೇಳೆ, ರಾಜನು ಮೃತನಾದರೆ ಅವನಿಲ್ಲದೆ ತಾವು ಬದುಕಿರುವುದೇ ವ್ಯರ್ಥವೆಂದು ಅವನನ್ನೇ ಹಿಂಬಾಲಿಸಿದ ಸ್ವಾಮಿನಿಷ್ಠ ಸೇವಕರೂ ಶಾಸನಗಳಲ್ಲಿ ದೊರೆಯುತ್ತಾರೆ. ಸುಮಾರು ೧೨೨೦ರಲ್ಲಿ ರಚಿತವಾದ ಬೇಲೂರಿನ ಶಾಸನವನ್ನು ಸ್ಮರಿಸಿಕೊಳ್ಳಬಹುದಾಗಿದೆ. ೨ನೇ ಬಲ್ಲಾಳನ ದಂಡನಾಯಕ ಕುವರಲಕ್ಷನ ಅದ್ವಿತೀಯ ಸ್ವಾಮಿನಿಷ್ಠೆಯನ್ನು ವರ್ಣಿಸುತ್ತದೆ ಆ ಶಾಸನ.[9] ೨ನೇ ಬಲ್ಲಾಳ ಮೃತನಾಗಲು ಇನ್ನು ತಾನು ಬದುಕುವುದು ನಾಚಿಕೆಗೇಡೆಂದು ತನ್ನ ಸ್ವಾಮಿಯನ್ನೇ ಹಿಂಬಾಲಿಸುತ್ತಾನೆ ಕುವರಲಕ್ಷ. ಅವನ ಪರಿವಾರವೂ ಅವನನ್ನೇ ಅನುಸರಿಸುತ್ತದೆ. ರಾಜನ ಜೀವಕ್ಕೆ ತಮ್ಮ ಜೀವವನ್ನು ಪಣವಾಗಿಡುವ ಇಂತಹ ವ್ರತಧಾರಿಗಳಾದ ಸೇವಕರು ಹೊಯ್ಸಳರ ಕಾಲದಲ್ಲಿ ವಿಶೇಷವಾಗಿದ್ದಂತೆ ತೋರುತ್ತದೆ. ಅವರಿಗೆ "ಗರುಡರು" ಎಂಬ ಹೆಸರು ಪ್ರಚಲಿತವಾಗಿತ್ತು.

ಪುರುಷರಂತೆಯೇ ಸ್ತ್ರೀಯರೂ ಸಮಯ ಬಂದಾಗ ಅಸ್ತ್ರವನ್ನು ಹಿಡಿದು ಹೋರಾಡಲು ಹಿಂಜರಿಯುವವರಾಗಿರಲಿಲ್ಲ. ಅಸುವಳಿದರೂ ಅಳುಕದೆ ಹೋರಾಡಬಲ್ಲಂತಹ ವೀರರಮಣೀಯರಿದ್ದರು. ಶಿಕಾರಿಪುರ ತಾಲ್ಲೂಕಿನ ಒಂದು ವೀರಗಲ್ಲು ಅಂತಹ ಒಂದು ಘಟನೆಯನ್ನು ನಿರೂಪಿಸುತ್ತಿದೆ :[10]

**"ಶ್ರೀ ಕ್ರೋಧನ ಸವುವಛ್ಚರದ ಮಾಘ ಸು. ೧೫ ಸೋಮವಾರ ತಾಜಿಗವುಡನ ನಾಗ ಗವುಡನ ಮಗ, ಮಾದಿ ಗವುಡ ಪಲವನವನವರ ಕೂಡೆ ಕಾದಿ ಸ್ವರ್ಗಸ್ತನಹ ಕಾಲದಲು ತಂದೆಯ ಕೂಡೆ ಕಾದುವರ ಕೂಡೆ ಹೊಂ .. ದಾಡಿ ಹರಿಯಕ್ಕ, ದೇವಲೋಕಕ್ಕೆ ಹೋದಡೆ ತಮ್ಮ ಚಿಕ್ಕ ತಂದೆ ಚೆನ್ನನು ನಿಲ್ಸಿದ ಬೀರಗಲ್ಲು ೧ಕಂ. ಮಂಗಳ ಮಹಾ ಶ್ರೀಶ್ರೀ - "**

ನಾಡಿನ ವೀರಪುರುಷರ ಸಾಲಿನಲ್ಲಿ ವೀರಗಲ್ಲಿನ ಪ್ರಶಸ್ತಿಯನ್ನು ಪಡೆದ ಹರಿಯಕ್ಕ ವೀರರಮಣಿಯಾಗಿ ಕಂಗೊಳಿಸುತ್ತಿದ್ದಾಳೆ.

ಈ ಸಂದರ್ಭದಲ್ಲಿಯೇ ಮಹಾಸತಿ ಕಲ್ಲು ಅಥವಾ ಮಾಸ್ತಿಗಲ್ಲುಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು. ಪತಿಯೊಡನೆ ಸಹಗಮನವನ್ನು ಮಾಡಿದ ಸತಿಯರ ಸ್ಮಾರಕಕ್ಕಾಗಿ ನಿಲ್ಲಿಸಿದ ಕಲ್ಲುಗಳು ಇವು. ಈ ಸತಿ ಅಥವಾ ಸಹಗಮನ ಪದ್ಧತಿ

9. ರಾ. ನರಸಿಂಹಾಚಾರ್ಯ, ಶಾಸನ ಪದ್ಯಮಂಜರಿ.

10. E.C. VII. Shikaripur. 2.

ಸಾರ್ವತ್ರಿಕವಾಗಿರಲಿಲ್ಲ; ಮತ್ತು ಬಲಾತ್ಕಾರದ ಅಂಶವೂ ಅಲ್ಲಿರಲಿಲ್ಲವೆಂಬುದು ಗಮನಿಸಬೇಕಾದ ಸಂಗತಿ. ಪತಿಯೇ ಪರದೈವವೆಂಬ ಭಾವನೆಯಲ್ಲಿ ಬೆಳೆದ ಹೆಣ್ಣು; ಪತಿಯ ಮರಣವನ್ನು ಸಹಿಸಲಾರದೆ, ಏಕೈಕ ನಿಷ್ಠೆಯಿಂದ ಆತನನ್ನು ಹಿಂಬಾಲಿಸಿದ ಸ್ವಸಂತೋಷದ ನಿರ್ಧಾರವೇ ಈ ಸಹಗಮನ ಪದ್ಧತಿಯ ಪ್ರಾರಂಭಕ್ಕೆ ಮೂಲವಾಗಿದ್ದಿರಬೇಕು. ಬಲಾತ್ಕಾರದ ಸಹಗಮನಕ್ಕೆ ಧರ್ಮಶಾಸ್ತ್ರಗಳೆಲ್ಲಿಯೂ ಒಪ್ಪಿಗೆಯನ್ನು ನೀಲಿಲ್ಲ; ಆದರೂ ಕೆಲವು ಕಡೆಗಳಲ್ಲಿ ಅದಕ್ಕೆ ಧಾರ್ಮಿಕ ವಿಧಿಯ ಸ್ವರೂಪ ಬಂದು ಹೆಣ್ಣಿಗೆ ಇಷ್ಟವಿಲ್ಲದಿದ್ದರೂ ಆ ವಿಧಿ ನಡೆಯುತ್ತಿದ್ದಂತೆ ತೋರುತ್ತದೆ. ವಿಜಯನಗರದ ಕಾಲದಲ್ಲಿ ನಡೆಯುತ್ತಿದ್ದ ಸಹಗಮನದ ವರ್ಣನೆಯನ್ನು ಬಾರ್ಬೋಸಾ ಮೊದಲಾದವರು ಕೊಟ್ಟಿದ್ದಾರೆ. ಆಗಲೂ ಅದು ನಡೆಯುತ್ತಿದ್ದುದು ಕೆಲವು ಗಾವುಂಡರು ಮತ್ತು ನಾಯಕರು ಇವರುಗಳಲ್ಲಿ ಮಾತ್ರ ಎಂದು ತೋರುತ್ತದೆ.[11]

ಕನ್ನಡ ನಾಡಿನಲ್ಲಿ ಕಂಡುಬರುವ ಮಹಾಸತಿಯ ಕಲ್ಲುಗಳು ಸ್ವಸಂತೋಷದಿಂದ ಪತಿಯನ್ನು ಹಿಂಬಾಲಿಸಿದ ಮಹಾಸಾಧ್ವಿಯರ ಸ್ಮರಣೆಗಾಗಿ ನೆಟ್ಟವುಗಳು. ಸಾಮಾನ್ಯವಾಗಿ ಮಾಸ್ತಿಗಲ್ಲುಗಳ ಮೇಲೆ ಲಿಖಿತವೇನೂ ಕಂಡುಬರುವುದಿಲ್ಲ. ಅದು ಅರ್ಥವತ್ತಾದ ಶಿಲ್ಪದಿಂದ ಕೂಡಿದ ಒಂದು ಶಿಲಾಫಲಕವಾಗಿರುತ್ತದೆ. ಆ ಶಿಲಾಫಲಕದಲ್ಲಿ ಒಂದು ಸ್ತಂಭದ ಆಕೃತಿ : ಆ ಸ್ತಂಭದ ಮಧ್ಯದಿಂದ ಹೊರ ಚಾಚಿ ಮೇಲಕ್ಕೆತ್ತಿದಂತಿರುವ ಒಂದು ದೊಡ್ಡ ತೋಳಿನ ಚಿತ್ರ ; ಅದರ ಕೈಯಲ್ಲಿ ಹೆಬ್ಬೆರಳು ಮತ್ತು ತೋರುಬೆರಳುಗಳ ಮಧ್ಯದಲ್ಲಿ ಒಂದು ನಿಂಬೆಯ ಹಣ್ಣು ; ಈ ಕೈಯ್ಯ ಕೆಳಗಡೆ ಚಿಕ್ಕ ಆಕೃತಿಯಲ್ಲಿ ಕೆತ್ತಿದ ಪುರುಷ ಮತ್ತು ಸ್ತ್ರೀ ವಿಗ್ರಹಗಳು ; ಅವರ ಪಕ್ಕದಲ್ಲಿ ಅಥವಾ ಮೇಲ್ಭಾಗದಲ್ಲಿ ಒಂದು ಶಿವಲಿಂಗ, - ಇದು ಸಾಮಾನ್ಯವಾಗಿ ಮಾಸ್ತಿಕಲ್ಲಿನ ಮೇಲಿರುವ ಶಿಲ್ಪ. ಕೆಲವು ವೇಳೆ ಪುರುಷನು ಕುಳಿತಿದ್ದು ಅವನ ಸುತ್ತ ಸ್ತ್ರೀಯು ನರ್ತಿಸುತ್ತಿರುವಂತೆ ಚಿತ್ರಿಸಿರುವುದೂ ಉಂಟು. ಈ ಶಿಲ್ಪ ಒಂದು ಬಗೆಯ ಸಾಂಕೇತಿಕವಾದ ಅರ್ಥವನ್ನು ಒಳಗೊಂಡಂತೆ ತೋರುತ್ತದೆ. ಹೊರಚಾಚಿದ ದೊಡ್ಡ ಕೈಮದನನ ಕೈಯನ್ನು ಸೂಚಿಸುವಂತಿದೆ.[12] ಆ ಮನ್ಮಥನ ಕೈಯ್ಯ ಪ್ರಭಾವ ಇವರ ಜೀವನವನ್ನು ಹೀಗೆ ರೂಪಿಸಿತು - ಎಂಬುದನ್ನು ಅದು ಸಾರುವಂತಿದೆ. ಕೆಲವು ಕಲ್ಲುಗಳ ಮೇಲೆ ಒಂದು ಕೈಗೆ ಬದಲಾಗಿ ಎರಡು ಕೈಗಳಿರುವುದೂ ಉಂಟು. "ಒಂಟಿ ಕೈ ಮಾಸ್ತಿ" "ಎರಡು ಕೈ ಮಾಸ್ತಿ" ಎಂದು ಅವುಗಳನ್ನು ಕರೆಯಲಾಗಿದೆ.

ಈ ಸಾಂಕೇತಿಕವಾದ ಶಿಲ್ಪವನ್ನು ಪಡೆಯದಿರುವ ಮಾಸ್ತಿಗಲ್ಲುಗಳೂ ಉಂಟು. ಅವುಗಳ ಮೇಲೆ ಮದುವೆಗೆ ಅಲಂಕೃತಳಾದ ಯುವತಿಯ ವಿಗ್ರಹವೊಂದು ಮಾತ್ರ ಕಂಗೊಳಿಸುತ್ತದೆ. ಬಹುಶಃ ತನ್ನ ಪತಿಯನ್ನು ಹಿಂಬಾಲಿಸಿ ನಡೆದಿರುವ ಸಾಧ್ವಿಯನ್ನು ಅದು ಸೂಚಿಸುತ್ತದೆನ್ನಬಹುದು. ವಿಶೇಷವೇನೆಂದರೆ ವೀರಗಲ್ಲುಗಳ ಮೇಲಿರುವಂತೆ. ಇವುಗಳ ಮೇಲೆ ಶಾಸನವಿಲ್ಲದಿರುವುದು. ಸಹಗಮನ ಮಾಡಿದ ಸ್ತ್ರೀ ಯಾರೆಂಬುದಾಗಲೀ ಅವಳ ಪತಿಯ ಹೆಸರಾಗಲೀ ಇವುಗಳಿಂದ ತಿಳಿದುಬರುವುದಿಲ್ಲ. ದಂಪತಿಗಳ ಅಮರಪ್ರೇಮದ ನಾಮಘೋಷಣೆ ಅನಗತ್ಯವೆಂಬ ಭಾವನೆಯೇ ಈ ಮೌನಕ್ಕೆ ಕಾರಣವೋ ಏನೋ :

ಮಹಾಘಟನೆಯೊಂದರ ಸ್ಮಾರಕಕ್ಕಾಗಿ ನಿಲ್ಲಿಸಿರುವ ಇಂತಹ ಕಲ್ಲುಗಳಲ್ಲಿ ಕಾಣಬಹುದಾದ ಇನ್ನೊಂದು ಬಗೆಯೆಂದರೆ "ನಿಶಿಧಿ" ಕಲ್ಲುಗಳು. ಜೈನ ಸನ್ಯಾಸಿಗಳು ಸಲ್ಲೇಖನ ವ್ರತವನ್ನು ಕೈಕೊಂಡು ಆಹಾರವನ್ನು ಸ್ವೀಕರಿಸದೆ ದೇಹವನ್ನು ಬಿಟ್ಟು ಮೋಕ್ಷವನ್ನು ಪಡೆದುದರ ಸ್ಮಾರಕಕ್ಕಾಗಿ ನೆಟ್ಟಿರುವ ಕಲ್ಲುಗಳು ಇವು. ಹಾಡುವಳ್ಳಿ ಹಿರೇಬಸ್ತಿಯ ಮುಂದಿರುವ ನಿಶಿಧಿಗಲ್ಲೊಂದು (ಸು. ೧೪೨೩ ಮಾಣಿಕಸೇನ ಎಂಬುವನು ಅಲ್ಲಿ ಸಲ್ಲೇಖನ ವ್ರತಧಾರಿಯಾಗಿ ಮೋಕ್ಷವನ್ನು ಪಡೆದ ಘಟನೆಯನ್ನು ಹೇಳುತ್ತಿದೆ. ಶ್ರವಣ ಬೆಳುಗೊಳದ ಶಾಸನದಲ್ಲಿ ಇಂತಹ ಅನೇಕ ನಿಶಿಧಿಗಲ್ಲುಗಳನ್ನು ಕಾಣಬಹುದು.

ವೀರಗಲ್ಲುಗಳು ಮತ್ತು ಇಂತಹ ಸ್ಮಾರಕ ಶಿಲೆಗಳಿಂದ ಹೇಳಬಹುದಾದರೆ, ಕನ್ನಡ ಜನ ಎಂದೂ ಹೇಡಿಗಳಾಗಿ ಬಾಳಿದವರಲ್ಲ. ಕ್ಷಣಮಾತ್ರದಲ್ಲಿ ಬಿದ್ದು ಹೋಗುವ ದೇಹವನ್ನು ಪೋಷಿಸುವುದಕ್ಕಾಗಿ ಧರ್ಮ ಮಾರ್ಗದಿಂದ ಹಿಂದೆಗೆದವರಲ್ಲ. ಬದುಕಿದ್ದಾಗ

11. B.A. Saletore, Social and Political life in Vijayanagar Empire.

12. Lewis Rice, Mysore Inscriptions.

ನೇರವಾದ ಮಾರ್ಗದಲ್ಲಿ ನಡೆದು ಸಿರಿ ಸಂಪತ್ತನ್ನು ಪಡೆದರು. ಸತ್ತರೆ ವೀರ ಮರಣದ ಸೌಭಾಗ್ಯದಿಂದ ಸ್ವರ್ಗವನ್ನು ಸೇರಿದರು. ಈ ಲೌಕಿಕ ದೇಹವನ್ನು ತೃಣವೆಂದು ಭಾವಿಸಿ ಇದನ್ನು ಬಿಟ್ಟು ಶಾಶ್ವತವಾದ ಪದವಿಯನ್ನು ಪಡೆದ ಧಾರ್ಮಿಕರು, ಮರಣದಲ್ಲಿಯ ಪತಿಯನ್ನು ಹಿಂಬಾಲಿಸಿ ನಡೆದ ಸತಿಯರು, ಧರ್ಮಕ್ಕಾಗಿ ಹೋರಾಡಿ ದೇಹವನ್ನಿತ್ತ ಕಡುಗಲಿಗಳು ; - ಇವರ ಸಾರ್ಥಕ ಜೀವನವನ್ನು ಸಾರುತ್ತಾ ನಿಂತಿವೆ ಈ ಸ್ಮಾರಕ ಶಿಲೆಗಳು.

(ಕರ್ಣಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್. ತಿಪ್ಪೇರುದ್ರಸ್ವಾಮಿ : ಪುಟ ೨೪೦ ರಿಂದ ೨೪೪ : ಕೃಪೆಯಿಂದ).

## 120.3 ಸಹಗಮನ (ಮಾಸ್ತಿಕಲ್ಲುಗಳು)

ಪ್ರಾಚೀನ ಜನಾಂಗಗಳು ಈ ಲೋಕದಂತಹ ಇನ್ನೊಂದು ಲೋಕವಿದೆಯೆಂದು ಬಹು ದೃಢವಾಗಿ ನಂಬಿದ್ದರು. ವ್ಯಕ್ತಿ ಮಡಿದಾಗ ಅವನು ಆ ಪರಲೋಕಕ್ಕೆ ಹೋಗುವನೆಂದೂ ಅಲ್ಲಿಯ ಅವನ ಭೋಗಕ್ಕೆ ಇಲ್ಲಿಂದ ಅವನಿಗಿಷ್ಟವಾದ ವಸ್ತುಗಳನ್ನು 'ಕಳುಹಿಸ'ಬೇಕೆಂದೂ ಭಾವಿಸಿದ್ದರು. ಬಹುಶಃ ಸಹಗಮನ ಪದ್ಧತಿಗೆ ಇದೇ ಮೂಲವಿರಬಹುದು. ಅಥವಾ ತಾನು ಸತ್ತಮೇಲೆ ತನ್ನ ಪ್ರೇಯಸಿಯು ಇನ್ನೊಬ್ಬನ ವಶಳಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯೂ ಕಾರಣವಿರಬಹುದು. ಪತಿಯ ಜೊತೆಯಲ್ಲಿ ಅವನ ವಿಧವೆಯನ್ನೂ ಸುಡುವ ಪದ್ಧತಿಯು ಪ್ರಾಚೀನ ಭಾರತದಲ್ಲಿ ಮಾತ್ರವಲ್ಲ, ಪ್ರಾಚೀನ ಗ್ರೀಕ್, ಜರ್ಮನ್ ಮುಂತಾದ ಯೂರೋಪು ಮತ್ತು ಪಶ್ಚಿಮ ಏಷ್ಯಾ ಜನಾಂಗಗಳಲ್ಲಿಯೂ ಇದ್ದಿತು. ಚೀನಾದಲ್ಲಿ ವಿಧವೆಯು ಮತ್ತೆ ವಿವಾಹವಾಗುವುದು ಪಾಪವೆಂದು ನಂಬಿದ್ದರು. ಗಂಡನ ಸಾವಿನ ನಂತರ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದವರ ಗೌರವಾರ್ಥವಾಗಿ ಚಕ್ರವರ್ತಿಯು ತೋರಣಗಳನ್ನು ಕಟ್ಟಿಸುತ್ತಿದ್ದನು. ವೈದಿಕಯುಗದಲ್ಲಿ ಸಹಗಮನ ಪದ್ಧತಿಯು ಆಚರಣೆಯಲ್ಲಿರಲಿಲ್ಲ. ಅಥರ್ವ ವೇದದ ಕಾಲದಲ್ಲಿ ವಿಧವೆಯು ಗಂಡನ ಶವದ ಪಕ್ಕದಲ್ಲಿ ಮಲಗಿಕೊಳ್ಳುತ್ತಿದ್ದಳು. ಅವಳನ್ನು ಉಳಿದವರು ಕೆಳಗಿಳಿದು ಬಾ ಎಂದು ಕರೆದು, ತನ್ನ ಮಕ್ಕಳು ಮತ್ತು ಐಶ್ವರ್ಯದೊಡನೆ ಸುಖವಾಗಿ ಅವಳು ಬಾಳಲೆಂದು ಪ್ರಾರ್ಥನೆ ಮಾಡುತ್ತಿದ್ದರು. ಬಹುಶಃ ವಿಧವೆಯನ್ನು ಅವಳ ಗಂಡನ ತಮ್ಮನಿಗೆ ಕೊಟ್ಟು ವಿವಾಹವನ್ನು ಮಾಡುತ್ತಿದ್ದರು.

ಬ್ರಾಹ್ಮಣಗಳಲ್ಲಿಯೂ, ಗೃಹ್ಯಸೂತ್ರಗಳಲ್ಲಿಯೂ ಸಹಗಮನವನ್ನು ಹೆಸರಿಸಿಲ್ಲ. ಯಜ್ಞಗಳಲ್ಲಿ ಪಶುವಧೆಯನ್ನು ವಿರೋಧಿಸಿದ ಬುದ್ಧನು ತನ್ನ ಕಾಲದಲ್ಲಿ ಸಹಗಮನ ಪದ್ಧತಿಯು ಇದ್ದಿದ್ದರೆ ಅದನ್ನೂ ಖಂಡಿತವಾಗಿ ವಿರೋಧಿಸುತ್ತಿದ್ದನು. ಕ್ರಿ.ಪೂ. 400ರವರೆಗೆ ಅದು ಎಲ್ಲಿಯೂ ಕಾಣಿಸಿಕೊಂಡಿಲ್ಲ. ಮಹಾಭಾರತದಲ್ಲಿ ಕೆಲವೆಡೆ ಸಹಗಮನ ಪದ್ಧತಿಯು ಕಾಣಿಸಿಕೊಂಡಿದ್ದರೂ (ಉದಾಹರಣೆಗೆ ಮಾದ್ರಿಯ ಸಹಗಮನ) ಯುದ್ಧದ ಕೊನೆಯಲ್ಲಿ ಎಷ್ಟೋ ಜನ ವಿಧವೆಯರು ಸಹಗಮನವನ್ನು ಮಾಡದೆ ಹಾಗೆಯೆ ಉಳಿಯುತ್ತಾರೆ. ಸಹಗಮನದ ಮೊದಲನೆಯ ಐತಿಹಾಸಿಕ ನಿದರ್ಶನವೆಂದರೆ ಕ್ರಿ.ಪೂ. 316ರಲ್ಲಿ ಗ್ರೀಕರೊಡನೆ ಹೋರಾಡಿ ಮಡಿದ ಕೆತ್ಯೂಸನ ಕಿರಿಯ ಹೆಂಡತಿಯ ಸಹಗಮನ. ಹಿರಿಯವಳು ಗರ್ಭಿಣಿಯಾಗಿದ್ದುದರಿಂದ ಅವಳಿಗೆ ಅಪ್ಪಣೆಯು ದೊರಕಲಿಲ್ಲ. ಬಹುಶಃ ಕ್ರಿ.ಪೂ. ४ನೇ ಶತಮಾನಕ್ಕೆ ಸ್ವಲ್ಪ ಹಿಂದೆ ಆರಂಭವಾದ ಈ ಪದ್ಧತಿಗೆ ಅತ್ಯಂತ ಪ್ರಾಚೀನ ಸ್ಮೃತಿಕಾರರಾದ ಮನು ಮತ್ತು ಯಾಜ್ಞವಲ್ಕ್ಯರ ಒಪ್ಪಿಗೆಯು ದೊರಕಿಲ್ಲ. ವಿಧವೆಯು ತನ್ನ ಗಂಡನ ಸಾವಿನ ನಂತರವೂ ಬದುಕಿದ್ದು ಕಠಿಣ ವ್ರತಾಚರಣೆಗಳಲ್ಲಿ ಕಾಲವನ್ನು ಕಳೆಯಬೇಕೆಂದು ಮಾತ್ರ ಅವರು ವಿಧಿಸಿದ್ದಾರೆ. ವಿಷ್ಣು ಬೃಹಸ್ಪತಿಗಳು ಮಾತ್ರ ಅಜೀವಪರ್ಯಂತ ಕಠಿಣ ತಪಸ್ಸು ಮತ್ತು ಸಹಗಮನ ಇವೆರಡರಲ್ಲಿ ವಿಧವೆಯು ಯಾವುದನ್ನಾದರೂ ಆರಿಸಿಕೊಳ್ಳಬಹುದು ಎಂದು ಹೇಳುತ್ತಾರೆ.

ಕ್ರಿಸ್ತಶಕ ನಾಲ್ಕನೆಯ ಶತಮಾನದಿಂದ ಸಹಗಮನ ಪದ್ಧತಿಯು ಹೆಚ್ಚು ಪ್ರಚಾರಕ್ಕೆ ಬಂದಿತು. ಗಂಡನ ಸಾವಿನ ನಂತರ ಹೆಂಡತಿಯು ಅಗ್ನಿಪ್ರವೇಶವನ್ನು ಮಾಡಿದರೆ, ಅವಳೂ ಅವಳ ಗಂಡನೂ ಪಾಪಗಳಿಂದ ಮುಕ್ತರಾಗುವುದಲ್ಲದೆ ಮೂರುವರೆ ಕೋಟಿ ವರ್ಷ ಸ್ವರ್ಗದಲ್ಲಿ ಸುಖವಾಗಿರುತ್ತಾರೆ ಎಂದು ಹಾರೀತ ಮುಂತಾದವರು ಹೇಳಿದ್ದಾರೆ. ಕವಿಗಳ ಪೈಕಿ ಕಾಳಿದಾಸನು ಸಹಗಮನವು

ಸ್ತ್ರೀಗೆ ಸಹಜವಾದುದು ಎಂದು ಅಭಿಪ್ರಾಯಪಡುತ್ತಾನೆ. ಆದರೆ ಬಾಣನು ತನ್ನ ಕಾದಂಬರಿಯಲ್ಲಿ ಅದನ್ನು ಅಷ್ಟೇ ಉಗ್ರವಾಗಿ ವಿರೋಧಿಸಿದ್ದಾನೆ. ಆದರೂ ಉತ್ತರ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ಕಾಶ್ಮೀರದಲ್ಲಿ ಇದು ಅತ್ಯಂತ ಪ್ರಬಲವಾಯಿತೆಂದು ಕಲ್ಹಣನ ರಾಜತರಂಗಿಣಿಯಿಂದ ತಿಳಿದುಬರುತ್ತದೆ.

ದಕ್ಷಿಣ ಭಾರತದಲ್ಲಿ ಕ್ರಿ.ಶ. 10ನೆಯ ಶತಮಾನದವರೆಗೆ ಸಹಗಮನ ಪದ್ಧತಿಯು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಹತ್ತನೇ ಶತಮಾನದ ಆರಂಭದಲ್ಲಿ ಪಶ್ಚಿಮ ಕರಾವಳಿಯಲ್ಲಿ ಪ್ರವಾಸ ಮಾಡಿದ ಅರಬ್ಬೀ ವರ್ತಕ ಸುಲೇಮಾನನು ಹೇಳುವಂತೆ, ಎಲ್ಲೋ ವಿರಳವಾಗಿ ಮಾತ್ರ ರಾಣಿಯರು ತಮ್ಮ ಗಂಡಂದಿರ ಚಿತೆಗಳನ್ನೇರುತ್ತಿದ್ದರು. ಅಲ್ಲಿಯೂ ಬಲವಂತವಿರುತ್ತಿರಲಿಲ್ಲ. ಏರುವುದು, ಬಿಡುವುದು ಅವರಿಷ್ಟವಾಗಿತ್ತು. ಸುಮಾರು 900ರವರೆಗಿನ ಪಲ್ಲವ, ಚೋಳ, ಪಾಂಡ್ಯರಲ್ಲಿಯೂ ಈ ಸಂಪ್ರದಾಯದ್ಧ ಚಿಹ್ನೆಗಳು ಕಂಡುಬಂದಿಲ್ಲ.

ಕರ್ನಾಟಕದಲ್ಲಿ ಸಹಗಮನದ ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಬಹುಶಃ ಕ್ರಿ.ಶ. ಸು. 400ರ ಸೊರಬ ತಾಲ್ಲೂಕಿನ ಶಾಸನ. ಕದಂಬ ವಂಶದ ರಾಣಿಯೊಬ್ಬಳು ರವಿವರ್ಮನೊಡನೆ - ಈತ ಆಕೆಯ ಗಂಡನಾಗಿರಬೇಕು - 'ಮುಕ್ತ'ಳಾದಂತೆ ಆ ಶಾಸನವು ತಿಳಿಸುತ್ತದೆ. "ಕರ್ನಾಟಕದ ಅರಸುಮನೆತನಗಳ" ಕರ್ತೃಗಳು ರವಿವರ್ಮನ ಕಾಲವು ಕ್ರಿ.ಶ. 503ರಿಂದ ಕ್ರಿ.ಶ. 538 ಎಂದು ಅಭಿಪ್ರಾಯಪಡುವುದರಿಂದ ಮೇಲಿನ ಶಾಸನವು ಆರನೆಯ ಶತಮಾನದ್ದೆಂದು ಭಾವಿಸಬೇಕಾಗುತ್ತದೆ. ಮುಂದೆ ಸುಮಾರು ಮೂರು, ನಾಲ್ಕು ಶತಮಾನಗಳಲ್ಲಿ ಎಲ್ಲಿಯೂ ಸಹಗಮನದ ವಿಷಯವು ಬರುವುದಿಲ್ಲ. ಕ್ರಿ.ಶ. 908-9ರ ಶಾಸನವೊಂದರಲ್ಲಿ "..ನ ಹೆಗ್ಗಡೆ ತೊಮ್ಮನೆಂಬೊ .. (ಆಜಿ)ಯೊಳ್ಕಾದಿ ಸತ್ತೊಡಾತನ ಪೆಂಡತಿ ಬಳಕ್ಕನಪ..ಸದೊ ಕಾಯಿಕೋಜ" ಎಂದಿದೆ. ಈ ಶಾಸನದಲ್ಲಿ ಸಹಗಮನದ ವಿಷಯವು ಇದ್ದಿರಬಹುದಾದ ಭಾಗವು ತ್ರುಟಿತವಾಗಿದೆ. ಸು. 945ರಲ್ಲಿ ತನ್ನ ಭಾರತವನ್ನು ಬರೆದ ಪಂಪನು ಮಾದ್ರಿಯ ಸಹಗಮನವನ್ನು ವರ್ಣಿಸಿದ್ದಾನೆ. ಪಂಪನ ಕಾಲಕ್ಕಾಗಲೇ ಸಹಗಮನವು ತಕ್ಕಮಟ್ಟಿಗೆ ಪ್ರಚುರವಾಗಿದ್ದುದರಿಂದ ಅವನು ತನ್ನ ಕಾವ್ಯದಲ್ಲಿ ಮಾದ್ರಿಯು ಸತಿಯಾಗಲು ನಿಶ್ಚಯಿಸಿದಾಗ ಅವಳ ಧೈರ್ಯವನ್ನು ತಪೋವನದ ಮುನಿಜನಗಳೂ ವನದೇವತೆಗಳೂ ಹೊಗಳಿದರೆಂದು ವರ್ಣಿಸುತ್ತಾನೆ (ಪಂಪಭಾರತ, 2.26, ವ.). ಅದೇ ಪಂಪಭಾರತದಲ್ಲಿ ವೀರನೊಬ್ಬನು ನಾಳೆ ತಾನು ಸತ್ತು ದೇವತಾಸ್ತ್ರೀಯರನ್ನು ಸೇರುವೆನೆಂದು ಹೇಳಿದಾಗ ಅವನ ನಲ್ಲೆಯು ತಾನು ಅವನಿಗಿಂತ ಮುಂಚೆಯೇ ದೇವಲೋಕಕ್ಕೆ ಹೋಗುವುದಾಗಿ ಹೇಳುತ್ತಾಳೆ.

ಕರ್ನಾಟಕದಲ್ಲಿ ಸಹಗಮನದ ಸ್ಪಷ್ಟ ಐತಿಹಾಸಿಕ ನಿದರ್ಶನವು ಕ್ರಿ.ಶ. 972ರ ಶಾಸನವೊಂದರಲ್ಲಿ ದೊರಕುತ್ತದೆ. ಬಿದಿಯಣ್ಣ ಎನ್ನುವವನು ಮಡಿದಾಗ ಅವನ ಹೆಂಡತಿಯಾಗಿದ್ದ ಜಕ್ಕಬ್ಬೆಯೂ ಪ್ರಾಣವನ್ನು ತ್ಯಜಿಸುತ್ತಾಳೆ. ಅವಳ ತಂಗಿ ಜಾಬೆಯು ಕಲ್ಲನ್ನು ನಿಲ್ಲಿಸುತ್ತಾಳೆ. ಬಹುಶಃ ಅದೇ ಸರಿಸುಮಾರಿನಲ್ಲಿ ದಾನಚಿಂತಾಮಣಿಯೆಂದು ಪ್ರಸಿದ್ಧಳಾಗಿರುವ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆಯು ಸಹಗಮನವನ್ನು ಮಾಡುತ್ತಾಳೆ. ರನ್ನನು ಈ ಪ್ರಸಂಗವನ್ನು ಸ್ವಲ್ಪ ವಿಸ್ತರಿಸಿದ್ದಾನೆ. ತನ್ನ ಅಜಿತಪುರಾಣದಲ್ಲಿ (ಕ್ರಿ.ಶ. 993). ಚಾಲುಕ್ಯ ಚಕ್ರವರ್ತಿ ಆಹವಮಲ್ಲದೇವನ ಭುಜಾದಂಡದಂತೆ ಇದ್ದ ನಾಗದೇವನಿಗೆ ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಎಂಬ ಸೋದರಿಯರು ಪತ್ನಿಯರಾಗಿದ್ದರು. ಅತ್ತಿಮಬ್ಬೆಗೆ ಅಣ್ಣಿಗನೆಂಬ ಕಿರಿಯ ವಯಸ್ಸಿನ ಮಗನಿದ್ದನು. ಹೀಗಿರುವಾಗ ನಾಗದೇವನು ಸ್ವರ್ಗವಾಸಿಯಾಗುತ್ತಾನೆ. ಗಂಡನ ಪರೋಕ್ಷದಲ್ಲಿ ಸತಿಯ ಕರ್ತವ್ಯವೇನೆಂಬುದನ್ನು ರನ್ನನು ಗುಂಡಮಬ್ಬೆಯ ಬಾಯಲ್ಲಿ ಹೇಳಿಸುತ್ತಾನೆ. ಕುಲವಧುವಾದವಳು ಪತಿಯ ಪರೋಕ್ಷದಲ್ಲಿ ಮಾಡಬೇಕಾದ ಕರ್ತವ್ಯಗಳು ಎರಡೇ - ಒಂದು, 'ಜಿನದೀಕ್ಷಾಚರಣಂ' ; ಮತ್ತೊಂದು, 'ಶುಭ ಚರಿತದೆ ಮರಣಂ.' ಗಂಡನ ಸಾವಿನ ನಂತರ ಭೋಗಜೀವನವನ್ನು ನಡೆಯಿಸುವುದು ಪಾಪಕರ (ರನ್ನನು ಬಹುಶಃ ವಿಷ್ಣು, ಬೃಹಸ್ಪತಿಯರ ಮತವನ್ನು ಒಪ್ಪಿಕೊಂಡಿರುವಂತೆ ಕಾಣುತ್ತದೆ). ಹೀಗೆ ಹೇಳಿದ ಗುಂಡಮಬ್ಬೆಯು, ಅಕ್ಕ ಅತ್ತಿಮಬ್ಬೆಗೆ ಒಬ್ಬ ಮಗನಿರುವುದರಿಂದ ಅವನನ್ನು ಬೆಳೆಸುವುದು ಅವಳ ಕರ್ತವ್ಯವೆಂದು ಹೇಳಿ, ತನ್ನ ಗಂಡನನ್ನು ಅಪ್ಪಿಕೊಂಡು ಚಿತಾಗ್ನಿಯಲ್ಲಿ ಮಡಿಯುತ್ತಾಳೆ. ಅವಳನ್ನು

ಇಡೀ ಲೋಕವೇ ಹೊಗಳಿತು ("ಗುಂಡೆಲ್ಲಂ ಪೊಗಟೆ"). ಪತಿಯ ಪರೋಕ್ಷದಲ್ಲಿ ಕುಲವಧುವಿನ ಇನ್ನೊಂದು ಕರ್ತವ್ಯವಾದ 'ಜಿನದೀಕ್ಷಾಚರಣೆ'ಯನ್ನು ಅತ್ತಿಮಬ್ಬೆ ಅಂಗೀಕರಿಸುತ್ತಾಳೆ. ಇಲ್ಲೆಲ್ಲ ನಾವು ಗಮನಿಸಬೇಕಾದ ಅಂಶವೆಂದರೆ - ಸತಿಯಾಗಲು ಬಯಸುವ ಸ್ತ್ರೀಯರನ್ನು ಬಲವಂತದಿಂದ ಯಾರೂ ನಿಲ್ಲಿಸುತ್ತಿರಲಿಲ್ಲ. ಅವರು ಹಾಗೆ ಪ್ರಾಣತ್ಯಾಗ ಮಾಡುವುದು ಸಹಜವಾದುದು ಎಂಬ ಭಾವನೆ ಜನರಲ್ಲಿದ್ದರೂ, ಆಪ್ತರಾದವರು ಅವರ ಸಹಗಮನವನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದಿರಬಹುದು.

ಕ್ರಿ.ಶ. 1051ರ ಶಾಸನದಲ್ಲಿ ಬೋಗಾರ ಕರಡಿಯ ಸೆಟ್ಟಿ ಎಂಬುವನು ಮಡಿದಾಗ ಅವನ 'ಮದವಳಿಗೆ' ನಾಗಮ್ಮ ಎಂಬುವಳು 'ಸಹಾಗಮನ'ವನ್ನು ಮಾಡಿದ ವಿಷಯವೂ, ಅವಳಿಗಾಗಿ ನಿಲ್ಲಿಸಿದ 'ಮಾಸ್ತಿಕಳು' (... ಮಹಾಸತಿ ಕಲ್ಲು)ವಿನ ವಿಷಯವೂ ಬಂದಿದೆ. ಇವೆಲ್ಲವೂ 'ಸಹಗಮನ' ಅಥವಾ 'ಸಹ ಮರಣ'ದ ನಿದರ್ಶನಗಳು. ಸಹಗಮನವೆಂದರೆ ಪತಿಯ ಶವದ ಜೊತೆಯಲ್ಲಿಯೇ ಚಿತೆಯೇರುವುದು.ಪತಿಯು ಎಲ್ಲೋ ದೂರದ ಪ್ರದೇಶದಲ್ಲಿ ಮಡಿದದ್ದನ್ನು ಕೇಳಿ ಅವನ ಸ್ಮಾರಕವಾಗಿ ಅವನಿಗೆ ಸೇರಿದ ಯಾವುದಾದರೂ ವಸ್ತುವನ್ನು ಹಿಡಿದುಕೊಂಡು ಪ್ರಾಣವನ್ನು ಬಿಡುವುದು 'ಅನುಗಮನ' ಅಥವಾ 'ಅನುಮರಣ'. ಈ ಅನುಗಮನಕ್ಕೆ ಅತ್ಯುತ್ತಮ ನಿದರ್ಶನವು ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತೂರು ಶಾಸನದಲ್ಲಿ ದೊರಕುತ್ತದೆ. ನುಗುನಾಡ ಅಧಿಪತಿ ರವಿಗ ಮತ್ತು ಪೊನ್ನ ಕಬ್ಬೆಯರ ಮಗಳು ದೇಕಬ್ಬೆ - ಇವಳನ್ನು ನವಲೆನಾಡ ಏಚನಿಗೆ ಕೊಡುತ್ತಾರೆ. ಇವನು ಒಮ್ಮೆ ತನ್ನ ದಾಯಿಗರೊಡನೆ ಹೋರಾಡುತ್ತಿರುವಾಗ ಅವನನ್ನು ಬಂಧಿಸಿ ತಲಕಾಡಿಗೆ ಕೊಂಡೊಯ್ದು ಕೊಲ್ಲುತ್ತಾರೆ. ಅದನ್ನು ಕೇಳಿದ ದೇಕಬ್ಬೆಯು ಅಗ್ನಿಪ್ರವೇಶಮಾಡಲು ನಿರ್ಧರಿಸುತ್ತಾಳೆ ('ಸಾಯಲೆಂದು ಕೊಂಡಕೆ ನಡೆದಳ್'). ಅವಳ ತಂದೆ ತಾಯ್ಗಳು, ಬಂಧುಗಳು ಎಲ್ಲರೂ ಸೇರಿ ಸಾಯಬೇಡವೆಂದು ಕಾಲುಹಿಡಿದು ಬೇಡಿಕೊಳ್ಳುತ್ತಾರೆ. ತಾನು ಸಾಯದೆ ಬದುಕಿ ಕೊಟ್ಟುಕೊಂಡ ಮನೆಗೆ ಕೆಟ್ಟ ಹೆಸರು ತರುವುದಿಲ್ಲವೆಂದು ಮುನಿದು ಹೇಳುತ್ತಾಳೆ ದೇಕಬ್ಬೆ. ದೇವಾಲಯಕ್ಕೆ ಬೇಕಾದಷ್ಟು ದತ್ತಿಯನ್ನು ಬಿಡುತ್ತಾಳೆ. ಎಲ್ಲರೂ ಸೇರಿ ಮತ್ತೆ ಮತ್ತೆ ಬೇಡಿಕೊಳ್ಳುತ್ತಾರೆ, ಸಹಗಮನವನ್ನು ಮಾಡಬೇಡ ಎಂದು. ಆದರೂ ಅವರೆಲ್ಲರ ಮಾತುಗಳನ್ನು ನಿರ್ಲಕ್ಷಿಸಿ, ಬೇಡಿದವರಿಗೆಲ್ಲ ಹೊನ್ನು, ವಸ್ತ್ರ, ಹಸು ಹಣಗಳನ್ನು ನೀಡಿ ಅಗ್ನಿಯನ್ನು ಪ್ರವೇಶಿಸುತ್ತಾಳೆ. ಇಂತಹವಳನ್ನು ಯಾರು ತಾನೇ ಮರೆಯುತ್ತಾರೆ ? ('ಇಂತೀ ನಾರಿಜನರನ್ನ ಮನದಾರೊ ಮಱೆವರ್'). ಕನ್ನಡದಲ್ಲಿ ಇಷ್ಟು ವಿಸ್ತಾರವಾಗಿ ಸಹಗಮನವನ್ನು ವರ್ಣಿಸಿರುವ ಶಾಸನ ಮತ್ತೊಂದಿಲ್ಲ. ಸು. 1088ರ ಶಾಸನವೊಂದರಲ್ಲಿ ನವಲಾಷಿರಾಜ ಎನ್ನುವವನು ಸತ್ತಾಗ ಅವನ ಎಳೆಯ ಹೆಂಡತಿಯೊಬ್ಬಳು ಬೆಂಕಿಯಲ್ಲಿ ಹಾರಿ ('ಪಾಯ್ದು') ಪ್ರಾಣವನ್ನು ಬಿಟ್ಟ ವಿಷಯವು ಬಂದಿದೆ. ಗಂಡನು ಮಡಿದಾಗ ಹೆಂಡತಿಯು 'ಪುರುಷಬ್ರತ'ವನ್ನು (.. ಪುರುಷವ್ರತ) ಕೈಗೊಂಡು ಮಡಿದ ವಿಷಯವು ಇನ್ನೊಂದು ಶಾಸನದಲ್ಲಿದೆ. ಸಹಗಮನವನ್ನು ಮಾಡಿದ ಮಹದೇವಿ ಎಂಬುವಳನ್ನು ಒಂದು ಶಾಸನವು 'ಮಹಾಸತಿ' ಎಂದು ಕರೆಯುತ್ತದೆ. ಸತ್ಯವೆಗ್ಗಡೆ ಎಂಬುವನು ಮಡಿದಾಗ ಅವನ ಇಬ್ಬರು ಹೆಂಡಿರು 'ಸನ್ಯಸನವಿಧಿ'ಯಿಂದ ಪ್ರಾಣವನ್ನು ಬಿಡುವುದಕ್ಕಿಂತ ಸನ್ಯಸನವಿಧಿಯಿಂದ ಪ್ರಾಣಬಿಡುವುದು ಹೆಚ್ಚು ಶ್ರೇಯಸ್ಕರವೆಂದು ಭಾವಿಸಿರಬೇಕು. ಜೈನರಲ್ಲಿಯೂ ಸಹಗಮನವಿದ್ದಿತೆಂಬುದಕ್ಕೆ ಹಿಂದೆಯೇ ಸೂಚಿಸಿರುವ ಗುಂಡಮಬ್ಬೆಯ ಸಹಗಮನವು ಉತ್ತಮ ಆಧಾರವಾಗಿದೆ.

ಆರನೇ ಶತಮಾನದಿಂದ ಹನ್ನೆರಡನೇ ಶತಮಾನದ ಮಧ್ಯಭಾಗದವರೆಗೆ ಸಹಗಮನದ ಸುಮಾರು ಹತ್ತು ನಿದರ್ಶನಗಳು ದೊರಕುತ್ತವೆ. ಮುಂದೆ ಇವುಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತದೆ. ಕರ್ನಾಟಕದಲ್ಲಿ ವೀರಯುಗದೊಡನೆ (9-10 ನೇ ಶತಮಾನ) ಪ್ರಬಲಗೊಂಡ ಸಹಗಮನ ಪದ್ಧತಿಯು ಹೊಯ್ಸಳ ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ತನ್ನ ತುದಿಯನ್ನು ಮುಟ್ಟಿತು. ಒಬ್ಬ ರಾಜನು ಮಡಿದ ತಕ್ಷಣ, ಅಥವಾ ಅವನು ಮಡಿಯುವ ಸೂಚನೆಯು ದೊರಕಿದರೂ ಸಾಕು, ಸಾಯಲು ಸಿದ್ಧರಾಗುತ್ತಿದ್ದ ರಾಣಿಯರ ವಿಷಯವನ್ನು ಜನ್ನನ ಅನಂತನಾಥ ಪುರಾಣವು ವರ್ಣಿಸುತ್ತದೆ.

ಸಹಗಮನವನ್ನು ಮಾಡಿ 'ಮಹಾಸತಿ'ಯರಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ 'ಮಾಸ್ತಿಕಲ್ಲು'ಗಳು. ಸಾಮಾನ್ಯವಾಗಿ ಮಾಸ್ತಿಕಲ್ಲುಗಳ ಮೇಲೆ ಎತ್ತಿದ ತೋಳಿನ ಸ್ತ್ರೀಯ ಚಿತ್ರವಿರುತ್ತದೆ. ಸ್ತ್ರೀಯ ತಲೆಯ ಹಿಂದೆ ಬೆಂಕಿಯ ಜ್ವಾಲೆಗಳನ್ನು ಕೊರೆದಿರುವುದುಂಟು. ಕೆಲವೊಮ್ಮೆ ಇಂತಹ ಕಲ್ಲುಗಳ ಮೇಲೆ ಎತ್ತಿದ ತೋಳಿನ ಚಿತ್ರಮಾತ್ರವಿರುತ್ತದೆ. ಸತಿಯರು ಚಿತೆಯನ್ನೇರಲು ಹೋಗುವಾಗ ಕುಂಕುಮದಲ್ಲಿ ಕೈಯನ್ನು ಅದ್ದಿ ಬಾಗಿಲಿನ ಮೇಲೆ ತಮ್ಮ ಬೆರಳುಗಳನ್ನು ಮೂಡಿಸುತ್ತಿದ್ದರು. ಆ ಬೆರಳುಗಳ ಚಿತ್ರದ ಮೇಲೆ ಬೆರಳುಗಳನ್ನು, ಅದಕ್ಕೆ ಸೇರಿದಂತೆ ತೋಳನ್ನು ಶಿಲ್ಪಿಗಳು ಕೊರೆಯುತ್ತಿದ್ದರು. ಬಹುಶಃ ಈಗ ದೊರಕುವ ಮಾಸ್ತಿಕಲ್ಲುಗಳ ಮೇಲಿನ ತೋಳುಗಳು ಸಹಗಮನವನ್ನು ಮಾಡಿದ ಸ್ತ್ರೀಯ ಬೆರಳುಗಳ ಪಡಿಯಚ್ಚಾಗಿದ್ದರೂ ಇರಬಹುದು. ಮಹಾಸತಿಯ ಬಲಗೈ ಶುಭದ, ಸೌಭಾಗ್ಯದ, ಧನ್ಯಜೀವನದ ಸಂಕೇತ. ಕೆಲವು ಮಾಸ್ತಿಕಲ್ಲುಗಳ ಮೇಲೆ ಗಂಡನ ಮತ್ತು ಅವನ ಹೆಂಡತಿಯ ಅಥವಾ ಹೆಂಡಿರ ಚಿತ್ರಗಳೂ ಇರುವುದುಂಟು. ಮಹಾಸತಿಯ ಕೈಯಲ್ಲಿ ಒಂದು ಮಾದಲದ ಹಣ್ಣು ಇರುತ್ತದೆ. ಇದರ ಅರ್ಥವೇನೋ ತಿಳಿಯದು. ಮಹಾಸತಿಯರನ್ನು ದೇವತೆಗಳೆಂದು ಭಾವಿಸಿ ಪೂಜಿಸುತ್ತಾರೆ. ಕೆಲವು ಕಡೆ ಅವರಿಗಾಗಿ ದೇವಸ್ಥಾನಗಳನ್ನೇ ಕಟ್ಟಿರುತ್ತಾರೆ. ಹುಬ್ಬಳ್ಳಿಯಿಂದ ಕಾರವಾರಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಸುಪ್ರಸಿದ್ಧವಾದ ಮಾಸ್ತಿ ಗುಡಿಯಿದೆ. ಈಗಲೂ ಕೆಲವು ಹಳ್ಳಿಗಳಲ್ಲಿ ಇರುವ ಮಾಸ್ತಿಕಲ್ಲುಗಳಿಗೆ ಬಳೆ, ಕುಂಕುಮಗಳನ್ನು ಅರ್ಪಿಸಿ ದೀಪಗಳನ್ನು ಹಚ್ಚಿಡುವ ಸಂಪ್ರದಾಯವಿದೆ. ತಮಿಳುನಾಡಿನಲ್ಲಿ ಮತ್ತು ಸಿಂಹಳದಲ್ಲಿ ಕನ್ನಗಿ, ಆಂಧ್ರದಲ್ಲಿ ಪೇರಂತಲಮ್ಮ ಎಂಬ ಮಹಾಸತಿಯರು ಈಗಲೂ ಪೂಜ್ಯರಾಗಿದ್ದಾರೆ. ಬರಿಯ ತೋಳು ಇರುವ ಮಾಸ್ತಿ ಕಲ್ಲುಗಳನ್ನು 'ವ್ಯಾಸನತೋಳು' ಎಂದು ಕರೆಯುತ್ತಾರೆ.

ದಿ. ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋಮಹಾರಾಯ ಎಂಬ ಕಾದಂಬರಿಯಲ್ಲಿ ಸತಿಯೊಬ್ಬಳು ಸಹಗಮನವನ್ನು ಮಾಡಿದ ಚಿತ್ರಣವಿದೆ. ಅದರ ವರ್ಣನೆಯನ್ನು ನೋಡಿದರೆ ಕಾದಂಬರಿಕಾರರು ಬಹುಶಃ ಪ್ರತ್ಯಕ್ಷದರ್ಶಿಗಳಿಂದ ಅದನ್ನು ಕೇಳಿರಬಹುದೆಂದು ಊಹಿಸಬಹುದು. ಅದು ಹತ್ತೊಂಬತ್ತನೆಯ ಶತಮಾನದಲ್ಲಿ ವಿರಳವಾಗಿಯಾದರೂ ನಡೆಯುತ್ತಿದ್ದ ಸಹಗಮನದ ವಾಸ್ತವಚಿತ್ರದಂತೆ ಕಂಡುಬರುವುದರಿಂದ, ಅಲ್ಲಿಂದ ಕೆಲವು ಸಂಗತಿಗಳನ್ನು ಆರಿಸಿ ಕೆಳಗೆ ಕೊಡಲಾಗಿದೆ. ಸಹಗಮನವನ್ನು ಮಾಡುವ ಮೊದಲು ಆ ವಿಷಯವನ್ನು ರಾಜ್ಯದ ಅಧಿಕಾರಿಗಳಿಗೆ ತಿಳಿಸಬೇಕಾಗಿದ್ದಿತು. ಅವರು "ಸರಕಾರದಿಂದ ಅರಿಸಿನ, ಕುಂಕುಮ, ತಾಂಬೂಲ, ಹೂವು, ದೋತ್ರದ ಜೊತೆ, ಹಳದೀ ಪತ್ತಲ ಇವೇ ಮೊದಲಾದದ್ದನ್ನು ಕೊಡಿಸುತ್ತಿದ್ದದ್ದು ಅಲ್ಲದೆ, ಗಂಡನ ಸಂಗಡಲೇ ಜೀವಸಹಿತ ಚಿತೆಯನ್ನು ಏರಿದ ಹೆಂಗಸು ಉರಿಯನ್ನು ತಡೆಯಲಾರದೆ ಈಚೆಗೆ ಎದ್ದು ಓಡಿಬಂದಲ್ಲಿ ರಾಜ್ಯಕ್ಕೆ ಹಾನಿ ತಟ್ಟುವುದೆಂದು ಅದಕ್ಕೆಲ್ಲ ಅಡ್ಡಿಯಾಗಿರುವ ಹಾಗೆ ಮದ್ದು ತುಂಬಿದ ಗಡಿಗೆಗಳು, ಬಾಣಗಳು, ಎಣ್ಣೆ ತುಪ್ಪದ ಗಡಿಗೆಗಳು ಇವುಗಳೆಲ್ಲವನ್ನು ಚಿತೆಯ ಮಧ್ಯ ಭಾಗದಲ್ಲಿಯೂ, ಪಕ್ಕಗಳಲ್ಲಿಯೂ ಇರಿಸುವುದಕ್ಕಾಗಿ ಬೇಕಾದ್ದನ್ನೆಲ್ಲಾ ಕೊಡಿಸುತ್ತಾ ಇದ್ದರು." ಸತಿಯನ್ನು ನೋಡಲು ಸಾವಿರಾರು ಜನರು ನೆರೆಯುತ್ತಿದ್ದರು. ಸತಿಯು ಆ ದಿನ ಸ್ನಾನವನ್ನು ಮಾಡಿ ಮೈತುಂಬಾ ಅರಿಶಿನವನ್ನು ಹಚ್ಚಿಕೊಂಡು ಹಳದಿಯ ಬಣ್ಣದ ಸೀರೆಯನ್ನುಟ್ಟು ಕುಂಕುಮಾದಿಗಳನ್ನು ಧರಿಸಿ ಬ್ರಾಹ್ಮಣರಿಗೆ, ಮುತ್ತೈದೆಯರಿಗೆ ಯಥೇಷ್ಟವಾಗಿ ದಾನಮಾಡಿ ಎಲ್ಲರ ಅಪ್ಪಣೆಯನ್ನು ಪಡೆದು, ಕೈಯಲ್ಲಿ ನಿಂಬೆಯ ಹಣ್ಣುಗಳನ್ನು ಹಿಡಿದು 'ಅಮ್ಮಾಲೆ ಚೆಂಡಾಡುತ್ತ', ಎಂದರೆ ಅವುಗಳನ್ನು ಮೇಲೆ ಎಸೆದು ಹಿಡಿಯುತ್ತ ಬರುತ್ತಿದ್ದಳು. (ಸತಿಯಾದವರ ವಿಗ್ರಹಗಳ ಕೈಯಲ್ಲಿರುವ ಹಣ್ಣು ಇದೇ ಇರಬಹುದೆ ?). ಅವಳು ಸಂತೋಷವಾಗಿ ಗಂಡನ ಜೊತೆಯಲ್ಲಿ ಹೋಗಲು ಸಿದ್ಧವಾಗುತ್ತಿರುವುದನ್ನು ಇದು ಸೂಚಿಸಬಹುದು. ಚಿತೆಯ ಮೇಲೆ ಪುರುಷನ ಶವದ ಜೊತೆಯಲ್ಲಿ ಅವಳನ್ನು ಕಟ್ಟಿಹಾಕಿ, ಮೇಲೆ ಭಾರವನ್ನು ಹೇರಿ ಬೆಂಕಿಯನ್ನು ಹಚ್ಚುತ್ತಿದ್ದರು. 'ಮಹಾ ಪತಿವ್ರತೆ' ಎಂಬ ಕೂಗೂ ಜನರ ಹಾಹಾಕಾರವೂ ದಿಕ್ಕುಗಳನ್ನು ತುಂಬುತ್ತಿದ್ದಿತು. ಅವಳು ನಡೆದುಬಂದ ದಾರಿಯಲ್ಲಿ ಮೂಡಿದ ಅವಳ ಹೆಜ್ಜೆಯ ಗುರುತುಗಳಿಂದ ಧೂಳನ್ನು ತೆಗೆದುಕೊಂಡು ಕಣ್ಣಿಗೆ ಒತ್ತಿಕೊಳ್ಳುತ್ತಿದ್ದರು. ಜೀವಸಹಿತ ಬೆಂದುಹೋದ ಆ ದೃಶ್ಯವನ್ನು ಕಂಡ ಜನರ ಕಣ್ಣಿಗೆ ಅವಳು ಮಹಾಲಕ್ಷ್ಮಿಯಂತೆ ಪೂಜನೀಯಳಾಗುತ್ತಿದ್ದಳು. ಅವಳು ಸುಟ್ಟ ಪ್ರದೇಶವು ಪುಣ್ಯಸ್ಥಳವಾಗುತ್ತಿದ್ದಿತು.

ವೇಳೆವಾಳಿ ಮತ್ತು ಸಹಗಮನಗಳ ಹಿಂದಿರುವ ತತ್ವವನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು. ಎರಡೂ ಒಂದೇ ಆದರ್ಶದ ಎರಡು ಮುಖಗಳು - ಒಂದು ಕಡೆ ಒಡೆಯನಿಗಾಗಿ ಪ್ರಾಣವನ್ನು ತ್ಯಜಿಸಿದರೆ, ಇನ್ನೊಂದು ಕಡೆ ಪತಿಗಾಗಿ ಪ್ರಾಣವನ್ನು ತ್ಯಜಿಸುವುದು. ಎರಡರ ಮೂಲದಲ್ಲೂ ಕೃತಜ್ಞತೆ, ಭಕ್ತಿಗಳಿವೆ ; ಇನ್ನೊಂದು ಲೋಕದ ವಿಷಯದಲ್ಲಿ ದೃಢ ವಿಶ್ವಾಸವಿದೆ. ಆಧುನಿಕ ದೃಷ್ಟಿಗೆ ಇವು ಅರ್ಥಹೀನವಾಗಿ ಕ್ರೌರ್ಯದ ಪ್ರತೀಕವಾಗಿ ಕಾಣಬಹುದು. ಆಧುನಿಕ ಭಾರತವು ಈ ಸಂಪ್ರದಾಯಗಳನ್ನು ಕೈಬಿಟ್ಟಿದೆ. ಕೈಬಿಟ್ಟಿರುವುದೂ ಒಳ್ಳೆಯದೇ. ಆದರೂ ವೇಳೆವಾಳಿಗಳ ವಿಷಯದಲ್ಲಿಯೂ, ಸತಿಯರ ವಿಷಯದಲ್ಲಿಯೂ ನಮ್ಮ ಗೌರವವು ಉಳಿದೇ ಉಳಿಯುತ್ತದೆ. ಏಕೆಂದರೆ ಅವರ ಆಚರಣೆಗಿಂತ, ಅವರ ದೃಷ್ಟಿ, ಶ್ರದ್ಧೆ, ವಿಶ್ವಾಸಗಳು ಮುಖ್ಯ. ಪ್ರವಾಸಿಯೊಬ್ಬನು (Pietro della Valle) ಹೀಗೆ ಹೇಳಿದ್ದಾನೆ - "ಸ್ತ್ರೀಯೊಬ್ಬಳು ಸತಿಯಾಗಲಿರುವಳೆಂದು ನನಗೆ ತಿಳಿದರೆ ಅಲ್ಲಿಗೆ ಹೋಗಿ ದಯಾರ್ದ್ರವಾತ್ಸಲ್ಯದಿಂದ ಅವಳನ್ನು ಗೌರವಿಸದಿರಲಾರೆ. ಅವಳ ಆ ಮಹಾ ಪಾತಿವ್ರತ್ಯ ಮತ್ತು ಪ್ರೇಮಗಳು ಅಂತಹ ಗೌರವಕ್ಕೆ ಅರ್ಹವಾದುವು." ಸಮಾಜದ ಬಲವಂತಕ್ಕೆ ಸಿಕ್ಕು ಅನೇಕರು ಮಡಿದ ನಿದರ್ಶನಗಳು ಇತಿಹಾಸದಲ್ಲಿ ದೊರಕುತ್ತವೆ. ಗುಜರಾತಿನಲ್ಲಿ ಹನ್ನೆರಡು ಅಡಿ ಚದುರದ ಮರದ ಮನೆಯನ್ನು ಕಟ್ಟಿ ಅದರಲ್ಲಿ ವಿಧವೆಯನ್ನು ಕಟ್ಟಿಹಾಕಿ ಬೆಂಕಿಯಿಡುತ್ತಿದ್ದರು. ಬಂಗಾಳದಲ್ಲಿ ಮರದ ಕಂಬಕ್ಕೆ ವಿಧವೆಯ ಕಾಲುಗಳನ್ನು ಕಟ್ಟಿ ಸುಟ್ಟುಹಾಕುತ್ತಿದ್ದರು. ಪ್ರಾಚೀನ ಕರ್ನಾಟಕದಲ್ಲಿ ಇಂತಹ ಕ್ರೂರ ಕೃತ್ಯಗಳು ಎಲ್ಲಿಯೂ ಕಾಣಿಸಿಕೊಂಡಿಲ್ಲ. ಬಹುಮಟ್ಟಿಗೆ ಸ್ವಸಂತೋಷದಿಂದ ಚಿತೆಯೇರಿದವರೇ ಹೆಚ್ಚು.

(ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ. ಎಂ. ಚಿದಾನಂದಮೂರ್ತಿ : ಪುಟ 313 ರಿಂದ 320 : ಕೃಪೆಯಿಂದ).

## 120.4 ನಿಸಿಧಿಗಲ್ಲು

ಸನ್ಯಸನ ವಿಧಿಯಿಂದ ಮಡಿದವರ ಸ್ಮಾರಕವಾಗಿ - ವೀರರಿಗೆ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದಂತೆ - ಕೆಲವು ಸ್ಮಾರಕಗಳನ್ನೂ ನಿಲ್ಲಿಸುತ್ತಿದ್ದರು. ಇವುಗಳನ್ನು 'ನಿಸಿದಿಗಲ್ಲು'ಗಳೆಂದು ಕರೆಯುತ್ತಾರೆ. 'ನಿಸಿಧಿಗೆ' 'ನಿಶೀಧಿಗೆ', 'ನಿಸಿಧಿ' 'ನಿಶೀಧಿಕಾ', 'ನಿಶಿಧಿಗೆ', 'ನಿಷಿದ್ಯಾಲಯ' 'ನಿಸಿದಿಗೆ', (ಪಾಠಾಂತರ - ನಿಷಿದಿ), ಸಂಸ್ಕೃತದಲ್ಲಿ ನಿಷೀದಿಕಾ, ಪ್ರಾಕೃತದಲ್ಲಿ 'ನಿಸೀಹಿಯಾ' ಎಂಬ ರೂಪಗಳುಂಟು. (ಈಗಲೂ ಉತ್ತರ ಕರ್ನಾಟಕದಲ್ಲಿ ನಿಸಿದ್ದಿ ಎಂದು ಕರೆಯುತ್ತಾರೆ.) ಇವುಗಳ ಬಸದಿಗಳ ಮುಂದಿನ ಪ್ರತ್ಯೇಕ ಶಿಲಾಫಲಕಗಳಲ್ಲಿ, ಬಸದಿಯ ಕಂಬಗಳ ಮೇಲೆ, ಊರ ಹೊರಗಿನ ಹೊಲಗಳಲ್ಲಿ ನಟ್ಟ ಕಲ್ಲುಗಳಲ್ಲಿ, ಬಂಡೆಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಸನ್ಯಸನದ ವಿಷಯವನ್ನು ಮಾತ್ರ ಹೇಳಿರಬಹುದು, ಅಥವಾ ಅದರ ಜೊತೆಗೆ ಸನ್ಯಸನವನ್ನು ಸ್ವೀಕರಿಸಿದ ವ್ಯಕ್ತಿಯ ಚಿತ್ರವೂ ಇರಬಹುದು. ಸ್ತ್ರೀಯರಿಬ್ಬರು ಹೀಗೆ ಮಡಿದ ವಿಷಯವನ್ನು ತಿಳಿಸುವ ಶಾಸನವೊಂದರಲ್ಲಿ ಮೂರು ಹಂತಗಳಿವೆ. ಕೆಳಗಿನ ಅಂತಸ್ತಿನಲ್ಲಿ ಆ ಇಬ್ಬರು ಸ್ತ್ರೀಯರ ಚಿತ್ರವೂ ಮಧ್ಯದ ಹಂತದಲ್ಲಿ ಅವರನ್ನು ವಿಮಾನದಲ್ಲಿ ಕರೆದೊಯ್ಯುತ್ತಿರುವ ಚಿತ್ರವೂ, ಮೇಲಿನ ಹಂತದಲ್ಲಿ ಜಿನಸಾನಿಧ್ಯದಲ್ಲಿ ಅವರಿಬ್ಬರು ನಿಂತಿರುವ ಚಿತ್ರವೂ ಇದೆ. ನಿಸಿದಿಗಲ್ಲುಗಳ ಮೇಲೆ ಸಾಮಾನ್ಯವಾಗಿ ಮುಕ್ಕೊಡೆಯಿರುವ ಜಿನನ, ಗುರುವಿನ ಮುಂದೆ ಸನ್ಯಸನ ವ್ರತಧಾರಿಯಾಗಿರುವ ವ್ಯಕ್ತಿಯ ಚಿತ್ರಗಳಿರುತ್ತವೆ. ಸನ್ಯಸನ ವ್ರತವನ್ನು ಬಸದಿಯಲ್ಲಾದರೂ ಸರಿಯೆ ಅಥವಾ ಬೆಟ್ಟದ ಮೆಲೆಯೋ ಊರ ಹೊರೆಗೋ ಆಚರಿಸಬಹುದಾಗಿದ್ದಿತು. 'ನಿಶಿಧಿಯಂ ನಿಜಿಸಿ', 'ನಿಶಿಧಿಯಂ ಮಾಡಿಸಿ', 'ನಿಶೀಧಿಕಾ ಕೃತಾ', 'ನಿಶಿಧಿಗೆಯ ನಿಲಿಸಿ' ಮುಂತಾದ ಮಾತುಗಳು ಬರುವುದರಿಂದಲೂ, ನಿಶಿದಿಗೆ ಎಂದು ಹೇಳಿರುವ ಸ್ಥಳದಲ್ಲಿ ಯಾವ ರೀತಿಯ ಕಟ್ಟಡವೂ ಅನಿವಾರ್ಯವಾಗಿ ಇರಲೇಬೇಕಾಗಿಲ್ಲವಾದುದರಿಂದಲೂ, ಫ್ಲೀಟ್ ಅವರು ಭಾವಿಸಿರುವಂತೆ ಅದು ಸನ್ಯಸನ ವಿಧಿಯಿಂದ ಸತ್ತವರ ಅವಶೇಷಗಳ ಮೇಲೆ ಕಟ್ಟಿದ ಗೋರಿ ಅಲ್ಲ. ಫ್ಲೀಟ್ ಅವರು ಮತ್ತೊಂದು ಕಡೆ ಡಾ. ಭಾವುದಾಜಿ ಅವರು ಸೂಚಿಸಿದ "a house of rest" ಎಂಬ ಅರ್ಥವನ್ನು ಒಪ್ಪಿಕೊಂಡಿದ್ದಾರೆ. ಇವೆಲ್ಲ ಅರ್ಥಗಳನ್ನೂ ಒಟ್ಟಿಗೆ ಸೇರಿಸಿ ಪಿ.ಕೆ. ಆಚಾರ್ಯರು ನಿಸಿದಿಯನ್ನು "a house for rest, a tomb, a monument" ಎಂಬರ್ಥಗಳನ್ನು ಕೊಟ್ಟಿದ್ದಾರೆ. ಮೇಲೆ ಹೇಳಿದಂತೆ ಹೊಲದಲ್ಲಿನ ಕಲ್ಲುಗಳ ಮೇಲೆ, ಕೆಲವು ಸಾರಿ ಬಂಡೆಯ

ಮೇಲೆ ಇರುವ ನಿಸಿದಿಗಳನ್ನು 'ವಿಶ್ರಾಂತಿ ಸ್ಥಳ, ಗೋರಿ' ಎಂದು ಹೇಗೆ ಭಾವಿಸುವುದು ? ಸನ್ಯಾಸಿಗಳ ದೇಹಗಳನ್ನು ಸುಟ್ಟ ಸ್ಥಳಗಳು ಎಂದು ಭಾವಿಸುವುದು ಕಷ್ಟ. ಬಸದಿಗಳಲ್ಲಿ ದೇಹಗಳನ್ನು ಸುಡುತ್ತಿದ್ದರೆಂಬುದನ್ನು ಊಹಿಸಿಕೊಳ್ಳುವುದು ಅಸಾಧ್ಯ. ಪದದ ನಿಷ್ಪತ್ತಿಯಲ್ಲಂತೂ ಇದಕ್ಕೆ ಅವಕಾಶವೇ ಇಲ್ಲ. - ವೀರಗಲ್ಲುಗಳು 'ಸ್ಮಾರಕ ಮಂದಿರ'ಗಳಲ್ಲವೇ ಅಲ್ಲ ಎನ್ನುವುದು ಸ್ಪಷ್ಟ. ವೀರಗಲ್ಲುಗಳಂತೆಯೇ ಇವುಗಳನ್ನೂ 'ಪರೋಕ್ಷವಿನಯ'ಕ್ಕಾಗಿ ನಿಲ್ಲಿಸುತ್ತಿದ್ದರು. 'ನಿಷೀದಿಕಾ' ಎಂಬ ಮಾತನ್ನು ಕೇಳಿದೊಡನೆಯೇ ಸಹಜವಾಗಿ 'ಉಪನಿಷತ್' ಎಂಬ ಮಾತು ನೆನಪಿಗೆ ಬರುತ್ತದೆ. 'ಉಪನಿಷತ್' ಎಂದರೆ (ಗುರುವಿನ) ಸಮೀಪದಲ್ಲಿ ಕುಳಿತುಕೊಳ್ಳುವುದು ಎಂದರ್ಥ. ನಿಸಿದಿಗಲ್ಲುಗಳ ಮೇಲೆ ಜಿನಸ್ತೋತ್ರವನ್ನು ಹೇಳುತ್ತಿರುವ ಗುರು, ಗುರುವಿನ ಮುಂದೆ ಪುಸ್ತಕವಿರುವ ವ್ಯಾಸಪೀಠ (ಅಥವಾ ಠವಣೆಕೋಲು. ಇದಕ್ಕೆ ಗೊಂಡೆಗಳೂ ಇರುವುದುಂಟು), ವ್ಯಾಸಪೀಟದ ಇನ್ನೊಂದು ಕಡೆ ವ್ರತಧಾರಿಯಾಗಿ ಜಿನಸ್ತೋತ್ರವನ್ನು ಕೇಳುತ್ತಿರುವ ವ್ಯಕ್ತಿ - ಈ ಚಿತ್ರಗಳಿರುತ್ತವೆ. ಗುರುವಿನ ಹತ್ತಿರ ಕುಳಿತು ಪ್ರಾಣ ತ್ಯಜಿಸಿದ ಸ್ಥಳಕ್ಕೆ, ಆ ಸ್ಥಳವನ್ನು ಮುಂದಿನವರು ನೆನಪಿನಲ್ಲಿ ಉಳಿಸುವುದಕ್ಕಾಗಿ ಕೆತ್ತಿದ್ದ ಬರಹಕ್ಕೆ "ನಿಷೀದಕಾ" ಎಂದು ಹೆಸರು. 'ಸದ್' ಎಂಬ ಧಾತುವಿನಿಂದ ಹೊರಟ ನಿಷತ್ತಿ ಎಂಬ ಪದಕ್ಕೆ sitting, resting ಎಂದೂ, ನಿಷಾದಿನ್ ಎಂಬ ಪದಕ್ಕೆ sitting down ಅಥವಾ lying ಎಂದೂ ಅರ್ಥಗಳಿವೆ. ಬಂಡೆಗಳ ಮೇಲೆ ಇಂತಹ ಬರಹಗಳಿದ್ದರೆ ಆ ಬಂಡೆಯ ತುದಿಯಲ್ಲಿ (ಅಥವಾ ಕೆಳಗಡೆ) ಮಳೆ ಬಿಸಿಲುಗಳನ್ನು ಸಹಿಸಿ ವ್ರತವನ್ನು ಆ ವ್ಯಕ್ತಿಯು ಪೂರೈಸಿದನು ಎಂದು ತಿಳಿಯಬೇಕು.

ಪತಿಯೊಡನೆ ಸಹಗಮನವನ್ನು ಮಾಡಿದ ಸತಿಯರ ಸ್ಮಾರಕಕ್ಕಾಗಿ ನಿಲ್ಲಿಸಿದ ಕಲ್ಲುಗಳು ಇವು. ಈ ಸತಿ ಅಥವಾ ಸಹಗಮನ ಪದ್ಧತಿ ಸಾರ್ವತ್ರಿಕವಾಗಿರಲಿಲ್ಲ; ಮತ್ತು ಬಲಾತ್ಕಾರದ ಅಂಶವೂ ಅಲ್ಲಿರಲಿಲ್ಲವೆಂಬುದು ಗಮನಿಸಬೇಕಾದ ಸಂಗತಿ. ಪತಿಯೇ ಪರದೈವವೆಂಬ ಭಾವನೆಯಲ್ಲಿ ಬೆಳೆದ ಹೆಣ್ಣು, ಪತಿಯ ಮರಣವನ್ನು ಸಹಿಸಲಾರದೆ, ಏಕೈಕ ನಿಷ್ಠೆಯಿಂದ ಆತನನ್ನು ಹಿಂಬಾಲಿಸಿದ ಸ್ವಸಂತೋಷದ ನಿರ್ಧಾರವೇ ಈ ಸಹಗಮನ ಪದ್ಧತಿಯ ಪ್ರಾರಂಭಕ್ಕೆ ಮೂಲವಾಗಿದ್ದಿರಬೇಕು. ಬಲಾತ್ಕಾರದ ಸಹಗಮನಕ್ಕೆ ಧರ್ಮಶಾಸ್ತ್ರಗಳೆಲ್ಲಿಯೂ ಒಪ್ಪಿಗೆಯನ್ನು ನೀಡಿಲ್ಲ. ಆದರೂ ಆದರೂ ಕೆಲವು ಕಡೆಗಳಲ್ಲಿ ಅದಕ್ಕೆ ಧಾರ್ಮಿಕ ವಿಧಿಯ ಸ್ವರೂಪ ಎಂದು ಹೆಣ್ಣಿಗೆ ಇಷ್ಟವಿಲ್ಲದಿದ್ದರೂ ಆ ವಿಧಿ ನಡೆಯುತ್ತಿದ್ದಂತೆ ತೋರುತ್ತದೆ. ವಿಜಯನಗರದ ಕಾಲದಲ್ಲಿ ನಡೆಯುತ್ತಿದ್ದ ಸಹಗಮನದ ವರ್ಣನೆಯನ್ನು ಬಾರ್ಬೋಸಾ ಮೊದಲಾದವರು ಕೊಟ್ಟಿದ್ದಾರೆ. ಆಗಲೂ ಅದು ನಡೆಯುತ್ತಿದ್ದುದು ಕೆಲವು ಗಾವುಂಡರು ಮತ್ತು ನಾಯಕರು ಇವರುಗಳಲ್ಲಿ ಮಾತ್ರ ಎಂದು ತೋರುತ್ತದೆ (ಪುಟ ೨೪೭). ಕನ್ನಡ ನಾಡಿನಲ್ಲಿ ಕಂಡುಬರುವ ಮಹಾಸತಿಯ ಕಲ್ಲುಗಳು ಸ್ವಸಂತೋಷದಿಂದ ಪತಿಯನ್ನು ಹಿಂಬಾಲಿಸಿದ ಮಹಾಸಾಧ್ವಿಯರ ಸ್ಮರಣೆಗಾಗಿ ನೆಟ್ಟವುಗಳು. ಸಾಮಾನ್ಯವಾಗಿ ಮಾಸ್ತಿಗಲ್ಲುಗಳ ಮೇಲೆ ಲಿಖಿತವೇನೂ ಕಂಡುಬರುವುದಿಲ್ಲ. ಅದು ಅರ್ಥವತ್ತಾದ ಶಿಲ್ಪದಿಂದ ಕೂಡಿದ ಒಂದು ಶಿಲಾಫಲಕವಾಗಿರುತ್ತದೆ. ಆ ಶಿಲಾಫಲಕದಲ್ಲಿ ಒಂದು ಸ್ತಂಭದ ಆಕೃತಿ : ಆ ಸ್ತಂಭದ ಮಧ್ಯದಿಂದ ಹೊರಚಾಚಿ ಮೇಲಕ್ಕೆತ್ತಿದಂತಿರುವ ಒಂದು ದೊಡ್ಡ ತೋಳಿನ ಚಿತ್ರ : ಅದರ ಕೈಯಲ್ಲಿ ಹೆಬ್ಬೆರಳು ಮತ್ತು ತೋರು ಬೆರಳುಗಳ ಮಧ್ಯದಲ್ಲಿ ಒಂದು ನಿಂಬೆಯ ಹಣ್ಣು ; ಈ ಕೈಯ್ಯ ಕೆಳಗಡೆ ಚಿಕ್ಕ ಆಕೃತಿಯಲ್ಲಿ ಕೆತ್ತಿದ ಪುರುಷ ಮತ್ತು ಸ್ತ್ರೀವಿಗ್ರಹಗಳು ; ಅವರ ಪಕ್ಕದಲ್ಲಿ ಅಥವಾ ಮೇಲ್ಭಾಗದಲ್ಲಿ ಒಂದು ಶಿವಲಿಂಗ, - ಇದು ಸಾಮಾನ್ಯವಾಗಿ ಮಾಸ್ತಿಕಲ್ಲಿನ ಮೇಲಿರುವ ಶಿಲ್ಪ. ಕೆಲವು ವೇಳೆ ಪುರುಷನು ಕುಳಿತಿದ್ದು ಅವನ ಸುತ್ತ ಸ್ತ್ರೀಯು ನರ್ತಿಸುತ್ತಿರುವಂತೆ ಚಿತ್ರಿಸಿರುವುದೂ ಉಂಟು. ಈ ಶಿಲ್ಪ ಒಂದು ಬಗೆಯ ಸಾಂಕೇತಿಕವಾದ ಅರ್ಥವನ್ನು ಒಳಗೊಂಡಂತೆ ತೋರುತ್ತದೆ. ಹೊರಚಾಚಿದ ದೊಡ್ಡ ಕೈಮದನನ ಕೈಯನ್ನು ಸೂಚಿಸುವಂತಿದೆ. ಆ ಮನ್ಮಥನ ಕೈಯ್ಯ ಪ್ರಭಾವ ಇವರ ಜೀವನವನ್ನು ಹೀಗೆ ರೂಪಿಸಿತು - ಎಂಬುದನ್ನು ಅದು ಸಾರುವಂತಿದೆ. ಕೆಲವು ಕಲ್ಲುಗಳ ಮೇಲೆ ಒಂದು ಕೈಗೆ ಬದಲಾಗಿ ಎರಡು ಕೈಗಳಿರುವುದೂ ಉಂಟು. "ಒಂಟಿ ಕೈ ಮಾಸ್ತಿ" "ಎರಡು ಕೈಮಾಸ್ತಿ" ಎಂದು ಅವುಗಳನ್ನು ಕರೆಯಲಾಗಿದೆ. ಈ ಸಾಂಕೇತಿಕವಾದ ಶಿಲ್ಪವನ್ನು ಪಡೆಯದಿರುವ ಮಾಸ್ತಿಕಲ್ಲುಗಳೂ ಉಂಟು. ಅವುಗಳ ಮೇಲೆ ಮದುವೆಗೆ

ಅಲಂಕೃತಳಾದ ಯುವತಿಯ ವಿಗ್ರಹವೊಂದು ಮಾತ್ರ ಕಂಗೊಳಿಸುತ್ತದೆ. ಬಹುಶಃ ತನ್ನ ಪತಿಯನ್ನೂ ಹಿಂಬಾಲಿಸಿ ನಡೆದಿರುವ ಸುದ್ದಿಯನ್ನು ಅದು ಸೂಚಿಸುತ್ತದೆನ್ನಬಹುದು. ವಿಶೇಷವೇನೆಂದರೆ ವೀರಗಲ್ಲುಗಳ ಮೇಲಿರುವಂತೆ ಇವುಗಳ ಮೇಲೆ ಶಾಸನವಿಲ್ಲದಿರುವುದು. ಸಹಗಮನ ಮಾಡಿದ ಸ್ತ್ರೀ ಯಾರೆಂಬುದಾಗಲೀ ಅವಳ ಪತಿಯ ಹೆಸರಾಗಲೀ ಅವುಗಳಿಂದ ತಿಳಿದುಬರುವುದಿಲ್ಲ. ದಂಪತಿಗಳ ಅಮರ ಪ್ರೇಮದ ನಾಮಘೋಷಣೆ ಅನಗತ್ಯವೆಂಬ ಭಾವನೆಯೇ ಈ ಮೌನಕ್ಕೆ ಕಾರಣವೋ ಏನೋ - (ಕರ್ಣಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್. ತಿಪ್ಪೇರುದ್ರಸ್ವಾಮಿ ಕೃಪೆಯಿಂದ).

ಈ ನಿಸಿದಿಗಳು ತೀರ್ಥಕ್ಷೇತ್ರಗಳಂತೆ ಪರಮ ಪವಿತ್ರ ಪ್ರದೇಶಗಳಾಗಿದ್ದವು. ಭದ್ರ ಬಾಹುವು ಸನ್ಯಸಾನ ವಿಧಿಯಿಂದ ಮಡಿದಮೇಲೆ ಭದ್ರಬಾಹುವಿನ ನಿಸಿದಿಗೆಯನ್ನು ಚಂದ್ರಗುಪ್ತನು ವಂದಿಸುತ್ತ ಅಲ್ಲಿಯೇ ತಪಸ್ಸು ಮಾಡುತ್ತಿದ್ದನೆಂದೂ, ದಕ್ಷಿಣಕ್ಕೆ ಹೋದ ಮುನಿಗಳು ಭದ್ರಬಾಹುವಿನ ನಿಸಿದಿಗೆಯನ್ನು ವಂದಿಸಿ ಹೋಗಲು ಶ್ರವಣಬೆಳಗೊಳಕ್ಕೆ ಹಿಂದಿರುಗಿಬಂದರೆಂದೂ ವಡ್ಡಾರಾಧನೆಯಲ್ಲಿ ಹೇಳಿದೆ.

ಜೈನ ಸನ್ಯಾಸಿಗಳು ಸಲ್ಲೇಖನ ವ್ರತವನ್ನು ಕೈಕೊಂಡು ಆಹಾರವನ್ನು ಸ್ವೀಕರಿಸಿದ ದೇಹವನ್ನು ಬಿಟ್ಟು ಮೋಕ್ಷವನ್ನು ಪಡೆದುದರ ಸ್ಮಾರಕವಾಗಿ ನೆಟ್ಟಿರುವ ಕಲ್ಲುಗಳು ಇವು. ಹಾಡುವಳ್ಳಿ ಹಿರೇಬಾಸ್ತಿಯ ಮುಂದಿರುವ ನಿಶಿಧಿಗಲ್ಲೊಂದು (ಸು. ೧೪೨೩) ಮಾಣಿಕಸೇನ ಎಂಬುವನು ಅಲ್ಲಿ ಸಲ್ಲೇಖನ ವ್ರತಧಾರಿಯಾಗಿ ಮೋಕ್ಷವನ್ನು ಪಡೆದ ಘಟನೆಯನ್ನು ಹೇಳುತ್ತಿದೆ. ಶ್ರವಣಬೆಳುಗೊಳದ ಶಾಸನದಲ್ಲಿ ಇಂತಹ ಅನೇಕ ನಿಶಿಧಿಗಲ್ಲುಗಳನ್ನು ಕಾಣಬಹುದು. (ಕರ್ಣಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪು. ೨೪೮).

## 120.5 ಸಾರಾಂಶ

ಕೋರ್ಸ್ - Xರ 30ನೇ ಬ್ಲಾಕ್‌ನ 117, 118, 119 ಮತ್ತು 120 ಸಂಖ್ಯೆಯ ನಾಲ್ಕು ಘಟಕಗಳಲ್ಲಿ ಈವರೆವಿಗೂ ಶಾಸನ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಾನುಪೂರ್ವಿ ತಾತ್ವಿಕ ವಿಚಾರಗಳನ್ನು ಮನಗಂಡಿರಿ. ಇಂಥ ತಾತ್ವಿಕ ವಿಚಾರಗಳ ಹಿನ್ನೆಲೆಯಲ್ಲಿ ಕನ್ನಡ ಶಾಸನಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಲು ಸಹಕಾರಿಯಾಗುವುದು.

## 120.6 ಅಭ್ಯಾಸಕ್ಕೆ ಪ್ರಶ್ನೆಗಳು

1. ವೀರಗಲ್ಲು ಎಂದರೇನು ? ಅದರ ಮಹತ್ವವನ್ನು ನಿರೂಪಿಸಿ.

2. ಮಾಸ್ತಿಗಲ್ಲು ಎಂದರೇನು ? ವಿಶದವಾಗಿ ನಿರೂಪಿಸಿ.

3. ನಿಸಿಧಿಗಲ್ಲು ಎಂದರೇನು ? ಅದರ ಮಹತ್ವವನ್ನು ನಿರೂಪಿಸಿ.

# ಘಟಕ - 121

## ಹಲ್ಮಿಡಿ ಶಾಸನ : ಭಾಗ - ೧ ಪಠ್ಯ - ಅರ್ಥ

ರಚನೆ

121.0 ಉದ್ದೇಶ

121.1 ಪೀಠಿಕೆ

121.2 ಹಲ್ಮಿಡಿ ಶಾಸನ ಪಾಠ

121.2.1 ಶಾಸನ ದೊರೆತ ಸ್ಥಳ

121.2.2 ಶಾಸನದ ವರ್ಣನೆ

121.2.3 ಶಾಸನದ ಲಿಪಿ

121.2.4 ಶಾಸನದ ಕಾಲ, ಕರ್ತೃತ್ವ

121.2.5 ಶಾಸನದ ಮಹತ್ವ

121.2.6 ಶಾಸನದ ಅನ್ವಯ

121.3 ಶಾಸನದ ಅರ್ಥ

121.3.1 ಎಂ.ಎಚ್. ಕೃಷ್ಣ ಅವರು

121.3.2 ಜಿ.ಎಸ್. ಗಾಯಿ ಅವರು

121.3.3 ಟಿ.ವಿ. ವೆಂಕಟಾಚಲಶಾಸ್ತ್ರೀ

121.4 ಸಾರಾಂಶ

## 121.0 ಉದ್ದೇಶ

- ಹಲ್ಮಿಡಿ ಶಾಸನದ ಕಾಲ, ಕರ್ತೃ, ದೊರೆತ ಸ್ಥಳಗಳನ್ನು ಕುರಿತ ಮಾಹಿತಿ ತಿಳಿಯುವುದು.
- ಕನ್ನಡ ಶಾಸನಗಳ ಸಂದರ್ಭದಲ್ಲಿ ಹಲ್ಮಿಡಿ ಶಾಸನದ ಮಹತ್ತ್ವವನ್ನು ಮನನ ಮಾಡಿಕೊಳ್ಳುವುದು.
- ಹಲ್ಮಿಡಿ ಶಾಸನ ಕುರಿತು ವಿದ್ವಾಂಸರು ಮಂಡಿಸಿರುವ ವಾದ-ವಿಚಾರಗಳ ಸಾರಾಂಶ ಗ್ರಹಿಸುವುದು.

## 121.1 ಪೀಠಿಕೆ

ಕನ್ನಡ ಶಾಸನ ಅಧ್ಯಯನಕ್ಕೆ ಸಂಬಂಧಿಸಿದ ಹಿಂದಿನ ಎರಡು ಸಂಚಿಕೆಗಳಲ್ಲಿ ಶಾಸನ ಶಾಸ್ತ್ರ ಕುರಿತಾದ ತಾತ್ತ್ವಿಕ ವಿಚಾರಗಳನ್ನು ಅಭ್ಯಾಸ ಮಾಡಿದ್ದೀರಿ. ಮುಂದಿನ ಐದು ಸಂಚಿಕೆಗಳಲ್ಲಿ ನಿರ್ದಿಷ್ಟವಾದ ಕೆಲವು ಶಾಸನಗಳನ್ನು 'ಪಠ್ಯ'ವಾಗಿ ಅಭ್ಯಾಸ ಮಾಡಲಿದ್ದೀರಿ. ಮಹತ್ತ್ವದ ಹತ್ತು ಶಾಸನಗಳು ಇಲ್ಲಿ ವಿಶ್ಲೇಷಣೆಗೆ ಒಳಪಟ್ಟಿವೆ. ವಸ್ತುವೈವಿಧ್ಯ, ಭಿನ್ನ ಕಾಲದ ರಚನೆ, ಪ್ರಾದೇಶಿಕ ಹಾಗೂ ಭಾಷಿಕ ಪ್ರಾತಿನಿಧ್ಯವನ್ನು ಇಲ್ಲಿನ ಶಾಸನಗಳು ಪ್ರತಿನಿಧಿಸುತ್ತವೆ. ಈ ಬಗೆಯ ಆಯ್ಕೆಯು ಕನ್ನಡ ಶಾಸನಗಳ ರೂಪ ಮತ್ತು ಸ್ವರೂಪವನ್ನು ಬಹುತೇಕವಾಗಿ ಕಟ್ಟಿಕೊಡುವಲ್ಲಿ ನೆರವಾಗಲಿದೆ.

ಪ್ರಸ್ತುತ ಸಂಚಿಕೆಯಲ್ಲಿ 'ಹಲ್ಮಿಡಿ ಶಾಸನ' ಮತ್ತು 'ಕಪ್ಪೆ ಅರಭಟ್ಟನ ಶಾಸನ'ಗಳನ್ನು ವಿಶ್ಲೇಷಣೆಗೆ ಎತ್ತಿಕೊಳ್ಳಲಾಗಿದೆ. ಮೊದಲ ಎರಡು ಘಟಕಗಳಲ್ಲಿ ಹಲ್ಮಿಡಿ ಶಾಸನವೂ, ಅನಂತರದ ಎರಡು ಘಟಕಗಳಲ್ಲಿ ಕಪ್ಪೆ ಅರಭಟ್ಟನ ಶಾಸನವೂ ವಿವೇಚನೆಗೊಳಪಟ್ಟಿದೆ. ಹಲ್ಮಿಡಿ ಶಾಸನವು ಕನ್ನಡ ಶಾಸನಗಳಲ್ಲಿ ತನ್ನ ಕಾಲದ ದೃಷ್ಟಿಯಿಂದ ಮಹತ್ತ್ವದ ಸ್ಥಾನವನ್ನು ಪಡೆದಿದೆ. ಶಾಸನ ಅಧ್ಯಯನಕ್ಕೆ ತೊಡಗುವ ಯಾವ ವಿದ್ಯಾರ್ಥಿಯೇ ಆಗಲಿ ಈ ಶಾಸನವನ್ನು (ಅದರ ಪ್ರಾಚೀನತೆಯ ಕಾರಣಕ್ಕಾದರೂ) ಪರಿಚಯಿಸಿಕೊಂಡೇ ಮುಂದೆ ಸಾಗಬೇಕಿದೆ. ಅದಕ್ಕೆಂದೇ ಕನ್ನಡ ಶಾಸನ ಅಧ್ಯಯನಾಕಾಂಕ್ಷಿಗಳಾದ ನಿಮ್ಮನ್ನು 'ಹಲ್ಮಿಡಿ ಶಾಸನ'ದ ಪರಿಚಯದ ಮೂಲಕ ಅಧ್ಯಯನಕ್ಕೆ ಕರೆದೊಯ್ಯುತ್ತಿದ್ದೇವೆ.

## 121.2 ಹಲ್ಮಿಡಿ ಶಾಸನ - ೧

ಜಯತಿ ಶ್ರೀಪರಿಷ್ವಂಙ್ಗ ಶ್ಯಾರ್ಙ್ಗ [ವ್ಯಾನತಿ] ರಚ್ಯುತಃ
ದಾನವಾಕ್ಷ್ಣೋರ್ಯುಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ

ನಮಃ ಶ್ರೀ ಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ (ನಾ) ಅರಿ ಕ
ಕುಸ್ಥ ಭಟ್ಟೋರನಾಳೆ ನರಿದಾವಿ [ಳೆ] ನಾಡುಳ್ ಮೃಗೇಶ ನಾ
ಗೇನ್ದ್ರಾಭೀಳಭ್ಬಟಹರಪ್ಪೋರ್ ಶ್ರೀ ಮೃಗೇಶನಾಗಾಹ್ವಯ
ರಿರ್ವ್ವರಾ ಬಟರಿ ಕುಲಾಮಲವ್ಯೋಮ ತಾರಾಧಿನಾಥನ್ನಳಪ
ಗಣ ಪಶುಪತಿಯಾ ದಕ್ಷಿಣಾಪಥ ಬಹುಶತಹವನಾ
ಹವದು[ಳ್] ಪಶುಪ್ರದಾನಶೌರ್ಯೋದ್ಯಮಭರಿತೋ(ನ್ದಾನ)ಪ
ಶುಪತಿಯೆನ್ದು ಪೊಗಟೆಪ್ಪೊಟ್ಟಣ ಪಶುಪತಿ

ನಾಮಧೇಯನಾಸರಕ್ಕೆಲ್ಲ ಭಟರಿಯಾ ಪ್ರೇಮಾಲಯ
ಸುತನ್ಗೆ ಸೇನ್ದ್ರಕ ಬಣೋಭಯ ದೇಶದಾ ವೀರಾಪುರುಷ ಸಮಕ್ಷ
ದೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನಾ ವಿಜ
ಅರಸನ್ಗೆ ಬಾಳ್ಗಚ್ಚು ಪಲ್ಮಡಿಉಂ ಮೂಱುವಳ್ಳಿಉಂ ಕೊ
ಟ್ಟಾರ್ ಬಟಾರಿ ಕುಲದೊನಳಕದಮ್ಬನ್ಕಳ್ದೋನ್ ಮಹಾಪಾತಕನ್

ಇರ್ವ್ವರುಂ ಸಬ್ಬಿನ್ಗದರ್ ವಿಜಾರಸರುಂ ಪಲ್ಮಡಿಕೆ ಕುಱು
ಮ್ಬಿಡಿವಿಟ್ಟಾರ್ ಅದಾನಱಿವೊನ್ಗೆ ಮಹಾಪಾತಕಮ್ ಸ್ವಸ್ತಿ

ಎಡಪಕ್ಕದಲ್ಲಿ

ಭಟ್ಟರ್ಗ್ಗೀಗಟ್ಟೆ ಒಡ್ಡಲಿ ಆ ಪತ್ತೊನ್ದಿ ವಿಟ್ಟಾರಕರ

(ಈ ಶಾಸನ ಪಾಠ ಮೊದಲು ಮೈಸೂರು ಸರ್ಕಾರದ ಶಾಸನ ಇಲಾಖೆಯ ೧೯೩೬ನೆಯ ಇಸವಿಯ ವಾರ್ಷಿಕ ವರದಿಯಲ್ಲಿ (ಎಂ.ಎ.ಆರ್) ಪ್ರಕಟವಾಯಿತು ; ಬಳಿಕ ಸ್ವಲ್ಪ ಪರಿಷ್ಕಾರದೊಂದಿಗೆ ಪ್ರಬುದ್ಧ ಕರ್ಣಾಟಕ ಪತ್ರಿಕೆಯ ಸಂ. ೨೦ - ಸಂ. ೩ರಲ್ಲಿ, ೧೯೩೯ರಲ್ಲಿ ಆವೃತ್ತಿಗೊಂಡಿತು. ಅನಂತರದ ವರ್ಷಗಳಲ್ಲಿ ಶಾಸನ ಪಾಠ ವಸ್ತು ವಿಮರ್ಶೆಗಳಿಗೆ ಈ ಆಕರಗಳನ್ನು ಗಮನಿಸುವುದೇ ರೂಢಿಯಾಗಿದೆ.

ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಎಪಿಗ್ರಾಫಿಯ ಕರ್ನಾಟಕದ ಪರಿಷ್ಕೃತ ಮುದ್ರಣದಲ್ಲಿ ಸಹ ಇದು ಸೇರಿದ್ದು (ಸಂ.೯, ೧೯೯೦; ಪು. ೨೨೨ ; ಶಾಸನ ಸಂಖ್ಯೆ ೨೩೬). ಇಲ್ಲಿ ಶಾಸನ ಪಾಠ ಬಲುಮಟ್ಟಿಗೆ ಪ್ರಬುದ್ಧ ಕರ್ಣಾಟಕದ ಶಾಸನ ಪಾಠಕ್ಕೆ ಅನುಗುಣವಾಗಿಯೇ ಇದೆ. ಆದರೆ ಕರ್ನಾಟಕದ ಹಿರಿಯ ಶಾಸನ ತಜ್ಞರಾಗಿದ್ದ ಜಿ.ಎಸ್. ಗಾಯಿಯವರು ಈಚೆಗೆ ತಾವು ಪ್ರಕಟಿಸಿದ್ದ 'ಹಲ್ಮಿಡಿಶಾಸನ ಒಂದು ಅಧ್ಯಯನ' ಎಂಬ ಒಂದು ಲೇಖನದಲ್ಲಿ ('ವಜ್ರದೀಪ್ತಿ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೦, ಪು. ೧-೧೩) ಮೂಲದ ಪಾಠವನ್ನು ಅಲ್ಲಲ್ಲಿ ಸ್ವಲ್ಪ ಭಿನ್ನವಾಗಿ ಓದಲು ಸಾಧ್ಯವಿದೆಯೆಂದು ಸೂಚಿಸಿದ್ದಾರೆ ; ಆಸಕ್ತರು ಆ ಲೇಖನವನ್ನು ಓದಿ ತಿಳಿಯಬಹುದಾಗಿದೆ.)

## 121.2.1 ಶಾಸನ ದೊರೆತ ಸ್ಥಳ

ಹಲ್ಮಿಡಿಯೆಂಬ ಒಂದು ಸಣ್ಣ ಗ್ರಾಮದಲ್ಲಿ ಈ ಶಾಸನ ಕಂಡುಬಂದಿತು. ಈ ಗ್ರಾಮ ಬೇಲೂರಿನಿಂದ ಚಿಕ್ಕಮಗಳೂರಿಗೆ ಹೋಗುವ ಮುಖ್ಯರಸ್ತೆಯ ಪಶ್ಚಿಮಕ್ಕೆ ೨ ಮೈಲಿಗಳ ದೂರದಲ್ಲಿ ಯಗಚಿ ನದಿಗೆ ಸೇರುವ ಹಳ್ಳವೊಂದರ ಬಲ ದಂಡೆಯ ಮೇಲಿದೆ. ಇದು ಪ್ರಾಚೀನ ಕಾಲದಿಂದಲೂ ಇರುವ ಹಳ್ಳಿ. ಇದೇ ಈಗ ಬೇಲೂರು ತಾಲ್ಲೂಕಿನ ಹನುಮಿಡಿ (ಹನುಂಡಿ).

ಈಗ ಹಲ್ಮಿಡಿ ಗ್ರಾಮದಲ್ಲಿ ಪ್ರಸಿದ್ಧವಾದ ಈ ಕದಂಬ ಕಾಲೀನವಾದ ಶಾಸನವೇ ಅಲ್ಲದೆ ಒಂದು ವೀರಗಲ್ಲು, ಒಂದು ಅಸಮಗ್ರವಾದ ಸಣ್ಣ ಶಾಸನ ಸಹ ದೊರೆತು ಪ್ರಕಟಗೊಂಡಿವೆ. ಬೊಮ್ಮಯ ಸಾಹಣಿಯ ಮಗನು (ಹೆಸರು ನಷ್ಟವಾಗಿದೆ) ಬೀಜೆಯನ ಮಗ ದೊರೆಯನ ಸಲುವಾಗಿ ಹಾಕಿಸಿದ ವೀರಗಲ್ಲು ೧೨೭೭ ರದು ; ಇದು ಈಶ್ವರ ದೇವಾಲಯದ ಮುಂದೆ ನಟ್ಟಿರುವ ವೀರಗಲ್ಲು. ಇನ್ನೊಂದು ಸಣ್ಣ ಶಾಸನ ಮದಿಗಉಡನೆಂಬ ಒಬ್ಬನ ಹೆಸರು ಹೇಳುವ, ೨೨-೯-೧೭೦೭ ಎಂಬುದಾಗಿ ತೇದಿ ಗುರುತಿಸಿರುವ ತೀರ ಅಸಮಗ್ರವಾದ ಶಾಸನ.

ಹಲ್ಮಿಡಿ ಗ್ರಾಮದ ಉಲ್ಲೇಖಗಳು ಅನ್ಯತ್ರ ಸಹ ದೊರೆಯುತ್ತಿವೆ : (೧) ಪಶ್ಚಿಮ ಗಂಗರ ಮುಮ್ಮಡಿ ರಾಚಮಲ್ಲನ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ಶಾಸನ (ಎಪಿಗ್ರಾಫಿಯ ಇಂಡಿಕ, ಸಂ. ೮, ಪು. ೫೦-೫೯; ಎಪಿಗ್ರಾಫಿಯ ಕರ್ನಾಟಕ, ಸಂ.೬, ಚಿಕ್ಕಮಗಳೂರು ೩). ತೇದಿ ೯೯೧-೧೦೦೪ರ ನಡುವೆ. (೨) ಕದಂಬ ವಂಶದ ಇಮ್ಮಡಿ ಕೃಷ್ಣವರ್ಮನ ಬೆಣ್ಣೂರು ತಾಮ್ರ ಶಾಸನ (ಎಪಿಗ್ರಾಫಿಯ ಕರ್ನಾಟಕ ಸಂ.೫, ಬೇಲೂರು ೨೪೫). ಈ ಬೆಣ್ಣೂರು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಒಂದು ಗ್ರಾಮ. ಇಲ್ಲಿ ಹಲ್ಮಿಡಿ ಗ್ರಾಮ ಸೇಂದ್ರಕ ವಿಷಯದಲ್ಲಿ ಸೇರಿತ್ತೆಂದು ಹೇಳಿದೆ. ತೇದಿ ೬ನೇ ಶತಮಾ.ನ. (೩) ಚಿಕ್ಕಮಗಳೂರು ತಾಲ್ಲೂಕಿನ ಉಪ್ಪಹಳ್ಳಿ ಗ್ರಾಮದ ೯೫೯ರ ಶಾಸನ. ಇಲ್ಲಿ ಪಲ್ಮಾಡಿ ಗ್ರಾಮವನ್ನು ಕಿರಿಯ ಮುಗಳಿ ಗ್ರಾಮವನ್ನು ಒಟ್ಟಿಗೆ ಹೇಳಿದೆ. ಇವು ಕ್ರಮವಾಗಿ ಹಲ್ಮಿಡಿ ಗ್ರಾಮ, ಚಿಕ್ಕಮಗಳೂರು ಎಂದು ತಿಳಿಯಬಹುದಾಗಿದೆ.

ಹಲ್ಮಿಡಿ ಗ್ರಾಮದಲ್ಲಿ ಅಷ್ಟೇನು ಪ್ರಾಚೀನವಲ್ಲದ, ಶಿಲ್ಪದ ದೃಷ್ಟಿಯಿಂದ ಗಣ್ಯವಲ್ಲದ ಒಂದು ವೀರಭದ್ರ ದೇವಾಲಯವಿದೆ. ಹಿಂದೆ ಈ ಊರನ್ನು ಬಳಸಿದ್ದ ಮಣ್ಣಿನ ಕೋಟೆ ಈಗ ಕಾಣಿಸುತ್ತಿಲ್ಲ. ಈ ಕೋಟೆಯ ಪಶ್ಚಿಮದ ಬಾಗಿಲು ನಿಂತಿದ್ದ ಸ್ಥಳದ ಹತ್ತಿರ ಸು.೧೯೩೦ರಲ್ಲಿ ಕಲ್ಲಿನ ಮೋಟುಗಂಬವೊಂದು ನೆಲದಲ್ಲಿ ದೊರೆಯಿತು. ಅದರ ಮೇಲೆ ಲಿಖಿತವಿದ್ದುದರಿಂದ ಗ್ರಾಮಸ್ಥರು ಅದನ್ನು ಒಯ್ದು ವೀರಭದ್ರ ದೇವಾಲಯದ ಎದುರಿನ ಬಯಲಿನಲ್ಲಿ ನಿಲ್ಲಿಸಿದರು. ಬರಹದ ಪ್ರಸಿದ್ಧಿ ಪ್ರಾಚೀನತೆ ಏನನ್ನೂ ತಿಳಿಯದ ಮುಗ್ಧ ಜನ ಆ ಕಂಬಕ್ಕೆ ಅಲಕ್ಷ್ಯವಾಗಿ ದನಕರುಗಳನ್ನು ಕಟ್ಟುವುದು ಮೊದಲಾದ ಒರಟಾಟಗಳಿಗೆ ಬಳಸುತ್ತಿದ್ದುದು ಸಾಮಾನ್ಯವಾಗಿತ್ತು. ಈಗ ಅದು ಮೈಸೂರು ಶಾಸನ ಇಲಾಖೆಯ ರಕ್ಷಣೆಗೆ ಒಳಪಟ್ಟು, ಆ ಇಲಾಖೆಯ ಪ್ರದರ್ಶನ ಶಾಲೆಯಲ್ಲಿ ಸುರಕ್ಷಿತವಾಗಿದೆ.

### 121.2.2 ಶಾಸನದ ವರ್ಣನೆ

ಮೈಸೂರು ಶಾಸನ ಇಲಾಖೆಯ ೧೯೩೬ನೆಯ ಇಸವಿಯ ವಾರ್ಷಿಕ ವರದಿಯಲ್ಲಿ ಈ ಶಾಸನದ ಅಧಿಕೃತ ಪಾಠ, ಆ ಸಂಬಂಧವಾದ ವಿವರ ವಿಮರ್ಶೆಯೊಡನೆ ಮೊದಲ ಬಾರಿಗೆ ಪ್ರಕಟವಾಯಿತು (M.H. Krishna : Lithic Record found at Halmidi, Annual Report of the Mysore Archaeological Department for the year 1936, pp. 72-81) ಮತ್ತೆ ಶಾಸನಪಾಠ ಮತ್ತು ಸಂಕ್ಷಿಪ್ತ ವಿಮರ್ಶೆ ಪ್ರಬುದ್ಧ ಕರ್ಣಾಟಕದ ಸಂಪುಟ ೨೦ - ಸಂಚಿಕೆ ೩ (೧೯೩೯)ರಲ್ಲಿ ಡಾ. ಎಂ.ಎಚ್. ಕೃಷ್ಣರ ಹೆಸರಿನಲ್ಲೇ 'ಅತ್ಯಂತ ಪ್ರಾಚೀನ ಕನ್ನಡ ಶಾಸನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾದವು. ಈ ಎರಡೂ ಮೂಲಗಳ ಶಾಸನ ಪಾಠ ಮತ್ತು ವಿಷಯ ವಿಮರ್ಶೆ ಅಲ್ಪ ವ್ಯತ್ಯಾಸಗಳ ಹೊರತು ಒಂದೇ ಆಗಿವೆ. ಇವನ್ನು ಆಧರಿಸಿ ಶಾಸನದ ವರ್ಣನೆ ಇತ್ಯಾದಿ ವಿಷಯಗಳನ್ನು ಮುಂದೆ ಗಮನಿಸಬಹುದು.

ಶಾಸನದ ಶಿಲೆ ನಾಲ್ಕು ಅಡಿ ಎತ್ತರ, ಒಂದು ಅಡಿ ಅಗಲ ಮತ್ತು ಒಂಬತ್ತು ಅಂಗುಲ ದಪ್ಪವಾಗಿದೆ. ಇದರಲ್ಲಿ ಮೂರು ಭಾಗಗಳು ಕಾಣುತ್ತವೆ. ಕೆಳಗಣ ಹಾಸುಗಲ್ಲಿನ ಗುಳಿಗೆ ಸಿಕ್ಕಿಸಲು ಕೆತ್ತಿರುವ ತೀರು ಅಥವಾ ಪಾದ. ಇದರ ಮೇಲೆ ಸುಮಾರು ಒಂದು ಮೊಳದಷ್ಟು ಎತ್ತರವಾಗಿರುವ ನಯ ಮಾಡಿದ ಕಂಬ, ಅದರ ಮೇಲೆ ಕಮಾನಿನ ಆಕಾರವುಳ್ಳ ಹತ್ತು ಅಂಗುಲ ಎತ್ತರವಿರುವ ತಲೆ. ಈ ತಲೆಯ ಮುಂಭಾಗದಲ್ಲಿ ಸುಮಾರು ಏಳು ಅಂಗುಲ ಅಗಲವಿರುವ ಚಕ್ರವೊಂದನ್ನು ಕೆತ್ತಿದೆ. ಪಕ್ಕದಲ್ಲಿಯ ಶ್ಲೋಕದಿಂದ ಅದು ವಿಷ್ಣುವಿನ ಸುದರ್ಶನ ಚಕ್ರವೆಂಬುದಾಗಿ ತಿಳಿಯುವುದು. ಈ ಚಕ್ರದ ಸುತ್ತಲೂ ಕುದುರೆಯ ಲಾಳದ ಆಕಾರದಲ್ಲಿ ಶಾಸನದ ಮೊದಲನೆಯ ಪಂಕ್ತಿಯನ್ನು ಕೊರೆದಿದೆ. ಕಂಬದ ಮೇಲೆ ಎರಡನೆಯ ಪಂಕ್ತಿಯಿಂದ ಮೊದಲು ಮಾಡಿ ಹದಿನೈದನೆಯ ಪಂಕ್ತಿಯವರೆಗೆ ಬರೆದಿದ್ದು, ಕಂಬದ ಬಲಮಗ್ಗುಲಿನಲ್ಲಿ ಮೇಲಿನಿಂದ ಕೆಳಕ್ಕೆ ಅಡ್ಡಲಾಗಿ ಹನ್ನೆರಡನೆಯ ಪಂಕ್ತಿ ಲಿಖಿತಗೊಂಡಿದೆ.

ಶಾಸನದ ಕಲ್ಲು ಒಂದು ವಿಧವಾದ ಬಳಪದ ಕಲ್ಲು ; ಶಾಸನ ಸ್ಫುಟವಾಗಿ ಕಾಣಿಸುತ್ತದೆ. ಆದರೆ ಹಳ್ಳಿಯ ಹುಡುಗರ ಕಲ್ಲಿನೇಟಿನಿಂದ ಶಾಸನದ ಕೆಲವೆಡೆಗಳಲ್ಲಿ ಹಳ್ಳಗಳು ಬಿದ್ದು, ಸುಮಾರು ಇಪ್ಪತ್ತು ಕಡೆಗಳಲ್ಲಿ ಅಕ್ಷರಗಳನ್ನು ಗುರುತಿಸುವುದು ದುಸ್ಸಾಧ್ಯವಾಗಿದೆ. ಅಕ್ಷರಗಳು ೨/೩ ಅಂಗುಲ ಉದ್ದ ಹಾಗೂ ೧/೨ ಅಂಗುಲ ಅಗಲ ಪ್ರಮಾಣದಲ್ಲಿದೆ.

### 121.2.3 ಶಾಸನದ ಲಿಪಿ

ಶಾಸನದ ಮೊದಲ ಹದಿನೈದು ಪಂಕ್ತಿಗಳಲ್ಲಿಯ ಅಕ್ಷರಗಳು ಸ್ವಲ್ಪ ಮಟ್ಟಿಗೆ ಪಶ್ಚಿಮ ಘಟ್ಟಗಳ ಗವಿಗಳಲ್ಲಿ ದೊರೆತಿರುವ ಶಾತವಾಹನ ಚಕ್ರವರ್ತಿಗಳ ಶಾಸನಗಳಲ್ಲಿ ಬಳಕೆಯಾಗಿರುವ 'ಗವಿಯ ಲಿಪಿ'ಯನ್ನೂ ಕೆಲವು ಲಕ್ಷಣಗಳಲ್ಲಿ ಕದಂಬ ಕಾಕುಸ್ಥವರ್ಮನ ತಾಳಗುಂದ ಶಾಸನವನ್ನೂ ಹೋಲುತ್ತವೆ. 'ಗವಿಯ ಲಿಪಿ' ಚಾಳುಕ್ಯರ ಮತ್ತು ಗಂಗರ ಶಾಸನಗಳಲ್ಲಿ ತೋರುವ ಹಳೆಯ ಕನ್ನಡ ಲಿಪಿಗೆ ಹಿಂದಿನ ಸ್ಥಿತಿಯೆನ್ನಬಹುದು. ಹಲ್ಮಿಡಿ ಶಾಸನದ ಅಕ್ಷರಗಳು ನಣಕ್ಕಸ ಪಲ್ಲವನ ಅಣಜಿಯ ಶಾಸನ, ವಸ್ತಾರೆಯ ಪ್ರಾಚೀನ ಶಿಲಾಶಾಸನ, ಕಾಕುಸ್ಥವರ್ಮನ ಹಲಸಿಯ ತಾಮ್ರ ಶಾಸನ - ಇವುಗಳಲ್ಲಿ ಬಳಕೆಯಾಗಿರುವ ಅಕ್ಷರಗಳನ್ನು ಹೋಲುತ್ತವೆ.

ಈ ವಿಷಯದಲ್ಲಿ ಎಪಿಗ್ರಾಫಿಯ ಕರ್ನಾಟಕದ ಪರಿಷ್ಕೃತ ಮುದ್ರಣದ (ಸಂಪುಟ ೯) ಪೀಠಿಕೆಯಲ್ಲಿ ಹೀಗೆ ಟಿಪ್ಪಣಿ ಬರೆಯಲಾಗಿದೆ :

ಶಾಸನದ ಅಕ್ಷರಗಳನ್ನು ನೋಡಿದಾಗ ಇದರಲ್ಲಿನ ಲಿಪಿ ತತ್ಕಾಲೀನ ಕದಂಬ ಗುಪ್ತ ವಾಕಾಟಕ ಹಾಗೂ ಇತರ ರಾಜಮನೆತನಗಳ ಲಿಪಿಯಿಂದ ಎಂದರೆ ಪೇಟಿಕಾಶಿರ (Box headed Script) ಪದ್ಧತಿಯನ್ನು ಹೊಂದಿರದೆ, ಅರ್ಥಾತ್ ತಾಳಗುಂದ ಇತ್ಯಾದಿ ಶಾಸನಗಳ ಲಿಪಿಯಿಂದ ಭಿನ್ನವಾಗಿದ್ದು ಕದಂಬರ ಕಾಲದ ಲಿಪಿಯ ಸ್ವರೂಪದ ಬಗೆಗೆ ನಿಶ್ಚಿತ ಬೆಳಕನ್ನು ಚೆಲ್ಲುತ್ತದೆ. ತಾಳಗುಂದ ಇತ್ಯಾದಿ ಶಾಸನಗಳ ಬರಹದ ರೂಪಕ್ಕೂ ಇದರಲ್ಲಿನ ಬರಹದ ರೂಪಕ್ಕೂ ವ್ಯತ್ಯಾಸವಿದೆಯೆನ್ನುವುದು ಸುಸ್ಪಷ್ಟ. ಇದರಲ್ಲಿ ಇಲ್ಲದ ಪೇಟಿಕಾಶಿರ ಅಥವಾ ಚೌಕತಲೆಕಟ್ಟುಗಳು ಅಲ್ಲಿ ಕಾಣಿಸಿಕೊಂಡಿರುವುದು ಕರ್ನಾಟಕದಲ್ಲಿ ಆ ಕಾಲಕ್ಕೆ ಎರಡು ಬಗೆಯ ಬರಹದ ಶೈಲಿಗಳನ್ನು ಬರಹಕ್ಕೆ ಬಳಸುತ್ತಿದ್ದರೆಂಬುದನ್ನು ಸೂಚಿಸುತ್ತದೆ.

ಬರಹದಲ್ಲಿ ವಿಶೇಷವಾಗಿ ತಪ್ಪುಗಳೆಂದು ಹೇಳಲಾಗದ ಕೆಲವು ವೈಲಕ್ಷಣ್ಯಗಳು ಕಂಡುಬಂದಿವೆ :

ಮೊದಲನೆಯ ಸಾಲಿನಲ್ಲಿ 'ವ್ಯಾನತಿ' ಎಂದಿರಬೇಕಾದ ಶಬ್ದ ರೂಪ 'ಪ್ಯಾನತಿ' ಎಂದಿದೆ. ವ-ಮ ಧ್ವನಿಗಳಿಗಿರುವ ಉಚ್ಚಾರ ಸಾಮ್ಯ ಈ ವ್ಯತ್ಯಾಸದ ಕಾರಣವಿರಲೂಬಹುದು.

ಮೂರನೆಯ ಸಾಲಿನಲ್ಲಿ 'ಭಟ್ಟಾರನ್' ಎಂದಿರಬೇಕಾದ ಶಬ್ದರೂಪ 'ಭಟ್ಟೋರನ್' ಎಂಬ ರೂಪದಲ್ಲಿ ಕಾಣಿಸಿಕೊಂಡಿದೆ.

ನಾಲ್ಕನೆಯ ಸಾಲಿನಲ್ಲಿ 'ನಾಗೇನ್ದ್ರಾಭೀಳಭ್ಬ್ಟಟರ್' ಎಂಬುದಾಗಿ ಇರುವ ಪದಪುಂಜ ಎಂ.ಎ.ಆರ್. ಮತ್ತು ಎ.ಕ. (ಪರಿಷ್ಕೃತ ಮುದ್ರಣ)ಗಳಲ್ಲಿ ಕಾಣುತ್ತಿರುವ ರೂಪ. ಇಲ್ಲಿ ನ್ಯಾಯವಾಗಿ 'ನಾಗೇನ್ದ್ರಾಭೀಳಬ್ಬ್ಟಟಹರ್' (ನಾಗೇನ್ದ್ರಾಭೀಳರ್ ಭಟಹರ್) ಎಂಬುದೇ ವ್ಯಾಕರಣದ ದೃಷ್ಟಿಯಿಂದ ಸರಿಯಾದ ರೂಪವೆಂದೂ ಶಾಸನ ಪಾಠದಲ್ಲಿ ಸಹ ಹಾಗೆಯೇ ಇದೆಯೆಂದೂ ತಿಳಿಸುತ್ತ ಡಾ. ಜಿ.ಎಸ್. ಗಾಯಿ ತಾವು ಒಪ್ಪಿ ಮುದ್ರಿಸಿರುವ ಶಾಸನ ಪಾಠದಲ್ಲಿ (Halmidi Inscription of Kakustha Bhattora - A Fresh Study, Studies in Indian History, Epigraphy and Culture, Dharwad 1992, p. 305) ಕೂಡ ಅದನ್ನೇ ಅಂಗೀಕರಿಸಿದ್ದಾರೆ.

ಐದನೆಯ ಸಾಲಿನಲ್ಲಿ 'ಭಟಾರಿ' ಎಂಬುದಾಗಿ ಇರಬೇಕಾದ ಶಬ್ದವನ್ನು ಎಂ.ಎ.ಆರ್., ಎ.ಕ. (ಪರಿಷ್ಕೃತ ಮುದ್ರಣ)ಗಳಲ್ಲಿ 'ಬಟರಿ' ಎಂಬುದಾಗಿ ಕಾಣಿಸಿದೆ. ಡಾ. ಜಿ.ಎಸ್. ಗಾಯಿಯವರು ತಮ್ಮ ವಿಮರ್ಶೆಯಲ್ಲಿ 'ಭಟರಿ' ಎಂಬುದಾಗಿ ಮೂಲದಲ್ಲಿ

ಲಿಖಿತವಾಗಿಯೆಂದು ತಿಳಿಸುತ್ತ ತಾವು ಒಪ್ಪಿ ಮುದ್ರಿಸಿರುವ ಇಂಗ್ಲಿಷ್ ಲೇಖನದ ಶಾಸನ ಪಾಠದಲ್ಲಿ ಹಾಗೆಯೇ ಅಂಗೀಕರಿಸಿದ್ದಾರೆ. ಇಲ್ಲಿಯೇ ಸಾಮಾನ್ಯವಾಗಿ ಅಂಗೀಕೃತವಾಗಿರುವ 'ತಾರಾಧಿನಾಥನ್ನಳಪ' ಎಂಬ ರೂಪದ ಬಗೆಗೆ ಅವರು ಟಿಪ್ಪಣಿ ಬರೆಯುತ್ತ "ಮೂಲದಲ್ಲಿ 'ತಾರಾಧಿನಾಥನ್ ಅಳುಪ' ಎಂದು ಓದಬಹುದು. 'ಪ' ಅಕ್ಷರವು 'ದಿ' ಮತ್ತು 'ನ್' ಅಕ್ಷರಗಳ ಮಧ್ಯೆ ಕೆಳಭಾಗದಲ್ಲಿದೆ" ಎಂದು ತಿಳಿಸಿದ್ದಾರೆ. ಅಲ್ಲದೆ ತಾವು ಒಪ್ಪಿ ಮುದ್ರಿಸಿರುವ ಇಂಗ್ಲಿಷ್ ಲೇಖನದ ಶಾಸನ ಪಾಠದಲ್ಲಿ, ಮೂಲದಲ್ಲಿ ತಾವು ಓದಬಹುದೆಂದು ತಿಳಿಸಿರುವ 'ತಾರಾಧಿನಾಥನ್ ಅಳುಪ' ಎಂಬ ಪಾಠವನ್ನೇ ಅಂಗೀಕರಿಸಿದ್ದಾರೆ (ಆದರೆ ಅವರ ಕನ್ನಡ ಲೇಖನದಲ್ಲಿ 'ಧಿ' ಇರಬೇಕಾದ್ದು 'ದಿ' ಎಂಬುದಾಗಿ ಮುದ್ರಣದಲ್ಲಿ ತಪ್ಪು ಬಿದ್ದಿದೆ. ಇಂಗ್ಲಿಷ್ ಲೇಖನದಲ್ಲಿ ಇದನ್ನು ಸರಿಯಾಗಿ ಕಾಣಿಸಿದೆ).

ಆರನೆಯ ಸಾಲಿನಲ್ಲಿ ಎಂ.ಎ.ಆರ್. ಪಾಠ 'ಪಶುಪತಿಮಾ' ಎಂದಿದ್ದರೆ, ಪ್ರ.ಕ., ಎ.ಕ. (ಪ.ಮು) ಮತ್ತು ಗಾಯಿಯವರ ಇಂಗ್ಲಿಷ್ ಲೇಖನ ಸರ್ವತ್ರ 'ಪಶುಪತಿಯಾ' ಎಂಬ ಸೂಕ್ತ ರೂಪವೇ ಇದೆ. ಮೊದಲ ಪಾಠ ಬಹುಶಃ ಮುದ್ರಣ ದೋಷ.

ಏಳನೆಯ ಸಾಲಿನಲ್ಲಿ 'ಭರಿತೋಣ್', ಶಬ್ದ ಬರುವೆಡೆ ಮೂಲದಲ್ಲಿ 'ಚರಿತೋಣ್' ಎಂಬುದಾಗಿ ಓದುವ ಸಾಧ್ಯತೆಯುಂಟು ಎಂಬುದಾಗಿ ಜಿ.ಎಸ್. ಗಾಯಿ ಗುರುತಿಸಿದ್ದಾರೆ. ಅಲ್ಲದೆ ತಮ್ಮ ಇಂಗ್ಲಿಷ್ ಲೇಖನದ ಶಾಸನ ಪಾಠದಲ್ಲಿ ಸಹ ಹಾಗೆಯೇ ಅಂಗೀಕರಿಸಿದ್ದಾರೆ. ಚ - ಚ ಅಕ್ಷರಗಳ ಸಾದೃಶ್ಯ ಸಾಮಾನ್ಯವಾದ್ದು.

ಒಂಬತ್ತನೆಯ ಸಾಲಿನಲ್ಲಿ 'ಪ್ರೇಮಾಲಯ' ಎಂಬ ಒಂದು ಶಬ್ದ ಬಂದಿದೆ. "ಮೂಲದಲ್ಲಿ 'ಲ' ಅಕ್ಷರವನ್ನು 'ಮಾ' ಮತ್ತು 'ಯ' ಅಕ್ಷರಗಳ ಮಧ್ಯೆ ಕೆಳಭಾಗದಲ್ಲಿ ಕೊರೆಯಲಾಗಿದೆ. ಇದು ತಕ್ಕ ಸ್ಥಾನದಲ್ಲಿ ಲ ಅಕ್ಷರವನ್ನು ಕೊರೆಯಲು ಮರೆತು ಹೋದ ಪರಿಣಾಮವಿರಬಹುದು.

ಹತ್ತನೆಯ ಸಾಲಿನಲ್ಲಿ ಮೂಲದಲ್ಲಿ 'ಸುತಜ್ಜೆ' ಎಂದಿರುವುದಾಗಿ ಜಿ.ಎಸ್. ಗಾಯಿ ತಿಳಿಸಿದ್ದಾರೆ. ಆದರೆ ತಮ್ಮ ಇಂಗ್ಲಿಷ್ ಲೇಖನದ ಶಾಸನ ಪಾಠದಲ್ಲಿ ಎಂ.ಎ.ಆರ್. ಮೊದಲಾದೆಡೆ ಕಾಣಿಸಿರುವ ರೂಪದಲ್ಲೇ ಈ ಶಬ್ದವನ್ನು ಕಾಣಿಸಿದ್ದಾರೆ (ಸುತನ್ನೆ). ಇದು ಬಹುಶಃ ಪ್ರಮಾದ.

ಅಲ್ಲಿಯೇ ಬಾಣ ಎಂಬ ರಾಜವಂಶದ ಹೆಸರು 'ಬಣ' ಎಂದೂ 'ವೀರಪುರುಷ' ಎಂಬ ಮಾತು 'ವೀರಾಪುರುಷ' ಎಂದೂ ಲಿಖಿತವಾಗಿರುವುದು ಬರಹಗಾರನ ಅಥವಾ ಕೊರಹಕಾರನ ಕೈತಪ್ಪು ಎಂಬುದಾಗಿ ಹೇಳಬಹುದು.

ಹನ್ನೊಂದು - ಹನ್ನೆರಡನೆಯ ಸಾಲಿನ 'ವಿಜ ಅರಸನ್ನೆ' ಎಂಬ ಮಾತು 'ವಿಜ ಅರಸಜ್ಜೆ' ಎಂಬುದಾಗಿ ಮೂಲದಲ್ಲಿದೆಯೆಂದು ಜಿ.ಎಸ್. ಗಾಯಿ ತಿಳಿಸಿದ್ದಾರೆ. ಅದನ್ನೇ ತಮ್ಮ ಇಂಗ್ಲಿಷ್ ಲೇಖನದ ಶಾಸನ ಪಾಠದಲ್ಲಿ ಅಂಗೀಕರಿಸಿದ್ದಾರೆ.

ಹದಿಮೂರನೆಯ ಸಾಲಿನಲ್ಲಿ 'ಭಟಾರಿ' ಶಬ್ದ 'ಬಟಾರಿ' ರೂಪದಲ್ಲಿದ್ದು ಐದರಲ್ಲಿ 'ಭಟರಿ' ಎಂದು ಬೇರೊಂದು ರೂಪದಲ್ಲಿರುವುದನ್ನು ನೋಡಿದಾಗ (ಗಾಯಿ ; ಬಟರಿ) ಶಬ್ದ ರೂಪದ ನಿರ್ವಹಣೆಯಲ್ಲಿರುವ ಅನಿಶ್ಚಯ ಸ್ಪಷ್ಟವಾಗುತ್ತದೆ.

ಹದಿನಾಲ್ಕನೆಯ ಸಾಲಿನಲ್ಲಿ 'ಸಲ್ಬಬ್ಬದನ್' ಎಂಬ ಶಬ್ದದ ಬರಹದಲ್ಲಿ " 'ರ್' ಅಕ್ಷರವನ್ನು 'ದ' ಅಕ್ಷರದ ಕೆಳ ಭಾಗದಲ್ಲಿ ಸಣ್ಣದಾಗಿ ಕೊರೆಯಲಾಗಿದೆ" ಎಂದು ಗಾಯಿಯವರು ಗುರುತಿಸಿದ್ದಾರೆ. ಅಲ್ಲಿಯೇ ಸಾಮಾನ್ಯವಾಗಿ ಅಂಗೀಕೃತವಾಗಿರುವ 'ವಿಜಾರಸರುಂ' ಎಂಬ ಪಾಠದ ಬಗ್ಗೆ ಬರೆಯುತ್ತ ಗಾಯಿಯವರು ಮೂಲದಲ್ಲಿ 'ವಿಜಾರಸರ' ಎಂದಿದೆಯೆಂದು ತಿಳಿಸಿರುವುದೇ ಅಲ್ಲದೆ ಅದನ್ನೇ ತಮ್ಮ ಲೇಖನದ ಶಾಸನ ಪಾಠದಲ್ಲಿ ಅಂಗೀಕರಿಸಿಯೂ ಇದ್ದಾರೆ. ಅರ್ಥ ಸಾಂಗತ್ಯ ಇದರಿಂದ ಉತ್ತಮವಾಗುತ್ತದೆ.

ಹದಿನೈದನೆಯ ಸಾಲಿನಲ್ಲಿ 'ಅದಾನಳಿವೊನ್ನೆ' ಎಂದು ಎಂ.ಎ.ಆರ್. ಮೊದಲಾದೆಡೆಯ ಪಾಠದ ಬಗೆಗೆ ಬರೆಯುತ್ತ ಗಾಯಿಯವರು, ಮೂಲದಲ್ಲಿ 'ಅಳಿ' ಧಾತು ಟಕಾರ ಘಟಿತವಾಗಿ 'ಅಟಿ' ಎಂದಿದೆಯೆಂದು ತಿಳಿಸಿದ್ದಾರೆ. ಇರಬೇಕಾದ ರೂಪವೂ

ಅದೇ. ಅಲ್ಲದೆ ತಾವೂ ತಮ್ಮ ಲೇಖನದಲ್ಲಿ ಅದನ್ನೇ ಅಂಗೀಕರಿಸಿದ್ದಾರೆ (ಅದ್ದಾನಚಿಪ್ಪೊನ್ಗೆ). ಇಲ್ಲಿ ಸಹ 'ಅಳಿಪ್ಪೊನ್ಗೆ' ರೂಪ 'ಅಟಿಪ್ಪೊಜ್ಗೆ' ಎಂಬ ರೂಪದಲ್ಲಿರಬೇಕಾಗಿತ್ತು. ಈ ವಿಚಾರದಲ್ಲಿ ಏಕರೂಪತೆ ಇರಲಿಲ್ಲವೆಂದೇ ಇಂಥ ಸಂದರ್ಭಗಳಿಂದ ತಿಳಿಯಬೇಕಾಗುತ್ತದೆ.

ಹದಿನಾರನೆಯ ಸಾಲಿನಲ್ಲಿ 'ಗಟ್ಟಿ' ಎಂಬ ಶಬ್ದ ಎಂ.ಎ.ಆರ್ ಮೊದಲಾದ ಮೂಲಗಳಲ್ಲಿ ಕಾಣಲು ಸಿಕ್ಕುತ್ತದೆ. ಅದು ಇರಬೇಕಾದ ರೂಪವೇ. ಆದರೆ ಶಾಸನ ಪಾಠದಲ್ಲಿ 'ಗಳ್ದೆ' ಎಂಬುದಾಗಿ ಕುಳಘಟಿತ ರೂಪವನ್ನು ಕಾಣಬಹುದಾಗಿದೆಯೆಂದು ಜಿ.ಎಸ್. ಗಾಯಿ ತಿಳಿಸಿದ್ದಾರೆ, ತಮ್ಮ ಇಂಗ್ಲಿಷ್ ಲೇಖನದಲ್ಲಿ. ಅದು ಸರಿಯಾಗಿದ್ದರೆ, ಈ ಉತ್ತರಕಾಲೀನ ರೂಪ ಆ ಶಬ್ದಕ್ಕೆ ಸು. ಐದನೆಯ ಶತಮಾನದಲ್ಲಿಯೇ ಬಂದು ಹೋಗಿದೆಯೆಂದು ಭಾವಿಸುವಂತಾಗುತ್ತದೆ.

ಈ ಸಂಗತಿಗಳನ್ನೆಲ್ಲ ಗಮನಿಸಿದರೆ, ಈ ಶಾಸನದ ಬರಹಕಾರನೂ ಕೊರಹಕಾರನೂ ಒಳ್ಳೆಯ ವ್ಯುತ್ಪತ್ತಿಯುಳ್ಳವರೆಂದು ತಿಳಿಯುವುದು ಕಷ್ಟವಾಗುತ್ತದೆ.

### 121.2.4 ಶಾಸನದ ಕಾಲ, ಕರ್ತೃತ್ವ

ಶಾಸನದ ಲಿಪಿಯ ವೈಲಕ್ಷಣ್ಯಗಳ ದೃಷ್ಟಿಯಿಂದ ಹಲಸಿಯ ತಾಮ್ರ ಪಟಗಳು ಮತ್ತು ಅಣಜಿಯ ಶಿಲಾಶಾಸನಗಳು ಸೇರಿದ್ದ ಕಾಲಕ್ಕೇ ಹಲ್ಮಿಡಿ ಶಾಸನವೂ ಸೇರಿದೆಯೆಂದು ಹೇಳಬಹುದು.

ಈ ಶಾಸನವನ್ನು ಹಾಕಿಸಿದ ಕಾಲದಲ್ಲಿ ಕದಂಬ ವಂಶದ ದೊರೆ ಕಾಕುತ್ಸ್ಥವರ್ಮನು ಆಳುತ್ತಿದ್ದನೆಂದು ಶಾಸನದಿಂದಲೇ ತಿಳಿಯುತ್ತದೆ. ಈತನಿಗೆ ಚರಿತ್ರಕಾರರು ಸಾಮಾನ್ಯವಾಗಿ ಕೊಟ್ಟಿರುವ ಕಾಲ ಐದನೆಯ ಶತಕದ ಮೂರು - ಐದನೆಯ ದಶಕಗಳು. ಬಹು ಜನ ಸಮ್ಮತವಾದ ಕದಂಬ ಕಾಲಗಣನೆಯಂತೆ ಹೇಳುವುದಾದರೆ, ಕ್ರಿ.ಶ. ಸುಮಾರು ೪೫೦ ಈ ಶಾಸನ ಹುಟ್ಟಿದ ಕಾಲ. ತಾಳಗುಂದದ ಕಾಕುಸ್ಥವರ್ಮ - ಶಾಂತಿವರ್ಮರ ಸ್ತಂಭ ಶಾಸನದ ಕಾಲಕ್ಕೆ ಕೂಡ ಇದು ಸರಿಬರುತ್ತದೆ.

ಈ ವಿಷಯದಲ್ಲಿ ಎಂ.ಎಚ್. ಕೃಷ್ಣ ಅವರು ಪ್ರ.ಕ.ದ ತಮ್ಮ ಲೇಖನದಲ್ಲಿ ಹೀಗೆ ಬರೆದಿದ್ದಾರೆ :

"ಈ ಶಾಸನದಲ್ಲಿ ಅದರ ಕಾಲವನ್ನು ಕೊಟ್ಟಿಲ್ಲ. ಅದರಲ್ಲಿ ಹೇಳಿರುವ ವಿಷಯಗಳಿಂದ ಕಾಲವನ್ನು ನಿರ್ಣಯಿಸಬೇಕಾಗಿದೆ. ಅದರಲ್ಲಿ ಹೇಳಿರುವ ಕದಂಬರ ದೊರೆಯು ಕಾಕುಸ್ಥವರ್ಮನು. ಇವನು ಕದಂಬರ ಮೂಲ ಪುರುಷನಾದ ಮಯೂರಶರ್ಮನ ಮೊಮ್ಮಗನಾದ ಭಗೀರಥನ ಮೊಮ್ಮಗನೆಂದೂ ಮಯೂರಶರ್ಮನ ವಿಜಯದಿಂದ ೬೦ನೆಯ ವರ್ಷದಲ್ಲಿ ಯುವರಾಜನಾಗಿದ್ದನೆಂದೂ ತರುವಾಯ ಕೆಲವು ವರ್ಷಗಳಲ್ಲಿ ದೊರೆಯಾಗಿ ವಿಜೃಂಭಣೆಯಿಂದ ಬಹುಕಾಲ ಆಳಿದನೆಂದೂ ಹಲಸಿಯ ತಾಮ್ರ ಶಾಸನ ಮತ್ತು ತಾಳಗುಂದದ ಕಂಬದ ಶಾಸನ ಇವುಗಳಿಂದ ತಿಳಿಯಬರುತ್ತದೆ. ಇವನ ತರುವಾಯ ಇವನ ಮಗ ಶಾಂತಿವರ್ಮನೂ ಅವನ ತರುವಾಯ ಮೊಮ್ಮಗ ಮೃಗೇಶನೂ ಆಳಿದರು. ಮೃಗೇಶನೆಂಬ ಹೆಸರು ನಾಲ್ಕನೆಯ ಪಂಕ್ತಿಯಲ್ಲಿ ಕಾಣಬರುವುದರಿಂದ ಪ್ರಕೃತ ಶಾಸನವು ಕಾಕುಸ್ಥವರ್ಮನ ವೃದ್ಧಾಪ್ಯದಲ್ಲಿ ಹುಟ್ಟಿತೆಂದು ಊಹಿಸಬೇಕಾಗಿದೆ. ಅಂದರೆ ಈ ಶಾಸನವು ಸುಮಾರು ಕ್ರಿ.ಶ. ೪೫೦ರಲ್ಲಿ ಬರೆದುದಾಗಿ ನಿರ್ಣಯಿಸಬಹುದು."

ಶಾಸನದಲ್ಲಿ ನಾಲ್ಕನೆಯ ಸಾಲಿನಲ್ಲಿ ಉಲ್ಲೇಖವಾಗಿರುವ ಮೃಗೇಶ ಎಂಬ ಹೆಸರು ಕದಂಬ ವಂಶದ ದೊರೆ ಮೃಗೇಶವರ್ಮನೆಂದು ತಿಳಿಯುವುದು ಸರಿಯಾಗದು. ಈ ವಿಚಾರದಲ್ಲಿ ಇತರ ವಿದ್ವಾಂಸರ ನಡುವೆ ಏಕಾಭಿಪ್ರಾಯವಿದೆ. ಆದರೂ ಎಂ.ಎಚ್. ಕೃಷ್ಣ ಶಾಸನಕ್ಕೆ ಗೊತ್ತು ಮಾಡಿರುವ ಸು. ೪೫೦ ಎಂಬ ಕಾಲಮಾನವೇ ಈಗ ಬಹುಜನ ಮಾನ್ಯವಾದುದಾಗಿದೆ. ಆದರೂ ಈಚೆಗೆ ಸ್ವಲ್ಪ ವಿಚಾರ ವಿಮರ್ಶೆಗಳು ನಡೆದಿವೆ.

ಎಂ. ಗೋವಿಂದ ಪೈ ಗಳು ತಾವು ನಿಶ್ಚಯಿಸಿರುವ ಕಾಕುಸ್ಥವರ್ಮನ ಆಳ್ವಿಕೆಯ ಕಾಲಮಾನಕ್ಕೆ ಅನುಗುಣವಾಗಿ ಈ ಶಾಸನ ಕ್ರಿ.ಶ. ೨೬೫ ರಿಂದ ೨೮೨ ರ ನಡುವೆ ಹುಟ್ಟಿತು ಎಂದು ಹೇಳಿದ್ದಾರೆ (ನೋಡಿ : 'ಮೂರು ಉಪನ್ಯಾಸಗಳು', ಪು. ೧೩೩).

ಶಾಸನತದ್‌ಜ್ಞರಾದ ಎನ್. ಲಕ್ಷ್ಮೀನಾರಾಯಣ ರಾಯರು ಲಿಪಿಯ ಆಧಾರದ ಮೇಲೆ ಹಲ್ಮಿಡಿ ಶಾಸನ ಬಾದಾಮಿಯ ಮಂಗಲೇಶನ ಕ್ರಿ.ಶ. ೫೭೮ ರ ಗುಹಾ ಶಾಸನಕ್ಕಿಂತ ಈಚಿನ ಕಾಲದ್ದೆಂದು ಅಭಿಪ್ರಾಯಪಟ್ಟಿರುವಂತೆ ತೋರುತ್ತದೆ.

ಶಾಸನತದ್‌ಜ್ಞರಾದ ದಿನೇಶ ಚಂದ್ರ ಸರ್ಕಾರ್ ಅವರು ಸಹ ಇದೇ ಆಧಾರದಿಂದ ಕ್ರಿ.ಶ. ೬ನೆಯ ಶತಮಾನದ ಅಂತ್ಯ ಭಾಗದ ಶಾಸನವೆಂದು ತಿಳಿದಿದ್ದಾರೆ (ಹೋಲಿಸಿ : ಇಂಡಿಯನ್ ಎಪಿಗ್ರಫಿ, ಪು.೪೮). ಇದು, ಲಕ್ಷ್ಮೀನಾರಾಯಣರಾಯರು "Some Scholars are of the opinion that the Halmidi (Mysore State) inscription is the earliest inscription written in Kannada. But I do not think that this is older than the Badami Inscription of Mangalesha" ಎಂದು ಅಭಿಪ್ರಾಯಪಟ್ಟಿರುವುದನ್ನು (The Chalukyas, Karnataka Darshana, 1955, p.41 f.n.) ಸಮರ್ಥಿಸುವಂತೆ ತೋರುತ್ತದೆ.

"ಕನ್ನಡ ಶಾಸನ ಸಾಹಿತ್ಯದ ಮತ್ತು ಸಾಹಿತ್ಯದ ಚರಿತ್ರೆಯಲ್ಲಿ ಹಲ್ಮಿಡಿ ಶಾಸನವು ಅಗ್ರಪೂಜೆಗೆ ಅರ್ಹವಾಗಿದೆ. ಮೊತ್ತ ಮೊದಲಿನ ಗ್ರಂಥಸ್ಥವಾದ ಗದ್ಯ ಎಂಬ ವಿಚಾರದಿಂದ ಇದರ ಮಹತ್ತ್ವವು ಹಿರಿದಾಗಿದೆ" ಎಂದು ಕೀರ್ತಿಸುವ ಇನ್ನೊಬ್ಬ ಶಾಸನತದ್‌ಜ್ಞ ದೇಸಾಯಿ ಪಾಂಡುರಂಗ ರಾಯರು ಸಹ "ಈ ಶಾಸನದ ಕಾಲ ಸು.೬ ನೆಯ ಶತಮಾನ" ಎಂದೇ ಭಾವಿಸಿದ್ದಾರೆ (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೩೧-೨, ೧೯೪೬, ಪು. ೩೧)

ಮತ್ತೊಬ್ಬ ಶಾಸನತದ್‌ಜ್ಞ ಜಿ.ಎಸ್. ಗಾಯಿ ಅವರು ಶಾಸನದ ವ್ಯಕ್ತಿ ಸಮೀಕರಣಗಳಲ್ಲಿ ಸ್ವಲ್ಪ ಬೇರೆಯಾದ ಅಭಿಪ್ರಾಯವುಳ್ಳವರಾಗಿದ್ದು, ಈ ಐತಿಹಾಸಿಕವಾದ ನೆಲೆಯಲ್ಲಿ ಶಾಸನ ವಸ್ತುವನ್ನು ವಿಮರ್ಶಿಸಿರುವುದೇ ಅಲ್ಲದೆ ತಾವು ಸಹ ಹಲ್ಮಿಡಿ ಶಾಸನವನ್ನು ಲಿಪಿಯ ಆಧಾರದ ಮೇಲೆ ಐದನೆಯ ಶತಮಾನದ ಅಂತ್ಯ ಭಾಗ ಅಥವಾ ಆರನೆಯ ಶತಮಾನದ ಆರಂಭ ಎಂಬುದಾಗಿ ಗುರುತಿಸಿದ್ದಾರೆ (ಅವರ ಇಂಗ್ಲಿಷ್ ಲೇಖನ, ಪು.೩೦೦-೩೦೧).

ಗೋವಿಂದ ಪೈಗಳು ಬನವಾಸಿ ಕದಂಬ ವಂಶದ ಅರಸರಿಗೆ ಗೊತ್ತು ಮಾಡುವ ಕಾಲದ ವಿಷಯದಲ್ಲಿ ಇತರ ಇತಿಹಾಸಜ್ಞರಿಗೆ ಸ್ಪಷ್ಟವಾದ ಭಿನ್ನ ಮತವಿದೆ. ಆದರೆ (ಜಿ.ಎಸ್. ಗಾಯಿ ಅವರ ಹೊರತಾಗಿ) ಇತರ ವಿದ್ವಾಂಸರು ಒಪ್ಪುವಂತೆ ಕದಂಬ ಕಾಕುಸ್ಥವರ್ಮನ ಕಾಲ (ಕ್ರಿ.ಶ. ೪೦೫-೪೩೫ ಅಥವಾ ೪೦೫-೪೩೦)ದಲ್ಲಿ ಹುಟ್ಟಿದ ಶಾಸನವೆಂಬುದಾಗಿ ನಾವು ತಿಳಿದರೆ ಹಲ್ಮಿಡಿ ಶಾಸನದ ಕಾಲವನ್ನು ಇನ್ನೂ ಕೊಂಚ ಹಿಂದಣ ಅವಧಿಗೆ, ಎಂದರೆ ಸುಮಾರು ಕ್ರಿ.ಶ. ೪೨೫ ಎಂದು ಹೇಳುವುದಕ್ಕೆ ಅವಕಾಶವಾಗುತ್ತದೆ.

ಹಾಗಲ್ಲವಾದರೆ, ಎನ್.ಎಲ್. ರಾವ್, ಡಿ.ಸಿ. ಸರ್ಕಾರ್, ಪಿ.ಬಿ. ದೇಸಾಯಿ ಹಾಗೂ ಜಿ.ಎಸ್. ಗಾಯಿ ಈ ಶಾಸನತದ್‌ಜ್ಞರು ಹೇಳುವ ಹಾಗೆ ಚಾಲುಕ್ಯ ಮಂಗಲೇಶನ ಕ್ರಿ.ಶ. ೫೭೮ ರ ವೈಷ್ಣವ ಗುಹಾಶಾಸನದ ಬಳಿಕಣ ಶಾಸನವೆಂದು ಹಲ್ಮಿಡಿ ಶಾಸನವನ್ನು ಗುರುತಿಸಬೇಕಾಗುತ್ತದೆ. ಈ ಗಣ್ಯರು ವಿಶೇಷವಾಗಿ ಲಿಪಿಯ ಸ್ವರೂಪಕ್ಕೆ ಮಹತ್ತ್ವ ಕೊಟ್ಟಿದ್ದಾರೆ.

**ಶಾಸನ ಕರ್ತೃವಿನ ವಿಚಾರ :** ಶಾಸನದ ಹದಿಮೂರನೆಯ ಸಾಲಿನಲ್ಲಿ 'ಅಳು ಕದಂಬನ್' ಎಂಬ ಲಿಖಿತವಿದ್ದು, ಮುಖ್ಯ ಶಾಸನದ ಭಾಗಕ್ಕೆ ಕೊನೆಯ ಪದ ಇದೇ ಆಗಿದೆ. ಭಟಾರಿ ಕುಲದವನೂ ಅಳಪ ಮತ್ತು ಕದಂಬ ವಂಶಗಳ ನಡುವಣ ಸಂಬಂಧದಿಂದ ಪ್ರಾಯಃ ಜನಿಸಿದವನೂ ಆಗಿರುವ ಈತನೇ ಈ ದಾನಶಾಸನವನ್ನು ಬರಿಸಿದವನು ಎಂದು ಎಂ.ಎಚ್. ಕೃಷ್ಣ ಊಹಿಸಿದ್ದಾರೆ. ಅವರ ಊಹೆಯ ಅಭಿಪ್ರಾಯದಂತೆ, ಇವನು ಭಟಾರಿ ವಂಶಕ್ಕೆ ಸೇರಿದವನು; ಅಳಪರ ದೊರೆ ಪಶುಪತಿಗೆ ಸಂಬಂಧಪಟ್ಟವನು; ಈ ಪಶುಪತಿ ತಾಳಗುಂದದ ಪ್ರಣವೇಶ್ವರನ ಗುಡಿಯ ಬಾಗಿಲುವಾಡದ ಮೇಲಿನ ಶಾಸನದಲ್ಲಿ ಉಕ್ತನಾದವನು; ಇವನ ಪತ್ನಿ ಕದಂಬ ಕಾಕುಸ್ಥವರ್ಮನ ಮಗಳಾದ

ಲಕ್ಷ್ಮಿ; ಪಶುಪತಿ ಮತ್ತು ಲಕ್ಷ್ಮಿ ಇವರ ಪುತ್ರನಾಗಿರಬಹುದಾದ ಈ ಅಳು ಕದಂಬನೇ ತಂದೆಯ ಅಪ್ಪಣೆಯಂತೆ ದಾನ ಮಾಡಿದವನು, ದಾನ ಶಾಸನ ಬರಸಿದವನು.

ಎಂ.ಎಚ್. ಕೃಷ್ಣ ಅವರು ತಮ್ಮ ಸಮೀಕರಣ ಸೂಚನೆಗಳನ್ನು ಊಹೆಯ ನೆಲೆಯಲ್ಲೇ ಮಂಡಿಸಿದ್ದಾರೆ (ನೋಡಿ : ಪ್ರ.ಕ., ೨೦-೩, ಪು. ೩೩). ನರಿದಾವಿಳೆ ನಾಡಿನಲ್ಲಿ ಅಧಿಕಾರಿಗಳಾಗಿದ್ದ ಮೃಗೇಶ ನಾಗರು ಕಕುಸ್ಥ ಸೇನಾನಿಯಾದ ಪಶುಪತಿಯ ಅಪ್ಪಣೆಯ ಪ್ರಕಾರ ತಮ್ಮ ಪ್ರಾಂತದ ಎರಡು ಹಳ್ಳಿಗಳನ್ನು ವಿಜ ಅರಸನಿಗೆ ಅವನ ಸಾಹಸಕ್ಕಾಗಿ ಮೆಚ್ಚಿ ದಾನವಿತ್ತರೆಂದೂ ಈ ದಾನ ಕಾರ್ಯವನ್ನು ಪಶುಪತಿಯ ಮಗ ತಂದೆಯ ಅಪ್ಪಣೆಯಂತೆ ಶಾಸನ ರೂಪದಲ್ಲಿ ಸ್ಥಾಯಿಗೊಳಿಸಿದನೆಂದೂ ಅವರ ವಿಮರ್ಶೆಯಿಂದ ಅಭಿಪ್ರಾಯವಾಗುವುದು. ಆದರೆ ಈ ಗ್ರಹಿಕೆಯನ್ನು ನಿರ್ಣಾಯಿಕವಾಗಿ ತಿಳಿಯುವುದಕ್ಕೆ ಅನೇಕ ತೊಡಕುಗಳಿವೆ.

ಈ ವಿಷಯವನ್ನು ಜಿ.ಎಸ್. ಗಾಯಿ ಪುನರ್ವಿಮರ್ಶೆ ಮಾಡಿದ್ದಾರೆ. ಅವರು ಈ ವಿಮರ್ಶೆಯಲ್ಲಿ ತಾಳಗುಂದ ಬಾಗಿಲುವಾಡ ಶಾಸನದ ಪಶುಪತಿಯೂ ಹಲ್ಮಿಡಿ ಶಾಸನದ ಕಕುಸ್ಥಭಟ್ಟೋರನೂ ಅಭಿನ್ನರಾಗಿ ತಿಳಿದಿರುವರಲ್ಲದೆ, ಈ ಪಶುಪತಿ ಅಥವಾ ಕಕುಸ್ಥಭಟ್ಟೋರನೇ "ಬಟಾರಿಕುಲದೊನ್ ಅಳು ಕದಂಬನ್" ಎಂದು ಪ್ರತಿಪಾದಿಸಿದ್ದಾರೆ. ಅಲ್ಲದೆ ಪಶುಪತಿಯ ಪರವಾಗಿ ವಿಜ ಅರಸನು ಹೋರಾಡಿದನೆಂದೂ ಇವನಿಗೆ ಎರಡು ಗ್ರಾಮಗಳನ್ನು ಮೃಗೇಶ ನಾಗೇಂದ್ರರೆಂಬವರು ಕೊಟ್ಟುದು ವಿದಿತವೇ ಇದ್ದರೂ ಅಧಿಕೃತವಾಗಿ ಅರಸನಾದ ಅಳು ಕದಂಬನೇ ಅದನ್ನು ಕೊಟ್ಟವನೆಂಬುದಾಗಿ ತಿಳಿಯಬೇಕೆಂದೂ ಅವರು ವಾದಿಸಿದ್ದಾರೆ. ಅಲ್ಲದೆ ಹೀಗೆ ದಾನ ಕೊಟ್ಟಿರುವುದಕ್ಕೆ ಶಾಸನ ಸಾಹಿತ್ಯದಲ್ಲಿ ನಿದರ್ಶನಗಳುಂಟೆಂದು ಅವರು ತಿಳಿಸಿದ್ದಾರೆ. (ಅವರ ಕನ್ನಡ, ಇಂಗ್ಲಿಷ್ ಲೇಖನಗಳಲ್ಲಿ ಈ ವಿಮರ್ಶೆಯಿದೆ).

### 121.2.5 ಶಾಸನದ ಮಹತ್ತ್ವ

ಹಲ್ಮಿಡಿ ಶಾಸನ ಆಕೃತಿಯಲ್ಲಿ ಚಿಕ್ಕದಾದರೂ ರಾಜಕೀಯ ಸಾಮಾಜಿಕ ಮತ್ತು ಭಾಷಿಕ ದೃಷ್ಟಿಗಳಿಂದ ಒಂದು ಮಹತ್ತ್ವದ ಶಾಸನವೆಂದು ತಿಳಿಯಬೇಕಾಗಿದೆ.

೧. ಬಾದಾಮಿ ಚಾಲುಕ್ಯರ ಮಂಗಲೇಶನೆಂಬವನ (ಕ್ರಿ.ಶ. ೫೯೭-೬೦೯) ಕ್ರಿ.ಶ. ೫೭೮ ರ ವೈಷ್ಣವ ಗುಹಾಶಾಸನವೇ ಅತ್ಯಂತ ಪ್ರಾಚೀನವಾದುದು ಎಂದು ಈವರೆಗೆ ಸಾಮಾನ್ಯವಾಗಿ ತಿಳಿಯಲಾಗಿತ್ತು. ಹಲ್ಮಿಡಿ ಶಾಸನ ದೊರೆತ ಮೇಲೆ ಕನ್ನಡ ಭಾಷೆಯ ಪ್ರಾಚೀನತಮ ಶಿಲಾಶಾಸನ ಎಂಬ ಮನ್ನಣೆಯನ್ನು ಅದು ಪಡೆದುಕೊಂಡಿತು.

ಕೆಲವರು ಇತಿಹಾಸಜ್ಞರು ಭಾವಿಸುವಂತೆ ಒಂದು ಪಕ್ಷ ಮಂಗಲೇಶನ ಶಾಸನವೇ ಪ್ರಾಚೀನತಮ ಶಾಸನವೆಂದರೂ ಕನ್ನಡದ ತೀರ ಹಳೆಯದಾದ ಕೆಲವು ಶಾಸನಗಳಲ್ಲಿ ಹಲ್ಮಿಡಿ ಶಾಸನವೂ ಸೇರಿದೆಯೆಂದು ತಿಳಿಯಲಡ್ಡಿಯಿಲ್ಲ.

೨. ಬನವಾಸಿಯ ಕದಂಬರ ಕಾಲಕ್ಕೆ ಸೇರಿದ ತೀರ ಹಳೆಯ ಶಾಸನವಾಗಿ ಇದು ಗಣ್ಯವಾಗಿದೆ.

೩. ಈ ಶಾಸನದಲ್ಲಿ ಕದಂಬರು, ಕಳಭ್ರರು, ಆಳುಪರು, ಸೇಂದ್ರಕರು, ಬಾಣರು, ಕೇಕಯರು, ಪಲ್ಲವರು ಈ ಕೆಲವು ರಾಜ ಮನೆತನಗಳ ಪ್ರಸ್ತಾವವಿದ್ದು ಇವರ ನಡುವಣ ರಾಜಕೀಯ ಸಂಬಂಧವನ್ನು ತಿಳಿಯುವಂತಿದೆ.

೪. ಕದಂಬರು, ಪಲ್ಲವರು ಇವರ ವಿಚಾರ ದೊಡ್ಡ ರಾಜಮನೆತನಗಳು ಎಂಬ ಕಾರಣದಿಂದ ಸಾಮಾನ್ಯವಾದುದು ಎಂದರೂ ಸೇಂದ್ರಕ ಬಾಣ ಕೇಕಯ ಇವರ, ಎಂದರೆ ಈ ಸಣ್ಣ ಮನೆತನಗಳ ಇತಿಹಾಸ ರಚನೆಯಲ್ಲಿ ಹಲ್ಮಿಡಿ ಶಾಸನ ಉಪಯುಕ್ತವಾದುದಾಗಿದೆ.

೫. ಸಾಮಾಜಿಕವಾಗಿಯೂ ಸಾಂಸ್ಕೃತಿಕವಾಗಿಯೂ ಹಲ್ಮಿಡಿ ಶಾಸನದಲ್ಲಿ ಉಲ್ಲೇಖಿವಾಗಿರುವ ಬಟಾರಿ ಕುಲ, ಬಾಳ್ಗಚ್ಚು, ಸಟ್ಟಬ್ಬದರ್, ಕುಱುಮ್ಬಿಡಿ, ಪತ್ತೊನ್ದಿ, ಅಳುಕದಮ್ಬನ್, ಅಕರ, ಒಡ್ಡು ಇಂಥವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಗಮನಾರ್ಹ ಸಂಗತಿಗಳನ್ನು ಹೇಳುತ್ತವೆ.

೬. ಶಾಸನಾಗ್ರದಲ್ಲಿ ವಿಷ್ಣುವಿನ ಸುದರ್ಶನ್ನ ಚಕ್ರದ್ದ ಕೆತ್ತನೆಯೂ ವಿಷ್ಣು ಸ್ತೋತ್ರವಾದ ಶ್ಲೋಕವೂ ಇದ್ದು, ಇದು ಕ್ರಿ.ಶ. ಐದು - ಆರನೆಯ ಶತಮಾನಗಳಲ್ಲಿ ವೈಷ್ಣವ ಧರ್ಮದ ಪ್ರಸಾರ ಹೇಗಿದ್ದಿತೆಂಬುದನ್ನು ಹೇಳುತ್ತದೆ.

೭. ರೂಢಿಯ ಮಂಗಳ ವಾಚಕ ಶಬ್ದವನ್ನು ('ಸ್ವಸ್ತಿ') ಬಳಸದೆ ಪ್ರಾರ್ಥನಾಶ್ಲೋಕವೊಂದರಿಂದ ಶಾಸನವನ್ನು ಮೊದಲು ಮಾಡಿರುವುದು ಒಂದು ವಿಶೇಷ.

೮. ಐದು - ಆರನೆಯ ಶತಮಾನಗಳಷ್ಟು ಹಿಂದೆ ಕನ್ನಡ ಭಾಷೆಯ ರಚನೆ ಸ್ವರೂಪಗಳು ಯಾವ ರೀತಿಯಲ್ಲಿದ್ದುವು ಎಂಬುದನ್ನು ತಿಳಿಯುವ ಸಾಧನ ಸಾಮಗ್ರಿ ಹಲ್ಮಿಡಿ ಶಾಸನದಲ್ಲಿ ನಮಗೆ ದೊರೆಯುತ್ತದೆ.

೯. ಕನ್ನಡ ಭಾಷೆಯ ಆರಂಭಕಾಲೀನ ಶಾಸನಗಳು ಸಾಮಾನ್ಯವಾಗಿ ಪದ್ಯನಿಬದ್ಧವಾಗಿವೆ. ಹಲ್ಮಿಡಿ ಶಾಸನ ಗದ್ಯ ನಿಬದ್ಧವಾಗಿದೆ. ಕನ್ನಡ ಗದ್ಯದ ಉಗಮ ವಿಕಾಸಗಳನ್ನು ಕುರಿತು ವಿಚಾರ ಮಾಡುವಾಗ ಅತ್ಯವಶ್ಯವಾಗಿ ಹಲ್ಮಿಡಿ ಶಾಸನವನ್ನು ಗಮನಿಸಬೇಕಾಗುತ್ತದೆ.

### 121.2.6 ಶಾಸನದ ಅನ್ವಯ

ನಮಃ ಶ್ರೀಮತ್ಕದಂಬಪನ್ ತ್ಯಾಗಸಂಪನ್ನನ್ ಕಲಭೋರನಾ ಅರಿ ಕಕುಸ್ಥ ಭಟ್ಟೋರನ್ ಆಳೆ, ನರಿದಾವಿಳೆ ನಾಡುಳ್ ಭಟಹರಪ್ಪೋರ್ ಮೃಗೇಶ ನಾಗೇಂದ್ರಾಭೀಳರ್ ಶ್ರೀ ಮೃಗೇಶ ನಾಗಾಹ್ವಯರ್ ಇರ್ವ್ವರ್, ಆ ಬಟರಿಕುಲಾಮಲವ್ಯೋಮ ತಾರಾಧಿನಾಥನ್ ಅಳಪಗಣಪಶುಪತಿ ಆ ದಕ್ಷಿಣಾಪಥ ಬಹುಶತಹವನಾಹವದುಳ್ ಪಶುಪ್ರದಾನಶೌರ್ಯೋದ್ಯಮ ಭರಿತೋನ್ ದಾನಪಶುಪತಿಂ- ಎಂದು ಪೊಗಟೆಪ್ಪೊಟ್ಟಣ, ಪಶುಪತಿನಾಮಧೇಯನ, ಆ ಸರಕೆಲ್ಲ ಭಟರಿಯಾ ಪ್ರೇಮಾಲಯ ಸುತನ್ಗೆ, ಕೇಕಯಪಲ್ಲವರಂ ಕಾದೆಱಿದು ಪೆತ್ತಜಯನ್ ಆ ವಿಜ ಅರಸನ್ಗೆ, ಸೇನ್ದ್ರಕ ಬಣ ಉಭಯದೇಶದಾ ವೀರಾಪುರುಷ ಸಮಕ್ಷದೆ ಪಲ್ಮಡಿಉಂ ಮೂಱುವಳ್ಳಿಉಂ ಬಾಳ್ಗಚ್ಚುಕೊಟ್ಟಾರ್. ಬಟಾರಿ ಕುಲದೋನ್ ಅಳುಕದಮ್ಬನ್. ಕಳ್ದೋನ್ ಮಹಾಪಾತಕನ್. ಇರ್ವ್ವರುಂ ಸಟ್ಟಬ್ಬದರ್ ವಿಜಾರಸರುಂ ಪಲ್ಮಡಿಗೆ ಕುಱುಮ್ಬಿಡಿವಿಟ್ಟಾರ್. ಅದಾನ್ ಅಱಿವೊನ್ಗೆ ಮಹಾಪಾತಕಮ್. ಸ್ವಸ್ತಿ ಈ ಗಟ್ಟೆ ಒಡ್ಡಲಿ ಭಟ್ಟರ್ಗ್ಗೆ ಆ ಪತ್ತೊನ್ದಿ ಅಕರ ವಿಟ್ಟಾರ್.

ಈ ಅನ್ವಯ, ಶಾಸನ ಪಾಠವನ್ನು ಶಾಸನತಜ್ಞರೂ ಇತಿಹಾಸಜ್ಞರೂ ಅರ್ಥ ಮಾಡಿಕೊಂಡಿರುವ ರೀತಿಗೆ ಅನುಗುಣವಾಗಿ ಸ್ವಲ್ಪಮಟ್ಟಿಗೆ ಬೇರೆ ರೀತಿಯಿಂದಲೂ ಆಗುವುದು ಸಾಧ್ಯವಿದೆ. ಅಲ್ಲದೆ ಮೇಲೆ ಬರೆದಿರುವ ಅನ್ವಯ ಸಹ ಎಲ್ಲ ವಿಧದಲ್ಲಿಯೂ ತೃಪ್ತಿಕರವಾಗಿದೆಯೆಂದು ಹೇಳುವಂತಿಲ್ಲ.

ಪ್ರಸ್ತುತ, ೧೪ ನೆಯ ಸಾಲಿನಲ್ಲಿ 'ವಿಜಾರಸರುಂ' ಎಂದು ಸಾಮಾನ್ಯವಾಗಿ ಅಂಗೀಕೃತವಾದ ಪಾಠದೆಡೆ ಜಿ.ಎಸ್. ಗಾಯಿ 'ವಿಜಾರಸರ' ಎಂದು ಮೂಲದಲ್ಲಿದೆಯೆಂದು ಒಪ್ಪಿಕೊಂಡ ಪಾಠಕ್ಕೆ ಅನುಗುಣವಾಗಿ ಅನ್ವಯಿಸಿದರೆ ಆಗ ಅರ್ಥ ಬೇರೆಯಾಗುತ್ತದೆ.

ಹಾಗೆಯೇ ೨ - ೩ ನೆಯ ಸಾಲುಗಳಲ್ಲಿ 'ಭಟಹರಪ್ಪೋರ್' ಎಂಬ ವರೆಗೆ ಇರುವಂತೆ ವಾಕ್ಯವನ್ನೋದಿ, ಎಂ.ಎಚ್. ಕೃಷ್ಣ ಮತ್ತು ಜಿ.ಎಸ್. ಗಾಯಿ "ಸೈನ್ಯಾಧಿಕಾರಿಗಳಾಗಿದ್ದರು" ಎಂದು ಪೂರ್ಣ ವಾಕ್ಯವಾಗಿ ತಿಳಿದಿದ್ದಾರೆ. ಆಗ ಅನ್ವಯ ಬೇರೆ ರೀತಿಯಲ್ಲಿರುತ್ತದೆ.

ಹೀಗೆ ವ್ಯತ್ಯಾಸಗಳಿಗೆ ಅವಕಾಶವುಂಟು.

## 121.3 ಶಾಸನದ ಅರ್ಥ

### 121.3.1 ಎಂ.ಎಚ್. ಕೃಷ್ಣ ಅವರು :

ದಾನವರ ಕಣ್ಣುಗಳಿಗೆ ಪ್ರಳಯಕಾಲದ ಅಗ್ನಿಯಂತೆಯೂ ಸತ್ಪುರುಷರಿಗೆ ಸುದರ್ಶನನಾಗಿ (ಸುದರ್ಶನ ಚಕ್ರವಾಗಿ)ಯೂ ಲಕ್ಷ್ಮೀಯಿಂದ ಆಲಿಂಗಿತನಾಗಿಯೂ ಶಾರ್ಙ್ಗವೆಂಬ ಧನುಸ್ಸನ್ನು ಬಗ್ಗಿಸಿ ಹಿಡಿದಿರುವ ಅಚ್ಯುತನು ಜಯಿಸುತ್ತಾನೆ.

ಕದಂಬ ರಾಜನೂ ತ್ಯಾಗ ಸಂಪನ್ನನೂ ಕಲಭೋರನ ಶತ್ರುವೂ ಆದ ಕಕುಸ್ಥ ಭಟ್ಟಾರಕನು ಆಳುತ್ತಿರಲು, ನರಿದಾವಿಳೆ ನಾಡಿನಲ್ಲಿ ಮೃಗೇಶ ನಾಗೇಂದ್ರರಂತೆ (ಸಿಂಹ ಅಥವಾ ಶಿವೆ, ಆನೆ ಅಥವಾ ಸರ್ಪ) ಭಯಂಕರರಾದ ಮೃಗೇಶ ನಾಗ ಎಂಬ ಹೆಸರುಳ್ಳವರು ಅಧಿಕಾರಿಗಳಾಗಿದ್ದರು. ಇವರಿಬ್ಬರು, ಪ್ರಸಿದ್ಧವಾದ ಭಟರಿ ವಂಶವೆಂಬ ಆಕಾಶಕ್ಕೆ ಚಂದ್ರನಂತಿರುವ, ಅಳಪರೆಂಬ ಗಣಕ್ಕೆ ಪಶುಪತಿಯಾಗಿರುವ, ಆ ದಕ್ಷಿಣಾಪಥದಲ್ಲಿ ಅನೇಕ ಯಜ್ಞಗಳೆಂಬ ಯುದ್ಧಗಳಲ್ಲಿ ಪಶುಪ್ರದಾನ (ದಾನ ಮಾಡುವುದು, ಕೊಲ್ಲುವುದು) ಶೌರ್ಯೋದ್ಯಮದಿಂದ ಕೂಡಿದ, ದಾನ ಪಶುಪತಿಯೆಂದು ಹೊಗಳಲ್ಪಟ್ಟ, ಪ್ರಸಿದ್ಧನಾದ ಪಶುಪತಿಯೆಂಬ ಹೆಸರುಳ್ಳವನ ಆಹ್ವಾನಕ್ಕೆ ಎಲ್ಲ ಭಟರಿಯ ಪ್ರೀತಿಪಾತ್ರ ಸುತನಾದ ಸೇಂದ್ರಕ ಮತ್ತು ಬಾಣ ಎಂಬ ದೇಶಗಳ ವೀರ ಪುರುಷರ ಎದುರಿಗೆ ಪಲ್ಲವರನ್ನೂ ಕೇಕಯರನ್ನೂ ಯುದ್ಧದಲ್ಲಿ ಕೊಂದು ಜಯವನ್ನು ಪಡೆದ ವಿಜ - ಅರಸನಿಗೆ ಕತ್ತಿಯ ಕೊಡುಗೆಯಾಗಿ ಪಲ್ಮಡಿಯನ್ನೂ ಮೂಳಿವಳ್ಳಿಯನ್ನೂ ಕೊಟ್ಟರು. ಭಟರಿ ವಂಶದ ಅಳ ಕದಂಬನು. ಇದನ್ನು ಅಪಹರಿಸುವವನು ಮಹಾಪಾತಕನು.

ಇಬ್ಬರು ಸಬ್ಬಪ್ಪದವರೂ ವಿಜ-ಅರಸರೂ ಹಲ್ಮಡಿಗೆ ಕುಱುದೆರೆಯನ್ನು ಬಿಟ್ಟರು. ಅದನ್ನು ನಾಶ ಮಾಡಿದವನಿಗೆ ಮಹಾಪಾತಕವು. ಸ್ವಸ್ತಿ.

ಈ ಗದ್ದೆಯ ಒಡ್ಡಿನಲ್ಲಿ ಹತ್ತನೆಯ ಒಂದು ಭಾಗ ಆದಾಯವು ಬ್ರಾಹ್ಮಣರಿಗೆ ತೆರಿಗೆ ಇಲ್ಲದೆ ಕೊಡಲ್ಪಟ್ಟಿದೆ. (ಪ್ರ.ಕ. ಲೇಖನ, ೨೦-೩, ಪು. ೬೯-೪೦)

### 121.3.2 ಜಿ.ಎಸ್. ಗಾಯಿ ಅವರು :

ತ್ಯಾಗಸಂಪನ್ನ ಮತ್ತು ಕಲಭೋರನ ಶತ್ರುವಾದ ಕದಂಬಪ - ಕಕುಸ್ಥ ಭಟ್ಟೋರನು ಆಳುತ್ತಿರಲು ನರಿದಾವಿಳೆ ನಾಡಿನಲ್ಲಿ ಭಯಂಕರರಾದ ಅರ್ಥಾತ್ ಶೂರರಾದ ಮೃಗೇಶ ಮತ್ತು ನಾಗೇಂದ್ರರು ಸೈನ್ಯಾಧಿಕಾರಿಗಳಾಗಿದ್ದರು.

ಈ ಮೃಗೇಶ ಮತ್ತು ನಾಗರಿಬ್ಬರು ಭಟರಿ ಕುಲವೆಂಬ ಆಕಾಶಕ್ಕೆ ಚಂದ್ರ, ಅಳಪಗಣಕ್ಕೆ ಪಶುಪತಿ (ಅಂದರೆ ಅಳಪ ಇಲ್ಲವೆ ಆಳುಪರ ಸಮೂಹಕ್ಕೆ ಒಡೆಯ), ನೂರಾರು ಯಜ್ಞಗಳಲ್ಲಿ ಮಾಡಿದ ಗೋ-ದಾನದಿಂದ ಮತ್ತು ಅನೇಕ ಯುದ್ಧಗಳಲ್ಲಿ ತೋರಿದ ಶೌರ್ಯಯುತವಾದ ಚರಿತ್ರೆಯಿಂದ ದಕ್ಷಿಣ ದೇಶದಲ್ಲಿ ದಾನ ಪಶುಪತಿಯೆಂದು ಹೊಗಳಲ್ಪಟ್ಟವನ, ಪಶುಪತಿ ಎಂಬ ಹೆಸರಿನವನ ಬೆಂಬಲಿಗನಾದ ಕೆಲ್ಲ - ಭಟರಿಯ ಪ್ರೀತಿಯ ಮಗನಿಗೆ, ಕೇಕಯ ಮತ್ತು ಪಲ್ಲವರೊಡನೆ ಕಾದಿ ಜಯಶಾಲಿಯಾದ ವಿಜ-ಅರಸನಿಗೆ ಸೇಂದ್ರಕ ಮತ್ತು ಬಾಣ ದೇಶಗಳ ವೀರ ಪುರುಷರ ಸಮಕ್ಷ ಪಲ್ಮಡಿ ಮತ್ತು ಮೂಱಿವಳ್ಳಿಗಳನ್ನು 'ಬಾಳ್ಗಚ್ಚು'ವಾಗಿ ಅಂದರೆ ಯುದ್ಧದಲ್ಲಿ ಸಲ್ಲಿಸಿದ ಸೇವೆಗಾಗಿ ಕೊಟ್ಟರು. ಬಟಾರಿ ಕುಲದವನಾಗಿರುವ ಅಳುಕದಂಬನು (ಈತನ ಮೂಲಕ ದತ್ತಿಯನ್ನು ಬಿಡಲಾಗಿದೆ ಎಂದರ್ಥ). ಸೈನ್ಯಾಧಿಕಾರಿಗಳಾದ ಈ ಇಬ್ಬರೂ ಅಂದರೆ ಮೃಗೇಶ ಮತ್ತು ನಾಗೇಂದ್ರರಿಬ್ಬರೂ ವಿಜ ಅರಸರ ಪಲ್ಮಡಿಗೆ ಅಂದರೆ ವಿಜ ಅರಸರು ದಾನವಾಗಿ ಪಡೆದ ಪಲ್ಮಡಿಗೆ ಕುಱುಂಬಿಡಿ ಬಿಟ್ಟರು ಅರ್ಥಾತ್ ಪಲ್ಮಡಿಯನ್ನು ಕುತ್ತುಂಬಿತ್ತಿಯಾಗಿ ಬಿಟ್ಟರು. ('ವಜ್ರದೀಪ್ತಿ'ಯ ಲೇಖನ, ೧೯೯೦, ಪು.೧೩)

### 121.3.3 ಟಿ.ವಿ. ವೆಂಕಟಾಚಲ ಶಾಸ್ತ್ರೀ

ನಮಸ್ಕಾರ. ಶ್ರೀಮತ್ ಕದಂಬರಾಜ್ಯಪಾಲಕ, ತ್ಯಾಗಸಂಪನ್ನ, ಕಲಭೋರನ ಶತ್ರು (ಆಗಿರುವ) ಕಕುಸ್ಥ ಭಟ್ಟೋರನು ಆಳಲು (ಆಳುತ್ತಿರುವಾಗ), ನರಿದಾವಿಳೆ ನಾಡಿನಲ್ಲಿ ಭಟಹರಾಗಿರುವವರಾದ (ಒಡೆಯರಾಗಿರುವವರಾದ), ಮೃಗರಾಜ (ಸಿಂಹ), ಸರ್ಪರಾಜ (ವಾಸುಕಿ ಅಥವಾ ಮಹೋಗ್ರಸರ್ಪ)ರಂತೆ ಭಯಂಕರರಾಗಿರುವವರಾದ, ಶ್ರೀ ಮೃಗೇಶ ಮತ್ತು ನಾಗ ಎಂಬ ಹೆಸರಿನ ಇಬ್ಬರು, ಪ್ರಸಿದ್ಧವಾದ ಬಟರಿವಂಶವೆಂಬ ನಿರ್ಮಲವಾದ ಆಕಾಶಕ್ಕೆ ಚಂದ್ರನು, ಅಳಪರೆಂಬ ಗಣಕ್ಕೆ ಶಿವನು (= ಅಳಪರ ಸಮೂಹಕ್ಕೆ ಸ್ವಾಮಿ), ಪ್ರಸಿದ್ಧವಾದ ದಕ್ಷಿಣಾಪಥದ ನೂರಾರು ಯುದ್ಧಗಳೆಂಬ ಯಜ್ಞಗಳಲ್ಲಿ (ಪ್ರತಿಪಕ್ಷದವರನ್ನು) ಬಲಿಗೊಡುವುದರಲ್ಲಿ ಶೌರ್ಯಯುಕ್ತವಾದ ಉದ್ಯಮದಿಂದ ತುಂಬಿರುವವನು (ಅಥವಾ ನೂರಾರು ಯಜ್ಞಗಳಲ್ಲಿ ಪಶುಬಲಿ ಕೊಟ್ಟವನು ಮತ್ತು ನೂರಾರು ಯುದ್ಧಗಳಲ್ಲಿ ಶೌರ್ಯೋದ್ಯಮವನ್ನು ಮರೆದವನು), ದಾನಪಶುಪತಿ - ಎಂದು (ಹೀಗೆ) ಹೊಗಳಲ್ಪಟ್ಟವನ, ಪಶುಪತಿ ಎಂಬ ಹೆಸರಿನವನ (ಹಾಗೂ) ಸರಕೆಲ್ಲ ಭಟಾರಿಯ ಪ್ರೀತಿಪಾತ್ರದ ಮನೆಮಗನಿಗೆ, ಕೇಕಯರನ್ನೂ ಪಲ್ಲವರನ್ನೂ ಹೋರಾಡಿ ಹೊಯ್ದು ಜಯಶಾಲಿಯಾದ ಆ ವಿಜ ಅರಸನಿಗೆ, ಸೇಂದ್ರಕ ಮತ್ತು ಬಾಣ (ಈ) ಎರಡು ದೇಶಗಳ ವೀರ ಪುರುಷರ ಎದುರಿನಲ್ಲಿ ಪಲ್ಮಡಿಯನ್ನೂ ಮೂಟಿವಳ್ಳಿಯನ್ನೂ 'ಬಾಳ್ಗಚ್ಚು' ಪಾಗಿ ಕೊಟ್ಟರು. ಬಟಾರಿ ಕುಲದವನಾಗಿರುವ ಅಳಕದಂಬನು. (ಇದನ್ನು) ಅಪಹರಿಸಿದವನು ಮಹಾಪಾತಕನು. (ಈ) ಇಬ್ಬರೂ ಸಬ್ಬಂಗದವರು ವಿಜ ಅರಸರ ಪಲ್ಮಡಿಗೆ ಕುಱುಂಬಿಡಿಯನ್ನು ಬಿಟ್ಟರು. ಅದನ್ನು ಕೆಡಿಸುವವನಿಗೆ ಮಹಾಪಾತಕ (ಬರುತ್ತದೆ). ಒಳ್ಳೆಯದಾಗಲಿ.

ಈ ಗದ್ದೆಯ ಒಡ್ಡಿನಲ್ಲಿ (ಒಟ್ಟಿನಲ್ಲಿ, ಉತ್ಪನ್ನದಲ್ಲಿ) ಬ್ರಾಹ್ಮಣರಿಗೆ ತೆರಿಗೆಯಿಲ್ಲದೆ ಆ ಹತ್ತನೆಯ ಒಂದು ಭಾಗವನ್ನು ಬಿಟ್ಟರು.

ಶಾಸನ ಪಾಠವನ್ನು ಅರ್ಥ ಮಾಡುವಾಗ ಈವರೆಗೆ ನಡೆದಿರುವ ಯಾವುದೇ ಪ್ರಯತ್ನ ನಿಷ್ಕರ್ಷೆ ಎನ್ನುವ ನೆಲೆಯನ್ನು ತಲುಪಲು ಯಶಸ್ವಿಯಾಗಿಲ್ಲ. ಈಚೆಗೆ ಎಂ.ಎಚ್. ಕೃಷ್ಣ ಅವರ ಹಾಗೂ ನನ್ನ ('ಶಬ್ದಾರ್ಥ ವಿಹಾರ' ೧೯೭೪, ಪು.೧-೧೧) ಅರ್ಥ ವಿವರಣೆಯನ್ನು ವಿಮರ್ಶಿಸಿರುವ ಜಿ.ಎಸ್. ಗಾಯಿಯವರು ತಮ್ಮ ಕನ್ನಡ ಮತ್ತು ಇಂಗ್ಲಿಷ್ ಲೇಖನಗಳಲ್ಲಿ ತಮಗೆ ಸರಿಯೆಂದು ಕಂಡ ಇನ್ನೊಂದು ಅರ್ಥ ವಿವರಣೆಯನ್ನು ನೀಡಿರುವರಷ್ಟೆ. ಇದರಲ್ಲಿಯೂ ಹೇಗೆ ದೌರ್ಬಲ್ಯಗಳುಂಟು ಎನ್ನುವುದನ್ನು ಕೆಲಮಟ್ಟಿಗೆ ಇಲ್ಲಿ ಗಮನಿಸಬಹುದು.

೧. ಪಶು ಪ್ರದಾನಕ್ಕೆ ಅವರು ಗೋದಾನ ಎಂದು ಅರ್ಥ ಮಾಡುವುದು ಬಹುಶಃ ಸರಿಯಲ್ಲ. 'ಪಶು' ವಿಶೇಷಣದ ಅನೇಕ ಸಮಾಸಶಬ್ದಗಳು 'ಯಜ್ಞದಲ್ಲಿ ಪಶುವನ್ನು ಬಲಿ ಕೊಡುವುದು' ಎಂಬ ಅರ್ಥವನ್ನು ಹೊಂದಿವೆ. ನಿಘಂಟು ಅಂತಹ ಶಬ್ದಗಳನ್ನು ದಾಖಲಿಸಿವೆ.

೨. ಶಾಸನ ಪಾಠದಲ್ಲಿ 'ಮೃಗೇಶ ನಾಗೇಂದ್ರಾಭೀಳರ್ ಭಟಹರಪ್ಪೊರ್' ಎಂಬೆಡೆಗೆ ವಾಕ್ಯ ನಿಲ್ಲುವುದೆಂದೂ ಮುಂದಿನ ವಾಕ್ಯದಲ್ಲಿ ಅವರ ಹೆಸರುಗಳು ಆವೃತ್ತಿಗೊಳ್ಳುವುವೆಂದೂ ಅವರು ಭಾವಿಸಿರುವುದು ಸರಿಯಲ್ಲ. ಅವರು 'ಆಭೀಳರ್' ಎಂಬ ಪದದ ಆಶಯದ ಕಡೆಗೆ ಲಕ್ಷ್ಯ ಕೊಟ್ಟಂತೆ ತೋರುವುದಿಲ್ಲ.

೩. ಶಾಸನದಲ್ಲಿ ಬಹು ತೊಡಕಿನ ಭಾಗವೆಂದರೆ 'ಪಶುಪತಿಯಾಸರಕ್ಕೆಲ್ಲ ಭಟರಿಯಾ' ಎಂಬುದು. ಇಲ್ಲಿ 'ಆಸರಕ್ಕೆ' ಎಂದು ಪದಚ್ಛೇದ ಮಾಡಿಕೊಂಡು 'ಸಹಾಯಕ್ಕೆ' ಅಥವಾ 'ಬೆಂಬಲಿಗ' ಎಂಬುದಾಗಿ ಅವರು ಅರ್ಥ ಹೇಳಿರುವುದಕ್ಕೆ ಯಾವ ಆಧಾರವೂ ಇಲ್ಲ. ಏಕೆಂದರೆ, ಆ ಅರ್ಥದ ಶಬ್ದ ಹಳಗನ್ನಡದಲ್ಲಿ ಇಲ್ಲ (ಬಾ.ರಾ. ಗೋಪಾಲ್ ಅವರು ಸಹ ಗಾಯಿಯವರ ಹಾಗೆಯೇ

ಅರ್ಥ ಮಾಡುತ್ತಾರೆ). ಹೊಸಗನ್ನಡದ ಆಶ್ರಯಾರ್ಥದ 'ಆಸರೆ' ಶಬ್ದದೊಂದಿಗೆ ಅದರ ಸಂಬಂಧವುಂಟೆಂದು ತಿಳಿಯುವುದು ಭಾಷಿಕವಾಗಿ ಒಪ್ಪತಕ್ಕುದಲ್ಲ.

ಇಲ್ಲಿ ಸ್ವಲ್ಪ ವಿಚಾರಬೇಕು : ಎಂ.ಎಚ್. ಕೃಷ್ಣ, ಕೆ.ವಿ. ರಮೇಶ್ ಈ ಶಬ್ದಕ್ಕೆ ಆಹ್ವಾನ, ಆದೇಶ, ಕರೆ ಎಂದು ಹೇಳಿದ್ದಾರೆ; ಜಿ.ಎಸ್. ಗಾಯಿ ಸಹಾಯಕ್ಕೆ, ಬೆಂಬಲಕ್ಕೆ ಎಂದಿದ್ದಾರೆ; ನಾನು ದಾಳಿಗೆ, ದಾಳಿಗೆ ಒದಗಿದ್ದಕ್ಕೆ ಎಂದು ಈ ಮೊದಲು ಅರ್ಥ ಮಾಡಿದ್ದೇನೆ (ಬಾ.ರಾ. ಗೋಪಾಲ್ ಅವರಿಗೂ ಇದು ಸಮ್ಮತವಿದೆ).

ಈಚೆಗೆ ಎಂ.ಎಂ. ಕಲಬುರ್ಗಿ ಅವರು 'ಸರಕ್ಕೆಲ್ಲ' ಎಂಬುದಾಗಿ ಶಬ್ದವನ್ನು ಬಿಡಿಸಿಕೊಂಡು ಶಾಸನಸ್ಥವಾದ ಮಹಾಕೆಲ್ಲ, ಅರಕೆಲ್ಲ, ಸೇವ್ಯಗೆಲ್ಲ ಈ ಕೆಲವು ಶಬ್ದಗಳು ಬಂದಿರುವ ಪ್ರಯೋಗಗಳ ಹಿನ್ನೆಲೆಯಲ್ಲಿ ವಿಚಾರ ಮಾಡಿದ್ದಾರೆ. ಅಂತಹ ಶಬ್ದಗಳು ಇನ್ನೂ ಸಾಕಷ್ಟು ಇರುವುದನ್ನು ಗಾಯಿಯವರೂ ಉಲ್ಲೇಖಿಸಿದ್ದಾರೆ (ಚಿತ್ರಸೇನ ಕೆಲ್ಲ, ಚಿತ್ರಸೇನ ಮಹಾಕೆಲ್ಲ, ಏಲ ಕೆಲ್ಲ).

ಕಲಬುರ್ಗಿ ತಮ್ಮ ವಿಚಾರದ ಭಾಗವಾಗಿ ಮೂರು ಪರ್ಯಾಯಗಳನ್ನು ಸೂಚಿಸಿದ್ದಾರೆ. ಅವುಗಳಲ್ಲಿ ಪಶುಪತಿ ಮತ್ತು ಸರಕೆಲ್ಲ ಎಂಬವು ಒಬ್ಬನಿಗೇ ಇದ್ದ ಎರಡು ಹೆಸರುಗಳೆಂಬ ಮೂರನೆಯ ಪರ್ಯಾಯಕ್ಕೆ ತಮ್ಮ ಒಲವು ತೋರಿದ್ದಾರೆ. ಇದನ್ನು ಒಪ್ಪುವುದು ಕಷ್ಟ. ಅವರ ಮೊದಲೆರಡು ಪರ್ಯಾಯಗಳು ವಿಚಾರಯೋಗ್ಯ. ವಿಜ ಅರಸನೆಂಬ ದಾನಪ್ರತಿಗ್ರಹಿ ಪಶುಪತಿಗೆ ಹಾಗೂ ಸರಕ್ಕೆಲ್ಲಭಟರಿಗೆ ಇಬ್ಬರಿಗೂ ಆಪ್ತನಾಗಿದ್ದವನು, ಮನೆಮಗನಾಗಿ ಇದ್ದವನು ಎಂಬ ಅಥವಾ ಪಶುಪತಿಗೆ ಸಂಬಂಧಪಟ್ಟವನಾದ ಸರಕ್ಕೆಲ್ಲ ಭಟರಿಗೆ ಆಪ್ತನಾಗಿದ್ದವನು, ಮನೆಮಗನಾಗಿದ್ದವನು ಎಂಬ ಆ ಎರಡು ಪರ್ಯಾಯಗಳಲ್ಲಿ ಒಂದರ ಸಾಧ್ಯತೆಯೇ ಹೆಚ್ಚು ಸಂಭವನೀಯವಾದ್ದು. ಏಕೆಂದರೆ, ತಾಳಗುಂದದ ಶಾಸನದ ಕಕುಸ್ಥ ಭಟಾರಿಯೊಂದಿಗೆ ಬಹುಶಃ ಅಭಿನ್ನನಾದ ಪಶುಪತಿಗೆ ಅಲ್ಲಿ ಸರಕ್ಕೆಲ್ಲ / ಅರಕೆಲ್ಲ ಭಟಾರಿಯೆಂಬ ಹೆಸರೇನೂ ಬರುವುದಿಲ್ಲ. ಇಲ್ಲಿ ಇನ್ನೂ ಹೆಚ್ಚಿನ ಚರ್ಚೆಗೆ ಅವಕಾಶವುಂಟು.

ಜಿ.ಎಸ್. ಗಾಯಿಯವರ ವಿಮರ್ಶೆಯಲ್ಲಿ ಕಕುಸ್ಥಭಟೋರನು ಕದಂಬರ ದೊರೆ ಕಾಕುಸ್ಥ ವರ್ಮನಲ್ಲವೆಂಬುದೂ 'ವಿಚಾರಸರ ಪಲ್ಮಡಿ'ಗೆ ಎಂಬುದಾಗಿ ಪಾಠವನ್ನು ಪರಿಷ್ಕರಿಸಿರುವುದೂ ಹೃದಯಂಗಮವಾದ ವಿಚಾರಗಳಾಗಿವೆ. ಆದರೆ ಇವುಗಳಲ್ಲಿ ಮೊದಲನೆಯುದನ್ನು ವಿದ್ವಾಂಸರು ಗಾಢ ಪರಿಶೀಲನೆಗೆ ಎತ್ತಿಕೊಂಡು ಸ್ಥಿರಪಡಿಸಬೇಕಾಗಿದೆ. ಅಲ್ಲಿಯವರೆಗೆ ಎಂ.ಎಚ್. ಕೃಷ್ಣರ ವ್ಯಕ್ತಿ ಸಮೀಕರಣವೇ ಮಾನ್ಯವಾಗಲೇನೂ ಅಡ್ಡಿಯಿಲ್ಲ.

## 121.4 ಸಾರಾಂಶ

ಹಲ್ಮಿಡಿ ಶಾಸನವು ಕನ್ನಡದ ಉಪಲಬ್ಧ ಮೊದಲ ಕನ್ನಡ ಶಾಸನ. ಇದರ ರಚನೆಯ ಕಾಲ ಕ್ರಿ.ಶ. ೪೫೦. ಬೇಲೂರು ತಾಲೂಕಿನ 'ಹಲ್ಮಿಡಿ' ಎಂಬ ಗ್ರಾಮದಲ್ಲಿ ದೊರೆತದ್ದು. ಇದೊಂದು ವೀರಗಲ್ಲು, ದಾನಶಾಸನ ಕೂಡ. ರಾಜಕೀಯ, ಸಾಮಾಜಿಕ ಮತ್ತು ಭಾಷಿಕ ಕಾರಣಗಳಿಗಾಗಿ ಈ ಶಾಸನಕ್ಕೆ ಕನ್ನಡ ಶಾಸನ ಸಾಹಿತ್ಯದಲ್ಲಿ ಮಹತ್ತ್ವದ ಸ್ಥಾನವಿದೆ. ಶಾಸನದಲ್ಲಿ ಉಕ್ತವಾಗಿರುವ ವ್ಯಕ್ತಿಗಳ ಹೆಸರು, ವ್ಯಕ್ತವಾಗುವ ವಸ್ತುವಿಷಯದೊಡನೆ ಅವುಗಳ ಅನ್ವಯ ವಿಚಾರದಲ್ಲಿ ವಿದ್ವಾಂಸರ ನಡುವೆ ಇನ್ನೂ ಭಿನ್ನವಾದ ಅಭಿಪ್ರಾಯಗಳಿವೆ. ಆದರೂ, ಈ ಶಾಸನದಲ್ಲಿ ವೀರನೊಬ್ಬನಿಗೆ ಗೌರವ ಸಮರ್ಪಣೆ ಮಾಡಿದ ಸಂಗತಿಯಿದೆ ಎಂಬುದು ನಿರ್ವಿವಾದದ ಸಂಗತಿ. ವಿಜ ಅರಸನೆಂಬ ವ್ಯಕ್ತಿಯೇ ಇಲ್ಲಿ ಗೌರವಕ್ಕೆ ಪಾತ್ರನಾದವನು. ಈತನು ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದ ಸಂಬಂಧ 'ಪಲ್ಮಿಡಿ' ಮತ್ತು 'ಮೂಳಿವಳ್ಳಿ' ಗ್ರಾಮಗಳನ್ನು ದಾನವಾಗಿ ನೀಡಲಾಗಿದೆ. ಯುದ್ಧದಲ್ಲಿ ಹೋರಾಡಿದ ರಕ್ತಸಿಕ್ತ ಖಡ್ಗವನ್ನು ತೊಳೆಯುವ ವಿಶಿಷ್ಟ ಗೌರವವಾದ 'ಬಾಳ್ಗಳ್ಚು'ವಿನೊಡನೆ ಈ ದಾನವನ್ನು ನೀಡಿದೆ ಎಂಬುದು ಸಾಂಸ್ಕೃತಿಕವಾಗಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶ.

## ಕೋರ್ಸ್ - X : ಕನ್ನಡ ಶಾಸನ ಅಧ್ಯಯನ (ತತ್ತ್ವ ಮತ್ತು ಆಯ್ದ ಶಾಸನ ಪಠ್ಯಗಳು)

## ಬ್ಲಾಕ್ - 31 : ಪಠ್ಯ ಶಾಸನಗಳು

---

# ಘಟಕ - 122

# ಹಲ್ಮಿಡಿ ಶಾಸನ : ಭಾಗ - ೨

## ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಿಕ ವಿವೇಚನೆ

---

**ರಚನೆ**


122.0 ಉದ್ದೇಶ

122.1 ಪೀಠಿಕೆ

122.2 ಹಲ್ಮಿಡಿ ಶಾಸನ : ಚರಿತ್ರಾಂಶಗಳು

122.3 ಸಾಮಾಜಿಕ ಸಾಂಸ್ಕೃತಿಕ ಅಂಶಗಳು

122.4 ಭಾಷಿಕ ವೈಲಕ್ಷಣ್ಯಗಳು

- 122.4.1 ಭಾಷಾ ವೈಲಕ್ಷಣ್ಯಗಳ ಸಾರಾಂಶ
- 122.4.2 ಕೆಲವು ಭಾಷಾ ವೈಲಕ್ಷಣ್ಯಗಳು

122.5 ಸಾರಾಂಶ

122.6 ಅಭ್ಯಾಸ ಪ್ರಶ್ನೆಗಳು

122.7 ಅಭ್ಯಾಸಕ್ಕೆ ಆಕರಗಳು

## 122.0 ಉದ್ದೇಶ

- ಹಲ್ಮಿಡಿ ಶಾಸನದಲ್ಲಿ ವ್ಯಕ್ತವಾಗುವ ಚಾರಿತ್ರಿಕ ಸಂಗತಿಗಳನ್ನು ತಿಳಿಯುವುದು.
- ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ತ್ವದ ಸಂಗತಿಗಳನ್ನು ಗುರುತಿಸಲು ಸಮರ್ಥನಾಗುವುದು.
- ಶಾಸನದಲ್ಲಿ ವ್ಯಕ್ತವಾಗಿರುವ ಭಾಷಿಕ ವೈಲಕ್ಷಣ್ಯಗಳನ್ನು ಗ್ರಹಿಸುವುದು.

## 122.1 ಪೀಠಿಕೆ

ಈ ಘಟಕವು ಮುಖ್ಯವಾಗಿ ಹಲ್ಮಿಡಿ ಶಾಸನದಲ್ಲಿ ವ್ಯಕ್ತವಾಗಿರುವ ಚಾರಿತ್ರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಾಗೂ ಭಾಷಿಕ ವೈಲಕ್ಷಣ್ಯಗಳನ್ನು ಕುರಿತಿದೆ. ಹಾಗೆ ನೋಡಿದರೆ ಈ ಶಾಸನಕ್ಕೆ ಚಾರಿತ್ರಿಕ ಕಾರಣಗಳಿಗಿಂತ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳೇ ಮಹತ್ತ್ವದ ಸ್ಥಾನವನ್ನು ತಂದುಕೊಟ್ಟಿವೆ. ಭಾಷಾ ಪ್ರಯೋಗವೂ ಪ್ರಧಾನ ಪಾತ್ರವಹಿಸಿದೆ. ಈ ಎಲ್ಲ ಅಂಶಗಳನ್ನು ಮುಂದೆ ವಿವರವಾಗಿ ವಿಶ್ಲೇಷಿಸಿದೆ - ಗಮನಿಸಿ.

## 122.2 ಹಲ್ಮಿಡಿ ಶಾಸನ : ಚರಿತ್ರಾಂಶಗಳು

ಕದಂಬರಾಜನಾದ ಕಾಕುಸ್ಥವರ್ಮನು ರಾಜ್ಯವಾಳುತ್ತಿದ್ದಾಗ ಒಮ್ಮೆ, ಸೇಂದ್ರಕ ಮತ್ತು ಬಾಣರ ಸೈನ್ಯಗಳನ್ನೊಳಗೊಂಡ ಕದಂಬರಿಗೂ ಕೇಕಯರ ಸೈನ್ಯವನ್ನೊಳಗೊಂಡ ಪಲ್ಲವರಿಗೂ ನಡೆದ ಒಂದು ಯುದ್ಧದಲ್ಲಿ ಎಲ್ಲ ಭಟಾರಿಯ (ಈಚೆಗೆ ಸರಕೆಲ್ಲ ಬಟಾರಿಯೆಂದು ತಿಳಿಯಲಾಗುತ್ತಿದೆ) ಮಗನಾದ ವಿಜ ಅರಸನು ಮಿಗಿಲಾದ ಶೌರ್ಯದಿಂದ ಹೋರಾಡಿ ಪಲ್ಲವರನ್ನು ಪರಾಭವಗೊಳಿಸಿದನು. ಇದಕ್ಕೆ ಮೆಚ್ಚಿ ಆತನಿಗೆ ನರಿದಾವಿಳೆ ನಾಡಿನ ಅಧಿಕಾರಿಗಳಾದ ಮೃಗೇಶ ಮತ್ತು ನಾಗ ಎಂಬುವರು ಪಲ್ಮಡಿ ಮತ್ತು ಮೂಱುವಳ್ಳಿಗಳೆಂಬ ಎರಡು ಗ್ರಾಮಗಳನ್ನು ಕತ್ತಿಯ ಕೊಡುಗೆಯಾಗಿ ಕೊಟ್ಟರೆಂಬುದು ಮುಖ್ಯಶಾಸನ ಭಾಗದ ಸಾರಾಂಶವಾಗಿದೆ.

ಈ ಶಾಸನದ ಚರಿತ್ರಾಂಶಗಳನ್ನು ನಿರ್ಧಾರವಾಗಿ ತಿಳಿಯುವುದಕ್ಕೆ ತಕ್ಕ ಆಧಾರಗಳು ಸಾಲವು. ಈ ಶಾಸನ ಕನ್ನಡ ಭಾಷೆಯಲ್ಲಿ ದೊರೆತಿರುವ ಶಾಸನಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದ್ದು ಎಂಬ ಕಾರಣದಿಂದ ಇದಕ್ಕೆ ಒಂದು ಮಹತ್ತ್ವ ಪ್ರಾಪ್ತವಾಗಿದೆ. ವಾಸ್ತವವಾಗಿ ಚಾರಿತ್ರಿಕ ಘಟನೆಗಳಿಂದಾಗಿ ಅಲ್ಲ. ಇದೊಂದು ಸಾಮಾನ್ಯ ದಾನಶಾಸನವೆಂದು ಬೇಕಾದರೆ ಹೇಳಬಹುದು. ಈ ಶಾಸನವನ್ನು ಮೊದಲು ಕಂಡು ಹಿಡಿದು ಪ್ರಕಟಿಸಿದ ಎಂ.ಎಚ್. ಕೃಷ್ಣ ಅವರೇ ತಮಗೆ ಸಾಧ್ಯವಿದ್ದ ಮಟ್ಟಿಗೆ ಇದರ ಚರಿತ್ರಾಂಶಗಳನ್ನೆಲ್ಲ ವಿವರವಾಗಿ ವಿಶ್ಲೇಷಿಸಿ, ಮೈಸೂರು ಪುರಾತತ್ತ್ವ ಇಲಾಖೆಯ ೧೯೩೬ ನೆಯ ವರ್ಷದ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದ್ದಾರೆ. ಇದರ ಸಂಗ್ರಹವನ್ನು ೧೯೩೯ ನೆಯ ವರ್ಷದ 'ಪ್ರಬುದ್ಧ ಕರ್ಣಾಟಕ' ಪತ್ರಿಕೆಯಲ್ಲಿಯೂ (ಸಂ. ೨೦-೩) ಕೊಟ್ಟಿದ್ದಾರೆ. ಅನಂತರ ಈ ಶಾಸನದ ಮಹತ್ತ್ವವನ್ನು ಮನಗಂಡು ಇತಿಹಾಸಜ್ಞರೂ ಶಾಸನತಜ್ಞರೂ ಸಾಹಿತಿಗಳೂ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಮುಖಗಳಲ್ಲಿ ಇದರ ವಿಚಾರ ಮಾಡುತ್ತ ಬಂದಿದ್ದಾರೆ, ಶಾಸನಪಾಠವನ್ನು ಪ್ರಕಟಿಸುತ್ತ ಇದ್ದಾರೆ.

ಹಲ್ಮಿಡಿ ಶಾಸನ ಕದಂಬರ ಕಾಲಕ್ಕೆ ಸೇರಿದ್ದೆಂದು ಶಾಸನದ ೨-೩ ನೆಯ ಪಂಕ್ತಿಗಳ ಸೂಚನೆಯಿಂದ ತಿಳಿಯುತ್ತದೆ. ಅದರ ಪ್ರಕಾರ :

ಶಾಸನ ಲಿಖಿತವಾದ ಕಾಲಕ್ಕೆ ಕದಂಬರಾಜ ಕಕುಸ್ಥಭಟ್ಟೋರ, ಎಂದರೆ ಕಾಕುಸ್ಥವರ್ಮನು ಆಳುತ್ತಿದ್ದನು. ಕದಂಬರ ರಾಜಧಾನಿ ಈಗಿನ ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಎಂಬುದು ತಿಳಿದಿದೆ. ಕಾಕುಸ್ಥವರ್ಮನು ಕದಂಬ ರಾಜರ ಪರಂಪರೆಯಲ್ಲಿ ಬಂದ ಭಗೀರಥನೆಂಬವನ ಎರಡನೆಯ ಮಗ, ರಘು ಎಂಬವನ ತಮ್ಮ, ಶಾಂತಿವರ್ಮ ಕೃಷ್ಣವರ್ಮರ ತಂದೆ.

ಕಾಕುಸ್ಥವರ್ಮನ ಆಳ್ವಿಕೆಯ ಕಾಲವನ್ನು ಇತಿಹಾಸಜ್ಞರು ಬೇರೆ ಬೇರೆಯಾಗಿ ಹೇಳಿದ್ದಾರೆ. ಆದರೆ ಗೃಹೀತವಾದ ಸಾಮಾನ್ಯ ಅಭಿಪ್ರಾಯವೆಂದರೆ ೫ ನೆಯ ಶತಮಾನ.

ಮೊರೇಸ್ ೪೩೦-೪೫೦, ಎಸ್ ಶ್ರೀಕಂಠಶಾಸ್ತ್ರಿ ೪೨೫-೪೪೫, ಎನ್.ಎಲ್.ರಾವ್, ಆರ್.ಎಸ್. ಪಂಚಮುಖಿ ೪೨೨-೪೪೭, ಬಾ.ರಾ. ಗೋಪಾಲ್ ೪೦೫-೪೩೦, ಡಿ.ಸಿ. ಸರ್ಕಾರ್ ೪೦೫-೪೩೫ ಹೀಗೆ ಸ್ವಲ್ಪ ಸ್ವಲ್ಪ ವ್ಯತ್ಯಾಸದ ತೇದಿಗಳು ಸೂಚಿತವಾಗಿವೆ. ಎಂ.ಎಚ್.ಕೃಷ್ಣ ಅವರು ತಮ್ಮ ಕಾಲದ ಉಪಲಬ್ಧ ಆಧಾರಗಳನ್ನು ಅವಲಂಬಿಸಿ ಶಾಸನದ ಕಾಲವನ್ನು ಕ್ರಿ.ಶ. ಸು ೪೫೦ ಎಂದು ಸ್ಥೂಲವಾಗಿ ಹೇಳಿದ್ದಾರೆ.

ಶಾಸನದಲ್ಲಿ ಉಕ್ತನಾದ ಕಕುಸ್ಥ ಭಟ್ಟೋರನು ಕದಂಬರ ಕಾಕುಸ್ಥವರ್ಮನೇ ಎಂದಾದರೆ ಆಗ್ಗೆ ಶಾಸನದಲ್ಲಿಯ ಘಟನೆಗಳು ೫ ನೆಯ ಶತಮಾನದ ಪೂರ್ವಭಾಗದಲ್ಲಿ ನಡೆದಿದೆಯೆಂದು ತಿಳಿಯಲು ಮೇಲೆ ಸೂಚಿತವಾದ ಬಹುಜನ ಮಾನ್ಯವಾದ ತೇದಿ ಸೂಚನೆ ಅವಕಾಶಮಾಡುತ್ತದೆ. ಶಾಸನದ ೨ ನೆಯ ಸಾಲಿನಲ್ಲಿ 'ಕಲಭ, ದೇಶದ ಅರಸನ ಶತ್ರು' ಎಂಬ ಅರ್ಥವನ್ನು ಕೊಡುವ 'ಕಲಭೋರನಾ ಅರಿ' ಎನ್ನುವ ಮಾತಿದೆ. ಈ ಕಲಭ್ರರು ಪ್ರಾಚೀನ ಪಲ್ಲವ ಮತ್ತು ಗಂಗ ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾರೆ. ಪಲ್ಲವರಿಗೂ ಕಳಭ್ರರಿಗೂ ದೀರ್ಘಕಾಲದ ವೈಷಮ್ಯ ಸಂಘರ್ಷಗಳಿದ್ದುದು ತಿಳಿದಿದೆ.

ಹೀಗೆ ಕಲಭ್ರರ ಶತ್ರುವಾದ ಕಾಕುಸ್ಥವರ್ಮನು ಆಳುತ್ತಿರಬೇಕಾದರೆ, ನರಿದಾವಿಳೆ ನಾಡಿನಲ್ಲಿ ಮೃಗೇಶ ಮತ್ತು ನಾಗ ಇಬ್ಬರು ಶೂರರಾದ 'ಭಟಹರು', ಎಂದರೆ ಪ್ರಾಯಃ ಅಧಿಕಾರಿಗಳು ಇರುತ್ತಿದ್ದರೆಂದು ೩ ರಿಂದ ೫ ನೆಯ ಸಾಲುಗಳಲ್ಲಿ ವಿವರಣೆಯಿದೆ. 'ನರಿದಾವಿಳೆ ನಾಡು' ಎಂಬುದನ್ನು 'ದೇವಳಿಗೆ ನಾಡು' ಎಂಬುದರೊಡನೆ ಸಮೀಕರಿಸಬಹುದೆಂದು ಡಾ. ಕೃಷ್ಣ ಅವರ ವಿಚಾರ. ಈ ಪ್ರದೇಶ ಶಾಸನಗಳಲ್ಲಿ 'ದೇವಳಿಗೆ ಎಪ್ಪತ್ತು', 'ದೇವಳಿಗೆ ವಿಷಯ' ಎಂಬುದಾಗಿ ಹೇಳಲ್ಪಟ್ಟಿದೆ. ಇದು ಬೇಲೂರು ತಾಲ್ಲೂಕಿಗೆ ಉತ್ತರಭಾಗದ ಸುತ್ತಮುತ್ತ ಇರುವ ಪ್ರದೇಶವನ್ನು ಒಳಗೊಂಡ ಜಿಲ್ಲೆ ಎಂದು ಭಾವಿಸಿದೆ.

ಮೃಗೇಶ ಮತ್ತು ನಾಗ ಎಂಬುವರು ಈ ಪ್ರಾಂತದಲ್ಲಿ ಅಧಿಕಾರಿಗಳಾಗಿದ್ದರೆಂದು ಪ್ರಸ್ತುತ ಶಾಸನದಲ್ಲಿ ಬಂದಿದೆ. 'ಭಟಹ' ಎಂಬುದು ಮಹಾರಾಜನಿಗೂ ಸಾಮಂತರಾಜನಿಗೂ ನಡುವೆ ಬರುವ ಒಂದು ಉನ್ನತಾಧಿಕಾರವನ್ನು ಸೂಚಿಸುವ (ಪ್ರಾಯಃ ರಾಜಪುತ್ರ ಅಥವಾ ಸರ್ವಾಧಿಕಾರಿ) ಶಬ್ದವಾಗಿರಬೇಕೆಂದು ಗ್ರಹಿಸಿರುವ ಕೃಷ್ಣ ಅವರು ಶಾಸನೋಕ್ತನಾದ ಮೃಗೇಶ ಎಂಬ ವ್ಯಕ್ತಿಯನ್ನು ಕಾಕುಸ್ಥವರ್ಮನ ಮೊಮ್ಮಗನೇ ಆದ, ಶಾಂತಿ ವರ್ಮನ ಪುತ್ರನಾದ ಮೃಗೇಶವರ್ಮನೊಡನೆ (ಸು. ೪೭೨ - ೪೯೭) ಸಮೀಕರಿಸಿರುತ್ತಾರೆ. ನಾಗ ಎಂಬುವನು ಮೃಗೇಶನ ಹಾಗೆಯೇ ಪ್ರಖ್ಯಾತನಾಗಿದ್ದ ಇನ್ನೊಬ್ಬ ಉನ್ನತಾಧಿಕಾರಿಯೆಂದೂ ಚಾರಿತ್ರಿಕ ವಿಷಯ ಆತನ ಬಗೆಗೆ ಬೇರೇನೂ ತಿಳಿಯದೆಂದೂ ಹೇಳಿರುತ್ತಾರೆ.

ಹಲ್ಮಿಡಿ ಶಾಸನದ ಮೃಗೇಶನೂ ಕದಂಬರಾಜನಾದ ಶಾಂತಿವರ್ಮನ ಪುತ್ರ ಮೃಗೇಶವರ್ಮನೂ ಒಬ್ಬನೇ ವ್ಯಕ್ತಿಯೆಂದು ಅವರು ಭಾವಿಸಿದ್ದು, 'ಭಟಹ' ಶಬ್ದದ ಅರ್ಥನಿರ್ಣಯದಲ್ಲಿ ಪ್ರಭಾವ ಬೀರಿರುವುದು ಸ್ಪಷ್ಟವಾಗಿಯೇ ಇದೆ. ಈ ಶಬ್ದ ಯೋಧಾರ್ಥಕವಾದ ಶಬ್ದ 'ಭಟಃ'ದಿಂದಲೋ ಸ್ವಾಮ್ಯರ್ಥಕವಾದ 'ಭಟ್ಟಃ' ಶಬ್ದದಿಂದಲೋ ಹುಟ್ಟಿರಬಹುದು. 'ಭಟ್ಟಃ' > 'ಭಟಹ' ಆಗಿದ್ದ ಪಕ್ಷದಲ್ಲಿ, ಮೃಗೇಶ ನಾಗರು ನರಿದಾವಿಳೆ ನಾಡಿನ ಒಡೆಯರು ಎಂದು ಇಟ್ಟುಕೊಳ್ಳಬಹುದು. ಆಡಳಿತಾಧಿಕಾರಿಗಳೆಂದೂ ಭಾವಿಸಬಹುದು (governers). ಆ ಇಬ್ಬರೂ ಬರಿಯ ಯೋಧರಾಗಿರಲಾರರು, ತೀರ ಮೇಲಿನ ಪದವಿಯವರೂ ಆಗಿರಲಾರರು.

ವಸ್ತುಸ್ಥಿತಿಯೆಂದರೆ ಶಾಸನದ ಮೃಗೇಶನೂ ಕದಂಬರಾಜ ಮೃಗೇಶವರ್ಮನೂ ಒಬ್ಬನೇ ವ್ಯಕ್ತಿಯೆಂದು ಕೃಷ್ಣ ಭಾವಿಸಿರುವುದು ಸಮರ್ಪಕವಾದ ಸಮೀಕರಣವಲ್ಲ. ಕಾಕುಸ್ಥವರ್ಮನ ಅಥವಾ ಶಾಸನೋಕ್ತ ಕಕುಸ್ಥ ಭಟ್ಟೋರನ ಆದೇಶದಂತೆ ದೇವಳಿಗೆ ನಾಡಿನಲ್ಲಿ ಪ್ರಾಂತಾಧಿಕಾರಿಗಳಾಗಿರುತ್ತಿದ್ದ ಇಬ್ಬರು ಬೇರೆಯೇ ಆದ ವ್ಯಕ್ತಿಗಳು ಮೃಗೇಶ ಮತ್ತು ನಾಗರು ಎಂಬುದಾಗಿ ತಿಳಿಯುವುದು ಒಳ್ಳೆಯದು.

ಶಾಸನೋಕ್ತ ವ್ಯಕ್ತಿ ಮೃಗೇಶವರ್ಮನೆಂದೇ ಇಟ್ಟುಕೊಂಡರೆ 'ಕಕುಸ್ಥ ಭಟೇರನಾಳೆ' ಎಂಬ ಮಾತಿಗೆ, ಶಾಸನತೇದಿ ೫ ನೆಯ ಶತಮಾನದ ನಡುವೆ ಎಂಬ ಗ್ರಹಿಕೆಗೆ ಹೊಂದಿಕೆಯಾಗುವುದಿಲ್ಲ. ಡಾ. ಗಾಯಿ, ಡಾ. ಬಿ.ಆರ್. ಗೋಪಾಲ್ ಮುಂತಾದವರು ಸಹ ಈ ಸಮೀಕರಣವನ್ನು ಮಾನ್ಯ ಮಾಡಿಲ್ಲ.

ಶಾಸನದ ೮ ನೇ ಸಾಲಿನಲ್ಲಿ ಪಶುಪತಿಯೆಂಬ ವ್ಯಕ್ತಿಯ ಹೆಸರು ಬಂದಿದೆ. ೫ ರಿಂದ ೮ ನೆಯ ಸಾಲಿನವರೆಗೆ ಬಂದಿರುವ ಮಾತುಗಳು ಆತನ ಪ್ರಶಂಸೆಗೆ ಹೇಳಿರುವ ವಿಶೇಷಣಗಳೆಂಬುದು ಸ್ಪಷ್ಟವಾಗಿದೆ. ಈ ವಿಶೇಷಣಗಳಲ್ಲಿ ಆತನನ್ನು ಕುರಿತ ಕೆಲವು ಚರಿತ್ರಾಂಶಗಳಿವೆ. ಅವು ಕ್ರಮವಾಗಿ ಹೀಗಿವೆ : ಪಶುಪತಿ ಎಂಬುವನು ಬಟರಿ (ಭಟರಿ, ಬಟಾರಿ) ಕುಲಕ್ಕೆ ಸೇರಿದವನು, ಅಳಪರ (ಅಳುಪ, ಆಳುಪ)ಸಮೂಹಕ್ಕೆ ಸ್ವಾಮಿ, ದಕ್ಷಿಣಾಪಥದ ಯುದ್ಧಗಳಲ್ಲಿ ಶತ್ರುವಿಧ್ವಂಸನವನ್ನು ಮಾಡಿದವನು, ದಾನಪಶುಪತಿಯೆಂದು ಕೀರ್ತಿತನಾದವನು.

ಭಟಾರಿವಂಶ ಮತ್ತು ಅಳಪ ವಂಶಗಳು ಕರ್ನಾಟಕದ ಚರಿತ್ರೆಯಲ್ಲಿ ಸ್ಥಾನ ಪಡೆದಿರತಕ್ಕವು. ಹಲ್ಮಿಡಿ ಶಾಸನದಲ್ಲಿ ಉಕ್ತನಾಗಿರುವ ಪಶುಪತಿ ಶಿಕಾರಿಪುರ ತಾಲ್ಲೂಕು ತಾಳಗುಂದದ ಪ್ರಣವೇಶ್ವರ ಸ್ವಾಮಿ ದೇವಾಲಯದ ಬಾಗಿಲುವಾಡದ ಮೇಲಿರುವ ಶಾಸನದಲ್ಲಿ (ಸು. ೫ ನೆಯ ಶತಮಾನ) ಉಕ್ತನಾಗಿರುವ ಭಟಾರಿವಂಶದ ಪಶುಪತಿ ಕಾಕುಸ್ಥನೇ ಆಗಿರಬೇಕೆಂದು ಭಾವಿಸಲಾಗಿದೆ. ಈ ವಿಷಯ ಈಚೆಗೆ ವಿಶದವಾಗಿ ಜಿ.ಎಸ್. ಗಾಯಿ ಮೊದಲಾದವರಿಂದ ವಿಶ್ಲೇಷಣೆಗೊಂಡಿದೆ. ಅವರಲ್ಲಿ ಗಾಯಿಯವರ ವಿಚಾರ ಸಾರ ಇದು :

ಎಂ.ಎಚ್.ಕೃಷ್ಣ ಅವರು ಹಲ್ಮಿಡಿ ಶಾಸನದ ಆರಂಭದಲ್ಲಿ ಬರುವ ಕಕುಸ್ಥ ಭಟ್ಟೋರನು ಕದಂಬರಾಜ ಕಾಕುಸ್ಥವರ್ಮನೆಂದೇ ಸಾಮಾನ್ಯವಾಗಿ ಗ್ರಹಿಸಿ ವಿಚಾರವಿಮರ್ಶೆಗಳನ್ನು ನಡೆಸಿದ್ದಾರೆ. ಆದರೆ ಇದು ಸರಿಯಲ್ಲ. ಏಕೆಂದರೆ ಕಾಕುಸ್ಥವರ್ಮನಿಗೆ ಸಂಬಂಧಪಟ್ಟ ಯಾವುದೇ ತಾಮ್ರ ಮತ್ತು ಶಿಲಾಶಾಸನದಲ್ಲಿ ಕಾಕುಸ್ಥವರ್ಮನನ್ನು ಕಾಕುಸ್ಥಭಟ್ಟೋರನೆಂದು ಕರೆದಿಲ್ಲ, ಕಕುಸ್ಥ ಭಟ್ಟಾರ ಎಂದಾಗಲಿ, ಕಡೆಗೆ ಕಕುಸ್ಥನೆಂದಾಗಲಿ ಕರೆದಿಲ್ಲ. 'ಕದಂಬಪನ್' ಎಂಬ ವಿಶೇಷಣದ ಅರ್ಥ ಕದಂಬರಾಜ ಎಂದಾಗಬೇಕಾಗಿಲ್ಲ, ಕದಂಬಕುಲಕ್ಕೆ ಸಂಬಂಧಿಸಿದ ಎಂದು ಆಗಬಹುದಾಗಿದೆ.

ಈ ವಿಷಯದಲ್ಲಿ ತಾಳಗುಂದದ ಪ್ರಣವೇಶ್ವರ ಸ್ವಾಮಿ ದೇವಾಲಯದಲ್ಲಿ ದೊರೆತ ಒಂದು ಶಾಸನ (ಎಂ.ಎ.ಆರ್. ೧೯೧೧, ಪು. ೩೫) ಒಳ್ಳೆಯ ಬೆಳಕು ಚೆಲ್ಲುತ್ತದೆ. ಇದು ಭಟರಿ ಕಕುಸ್ಥನ ತಾಳಗುಂದ ಶಾಸನವೆಂದು ಪ್ರಸಿದ್ಧವಿದೆ. ಈ ಸಂಸ್ಕೃತಶಾಸನದಲ್ಲಿ ಸುಂಕಾಧಿಕಾರಿಯೂ ಹತ್ತು ಮಾಂಡಲಿಕರ ಮುಖ್ಯಸ್ಥನೂ ಆದ ಭಟಾರಿ ವಂಶದ ಕಾಕುಸ್ಥನೆಂಬವನ ಉಲ್ಲೇಖವಿದೆ (ಸಾಲು ೪-೭ : ಕಾಕುಸ್ಥೇನ ಭಟಾರಿ | ವಂಶತಿಳಕೇನ... | ತೇನಾನೇಕ ಮಹಾಧ್ವರೇಷು ದದತಾ ಸಮ್ಯಾನಿತ್ಯಜ್ಯಾವಿತಂ ವಿಪ್ರೈರಕ್ಷತತಣ್ದುಲೈರಹರಹ | ಸ್ತುಙ್ಗಮ್ ಶಿರೋ ವಿಭ್ರತಾ ದಶಮಣ್ಡಲಿಕೇಷು ನಾಯಕತ್ವಂ ಸಹ...) ಈ ಶಾಸನದ ಆರಂಭಕ್ಕೆ ತಲೆಯಲ್ಲಿ ಅರ್ಧಚಂದ್ರನನ್ನು ಗಂಗೆಯನ್ನು ಧರಿಸಿದ ಪಶುಪತಿಯ (ಅರ್ಥಾತ್ ಶಿವನ) ಸ್ತುತಿಯಿದೆ ಮತ್ತು ಮುಂದುವರಿದು, ಈ ಪಶುಪತಿಯ ಪ್ರಸಾದದಿಂದ ಜನಿಸಿದ, ದಾನದಿಂದ ಹಾಗೂ ಯುದ್ಧದಲ್ಲಿ ತೋರಿದ ಶೌರ್ಯದಿಂದ ದಕ್ಷಿಣ ದೇಶದಲ್ಲಿ ಪಶುಪತಿ ಎಂದು ಹೆಸರುವಾಸಿಯಾದ ಭಟಾರಿವಂಶದ ಕಕುಸ್ಥನೆಂಬವನನ್ನು ಹೆಸರಿಸಿ, ಈತನು ಕದಂಬಕುಲದಲ್ಲಿ ಹುಟ್ಟಿದ ಲಕ್ಷ್ಮಿಯ ಮಗನೆಂದು ಹೇಳಿದೆ. ಸಾಲು ೨ - ೫ ಜಯತಿ ಪಶುಪತಿಃ | ತದನು ಪಶುಪತೇಃಪ್ರಸಾದಜಾತೋ ಜಯತಿ ಪುನರ್ಜ್ಜನಿತೋ ಯಥೇಹ... | ಪಶುಪತಿರಿತಿ ಯಸ್ಯನಾಮ ದಾನೇ ದಿಶಿ ವಿದಿತಂ ಸಮರೇಚ ದಕ್ಷಿಣಸ್ಯಾಂ ಕಾಕುಸ್ಥ ಭಟಾರಿ | ವಂಶತಿಳಕೇನಾನನ್ಯ ರೂಪಶ್ರಿಯಾ ಮಾತ್ರಾ ಚಾಪಿ ಕದಮ್ಬವಂಶಭವಯಾ ಲಕ್ಷ್ಮ್ಯಾ ಚ...) ಆತನು ಅನೇಕ ಯಜ್ಞಗಳಲ್ಲಿ ಬ್ರಾಹ್ಮಣರಿಗೆ ಉದಾರವಾಗಿ ದಾನ ಮಾಡಿದನೆಂದೂ ಹೇಳಿದೆ. ಆರ್. ನರಸಿಂಹಾಚಾರ್ಯರು ಈ ಶಾಸನದಲ್ಲಿ ಉಕ್ತರಾದ ಪಶುಪತಿ ಮತ್ತು ಭಟಾರಿವಂಶದ ಕಕುಸ್ಥನು ಅಭಿನ್ನರೆಂದು ಹೇಳಿದ್ದಾರೆ. ಇದು ಸರಿ (ಇಬ್ಬರೂ ಭಿನ್ನರು ಎಂಬ ಕೃಷ್ಣರ ಅಭಿಪ್ರಾಯ ಸರಿಯಲ್ಲ).

ಹಲ್ಮಿಡಿ ಶಾಸನದ ಒಕ್ಕಣೆಯಲ್ಲಿ ಬರುವ ಮುಖ್ಯವ್ಯಕ್ತಿ ಪಶುಪತಿಗೆ ಸಂಬಂಧಪಟ್ಟ ವಿವರಗಳು ತಾಳಗುಂದದ ಭಟರಿ ಕಕುಸ್ಥನ ಶಾಸನದೊಂದಿಗೆ ಸರಿಯಾಗಿ ಹೊಂದಿಕೊಳ್ಳುತ್ತವೆ. ಅದು ಹೇಗೆಂದರೆ :

ಕದಂಬಪ ಕಕುಸ್ಥ ಭಟ್ಟೋರ (ಸಾಲು ೨-೩), ಭಟರಿ ಕುಲಾಮಲವ್ಯೋಮ ತಾರಾಧಿನಾಥನೂ ಆಳಪಗಣಪಶುಪತಿಯೂ ದಕ್ಷಿಣಾಪಥದಲ್ಲಿ ಬಹುಶತ ಹವನಗಳಲ್ಲಿ ಗೋದಾನವನ್ನು ಮತ್ತು ಬಹುಶತ ಆಹವಗಳಲ್ಲಿ ಶೌರ್ಯವನ್ನೂ ಮೆರೆದವನೂ ದಾನ ಪಶುಪತಿಯೆಂದು ಹೊಗಳಲ್ಪಟ್ಟವನೂ ಆದ ಪಶುಪತಿ (ಸಾಲು ೫-೮), ಬಟಾರಿ ಕುಲದವನಾದ ಅಳುಕದಂಬ (ಸಾಲು ೧೩) ಈ ಮೂವರೂ ಬೇರೆ ಬೇರೆ ಅಲ್ಲ, ಒಬ್ಬನೇ ವ್ಯಕ್ತಿ. ಈ ವ್ಯಕ್ತಿಯ ಹೆಸರು, ಕುಲ ಮತ್ತು ಸಾಧನೆ ತಾಳಗುಂದದ ಕಕುಸ್ಥ ಭಟಾರಿ ಎನ್ನಿಸಿದ ಪಶುಪತಿಗೆ ಪೂರ್ತಿ ಹೊಂದಿಕೊಳ್ಳುತ್ತದೆ. ಭಟಾರಿ ಕುಲದ ಬಗೆಗೆ ನಮಗೆ ಹೆಚ್ಚೇನೂ ತಿಳಿಯದು.

ತಾಳಗುಂದದ ಈ ಸಂಸ್ಕೃತ ಶಾಸನದಲ್ಲಿ ಈ ಪಶುಪತಿಯನ್ನು ಕದಂಬ ವಂಶಭವೆಯಾದ ಲಕ್ಷ್ಮಿಯ ಮಗನೆಂದು ಹೇಳಿದೆ. ಈಕೆ ಕದಂಬರಾಜ ಕಾಕುಸ್ಥವರ್ಮನ ಮಗಳಾಗಿರಬಹುದೆಂದು ವಿದ್ವಾಂಸರು ಭಾವಿಸಿ, ಆಕೆಯ ಮಗನಾದ ಈ ಪಶುಪತಿ ಕಾಕುಸ್ಥವರ್ಮನ ಮೊಮ್ಮಗನೆಂದು ತಿಳಿದಿದ್ದಾರೆ. ಹಾಗಾದರೆ ಈ ಎರಡೂ ಶಾಸನಗಳು ಕಾಕುಸ್ಥವರ್ಮನ ಆಳ್ವಿಕೆಯ ಕಾಲದ್ದಾಗಿರದೆ, ಇನ್ನೂ ಈಚೆಯ ಕಾಲದ್ದಾಗಿವೆಯೆಂದು ತಿಳಿಯುವ ಅನಿವಾರ್ಯವುಂಟಾಗುತ್ತದೆ. ಲಿಪಿ ಶಾಸ್ತ್ರದ ದೃಷ್ಟಿಯಿಂದ ೫ ನೆಯ ಶತಮಾನದ ಅಂತ್ಯ ಅಥವಾ ೬ ನೆಯ ಶತಮಾನದ ಆರಂಭ ಎಂದು ಇವನ್ನು ಗುರುತಿಸಲವಕಾಶವಿದೆ.

ಕೃಷ್ಣ ಅವರು ಪಶುಪತಿ ಕಾಕುಸ್ಥವರ್ಮನ ಅಳಿಯನೆಂದೂ ಆರ್.ಎಸ್. ಪಂಚಮುಖಿಯವರು ಕಾಕುಸ್ಥವರ್ಮನ ದೌಹಿತ್ರನೆಂದೂ ಅಭಿಪ್ರಾಯಪಟ್ಟಿದ್ದರೆ, ಗಾಯಿಯವರು ಮೂಲ ಕದಂಬ ವಂಶದ ಕೊನೆಯ ಅರಸು ಹರಿವರ್ಮನೆಂಬವನ ಮಗಳು ಲಕ್ಷ್ಮಿಯೆಂದು ಊಹಿಸಿ, ಅವಳ ಮಗ ಪಶುಪತಿಯೆಂದು ಇಂಗಿತಗೊಳಿಸುತ್ತಾರೆ. ಮುಂದುವರಿದು ಅವರು ಕಕುಸ್ಥಭಟ್ಟೋರನು ಈ ಹರಿವರ್ಮನ ಕೈಕೆಳಗೆ ಮಾಂಡಲಿಕನಾಗಿ ನರಿದಾವಿಳೆ ಪ್ರಾಂತಕ್ಕೆ ಅಧಿಪತಿಯಾಗಿದ್ದನೆಂದೂ (Governor) ಈ ಕಕುಸ್ಥಭಟ್ಟೋರನ ಕೈಕೆಳಗೆ ಮೃಗೇಶ ನಾಗರು ನರಿದಾವಿಳೆ ನಾಡಿನ ಸೈನ್ಯಾಧಿಕಾರಿಗಳಾಗಿದ್ದರೆಂದೂ ತಮ್ಮ ಊಹೆಯನ್ನು ಮುಂದುವರಿಸಿದ್ದಾರೆ. ಈ ಹರಿವರ್ಮನ ಕಾಲ ಕ್ರಿ.ಶ. ೬ ನೆಯ ಶತಮಾನದ ಪ್ರಾರಂಭ ಎನ್ನುವ ವಿಷಯದಲ್ಲಿ ವಿದ್ವಾಂಸರ ನಡುವೆ ಏಕಾಭಿಪ್ರಾಯವಿದೆ. ಈ ಪ್ರಾರಂಭ ಶತಮಾನದ ಪೂರ್ವಾರ್ಧ ಪೂರ್ತಿ ಚಾಚಿಕೊಳ್ಳುತ್ತದೆ. ಲಕ್ಷ್ಮಿ - ಪಶುಪತಿ ಇವರ ಸಂಬಂಧ ಹೇಗೇ ಇರಲಿ ಹಲ್ಮಿಡಿ ಶಾಸನದ ಮಟ್ಟಿಗೆ ಇದು ಗೌಣವಾದ್ದು. ಹಲ್ಮಿಡಿ ಶಾಸನ ಕದಂಬರ ದೊರೆ ಕಾಕುಸ್ಥವರ್ಮನ ಕಾಲದಲ್ಲಿ ಹುಟ್ಟಿಲ್ಲ, ಅವನಿಗೆ ಅದರ ಯಾವ ಸಂಬಂಧವೂ ಇಲ್ಲ ಎನ್ನುವುದೇ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ. ತಾಳಗುಂದದ ಬಾಗಿಲುವಾಡ ಶಾಸನ ಮತ್ತು ಹಲ್ಮಿಡಿ ಶಾಸನ ಏಕಕಾಲಕ್ಕೆ, ಏಕ ವ್ಯಕ್ತಿಗೆ ಸಂಬಂಧಿಸಿದ್ದು ಎಂಬುದು ಇಲ್ಲಿ ಮುಖ್ಯವಾದ ವಿಚಾರ. ವಸ್ತು ಮತ್ತು ಲಿಪಿ ಎರಡರ ದೃಷ್ಟಿಯಿಂದಲೂ ಇವು ೬ ನೆಯ ಶತಮಾನದ ಪೂರ್ವಾರ್ಧದವರೆಗೆ ಚಾಚಿಕೊಂಡರೂ ಮಂಗಲೇಶನ ಬಾದಾಮಿಶಾಸನದ ಕಾಲಕ್ಕಿಂತ (ಕ್ರಿ.ಶ. ೫೭೮) ಹಿಂದಿನ ಅವಧಿಗೆ ಸೇರಿದ್ದೆಂದು ತಿಳಿಯುವ ವಿಷಯದಲ್ಲಿ ಅಂತಹ ಭಿನ್ನಮತವಿಲ್ಲ. ಹೀಗಾಗಿ ಹಲ್ಮಿಡಿ ಶಾಸನ ಕನ್ನಡದ ಅತ್ಯಂತ ಪ್ರಾಚೀನ ಶಾಸನ ಎನ್ನುವ ಮಾತು ಇನ್ನು ದೃಢವಾಗಿ ನಿಲ್ಲದಂಥದೇ ಆಗಿದೆ. ಕೆಲವು ಅನಿಶ್ಚಿತ ತೇದಿಯ ಶಾಸನಗಳಿವೆಯಾದರೂ ಅವುಗಳ ಆನುಪೂರ್ವಿ ಇನ್ನು ಸಾಧಾರವಾಗಿ ದೃಢಪಡಬೇಕಾಗಿದೆ.

ಕಕುಸ್ಥ ಭಟ್ಟೋರನು ಕದಂಬರ ದೊರೆಯ ಮಾಂಡಲಿಕನಾಗಿ ನರಿದಾವಿಳೆ ಪ್ರಾಂತಕ್ಕೆ ಅಧಿಪತಿಯಾಗಿದ್ದಾಗ, ಮೃಗೇಶ ಮತ್ತು ನಾಗರು ಅವನ ಕೈಕೆಳಗೆ ರಾಜ್ಯದ ಅಧಿಕಾರಿಗಳೋ ಸೈನ್ಯಾಧಿಕಾರಿಗಳೋ ಆಗಿ ಇರುತ್ತಿದ್ದರೆಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಹರಿವರ್ಮನೆಂಬ ಕದಂಬ ರಾಜನ ಹಲಸಿ ಶಾಸನದಲ್ಲಿ ಸಿಂಹ ಸೇನಾಪತಿಯೆಂಬ ಒಬ್ಬನ ಮಗ ಮೃಗೇಶನು ಅಲ್ಲಿ ಜೈನ ದೇವಾಲಯಕ್ಕೆ ದತ್ತಿ ಬಿಟ್ಟ ವಿಷಯವಿದೆಯೆಂದೂ ಈ ಮೃಗೇಶನೂ ಹಲ್ಮಿಡಿ ಶಾಸನದ ಮೃಗೇಶನೂ ಒಬ್ಬನೇ ವ್ಯಕ್ತಿಯೆಂದು ಡಿ.ಸಿ. ಸರ್ಕಾರ್

(Successors of Satavahanas, p. 276) ಸೂಚಿಸಿದ್ದಾರೆ; ಆದರೆ ಇದಕ್ಕೆ ಆಧಾರವಿಲ್ಲವೆಂದು ಜಿ.ಎಸ್. ಗಾಯಿ ಇದನ್ನು ತಳ್ಳಿ ಹಾಕಿದ್ದಾರೆ.

ಅಳುಪ ದೇಶವು ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗವೆಂದೂ ಅದು ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಿಗೆ ಪಶ್ಚಿಮ ಪ್ರದೇಶವೆಂದೂ ಗುರುತಿಸಲಾಗಿದೆ. ಈ ಭಾಗವನ್ನು ಆಳುತ್ತಿದ್ದ ಆಳುವರ ನಾಯಕನು, ಎಂದರೆ ಪಶುಪತಿಯೆಂಬ ಕಕುಸ್ಥ ಭಟ್ಟೋರನು, ಕದಂಬರ ದೊರೆಯ ಪರವಾಗಿ ಅವನ ಅಪೇಕ್ಷೆಯಂತೆ ದಕ್ಷಿಣಾಪಥ, ಎಂದರೆ ವಿಂಧ್ಯಾದ್ರಿಗೆ ದಕ್ಷಿಣದಲ್ಲಿರುವ ಪ್ರದೇಶಗಳಲ್ಲಿ ಯುದ್ಧ ನಿರತನಾಗಿದ್ದನು, ಸೇನಾ ಮುಖ್ಯನಾಗಿ ಪಲ್ಲವರೊಡನೆ ಹೋರಾಡಿದನು ಎಂದು ಕಾಣಬರುತ್ತದೆ. ಪಲ್ಲವರಿಗೂ ಕದಂಬರಿಗೂ ಆಗಿಂದಾಗ್ಗೆ ಯುದ್ಧಗಳು ನಡೆಯುತ್ತಿದ್ದುವು.

ಹಲ್ಮಿಡಿ ಶಾಸನದಲ್ಲಿ ಅಂತಹ ಒಂದು ಯುದ್ಧದ ಪ್ರಸಕ್ತಿಯಿದೆ. ಕದಂಬರು ಅವರ ಮಿತ್ರರಾಜರಾದ ಸೇಂದ್ರಕರು (ಶಿವಮೊಗ್ಗೆಯ ಪಶ್ಚಿಮ ಭಾಗವನ್ನೂ ಉತ್ತರ ಕನ್ನಡ ಜಿಲ್ಲೆಗಳನ್ನೂ ಒಳಗೊಂಡ ಪ್ರದೇಶದ ಒಡೆಯರು) ಮತ್ತು ಬಾಣರು (ಕೋಲಾರ, ಅನಂತಪುರ ಮತ್ತು ಅವುಗಳ ಸುತ್ತುಮುತ್ತಿನ ಜಿಲ್ಲೆಗಳನ್ನು ಸೇರಿಸಿಕೊಂಡು ಪಾಲಾರ್ ನದಿಗೆ ಪೂರ್ವದಲ್ಲಿದ್ದ ಪ್ರದೇಶವನ್ನು ಆಳುತ್ತಿದ್ದವರು) ಹಾಗೂ ಅಳುಪರು ಒಂದು ಕಡೆ, ಪಲ್ಲವರು ಮತ್ತು ಅವರ ಮಿತ್ರರಾಜರಾದ ಕೇಕಯರು (ಚಿತ್ರದುರ್ಗ. ಶಿವಮೊಗ್ಗ ಹಾಸನ ಮತ್ತು ಕಾರವಾರ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿದ್ದ ಅರಸು ಮನೆತನದವರು) ಇನ್ನೊಂದು ಕಡೆ ಹೀಗೆ ಪಕ್ಷಗಳಾಗಿ ನಿಂತು ಹೋರಾಡಿದರೆಂಬ ವಿಚಾರ ಪ್ರಸ್ತುತ ಶಾಸನದಿಂದ ತಿಳಿಯುತ್ತದೆ.

ಹಲ್ಮಿಡಿ ಶಾಸನದಲ್ಲಿ ಪ್ರಸ್ತಾಪವಾಗಿರುವ ವಿಜಯ ಸಾಧ್ಯವಾದುದು ಪಶುಪತಿಯ ಪರವಾಗಿ ನಿಂತು ಹೋರಾಡಿದ ಸರಕೆಲ್ಲ ಭಟಾರಿಯ ಮಗ / ಮನೆಮಗ ವಿಜ ಅರಸನ (ವಿಜಾರಸನ) ಶೌರ್ಯ ಸಾಹಸಗಳ ಪ್ರಯತ್ನದಿಂದ. ಈತ ಭಟಾರಿ ವಂಶಕ್ಕೆ ಸೇರಿದವನು; ಪಶುಪತಿಗೆ ಆಪ್ತನಾಗಿದ್ದವನು, ಪಶುಪತಿಯ ದಾಯಾದಿಯಾಗಿದ್ದನೆಂಬುದೆಂದು ಎಂ.ಎಚ್. ಕೃಷ್ಣ ಊಹಿಸಿದ್ದಾರೆ. ಆದರೆ ಪಶುಪತಿಗೂ ವಿಜ ಅರಸನಿಗೂ ಇದ್ದ ಸಂಬಂಧವನ್ನು ತಿಳಿಯುವಲ್ಲಿ ಈ ಭಾಗದ ಶಾಸನ ಪಾಠವನ್ನು ಅರ್ಥ ಮಾಡುವುದು ಕಷ್ಟವಾದ್ದರಿಂದ ಹೀಗೇ ಎಂದು ಹೇಳುವುದಕ್ಕಾಗದು.

ಈ ಯುದ್ಧ ಎಲ್ಲಿ ನಡೆಯಿತು ಎಂಬುದು ಶಾಸನದಲ್ಲಿ ಉಕ್ತವಾಗಿಲ್ಲ. ಆದರೆ ನರಿದಾವಿಳೆ ನಾಡು ಎಂಬುದರೊಡನೆ ಸಮೀಕರಿಸಿರುವ ಇಂದಿನ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳನ್ನು ಒಳಕೊಂಡ ದೇವಳಿಗೆ ವಿಷಯದಲ್ಲಿ ನಡೆದಿರಬಹುದು. ಬೇಲೂರು ಶಾಸನಗಳಲ್ಲಿ ದೇವಳಿಗೆನಾಡು ಎಂದೂ ದೇವಣಿಗೆಯ ನಾಡು ಎಂದೂ ಉಲ್ಲೇಖಗೊಂಡಿರುವುದನ್ನು ಇಲ್ಲಿ ನೆನೆಯಬಹುದು. ಈ ಯುದ್ಧ ನಡೆದ ಸಮಯದಲ್ಲಿ ಪಲ್ಲವ ರಾಜ್ಯವನ್ನು ಇಮ್ಮಡಿ ಸಿಂಹವರ್ಮನೆಂಬ ಅರಸು (ಕ್ರಿ.ಶ. ೪೩೬ - ೫೮) ಆಳುತ್ತಿದ್ದನೆಂದೂ ಈತನೇ ಕಾಕುಸ್ಥವರ್ಮನಿಗೆ ಸಮಕಾಲೀನನೆಂದೂ ಎಂ.ಎಚ್. ಕೃಷ್ಣರು ಭಾವಿಸಿದ್ದರು. ಆದರೆ ಹಲ್ಮಿಡಿ ಶಾಸನದ ಕಾಲ ಇನ್ನೂ ಈಚೆಗೆ ಎಂಬುದಾಗಿ ಈಚೆಗೆ ತಿಳಿಯುತ್ತಿರುವುದರಿಂದ, ಈ ಪಲ್ಲವ ರಾಜನು ಯಾರೋ ಈಚಿನವನಾಗಿರಬೇಕು.

ವಿಜ ಅರಸನು ಕದಂಬರ ಪಕ್ಷದಲ್ಲಿ ನಿಂತು ದೇವಳಿಗೆ ನಾಡಿನಲ್ಲಿ ನಡೆದ ಕಾಳೆಗದಲ್ಲಿ ಪಲ್ಲವರನ್ನು ಗೆಲ್ಲಲಾಗಿ, ಆತನಿಗೆ ಆ ನಾಡಿನ ಅಧಿಕಾರಿಗಳಾಗಿದ್ದ ಮೃಗೇಶ ಮತ್ತು ನಾಗರು ಪ್ರಾಂತದ ಮಾಂಡಲಿಕನಾಗಿದ್ದ ಕಕುಸ್ಥ ಭಟಾರಿ ಪಶುಪತಿಯ ಅಪೇಕ್ಷೆಯಂತೆ ದೇವಳಿಗೆ ನಾಡಿಗೆ ಸೇರಿದ್ದ ಪಲ್ಮಡಿ ಮತ್ತು ಮೂಟಿವಳ್ಳಿ ಎಂಬ ಎರಡು ಗ್ರಾಮಗಳನ್ನು ಕತ್ತಿಯ ಕೊಡುಗೆಯಾಗಿ ದಾನ ಮಾಡಿದರು. ಇವುಗಳಲ್ಲಿ ಪಲ್ಮಡಿ ಎಂಬುದು ಬೇಲೂರಿಗೆ ಸು. ಏಳು ಮೈಲಿ ದೂರದಲ್ಲಿರುವ ಇಂದಿನ ಹಲ್ಮಿಡಿ (ಹನುಮಿಡಿ), ಈ ಹಲ್ಮಿಡಿಗೆ ಸು. ಮೂರು ಮೈಲಿ ದೂರದಲ್ಲಿರುವ ಇಂದಿನ ಮುಳವಳ್ಳಿಯೇ ಶಾಸನದ ಮೂಟಿವಳ್ಳಿ.

ಶಾಸನಕ್ಕೆ ಸಹಿ ಮಾಡಿದಂತೆ ತೋರುವ ಅಳುಕದಂಬನು ಆಳುಪ ಮತ್ತು ಕದಂಬ ಮನೆತನಗಳ ಸಂಬಂಧದಿಂದ ಹುಟ್ಟಿದವನಿರಬಹುದು; ಆತ ದಾನಪಶುಪತಿ ಎನ್ನಿಸಿದ ಕಕುಸ್ಥ ಭಟ್ಟೋರ ಪಶುಪತಿಯೆಂದು ತಿಳಿಯಲಾಗುತ್ತಿದೆ. ದತ್ತಿಯನ್ನು ನಿಜವಾಗಿ ನೀಡಿದವರು ಮೃಗೇಶ ನಾಗರೇ ಆದರೂ, ಸಾಂಪ್ರದಾಯಿಕವಾಗಿ ಮಾಂಡಲಿಕನ ಹೆಸರನ್ನು ದಾನ ಶಾಸನಕ್ಕೆ ಹಾಕಲಾಗಿದೆಯೆಂದು ಜಿ.ಎಸ್. ಗಾಯಿ ಅವರು ಭಾವಿಸಿದ್ದಾರೆ. ಇಂಥ ಉದಾಹರಣೆಗಳು ಶಾಸನಗಳಲ್ಲಿ ಉಂಟು ಎಂದು ಅವರು ತಿಳಿಸಿದ್ದಾರೆ.

## 122.3 ಸಾಮಾಜಿಕ ಸಾಂಸ್ಕೃತಿಕ ಅಂಶಗಳು

ಹಲ್ಮಿಡಿ ಶಾಸನದಲ್ಲಿ ಮೊದಲಿಗೆ ವಿಷ್ಣುವಿನ ಸ್ತುತಿಯಿದೆ. ಕದಂಬರು ಶೈವ ಪೂಜಕರಾಗಿದ್ದರೂ ವಿಷ್ಣು ಪಕ್ಷಪಾತಿಗಳು ಕೂಡ ಆಗಿದ್ದರೆಂಬುದನ್ನು ಹಾಗೂ ಆಗ್ಗೆ ವೈಷ್ಣವ ಪಂಥಕ್ಕೆ ತಕ್ಕ ಪ್ರಾಧಾನ್ಯವಿದ್ದುದನ್ನು ಇದು ಸೂಚಿಸುತ್ತದೆ. ಹೀಗೆಯೇ ಆ ಕಾಲದಲ್ಲಿ ಯಜ್ಞಯಾಗಾದಿ ಕ್ರಿಯೆಗಳು ವಿಶೇಷವಾಗಿ ಜರುಗುತ್ತಿದ್ದಿರಬೇಕು ಎನ್ನುವುದನ್ನು : ಬಹುಶತ ಹವನಾಹವದುಳ್ ಪಶುಪ್ರದಾನ ಶೌರ್ಯೋದ್ಯಮ ಭರಿತೋನ್ (ಚರಿತೋನ್)" ಎಂಬ ರೂಪಕೋಕ್ತಿ ಧ್ವನಿಸುತ್ತದೆ. ಪಶುಪ್ರದಾನ ಎಂಬ ಮಾತು ಯಜ್ಞಯಾಗಗಳಲ್ಲಿ ಅವಶ್ಯ ಕರ್ಮವಾಗಿದ್ದ ಪಶುಬಲಿ ಇರಬಹುದು ಅಥವಾ ಗೋದಾನ ಇರಬಹುದು. ವೀರ ಅಥವಾ ಧರ್ಮಕಾರ್ಯಗಳಿಗೆ ದಾನದತ್ತಿಗಳನ್ನು ಕೊಡುವುದು ಅರಸರಿಗೆ, ಅಧಿಕಾರಿಗಳಿಗೆ ಹೆಮ್ಮೆಯ ಮಾತಾಗಿತ್ತು. ಪಶುಪತಿಗೆ ಇದ್ದ 'ದಾನ ಪಶುಪತಿ' ಎಂಬ ಮಾತು ಅದನ್ನು ಸಮರ್ಥಿಸುತ್ತದೆ.

ಪಶುಪತಿ ಭಟಾರಿ ಕುಲಕ್ಕೆ ಸೇರಿದವನು ಎನ್ನುವುದನ್ನು ಶಾಸನದಿಂದ ತಿಳಿಯಬಹುದಾಗಿದೆ. ಭಟಾರಿ ಕುಲದ ಬಗೆಗೆ ನಮಗೆ ತಾಳಗುಂದದ ಪ್ರಣವೇಶ್ವರ ಸ್ವಾಮಿ ದೇವಾಲಯದ ಬಾಗಿಲುವಾಡ ಶಾಸನ (ಎಂ.ಎ.ಆರ್. ೧೯೧೧, ಪು.೩೩) ಮತ್ತು ಹಲ್ಮಿಡಿ ಶಾಸನ ಇವುಗಳಿಂದ ಕೊಂಚ ತಿಲಿಯುವುದಲ್ಲದೆ, ಆ ಕುಲದವರು ಅಳುಪರ ಪ್ರಾಂತದಲ್ಲಿ ಮಾಂಡಲಿಕರಾಗಿ ಆಳುತ್ತಿದ್ದರೆಂದು ತಿಳಿಯುವುದಲ್ಲದೆ ಹೆಚ್ಚಿನ ವಿವರಗಳೇನೂ ತಿಳಿಯುವುದಿಲ್ಲ. ಆದು ಅಳುಪ (ಆಳುಪ) ಮಾಂಡಲಿಕರ ಮನೆತನವೆಂಬ ಮಾತು 'ಬಟಾರಿ ಕುಲಾಮಲ ವ್ಯೋಮ ತಾರಾಧಿನಾಥನ್ ಅಳಪಗಣ ಪಶುಪತಿ' ಎಂಬ ಹಲ್ಮಿಡಿ ಶಾಸನದ ಮೂಲಕ ನಮಗೆ ವಿದಿತವಿದೆ.

ಹೀಗೆಯೇ ಈ ಶಾಸನದ ೯ ನೆಯ ಸಾಲಿನಲ್ಲಿ ಬರುವ 'ಕೆಲ್ಲ ಭಟರಿ', 'ಸರಕೆಲ್ಲ ಭಟರಿ' ಎಂಬ ಮಾತು ಬೇರೆ ಬೇರೆ ಶಾಸನಗಳಲ್ಲಿ ಬರುವ 'ಕೆಲ್ಲ' ಎಂಬ ಉತ್ತರ ಪದದ ನೆನಪು ತರುತ್ತದೆ. ಚಿತ್ರಸೇನ ಕೆಲ್ಲ, ಏಲಕೆಲ್ಲ, ಅರಕೆಲ್ಲ (ಎ. ಇಂಡಿಕ, ೩೭, ಪು.೩೪), ಮುರಸಕೆಲ್ಲ (ಮೈ. ಆ. ರಿ., ೧೯೧೫, ಪು. ೩೯), ಸೇವ್ಯಗೆಲ್ಲ ಹೀಗೆ ಉಲ್ಲೇಖಗಳಿವೆ. "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಲೂ ಕೆಲ್ಲ ಹೆಸರಿನ ಮನೆತನಗಳಿವೆಯೆಂದು ತಿಳಿದುಬರುತ್ತದೆ" ಎಂದು ಕಲಬುರ್ಗಿ ಅವರು ತಿಳಿಸಿದ್ದಾರೆ. ಅವರೇ ಹಲ್ಮಿಡಿ ಶಾಸನದಲ್ಲಿಯ 'ಪ್ರೇಮಾಲಯ ಸುತನ್' ಎಂಬ ಶಬ್ದದ ಬಗೆಗೆ ವಿವೇಚಿಸುತ್ತ, ಈ ಶಬ್ದವೂ ಕರ್ನಾಟಕದ ಬೇರೆ ಬೇರೆ ಶಾಸನಗಳಲ್ಲಿ ದೊರೆಯುವ 'ಮನೆಮಗನ್' (ಎಕ. ೩, ಟಿ. ಎನ್. ೯೧, ಕ್ರಿ.ಶ. ೯೨೧), ಕುಲಪುತ್ರನ್ / ಕುಲಮುದ್ದ / ಮನೆಮುದ್ದ (ಮೈ. ಆ. ರಿ. ೧೯, ೭, ಪು.೯೫; ಎಕ. ೮, ಸೊರಬ ೧೦) ಇಂತಹ ಶಬ್ದಗಳೂ ಅರಸನ 'ವೀರ ಅನುಯಾಯಿ' ಎಂಬ ಅರ್ಥ ಕೊಡುತ್ತವೆ ಎಂದು ಒಂದು ಬರಹದಲ್ಲಿ ವಿವರಿಸಿದ್ದಾರೆ (ಮಾರ್ಗ, ಸಂಪುಟ ೨, 'ಹಲ್ಮಿಡಿ ಶಾಸನದ ಪ್ರೇಮಾಲಯ ಸುತನ್', ಪು. ೩ - ೭). ಬಾಣನ ಹರ್ಷ ಚರಿತೆಯಲ್ಲಿ ಪ್ರಭಾಕರವರ್ಧನನು ತೀರಿಕೊಳ್ಳಲು ಪ್ರಾಣ ತ್ಯಾಗ ಮಾಡಿಕೊಂಡವರನ್ನು 'ಕುಲಪುತ್ರರು' ಎಂಬುದಾಗಿ ಕರೆದಿದೆಯೆಂದು ಹೇಳಿದೆ.

ಹಲ್ಮಿಡಿ ಶಾಸನದ ೧೨ ನೆಯ ಸಾಲಿನಲ್ಲಿ ಬರುವ 'ಬಾಳ್ಗಚ್ಚು' ಎಂಬ ಶಬ್ದ ಸಾಮಾಜಿಕ - ಸಾಂಸ್ಕೃತಿಕ ದೃಷ್ಟಿಯಿಂದ ಒಂದು ಗಮನಾರ್ಹವಾದ ಶಬ್ದವಾಗಿದೆ. ಈ ಶಬ್ದದ ಬಗೆಗೆ ಈಗಾಗಲೇ ಕೆಲವರು ತಮ್ಮ ಬರಹಗಳಲ್ಲಿ ವಿಚಾರ ಮಾಡಿದ್ದಾರೆ.

'ಬಾಳ್ಗಟ್ಟು' ಎಂಬ ಹೆಸರಿನಲ್ಲಿ ಕೊಡಲಾಗುತ್ತಿದ್ದ ದತ್ತಿ ವಿಶಿಷ್ಟವಾದುದು. ಯುದ್ಧದಲ್ಲಿ ಹೋರಾಡಿ ಗೆದ್ದು ಬಂದ ವೀರರಿಗೆ ಅಥವಾ ಮೃತನಾದ ವೀರನ ಕುಟುಂಬದವರಿಗೆ ಸಲ್ಲುತ್ತಿದ್ದ ಒಂದು ಮರ್ಯಾದೆಯೆಂಬುದಾಗಿ ಇದನ್ನು ಹೇಳಬಹುದು. ರಣದಲ್ಲಿ ಹೋರಾಡಿದ ವೀರನ ಕತ್ತಿಯನ್ನು ತೊಳೆಯುವ ಸಮಾರಂಭವನ್ನು ಈ ಪದ ಸೂಚಿಸುವಂತೆ ತೋರುತ್ತದೆ. ಏಕೆಂದರೆ ಈ ಪದದ ವಿಗ್ರಹವಾಕ್ಯ ಬಾಳನ್ + ಕಟ್ಟು ಎಂದರೆ 'ಕತ್ತಿಯನ್ನು ತೊಳೆ' ಎಂದಾಗುತ್ತದೆ (ಕ್ರಿಯಾ ಸಮಾಸ).

ಕರ್ನಾಟಕದ ಬೇರೆ ಕೆಲವು ಶಾಸನಗಳಲ್ಲಿಯೂ ಅಲ್ಲಲ್ಲಿ ಈ ಶಬ್ದ ಕಂಡು ಬಂದಿದೆ :

೧. ಎಱೆಯಪ್ಪರಸ .....

ಕೊ ......

ಮೆಚ್ಚಿ ಕೊಂಗಾಲ್ನಾಡೊ ......

(ಬಾಳ್ಗ) ಟ್ಟುಗೊಟ್ಟೊರ್ ಮಂಗಳ

[ಕ್ಯ. ೨೦, ಎಕ. vi, ೧೯೭೭, ರಿ. ೧೯೨೪ - ೧೧೮; ಸು. ೯ ನೆಯ ಶ.]

೨. .... ಬೂತುಗನುಂ ಮಣಲೆರಂ ತ | ನ್ನ ಮುನ್ದೆ ನಿನ್ದಿಱಿದುದರ್ಕ್ಕೆ ಮೆಚ್ಚಿ

ಆತುಕೂರ್ಪ್ಪನೆರಡುಂ ಬೆಳ್ವೊಲದ ಕಾಡಿಯೂರುಮಂ ಬಾಳ್ಗ | ಟ್ಟುಗೊಟ್ಟಂ

[ಮ. ೪೨, ಎಕ. vii, ೧೯೭೯; ೩ ಮಂ. ೪೧; ಕ್ರಿ.ಶ. ೯೪೯ - ೫೦]

೩. ....ಬಪರದೊಳ್ಕೆ | ಟ್ಟುಱುಬಿ ಸತ್ತೊ ಅವರ ಮಾಮ ತಿಮ್ಮುಮೆದೆಯ

ಮಾದವಾಡಿಯ ಬಾಳ್ಗಟ್ಟು ಕೊಟ್ಟೊ |

ಮಚ್ಚ | ಱಿಪರ | ರಸ | ಬಾಣ | ಗಾವುಣ್ಣ | ಬಾಳ್ಗಟ್ಟು | ಮರಿಯಾ | ದಿಯೊ | ಳೆ ಸ | ಲ್ವುದು ....

[ಮೈ ಆರಿ; ೧೯೩೧, ಪು. ೧೪೪ - ೪೬ ; ಸು. ೮೮೬]

ಹೆಚ್ಚಿನ ಪ್ರಯೋಗಗಳಿಗೆ ನೋಡಿ : ಆರ್. ಶೇಷಶಾಸ್ತ್ರಿ, 'ಕರ್ನಾಟಕದ ವೀರಗಲ್ಲುಗಳು', ಪು. ೨೧೮ - ೨೨೩. ಈ ವೀರ ಮರ್ಯಾದೆಯನ್ನು ಉಲ್ಲೇಖಿಸಿರುವ ಸಂಸ್ಕೃತ ಶಾಸನಗಳಲ್ಲಿ ಈ ಪದ 'ಖಡ್ಗಧಾರಾಂ ಭಸ್' ಎಂಬುದಾಗಿ ಕಂಡುಬರುತ್ತದೆ (ಎಕ., ೨, ೨೮೧; ೯೮೩). "ನಿಚ್ಚಲುಮಿರ್ಪಳ್ ಜಯಲಕ್ಷ್ಮಿ ಖಡ್ಗಜಲದೊಳ್ ಚಾಳುಕ್ಯ ಚಕ್ರೇಶನಾ" (ಶಾಸನ ಪದ್ಯಮಂಜರಿ, ೭೬) ಎಂಬ ಮಾತಿನ ಧ್ವನಿಯಲ್ಲಿಯೂ ಬಾಳ್ಗಟ್ಟುವಿನ ಅರ್ಥವುಂಟು.

ರನ್ನನ 'ಸಾಹಸಭೀಮವಿಜಯ'ದಲ್ಲಿ (= ಗದಾಯುದ್ಧದಲ್ಲಿ) ಭೀಮಸೇನನು ದುರ್ಯೋಧನನನ್ನು ಕೊಂದ ಮೇಲೆ ಕೃಷ್ಣ ಮುಂತಾದವರು ಅವನ ತೋಳನ್ನು ತೀರ್ಥಜಲದಿಂದ ತೊಳೆದು ಪೂಜಿಸಿದರೆಂದು ವರ್ಣಿತವಾಗಿರುವುದು ಈ 'ಬಾಳ್ಗಟ್ಟು' ವಿಧಿಯ ನೆನಪು ತರುವ ವಿಷಯವೇ ಆಗಿದೆ.

ಹರಿಯುಂ ಧರ್ಮಜನುಂ ಸುರೇಂದ್ರ ಸುತನುಂ ಮಾದ್ರೀಜರುಂ ಕೃಷ್ಣೆಯುಂ
ಪರಮಾನಂದದೆ ಕರ್ಚಿ ತೀರ್ಥಜಲದಿಂ ಕಸ್ತೂರಿಕಾ ಚಂದನಾ
ಗರು ಕಾಶ್ಮೀರಜ ಪಂಕದಿಂ ತೊಡೆದು ಕೇಯೂರಾದಿಯಂ ಭೂಷಣೋ
ತ್ಕರಮಂ ನೇರ್ಪಡೆ ಕಟ್ಟಿ ಪೂಜಿಸಿದರಾ ದೋರ್ದಂಡಮಂ ಭೀಮನಾ || (ಆಶ್ವಾಸ ೮ - ಪದ್ಯ ೭೫)

ಬಾಳ್ಗಚ್ಚು ವಿಧಿಯನ್ನು ಕತ್ತಿ ತೊಳೆಯುವ ಒಂದು ಸಮಾರಂಭವೆಂದು ಡಾ. ಫ್ಲೀಟ್ ಅವರು ಸರಿಯಾಗಿಯೇ ಗ್ರಹಿಸಿದ್ದಾರೆಂದು ತಿಳಿಸುತ್ತ (ಎಇ. vi, ಪು. ೫೫; ii ೨೩-೨೪), ಟಿ.ಎ. ಗೋಪೀನಾಥರಾವ್ ಅವರು ಪ್ರಾಚೀನ ದ್ರಾವಿಡ ಪ್ರಾಂತಗಳಲ್ಲಿ ಈ ಹೆಸರಿನ ಪದ್ಧತಿಯೊಂದು ಪ್ರಚಲಿತವಿತ್ತೆಂದು ತಮ್ಮ ಲೇಖನವೊಂದರಲ್ಲಿ ತಿಳಿಸಿದ್ದಾರೆ (A Note on the word Balgalchchu, Indian Antiquary, Vol. 40, 1911, p.89). ಅದರ ಸ್ವಲ್ಪ ಭಾಗವನ್ನು ಇಲ್ಲಿ ಉದ್ಧರಿಸಬಹುದಾಗಿದೆ.

"ತೊಲ್‌ಕಾಪ್ಪಿಯಂ ಪೊರಳದಿಗಾರದ ಪುಜತ್ತಿಣೈಯಿಯಲ್‌ನ ೭೮ ನೆಯ ಸೂತ್ರದಲ್ಲಿ ಈ ಸಮಾರಂಭವನ್ನು 'ವಾಳ್ ಮಣ್ಣುದಲ್' (ಕತ್ತಿ ತೊಳೆಯುವುದು) ಎಂದು ಹೇಳಿದೆ. ಇದು ಜಯಶಾಲಿಯಿಂದ ಮಾತ್ರ - ಅವನು ತಾನೇ ಮುತ್ತಿಗೆ ಹಾಕಿದವನಿರಬಹುದು ಇಲ್ಲವೆ ಇನ್ನೊಬ್ಬನ ಮುತ್ತಿಗೆಗೆ ಗುರಿಯಾದವನಿರಬಹುದು - ನಡೆಯತಕ್ಕುದಾಗಿದೆ. ಸ್ವತಃ ಮುತ್ತಿದವನು ಆಚರಿಸಿದರೆ, ಅದು 'ಬಹಿರ್‌ವಾಣ್ ಮಂಗಲಂ'. ತೀರ ವಿರಳವಾದ ಸಂದರ್ಭಗಳಲ್ಲಿ, ಇಬ್ಬರೂ ಬಾಳ್ಗಚ್ಚು ಸಮಾರಂಭ ಜರುಗಿಸಲು ಅವಕಾಶ ಸಿಕ್ಕಬಹುದು. ಇಬ್ಬರು ಪ್ರಸಿದ್ಧ ರಾಜರ ಸೈನ್ಯಗಳು ಎದುರಾದಾಗ, ಇಬ್ಬರಲ್ಲಿ ಒಬ್ಬನು ಇನ್ನೊಬ್ಬನನ್ನು ಸೋಲಿಸಿದಾಗ, ಜಯಶಾಲಿಯಾದ ರಾಜನ ರಕ್ತಸಿಕ್ತವಾದ ಕತ್ತಿಯನ್ನು ದುರ್ಗಾದೇವಿಯ (ತಮಿಳಿನಲ್ಲಿ ಈಕೆ ಕೊಜ್ಜವೈ ಎಂಬುದಾಗಿ ಕರೆಯಲ್ಪಡುವಳು) ವಿಗ್ರಹದ ಮೇಲಿಟ್ಟು ತೊಳೆಯಲಾಗುವುದು. ದೇವಿಗೂ ಈ ಯುದ್ಧದ ಸಲಕರಣೆಗೂ ಹೂವು ಶ್ರೀಗಂಧ ಧೂಪಗಳ ಸೇವೆಯಾಗುವುದು. ದೇವಿಯ ವಿಗ್ರಹವನ್ನು ತುಪ್ಪದಿಂದ ಲೇಪಿಸಿ ಆ ಸಂದರ್ಭ ವಿಶೇಷದಲ್ಲಿ ಹಬ್ಬವನ್ನು ಮಾಡಲಾಗುವುದು. ಆ ಕತ್ತಿಯನ್ನು ಬೀದಿಯಲ್ಲಿ ಮೆರೆವಣಿಗೆ ಮಾಡಿಕೊಂಡು ತರುಣಿಯರ ಹಾಡು, ವೀಣಾವಾದನಗಳ ನಡುವೆ ಹೊಳೆಯವರೆಗೆ ಒಯ್ಯಲಾಗುವುದು." (ನೋಡಿ : ಬಾಳ್ಗಚ್ಚು ಒಂದು ಟಿಪ್ಪಣಿ, 'ಶಾಸ್ತ್ರೀಯ - ೧', ಸಪ್ನ ಬುಕ್ ಹೌಸ್, ಬೆಂಗಳೂರು - ೯, ೧೯೯೯, ಪು. ೧೦ - ೧೧).

ಹಲ್ಮಿಡಿ ಶಾಸನದಲ್ಲಿ ವಿಜ ಅರಸನು ಕೇಕಯ ಪಲ್ಲವರೊಂದಿಗೆ ಹೋರಾಡಿ ಜಯಶಾಲಿಯಾದ ಮೇಲೆ ಅವನಿಗೆ ನರಿದಾವಿಳೆ ನಾಡಿನ ಅಧಿಕಾರಿಗಳಾದ ಮೃಗೇಶ ಮತ್ತು ನಾಗರೆಂಬವರು 'ಬಾಳ್ಗಚ್ಚು' ಸಮಾರಂಭವನ್ನು ಏರ್ಪಡಿಸಿ ಮರ್ಯಾದೆ ಮಾಡಿ, ಉಂಬಳಿಯಾಗಿ ಹಲ್ಮಿಡಿ ಮತ್ತು ಮೂಳಿವಳ್ಳಿ ಗ್ರಾಮಗಳನ್ನು ನೀಡಿದ ವಿಚಾರವನ್ನು ಹೇಳಿದೆ.

ಹಲ್ಮಿಡಿ ಶಾಸನದ ಇನ್ನೊಂದು ಗಮನಾರ್ಹ ಶಬ್ದವೆಂದರೆ 'ಸಟ್ಟಂಗದರ್' ಎಂಬ ಶಬ್ದ. ಇದರ ಪ್ರಕೃತಿ ರೂಪ 'ಸಟ್ಟಂಗ'. ಈ ಶಬ್ದದ ಅರ್ಥ ವಿಚಾರ ವಿದ್ವಾಂಸರ ನಡುವೆ ಭಿನ್ನಾಭಿಪ್ರಾಯಗಳಿಗೆ ಅವಕಾಶ ಮಾಡಿದೆ. ಎಂ. ಚಿದಾನಂದ ಮೂರ್ತಿಗಳು ಮೊದಲು ಈ ಶಬ್ದವನ್ನೆತ್ತಿಕೊಂಡು ಚರ್ಚಿಸಿದರು (ಪ್ರಬುದ್ಧ ಕರ್ನಾಟಕ, ೪೭-೪, ೧೯೬೬, ಪು. ೧೨೪-೨೭); ಅವರ ಪ್ರಬಂಧ ಸಂಕಲನ 'ಸಂಶೋಧನ ತರಂಗ'- ಭಾಗ ೨ರ (೧೯೭೦) ಮುನ್ನುಡಿಯಲ್ಲಿ (ಪು. ix) ಡಿ.ಎಲ್. ನರಸಿಂಹಾಚಾರ್ಯರು ಶಬ್ದಾರ್ಥ ವಿಚಾರದ ಸಾಧ್ಯತೆಗಳನ್ನು ಪ್ರಸ್ತಾಪಿಸಿದರು. ಬಳಿಕ ಎಸ್. ನಾಗರಾಜು (ಪ್ರ.ಕ. ೫೧-೧, ೧೯೬೯), ಕೆ.ವಿ. ರಮೇಶ್ (ಪ್ರ.ಕ. ೫೧-೩, ೧೯೬೯), ಕೆ. ಶಿವರಾಮ ಐತಾಳ (ಪ್ರ.ಕ. ೫೦-೪, ೧೯೬೯) ಮತ್ತು ಎಂ. ಹನುಮಂತರಾವ್ (ಪ್ರ.ಕ. ೫೨-೩, ೧೯೭೦) ಹೀಗೆ ಇನ್ನು ಕೆಲವರು ಚರ್ಚೆ ನಡೆಸಿದರು. ಇಷ್ಟು ಚರ್ಚೆಗೆ ಕಾರಣ ಎಂದರೆ ಹಲ್ಮಿಡಿ ಶಾಸನದಲ್ಲಿ ಈ ಶಬ್ದ ಕಾಣಿಸಿಕೊಂಡಿರುವುದು ಹಾಗೂ ಕನ್ನಡ ಸಾಹಿತ್ಯದಲ್ಲಿ ಇದರ ಪ್ರಯೋಗ ಇಲ್ಲಿ ಒಂದೇ ಕಡೆ ಕಾಣಿಸುತ್ತಿರುವುದು.

ಹಲ್ಮಿಡಿ ಶಾಸನವನ್ನು ಕಂಡುಹಿಡಿದು ಪ್ರಕಟಿಸಿದ ಎಂ.ಎಚ್. ಕೃಷ್ಣ ಅವರು 'ಸಟ್ಟಜ್ಗ' ಶಬ್ದವನ್ನು ವಿಜ ಅರಸನಿಗೆ ವಿಶೇಷಣವನ್ನಾಗಿ ಮಾಡಿ, ಆತನು ಸಟ್ಟಟ್ಗವೆಂಬ ಹೆಸರಿನ ಊರಿನವನೆಂದೂ ಆ ಊರು ಈಗಿನ ಶಿವಮೊಗ್ಗ ಜಿಲ್ಲೆಯ ಉತ್ತರ ದಿಕ್ಕಿನಲ್ಲಿರುವ ಸಲ್ವಂಗ / ಸಳವಂಗ ಎಂಬ ಗ್ರಾಮವೆಂದೂ (ಮೈ. ಆರಿ. ೧೯೩೬, ಪು.೮೧) ಹೇಳಿದ್ದಾರೆ; ಆದರೆ ಈ ಊರಿನ ಈಗಿನ ಹೆಸರು ಸವ್ವಂಗ.

ಎಂ. ಚಿದಾನಂದಮೂರ್ತಿಯವರು ಈ ವಿಷಯವನ್ನು ಚರ್ಚಿಸಿ, ಸಬ್ಬಂಗ ಶಬ್ದವು 'ಷಡ್ಭಾಗ'ದ ತದ್ಭವವಿರಬಹುದೆಂದು ಅಭಿಪ್ರಾಯಪಟ್ಟು (ಷಡ್ಭಾಗ > ಸಬ್ಬಗ್ಗ > ಸಬ್ಬಂಗ), 'ರಾಜನಿಗೆ ಸಂದಾಯವಾಗಬೇಕಾದ ಆದಾಯದ ಆರನೆಯ ಭಾಗ' ವೆಂದು ಅದಕ್ಕೆ ಅರ್ಥ ಹೇಳಿ, ಮೃಗೇಶ ಮತ್ತು ನಾಗರು ಕಾಕುಸ್ಥ ವರ್ಮನ ಪ್ರತಿನಿಧಿಗಳಾಗಿ ಹಾಗೆ ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರಿಗಳಾಗಿದ್ದರೆಂದು ಊಹಿಸಿದ್ದಾರೆ ; ಈ ಶಬ್ದವನ್ನು ಮೃಗೇಶ ನಾಗರಿಗೆ ಅನ್ವಯಿಸಿ ಅರ್ಥ ಮಾಡಿದ್ದಾರೆ (ಸಂಶೋಧನ ತರಂಗ ಭಾಗ ೨, ಪು. ೩೪-೩೭).

ಕೆ. ಶಿವರಾಮ ಐತಾಳರು ಷಡ್ಪಾಂಗ > ಸಬ್ಬಂಗ ಎಂದು ತಿಳಿದು. ಪಾಂಗ ಎನ್ನುವ ಮಾತಿಗೆ ಹಲ್ಮಿಡಿ ಶಾಸನದ ಕಾಲದಲ್ಲಿ ತೆರಿಗೆಯೆಂಬ ಅರ್ಥ ರೂಢಿಯಲ್ಲಿದ್ದಿರಬೇಕು ಎಂದು ಊಹಿಸಿ, ನಿಷ್ಪತ್ತಿಯನ್ನು ಬೇರೆ ರೀತಿ ಸಲಹೆ ಮಾಡಿದ್ದಾರೆ. ತೆರಿಗೆಯೆಂಬರ್ಥದ ಪಾಂಗ / ಪಂಗ ದೇಶ್ಯ ಶಬ್ದವಾಗಿರುವುದು ಸಾಧ್ಯವೆಂದು ಅವರು ತರ್ಕಿಸಿ, ಷಡ್ಭಾಗ = ಷಡ್ಪಂಗ / ಷಡ್ಪಾಂಗ > ಸಬ್ಬಂಗ ಎಂದಿದ್ದಾರೆ.

ಎಸ್. ನಾಗರಾಜು ಅವರು ಸಬ್ಬಂಗದರ್ ಎಂದರೆ ದಳಪತಿಗಳು ಎಂಬ ಅರ್ಥವನ್ನು ಸಲಹೆ ಮಾಡುತ್ತಾರೆ. 'ಸಬ್ಬಂಗ' ಶಬ್ದ ಪರ್ಷಿಯನ್ ಭಾಷೆಯ ಸರ್ಹಂಗ್ ಅಥವಾ ಅದರ ಸಂಸ್ಕೃತ ರೂಪ ಶರಭಂಗ / ಸರಭಂಗದಿಂದ ಬಂದ ಕನ್ನಡ ಶಬ್ದವೆಂದು ಅವರು ಭಾವಿಸಿದ್ದಾರೆ. ಸರ್ಹಂಗ್ ಎಂದರೆ ದಳಪತಿ. ಸೈನ್ಯದ ತುಕಡಿಯೊಂದರ ನಾಯಕ ಎಂದಾಗುವುದೆಂದೂ ಮೃಗೇಶ ಮತ್ತು ನಾಗರನ್ನು 'ಭಟಹರ್' ಎಂದೂ ಹೇಳಿದೆ. ಈ ಭಟಹರ್ ಮತ್ತು ಸಬ್ಬಂಗದರ್ ಶಬ್ದಗಳ ಆಶಯ ಸೈನ್ಯದ ಅಧಿಕಾರಿಗಳು, ದಳಪತಿಗಳು ಎಂಬುದು ಅವರ ಗ್ರಹಿಕೆ (ಪ್ರಬುದ್ಧ ಕರ್ಣಾಟಕ, ೫೧-೧, ೧೯೬೯, ಪು. ೮೯-೯೨).

ಕೆ.ವಿ. ರಮೇಶ್ ಅವರು ಮೂರ್ತಿ ಮತ್ತು ನಾಗರಾಜು ಅವರ ಗ್ರಹಿಕೆಗಳನ್ನು ಅಸಮರ್ಪಕವೆಂದು ನಿರಾಕರಿಸಿ ಎಂ.ಎಚ್. ಕೃಷ್ಣ ಅವರು ಹೇಳುವಂತೆ ಅದು ಒಂದು ಗ್ರಾಮನಾಮವೇ ಆಗಿದೆಯೆಂದೂ ವಿಜಾರಸರು ಆ ಗ್ರಾಮದವರಾಗಿದ್ದರೆಂದೂ ಮತ್ತೆ ಪ್ರತಿಪಾದಿಸಿದ್ದಾರೆ. ಇಂದಿನ ಸವಲಂಗ ಗ್ರಾಮದ ಹಳೆಯ ಹೆಸರು ಸಬ್ಬಂಗವೆಂದು ಅವರು ದೃಢವಾಗಿ ಅದನ್ನು ಎತ್ತಿ ಹಿಡಿದಿದ್ದಾರೆ. (ಪ್ರಬುದ್ಧ ಕರ್ಣಾಟಕ, ೫೧-೩, ೧೯೬೯, ಪು. ೨೩-೨೭) ಹಾಗಿದ್ದ ಪಕ್ಷದಲ್ಲಿ, ಸ್ಥಳನಾಮ ಸವ್ವಂಗ ಆಗುತ್ತಿರಲಿಲ್ಲ, ಸರ್ಬಂಗ > ಸಬ್ಬಂಗ ಆಗಬೇಕಾಗಿತ್ತು ಎಂದು ಮೂರ್ತಿಗಳು ತಳ್ಳಿ ಹಾಕುತ್ತಾರೆ (ಸಂಶೋಧನ ತರಂಗ, ಭಾಗ - ೨, ಪು.೩೭). ಈಚೆಗೆ ಈ ವಿಷಯವನ್ನು ಪುನರ್ವಿಮರ್ಶಿಸುತ್ತ ಜಿ.ಎಸ್. ಗಾಯಿಯವರು ತಮ್ಮ 'ವಜ್ರದೀಪ್ತಿ'ಯ ಲೇಖನದಲ್ಲಿ (ಪು. ೧೧ - ೧೨) ಎಸ್. ನಾಗರಾಜು ಅವರ ಗ್ರಹಿಕೆಯನ್ನು ಪೂರ್ಣವಾಗಿ ಎತ್ತಿ ಹಿಡಿದು, "ಸಂಸ್ಕೃತ 'ಶರಭಂಗ' ಶಬ್ದದ ಅರ್ಥ ಸೈನ್ಯಾಧಿಕಾರಿ (Military Governor or Leader of the forces) ಎಂದಿದ್ದು ; ಹಲ್ಮಿಡಿ ಶಾಸನದ ಮೃಗೇಶ ನಾಗೇಂದ್ರರಿಗೆ ಸರಿಯಾದ ರೀತಿಯಲ್ಲಿ ಅನ್ವಯಿಸುತ್ತದೆ. ನಮಗೆ ತಿಳಿದಂತೆ ಇವರು ನರಿದಾವಿಳೆ ನಾಡಿನಲ್ಲಿ ಭಟಹರು ಎಂದರೆ ಸೈನ್ಯಾಧಿಕಾರಿಗಳೇ ಆಗಿದ್ದರು" ಎಂಬುದಾಗಿ ವಿವರಿಸಿದ್ದಾರೆ.

ಎಂ. ಹನುಮಂತರಾವ್ ಅವರು ಕೆ.ವಿ. ರಮೇಶ್ ಅವರ ವಾದ ಸರಣಿಯನ್ನು ಹೀಗೆ ಮೊದಲು ಸಂಗ್ರಹಿಸಿದ್ದಾರೆ.

"ಶಾಸನಗಳಲ್ಲಿ, ಅದರಲ್ಲೂ ವೀರಗಲ್ಲುಗಳಲ್ಲಿ ಜನಸಾಮಾನ್ಯರಲ್ಲಿ ಬಳಕೆಯಲ್ಲಿದ್ದ ಪದಗಳನ್ನೇ ಉಪಯೋಗಿಸುವುದು ಸಾಮಾನ್ಯವಾದ್ದರಿಂದ, 'ಸಲ್ಬಾಜ್ಗ'ವು ತೆರಿಗೆಯಂಥ ಜನಸಾಮಾನ್ಯರ ಜೀವನದ ಮೇಲೆ ಪರಿಣಾಮ ಬೀರುವಂಥ ಅರ್ಥವನ್ನು ಸೂಚಿಸುವುದಾಗಿದ್ದಲ್ಲಿ ಮತ್ತು ಇದೇ ರೀತಿ 'ದಳಪತಿಗಳು' ಎಂಬ ಅರ್ಥದಲ್ಲಿ ಆ ಪದವನ್ನುಪಯೋಗಿಸಿದ್ದರೆ ಅದನ್ನು ಇದೊಂದು ಕಡೆ ಮಾತ್ರ ಪರ್ಷಿಯನ್ ಭಾಷೆಯಿಂದ ಆಮದು ಮಾಡಿಕೊಂಡ 'ಸರ್ಹಂಗ್' ಪದದ ತದ್ಭವ ರೂಪವೆನ್ನುವುದು ಸರಿಯಲ್ಲ. ಆದ್ದರಿಂದ ಬೇರೆಲ್ಲೂ ಕಾಣದಿರುವ ಈ ಪದವು ಗ್ರಾಮದ ಹೆಸರೇ ಆಗಿರಬೇಕು."

ಆ ಬಳಿಕ ಅವರು ಹಳೆಯ ಸಾಹಿತ್ಯದಲ್ಲಿ ಕಂಡುಬಂದಿರುವ ಸವಂಗ - ಸವಗ ಶಬ್ದಗಳಿಗೆ ಸಬ್ಬಿಜ್ಜವನ್ನು ಪೂರ್ವರೂಪವಾಗಿ ಗ್ರಹಿಸಿ, 'ಸಬ್ಬಿಜ್ಜದರ್', ಎಂದರೆ "ತಮ್ಮ ಸೈನ್ಯಕ್ಕೆ ರಕ್ಷಣೆಯನ್ನೊದಗಿಸಲು ಮುಂದೆ ನುಗ್ಗಿ ಹೋರಾಡುವ ಮುಂಚೂಣಿಯ ಪಡೆಯವರು" ಎಂದಿರಬಹುದೆಂದು ಊಹಿಸಿದ್ದಾರೆ. (ಪ್ರಬುದ್ಧ ಕರ್ಣಾಟಕ, ೫೨-೩, ೧೯೭೦, ಪು. ೧೩೯-೧೪೪). ಆದರೆ ಹಳೆಯ ಸಾಹಿತ್ಯದಲ್ಲಿ ಬರುವ ಈ ಶಬ್ದದ ಅರ್ಥ 'ಮೈಗೆ ತೊಡುವ ಒಳ ಅಂಗಿ', 'ಯುದ್ಧ ಸಮಯದಲ್ಲಿ ತೊಡುವ ರಕ್ಷಣಾಕವಚ' ಎಂದಾಗುವುದಲ್ಲದೆ, ಬೇರೆ ಅರ್ಥ ಶಕ್ಯವಿಲ್ಲ.

ಈ ವಿಷಯದಲ್ಲಿ ನಿರ್ಣಯ ಕಷ್ಟವೇ. ನಾಗರಾಜು ಅವರೂ ಗಾಯಿಯವರೂ ಹೇಳುವುದು ನಿಜವಾಗಿದ್ದರೆ ಶಬ್ದ 'ಭಟಹರ್' ಇದ್ದಂತೆ 'ಸಬ್ಬಂಗರ್' ಎಂದಷ್ಟೇ ಇದ್ದರೂ ಸಾಕಾಗುತ್ತಿತ್ತು. ಕೃಷ್ಣ ಮತ್ತು ರಮೇಶ್ ಭಾವಿಸುವಂತೆ 'ಸಬ್ಬಂಗದರ್' ಎಂದ ರೂಪಕ್ಕೆ ತಕ್ಕಂತೆ 'ಸಬ್ಬಂಗದವರು' ಎಂಬ ಆಶಯಕ್ಕೆ ಅನುಗುಣವಾಗಿ ಸವಳಂಗ ಎಂಬ ಸ್ಥಳದ ನಿವಾಸಿಗಳೇ ಆಗಿರಬಹುದು, ಮೃಗೇಶ ನಾಗರು. ವ / ಬಗಳ ವಿನಿಮಯ ಭಾಷಿಕವಾಗಿ ಶಕ್ಯ.

'ಕುಱುಮ್ಬಿಡಿ' ಶಬ್ದದ ಅರ್ಥ ಸಹ ಅಸ್ಪಷ್ಟವಾದ್ದು. ಇದು ತೆರಿಗೆ ವಿನಾಯಿತಿಯನ್ನು ಹೇಳುವ ಮಾತು ಎನ್ನುವುದು ಮಾತ್ರ ಸ್ಪಷ್ಟ. ಪಲ್ಮಡಿ ಗ್ರಾಮ ವಾಸಿಗಳು ತೆರಬೇಕಾಗಿದ್ದ ಯಾವುದೋ ತೆರಿಗೆಗೆ ವಿನಾಯಿತಿಯನ್ನು ತೋರಿಸಿದ್ದನ್ನು ಇಲ್ಲಿ ಹೇಳಿದ್ದು, ಕುಱು > ಸಣ್ಣ ಎಂಬರ್ಥದಲ್ಲಿ 'ಕುಱುದೆಜೆ' ಎಂದೋ ಕುರುಬರಿಗೆ ಕೊಡುತ್ತಿದ್ದ ರಿಯಾಯಿತಿಯನ್ನೋ (ಕುಱಿದೆಜೆ / ಕುಱುಂಬದೆ ?). ಇಲ್ಲಿ ಆ ಮಾತು ಹೇಳುತ್ತಿರಬಹುದು. ಆದರೆ ಜಿ.ಎಸ್. ಗಾಯಿ ಅವರು ಮೃಗೇಶ ನಾಗರು ವಿಜ ಅರಸರು ದಾನವಾಗಿ ಪಡೆದ ಪಲ್ಮಡಿ ಗ್ರಾಮಕ್ಕೆ ಕುಱುಂಬಿಡಿಯನ್ನು ಬಿಟ್ಟರು ಎಂದು ಅರ್ಥ ಹೇಳುತ್ತ, ಈ ಶಬ್ದ 'ಕುಟುಂಬ ವೃತ್ತಿ' ಇಲ್ಲವೆ 'ಕುತ್ತುಂಬಿತ್ತಿ' (Family Fief) ಎಂದು ದಾನಪಡೆದವನು ವಂಶಪಾರಂಪರ್ಯವಾಗಿ ಉಪಭೋಗಿಸುವಂತೆ ಕೊಟ್ಟ ದಾನವನ್ನು ಹೇಳುವಂತೆ ತೋರುವುದೆಂದು ಊಹಿಸಿದ್ದಾರೆ.

ಮುಂದೆ ನಾವು ಗಮನಿಸಬೇಕಾದ ಶಬ್ದವೆಂದರೆ 'ಪತ್ತೊನ್ದಿ'. ಇದು ಅಚ್ಚ ಕನ್ನಡ ಶಬ್ದ; ಇದರ ಸಂಸ್ಕೃತ ರೂಪ ದಶಬಂಧ, ತದ್ಭವ ರೂಪ ದಸವಂದ. ಇಲ್ಲಿ ಈ ಶಬ್ದವು ಧಾನ್ಯ ರೂಪವಾದ ತೆರಿಗೆಯನ್ನು ಮೊದಮೊದಲು ಸೂಚಿಸುತ್ತಿದ್ದು, ಕ್ರಮೇಣ ೧/೧೦ ಎಂಬ ಸಾಮಾನ್ಯವಾದ ಅರ್ಥವನ್ನು ಪಡೆದುಕೊಂಡಂತೆ ತೋರುವುದು ಎಂಬ ಅಭಿಪ್ರಾಯವಿದೆ. ಪ್ರಾಚೀನ ಭಾರತದಲ್ಲಿ ವ್ಯಾಪಾರ ಸಾಮಗ್ರಿಗಳ ೧/೧೦ ಭಾಗವನ್ನೂ, ಹೊಲದಲ್ಲಿ ಬೆಳೆದ ೧/೬ ಭಾಗವನ್ನೂ ರಾಜನಿಗೆ ಸಲ್ಲಿಸುವ ಒಂದು ಏರ್ಪಾಡಿದ್ದಿತೆಂದೂ ಕರ್ನಾಟಕದಲ್ಲಿಯೂ ಇಂತಹ ಒಂದು ಸಂಪ್ರದಾಯ ಇದ್ದಿರಬಹುದೆಂದೂ ಊಹಿಸಲಾಗಿದೆ. ವ್ಯಾಪಾರ ಸಾಮಗ್ರಿಗಳ ಮೇಲೆ ಹಾಕುತ್ತಿದ್ದ ಈ ಸುಂಕದ ದಸವಂದವನ್ನು ಸುಂಕದ ಅಧಿಕಾರಿಗಳು ದೇವಸ್ಥಾನಗಳಿಗೆ ಬಿಟ್ಟ ವಿಷಯ ಶಾಸನಗಳಲ್ಲಿ ಬಂದಿದೆ. (ವಿವರಗಳಿಗೆ ನೋಡಿ: 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಪು. ೩೭೦). ಪ್ರಸ್ತುತ ಶಾಸನದಲ್ಲಿ ಗದ್ದೆಯ ಉತ್ಪನ್ನದಲ್ಲಿ ೧/೧೦ ಭಾಗವನ್ನು (ಸಾಮಾನ್ಯಾರ್ಥದಲ್ಲಿ) ರಾಜನಿಗೆ ಸಲ್ಲಿಸದಿರುವ ವಿನಾಯಿತಿಯನ್ನು ಬ್ರಾಹ್ಮಣರಿಗೆ ನೀಡಲಾಯಿತು ಎಂದೋ ಗದ್ದೆಯ ಉತ್ಪನ್ನದಲ್ಲಿ ೧/೧೦ ಭಾಗಕ್ಕೆ ತೆರಿಗೆಯಿಲ್ಲದ ವಿನಾಯಿತಿಯನ್ನು ತೋರಿಸಲಾಯಿತು ಎಂದೋ ಅರ್ಥವಾಗುವ ವಾಕ್ಯವಿದೆ. ಇಲ್ಲಿಯ ಅರ್ಥ ಹೀಗೆಯೇ ಎಂದು ಹೇಳುವುದು ಕಷ್ಟ. 'ತೆರಿಗೆಯಿಲ್ಲದ' ಎಂಬ ಅರ್ಥದ ಮಾತು 'ಅಕರ' ಎಂದು ಇಲ್ಲಿದೆ ('ಅ' ನಿಷೇಧಾರ್ಥಕ ಪೂರ್ವಪ್ರತ್ಯಯ; ಕರ = ತೆರಿಗೆ).

## 122.4 ಭಾಷಿಕ ವೈಲಕ್ಷಣ್ಯಗಳು

ಶಾಸನದ ಆರಂಭದಲ್ಲಿರುವ ಪದ್ಯ ಸಲಕ್ಷಣವಾದ ಒಂದು ಅನುಷ್ಟುಪ್ ಶ್ಲೋಕ. ಇದು ರಸಜ್ಞನಾದ ಕವಿಯ ಕೈವಾಡವನ್ನು ತೋರಿಸುವ ಪಕ್ವವಾದ ಭಾವ ಸೌಂದರ್ಯವನ್ನು ಪಡೆದಿದೆ. ಇಷ್ಟು ಹೊರತು ಪೂರ್ತಿ ಶಾಸನ ಹಳಗನ್ನಡ ಗದ್ಯದಲ್ಲಿದೆ. ೫, ೬ ಮತ್ತು ೭ನೆಯ ಸಾಲುಗಳನ್ನು ಗಮನಿಸಿದರೆ, ಸಂಸ್ಕೃತ ಸಮಾಸ ಶಬ್ದಗಳಲ್ಲಿ ಕವಿಗೆ ಪಕ್ಷಪಾತವಿರುವುದು ಸ್ಪಷ್ಟಪಡುತ್ತದೆ. ಉಳಿದ ಸಾಲುಗಳಲ್ಲಿಯೂ ಸಂಸ್ಕೃತ ಭಾಷೆಯ ವರ್ಚಸ್ಸನ್ನು ಕಾಣಬಹುದು. ಸಂಸ್ಕೃತ ಭಾಷೆಯಲ್ಲಿ ತಕ್ಕಮಟ್ಟಿಗೆ ಪರಿಶ್ರಮವಿದ್ದ ಕವಿಯೇ ಈ ಶಾಸನದ ಲೇಖಕನಾಗಿರಬೇಕು ಎಂದು ಇದರಿಂದ ತಿಳಿಯುತ್ತದೆ.

ಮೊದಲ ೧೩ ಸಾಲುಗಳ ಮೊದಲನೆಯ ದಾನ ಶಾಸನದಲ್ಲಿ ಒಟ್ಟು ೧೩ ಕನ್ನಡ ಪದಗಳೂ ಉಳಿದ ೨ ಮತ್ತು ೧ ಸಾಲಿನ ದಾನ ಶಾಸನಗಳಲ್ಲಿ ಒಟ್ಟು ೧೨ ಕನ್ನಡ ಪದಗಳೂ ಇದ್ದು, ಶಾಸನದಲ್ಲಿ ಒಟ್ಟು ೨೫ ಕನ್ನಡ ಪದಗಳು ಮಾತ್ರ ಬಳಕೆಯಾಗಿವೆಯೆಂದು ಎಂ.ಎಚ್. ಕೃಷ್ಣ ಅವರು ಲೆಕ್ಕ ಹಾಕಿದ್ದಾರೆ. ಪೂರ್ವದ ಹಳಗನ್ನಡ ಭಾಷೆಯ ಶಬ್ದ ರೂಪಗಳು ಮಿಗಿಲಾಗಿದ್ದು, ಭಾಷೆ ಪ್ರೌಢವೂ ಗಂಭೀರವೂ ಸಲಕ್ಷಣವೂ ಆಗಿದೆಯೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

### 122.4.1 ಭಾಷಾ ವೈಲಕ್ಷಣ್ಯಗಳ ಸಾರಾಂಶ

ಶಾಸನದ ಭಾಷಾ ವೈಲಕ್ಷಣ್ಯಗಳನ್ನು ಪರಿಶೀಲಿಸಿದ ಮೇಲೆ ಅವರು ಕೊಟ್ಟಿರುವ ಸಾರಾಂಶ ಈ ರೀತಿಯಾಗಿದೆ.

೧. ಕನ್ನಡ ಸಂಸ್ಕೃತ ಭಾಷೆಗಳಿಗೆ ಸಂಬಂಧವು ಕ್ರಿ.ಶ. ೪೫೦ಕ್ಕೆ ಹಿಂದೆಯೇ ಆರಂಭವಾಗಿತ್ತು. ಸಂಸ್ಕೃತ ಸಮಾಸ ಪದಗಳಿಂದ ಕೂಡಿದ ಬಿಗಿಯಾದ ಕನ್ನಡ ೫ ನೆಯ ಶತಮಾನದ ವೇಳೆಗೆ ಚೆನ್ನಾಗಿ ಬಳಕೆಗೆ ಬಂದಿತ್ತು.

೨. ಜನಸಾಮಾನ್ಯರ ನಡೆನುಡಿಗಳಲ್ಲಿ ಅಚ್ಚ ಕನ್ನಡವೂ ಪ್ರೌಢರ ನಡೆನುಡಿಗಳಲ್ಲಿ ಸಂಸ್ಕೃತ ಪ್ರಚುರ ಭಾಷೆಯೂ ರೂಢಿಯಲ್ಲಿತ್ತು. 'ಪೆತ್ತಜಯನ್' ಮೊದಲಾದ ಪದ ರೂಪಗಳು ಸಂಸ್ಕೃತ ಮಾರ್ಗವನ್ನು ಅನುಸರಿಸಿದ್ದುವು.

೩. ಪೂರ್ವದ ಹಳಗನ್ನಡ ಪದ ರೂಪಗಳು ವ್ಯಾಕರಣ ನಿಯಮಗಳಿಗೆ ಕಟ್ಟು ಬಿದ್ದಿದ್ದುವು. ರಂ.ಶ್ರೀ. ಮುಗಳಿಯವರೂ ಕನ್ನಡ ಶಾಸನಗಳ ಭಾಷಿಕ ಅಧ್ಯಯನವನ್ನು ನಡಸಿದ ಇತರ ವಿದ್ವಾಂಸರೂ ಈ ಗ್ರಹಿಕೆಗಳನ್ನು ವಿಮರ್ಶಿಸಿ ನೋಡಿದ್ದಾರೆ. ತೀ.ನಂ.ಶ್ರೀಕಂಠಯ್ಯನವರು ಕರ್ನಾಟಕದ ಭಾಷೆಗಳನ್ನು ಕುರಿತ ತಮ್ಮ ಬರಹದಲ್ಲಿಯೂ (K.T.A., 1968, pp.78). ಕೊಂಚಮಟ್ಟಿಗೆ ಅಭಿಪ್ರಾಯ ಭೇದಗಳಿದ್ದರೂ ಭಾಷಾ ಸೌಕ್ಷ್ಮವವನ್ನು ಎಲ್ಲರೂ ತೃಪ್ತಿಕರವಾಗಿಯೇ ಗ್ರಹಿಸಿದ್ದಾರೆ.

### 122.4.2 ಕೆಲವು ಭಾಷಾ ವೈಲಕ್ಷಣ್ಯಗಳು

**೧. ಭೂತಕಾಲದಲ್ಲಿ ಪ್ರಥಮ ಪುರುಷದ ಬಹುವಚನದ ಆಖ್ಯಾತ ಪ್ರತ್ಯಯಗಳು**

**ಹ್ರಸ್ವಸ್ವರಾದಿ (= ಅರ್) ದೀರ್ಘಸ್ವರಾದಿಯಾಗಿ (= ಆರ್) ಬಂದಿದೆ.**

ಉದಾ. ಕೊಟ್ಟಾರ್ (ಸಾ. ೧೨); ವಿಟ್ಟಾರ್ (ಸಾ. ೧೫, ೧೬).

**೨. ಭೂತ ಭವಿಷ್ಯತ್ ಕಾಲಗಳಲ್ಲಿರುವ ಏಕ ಮತ್ತು ಬಹುವಚನ ಕೃಲ್ಲಿಂಗಗಳ**

**ಅನ್ ಮತ್ತು ಅರ್ ಆಖ್ಯಾತ ಪ್ರತ್ಯಯಗಳು ಒನ್ / ಓನ್ ಮತ್ತು ಓರ್ ಎಂದಾಗಿವೆ.**

ಉದಾ. ಭರಿತೋನ್ (ಸಾ. ೬); ಕುಲದೊನ್, ಕಳ್ದೋನ್ (ಸಾ. ೧೩); ಅಟಿವೊನ್ (ಸಾ. ೧೫) ; ಅಪ್ಪೋರ್ (ಸಾ. ೪).

೩. ಸಪ್ತಮೀ ವಿಭಕ್ತಿಯ ಪ್ರತ್ಯಯ 'ಉಳ್' ಎಂದು ಪ್ರಯೋಗವಾಗಿದೆ.

ಉದಾ. ನಾಡುಳ್ (ಸಾ. ೩); ಆಹವದುಳ್ (ಸಾ. ೬).

೪. 'ಎ' ಮತ್ತು 'ಅಲಿ' ಇವು ಕೂಡ ಸಪ್ತಮೀ ವಿಭಕ್ತಿ ಪ್ರತ್ಯಯಗಳಾಗಿ ಬಂದಿವೆ.

ಉದಾ. ಸಮಕ್ಷದೆ (ಸಾ. ೧೦), ಒಡ್ಡಲಿ (ಸಾ. ೧೬).

೫. ದ್ವಿತೀಯಾ ವಿಭಕ್ತಿಯ ಪ್ರತ್ಯಯದ ಹ್ರಸ್ವಸ್ವರಾದಿಯು ದೀರ್ಘ ಸ್ವರಾದಿಯಾಗಿದೆ.

ಉದಾ. : ಅದಾನ್ (ಸಾ. ೧೫).

೬. ಷಷ್ಠೀ ವಿಭಕ್ತಿಯ ಪ್ರತ್ಯಯವಾದ ಅ ಕಾರವು ದೀರ್ಘವಾಗಿ ಆ ಕಾರವಾಗಿದೆ.

ಉದಾ. : ಕಲಭೋರನಾ (ಸಾ. ೨); ದೇಶದಾ (ಸಾ. ೧೦)

೭. ಪ್ರಕೃತಿಗಳಿಗೆ ಸಮುಚ್ಚಯದ ಉಂ ಪ್ರತ್ಯಯ ಸೇರುವಾಗ ವಿಸಂಧಿಯಾಗಿದೆ.

ಉದಾ. ಪಲ್ಮಡಿಉಂ (ಸಾ. ೧೨) ; ಮೂಟಿವಳ್ಳಿಉಂ (ಸಾ. ೧೨).

೮. ಅನುಸ್ವಾರಕ್ಕೆ ಬದಲಾಗಿ ನ ಕಾರವೆಂಬ ಅನುನಾಸಿಕವನ್ನು ಬಳಸಿದೆ :

ಉದಾ. ಕದಂಬಪನ್ ತ್ಯಾಗಸಂಪನ್ನನ್ (ಸಾ. ೨); ಪಶುಪತಿಯೆನ್ದು (ಸಾ. ೭); ಸುತನ್ಗೆ (ಸಾ. ೧೦); ಸೇನ್ದ್ರಕ (ಸಾ. ೧೦); ಅರಸನ್ಗೆ (ಸಾ. ೧೨); ಅಳುಕದಮ್ಬನ್, ಮಹಾಪಾತಕನ್ (ಸಾ. ೧೩); ಅಟಿವೊನ್ಗೆ (ಸಾ. ೧೫) ಆದರೆ 'ಪಲ್ಲವರಂ' ಎಂಬ ಅನುಸ್ವಾರಸಹಿತ ರೂಪವೂ ಇದೆ.

೯. ಸರೇಫ ವ್ಯಂಜನಾಕ್ಷರವನ್ನು ದ್ವಿತ್ವ ಮಾಡಿ ಬರೆದಿದೆ.

ಉದಾ. ಆಭೀಳರ್ಬ್ಬಟಹರ್ (ಸಾ. ೪); ಇರ್ವ್ವರ್ (ಸಾ. ೫, ೧೪), ಭಟರ್ಗ್ಗೆ (ಸಾ. ೧೬)

೧೦. ಪದಾರಂಭದ ಇ ಕಾರದ ಸ್ಥಾನದಲ್ಲಿ ಎ ಕಾರವಿದೆ.

ಉದಾ. ಎಱಿದು (< ಇಱಿದು) (ಸಾ. ೧೧)

೧೧. ಅರಿಸಮಾಸಕ್ಕೆ ನಿರ್ದುಷ್ಟವಾದ ಗಮಕ ಸಮಾಸದ ಪ್ರಯೋಗವಿದೆ.

ಉದಾ. ಪೆತ್ತಜಯನ್ (ಸಾ. ೧೧).

೧೨. ಕರ್ಮಣಿ ಪ್ರಯೋಗದ ಪದ ರಚನೆಯಿದೆ.

ಉದಾ. ಪೊಗಟೆಪೊಟ್ಟಣ (ಇದು ಪೊಗಟೆಪಟ್ಟನ ಎಂಬುದರ ಅಪಲಿಖಿತ) (ಸಾ. ೮).

೧೩. ಪದಗಳ ಕೆಲವು ಅಪಲಿಖಿತಗಳಿವೆ.

ಉದಾ. ಭಟ್ಟೋರ (< ಭಟ್ಟಾರ) (ಸಾ. ೩) ; ಬಣ (< ಬಾಣ) (ಸಾ. ೯); ವೀರಾಪುರುಷ (< ವೀರಪುರುಷ) (ಸಾ.೯).

೧೪. ಒಂದೇ ಪದದ ಭಿನ್ನ ರೂಪಗಳಿವೆ.

ಉದಾ. ಬಟರಿ (ಸಾ. ೫), ಭಟರಿ (ಸಾ. ೯), ಬಟಾರಿ (< ಭಟಾರಿ) (ಸಾ. ೧೩)

೧೫. ಪದದ ಪ್ರಕೃತಿ ಪ್ರಯೋಗವಿದೆ.

ಉದಾ. ಅಕರ (< ಅಕರಂ ) (ಸಾ. ೧೬)

ಮೇಲೆ ತೋರಿಸಿರುವ ವೈಲಕ್ಷಣ್ಯಗಳಲ್ಲಿ ೧, ೨, ೩, ೫, ೭, ೮, ೧೦ ನೆಯವು ಪೂರ್ವದ ಹಳಗನ್ನಡದ ಭಾಷಾ ಸ್ವರೂಪವನ್ನು ತೋರಿಸತಕ್ಕವಾಗಿವೆ. ೪ ನೆಯದರಲ್ಲಿ 'ಒಡ್ಡಲಿ' ಎಂಬ ಪದದ 'ಅಲಿ' ಪ್ರತ್ಯಯ 'ಅಲ್ಲಿ' ಪ್ರತ್ಯಯದ ಅಪಲಿಖಿತವಿರಬಹುದೇನೊ ? (ನಡುಗನ್ನಡದಲ್ಲಿ ಮಾತ್ರ ಸಪ್ತಮಿಗೆ 'ಅಲಿ' ). ವಾಸ್ತವವಾಗಿ ಈ ಶಬ್ದದ ಅರ್ಥವೂ ಸ್ವರೂಪವೂ ಸಂದಿಗ್ಧವಾದ್ದು. ೧೧, ೧೨ ನೆಯ ಗಮಕಸಮಾಸ ಮತ್ತು ಕರ್ಮಣಿ ಪ್ರಯೋಗಗಳು ಕನ್ನಡ ಭಾಷೆಯ ಮೇಲೆ ಬಹು ಹಿಂದೆಯೇ ಉಂಟಾಗಿರುವ ಸಂಸ್ಕೃತ ಪ್ರಭಾವವನ್ನು ತೋರಿಸತಕ್ಕುವಾಗಿವೆ. ಕನ್ನಡಕ್ಕೆ ವಿಶಿಷ್ಟವಾದ ಗಮಕ ಸಮಾಸದ ಒಂದು ಉದಾಹರಣೆಯೂ ದ್ರಾವಿಡ ಭಾಷೆಗಳಲ್ಲಿ ಅಸಹಜ ಪ್ರಯೋಗವಾದ ಕರ್ಮಣಿ ಪ್ರಯೋಗದ ಬಳಕೆಯೂ ಈ ಶಾಸನದಲ್ಲಿ ಕಂಡುಬಂದಿರುವುದು ಒಂದು ವಿಶೇಷ. ಉಳಿದ ವೈಲಕ್ಷಣ್ಯಗಳು ಮುಖ್ಯವಾಗಿ ವ್ಯಾಕರಣ ಸಂಬಂಧವಾಗಿರದೆ. ಬರೆವಣಿಗೆಯ ವೈಚಿತ್ರ್ಯ ವೈವಿಧ್ಯಗಳಿಗೆ ಸಂಬಂಧಿಸಿವೆ ಎನ್ನಬಹುದು. ೯ ನೆಯ ವೈಶಿಷ್ಟ್ಯವನ್ನು ಭಟ್ಟಾಕಳಂಕನು ಕರ್ಣಾಟಕ ಶಬ್ದಾನುಶಾಸನದಲ್ಲಿ ಒಂದು ವ್ಯಾಕರಣ ವೈಲಕ್ಷಣ್ಯವಾಗಿ ಪರಿಗಣಿಸಿರುವುದುಂಟು (ಸೂತ್ರ. ೬೫). ಹಳಗನ್ನಡ ಭಾಷೆಯ ಪ್ರತ್ಯೇಕ ಧ್ವನಿ ವಿಶೇಷಗಳಾದ ಱ ಮತ್ತು ೞ (ಶಕಟರೇಫ ಮತ್ತು ರಳ)ಗಳನ್ನು ಪಾಲಿಸಿದೆ.

## 122.5 ಸಾರಾಂಶ

ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದ ಶೂರನಿಗೆ 'ಕತ್ತಿಯ ಕೊಡುಗೆ' (ಬಾಳ್ಗಟ್ಟು)ಯಾಗಿ ಎರಡು ಗ್ರಾಮಗಳನ್ನು ದತ್ತಿ ನೀಡಿದ ಸಂಗತಿ ಹಲ್ಮಿಡಿ ಶಾಸನದಲ್ಲಿದೆ ಎಂಬುದು ಮುಖ್ಯ ವಿಚಾರ. ಈ ಯುದ್ಧವು ಕದಂಬರು ಮತ್ತು ಪಲ್ಲವರ ನಡುವೆ ನಡೆದಿದ್ದಿರಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ. ಈ ಯುದ್ಧದಲ್ಲಿ ಕದಂಬರ ಪರವಾಗಿ ಹೋರಾಡಿದ ವಿಜ ಅರಸನಿಗೆ ಮೃಗೇಶ ಮತ್ತು ನಾಗೇಂದ್ರರೆಂಬ ಅಧಿಕಾರಿಗಳು ದಾನ ನೀಡಿದ್ದಾರೆ. ಕದಂಬರು ಮತ್ತು ಪಲ್ಲವರಲ್ಲದೆ ಸೇಂದ್ರಕ, ಬಾಣ ಮತ್ತು ಅಳುಪ ಹಾಗೂ ಕೇಕಯರ ಪ್ರಸ್ತಾಪ ಈ ಶಾಸನಕ್ಕೆ ಸಂಬಂಧಿಸಿದಂತೆ ಬರುತ್ತದೆ. ಆದರೂ ಚಾರಿತ್ರಿಕ ಅಂಶಗಳ ದೃಷ್ಟಿಯಿಂದ ಈ ಶಾಸನ ಅಷ್ಟೇನು ಮಹತ್ತ್ವ ಪಡೆಯುವುದಿಲ್ಲ. ಈ ಶಾಸನಕ್ಕೆ ಮಹತ್ತ್ವವಿರುವುದೇ ಇದು ಕನ್ನಡದಲ್ಲಿ ದೊರೆತ ಮೊದಲ ಶಾಸನ ಎಂಬ ಕಾರಣಕ್ಕಾಗಿ ಮತ್ತು ಅದು ಒಳಗೊಂಡಿರುವ ಸಾಮಾಜಿಕ ಸಾಂಸ್ಕೃತಿಕ ಸಂಗತಿಗಳಿಗಾಗಿ. ಯುದ್ಧದಲ್ಲಿ ಹೋರಾಡಿದ ವೀರನ ಖಡ್ಗವನ್ನು ತೊಳೆದು ಅವನನ್ನು ಗೌರವಿಸುವ 'ಪದ್ಧತಿ'ಯಿದ್ದ ಮುಖ್ಯ ಸಂಗತಿ ಈ ಶಾಸನದಿಂದ ತಿಳಿದುಬರುತ್ತದೆ.

ಶಾಸನದಲ್ಲಿ ಬಳಕೆಯಾಗಿರುವ ಭಾಷೆ ಗಮನಾರ್ಹವಾದ ಮತ್ತೊಂದು ಅಂಶ. ಇದೊಂದು ಹಳಗನ್ನಡ ಭಾಷೆಯ 'ಗದ್ಯ' ಶಾಸನ. ಕನ್ನಡದೊಡನೆ ಸಂಸ್ಕೃತ ಭಾಷೆ ಹೊಂದಿದ್ದ ಸಾಹಚರ್ಯದ ಸ್ವರೂಪವನ್ನು ತಿಳಿಯುವಲ್ಲಿ ಇದು ನೆರವಾಗಿದೆ. ಭಾಷಾ ಬೆಳವಣಿಗೆಯಲ್ಲಿ ತಲೆದೋರುತ್ತಿದ್ದ ವೈಲಕ್ಷಣ್ಯಗಳು, ಬಳಕೆಯಲ್ಲಿ ಕಂಡುಬರುತ್ತಿದ್ದ ಅಪಪ್ರಯೋಗಗಳು ಈ ಶಾಸನದಿಂದ ತಿಳಿದುಬರುತ್ತವೆ.

ಶೈವ ಪೂಜಕರಾದ ಕದಂಬರ ಈ ಶಾಸನಾರಂಭದ ವಿಷ್ಣುಸ್ತುತಿಯು ಅವರ ಪರಧರ್ಮಸಹಿಷ್ಣುತೆಯನ್ನು ಸೂಚಿಸುತ್ತದೆ ಎಂದೂ ವಿದ್ವಾಂಸರು ಊಹಿಸಿದ್ದಾರೆ. ದಾನ ಧರ್ಮ ಯಜ್ಞಯಾಗಾದಿಗಳು ಆ ಕಾಲದಲ್ಲಿ ವಿಶ್ಲೇಷವಾಗಿ ನಡೆಯುತ್ತಿದ್ದವೆಂಬ ಸಂಗತಿಯನ್ನು ಈ ಶಾಸನದ ಆಧಾರದಿಂದ ವಿದ್ವಾಂಸರು ಗುರುತಿಸಿ ತೋರಿದ್ದಾರೆ.

## 125.6 ಅಭ್ಯಾಸ ಪ್ರಶ್ನೆಗಳು

1. ಹಲ್ಮಿಡಿ ಶಾಸನದಲ್ಲಿ ವ್ಯಕ್ತವಾಗುವ ಚಾರಿತ್ರಿಕ ಅಂಶಗಳನ್ನು ವಿಶದಪಡಿಸಿ.
2. ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹಲ್ಮಿಡಿ ಶಾಸನವನ್ನು ವಿಶ್ಲೇಷಿಸಿ.
3. ಹಲ್ಮಿಡಿ ಶಾಸನದ ಭಾಷಾ ಸ್ವರೂಪ ಕುರಿತು ಬರೆಯಿರಿ.
4. ಕನ್ನಡ ಶಾಸನಗಳಲ್ಲಿ ಹಲ್ಮಿಡಿ ಶಾಸನದ ಸ್ಥಾನವನ್ನು ಗುರುತಿಸಿ.

ಟಿಪ್ಪಣಿ ಬರೆಯಿರಿ :

1. ಬಾಳ್ಗಚ್ಚು
2. ಸಟ್ಟಂಗದರ್
3. ಕುಱುಮ್ಬಿಡಿ

## 122.7 ಅಭ್ಯಾಸಕ್ಕೆ ಆಕರಗಳು


1. **Gopal, B.R** : **Corpus of Kadamba Inscriptions,** Vol. I, 1985, pp. 21-24, Introduction, pp. 43-46.

2. **Gopinatha Rao, T.A** : **A Note on the word Balgalchchu,** Indian Antiquary, Vol. 40, March 1911, p. 89.

3. **Krishna, M.H** : **Lithic record found at Halmidi,** Annual report of the Mysore Archaeological Department for the year 1936, pp. 72-81.

4. **Rama Rao, R** : **Earliest known Kannada Inscription,** All India Oriental Conference, 1935, pp. 99-100.

5. **Sreekantaiya, T.N** : **The Languages of Karnataka,** Karnataka Through the Ages, p. 78.

6. **Srikantha Sastri, S** : **Halmidi Inscription of Kakustha Varman,** Sources of Karnataka History, Vol. I, 1940, p. 20.

7. **Gai, G.S** : **Halmidi Inscription of Kakustha Bhattora - A Fresh Study,** Studies in Indian History, Epigraphy and Culture, Dharwad, 1992, pp. 297-308; Identification of Palmadi; QJMS; 39-1, 1978, pp. 93-94.

8. ಕೃಷ್ಣ ಎಂ.ಎಚ್ : **ಅತ್ಯಂತ ಪ್ರಾಚೀನ ಕನ್ನಡ ಶಾಸನ,** ಪ್ರಬುದ್ಧ ಕರ್ನಾಟಕ, ೨೦-೩, ೧೯೩೯, ಪು. ೩೧-೪೦.

9. ಗೋವಿಂದ ಪೈ ಎಂ. : **ಕನ್ನಡ ಸಾಹಿತ್ಯದ ಪ್ರಾಚೀನತೆ,** 'ಮೂರು ಉಪನ್ಯಾಸಗಳು', ಪು. ೧೩೩-೩೪.

10. ಗೋವಿಂದ ಸ್ವಾಮಿರಾವ್, ಗಾಯಿ : **ಹಲ್ಮಿಡಿ ಶಾಸನ - ಒಂದು ಅಧ್ಯಯನ,** 'ವಜ್ರದೀಪ್ತಿ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೦, ಪು. ೧-೧೩.

11. ಚಿದಾನಂದ ಮೂರ್ತಿ. ಎಂ : **ಸಟ್ಬಂಗ ಎಂದರೇನು ?** ಪ್ರಬುದ್ಧ ಕರ್ನಾಟಕ, ೪೭-೪, ೧೯೬೬, ಪು. ೧೨೪-೨೭. ಬಾಳ್ಗಳ್ಚು, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೯೩.

12. ನರಸಿಂಹಾಚಾರ್. ಡಿ.ಎಲ್ : **ಮುನ್ನುಡಿ, ಸಂಶೋಧನ ತರಂಗ - ಭಾಗ ೨,** ೧೯೬೯, ಪು. ix

13. ನಾಗರಾಜು. ಎಸ್ : **ಹಲ್ಮಿಡಿ ಶಾಸನದ ಸಟ್ಬಬ್ಬದರ್,** ಪ್ರಬುದ್ಧ ಕರ್ನಾಟಕ, ೫೧-೧, ೧೯೬೯, ಪು. ೮೯-೯೨.

14. ಮರಿಯಪ್ಪ ಭಟ್ಟ. ಎಂ : ಕನ್ನಡ ಸಂಸ್ಕೃತಿ, ಪು. ೨೬-೮.

15. ಮುಗಳಿ ರಂ. ಶ್ರೀ : ಪ್ರಾಚೀನ ಶಾಸನಗಳು, ಕನ್ನಡ ಸಾಹಿತ್ಯ ಚರಿತ್ರೆ, ೧೯೭೧, ಪು. ೯-೧೦.

16. ರಮೇಶ್ ಕೊ. ವ್ಯಾ. : **ಹಲ್ಮಿಡಿ ಶಾಸನದ 'ಸಟ್ಬಬ್ಬದರ್' ಮತ್ತು 'ಬಾಳ್ಗಳ್ಚು'** ಪ್ರಬುದ್ಧ ಕರ್ನಾಟಕ, ೫೧-೩, ೧೯೭೯, ಪು. ೨೩-೨೭.

17. ವೆಂಕಟಾಚಲಶಾಸ್ತ್ರೀ. ಟಿ.ವಿ : **'ಹಲ್ಮಿಡಿ ಶಾಸನದ ಅರ್ಥ',** ಮಾನವಿಕ ಕರ್ನಾಟಕ ೨-೩, ೧೯೭೨, ಪುಟ ೩೯, ೪೬, ಶಬ್ದಾರ್ಥ ವಿಹಾರ, ೧೯೭೯, ಪು. ೧-೧೧.

18. ಶಿವರಾಮ ಐತಾಳ .ಕೆ : **ಸಟ್ಬಂಗ ಎಂದರೇನು?** ಪ್ರಬುದ್ಧ ಕರ್ನಾಟಕ, ೫೨-೩, ೧೯೭೦, ಪು. ೧೨೪-೨೬.

19. ಶೇಷಶಾಸ್ತ್ರಿ. ಆರ್ : 'ಬಾಳ್ಗಲ್ಚು', 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೬, ಪು. ೨೧೮-೨೩.

20. ಹನುಮಂತ ರಾವ್. ಎಂ : ಸಬ್ಬಿಜ್ಞ ಪದದ ಅರ್ಥವೇನು ? ಪ್ರಬುದ್ಧ ಕರ್ಣಾಟಕ, ೫೨-೩, ೧೯೭೦, ಪು. ೧೩೯-೪೪.

21. ಕನ್ನಡದ ತೀರ ಹಳೆಯ ಶಾಸನ : ಕನ್ನಡ ನುಡಿ, ಸೆಪ್ಟೆಂಬರ್ ೧೯೪೨, ಪು. ೩೫೮-೫೯.

22. ಸಂಪಾದಕ ವರ್ಗ : ಎಪಿಗ್ರಾಫಿಯ ಕರ್ನಾಟಕ (ಪರಿಷ್ಕೃತ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೯೦, ಪು. ೨೨೨; ಪೀಠಿಕೆ x/i - x/iv.

23. ಕಲಬುರ್ಗಿ. ಎಂ.ಎಂ : ಹಲ್ಮಿಡಿ ಶಾಸನದ ಪ್ರೇಮಾಲಯ ಸುತನ್, ಮಾರ್ಗ - ೨, ೧೯೮೮, ಪು. ೩-೭.


* * * *

# ಘಟಕ - 123

## ಬಾದಾಮಿಯ ಕಪ್ಪೆಅರಭಟ್ಟನ ಶಾಸನ : ಭಾಗ - ೧ ಪಠ್ಯ - ಅರ್ಥ

ರಚನೆ


123.0 ಉದ್ದೇಶ

123.1 ಪೀಠಿಕೆ

123.2 ಬಾದಾಮಿಯ ಕಪ್ಪೆ ಅರಭಟ್ಟನ ಶಾಸನಪಾಠ

123.3 ಶಾಸನ ದೊರೆತ ಸ್ಥಳ, ವರ್ಣನೆ, ಲಿಪಿ, ಕರ್ತೃತ್ವ, ಮಹತ್ವ ಇತ್ಯಾದಿ

123.4 ಕಪ್ಪೆ ಅರಭಟ್ಟನ್

123.5 ಕಲಿಯುಗ ವಿಪರೀತನ್

123.5.1 ದೋಷಕರ ಕಲಿಯುಗಮಂ ನಿರ್ಮಲಂ ಮಾಡಿದನ್

123.5.2 ಎರಡನೆಯ ಅರ್ಥ ಘಟಕ

123.5.3 ಮೊದಲನೆಯ ತ್ರಿಪದಿ

123.6 ಹೊಸದಾಗಿ ವಿಚಾರ ಮಾಡಬಹುದು

123.6.1 ಸಾಧುಗೆ ಸಾಧು

123.6.2 ಮಾಧುರ್ಯಂಗೆ ಮಾಧುರ್ಯನ್

123.6.3 ಅರ್ಥ ಸಾಧುತ್ವ

123.7 ಎರಡನೆಯ ತ್ರಿಪದಿ

123.8 ಮೂರನೆಯ ತ್ರಿಪದಿ

123.9 ಸಾರಾಂಶ

## 123.0 ಉದ್ದೇಶ

- ಕಪ್ಪೆ ಅರಭಟ್ಟನ ಶಾಸನದ 'ಮೂಲ ಪಾಠ'ವನ್ನು ಓದುವುದು.
- ಶಾಸನ ದೊರೆತ ಸ್ಥಳ, ಕಾಲ, ಶಾಸನದ ಮಹತ್ವವನ್ನು ತಿಳಿಯುವುದು.
- ಶಾಸನದಲ್ಲಿರುವ ಮುಖ್ಯ ಸಂಗತಿಗಳನ್ನು ಗುರುತಿಸಿಕೊಳ್ಳುವುದು.
- ಈವರೆಗಿನ ಓದುವಿಕೆಗಿಂತ ಭಿನ್ನವಾದ ಅರ್ಥದಲ್ಲಿ ಪ್ರಸ್ತುತ ಶಾಸನವನ್ನು ಓದಲು ಪ್ರಯತ್ನವನ್ನು ಮಾಡುವುದು.

## 123.1 ಪೀಠಿಕೆ

ಈ ಹಿಂದಿನ ಎರಡು ಘಟಕಗಳಲ್ಲಿ ಕನ್ನಡ ಶಾಸನ ಸಾಹಿತ್ಯದ ಸಂದರ್ಭದಲ್ಲಿ ಬಹು ಮುಖ್ಯವೆನಿಸುವ 'ಹಲ್ಮಿಡಿ ಶಾಸನ'ದ ಅಭ್ಯಾಸವನ್ನು ಮಾಡಿದ್ದೀರಿ. ಮುಂದಿನ ಎರಡು ಘಟಕಗಳಲ್ಲಿ ಕನ್ನಡದ ಮತ್ತೊಂದು ಮಹತ್ತ್ವದ ಶಾಸನವಾದ ಕಪ್ಪೆ ಅರಭಟ್ಟನ ಶಾಸನವನ್ನು ಅಧ್ಯಯನ ಮಾಡಲಿದ್ದೀರಿ. ಪ್ರಸ್ತುತ ಶಾಸನ ಕೂಡ ತನ್ನ ಕಾಲ ಮತ್ತು ಒಳಗೊಂಡಿರುವ ವಸ್ತು ವಿಶೇಷದ ದೃಷ್ಟಿಯಿಂದ ಮಹತ್ತ್ವದ ಸ್ಥಾನವನ್ನು ಪಡೆದಿದೆ. ಶಾಸನದ ಪೂರ್ಣ ಪಾಟವನ್ನು ಅದರ ಅರ್ಥದೊಡನೆ ಈ ಘಟಕದಲ್ಲಿ ಪರಿಚಯಿಸಿಕೊಂಡರೆ ಮುಂದಿನ ಘಟಕದಲ್ಲಿ ಶಾಸನದಲ್ಲಿ ವ್ಯಕ್ತವಾಗುವ ಚಾರಿತ್ರಿಕ, ಸಾಮಾಜಿಕ, ಭಾಷಿಕ ಮೊದಲಾದ ಮುಖ್ಯ ಸಂಗತಿಗಳನ್ನು ಅಭ್ಯಾಸ ಮಾಡಲಿದ್ದೀರಿ. ಬನ್ನಿ ಮೊದಲಿಗೆ ಕಪ್ಪೆ ಅರಭಟ್ಟನ ಶಾಸನದ ಪೂರ್ಣ ಪಾಠದ ಕಡೆ ಗಮನಹರಿಸೋಣ.

## 123.2 ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ ಪಾಠ

ಇಂಡಿಯನ್ ಆಂಟಿಕ್ವೆರಿ ಸಂ. ೧೦, ಮಾರ್ಚ್ ೧೮೮೧, ಪು. ೬೧ ರಲ್ಲಿ ಶಾಸನ ಪಾಠವನ್ನು ಜೆ.ಎಫ್. ಫ್ಲೀಟ್ ಹೀಗೆ ಮೊದಲ ಸಲ ಪ್ರಕಟಿಸಿದ್ದಾರೆ :

ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್
ಕಷ್ಟಜನವರ್ಜಿತನ್ ಕಲಿಯುಗವಿಪರೀತನ್ ||

ವರನ್ತೇಜಸ್ವಿನೋ ಮೃತ್ಯುರ್ನ ತು ಮಾನಾವಖಣ್ಡನಮ್
ಮೃತ್ಯುಸ್ತತ್ಕ್ಷಣಿಕೋ ದುಃಖಮ್ಮಾನಭಂಗನ್ದಿನೇ ದಿನೇ ||

ಸಾಧುಗೆ ಸಾಧು ಮಾಧೂರ್ಯ್ಯನ್ಗೆ ಮಾಧೂರ್ಯ್ಯಂ ಬಾಧಿಪ್ಪ
ಕಲಿಗೆ ಕಲಿಯುಗ ವಿಪರೀತನ್ಮಾಧವನೀತನ್ಪೆಱನಲ್ಲ ||

ಒಳ್ಳಿತ್ತ ಕೆಯ್ವೋರಾರ್ಪ್ಪೊಲ್ಲದುಮದಱನ್ತೆ ಬಲ್ಲಿತ್ತು ಕಲಿಗೆ
(ವ್) ಇಪರೀತಾ ಪುರಾಕೃತಮಿಲ್ಲಿ ಸನ್ಧಿಕ್ಕುಮದು ಬನ್ದು ||

ಕಟ್ಟಿದ ಸಿಂಘಮನ್ಕೆಟ್ಟೋಡೇನೆಮಗೆನ್ದು ಬಿಟ್ಟವೋಲ್ಕಲಿಗೆ ವಿ
(ಪ)ರೀತಂಗಹಿತರ್ಕ್ಕಳ್ಕೆಟ್ಟಮ್ಮೆಣ್ವಾಸ್ತ್ರರವಿಚಾರಮ್ ||



MA. Kan (-C-10)-Samputta-1+176+Cover-1-9-2014.lay, 10S, Monday, September 01, 2014, Black

ಈ ಶಾಸನ ಪಾಠವನ್ನು ಛಂದೋಬದ್ಧವಾಗಿ ಮಾಡಿ, ಈಗಿನ ಪಾಠಕ್ರಮಕ್ಕೆ ಅನುಸಾರವಾಗಿ ಹೀಗೆ ಬರೆಯಬಹುದಾಗಿದೆ :

**ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್**
**ಕಷ್ಟಜನವರ್ಜಿತನ್ ಕಲಿಯುಗವಿಪರೀತನ್ ||**

**ವರಂ ತೇಜಸ್ವಿನೋ ಮೃತ್ಯುಃ | ನ ತು ಮಾನಾವಖಂಡನಮ್ |**
**ಮೃತ್ಯುಃ ತತ್ಕ್ಷಣಿಕೋ ದುಃಖಂ | ಮಾನಭಂಗಂ ದಿನೇ ದಿನೇ ||**

**ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್**
**ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್**
**ಮಾಧವನೀತನ್ ಪೆಱನಲ್ಲ ||**

**ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದಱಿಂತೆ**
**ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ**
**ಮಿಲ್ಲಿ ಸಂಧಿಕ್ಕುಮದು ಬಂದು ||**

**ಕಟ್ಟಿದ ಸಿಂಘಮನ್ ಕೆಟ್ಟೊಡೇನೆಮಗೆಂದು**
**ಬಿಟ್ಟವೊಲ್ ಕಲಿಗೆ ವಿಪರೀತಂಗಹಿತರ್ಕಳ್**
**ಕೆಟ್ಟರ್ ಮೇಣ್ ಸತ್ತರವಿಚಾರಮ್ ||**

ಜೆ.ಎಫ್. ಅವರು ಶಾಸನಪಾಠವನ್ನು ಯಥಾಪ್ರತಿಯಾಗಿ ಮುದ್ರಿಸಿದ್ದರೆ, ಈ ಎರಡನೆಯ ಪಾಠಕ್ರಮ ಛಂದೋಬದ್ಧವಾಗಿ, ರೂಢಿಯ ಬರಹ ಮತ್ತು ಪಠನಗಳಿಗೆ ಅನುಸಾರವಾಗಿ ಸವರಣೆ ಮಾಡಿ ಸಿದ್ಧಪಡಿಸಿದ್ದಾಗಿದೆ. ಶಾಸನ ಪಾಠವನ್ನು ಸಾಮಾನ್ಯವಾಗಿ ಅಭ್ಯಾಸಕ್ಕೆ ಬಳಸುವುದು ಈ ಎರಡನೆಯ ಕ್ರಮದಲ್ಲಿಯೇ.

ಫ್ಲೀಟ್ ಅವರು ಮಾಡಿರುವ ಶಾಸನ ಪಾಠದ ಅರ್ಥ :

Kappe Arabhatta was beloved by excellent people and avoided by evil people, and was an exceptional man in the Kaliyuga.

Better is a glorius death than the destruction of reputation : death is a pain that lasts only for an instant; but the destruction of reputation abides from day to day.

That which is good (is appropriate) to that which is good, and sweetness to sweetness, and he who is an exceptional man in the Kaliyuga to the distressful Kali (age) : he is (a very) Madhava and nothing less. Who are they that do what is good ? they cannot be likened (to him). Having recognised this .., let there be here effected a reconciliation with Kali (age, saying 'What is this to us' ? came to injure and destroy the eminence that he had achieved, they were worsted and then they died, as to this there can be no doubt.

ಇದು ಶಾಬ್ದಿಕ ಅನುವಾದದ ಯತ್ನ. ಆದರೆ ಅಭಿಪ್ರಾಯ ವಿಶದತೆಗಾಗಿ ಅಲ್ಲಲ್ಲಿ ಅಧ್ಯಾಹಾರ ಮಾಡಿ ಸಂಗತಿಯನ್ನು ಸ್ಪಷ್ಟಪಡಿಸಿದೆ. ಒಂದು ಕಡೆ ಅರ್ಥವಾಗದ ಭಾಗವನ್ನು ಅನುವಾದ ಮಾಡದೆ ಹಾಗೆಯೇ ಬಿಟ್ಟಿದೆ. ಈಚೆಗೆ ಈ ಶಾಸನದ ಅರ್ಥವನ್ನು ಉಲ್ಲೇಖಿಸುವ ಸಂದರ್ಭಗಳು ಬಂದಾಗ್ಗೆ, ವಿದ್ವಾಂಸರು ಬೇರೆ ಬೇರೆಯಾಗಿ ಅರ್ಥ ನಿರೂಪಣೆ ಮಾಡಿರುವುದನ್ನು ಗಮನಿಸಿದರೆ, ಅವರಿಗೆ ಫ್ಲೀಟ್ ಅವರು ಮಾಡಿರುವ ಅರ್ಥ ಪೂರ್ತಿಯಾಗಿ ಒಪ್ಪಿಗೆಯಾಗಿಲ್ಲ ಎನ್ನುವುದು ಸ್ವಯಂವಿದಿತವಾಗುತ್ತದೆ.

## 123.3 ಶಾಸನ ದೊರೆತ ಸ್ಥಳ, ವರ್ಣನೆ, ಲಿಪಿ, ಕರ್ತೃತ್ವ, ಮಹತ್ತ್ವ ಇತ್ಯಾದಿ

ಈ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ ವಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಬಾದಾಮಿಗೆ ಸಮೀಪದಲ್ಲಿರುವ ತಟ್ಟುಕೋಟೆ ಎಂಬ ಸ್ಥಳದ ವಾಯವ್ಯ ದಿಕ್ಕಿನಲ್ಲಿರುವ ಬಂಡೆಗಲ್ಲಿನ ಮೇಲೆ ಕೊರೆದಿರುವ ಶಾಸನವಾಗಿದೆ. ಯಾವ ರಾಜ ಮನೆತನದ ಕಾಲದಲ್ಲಿ ಹುಟ್ಟಿತು, ಆಗ ಆಳ್ವಿಕೆಯಲ್ಲಿದ್ದ ರಾಜನು ಯಾರು ಎನ್ನುವುದನ್ನು ತಿಳಿಯಲು ಶಾಸನದೊಳಗೆ ಸಾಕ್ಷ್ಯಗಳೇನೂ ಇಲ್ಲ.

ಈ ಶಾಸನದ ಕೆಲವು ಭಾಗ ಬಾದಾಮಿಗೆ ಸಮೀಪದಲ್ಲಿರುವ ಸಿಡಲ್ಪಡಿ ಎಂಬಲ್ಲಿಯೂ ಕಂಡುಬರುತ್ತದೆ.

ಕರ್ನಾಟಕದಲ್ಲಿ ವಿರಳವಾಗಿ ದೊರೆಯುವ ಬಂಡೆಗಲ್ಲು ಶಾಸನಗಳಲ್ಲಿ ಇದು ಒಂದಾಗಿದೆ. ಇದರಲ್ಲಿ ೧೦ ಸಾಲುಗಳಿದ್ದು, ೧ - ೨ ನೆಯ ಸಾಲುಗಳು ಅನುಸ್ಯೂತವಾಗಿ ಓದಬಹುದಾದ ಗದ್ಯದಲ್ಲಿವೆ. ೩ - ೪ ನೆಯ ಸಾಲುಗಳು ಒಂದು ಸುಭಾಷಿತದಂತಹ ಸಲಕ್ಷಣ ಅನುಷ್ಟುಪ್ ಶ್ಲೋಕವಾಗಿದೆ. ಮುಂದೆ ೫ ರಿಂದ ೧೦ ನೆಯ ಸಾಲುಗಳವರೆಗೆ ೨ - ೨ ಸಾಲುಗಳ ಒಂದೊಂದು ಅರ್ಥ ಘಟಕವಿದ್ದು, ಮೇಲುನೋಟಕ್ಕೆ ಅವು ಅನುಸ್ಯೂತವಾಗಿ ಲಿಖಿತಗೊಂಡ ಗದ್ಯದಂತೆ ಕಂಡುಬಂದರೂ ವಿಮರ್ಶೆ ಮಾಡಿ ನೋಡಿದರೆ ಅವುಗಳು ಮೂರು ದೇಶಿ ಛಂದಸ್ಸಿನ ತ್ರಿಪದಿಗಳೆಂದು ವಿದಿತವಾಗುತ್ತದೆ. ಆ ತ್ರಿಪದಿಗಳ ಸ್ವರೂಪವನ್ನು ಆರಂಭದ ಶಾಸನ ಪಾಠದ ಪರಿಷ್ಕೃತ ಪಠ್ಯದಿಂದ ತಿಳಿಯಬಹುದಾಗಿದೆ.

ಶಾಸನದ ೧ - ೨ ನೆಯ ಸಾಲುಗಳು ಒಂದು ಅರ್ಥವತ್ತಾದ ಘಟಕವಾಗಿದ್ದು, ಕನ್ನಡ ಭಾಷೆಯಲ್ಲಿರುವ ಈ ಶಾಸನ ಭಾಗದಲ್ಲಿ ಸಮಗ್ರ ಶಾಸನದ ಕೇಂದ್ರ ವ್ಯಕ್ತಿ ಕಪ್ಪೆ ಅರಭಟ್ಟನೆಂಬವನ ಗುಣಗಳನ್ನು ಕೀರ್ತಿಸಿದೆ. ಇದು ಗದ್ಯವೇ ಪದ್ಯವೇ ಎಂಬ ಚರ್ಚೆ ನಡೆದಿದೆ. ಎ.ಎನ್. ನರಸಿಂಹಯ್ಯನವರು (Grammar of Oldest Kanarese Inscriptions p.363) ಮತ್ತು ಆರ್.ಎಸ್. ಪಂಚಮುಖಿಯವರು ('ಕರ್ನಾಟಕದ ಇತಿಹಾಸ', ಸಂ.೧, ಪು.೧೨೨) ಪದ್ಯವೆಂದು ಭಾವಿಸಿದ್ದಾರೆ. ಆದರೆ ಪ್ರಾಚೀನ ಕನ್ನಡ ಪದ್ಯದ ಅವಶ್ಯ ಲಕ್ಷಣವಾದ ಪ್ರಾಸ ಇಲ್ಲಿ ಕಾಣದಿರುವುದರಿಂದ ಇದೊಂದು ಗದ್ಯ ಭಾಗವೆಂದೇ ತಿಳಿಯಬೇಕಾಗಿದೆ. ಈ ಭಾಗದಲ್ಲಿ ಮುಖ್ಯ ವ್ಯಕ್ತಿಯ ಹೆಸರನ್ನು ಮೊದಲಲ್ಲಿ ಉಲ್ಲೇಖಿಸಿ ಆತನ ಸ್ವಭಾವದ ಪರಿಗಣನೆಯನ್ನು ಮೂರು ಮಾತುಗಳಲ್ಲಿ ಹೇಳಿದೆ.

ಅನಂತರದ ಅನುಷ್ಟುಪ್ ಶ್ಲೋಕ ಆರಂಭದ ಗದ್ಯ ಮತ್ತು ಅನಂತರದ ಮೂರು ತ್ರಿಪದಿಗಳ ನಡುವೆ ಕಾಣಿಸಿಕೊಂಡಿದ್ದು, ಈ ಶ್ಲೋಕ ಒಂದು ಸಾರ್ವತ್ರಿಕವಾದ ಆಶಯವಾದ ಕಾರಣ ಸಂಸ್ಕೃತ ಭಾಷೆಯಲ್ಲಿರಬೇಕೆಂದು ಅಪೇಕ್ಷಿಸಿದಂತಿದೆ. ಈ ಸುಭಾಷಿತದ ಕರ್ತೃ ಯಾರೋ, ಆಕರ ಯಾವುದೋ ತಿಳಿಯದು. ಅದನ್ನು ಬಹುಶಃ ಶಾಸನದ ಲೇಖಕನು ಬರೆದಿರಲಾರ, ಅನ್ಯ ಮೂಲದಿಂದ ಉದ್ಧರಿಸಬಹುದೆಂದು ತೋರುತ್ತದೆ. ಈ ಶ್ಲೋಕವನ್ನು ಪ್ರತ್ಯೇಕವಾಗಿಯೇ ಒಂದು ಬಂಡೆಯ ಮೇಲೆ ಕೆತ್ತಿರುವುದುಂಟು. ಬಾದಾಮಿಯಿಂದ ಮಹಾಕೂಟಕ್ಕೆ ಹೋಗುವ ದಾರಿಯಲ್ಲಿ, ಸಿಬಾರಡೋಣಿಯ ಹತ್ತಿರದ ಬಂಡೆಯೊಂದರ ಮೇಲೆ ಇದನ್ನು ಕಾಣಬಹುದಾಗಿದೆ. (R.S. Panchamukhi, ed. Karanataka Inscriptions, Vol. I, 1941, p. 11).

ಅನಂತರದಲ್ಲಿ ಮೂರು ತ್ರಿಪದಿಗಳು ಸಾಲಾಗಿ ಬಂದಿವೆ. ಈ ತ್ರಿಪದಿಗಳಲ್ಲಿ ಕಪ್ಪೆ ಅರಭಟ್ಟನ ಸ್ವಭಾವ ಚಿತ್ರಣವನ್ನು ಮಾಡಿದೆ. ತನ್ನ ಪ್ರಾಣಕ್ಕಿಂತ ತಾನು ನಂಬಿಕೊಂಡ ಶ್ರದ್ಧೆ, ಸಾಧಿಸಿಕೊಂಡು ಬಂದ ಸ್ವಾಭಿಮಾನ ಇವೇ ದೊಡ್ಡದು ಎಂದು ತಿಳಿದು ಅದರಂತೆ ಜೀವನ ನಡಸಿದ ವ್ಯಕ್ತಿಯ ಕಥನ ಇಲ್ಲಿ ಬಂದಿದೆ. ಈ ಶಾಸನ ಕಪ್ಪೆ ಅರಭಟ್ಟನು ಜೀವಿಸಿದ್ದ ಕಾಲದಲ್ಲಿ ಹಾಕಿಸಿಲ್ಲ, ಅವನ ಮರಣದ ಅನಂತರದಲ್ಲಿ ಹಾಕಿಸಿದೆ ಎಂದು ತೋರುತ್ತದೆ. ಸಂಸ್ಕೃತ ಶ್ಲೋಕದ ಆಶಯ ಅದನ್ನು ಸಮರ್ಥಿಸುವಂತೆ ಅಭಿಪ್ರಾಯವಾಗುವುದು. ಹಾಗಾಗಿ ಇದು ಪ್ರಶಸ್ತಿ ಶಾಸನವಾಗಿದೆ ಎಂದು ಕೆಲವರು ತಿಳಿಯುವುದನ್ನು ಒಪ್ಪುವುದು ಕಷ್ಟವಾಗುತ್ತದೆ; ಬಹುಶಃ ವೀರಗಲ್ಲು ಆಗಿರುವ ಸಾಧ್ಯತೆಯಿದೆ.

ಶಾಸನದ ಕರ್ತೃ ಯಾರು ಎನ್ನುವುದು ತಿಳಿಯದು. ಲಿಪಿಯ ಆಧಾರವನ್ನು ಸಾಮಾನ್ಯವಾಗಿ ಅವಲಂಬಿಸಿ ಶಾಸನತಜ್ಞರು ಕ್ರಿ.ಶ. ಸು. ೭೦೦ರಲ್ಲಿ ಈ ಶಾಸನ ಹುಟ್ಟಿರಬೇಕೆಂದು ತಿಳಿದಿದ್ದಾರೆ.

**ಈ ಶಾಸನದ ಮಹತ್ತ್ವವನ್ನು ಹಲವು ವಿಧಗಳಲ್ಲಿ ಗುರುತಿಸಬಹುದಾಗಿದೆ :**

೧. ಕರ್ನಾಟಕದ ಪ್ರಾಚೀನ ಜನಜೀವನದಲ್ಲಿ ವೀರ ಜೀವನಕ್ಕೆ ತುಂಬ ಪ್ರಾಶಸ್ತ್ಯವಿದ್ದುದನ್ನು ಶಾಸನ ಎತ್ತಿ ಹೇಳುತ್ತದೆ.

೨. ವೀರ ಮತ್ತು ಸಜ್ಜನಿಕೆ ಎರಡು ಗುಣಗಳೂ ಒಬ್ಬನೇ ವ್ಯಕ್ತಿಯಲ್ಲಿ ಮೇಳವಿಸಿ ಬದುಕಿನ ಆದರ್ಶವನ್ನು ಸಾರುತ್ತದೆ.

೩. ವೀರನಾದವನು ತನ್ನ ಬದುಕಿನಲ್ಲಿ ಶಿಷ್ಟಜನರ ರಕ್ಷಣೆ, ದುಷ್ಟಜನರ ಶಿಕ್ಷೆ ಇವನ್ನು ರೂಢಿಸಿಕೊಂಡು ಸಾಮಾಜಿಕ ಹಿತವನ್ನು ಸಾಧಿಸುತ್ತಿದ್ದನು.

೪. ವೀರನಾದವನು ತನ್ನ ನಡೆ ನುಡಿಗಳಲ್ಲಿ ಸತ್ತ್ವಗುಣ ಸ್ವಾಭಿಮಾನಗಳಿಗೆ ತುಂಬ ಬೆಲೆ ಕೊಡುತ್ತಿದ್ದನು. ತನ್ನ ಪ್ರಾಣಕ್ಕಿಂತ ಮಾನವೇ ದೊಡ್ಡದು ಎಂದು ನಂಬಿ ನಡೆದುಕೊಳ್ಳುತ್ತಿದ್ದನು.

೫. ಶಾಸನ ಯಾವುದೇ ಅರಸನ ಆಳ್ವಿಕೆಗೆ ನೇರವಾಗಿ ಸಂಬಂಧಪಡದೆ, ರಾಜಕೀಯ ವಿದ್ಯಮಾನವನ್ನು ಕುರಿತಿರದೆ, ವೀರನೊಬ್ಬನ ಬದುಕಿನ ಸಾಮಾಜಿಕ ಜೀವನದ ಸಂಗತಿಯನ್ನು ಸ್ವತಂತ್ರವಾಗಿ ಕುರಿತಿದೆ.

೬. ಶಾಸನವು ಮೇಲುಮಟ್ಟದ ಕನ್ನಡ ಭಾಷಾ ಸೌಷ್ಠವವನ್ನೂ ಸೌಂದರ್ಯವನ್ನೂ ಪ್ರಕಟಿಸುತ್ತದೆ.

೭. ಕನ್ನಡ ಭಾಷೆಯ ದೇಶ್ಯ ಛಂದಸ್ಸಿನ ತ್ರಿಪದಿಗಳಲ್ಲಿ ಶಾಸನ ರಚಿತವಾಗಿದ್ದು, ಸಂಸ್ಕೃತ ಛಂದಸ್ಸುಗಳ ವೃತ್ತ ರಚನೆಯ ಶಾಸನಗಳ ನಡುವೆ ತನ್ನ ಪ್ರತ್ಯೇಕತೆಯನ್ನು ಅದು ಮರೆದಿದೆ.

೮. ಕನ್ನಡದ ಪ್ರಾಚೀನತಮ ತ್ರಿಪದಿಗಳನ್ನು ಈ ಶಾಸನ ಒಳಕೊಂಡಿದೆ. ಮುಂದೆ ಇಂತಹ ಶಾಸನಗಳ ರಚನೆಗೆ ಈ ಶಾಸನ ಮಾರ್ಗದರ್ಶನ ಮಾಡಿದೆ.

೯. ಈ ಶಾಸನ ವ್ಯಕ್ತಿ ಚಿತ್ರದ ತನಿಯಾದ ವಸ್ತುವುಳ್ಳ ವಿಶಿಷ್ಟವಾದ ಶಾಸನವಾಗಿದೆ.

ಈಗ ಶಾಸನದ ಒಂದೊಂದೇ ಅರ್ಥ ಘಟಕವನ್ನು ಎತ್ತಿಕೊಂಡು ಅದರ ಅರ್ಥವನ್ನು ವಿಶ್ಲೇಷಿಸೋಣ.

೧. **ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್**
**ಕಷ್ಟಜನವರ್ಜಿತನ್ ಕಲಿಯುಗ ವಿಪರೀತನ್**

ಶಾಸನದ ಕೇಂದ್ರ ವ್ಯಕ್ತಿ ಕಪ್ಪೆ ಅರಭಟ್ಟ. ಈತ ಒಳ್ಳೆಯವರಿಗೆ ಪ್ರಿಯನಾದವನು, ಕೆಟ್ಟ ಜನರಿಗೆ ಬೇಡವಾದವನು. ಶಬ್ದಾನ್ವಯ ಇರುವಂತೆಯೇ ಗ್ರಾಹ್ಯವಾಗಬಹುದು. ಇಲ್ಲವೆ 'ಕಲಿಯುಗ ವಿಪರೀತನ್' ಎಂಬುದು ಮುಂದಿನ ಸಾಲುಗಳಲ್ಲಿ ಶಾಸನ ವ್ಯಕ್ತಿಯ ಹೆಸರಿಗೆ ಪರ್ಯಾಯವಾಗಿ ಬರುವ ಒಂದು ಅನ್ವರ್ಥನಾಮವೋ ಬಿರುದಿನಂತಹ ಹೆಸರೋ ಆಗಿ ಕಾಣಿಸಿಕೊಂಡಿರುವುದರಿಂದ ಕಲಿಯುಗ ವಿಪರೀತನ್ ಕಪ್ಪೆ ಅರಭಟ್ಟನ್ ಎಂದು ಮುಂತಾಗಿ ಆಗಬಹುದು.

ಆಗ ಅರ್ಥ : ಕಲಿಯುಗ ವಿಪರೀತನಾದ ಕಪ್ಪೆ ಅರಭಟ್ಟನು ಒಳ್ಳೆಯವರಿಗೆ ಬೇಕಾದವನು, ಕೆಟ್ಟವರಿಗೆ ಬೇಡವಾದವನು ಎಂದಾಗುತ್ತದೆ. ದಿಟವಾಗಿ ಈ ಅರ್ಥ ಮುಂದಿನ ಶಾಸನ ವಸ್ತುವಿಗೆ ಪಲ್ಲವಿಯಂಥ ಮಾತು. ಇದರ ವಿಸ್ತರಣೆಯೇ ಮುಂದಿನ ಮಾತು ಆಶಯಗಳು.

ಇಲ್ಲಿ ಎರಡು ಸಂಗತಿಗಳನ್ನು ಚರ್ಚಿಸಬೇಕು ೧. 'ಕಪ್ಪೆ ಅರಭಟ್ಟನ್' ಎಂಬ ಹೆಸರು ೨. 'ಕಲಿಯುಗ ವಿಪರೀತನ್' ಎಂಬ ಗುಣ ವಿಶೇಷಣದ ಅರ್ಥ.

## 123.4 ಕಪ್ಪೆ ಅರಭಟ್ಟನ್

ಜೆ.ಎಫ್. ಫ್ಲೀಟ್ ಮೊದಲುಗೊಂಡು ಎಲ್ಲರೂ ಈ ಶಬ್ದವನ್ನು ಕಪ್ಪೆ + ಅರಭಟ್ಟನ್ ಎಂದೇ ವಿಭಾಗ ಮಾಡಿ ಗ್ರಹಿಸಿದ್ದಾರೆ. ಆದರೆ ಅರಭಟ್ಟನ್ ಎಂಬ ಹೆಸರು ಈವರೆಗೆ ತಿಳಿದಂತೆ ಯಾವುದೇ ಕನ್ನಡ ಶಾಸನದಲ್ಲಾಗಲಿ, ಸಾಹಿತ್ಯ ಗ್ರಂಥದಲ್ಲಾಗಲಿ ಕಂಡುಬಂದಿಲ್ಲ. ಇಲ್ಲಿ ಎರಡು ಅರ್ಥಘಟಕಗಳಿವೆ : ಅರ + ಭಟ್ಟನ್. ಭಟ್ಟ ಎಂಬುದು ಪರಿಚಿತ ಸಂಸ್ಕೃತ ಶಬ್ದ. ರಾಜಕುಮಾರರ ಅಥವಾ ರಾಜಮನೆತನದವರ ಗೌರವಾರ್ಥವಾಗಿ ಸೇರುವ ಒಡೆಯ / ಸ್ವಾಮಿ, ಬಹುಶ್ರುತನಾದ ಬ್ರಾಹ್ಮಣನ ಹೆಸರಿನ ಕೊನೆಗೆ ಬರುವ ಬಿರುದಿನಂತಹ ಮಾತು, ಮಿಶ್ರ ವರ್ಣದಲ್ಲಿ (ಎಂದರೆ ಕ್ಷತ್ರಿಯನಿಗೆ ವಿಪ್ರಕನ್ಯೆಯಲ್ಲಿ) ಹುಟ್ಟಿದ ಹೊಗಳು ಭಟ್ಟ ಹೀಗೆ ಮೂರು ಅರ್ಥಚ್ಛಾಯೆಗಳು ಈ ಶಬ್ದಕ್ಕಿವೆ. ಇನ್ನು ಪೂರ್ವಪದ 'ಅರ' ಸಂಸ್ಕೃತದಲ್ಲಿದ್ದರೂ ಆದರ ಅರ್ಥಗಳಾವುವೂ ಪ್ರಸ್ತುತಕ್ಕೆ ಹೊಂದುವುದಿಲ್ಲ. ಜೈನರ ೧೮ ನೆಯ ತೀರ್ಥಂಕರ ಅರ ಎಂಬವನಿದ್ದಾನೆ. ಆದರೆ ಈ ಶಬ್ದ 'ಭಟ್ಟ' ಶಬ್ದದ ಜೊತೆಗೂಡಿ ಬರುವುದು ಬಹುಶಃ ಅಸಂಭವ. 'ಅರಸು' ಎಂಬುದು ಸಮಾಸದಲ್ಲಿ ಪೂರ್ವಪದವಾಗಿ ಬಂದಾಗ ಅರಗುವರ, ಅರನೇಱಿಲ್ ಎಂಬ ಶಬ್ದಗಳು ಸಾಧ್ಯವಾಗಬಹುದು; ಹಾಗೆಯೇ ಉತ್ತರಪದವಾದಾಗ ಕನ್ನರ (ಕನ್ನ + ಅರಸು), ಗೋವಿಂದರ (ಗೋವಿಂದ + ಅರಸು) ಎಂದು ಆಗಬಹುದು. ಎರಡನೆಯದು ಹೆಚ್ಚು ಸಂಭವನೀಯ ಎಂದಾದರೆ, ಕಪ್ಪೆ ಅರಸು, ಕಪ್ಪೆ ಅರ + ಭಟ್ಟನ್ (ಎಂದರೆ, ಕಪ್ಪೆ ಅರನೆಂಬ ಭಟ್ಟ) ಎಂದು ಈ ಹೆಸರಿಗೆ ಅರ್ಥವನ್ನು ಊಹಿಸಬಹುದು. ಆದರೆ ಕಪ್ಪೆ ಅರಸು ಅಥವಾ ಕಪ್ಪೆಯರ ಎಂಬ ಮಾತಿನಲ್ಲಿ ಕಪ್ಪೆ ಶಬ್ದ ಏನು ಹೇಳುವುದೋ, ತಿಳಿಯದು. ಕರ್ನಾಟಕದ ಪ್ರಾಚೀನ ಶಾಸನಗಳಲ್ಲಿ ಕಪ್ಪಣಭಟ್ಟ ಎಂಬಂತಹ ಮಾತೇನೋ ಉಂಟು. ಕಪ್ಪೆಯಣ್ಣ > ಕಪ್ಪಣ ಎಂದೋ ಕಂಪಣ (< ಕಂಪ + ಅಣ್ಣ) > ಕಪ್ಪಣ ಎಂದೋ ನಿಷ್ಪತ್ತಿಯನ್ನು ನಿರ್ಧರಿಸುವುದು ಕಷ್ಟ.

ಈಚೆಗೆ ಇನ್ನೂ ಎರಡು ಸಲಹೆಗಳು ವ್ಯಕ್ತವಾಗಿವೆ : ೧. ಈ ಹೆಸರು ಕಪ್ಪೆ + ಅರಭಟ್ಟ ಅಲ್ಲ. ಕಪ್ಪೆಯರ + ಭಟ್ಟ ಎಂದು ಪ್ರೊ. ತೀ.ನಂ.ಶ್ರೀಕಂಠಯ್ಯನವರು ಸೂಚಿಸುತ್ತಾರೆ. ಇದು ನಿಜವಾದರೆ 'ಕಪ್ಪೆಯರ' ಎಂಬುದು 'ಕಪ್ಪೆಯರಸ' ಎಂಬುದರ ಸಂಕ್ಷಿಪ್ತ ರೂಪವೆಂದು ಭಾವಿಸಬೇಕಾಗುತ್ತದೆ" (ಎಂ. ಚಿದಾನಂದ ಮೂರ್ತಿ, 'ಸಂಶೋಧನ ತರಂಗ', ಸಂ.೨, ಪು. ೨೨೫).

೨. " 'ಕಪ್ಪೆ ಅರ'ಎಂಬುದು ವಿಸಂಧಿ ರೂಪದ ಷಷ್ಠ್ಯಂತಪದವಾಗಿರಲು ಸಾಧ್ಯವಿದೆ. ಹಾಗಿದ್ದರೆ ಇದರ ಶುದ್ಧ ರೂಪ 'ಕಪ್ಪೆಯರ' ". ಹೀಗೆ ವಿಚಾರ ಮಾಡುವ ಎಂ.ಎಂ. ಕಲಬುರ್ಗಿ ಅವರು ಪ್ರತ್ಯೇಕವಾಗಿ ಈ ಪದದ ಬಗ್ಗೆಯೇ ಬರೆದ ಒಂದು ಲೇಖನದಲ್ಲಿ (ಶಾಸನ ವ್ಯಾಸಂಗ, ಸಂಪುಟ ೨, ೧೯೭೫, ಪು. ೧-೬), 'ಕಪ್ಪೆಯರ ಚಾವುಣ್ಣಯ್ಯ' (ಸೌಇಇ., ೧೫-೫೩, ೨೫೩; ೧೧೫೭),

'ಕಪ್ಪೆಯರಾಹಾರದಾನವಿನೋದಂ' (ಸೌಇಇ., ೯-೧, ೨೫೩; ೧೧೮೪) ಎಂಬ ಶಾಸನ ಪ್ರಯೋಗಗಳನ್ನು ಹುಡುಕಿತೆಗೆದು, ಈ ಶಬ್ದ ಯಾವುದಾದರೂ "ಮನೆತನ ಇಲ್ಲವೆ ವರ್ಗವನ್ನು ಸೂಚಿಸುತ್ತಿರಬಹುದು" ಎಂದು ಸಲಹೆ ಮಾಡುತ್ತಾರೆ. ಅಲ್ಲದೆ 'ಕಪ್ಪಡಿಗಳು' ಎಂಬ ಶಬ್ದವನ್ನೂ ಈ ಸಂದರ್ಭದಲ್ಲಿ ಜೊತೆಗೂಡಿಸಿಕೊಂಡು ಕಪ್ಪೆ ಅರಭಟ್ಟನ ಕಪ್ಪಡಿಗಳ ವರ್ಗಕ್ಕೆ ಸಂಬಂಧಿಸಿದ ಒಬ್ಬ ಭಟ್ಟನೋ ಅರಸು ಭಟ್ಟನೋ ಆಗಿರಬಹುದು ಎಂದೂ ವಿಚಾರ ಮಾಡುತ್ತಾರೆ.

ಇಷ್ಟಾಗಿ 'ಕಪ್ಪೆ ಅರಭಟ್ಟ' ಶಬ್ದದ ವಿಚ್ಛೇದವೂ ಆಶಯವೂ ಅನಿರ್ದಿಷ್ಟವಾಗಿಯೇ ಉಳಿದಿದೆ ಎನ್ನಬೇಕು.

## 123.5 ಕಲಿಯುಗ ವಿಪರೀತನ್

### 123.5.1 ದೋಷಾಕರ ಕಲಿಯುಗಮಂ ನಿರ್ಮಲಂ ಮಾಡಿದನ್

ಈ ಪ್ರಶಸ್ತಿಸೂಚಕ ಶಬ್ದ ವಾಚ್ಯಾರ್ಥ 'ಕಲಿಯುಗಕ್ಕೆ ವಿರುದ್ಧನಾದವನು ಎಂದು. ಹಾಗೆ ವಿರುದ್ಧನಾಗಿರುವುದು ಗುಣವೋ ದೋಷವೋ? ಗುಣವೇ, ದೋಷವಲ್ಲ. ಇದಕ್ಕೆ ಸಂಸ್ಕೃತ ಕನ್ನಡ ಶಾಸನಗಳಲ್ಲೂ ಗ್ರಂಥಗಳಲ್ಲೂ ಸಾಕ್ಷ್ಯಗಳು ದೊರೆಯುತ್ತವೆ. ಉದಾಹರಣೆಗೆ ಕೆಲವನ್ನು ನೋಡಬಹುದು :

೧. **"ದೋಷಾಕರ ಕಲಿಯುಗಮಂ ನಿರ್ಮಲಂ ಮಾಡಿದನ್"**
(ಇಂಡಿಯನ್ ಆಂಟಿಕ್ವೆರಿ, ೧೦, ೧೨೭, ಸು. ೧೦೮೦)

೨. **"ಕಲಿಕಾಲೋತ್ಥಕಳಂಕಮಂ ತೆರಳೆ ನೂಂಕುತ್ತಿರ್ಪುದು"**
(ಎಪಿಗ್ರಾಫಿಯ ಇಂಡಿಕ, ಸಂ. ೧೩; ೪೧; ೧೧೧೨)

೩. **"ಸದ್ಧರ್ಮಶತ್ರುಂ ಕಲಿಕಾಲರಾಜಂ ಜಿತ್ವಾ ವ್ಯವಸ್ಥಾಪಿತ ಧರ್ಮವೃತ್ತ್ಯಾ"**
(ಎಪಿಗ್ರಾಫಿಯ ಕರ್ನಾಟಕ, ಸಂ.೨ (೧೯೭೩ರ ಮುದ್ರಣ), ೧೫೮ (೧೨೯), ೧೧೨೦),

೪. **"ವೇದದೊಳೋದಿದಾಯು ನಿನಗಕ್ಕೆ ಚಿರಂ ಕಲಿಕಾಲಸೂದನಾ"**
(ನಾಗವರ್ಮ, 'ಕಾವ್ಯಾವಲೋಕನ', ಪದ್ಯ ೪೦೧)

೫. **"ಕಲಿಕಾಲಕರ್ದ್ದಮ ಬೃಹಜ್ಜಂಘಾಳನ್"**
(Ed. K.G. Kundanagar, Inscriptions in Northern Karnataka and Kolhapur State, 1939, Kolhapur)

ಇಂತಹ ಸಾಕ್ಷ್ಯಗಳು ಇನ್ನೂ ದೊರೆಯಬಹುದು. ಕಲಿಯುಗ ದೂಷ್ಯವಾದ್ದು, ಅದನ್ನು ಶುದ್ಧ ಮಾಡಬೇಕು ಅಥವಾ ನಿಗ್ರಹಿಸಬೇಕು ಎಂಬುದೇ ಸಜ್ಜನರ ಕಾಂಕ್ಷೆ. ಈ ಕಾಂಕ್ಷೆ ಈಡೇರುವುದು ಹೇಗೆ ? ಕಲಿಯುಗದ ದೋಷಯುಕ್ತ ನಡೆವಳಿಕೆಯನ್ನು ತ್ಯಜಿಸುವುದರಿಂದ, ಅದಕ್ಕೆ ವಿರುದ್ಧವಾಗಿ ನಡೆಯುವುದರಿಂದ. ಹಾಗೆ ನಡೆಯುವವನನ್ನು ಪ್ರಸ್ತುತ ಶಾಸನದಲ್ಲಿ 'ಕಲಿಯುಗ ವಿಪರೀತನ್' ಎಂದಿದೆ. ಬೇರೆ ಶಾಸನಗಳಲ್ಲಿ ಅಂಥವನನ್ನು "ಕಲಿಯಂ ಮಾಂಕರಿಸಿತ್ತು ತನ್ನ ಚರಿತಂ" (ಎಕ. ಸೊರಬ. ೩೩೦; ೧೪೬೫) "ಕಲಿಕಾಲ ಪ್ರತಿಪಕ್ಷ ಚಾರುಚರಿತಂ" ಎಂದೋ (ಎಪಿಗ್ರಾಫಿಯ ಇಂಡಿಕ, ೧೩; ೪೧, ಕ್ರಿ.ಶ. ೧೧೧೨), "ಕೃತಯುಗ ಚರಿತಂ" ಎಂದೋ (ಇಂಡಿಯನ್ ಆಂಟಿಕ್ವೆರಿ, ೧೦; ೧೨೭, ಸು. ೧೦೮೦) ಕರೆದಿರುವುದುಂಟು. ಆದ್ದರಿಂದ 'ಕಲಿಯುಗ ವಿಪರೀತನ್' ಎಂಬುದು ಒಟ್ಟಿನಲ್ಲಿ ಸತ್ಪುರುಷ

ಅಥವಾ ಧರ್ಮಿಷ್ಠ ಎಂಬ ಅರ್ಥವನ್ನು ಕೊಡುವ ಮಾತು. ಪ್ರಸ್ತುತ ಶಾಸನಕ್ಕೆ ಅನ್ವಯಿಸಿದರೆ, ಇದು ಕಪ್ಪೆ ಅರಭಟ್ಟನಿಗೆ ವಿಶೇಷಿಸಿ, ಹೇಳಿರುವ ಆ ಅರ್ಥದ ಒಂದು ಬಿರುದು. "ಕೃತಯುಗಚರಿತಂ ತ್ರ್ಯಂಬಕನ್" ಎಂಬಂತೆ "ಕಲಿಯುಗವಿಪರೀತಂ ಕಪ್ಪೆ ಅರಭಟ್ಟನ್" ಎಂಬುದಾಗಿ ಅನ್ವಯ.

### 123.5.2 ಎರಡನೆಯ ಅರ್ಥಘಟಕ

ಎರಡನೆಯ ಅರ್ಥಘಟಕ ಒಂದು ಸಂಸ್ಕೃತ ಪದ್ಯ

**ವರಂ ತೇಜಸ್ವಿನೋ ಮೃತ್ಯುಃ ನ ತು ಮಾನಾವಖಂಡನಮ್ |**
**ಮೃತ್ಯುಃ ತತ್ಕ್ಷಣಿಕೋ ದುಃಖಂ ಮಾನಭಂಗಂ ದಿನೇ ದಿನೇ ||**

ಫ್ಲೀಟ್ ಅರ್ಥ ಸರಿ. "ತೇಜಸ್ವಿಯಾದವನಿಗೆ ಸಾವು ಲೇಸು, ಆದರೆ ಮಾನಭಂಗವಲ್ಲ. ಸಾವಿನದು ಆ ಕ್ಷಣದ್ದು, ಮಾನಭಂಗದ ದುಃಖ ಪ್ರತಿದಿನದ್ದು".

ಇದು ಕಪ್ಪೆ ಅರಭಟ್ಟನು ಏನೋ ಅಪಮಾನವನ್ನು ಅನುಭವಿಸಿ, ಆ ಅಪಮಾನವನ್ನು ತಾಳಿಕೊಳ್ಳಲಾಗದೆ ಆತ್ಮಹತ್ಯೆ ಮಾಡಿಕೊಂಡಂತೆ ತೋರುವ ಸಂದರ್ಭವನ್ನು ಧ್ವನಿಸುತ್ತದೆ ಎಂಬುದಾಗಿ ಆರ್.ಎಸ್. ಪಂಚಮುಖಿ ಊಹಿಸಿದ್ದಾರೆ (Karnatak Inscriptions, Vol. I, 1941, p.11). ಕಪ್ಪೆ ಅರಭಟ್ಟನು ಸತ್ತನೇ, ಹೇಗೆ ಸತ್ತನು ಎನ್ನುವುದು ಶಾಸನದಿಂದ ಸ್ಪಷ್ಟವಿಲ್ಲ. ಮಹಾಕೂಟಕ್ಕೆ ಹೋಗುವ ದಾರಿಯಲ್ಲಿ ಸಿಬಾರಡೋಣಿಯ ಬಂಡೆಯೊಂದರ ಮೇಲೆ ಪ್ರತ್ಯೇಕವಾಗಿ ಈ ಶ್ಲೋಕವೊಂದನ್ನೇ ಕೆತ್ತಲಾಗಿದೆ.

**ಅನಿತ್ಯಮಧ್ರುವಂ ಪ್ರಾಣಂ ಮಾನಮಾಚಂದ್ರಾರ್ಕತಾರಕಂ**
**ಪ್ರಾಣಮೇವ ಪರಿತ್ಯಾಗೇ ಮಾನಮೇವ ಸುರಕ್ಷಿತಂ ||**

ಎಂಬ ಶ್ಲೋಕವು ೧೧೪೦ರ ಒಂದು ಶಾಸನದಲ್ಲಿದ್ದು (ಎಕ. vi, ಸಿಎಂ.೧೨೨), ಸಂವಾದಿಯಾದ ಅರ್ಥವನ್ನು ಒಳಕೊಂಡಿವೆ.

### 123.5.3 ಮೊದಲನೆಯ ತ್ರಿಪದಿ

**ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್**
**ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್**
**ಮಾಧವನೀತನ್ ಪೆಱನಲ್ಲ ||**

ಫ್ಲೀಟ್ ಮತ್ತು ಅನಂತರದ ವಿದ್ವಾಂಸರು ಎಲ್ಲರೂ ಈ ಪದ್ಯಕ್ಕೆ ಒಂದೇ ಬಗೆಯಾಗಿ ಅರ್ಥ ಮಾಡಿಲ್ಲ. ಇದು ವಿಚಾರಣೀಯ.

ಇಲ್ಲಿ ಉದಾಹರಣೆಗೆ ಒಂದು ಆಶಯವನ್ನು ಉದ್ಧರಿಸಬಹುದಾಗಿದೆ :

"ಒಳ್ಳೆಯವರಿಗೆ ಒಳ್ಳೆಯವನು. ಮಧುರಗುಣ ಉಳ್ಳವರಿಗೆ ಮಧುರವಾಗಿ ವರ್ತಿಸುವವನು. ತೊಂದರೆಪಡಿಸುವ ದುಷ್ಟರಿಗೆ ದುಷ್ಟರಂತೆ ಕಾಣಿಸುವವನು. ಈತನು ಅಸಾಮಾನ್ಯನಾದ ಮಾಧವನೇ ಆಗಿರುವನು". ('ಕರ್ನಾಟಕದ ಪರಂಪರೆ' ಸಂಪುಟ ೧, ೧೯೯೨, ಮುಖಪುಟ).

ಇದು ತೃಪ್ತಿಕರವಾದ ಅರ್ಥವಲ್ಲ ಎನ್ನುವುದು ನೋಡುತ್ತಿದ್ದಂತೆಯೇ ತಿಳಿಯುತ್ತದೆ.

## 123.6 ಹೊಸದಾಗಿ ವಿಚಾರ ಮಾಡಬಹುದು

ಈಗ ಹೊಸದಾಗಿ ವಿಚಾರ ಮಾಡಬಹುದು :

ಅನ್ವಯ : ಸಾಧುಗೆ ಸಾಧು; ಮಾಧುರ್ಯಂಗೆ ಮಾಧುರ್ಯನ್; ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್ ಈತನ್ ಮಾಧವನ್; ಪೆಱನ್ ಅಲ್ಲ.

ಅರ್ಥ :

### 123.6.1 ಸಾಧುಗೆ ಸಾಧು

"ಸಾಧುವಾದ ವಿಷಯದಲ್ಲಿ ಈತ ಸಾಧುವಾಗಿ ನಡೆದುಕೊಳ್ಳುತ್ತಾನೆ".

'ಸಾಧು'ವಿಗೆ ಒಳ್ಳೆಯ, ಯೋಗ್ಯ, ತಕ್ಕ, ಉತ್ತಮ, ನಿರುಪದ್ರವಿ ಹೀಗೆ ಅರ್ಥಚ್ಛಾಯೆಗಳಿವೆ. ಯಾವುದೊಂದನ್ನು ಬೇಕಾದರೂ ಪ್ರಸ್ತುತಕ್ಕೆ ಗ್ರಹಿಸಬಹುದು. ಇಲ್ಲಿ ವಿದ್ವಾಂಸರಲ್ಲಿ ಏಕಾಭಿಪ್ರಾಯವಿದೆ.

### 123.6.2 ಮಾಧುರ್ಯಂಗೆ ಮಾಧುರ್ಯನ್

ಇಲ್ಲಿ ಅಂಗೀಕೃತವಾದ ಆಶಯ "ಮಧುರ ಗುಣವುಳ್ಳವನ ವಿಷಯದಲ್ಲಿ ಮಧುರ ಗುಣವುಳ್ಳವನು" ಎಂಬುದಾಗಿದೆ. ಆದರೆ ಇಲ್ಲಿ ವಿಚಾರಕ್ಕೆ ಕೊಂಚ ಅವಕಾಶವುಂಟು.

'ಮಾಧುರ್ಯನ್' = ಮಧುರ ಗುಣವುಳ್ಳವನು ಎನ್ನುವುದು ಎಷ್ಟರಮಟ್ಟಿಗೆ ಸರಿ ? ಮಧುರನೆಂಬ ಗುಣವಾಚಕದ ಭಾವನಾಮರೂಪ 'ಮಾಧುರ್ಯಮ್' ಎಂದು ಆಗುವುದು ಸಹಜ, ವತ್ಸಲ > ವಾತ್ಸಲ್ಯಮ್, ಪವಿತ್ರ > ಪಾವಿತ್ರ್ಯಮ್ ಎಂದು ಮುಂತಾಗಿ ಆಗುವ ಹಾಗೆ. ಆಗ ಇದು ನಪುಂಸಕ ಲಿಂಗದ ಪದ. ಆದ್ದರಿಂದ ಮಧುರ ಗುಣವಿರುವವನು 'ಮಾಧುರ್ಯನ್' ಅಲ್ಲ 'ಮಧುರನ್' ಆಗುತ್ತಾನೆ; ವತ್ಸಲ ಗುಣವುಳ್ಳವವನು ವತ್ಸಲನ್, ಪವಿತ್ರಗುಣವುಳ್ಳವನು ಪವಿತ್ರನ್ ಆಗುವ ಹಾಗೆ. ಆದಕಾರಣ, 'ಮಾಧುರ್ಯನ್' ಶಬ್ದಕ್ಕೆ ಬೇರೆಯೇ ಅರ್ಥವಿರಬೇಕೆಂದು ಸಂಶಯಹುಟ್ಟುವುದು. ಈ ಶಬ್ದ ಮಹಾ + ಧುರ್ಯನ್ = ಮಾಧುರ್ಯನ್ ಎಂದು ಆಗಿರುವಂತೆ ತೋರುತ್ತದೆ. ಮಹಾ ಮತ್ತು ಧುರ್ಯ ಎಂಬವು ಪರಿಚಿತ ಸಂಸ್ಕೃತ ಶಬ್ದಗಳು. ಇವು ಕನ್ನಡ ಜಾಯಮಾನವನ್ನು ಅನುಸರಿಸಿ ಒಂದು ಸಮಾಸಪದವೂ ಸಮಸಂಸ್ಕೃತ ಪದವೂ ಆಗಿ 'ಮಾಧುರ್ಯನ್' ಎಂಬ ರೂಪದಲ್ಲಿ ಈ ಶಾಸನದಲ್ಲಿ ಬಳಕೆಯಾಗಿದೆ. ಉದಾಹರಣೆಗೆ ಮಹಾ + ದೇವನ್ = ಮಾದೇವನ್, ಮಹಾ + ಕಾಳಿ = ಮಾಕಾಳಿ, ಮಹಾ + ದಾನಿ = ಮಾದಾನಿ, ಮಹಾ + ಶೌರ್ಯನ್ = ಮಾಶೌರ್ಯನ್, ಮಹಾ + ಜನಂ = ಮಾಜನಮ್, ಮಹಾ + ಪುರುಷನ್ = ಮಾಪುರುಷನ್ ಇತ್ಯಾದಿ ಶಬ್ದಗಳನ್ನು ನೋಡಬಹುದು. ಈ ಉದಾಹರಣೆಗಳು ಕೇಶಿರಾಜನ (ಸು. ೧೨೬೦) 'ಶಬ್ದಮಣಿದರ್ಪಣ'ವೆಂಬ ಹಳಗನ್ನಡ ವ್ಯಾಕರಣದೊಳಗಿನವು. ಇಲ್ಲಿ 'ಮಹತ್' ಶಬ್ದ 'ಮಾ' ಎಂದು ಆದೇಶಗೊಂಡು ಪೂರ್ವಪದವಾಗಿರಲು, ಪರದಲ್ಲಿ ಸಂಸ್ಕೃತ ಪದ ಬಂದರೂ ದೋಷವಿಲ್ಲ ಎಂಬುದಾಗಿ ಹೇಳಿ ಪೂರ್ವೋಕ್ತವಾದ ಉದಾಹರಣೆಗಳನ್ನು ಅಲ್ಲಿ ಕೊಟ್ಟಿದೆ (ಸಂ. ಡಿ.ಎಲ್. ನರಸಿಂಹಾಚಾರ್, 'ಶಬ್ದಮಣಿದರ್ಪಣಂ', ಸೂ. ೧೮೬, ೩೦೬). ಆದ್ದರಿಂದ ಈ ನಿಯಮಕ್ಕೆ ಅನುಗುಣವಾಗಿ ಮಹಾ + ಧುರ್ಯನ್ = ಮಾಧುರ್ಯನ್ ಕೂಡ ಸಾಧು ರೂಪವೇ, ಮಾದೇವನ್, ಮಾಶೌರ್ಯನ್, ಮಾಪುರುಷನ್ ಇದ್ದ ಹಾಗೆ.

'ಧುರ್ಯ' ಎಂದರೇನು ? ಮುಖ್ಯವಾದ ಕಾರ್ಯಗಳನ್ನು ವಹಿಸಿಕೊಳ್ಳಲು ಸಮರ್ಥನಾದವನು, ಮುಂಚೂಣಿಯಲ್ಲಿರತಕ್ಕವನು, ಅಗ್ರಗಣ್ಯನಾದವನು, ಜವಾಬ್ದಾರಿಯ ಹೊರೆ ಹೊರತಕ್ಕವನು, ನಾಯಕ, ಪ್ರಮುಖ, ಹಿರಿಯ ಮುಂತಾದ ಅರ್ಥಗಳಿವೆ (ಅಪ್ಪೆಯವರ

ಸಂಸ್ಕೃತ - ಇಂಗ್ಲಿಷ್ ನಿಘಂಟು, ಭಾಗ ೨, ಪು. ೮೬೪). ಇವುಗಳಲ್ಲಿ ಯಾವುದಾದರೂ ಒಂದು ಅರ್ಥ ಇಲ್ಲಿ ಕಪ್ಪೆ ಅರಭಟ್ಟನಿಗೆ 'ಮಹತ್' ಶಬ್ದದಿಂದ ವಿಶೇಷಿತವಾಗಿ ಹೇಳಲ್ಪಟ್ಟಿರಬಹುದು. ಇದು ಸರಿಯಾದರೆ, ಶಾಸನದ ವಾಕ್ಯಾಂಶದ ಅರ್ಥ ಹೀಗೆ :

(ಕಪ್ಪೆ ಅರ ಭಟ್ಟನು) ಕಾರ್ಯನಿರ್ವಹಣೆಯ ಸಾಮರ್ಥ್ಯವನ್ನುಳ್ಳ ಅಧಿಕನ ವಿಷಯದಲ್ಲಿ ತಾನೂ ಕಾರ್ಯ ನಿರ್ವಹಣೆಯ ಸಾಮರ್ಥ್ಯವನ್ನುಳ್ಳ ಅಧಿಕನು; ಅಥವಾ ಪ್ರಮುಖರ ನಡುವೆ ತಾನೂ ಪ್ರಮುಖ.

ಮಹಾ + ಧುರ್ಯನ್ = ಮಾಧುರ್ಯನ್ ಎಂಬ ಪದ ವಿಭಾಗದ ಸಾಧ್ಯತೆಯನ್ನು ಮೊದಲು ಮನಗಂಡವರು ವಿದ್ವಾನ್ ಸೇಡಿಯಾಪು ಕೃಷ್ಣ ಭಟ್ಟರು. 'ಕರ್ನಾಟಕ ಇತಿಹಾಸ ದರ್ಶನ' ಎಂಬ ಗ್ರಂಥದಲ್ಲಿಯೂ ಈ ವಿಭಾಗವನ್ನು ತೋರಿಸಿದೆ (ಪುಟ. ೧೧೩೦). ಈಚೆಗೆ 'ಧುರೀಣಾಗ್ರೇಸರ' ಎಂಬರ್ಥದ ಪದವೆಂದು ಸೇಡಿಯಾಪು ಮತ್ತೆ ವಿಶದಪಡಿಸಿದ್ದಾರೆ ('ಕನ್ನಡ ಛಂದಸ್ಸು', ೧೯೮೮, ಪು. ೩೪).

### 123.6.3 ಅರ್ಥ ಸಾಧುತ್ವ

ಮುಂದಿನ ಅಂಶವನ್ನು ಮೂರು ಬಗೆಯಾಗಿ ಅರ್ಥ ಮಾಡುವ ಸಾಧ್ಯತೆ ಇದೆ.

(ಅ) ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್ ; ಈತನ್ ಮಾಧವನ್, ಪೆಱನಲ್ಲ :

ಬಾಧಿಸುವ ಕಲಿಪುರುಷನಿಗೆ ಕಲಿಯುಗದ ನಡೆವಳಿಕೆಗೆ ವಿರುದ್ಧವಾಗಿ ನಡೆಯುವುದರ ಮೂಲಕ ವಿರೋಧಿಯಾದವನು. ಈತನು (ಸಾಕ್ಷಾತ್) ವಿಷ್ಣು, ಬೇರೆಯಲ್ಲ.

(ಆ) ಶಬ್ದಾನ್ವಯ ಮೇಲಿನಂತೆಯೇ, ಆದರೆ ಅರ್ಥ ಹೀಗೆ : ಬಾಧಿಸುವ ಶೂರನಿಗೆ ಈತ ಕಲಿಯುಗ ವಿಪರೀತನು (ಹಾಗೆಂದು ಬಿರುದಾಂಕಿತನಾದ ಅಧಿಕ ಶೂರ); ಈತನು (ಸಾಕ್ಷಾತ್) ವಿಷ್ಣು, ಬೇರೆಯಲ್ಲ.

(ಇ) ಕಲಿಯುಗವಿಪರೀತನ್, ಈತನ್, ಬಾಧಿಪ್ಪ ಕಲಿಗೆ ಮಾಧವನ್, ಪೆಱನಲ್ಲ :

ಕಲಿಯುಗ ವಿಪರೀತನು (ಹಾಗೆಂದು ಬಿರುದಾಂಕಿತನಾದ ಕಪ್ಪೆ ಅರಭಟ್ಟನು), ಈತನು, ಬಾಧಿಸುವ ಕಲಿಗೆ (ಕಲಿಪುರುಷನಿಗೆ ಅಥವಾ ಶೂರನಿಗೆ) ವಿಷ್ಣುವಾದವನು; ಬೇರೆಯಲ್ಲ.

ಸಾಧಾರಣವಾಗಿ ೧ (ಅ) ಮತ್ತು ೨ ನೆಯ (ಆ) ಅರ್ಥಗಳನ್ನು ಇತರರು ಪುರಸ್ಕರಿಸಿರುವುದು ಕಾಣುತ್ತದೆ. ಆದರೆ ಇವುಗಳಲ್ಲಿ ಕೆಲವು ದೌರ್ಬಲ್ಯಗಳಿವೆ. ೩ ನೆಯದು (ಇ) ಸಮರ್ಥನೀಯ. "ಕಲಿಗೆ ಕಲಿಯುಗ ವಿಪರೀತನ್" ಎನ್ನುವಲ್ಲಿ (ಅ) ಪುನರುಕ್ತಿದೋಷವಿದೆ. ಅಲ್ಲದೆ ಶಾಸನ ಸಂದರ್ಭದ ದೃಷ್ಟಿಯಿಂದ ಅಂಥ ನಿರೂಪಣೆ ಅನಾವಶ್ಯಕ, ಇನ್ನು 'ಕಲಿಯುಗ ವಿಪರೀತನ್' ಎಂಬ ಶಬ್ದದ ಧ್ವನ್ಯರ್ಥವನ್ನು ಗಮನಿಸಿದರೆ, "ಶೂರನಿಗೆ ಈತ ಕಲಿಯುಗ ವಿಪರೀತನು" ಎನ್ನುವುದರಲ್ಲಿ (ಆ) ಅರ್ಥದ ಸಾರ್ಥಕತೆಯಿಲ್ಲ ಎನ್ನುವುದ ಸ್ಪಷ್ಟ. ಈಗ ಸಮರ್ಥನೀಯವೆಂದ ಮೂರನೆಯ ಅರ್ಥವನ್ನು (ಇ) ನೋಡೋಣ : ಕಪ್ಪೆ ಅರಭಟ್ಟನ ಶೌರ್ಯ ಗುಣವನ್ನು ಕೀರ್ತಿಸುವುದು ಶಾಸನದ ಮುಖ್ಯೋದ್ದೇಶವೆಂಬುದನ್ನು ಮರೆಯಬಾರದು. ಆದ್ದರಿಂದ ಕಲಿ = ಶೂರ ಎಂದಿಟ್ಟುಕೊಂಡು, ತೊಂದರೆ ಕೊಡುವ ಶೂರನಿಗೆ, ಕಲಿಯುಗ ವಿಪರೀತನು (=ಕಪ್ಪೆಅರಭಟ್ಟನು) ಈತನು, ಸಾಕ್ಷಾತ್ ಮಾಧವ (ಎಂದರೆ ವಿಷ್ಣು)ನೇ ಆಗಿದ್ದಾನೆ, ಬೇರೆ ಯಾರೂ ಅಲ್ಲ ಎಂದು ಅರ್ಥವನ್ನು ಹೇಳುವುದೇ ಸೂಕ್ತ. ವಿಷ್ಣು ಅಸುರಾರಿ ಎನ್ನುವುದು ತಿಳಿಯದೇ ಇಲ್ಲ. ಆಗ ಕಪ್ಪೆ ಅರಭಟ್ಟನು ಶಿಷ್ಟಜನ ರಕ್ಷಕ, ದುಷ್ಟಜನ ಶಿಕ್ಷಕ ಎಂಬರ್ಥದ ಆ ಮೊದಲಿನ ಮಾತಿಗೆ (= ಶಿಷ್ಟಜನಪ್ರಿಯನ್, ಕಷ್ಟಜನವರ್ಜಿತನ್) ಪೋಷಣೆ ದೊರೆತಂತಾಗುತ್ತದೆ.

ಹೀಗೆ ಭಾವಿಸುವುದು ಅಸಹಜವೇನಲ್ಲ. ಏಕೆಂದರೆ, "ಕಲಿಗಳಂಕುಸಂ" (= ವೀರರಿಗೆ ಅಂಕುಶದಂತಿರುವವನು, ವೀರರನ್ನು ನಿಗ್ರಹಿಸುವವನು), "ಕಲಿಗಳ ಮೊಗದ ಕೈ" (= ಶೂರರ ಮುಖದ ಮೇಲೆ ಕೈಯಿಂದ ಹೊಡೆಯುವವನು), "ಕಲಿಗಂಡತೊಂಡಂ"

(= ವೀರಾಧಿವೀರರಿಗೆ ತೊಂಡನಂತಿರುವವನು, ಮಹಾಶೂರು), ಮುಂತಾದ ಬಿರುದುಗಳಂತಹ ಮಾತುಗಳಲ್ಲಿ (ಪ್ರಯೋಗಗಳಿಗೆ ನೋಡಿ : 'ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು', ಪು. ೧೫೯೪ - ೯೫). ಶೂರನಿಗೆ ಪ್ರತಿಶೂರನು ಮಲೆತು ನಿಲ್ಲುವ ಸಂದರ್ಭಗಳ ಸೂಚನೆಯಿರುವುದು ಸ್ಪಷ್ಟ. ಆದ್ದರಿಂದ ಪ್ರಸ್ತುತ ಶಾಸನದಲ್ಲಿ 'ಬಾಧಿಪ್ಪ ಕಲಿ' ಕಲಿ ಪುರುಷನಲ್ಲ, ಹುರುಡಿಸಿ ತೊಂದರೆ ಕೊಡುವ ಶೂರ ಎಂದು ತಿಳಿಯಬಹುದು (ಕಸಾಪ ನಿಘಂಟುವಿನಲ್ಲಿ 'ಕಲಿಪುರುಷ' ಎಂಬುದಾಗಿ ಅರ್ಥ ಹೇಳಿರುವುದು ತೃಪ್ತಿಕರವಲ್ಲ).

ಇಲ್ಲಿ ಸೇಡಿಯಾಪು ಕೃಷ್ಣಭಟ್ಟರು ವಿಚಾರ ಮಾಡಿರುವುದನ್ನೂ ಕೊಂಚ ಪ್ರಸ್ತಾವಿಸಬಹುದಾಗಿದೆ. ಅವರು ೨ - ೩ ನೆಯ ಪದ್ಯಗಳಲ್ಲಿ 'ಕಲಿಗೆ ವಿಪರೀತ'ನ್ ಎಂಬ ಮಾತು ಬಂದಿರುವುದನ್ನು ಲಕ್ಷಿಸಿ ೧ ನೆಯ ಪದ್ಯದಲ್ಲಿ ಸಹ ಪಾಠ

ಬಾಧಿಪ್ಪ ಕಲಿಗೆ ವಿಪರೀತನ್ | ಕಲಿಯುಗ
ಮಾಧವನೀತನ್ ಪೆಱನಲ್ಲ ||

ಎಂಬುದಾಗಿ ಪರಿಷ್ಕರಿಸಬೇಕೆಂದು ಸಲಹೆ ಮಾಡಿದ್ದಾರೆ (ಕನ್ನಡ ಛಂದಸ್ಸು, ೧೯೮೮, ಪು. ೩೩-೩೪ ಅಡಿಟಿಪ್ಪಣಿ). ಅಲ್ಲದೆ ಮುಂದೆ ವಿಚಾರ ಮಾಡುತ್ತ 'ಕಲಿಯುಗವಿಪರೀತನ್' ಎಂಬ ಪದಕ್ಕೆ ಅರ್ಥ ಸಾಮಂಜಸ್ಯವಿಲ್ಲವೆಂದು ಇನ್ನೂ ಕೆಲವು ಪಾಠ ವ್ಯತ್ಯಾಸಗಳನ್ನು ಸಲಹೆ ಮಾಡುತ್ತಾರೆ. ಇದೆಲ್ಲ ಅನಾವಶ್ಯಕ. ಶಿಲಾ ಶಾಸನದ ಪಾಠದಲ್ಲಿ ಇಷ್ಟೆಲ್ಲ ಪದಗಳ ಸ್ಥಾನಚ್ಯುತಿಯನ್ನು ಊಹಿಸುವುದು ಕಷ್ಟ. ಅಲ್ಲದೆ 'ಕಲಿಯುಗ ವಿಪರೀತನ್' ಶಬ್ದವನ್ನು 'ಕೃತಯುಗ ಚರಿತನ್' ಇಂತಹ ಶಬ್ದಗಳೊಂದಿಗೆ ಇಟ್ಟು ಹೋಲಿಸಿ ನೋಡಿದರೆ, ಅದರಲ್ಲಿ ಅರ್ಥ ಸಾಮಂಜಸ್ಯದ ತೊಡಕೇನೂ ಇರುವುದಿಲ್ಲ. ಮೇಲೆ ನಾವು ಸೂಚಿಸಿರುವ ಅರ್ಥ (ಇ) ಸಂಗತವಾಗಿಯೇ ಇದೆ. ಜಿ. ವೆಂಕಟಸುಬ್ಬಯ್ಯನವರು ತಮ್ಮ ಒಂದು ಬರಹದಲ್ಲಿ (ಸಾಧನೆ, ೭-೪, ೧೯೭೮) "ಬಾಧಿಪ್ಪ ಕಲಿಗೆ ಕಲಿ ಯುಗವಿಪರೀತನ್" ಎಂಬುದಾಗಿ ವಿಭಜಿಸಿರುವುದಂತೂ ತೀರ ದುರ್ಬಲವಾದ, ಸಂಗತವಲ್ಲದ ಪದ ವಿಭಜನೆಯಾಗಿದೆ. ಸೇಡಿಯಾಪು ತಮ್ಮ ಪೂರ್ವೋಕ್ತ ಲೇಖನದ ಟಿಪ್ಪಣಿಯಲ್ಲಿ ಅದರ ದೌರ್ಬಲ್ಯವನ್ನು ವಿಶದವಾಗಿ ಎತ್ತಿ ತೋರಿಸಿದ್ದಾರೆ : " 'ಶಾಸನ ಪಾಠದಲ್ಲಿ' ಕಲಿಯುಗ ವಿಪರೀತನ್ ಇಲ್ಲವೆ 'ಕಲಿಗೆ ವಿಪರೀತನ್' ಎಂಬ ಶಬ್ದಗಳ ಆವೃತ್ತಿಯುಂಟಲ್ಲದೆ, 'ಯುಗ ವಿಪರೀತನ್' ಎಂಬ ಶಬ್ದವನ್ನು ಸಮರ್ಥಿಸುವ ಪ್ರಯೋಗವೇ ಇಲ್ಲ. ಆ ರೀತಿ ಶಬ್ದ ವಿಭಜಿಸುವುದು ಸರ್ವಥಾ ಛಂದೋನಿಯಮಕ್ಕೆ ಸಮ್ಮತವಾಗದ ವಿಭಜನೆ, ಅರ್ಥವೂ ಇದರಿಂದ ದೋಷಯುಕ್ತವಾಗುವುದು." ಇದು ಅವರ ವಾದದ ಸಾರಾಂಶ. ಅವರ ವಾದ ಸರಿಯಾಗಿಯೇ ಇದೆ.

## 123.6 ಎರಡನೆಯ ತ್ರಿಪದಿ

ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದಱಂತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸಂಧಿಕ್ಕುಮದು ಬಂದು ||

ಪದ್ಯಪಾಠ ಮತ್ತು ಶಬ್ದಾರ್ಥಗಳ ದೃಷ್ಟಿಯಿಂದ ಕ್ಲಿಷ್ಟವಾದ ಭಾಗ ಇದು. ಇಲ್ಲಿ ಅರ್ಥಕ್ಲೇಶವಿದೆಯೆನ್ನುತ್ತಾರೆ ಫ್ಲೀಟ್ ಅವರು. ಅವರು ಅರ್ಥ ಮಾಡಿರುವಷ್ಟು ಭಾಗ ಸಮರ್ಪಕವಾಗಿಲ್ಲ. ಈಚೆಗೆ ಪಂಡಿತರು ಈ ಪದ್ಯದ ಗೊಡವೆಗೆ ಅಷ್ಟಾಗಿ ಹೋಗಿಲ್ಲ.

ಶಬ್ದಾನ್ವಯ ಹೀಗೆ : ಒಳ್ಳಿತ್ತ ಕೆಯ್ವೊರಾರ್, ಅದಱಂತೆ ಪೊಲ್ಲದುಂ ; ಕಲಿಗೆ ವಿಪರೀ(ತಂ / ತಂಗೆ) ಬಲ್ಲಿತ್ತು ; ಪುರಾಕೃತಮ್ ಅದು ಬಂದು ಇಲ್ಲಿ ಸಂಧಿಕ್ಕುಂ.

ಶಾಸನದ ಎಲ್ಲ ಮುಖ್ಯ ವಿಚ್ಛೇದಕ ಭಾಗಗಳಲ್ಲಿಯೂ 'ಕಲಿಯುಗ ವಿಪರೀತನ್' ಎಂಬ ಪದ ಬಿಡದೆ ಆವೃತ್ತಿಗೊಳ್ಳುವುದನ್ನು ಲಕ್ಷಿಸಿದರೆ, ಇಲ್ಲಿಯೂ ಅದರ ಅಸ್ತಿತ್ವ ಸಂಭಾವ್ಯ. ಆದರೆ ಅದರ ರೂಪ ಸಮಸ್ಯಾತ್ಮಕ. 'ಕಲಿಗೆ ವಿಪರೀತಾ' ಸುಷ್ಠುಪದವಲ್ಲ. 'ಕಲಿಗೆ ವಿಪರೀತಂಗೆ' ಎಂದಿಟ್ಟುಕೊಂಡರೆ ಮಾತ್ರ ವಾಕ್ಯ ರಚನೆ ಸಮರ್ಪಕವಾಗುತ್ತದೆ. ಮುಂದಿನ ಹಾಗೂ ಕೊನೆಯ ಎರಡು ಸಾಲುಗಳಲ್ಲಿ ಕಲಿಗೆ ವಿಪರೀತಂಗೆ ಎಂಬ ರೂಪವೇ ಇದೆ. ಆದರ ಬಲದ ಮೇಲೆ ಇಲ್ಲಿಯೂ ಸದೃಶ ರೂಪವನ್ನು ಒಪ್ಪಬಹುದೆಂದು ತೋರುತ್ತದೆ. ಬಂಡೆಯ ಮೇಲೆ ಶಾಸನವನ್ನು ಬರೆದ ಲಿಪಿಕಾರನ ಇಲ್ಲವೆ ಕೊರೆದ ಕಂಡರಣೆಕಾರನ ಕೈತಪ್ಪು ಈಯೆಡೆ ಆಗಿರಬಹುದು.

ಇದು ಸರಿಯೆ. ಆದರೆ ಈ ತರ್ಕ ಛಂದಸ್ಸು ಒಡ್ಡುವ ಎದುರಿನಲ್ಲಿ ನಿಲ್ಲುವ ಹಾಗಿಲ್ಲ. ಪದ ಪಾಠ ಇಷ್ಟು ಮಾರ್ಪಾಟಿಗೆ ಅವಕಾಶ ಕೊಡುವುದಿಲ್ಲ. 'ಕಲಿಗೆ ವಿಪರೀತನ್' ಎಂಬುದಾಗಿ ಪ್ರಥಮೆಯನ್ನಿಟ್ಟುಕೊಂಡರೆ, ಉದ್ಧಾರದಲ್ಲಿ 'ವಿಪರೀತಾ' ಎಂದಾಗಿರಬಹುದೆಂದು ಊಹಿಸಲು ಅವಕಾಶವಾಗುತ್ತದೆ. ಇಲ್ಲವೆ ಬರಹದಲ್ಲಿ ದೀರ್ಘಸ್ವರ ಚಿಹ್ನೆ - ಅನುಸ್ವಾರಗಳ ನಡುವೆ ಭ್ರಮೆಯಿಂದ ತಪ್ಪಾಗುವುದೂ ಉಂಟು. ಹೀಗಾದರೆ ಪದ್ಯದ ಅರ್ಥ ಬಹುಮಟ್ಟಿಗೆ ಈ ರೀತಿ ಇರಬಹುದು : (ಕಪ್ಪೆ ಅರಭಟ್ಟನ ಹಾಗೆ) ಒಳ್ಳೆಯದನ್ನು ಮಾಡುವವರು ಯಾರು ? ಅದರ ಹಾಗೆಯೇ ಕೆಡುಕು ಕೂಡ (ಮಾಡುವುದು) ಬಲವಾಗಿದೆ (... ಎಂದರೆ ಈತನಿಗೆ ಚೆನ್ನಾಗಿ ತಿಳಿದಿದೆ.) ಈತ ಕಲಿಯುಗವಿಪರೀತನು ! (ಅವರವರು) ಹಿಂದೆ ಮಾಡಿದ್ದು (= ಹಿಂದೆ ಮಾಡಿದ ಒಳ್ಳೆಯದು, ಕೆಟ್ಟದ್ದು ಏನುಂಟು) ಅದು ಇಲ್ಲಿ (= ಈತನ ಕೈಯಲ್ಲಿ, ಈತನ ಮೂಲಕವಾಗಿ) ಅವರಿಗೆ ಸಂಧಿಸುತ್ತದೆ (= ಆ ಒಳ್ಳೆಯದರ ಫಲ, ಕೆಟ್ಟದ್ದರ ಫಲ ಪ್ರಾಪ್ತವಾಗುತ್ತದೆ).

ಈ ವಿಷಯದಲ್ಲಿ ಸೇಡಿಯಾಪು ಕೃಷ್ಣಭಟ್ಟರ ಗ್ರಹಿಕೆ ಹೀಗೆ : " 'ಕಲಿಗೆ ವಿಪರೀತ ಪುರಾಕೃತ' ಎಂಬಿಷ್ಟೂ ಕೂಡಿ ಒಂದು ಸಮಾಸ ಪದವೆಂದು ಗ್ರಹಿಸಿಕೊಂಡರೆ ಮಾತ್ರ ಈ ಪದ್ಯಕ್ಕೆ ಸಮಂಜಸವಾದ ಅರ್ಥವು ಸ್ಫುರಿಸುತ್ತದೆ. 'ಕಲಿಗೆವಿಪರೀತಪುರಾಕೃತಂ ಅದು ಬಂದು ಇಲ್ಲಿ ಸಂಧಿಕ್ಕುಂ' ಇದರ ಅರ್ಥ - ಕಲಿಗೆ ವಿಪರೀತನ ಪುರಾಕೃತ ಕರ್ಮ ದೋಷವು ಇಲ್ಲಿ ಬಂದು ಸಂಧಿಸಿತು ಎಂದಾಗಿದೆ. ಆದುದರಿಂದ 'ವಿಪರೀತಾ' ಎಂಬುದು ಶಾಸನದಲ್ಲಾದ ಅಕ್ಷರಸ್ಖಾಲಿತ್ಯವೆಂದು ತಿಳಿಯಬೇಕು" (ಕನ್ನಡ ಛಂದಸ್ಸು, ಪು. ೩೭).

ಕಪ್ಪೆ ಅರಭಟ್ಟನಿಗೇ ಅನ್ವಯಿಸಿರುವ ಈ ಅರ್ಥ ಇಲ್ಲಿ ಸಂಗತವಾಗದು; ಅದಕ್ಕಾಗಿ ಮಾಡಿಕೊಂಡಿರುವ ಸಮಾಸವೂ ಸರಿಯಾದ್ದಲ್ಲ.

## 123.8 ಮೂರನೆಯ ತ್ರಿಪದಿ

**ಕಟ್ಟಿದ ಸಿಂಘಮನ್ ಕೆಟ್ಟೊಡೇನೆಮಗೆಂದು**
**ಬಿಟ್ಟವೋಲ್ ಕಲಿಗೆ ವಿಪರೀತಂಗಹಿತರ್ಕಳ್**
**ಕೆಟ್ಟರ್ ಮೇಣ್ ಸತ್ತರವಿಚಾರಮ್ ||**

ಜೆ.ಎಫ್. ಫ್ಲೀಟ್ ಅವರು 'ಸಿಂಘ' ಶಬ್ದವನ್ನು 'ಶೃಂಗ'ದ ತದ್ಭವವನ್ನಾಗಿ ತೆಗೆದುಕೊಂಡು ಮಾಡಿರುವ ಅರ್ಥ ಒಪ್ಪತಕ್ಕದ್ದಲ್ಲ. ಈ ತದ್ಭವ ಅಪ್ರಸಿದ್ಧ, ಅಪ್ರಚುರ. ಪ್ರಸ್ತುತ, ಸಿಂಹ > ಸಿಂಗ > ಸಿಂಘ ಎಂಬುದೇ ಸೂಕ್ತ. ಇದು ಈಚಿನ ವಿದ್ವಾಂಸರಿಗೂ ಸಮ್ಮತ.

ಈಗ ಶಬ್ದಾನ್ವಯ ಹೀಗೆ : "ಎಮಗೆ ಕೆಟ್ಟೊ (ದೇ)ನ್ ಎಂದು ಕಟ್ಟಿದ ಸಿಂಘಮನ್ ಬಿಟ್ಟವೋಲ್, ಕಲಿಗೆ ವಿಪರೀತಂಗೆ ಅಹಿತರ್ಕಳ್ ಅವಿಚಾರಮ್ ಕೆಟ್ಟರ್ ಮೇಣ್ ಸತ್ತರ್."

ಇದರ ಅರ್ಥ ಹೀಗೆ : ನಮಗೆ (ಇದರಿಂದ) ಕೆಟ್ಟದ್ದು ಏನು ? (= ಕೆಡುಕೇನು ?) ಎಂದು (ಯೋಚಿಸಿ), ಕಟ್ಟಿ ಹಾಕಿದ ಸಿಂಹವನ್ನು (ಕಟ್ಟು ಕಳಚಿ) ಬಿಟ್ಟ ಹಾಗೆ, ಕಲಿಯುಗ ವಿಪರೀತನಿಗೆ (ಪ್ರತಿಭಟನೆ ತೋರಿ) (ಆತನ) ಶತ್ರುಗಳು (ತಮ್ಮ) ಅವಿವೇಕದಿಂದ ಹಾಳಾದರು ಇಲ್ಲವೆ ಸತ್ತರು."

ಈ ಪದ್ಯದ ಆಶಯ ಉಳಿದೆರಡು ಪದ್ಯಗಳ ಆಶಯಗಳಿಗಿಂತ ನೇರವಾಗಿದೆ, ಸರಳವಾಗಿದೆ. ಇಲ್ಲಿ ಕಟ್ಟಿ ಹಾಕಿದ್ದ ಸಿಂಹವನ್ನು ಕಟ್ಟು ಬಿಚ್ಚಿ ಸ್ವತಂತ್ರಗೊಳಿಸಿದರೆ ಅದು ಹೇಗೆ ತನ್ನನ್ನು ಬಂಧಿಸಿದವರನ್ನು, ಎದುರಿನಲ್ಲಿರುವವರನ್ನು ತಿಂದು ಬಿಡುವುದೋ ಹಾಗೆಯೇ ಕಪ್ಪೆಅರಭಟ್ಟನಿಗೆ ಯಾರಾದರೂ ಹಿಂಸೆ ಮಾಡಿದಲ್ಲಿ ಅಂತಹ ಶತ್ರುಗಳು ಕೆಡುವುದು ಇಲ್ಲವೆ ಸಾಯುವುದು ನಿಶ್ಚಯ ಎನ್ನುವುದು ಇಲ್ಲಿಯ ಭಾವ. ಇದಕ್ಕೆ ಮೊದಲಿನ ಪದ್ಯವನ್ನು ಸಹ ಈ ಪದ್ಯದ ಆಶಯದ ಬೆಳಕಿನಲ್ಲಿ ನೋಡಿದಾಗ "ಒಳ್ಳೆಯವರಿಗೆ ಒಳ್ಳೆಯವನು, ಕೆಟ್ಟವರಿಗೆ ಕೆಟ್ಟವನು ಆಗಿರುವ ಕಪ್ಪೆ ಅರಭಟ್ಟನು (ಅಥವಾ ಆ ಸಾಮರ್ಥ್ಯ ಇರುವವನು). ತಮ್ಮನ್ನೇನು ಮಾಡಬಲ್ಲ ಎಂದು ಏನಾದರೂ ತಿಳಿದು ಅಹಿತರಾದವರು ಅವನ ವಿಷಯದಲ್ಲಿ ತಪ್ಪಿ ನಡೆದರೋ, ಅವರು ತಮ್ಮ ಪುರಾಕೃತ ಪಾಪಗಳನ್ನು ಇಲ್ಲಿ ಅನುಭವಿಸುತ್ತಾರೆ, ಅಷ್ಟೆ. (ಒಂದು ಪಕ್ಷ ವಿಹಿತವಾಗಿ ನಡೆದುಕೊಂಡರೆ, ಅವರು ತಮ್ಮ ಪೂರ್ವಜನ್ಮದ ಪುಣ್ಯ ಫಲಗಳನ್ನೂ ಇಲ್ಲಿ ಪಡೆಯುವವರಾಗುತ್ತಾರೆ) - ಹೀಗೆ ಅರ್ಥವನ್ನು ಹೇಳಿಕೊಳ್ಳುವುದೇ ಸರಿಯಾದ ಕ್ರಮ. ಸೇಡಿಯಾಪು ಕೃಷ್ಣಭಟ್ಟರು ಕಪ್ಪೆ ಅರಭಟ್ಟನಿಗೇ ಪುರಾಕೃತ ಕರ್ಮ ದೋಷ ತಟ್ಟಿತು ಎಂದು ಭಾವಿಸುವುದು ಸಮರ್ಥನೀಯವಾಗದು.

ಈ ವಿವೇಚನೆಯ ಬೆಳಕಿನಲ್ಲಿ ಬಾದಾಮಿ ಕಪ್ಪೆ ಅರಭಟ್ಟನೆಂಬ ವೀರನ ಶಾಸನದ ಅರ್ಥವನ್ನು ಇಲ್ಲಿ ಒಗ್ಗೂಡಿಸಿ ಹೀಗೆ ನಿರೂಪಿಸಬಹುದಾಗಿದೆ :

೧. ಕಲಿಯುಗ ವಿಪರೀತನು ಎಂದು ಖ್ಯಾತನಾದ ಕಪ್ಪೆಅರಭಟ್ಟನು ಒಳ್ಳೆಯ ಜನರಿಗೆ ಬೇಕಾದವನು, ಕೆಟ್ಟ ಜನರಿಗೆ ಬೇಡವಾದವನು.

೨. ತೇಜಸ್ವಿಯಾದವನಿಗೆ (ತನಗೆ) ಸಾಯುವುದು ಲೇಸು, ಆದರೆ ಮಾನಭಂಗವಲ್ಲ; ಸಾವಿನ ದುಃಖ ಆ ಕ್ಷಣದ್ದು, ಮಾನಭಂಗದ ದುಃಖ ಪ್ರತಿದಿನದ್ದು (ಎಂದು ಆತ ತಿಳಿದಿದ್ದನು).

೩. ಸಾಧುವಾದವನ ವಿಷಯದಲ್ಲಿ ತಾನೂ ಸಾಧುವಾದವನು; ಕಾರ್ಯ ನಿರ್ವಹಣೆಯ ಸಾಮರ್ಥ್ಯವನ್ನುಳ್ಳ ಅಧಿಕನ ವಿಷಯದಲ್ಲಿ ತಾನೂ ಕಾರ್ಯನಿರ್ವಹಣೆಯ ಸಾಮರ್ಥ್ಯವನ್ನುಳ್ಳ ಅಧಿಕನು ಅಥವಾ ಪ್ರಮುಖರ ನಡುವೆ ತಾನೂ ಪ್ರಮುಖನು. ತೊಂದರೆ ಕೊಡುವ ಶೂರನಿಗೆ ಕಲಿಯುಗ ವಿಪರೀತನೆನ್ನಿಸಿದ ಕಪ್ಪೆಅರಭಟ್ಟನು ಸಾಕ್ಷಾತ್ ವಿಷ್ಣುವೇ, ಬೇರೆಯಲ್ಲ.

೪. ಈತನ ಹಾಗೆ ಒಳ್ಳೆಯದನ್ನು ಮಾಡುವವರು ಯಾರು ? ಹಾಗೆಯೇ ಕೆಟ್ಟದ್ದು ಮಾಡುವುದರಲ್ಲಿ ಕೂಡ ಈತನಿಗೆ ಸಾಮರ್ಥ್ಯವಿದೆ (ಈತ ಗಟ್ಟಿಗನಾಗಿದ್ದಾನೆ). ಈತ ಕಲಿಯುಗ ವಿಪರೀತನೇ ಸರಿ ! ಅವರವರು ಹಿಂದೆ ಮಾಡಿದ ಒಳ್ಳೆಯದು ಏನುಂಟು, ಕೆಟ್ಟದ್ದು ಏನುಂಟು, ಅದಕ್ಕೆ ತಕ್ಕ ಫಲ ಈತನ ಕೈಯಲ್ಲಿ ಅವರಿಗೆ ಸಿಕ್ಕುತ್ತದೆ.

೫. 'ನಮಗೆ ಇದರಿಂದ ಕೆಡುಕೇನು ?' ಎಂದು, ಕಟ್ಟಿ ಹಾಕಿದ ಸಿಂಹವನ್ನು ಕಟ್ಟು ಕಳಚಿ ಬಿಟ್ಟ ಹಾಗೆ ಕಲಿಯುಗ ವಿಪರೀತನಿಗೆ (ಎಂದರೆ ಕಪ್ಪೆಅರಭಟ್ಟನಿಗೆ) ಎದುರು ಬಿದ್ದು ಆತನ ಶತ್ರುಗಳು ತಮ್ಮ ಅವಿವೇಕದಿಂದ ಹಾಳಾದರು, ಸತ್ತರು.

## 123.9 ಸಾರಾಂಶ

ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿಗೆ ಸೇರಿದ ತಟ್ಟುಕೋಟೆ ಎಂಬ ಸ್ಥಳದಲ್ಲಿ ದೊರೆಕಿದೆ. ಇದೊಂದು ಬಂಡೆಗಲ್ಲು ಶಾಸನ. ಶಾಸನದ ಕಾಲ ಸ್ಪಷ್ಟವಾಗಿ ತಿಳಿಯಲಾಗಿಲ್ಲ. ಪ್ರಾಚೀನ ಕರ್ನಾಟಕದ ವೀರಜೀವನದ ಚಿತ್ರವೊಂದನ್ನು ಇದು ಕಟ್ಟಿಕೊಡುತ್ತದೆ. ಇಲ್ಲಿ ಚಿತ್ರಿತನಾಗಿರುವ ವೀರ (ಕಪ್ಪೆ ಅರಭಟ್ಟ) ಶೂರನಷ್ಟೇ ಅಲ್ಲದೆ ಸಜ್ಜನ ಕೂಡ ಆಗಿದ್ದನೆನ್ನುವುದು ಗಮನಿಸಬೇಕಾದ ಸಂಗತಿ. ಪ್ರಾಣಕ್ಕಿಂತ ಮಾನವೇ ಮುಖ್ಯವೆನ್ನುವ ನಂಬಿಕೆ ಬಲವಾಗಿದ್ದ ಮತ್ತೊಂದು ಸಂಗತಿಯನ್ನು

ಈ ಶಾಸನ ಹೇಳುತ್ತದೆ. ಕಪ್ಪೆ ಅರಭಟ್ಟನು ಒಳ್ಳೆಯ ಜನರಿಗೆ ಬೇಕಾದವನು, ಕೆಟ್ಟ ಜನರಿಗೆ ಬೇಡವಾದವನೂ ಆಗಿದ್ದನು. ಅಷ್ಟೇ ಅಲ್ಲ, ಈತನು ಸಾಧುವಿಗೆ ಸಾಧುವೂ, ಕಾರ್ಯ ನಿರ್ವಹಣೆಯ ಸಾಮರ್ಥ್ಯದಲ್ಲಿ ತಾನೂ ಕಾರ್ಯನಿರ್ವಹಣೆಯಲ್ಲಿ ಅಧಿಕನೂ, ತೊಂದರೆ ಕೊಡುವ ಶೂರನಿಗೆ 'ಕಲಿಯುಗ ವಿಪರೀತ'ನೆನ್ನಿಸಿದ ಸಾಕ್ಷಾತ್ ವಿಷ್ಣುವೂ ಆಗಿದ್ದನು. ಈತನ ಹಾಗೆ ಒಳ್ಳೆಯದನ್ನು ಮಾಡುವವರು ಯಾರು ? ಕೆಟ್ಟದ್ದನ್ನು ಮಾಡುವ ಸಾಮರ್ಥ್ಯದಲ್ಲಿಯೂ ಈತ ಗಟ್ಟಿಗನೇ ಎಂದು ಮುಂತಾಗಿ ಹೊಗಳಲ್ಪಟ್ಟಿದ್ದಾನೆ ಇಲ್ಲಿನ ವೀರ.

* * * *

# ಘಟಕ - 124

## ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ : ಭಾಗ - ೨
## ಚಾರಿತ್ರಿಕ, ಸಾಮಾಜಿಕ, ಭಾಷಿಕ ಹಾಗೂ ಛಂದೋ ವಿವೇಚನೆ

ರಚನೆ

124.0 ಉದ್ದೇಶ

124.1 ಪೀಠಿಕೆ

124.2 ಚಾರಿತ್ರಿಕ ಮತ್ತು ಸಾಮಾಜಿಕ ಅಂಶಗಳು

124.3 ಛಂದೋ ವಿವೇಚನೆ

124.4 ಭಾಷಾ ವಿವೇಚನೆ

124.5 ಕೆಲವು ಭಾಷಿಕ ಲಕ್ಷಣಗಳು

124.6 ಸಾರಾಂಶ

124.7 ಅಭ್ಯಾಸ ಪ್ರಶ್ನೆಗಳು

124.8 ಅಭ್ಯಾಸಕ್ಕೆ ಆಕರಗಳು

## 124.0 ಉದ್ದೇಶ

- ಕಪ್ಪೆ ಅರಭಟ್ಟನ ಶಾಸನದಲ್ಲಿ ವ್ಯಕ್ತವಾಗಿರುವ ಚಾರಿತ್ರಿಕ ಮತ್ತು ಸಾಮಾಜಿಕ ಅಂಶಗಳನ್ನು ಗುರುತಿಸುವ ಸಾಮರ್ಥ್ಯ ಪಡೆಯುವುದು.
- ಈ ಶಾಸನದಲ್ಲಿ ಬಳಕೆಯಾಗಿರುವ ಛಂದಸ್ಸಿನ ಸ್ವರೂಪ ಮತ್ತು ವೈವಿಧ್ಯವನ್ನು ತಿಳಿಯುವುದು.
- ಇಲ್ಲಿ ಬಳಕೆಯಾಗಿರುವ ಕೆಲವು ಪದಗಳನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಅಭ್ಯಾಸ ಮಾಡುವುದು.

## 124.1 ಪೀಠಿಕೆ

ಹಿಂದಿನ ಘಟಕದಲ್ಲಿ ಕಪ್ಪೆ ಅರಭಟ್ಟನ ಶಾಸನದ 'ಮೂಲ ಪಾಠ'ವನ್ನು ಪರಿಶೀಲಿಸಿದಿರಿ. ಒಟ್ಟಾರೆಯಾಗಿ ಶಾಸನ ಹೇಳುತ್ತಿರುವ ವಸ್ತುವಿಷಯ ಏನೆಂಬುದನ್ನೂ ನೀವು ತಿಳಿದುಕೊಂಡಿದ್ದೀರಿ. ಪ್ರಸ್ತುತ ಘಟಕದಲ್ಲಿ ಶಾಸನವನ್ನು ಮತ್ತಷ್ಟು ಸೂಕ್ಷ್ಮವಾಗಿ ಅವಲೋಕಿಸಿದರೆ ಕಾಣುವ ಚಾರಿತ್ರಿಕ, ಸಾಮಾಜಿಕ ಮತ್ತು ಭಾಷಿಕ ಅಂಶಗಳನ್ನು ಕುರಿತು ಪ್ರಸ್ತಾಪ ಮಾಡಲಾಗಿದೆ. ಚಾರಿತ್ರಿಕ ವಿಚಾರ ಈ ಶಾಸನದಲ್ಲಿ ತೀರಾ ಗೌಣ. ಆದರೆ ಸಾಮಾಜಿಕವಾಗಿ ಮತ್ತು ಭಾಷಿಕವಾಗಿ ಇದು ಮಹತ್ತ್ವದ ಸ್ಥಾನವನ್ನು ಪಡೆದ ಶಾಸನವೇ ಆಗಿದೆ. ಅಂಥ ಮಹತ್ತ್ವದ ಅಂಶಗಳು ಯಾವುವು ಎಂಬುದನ್ನು ಸೂಕ್ಷ್ಮವಾದ ವಿಶ್ಲೇಷಣೆಯಿಂದ ಈ ಘಟಕದಲ್ಲಿ ತಿಳಿಯೋಣ.

## 124.2 ಚಾರಿತ್ರಿಕ ಮತ್ತು ಸಾಮಾಜಿಕ ಸಂಗತಿಗಳು

ಬಾದಾಮಿ ಶಾಸನದ ಕಪ್ಪೆಅರ ಭಟ್ಟನ ಶಾಸನದ ಕೇಂದ್ರ ವ್ಯಕ್ತಿ, ಏಕೈಕ ವ್ಯಕ್ತಿ ಕಪ್ಪೆಅರಭಟ್ಟನ ವ್ಯಕ್ತಿತ್ವವನ್ನು ಮೊದಲು ಇಲ್ಲಿ ಗುರುತಿಸಬೇಕು.

> ಕಪ್ಪೆಅರಭಟ್ಟ ಪ್ರಾಯಶಃ ಹುಟ್ಟಿನಿಂದ ಬ್ರಾಹ್ಮಣನಾಗಿದ್ದ ಸಮರ್ಥನಾದ ಯೋಧ. ತನ್ನ ಒಳ್ಳೆಯ ನಡೆವಳಿಕೆಯಿಂದ ಆತ 'ಕಲಿಯುಗವಿಪರೀತನ್' ಎಂದು ಹೆಸರಾಗಿದ್ದ. ಎಂದರೆ ಆತ ಸಜ್ಜನ, ಸಂಭಾವಿತವ್ಯಕ್ತಿ. ಹೀಗಿದ್ದುದರಿಂದ ಸಹಜವಾಗಿ ಒಳ್ಳೆಯ ಜನ ಅವನನ್ನು ತಮ್ಮವನೆಂದು ಆದರಿಸುತ್ತಿದ್ದರು; ದುಷ್ಟರು ಅವನ ಹತ್ತಿರ ಸೇರುತ್ತಿರಲಿಲ್ಲ, ಅವನನ್ನು ಕಂಡರೆ ಹೆದರುತ್ತಿದ್ದರು.
>
> ಮಾನವಂತನಾಗಿ ಮನುಷ್ಯ ಬಾಳಬೇಕು. ಮಾನಭಂಗವನ್ನು ಸಹಿಸುವುದಕ್ಕಿಂತ ಸಾಯುವುದೇ ಲೇಸು ಎನ್ನುವುದು ಅವನ ನಂಬುಗೆಯಾಗಿತ್ತು.
>
> ಒಳ್ಳೆಯವರ ವಿಷಯದಲ್ಲಿ ಆತ ಎಂದೂ ಒಳ್ಳೆಯವನೇ. ರಾಜ ನೈತಿಕವಿರಬಹುದು, ಸೈನ್ಯಕೀಯವಿರಬಹುದು - ಯಾವುದೇ ದೊಡ್ಡ ಜವಾಬ್ದಾರಿಯನ್ನು ದಕ್ಷತೆಯಿಂದ ನಿರ್ವಹಿಸಬಲ್ಲ ಧುರೀಣ ಆತ. ತನಗೆ ಎದುರುಬಿದ್ದ ಶೂರರನ್ನೂ ಮಹಾವಿಷ್ಣುವಿನಂತೆ ಆತ ನಿಗ್ರಹಿಸಬಲ್ಲವನಾಗಿದ್ದನು.
>
> ಕಪ್ಪೆಅರ ಭಟ್ಟನು ಮನಸ್ಸು ಮಾಡಿದರೆ ಒಳ್ಳೆಯದನ್ನೂ ಮಾಡಬಲ್ಲ, ಕೆಟ್ಟದ್ದನ್ನೂ ಮಾಡಬಲ್ಲ; ಎಂದರೆ ಅವನು ಒಳ್ಳೆಯವರಿಗೆ ಒಳ್ಳೆಯವನು, ಕೆಟ್ಟವರಿಗೆ ಕೆಟ್ಟವನು. ಅವರವರ ಪುರಾಕೃತ ಕರ್ಮ ಫಲಗಳನ್ನು, ಎಂದರೆ ಒಳ್ಳೆಯ ಕರ್ಮಗಳನ್ನು ಮಾಡಿದ್ದರೆ ಒಳ್ಳೆಯ ಫಲ, ಕೆಟ್ಟ ಕರ್ಮಗಳನ್ನು ಮಾಡಿದ್ದರೆ ಕೆಟ್ಟ ಫಲ. ಇವನ್ನು ಅವರು ಆತನ ಮೂಲಕ ಪಡೆದುಕೊಳ್ಳುತ್ತಾರೆ.

ಕಪ್ಪೆಅರ ಭಟ್ಟನ ಶತ್ರುಗಳು ಅವನೊಂದಿಗೆ ವಿಹಿತವಾಗಿ ನಡೆದುಕೊಂಡರೆ ನೆಮ್ಮದಿಯಿಂದ ಬಾಳಬಹುದಾಗಿತ್ತು. ಹಾಗಲ್ಲದೆ ಅವನನ್ನು ಎದುರು ಹಾಕಿಕೊಂಡರೆ ಸಿಂಹದ ಸಹವಾಸ ಮಾಡಿದಂತೆ, ಸಿಂಹವನ್ನು ಕೆಣಕಿದಂತೆ. ಅಂಥವರು ಕೆಡುವುದು ನಿಶ್ಚಯ, ಸಾಯುವುದು ತಪ್ಪದು. ಶಿಷ್ಟರ ರಕ್ಷಣೆ, ದುಷ್ಟರ ವಿನಾಶ ಎಂಬುದು ಅವನ ಸಂಕಲ್ಪ. ಅದರಲ್ಲಿ ಆತ ಸಮರ್ಥ, ಅಪ್ರತಿಹತ. ಆತನೊಂದಿಗೆ ವಿವೇಕದಿಂದ ವರ್ತಿಸುವುದಾದರೆ ಮಾತ್ರ ಜನ ನೆಮ್ಮದಿಯಿಂದಿರಬಹುದಾಗಿತ್ತು, ಹಾಗಲ್ಲವಾದರೆ ಹಾಳಾಗುವುದು ಖಂಡಿತ.

ಸಜ್ಜನಿಕೆ, ಗಾಂಭೀರ್ಯ, ಶೌರ್ಯ ಇವು ಮುಪ್ಪುರಿಗೊಂಡಿದ್ದ ಕನ್ನಡಿಗ ವೀರನೊಬ್ಬನ ವ್ಯಕ್ತಿ ಚಿತ್ರವನ್ನು ಪ್ರಸ್ತುತ ಶಾಸನ ನಮ್ಮ ಕಣ್ಣೆದುರು ಕಟ್ಟಿ ನಿಲ್ಲಿಸಲು ಸಮರ್ಥವಾಗಿದೆ ; ಆದರೆ ಶಾಸನ ಕರ್ತೃ ಮಾತ್ರ ಅಜ್ಞಾತದಲ್ಲಿ ಸೇರಿ ಹೋಗಿದ್ದಾನೆ.

ಬಾದಾಮಿಯ ಈ ಶಾಸನ ಕ್ರಿ.ಶ. ಸು. ೭೦೦ ಅಥವಾ ಸು. ೭೫೦ ರಿಂದೊಳಗೆ ಲಿಖಿತವಾಗಿದೆಯೆಂದು ತಿಳಿಯಲಾಗಿದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ೧ನೆಯ ವಿಕ್ರಮಾದಿತ್ಯನ ಕಾಲದಿಂದೀಚೆಗೆ ಅವನ ಸಂತತಿಯಲ್ಲಿ ಬಂದ ವಿನಯಾದಿತ್ಯ (೬೮೧ - ೯೬), ಅವನ ಮಗ ವಿಜಯಾದಿತ್ಯ (೬೯೬ - ೭೩೩), ಅವನ ಮಗ ೨ನೆಯ ವಿಕ್ರಮಾದಿತ್ಯ (೭೩೩ - ೪೫), ಅವನ ಮಗ ೨ ನೆಯ ಕೀರ್ತಿವರ್ಮ (೭೪೫ - ೫೭) ಇವರ ಆಳ್ವಿಕೆಯ ಅವಧಿಯಲ್ಲಿ ಯಾವಾಗಲೋ ಈ ಶಾಸನ ಹುಟ್ಟಿರಬೇಕು. ಸು. ೭೦೦ ಎಂಬ ಬಹುಜನ ಸಮ್ಮತವಾದ ಅಭಿಪ್ರಾಯವನ್ನು ಒಪ್ಪಿದರೆ, ಈ ಶಾಸನ ೧ ನೆಯ ವಿಕ್ರಮಾದಿತ್ಯನ ಮಗ ವಿನಯಾದಿತ್ಯನ ಇಲ್ಲವೆ ಮೊಮ್ಮಗ ವಿಜಯಾದಿತ್ಯನ ಕಾಲದ ಶಾಸನವಾಗಿರುವುದು ಬಹಳಮಟ್ಟಿಗೆ ಸಂಭವನೀಯವೆನ್ನಬೇಕು.

ವಿನಯಾದಿತ್ಯನು ಯುದ್ಧಮಲ್ಲನೆಂದೂ ದುರ್ಧರಮಲ್ಲನೆಂದೂ ಕೀರ್ತಿತನಾದವನು. ಇವನು  ತನ್ನ ತಂದೆಯ ಅಪ್ಪಣೆಯ ಮೇರೆಗೆ ಚೋಳ ಪಾಂಡ್ಯ ಕೇರಳರನ್ನು ಪಲ್ಲವರನ್ನು ತಡೆಗಟ್ಟಿ ಎದುರಿಸಿದನೆಂದು ಹೇಳಲಾಗಿದೆ. ಕಮೇರ ಪಾದಸಿಕ ಮತ್ತು ಸಿಂಹಳದ ಅರಸರನ್ನು ಈತ ಜಯಿಸಿದನೆಂದು ಶಾಸನಗಳು ಹೇಳುತ್ತವೆ. ಆಳುಪರು ಸೇಂದ್ರಕರು ಇವನಿಗೆ ಸಾಮಂತರಾಗಿದ್ದರು. ಉತ್ತರ ಭಾರತದ ಅರಸನೊಬ್ಬನನ್ನು, ಬಹುಶಃ ಕನೋಜಿನ ಯಶೋವರ್ಮ  ಅಥವಾ ವಜ್ರಟನನ್ನು ಸೋಲಿಸಿ ಅವರ ಪಾಳಿ ಧ್ವಜ ಚಿಹ್ನೆಯನ್ನೂ ಇತರ ರಾಜಲಾಂಛನಗಳನ್ನೂ ಇವನು ವಶಪಡಿಸಿಕೊಂಡನೆಂದು ಕೆಲವು ಶಾಸನಗಳಲ್ಲಿ ಹೇಳಿದೆ.

ಮುಂದೆ ವಿನಯಾದಿತ್ಯನ ಮಗ ವಿಜಯಾದಿತ್ಯನು ಅರಸಾದನು. ದೀರ್ಘ ಕಾಲ ರಾಜ್ಯವಾಳಿದನು. ಇವನ ಕಾಲದಲ್ಲಿಯೂ ಪಲ್ಲವರ ಮೇಲೆ ಯುದ್ಧ ನಡೆಯಿತು. ಉಲ್ಚಾಲ ಶಾಸನದ ಪ್ರಕಾರ ಯುವರಾಜ ಇಮ್ಮಡಿ ವಿಜಯಾದಿತ್ಯನ ನಾಯಕತ್ವದಲ್ಲಿ ಚಳುಕ್ಯರ ಸೇನೆ ಕಾಂಚೀಪುರಕ್ಕೆ ದಾಳಿಯಿಟ್ಟು ೨ ನೆಯ ಪರಮೇಶ್ವರ ವರ್ಮನನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ಪಡೆಯಿತು.

ಹೀಗೆ ಬಾದಾಮಿ ಚಾಲುಕ್ಯರು ಉತ್ತರ - ದಕ್ಷಿಣ ಭಾರತದ ಪ್ರಮುಖ ರಾಜವಂಶಗಳ ಅರಸುಗಳೊಂದಿಗೆ ನಡಸುತ್ತಿದ್ದ ಕಾಳೆಗಗಳಲ್ಲಿ ಬಾದಾಮಿ ಶಾಸನದ ನಾಯಕ ವ್ಯಕ್ತಿ ಕಪ್ಪೆ ಅರಭಟ್ಟನು ಸೇರಿ ಯುದ್ಧ ಮಾಡಿರಬಹುದೇ, ಯುದ್ಧದಲ್ಲಿ ಮಡಿದಿರಬಹುದೇ ಇಲ್ಲವೆ ಹೋರಾಟದಲ್ಲಿ ಸೋತು ಅಪಮಾನಗೊಂಡು ಆತ್ಮಾರ್ಪಣೆ ಮಾಡಿಕೊಂಡಿರಬಹುದೇ ಇವೆಲ್ಲ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಶಾಸನದ ವಸ್ತು ಕಪ್ಪೆಅರಭಟ್ಟನ ಮೃತಿಯನ್ನು ಹೇಳುವುದು ಬಹುಶಃ ನಿಶ್ಚಯವಾಗಿ ಕಂಡರೂ, ಆ ಮೃತಿಗೆ ಕಾರಣವಾದ ಸಂದರ್ಭವನ್ನು ಸ್ಪಷ್ಟವಾಗಿ ಅಲ್ಲಿ ಸೂಚಿಸುತ್ತಿಲ್ಲ. ಮೃತನಾದನೆಂಬುದು ಕೂಡ ಸಂಸ್ಕೃತ ಶ್ಲೋಕದ ಆಧಾರದ ಮೇಲೆ, ಅದು ಧ್ವನಿಸುವ ಆಶಯದ ಮೇಲೆ ಊಹೆ ಮಾಡಿರುವ ಸಂಗತಿಯಾಗಿದೆ.

ಈ ಸಂದರ್ಭದಲ್ಲಿ ಆರ್.ಎಸ್. ಪಂಚಮುಖಿಯವರು ಮಾಡಿರುವ ಒಂದು ಊಹೆ ಹೀಗಿದೆ (Karnatak Inscriptions, Vol. I, 1941, p.11) :

"ಕಪ್ಪೆಅರ ಭಟ್ಟನು ಅಸಹನೀಯವಾದ ಯಾವುದೋ ಒಂದು ಪೀಡನೆಗೆ ಒಳಗಾಗಿ, ಅಪಮಾನವನ್ನು ತಾಳಿಕೊಳ್ಳುವುದಕ್ಕಿಂತ ಸಾಯುವುದು ಮೇಲೆಂದು ಬಗೆದು, ಕೊನೆಗೆ ಆತ್ಮಹತ್ಯೆಯನ್ನು ಮಾಡಿಕೊಂಡಂತೆ ತೋರುತ್ತದೆ."

ಇದಾದರೂ ಶಾಸನ ಪಾಠದೊಳಗಿನ ಸಂಸ್ಕೃತ ಶ್ಲೋಕದ ಆಶಯದಿಂದ ಹೊರಪಡುವ ಧ್ವನಿಯ ಮೇಲೆ ಮಾಡಿದ ಊಹೆಯಾಗಿದೆ ಎನ್ನುವುದು ಸ್ಪಷ್ಟ.

ಶಾಸನದ ವಸ್ತು ವೀರನೊಬ್ಬನ ಸಂಯಮ, ಸ್ವಾಭಿಮಾನ, ಸಾಹಸ ಪ್ರವೃತ್ತಿ ಹಾಗೂ ಶೌರ್ಯ ಇವನ್ನು ಕುರಿತಿರುವುದರಲ್ಲಿ ಸಂದೇಹವಿಲ್ಲ. ಆತ ಗುಣಶಾಲಿಯೂ ಆಗಿರುವುದು ಸ್ಪಷ್ಟ. ಇಂಥವನನ್ನು ವೀರಗಲ್ಲಿನಂಥ ಸ್ಮಾರಕವನ್ನು ನಿರ್ಮಿಸಿ ಪ್ರಶಂಸೆ ಮಾಡಿರುವುದು ನೋಡಿದರೆ, ಅದು ಸಣ್ಣ ಪ್ರಮಾಣದ ಅಥವಾ ದೊಡ್ಡ ಪ್ರಮಾಣದ ಯುದ್ಧದಲ್ಲಿ ಆತ ಭಾಗವಹಿಸಿ ಸೋತು ಅಪಮಾನಗೊಂಡ ಕಾರಣದಿಂದಲೋ ಅನ್ಯರ ಅವಹೇಳನವನ್ನು ತಾಳಿಕೊಳ್ಳಲಾರದೆಯೋ ಆತ್ಮಾರ್ಪಣೆ ಮಾಡಿಕೊಂಡಿರುವುದು ಸಂಭವನೀಯವೇ ಆಗಿದೆ.

"ಯುದ್ಧದಲ್ಲಿ ಗೆದ್ದು ಹಿಂದಕ್ಕೆ ಬರುವುದು ಅಥವಾ ಸೋತು ಪ್ರಾಣ ಬಿಡುವುದು - ಎರಡಕ್ಕೂ ಸಮಾನವಾದ ಗೌರವವಿದೆ. ಸೋತು ಹಿಂದಕ್ಕೆ ಬರುವುದು ಸಾವಿಗಿಂತ ಕಡೆಯಾದುದು. ಮೃತ್ಯುವು ಕ್ಷಣಿಕ ದುಃಖವನ್ನು ತಂದರೆ, ಮಾನಭಂಗವೋ ದಿನದಿನವೂ ದುಃಖವನ್ನು ತರುತ್ತದೆ. ಮಾನಭಂಗವನ್ನು ತಾಳಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡ ರಾಜನೊಬ್ಬನ ಹೃದಯ ವಿದ್ರಾವಕ ಚಿತ್ರವು ಶಾಸನವೊಂದರಲ್ಲಿ ಕಂಡುಬರುತ್ತದೆ. ಪಲ್ಲವರೊಡನೆ ನಡೆದ ಘೋರ ಯುದ್ಧದಲ್ಲಿ ಕದಂಬರು ಸಂಪೂರ್ಣವಾಗಿ ಸೋತರು ಕದಂಬರ ರಾಜ್ಯವು ನಾಶವಾಯಿತು. ತನ್ನ ರಾಜ್ಯದ ನಾಶವನ್ನು ('ಸ್ವದೇಶಸ್ಯ ಕ್ಷಯೇ') ನೋಡಲಾರದೆ ಶಿವಾನಂದವರ್ಮನು ದರ್ಭೆಯ ಹಾಸಿಗೆಯ ಮೇಲೆ ಮಲಗಿ, ಶಾಶ್ವತವಾದ ಕೀರ್ತಿಯನ್ನು ಬಯಸಿ ('ಚಿರಕಾಲಾವಸ್ಥಾಯಿನೀಂ ಕೀರ್ತಿಮಭಿಲಷನ್') ಮನುಷ್ಯ ಭೋಗದಲ್ಲಿ ವಿರಕ್ತನಾಗಿ ಸ್ವರ್ಗಸ್ಥನಾಗುತ್ತಾನೆ. ಅವನು ಯುದ್ಧದಲ್ಲಿ ಸೋತಿದ್ದರೂ ಶಾಸನವು ಅವನ ಶೌರ್ಯ ಗುಣಾದಿಗಳನ್ನು ಹೊಗಳುತ್ತದೆ. ಶಾಸನದ ವಸ್ತು ಮತ್ತು ರೀತಿಗಳು ಓದುಗರ ಹೃದಯವನ್ನು ಕರಗಿಸುತ್ತವೆ" (ಎಕ. ೧೧, ಡಿಜಿ. ೧೬೧; ಸು.೪೫೦)."

ಈ ಪ್ರಕರಣದೊಂದಿಗೆ (ಡಾ. ಎಂ. ಚಿದಾನಂದ ಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ೧೯೬೬, ಪು. ೨೪೯ - ೨೫೦). ಕಪ್ಪೆಅರ ಭಟ್ಟನ ಬಾದಾಮಿ ಶಾಸನವನ್ನು ತುಲನೆ ಮಾಡಿ ನೋಡಬಹುದು. ಇಂತಹ ಯಾವುದೋ ವಿಷಮ ಸಂದರ್ಭ ಕಪ್ಪೆಅರ ಭಟ್ಟನ ವೀರ ಜೀವನದಲ್ಲಿ ಎಂದೋ ಒಮ್ಮೆ ಕಾಣಿಸಿಕೊಂಡಿರಬಹುದು. ಆತನೂ ಮಾನ ಭಂಗವನ್ನು ತಾಳಿಕೊಳ್ಳಲಾರದೆ ಇಹ ಜೀವನವನ್ನು ತೊರೆದಿರಬಹುದು.

ಈ ದಿಕ್ಕಿನಲ್ಲಿ ವಿಚಾರ ಮಾಡಿ, ಇತಿಹಾಸಜ್ಞ ಬಾ.ರಾ. ಗೋಪಾಲರು ಇದೊಂದು ರಾಜಕೀಯ ಹಿನ್ನೆಲೆಯಿರುವ ಶಾಸನವೆಂದೂ ಇದು ಬಾದಾಮಿ ಚಾಲುಕ್ಯರ ಆರಂಭದ ಇತಿಹಾಸದ ಒಂದು ಘಟನೆಗೆ ಸಂಬಂಧಿಸಿದೆಯೆಂದೂ ತರ್ಕಿಸಿದ್ದಾರೆ. ಈ ಘಟನೆ ಚಾಲುಕ್ಯ ೧ ನೆಯ ಪುಲಕೇಶಿಯ ಪುತ್ರರಿಗೆ, ಎಂದರೆ ಕೀರ್ತಿವರ್ಮ (೧) ಮತ್ತು ಮಂಗಲೇಶ ಎಂಬ ಅಣ್ಣ ತಮ್ಮಂದಿರ ರಾಜಕೀಯ ಸಂಘರ್ಷಕ್ಕೆ ಸಂಬಂಧಿಸಿದ್ದಾಗಿ ತಿಳಿದಿದ್ದಾರೆ. ಕೀರ್ತಿವರ್ಮನಿಗೆ ಶಾಸನಗಳಲ್ಲಿ ಕತ್ತಿಯರ ಎಂಬ ಹೆಸರನ್ನು ಹೇಳಿದೆ. 'ಕತ್ತಿಯರ'ದ ಅಪಲಿಖಿತ 'ಕಪ್ಪೆ ಅರ' ಆಗಿರಬಹುದು ಎಂಬ ಗ್ರಹಿಕೆಯ ಮೇಲೆ ಅವರ ವಿಚಾರ ನಡೆದಿದೆ. "ಕಪ್ಪೆಅರ ಭಟ್ಟ ಎಂಬುದು ಕೀರ್ತಿವರ್ಮ (೧)ನಿಗೆ ಸಲ್ಲುವ ಹೆಸರು. ತಮ್ಮನ ರಾಜ್ಯವಾಳುವ ತವಕದ ಅರಿವು ಈತನಿಗಿತ್ತು. ಸ್ವತಃ ದೈಹಿಕವಾಗಿ, ಮಾನಸಿಕವಾಗಿ ನೊಂದಿದ್ದ ಕೀರ್ತಿವರ್ಮ ಆವರೆಗೂ ಅಂಕುಶದಲ್ಲಿಟ್ಟಿದ್ದ ಮಂಗಲೇಶನಿಗೆ ಸ್ವಾತಂತ್ರ್ಯ ನೀಡಿ ರಾಜ್ಯಾಡಳಿತದ ಭಾರವಹಿಸಿ ತಾನು ಆತ್ಮಹತ್ಯೆ ಮಾಡಿಕೊಂಡ" ಎಂಬುದಾಗಿ ಅವರು ಊಹಿಸಿದ್ದಾರೆ.

ಕೀರ್ತಿವರ್ಮನಿಗೆ ಕಪ್ಪೆಅರನೆಂಬ ಹೆಸರಿದ್ದಿತೆಂದು ತಿಳಿಯಲು ಅವಕಾಶವಿಲ್ಲದ್ದರಿಂದಲೂ ಕೀರ್ತಿವರ್ಮನ ರಾಜಕೀಯ ಸಾಧನೆಗಳ ದೃಷ್ಟಿಯಿಂದಲೂ ಅವರ ಊಹೆಯಲ್ಲಿ ದೌರ್ಬಲ್ಯಗಳು ಸುಲಭವಾಗಿ ಕಾಣುತ್ತವೆ (ವಿವರಗಳಿಗೆ ನೋಡಿ : ಕಪ್ಪೆಅರ ಭಟ್ಟ, 'ಸಮದರ್ಶಿ', ೧೯೯೬, ಪು. ೫೬೧ - ೬೬).

ಬಾದಾಮಿ ಚಾಲುಕ್ಯರ ಕಾಲದಲ್ಲಿ ಬ್ರಾಹ್ಮಣ್ಯಕ್ಕೆ ಒಳ್ಳೆಯ ಪೋಷಣೆ ಪ್ರೋತ್ಸಾಹಗಳಿದ್ದುವು. ವೇದಗಳಲ್ಲಿ ಪ್ರತಿಪಾದಿತವಾಗಿರುವ ಪೂಜಾ ವಿಧಿಗಳೂ ಅಶ್ವಮೇಧ ವಾಜಪೇಯ ಪೌಂಡರೀಕ ಅಗ್ನಿಚಯನ ಅಗ್ನಿಷ್ಟೋಮ ಮೊದಲಾದ ಯಜ್ಞಯಾಗಗಳೂ ನಡೆಯುತ್ತಿದ್ದುವು. ಕ್ರಿ.ಶ. ೪ ನೆಯ ಶತಮಾನದ ವೇಳೆಗಾಗಲೇ ಕರ್ಣಾಟಕದಲ್ಲಿ ವೈಷ್ಣವ ಧರ್ಮವು ಜನಪ್ರಿಯತೆ ಗಳಿಸಿದ್ದಿತು. ಚಾಲುಕ್ಯ ರಾಜರು ತಮ್ಮನ್ನು ಪರಮ ಭಾಗವತರೆಂದು, ಎಂದರೆ, ವಿಷ್ಣುವಿನ ಪರಮಭಕ್ತರೆಂದು, ಕರೆದುಕೊಳ್ಳುತ್ತಿದ್ದರು. 'ಶ್ರೀವಲ್ಲಭ', 'ಶ್ರೀ ಪೃಥಿವೀ ವಲ್ಲಭ' ಮೊದಲಾದ ಬಿರುದುಗಳನ್ನು ಅವರು ಧರಿಸಿದ್ದುದನ್ನು ನೋಡಿದರೆ, ಅವರು ವಿಷ್ಣು ಭಕ್ತರಾಗಿದ್ದರೆಂಬುದನ್ನು ಹೇಳುತ್ತದೆ. ಬಾದಾಮಿಯ ಗುಹಾಲಯಗಳ ವೈಷ್ಣವ ಅವತಾರ ಮೂರ್ತಿಗಳೂ ಅದನ್ನು ಸಾರುವಂತಿವೆ. ಮೇಲಾಗಿ ತಮ್ಮ ರಾಜಲಾಂಛನವನ್ನು ಅವರು ವರಾಹಾವತಾರದ ಮುದ್ರೆಯಿಂದ ಮೆರೆಸಿದ್ದಾರೆ ; ಅವರ ಕೊರೆಸಿದ ಶಾಸನಗಳ ಮೊದಲಿಗೆ ಸಹ ವರಾಹನನ್ನು ಕುರಿತ ಮಂಗಳ ಶ್ಲೋಕವುಂಟು.

ಇವುಗಳ ಹಿನ್ನೆಲೆಯಲ್ಲಿ ಕಪ್ಪೆಅರ ಭಟ್ಟನ ಬಾದಾಮಿ ಶಾಸನದ ಲೇಖನವನ್ನು ಗಮನಿಸಿದರೆ ಎರಡು ಸಂಗತಿಗಳು ಹೊರಡುತ್ತವೆ :

೧. ಕಪ್ಪೆಅರ ಭಟ್ಟನು ವಿಷ್ಣುವಿನ ಹಾಗೆ ಶಿಷ್ಟ ರಕ್ಷಣ, ದುಷ್ಟ ಮರ್ದನದ ಸಾಮರ್ಥ್ಯವುಳ್ಳವನಾಗಿದ್ದನು. ೨. "ಮಾಧವನೀತನ್ ಪೆಱನಲ್ಲ" ಎಂಬ ಮಾತು ಅವನ ವ್ಯಕ್ತಿತ್ವದಲ್ಲಿ ವಿಷ್ಣುವಿನ ಸದೃಶ ಗುಣಗಳಿವೆ ಎಂಬುದನ್ನು ಎತ್ತಿ ಹೇಳುತ್ತದೆ. ವಿಷ್ಣುವಿನ ಅವತಾರವಾದ ಕೃಷ್ಣ. ಸರಳ ಸಾಮಾನ್ಯರೊಂದಿಗೆ ಹೊಂದಿ ನಡೆಯುವ ಸಾಧು ಸ್ವಭಾವದವನು ಹಾಗೂ ಮಾರ್ಗದರ್ಶನ ಮಾಡುವ ಧುರೀಣನಾದವನು.

'ಕಪ್ಪೆಯರ' ಎಂಬುದಾಗಿ ಶಾಸನಗಳಲ್ಲಿ ವಿರಳವಾಗಿ ಕಂಡುಬಂದಿರುವ ಮಾತು ವೈಷ್ಣವ, ಶೈವ ಅಥವಾ ಜೈನ ಯಾವುದನ್ನು ಕುರಿತ ಮನೆತನದ ಹೆಸರು ಎನ್ನುವುದು ಸ್ಪಷ್ಟವಿಲ್ಲ. "ಸೇನಬೋವಂ ಕಪ್ಪೆಯರ ಚಾವುಣ್ಣಯ್ಯನ ಸ್ವಹಸ್ತ ಲಿಖಿತ" ಎಂಬುದು ಬಹುಶಃ ಬ್ರಾಹ್ಮಣ ಅಧಿಕಾರಿಯ ಹೆಸರು ಹೇಳುವಂತೆ ತೋರುತ್ತದೆ. "ಕಪ್ಪೆಯುರಾ ಹಾರ ದಾನವಿನೋದಂ" ಎಂಬಲ್ಲಿಯ ಮಾತು ಯತಿಗಳನ್ನೋ ಆಚಾರ್ಯ ವರ್ಗವನ್ನೋ ಸೂಚಿಸಬಹುದೆಂದು ಊಹಿಸಲಾಗಿದೆ. ಆದರೆ ಹೀಗೇ ಸರಿ ಎನ್ನುವಂತಿಲ್ಲ (ನೋಡಿ : ಎಂ.ಎಂ. ಕಲಬುರ್ಗಿ : 'ಶಾಸನ ವ್ಯಾಸಂಗ', ಸಂಪುಟ ೨, ೧೯೭೫, ಪು. ೧-೩).

ಒಂದು ಕಾಲದಲ್ಲಿ, ಎಂದರೆ ಕಲ್ಯಾಣ ಚಾಲುಕ್ಯರ ಆಳ್ವಿಕೆ ತೊಡಗುವುದಕ್ಕೂ ಹಿಂದಿನ ಕಾಲದಲ್ಲಿ, ಬ್ರಾಹ್ಮಣರು ರಾಜ್ಯಾಡಳಿತದಲ್ಲಿ ಪ್ರಮುಖ ಪಾತ್ರವಹಿಸುವ ಮಂತ್ರಿಯೋ ಸೇನಾ ನಿರ್ವಹಣೆಯಲ್ಲಿ ಸೇನಾಧಿಪತಿಯೋ ಯೋಧನೋ ಆಗಿ ಕಾರ್ಯ ನಿರ್ವಹಿಸುತ್ತಿದ್ದುದಕ್ಕೆ ಸಾಕ್ಷ್ಯಗಳಿವೆ. ಕಪ್ಪೆಅರ ಭಟ್ಟ ವೀರ ಯೋಧನಾಗಿ ಹಾಗೆ ಪಾತ್ರ ವಹಿಸಿರಬಹುದು.

## 124.3 ಛಂದೋ ವಿವೇಚನೆ

ಬಾದಾಮಿ ಶಾಸನದ ಪಾಠವನ್ನು ಛಂದಸ್ಸಿನಿಂದ ದೃಷ್ಟಿಯಿಂದ ಪರಿಶೀಲಿಸುವುದು ಪ್ರಯೋಜನಕಾರಿಯಾದುದು. ಈಗಾಗಲೇ ವಿದ್ವಾಂಸರು ಈ ಬಗ್ಗೆ ತಮ್ಮ ವಿಶ್ಲೇಷಣೆಗಳನ್ನು ಪ್ರಕಟಿಸಿದ್ದಾರೆ.

ಒಂದೊಂದೇ ಅರ್ಥಘಟಕದ ಶಾಸನ ಪಠ್ಯವನ್ನು ಎತ್ತಿಕೊಂಡು ಇಲ್ಲಿ ವಿಚಾರ ಮಾಡೋಣ :

೧. ಕಪ್ಪೆ ಅರಭಟ್ಟನ್ ಶಿಷ್ಟಜನ ಪ್ರಿಯನ್

ಕಷ್ಟ ಜನವರ್ಜಿತನ್ ಕಲಿಯುಗ ವಿಪರೀತನ್

ಈ ಸಾಲುಗಳು ಗದ್ಯವೇ ಪದ್ಯವೇ ಎಂಬ ವಿಷಯದಲ್ಲಿ ಸ್ವಲ್ಪ ಚರ್ಚೆಯಿದೆ. ಎ.ಎನ್. ನರಸಿಂಹಯ್ಯನವರೂ (A Grammar of the Oldest Kanarese Inscriptions', 1941, p. 363), ಆರ್.ಎಸ್. ಪಂಚಮುಖಿಯವರೂ (ಕರ್ನಾಟಕದ ಇತಿಹಾಸ, ಸಂಪುಟ ೧, ಪು. ೧೨೨), ಸೇಡಿಯಾಪು ಕೃಷ್ಣಭಟ್ಟರೂ ('ಕನ್ನಡ ಛಂದಸ್ಸು', ೧೯೮೮, ಪು. ೩೪) ಈ ಸಾಲುಗಳು ಪದ್ಯಬಂಧದ ಸಾಲುಗಳೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ನರಸಿಂಹಯ್ಯನವರು ಆ ಪದ್ಯ ಯಾವುದು, ಅದರ ಸ್ವರೂಪವೇನು ಎಂಬುದನ್ನು ವಿವರಿಸಲು ಹೋಗಿಲ್ಲ. ಸೇಡಿಯಾಪು ಅವರು ತಮ್ಮ ನಿಲುವನ್ನು ಹೀಗೆ ಪ್ರಕಟಿಸಿದ್ದಾರೆ : " ಇದು ಗದ್ಯ ಭಾಗವೆಂದು ಶಾಸನ ಸಂಗ್ರಹಕಾರರು ಭಾವಿಸಿದಂತೆ ತೋರುತ್ತದೆ. ಆದರೆ 'ಶಿಷ್ಟಜನಪ್ರಿಯನ್, ಕಷ್ಟಜನ ವರ್ಜಿತನ್' ಎಂಬಲ್ಲಿ ಪ್ರಾಸ ನಿಯಮವನ್ನು ಅನುಸರಿಸಿದಂತೆ ತೋರುವುದರಿಂದಲೂ ಆ ಎರಡು ಸಾಲುಗಳಲ್ಲಿರುವ ಪದಪರಿಮಾಣ ಮತ್ತು ಪದ ಸ್ವಭಾವಗಳನ್ನು ಪರಾಮರ್ಶಿಸಿದರೆ ಸಾಲಿಗೆ ನಾಲ್ಕರಂತೆ ಒಟ್ಟು ಕರ್ಣಾಟಕ ಜಾತಿಯ ಎಂಟು ಗಣಗಳು ಉನ್ಮೀಲಿಸುವುದರಿಂದಲೂ ಈ ಭಾಗವು ಗದ್ಯವಾಗಿರದೆ ಪದ್ಯವೇ ಆಗಿರಬೇಕೆಂದು ಊಹಿಸುವುದಕ್ಕೆ ಅವಕಾಶವಿದೆ." ಇದನ್ನು ಭೂಮಿಕೆಯಾಗಿಟ್ಟುಕೊಂಡು ಆ ಭಾಗದ ಶಾಸನ ಪಾಠವನ್ನು ವಿಮರ್ಶಿಸುವ ಪ್ರಯತ್ನ ಮಾಡಿದ್ದಾರೆ.

ಈ ಸಂಬಂಧದಲ್ಲಿ ಹೇಳಬಹುದಾದ್ದು ಎಂದರೆ : ಕನ್ನಡದ ಪ್ರಾಚೀನ ಛಂದೋ ಬಂಧಗಳ ಪದ್ಯ ಲಕ್ಷಣಗಳಾದ ಚತುಷ್ಪದ ಪದ್ಯ ರಚನೆ, ಅವಶ್ಯ ಲಕ್ಷಣವಾದ ಆದಿ ಪ್ರಾಸ ನಿಯಮ, ಪರಿಚಿತ ಲಯ ಸಂಬಂಧವಾದ ಗಣ ವಿಭಜನೆಯ ಸುಕರತೆ ಇವು ಯಾವುದೂ ಇಲ್ಲಿ ಕಾಣಿಸುವುದಿಲ್ಲ. ಸೇಡಿಯಾಪು ಅವರು ಇಲ್ಲಿಯ ಆಲಂಕಾರಿಕ ಅನುಪ್ರಾಸವನ್ನು ಪ್ರಾಸವಾಗಿ ತಿಳಿದು ವಿಚಾರ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ನಾಯಕ ವ್ಯಕ್ತಿಯ ಹೆಸರು 'ಅರಭಟ್ಟ' ಎಂದಿರದೆ 'ಆರಭಟ' ಎಂದಿದ್ದಿತೆಂದೂ 'ಕಲಿಯುಗ ವಿಪರೀತನ್' ಎಂದಿರದೆ 'ಕಲಿಗೆ ವಿಪರೀತನ್' ಎಂದಿದ್ದಿತೆಂದೂ ತಿದ್ದಿರುವುದು ಅತಿಯಾಯಿತೆಂದು ಹೇಳಬೇಕು.

೨ ನೆಯ ಅರ್ಥಘಟಕವಾದ ಸಂಸ್ಕೃತ ಶ್ಲೋಕ :

ವರಂ ತೇಜಸ್ವಿನೋ ಮೃತ್ಯುಃ ನ ತು ಮಾನಾವಖಂಡನಮ್

ಮೃತ್ಯುಃ ತತ್ಕ್ಷಣಿಕೋ ದುಃಖಂ ಮಾನಭಂಗಂ ದಿನೇ ದಿನೇ

ಇದು ಒಂದು ಸಂಸ್ಕೃತ ಅನುಷ್ಟುಪ್ ಶ್ಲೋಕವಾಗಿದ್ದು, ಇದು ಲಕ್ಷಣಾನ್ವಿತವಾಗಿದೆ. ೪ ಪಾದಗಳು; ಪಾದಕ್ಕೆ ೮ ಅಕ್ಷರಗಳು; ಪ್ರತಿಪಾದದ ೫ನೆಯ ಅಕ್ಷರ ಲಘು, ೬ನೆಯ ಅಕ್ಷರ ಗುರು; ೭ನೆಯ ಅಕ್ಷರ ೧ - ೩ನೆಯ ಪಾದಗಳಲ್ಲಿ ಗುರು, ೨ - ೪ನೆಯ ಪಾದಗಳಲ್ಲಿಲಘು : ಇದು ಇಲ್ಲಿಯ ಲಕ್ಷಣ. ಸಾಧಾರಣವಾಗಿ ಸಂಸ್ಕೃತ ಲೌಕಿಕ ಸಾಹಿತ್ಯದಲ್ಲಿ ಶ್ಲೋಕನಿಬದ್ಧವಾದ ಕೃತಿಗಳು ಶ್ಲೋಕದ ಈ ಸಾಮಾನ್ಯ ಲಕ್ಷಣಕ್ಕೆ ಅನುಸಾರವಾಗಿಯೇ ಇರುತ್ತವೆ. ಶಾಸನೋಕ್ತವಾದ ಶ್ಲೋಕ ಸಹ ಹೀಗೆಯೇ ಇದೆ.

೩ ನೆಯ ಅರ್ಥಘಟಕವಾದ ಮೊದಲನೆಯ ತ್ರಿಪದಿ :

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್

ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್

ಮಾಧವನೀತನ್ ಪೆಱನಲ್ಲ ||

ಅಂಶ ತ್ರಿಪದಿಯ ಸಾಮಾನ್ಯ ಲಕ್ಷಣ ಹೀಗೆ :

ವಿಷ್ಣು ವಿಷ್ಣು | ವಿಷ್ಣು ವಿಷ್ಣು |
ವಿಷ್ಣು ಬ್ರಹ್ಮ ವಿಷ್ಣು ವಿಷ್ಣು |
ವಿಷ್ಣು ಬ್ರಹ್ಮ ವಿಷ್ಣು ||

ಆದಿ ಪ್ರಾಸ ನಿಬದ್ಧವಾದ ಈ ರಚನೆ ಗಾಯನದ ಸುಕರತೆಯಿಂದ ಸೊಗಸುತ್ತದೆ; ಮೊದಲ ಪಾದದಲ್ಲಿ ಮೂರನೆಯ ಗಣದಲ್ಲಿ ಆದಿಪ್ರಾಸದ ಅಕ್ಷರ ಆವೃತ್ತಿಗೊಳ್ಳುತ್ತದೆ; ಬ್ರಹ್ಮಗಣ ಸ್ಥಾನಗಳು ಗಾಯನಕ್ಕೆ ಬಳುಕು ತರುತ್ತದೆ.

ಈ ಲಕ್ಷಣದ ಅನ್ವಯ : ಮೇಲಿನ ಶಾಸನ ಪದ್ಯದ ಮೊದಲ ಪಾದದಲ್ಲಿ ೩ ನೆಯ ವಿಷ್ಣುಗಣದೆಡೆ ಒಳಪ್ರಾಸ (ಆದಿಪ್ರಾಸದ ಆವೃತ್ತಿ) ಇಲ್ಲ. ಆದರೆ ೨ ನೆಯ ಗಣವನ್ನು ಅರ್ಥ ಪರಿಭಾವನೆಗೆ ಅನುಸಾರವಾಗಿ ಬ್ರಹ್ಮ ಗಣವನ್ನಾಗಿ ಮಾಡಿಕೊಂಡರೆ (ಅದು ಸ್ವಾಭಾವಿಕವೂ ಆಗಿರುತ್ತದೆ) ೩ ನೆಯ ಗಣದಲ್ಲಿ ಆ ಒಳಪ್ರಾಸ ಏರ್ಪಡುತ್ತದೆ. ಆಗ ೩ ನೆಯ ಗಣದ ಮೌಲ್ಯ ಒಂದಂಶದಿಂದ ಹಿಗ್ಗಿ ಇದೊಂದು ರುದ್ರಗಣವಾಗುತ್ತದೆ. ಲಯದ ದೃಷ್ಟಿಯಿಂದ ೨ ನೆಯದನ್ನು ಹಿಗ್ಗಿದ ವಿಷ್ಣುವನ್ನಾಗಿ, ೩ ನೆಯದನ್ನು ಕುಗ್ಗಿಸಿದ ವಿಷ್ಣುವನ್ನಾಗಿ ಮಾಡಿಕೊಳ್ಳಬಹುದೆಂದು ತೋರುತ್ತದೆ. ಈಗಲೂ ಪ್ರಚಲಿತವಿರುವ ತ್ರಿಪದಿಯ ನಾನಾ ವಾಚನ ವಿಧಾನಗಳಲ್ಲಿ ಯಾವ ಒಂದು ವಿಧಾನಕ್ಕೆ ಈ ಪದ್ಯವೂ ಮುಂದಿನ ಪದ್ಯಗಳೂ ಅಳವಡುತ್ತಿದ್ದುವೋ ಹೇಳುವುದು ಕಷ್ಟ.

ಸೇಡಿಯಾಪು ಕೃಷ್ಣಭಟ್ಟರು ವಿಷ್ಣು ವಿಷ್ಣು | ವಿಷ್ಣು ವಿಷ್ಣು ಹೀಗೆ ನಾಲ್ಕು ಗಣಗಳನ್ನು ಸಾಮಾನ್ಯ ಲಕ್ಷಣಕ್ಕೆ ಅನುಸಾರವಾಗಿ ಮಾಡಿಕೊಳ್ಳಬಹುದೆಂದೂ, ಒಳಪ್ರಾಸ ಪಾಲನೆಯಿಲ್ಲದ ತ್ರಿಪದಿಗಳು ಸಾಹಿತ್ಯದಲ್ಲಿ ಕಂಡುಬರುತ್ತಿರುವುದರಿಂದ ಇಲ್ಲಿಯೂ ಹಾಗೆಯೇ ತಿಳಿಯಬಹುದಾಗಿದೆಯೆಂದೂ ಬರೆದಿದ್ದಾರೆ. ಆದರೆ ಪದ್ಯದ ಅರ್ಥಗತಿ ಸಹಜವಾಗಿ ೨ ನೆಯ ಗಣವನ್ನು ಬ್ರಹ್ಮವನ್ನಾಗಿ ಮಾಡುವುದರಿಂದ ವಿ.ಬ್ರ | ರು.ವಿ. ಹೀಗೆ ಇಲ್ಲಿ ಗಣ ವಿಭಜನೆ ಮಾಡಿ ಒಳ ಪ್ರಾಸವನ್ನು ಕಂಡುಕೊಳ್ಳುವುದೇ ಸರಿಯಾದ ಕ್ರಮವೆನ್ನಬೇಕು. ಶಾಸನದ ೨ ಮತ್ತು ೩ನೆಯ ತ್ರಿಪದಿಗಳಲ್ಲಿಯೂ ಒಳ ಪ್ರಾಸವನ್ನು ತಪ್ಪದೆ ಪಾಲಿಸಿರುವುದನ್ನು ಗಮನಿಸಬೇಕು. ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಈ ತ್ರಿಪದಿಗಳು ಜನಪದ ಸಾಹಿತ್ಯ ಮೂಲದಿಂದ ಉಗಮಿಸಿದವೇ ಆಗಿದ್ದರೂ ಗ್ರಾಂಥಿಕವಾದ ಪ್ರಾಸಾದಿ ಲಕ್ಷಣದ ಕಟ್ಟುಪಾಡುಗಳಿಗೆ ಒಳಪಟ್ಟಿವೆಯೆನ್ನುವುದನ್ನು ಸುಲಭವಾಗಿ ಗುರುತಿಸಬಹುದಾಗಿದೆ.

೪ ನೆಯ ಅರ್ಥ ಘಟಕವಾದ ಎರಡನೆಯ ತ್ರಿಪದಿ :

ಒಳ್ಳಿತ್ತ ಕೆಯ್ಯೊರಾರ್ ಪೊಲ್ಲದುಮದಱಂತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸಂಧಿಕ್ಕುಮದು ಬಂದು ||

ಇಲ್ಲಿಯ ಗಣ ರಚನೆ ಒಂದು ಗಣ ಸ್ಥಾನದ ಹೊರತು ಸಾಮಾನ್ಯ ಲಕ್ಷಣಕ್ಕೆ ಅನುಗುಣವಾಗಿಯೇ ಇದೆ. ಆ ಗಣ ಸ್ಥಾನವೆಂದರೆ, ೨ ನೆಯ ಪಾದದ ೪ ನೆಯ ಗಣ ಅಂಶಗಣ ರಚನೆಗೆ ಒಗ್ಗದಿರುವುದು. 'ಪುರಾಕೃತ' ಎಂಬ ಗಣ U- ಎಂಬ ರಚನೆಯಿಂದ ಕೂಡಿರುವುದು ಅಂಶಗಣ ಪದ್ಧತಿಗೆ ಅನುಸಾರವಾಗಿಲ್ಲ. ಶಬ್ದ ಸ್ವರೂಪ ಅಲ್ಲಿ ಸರಿಯಾಗಿಯೇ ಇದೆ. 'ವಿಪರೀತಾ' ಎಂಬ ೩ ನೆಯ ಗಣವು ಗಣ ಲಕ್ಷಣವನ್ನು ಪೂರೈಸಿದ್ದರೂ ಶಬ್ದ ಸ್ವರೂಪ ಸರಿಯಾಗಿಲ್ಲ. ಹಾಗಾಗಿ ಈಗಾಗಲೇ ಗಮನಿಸಿರುವಂತೆ ಪದ್ಯಾರ್ಥವೂ ಸರಿಯಾಗಿ ಆಗುತ್ತಿಲ್ಲ. ಇದನ್ನು ಈ ಹಿಂದೆಯೇ ಚರ್ಚಿಸಿದೆ.

ಇಲ್ಲಿ ಈ ಬಗ್ಗೆ ಹೇಳಬಹುದಾದ್ದು ಎಂದರೆ : ೨ ನೆಯ ಪಾದದ ೩ ನೆಯ ಗಣ 'ವಿಪರೀತನ್' (< ವಿಪರೀತಂ) ಎಂದೋ 'ವಿಪರೀತಂಗೆ' ಎಂದೋ ಇದ್ದಿರಿವುದು ಶಕ್ಯ. ಅಕ್ಷರಗಳನ್ನು ಕೊರೆಯುವಾಗ ತಪ್ಪಾಗಿರುವಂತಿದೆ. ಆಗ ಗಣರಚನೆ ವಿಷ್ಣುವೋ ರುದ್ರವೋ ಆಗುತ್ತದೆ. ಛಂದಸ್ಸಿಗೆ ಬಾಧಕವಿಲ್ಲ. 'ಪುರಾಕೃತ'ದ ವಿಷಯ ಹೇಗೆ ? U- ರಚನೆಯ ಅಂಶಗಣ ಜನಪದ ಸಾಹಿತ್ಯದಲ್ಲಿಯ ತ್ರಿಪದಿಗಳಲ್ಲಿ ಸಾಮಾನ್ಯವಾಗಿ ಬರುವ ರೂಢಿಯಿದೆ. ಇಲ್ಲಿಯೂ ಅದೇ ಕಾರಣದಿಂದಾಗಿ ಈ ಬಗೆಯ ಗಣರಚನೆ ಸ್ವಾಭಾವಿಕವಾಗಿ ಕಾಣಿಸಿಕೊಂಡಿರಬಹುದು. ತ್ವರಿತೋಚ್ಚಾರದಿಂದ ಅದನ್ನೊಂದು ದ್ವಿಲಘ್ವಾದಿ ವಿಷ್ಣುಗಣವನ್ನಾಗಿ (UU.UU) ಮಾಡಿಕೊಂಡು ಹಾಡುತ್ತಿದ್ದಿರಬಹುದೋ ಏನೋ!

ಪ್ರಾಸದ ವಿಚಾರದಲ್ಲಿ ಹೇಳಬೇಕಾದ ಒಂದು ಮಾತಿದೆ : ಈ ಪದ್ಯದಲ್ಲಿ ಕುಳ ಳ ಕಾರ - ಲ ಕಾರಗಳಿಗೆ ಆದಿಪ್ರಾಸ ಒಳಪ್ರಾಸಗಳನ್ನು ತಂದಿದೆ. ಇದು ವೈಯಾಕರಣ ಮತದಂತೆ ದೂಷ್ಯವಾದ್ದು. ಆದರೂ ಇಂಥ ಪ್ರಾಸ ಹಿರಿಯ ಪ್ರಾಚೀನ ಕವಿಗಳಲ್ಲಿ ಸಹ ವಿರಳವಾಗಿ ಕಂಡುಬಂದಿದೆ. ಜನರೂಢಿಯ ಭಾಷೆ ಛಂದಸ್ಸುಗಳಲ್ಲಿ ಶಾಸ್ತ್ರ ನಿಯಮಗಳನ್ನು ಅಷ್ಟಾಗಿ ಲಕ್ಷಿಸುತ್ತಿರಲಿಲ್ಲವೆಂಬುದೂ ತಿಳಿದ ಸಂಗತಿಯೇ ಆಗಿದೆ.

೫ ನೆಯ ಅರ್ಥಘಟಕವಾದ ಮೂರನೆಯ ತ್ರಿಪದಿ :

**ಕಟ್ಟಿದ ಸಿಂಘಮನ್ ಕೆಟ್ಟೊಡೋನೆಮಗೆಂದು**
**ಬಿಟ್ಟವೊಲ್ ಕಲಿಗೆ ವಿಪರೀತಂಗಹಿತರ್ಕಳ್**
**ಕೆಟ್ಟರ್ ಮೇಣ್ ಸತ್ತರವಿಚಾರಮ್ ||**

ಇಲ್ಲಿ ಗಣ ರಚನೆ ಅಂಶ ತ್ರಿಪದಿಯ ಸಾಮಾನ್ಯ ಲಕ್ಷಣಕ್ಕೆ ಅನುಸಾರವಾಗಿದೆ. ಎಂದರೆ ಪಾದ ೧ ರಲ್ಲಿ ೪ ವಿಷ್ಣುಗಣಗಳು (ಒಳಪ್ರಾಸವೂ ಪಾಲಿತವಾಗಿದೆ), ಪಾದ ೨ ರಲ್ಲಿ ವಿ.ಬ್ರ.ವಿ.ವಿ. ಗಣಗಳೂ ಪಾದ ೩ರಲ್ಲಿ ವಿ.ಬ್ರ.ವಿ. ಗಣಗಳೂ ಬಂದಿವೆ. ಒಂದೇ ಒಂದು ವೈಲಕ್ಷಣ್ಯವೆಂದರೆ, ೨ ನೆಯ ಪಾದದ ೩ ನೆಯ ಗಣದ ಬಳಿಕ ತ್ರಿಪದಿಯ ಹಾಡಿಕೆಯ ಪರಿಪಾಠಿಯಂತೆ ಬರಬೇಕಾದ ಸಹಜವಾದ ನಿಲುಗಡೆಗೆ ಅವಕಾಶವಾಗದಿರುವುದು. ಇದಕ್ಕೆ ಸಮರ್ಪಕವಾದ ಸಮಾಧಾನವನ್ನು ಕಂಡುಕೊಳ್ಳುವುದು ಕಷ್ಟ.

ಈ ವಿಷಯವನ್ನು ಸೇಡಿಯಾಪು ಅವರೂ ಗಮನಿಸಿದ್ದಾರೆ. ಅವರ ವಿಚಾರ ಹೀಗಿದೆ :

ತ್ರಿಪದಿಗೆ ಛಂದಶ್ಶಾಸ್ತ್ರ ಗ್ರಂಥಗಳಲ್ಲಿ ಪ್ರೋಕ್ತವಾದ ಲಕ್ಷಣಕ್ಕೆ ಈ ಪದ್ಯವು ಸಂಪೂರ್ಣವಾಗಿ ಸಮ್ಮತವಾಗಿಯೇ ಇದೆಯಾದರೂ ಪುನರಾವರ್ತನ ಸಂಪ್ರದಾಯಕ್ಕನುಗುಣವಾಗಿ ಪಠಿಸಲು ಬೇಕಾಗಿರುವ ಸೌಕರ್ಯವು (ವಾಕ್ಯಯತಿ) ಇದರಲ್ಲೂ ಇಲ್ಲ. ವಾಸ್ತವಿಕವಾಗಿ ಹೇಳುವುದಾದರೆ, ದ್ವಿತೀಯ ಪಾದದ ತೃತೀಯ ಗಣಾಂತದಲ್ಲಿ ವಾಕ್ಯಯತಿಯಿರಬೇಕೆಂಬ ಲಕ್ಷಣವನ್ನು ನಾಗವರ್ಮನಾಗಲಿ, ತ್ರಿಪದಿಬಂಧದ ಸೂಕ್ಷ್ಮ ವಿಚಾರ ಮಾಡಿದ ಜಯಕೀರ್ತಿಯಾಗಲಿ ಹೇಳಿರುವುದಿಲ್ಲ; ಶಾರ್ಙ್ಗದೇವನು ಕೂಡ ಈ ವಿಶೇಷ ಲಕ್ಷಣವನ್ನು ಎತ್ತಿಲ್ಲ. ಇದರಿಂದ ಪುನರಾವರ್ತನ ಸಂಪ್ರದಾಯವು ಎಂದೂ ಸಾರ್ವತ್ರಿಕವಾಗಿದ್ದಿರಲಿಲ್ಲವೆಂಬುದು ಸಿದ್ಧವಾಗುತ್ತದೆ ('ಕನ್ನಡ ಛಂದಸ್ಸು', ಪು. ೩೭).

ಸೇಡಿಯಾಪು ಅವರು "ಶಾರ್ಙ್ಗದೇವನು ಕೂಡ ಈ ವಿಶೇಷ ಲಕ್ಷಣವನ್ನು ಎತ್ತಿಲ್ಲ" ಎಂದು ಹೇಳಿರುವುದು ಸರಿಯಲ್ಲ. ಶಾರ್ಙ್ಗದೇವನು ಈ ಪುನರಾವೃತ್ತಿ ಲಕ್ಷಣವನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅಲ್ಲದೆ ಅವನಿಗೆ ಮೊದಲೇ ಮುಮ್ಮಡಿ ಸೋಮೇಶ್ವರನು 'ಮಾನಸೋಲ್ಲಾಸ'ದಲ್ಲಿ ಹೇಳಿರುವ ತ್ರಿಪದಿಯ ಲಕ್ಷಣದಲ್ಲಿಯೂ ಈ ವಿಚಾರ ಸ್ಪಷ್ಟವಾಗಿ ಬಂದಿದ್ದು, ಶಾರ್ಙ್ಗದೇವನು ಅದನ್ನು ಆವೃತ್ತಿಗೊಳಿಸಿದ್ದಾನೆ ಎನ್ನುವುದು ಹೋಲಿಕೆಯಿಂದ ತಿಳಿಯುತ್ತದೆ. "ತ್ರಿಪದಿಯನ್ನು ಹಾಡುವಾಗ ಮೊದಲ ೨ ಪಾದಗಳನ್ನೂ (ಸಂಸ್ಕೃತ

ಲಾಕ್ಷಣಿಕರು ತ್ರಿಪದಿಯ ಮೊದಲ ಪಾದವನ್ನು ಛಿಳಪ್ರಾಸ ಕಾರಣಕ್ಕಾಗಿ ೨ ಪಾದಗಳೆಂದು ವಿಭಜಿಸುತ್ತಾರೆ.) ೩ ನೆಯ ಪಾದದ ಸ್ವಲ್ಪ ಭಾಗವನ್ನೂ ಹೇಳಿ, ಅನಂತರ ಅದನ್ನು (ಎಂದರೆ ಆ ೩ ನೆಯ ಪಾದದ ಸ್ವಲ್ಪ ಭಾಗವನ್ನು) ಪುನರಾವೃತ್ತಿ ಮಾಡಿ ೩ ನೆಯ ಪಾದವನ್ನು ಮುಗಿಸಿ, ಆ ಮೇಲೆ ೪ ನೆಯ ಪಾದವನ್ನು ಹಾಡಬೇಕು" ಎಂದು ಇಬ್ಬರೂ ಹೇಳಿದ್ದಾರೆ. 'ಪುನರಾವರ್ತ್ಯ' ಎಂಬ ಮಾತನ್ನೇ ಸೋಮೇಶ್ವರನು ಬಳಸಿದ್ದಾನೆ. (ನೋಡಿ : 'ಮಾನಸೋಲ್ಲಾಸ' ೪ - ೧೬ - ೨೫೧, ೨೮೨; ಸಂಗೀತ ರತ್ನಾಕರ ೪ - ೨೬೭ - ೭೦).

ಈ ಶಾಸನದ ಮೂರೂ ತ್ರಿಪದಿಗಳು ಜನಪದ ಸಾಹಿತ್ಯ ಮತ್ತು ಗ್ರಾಂಥಿಕ ಸಾಹಿತ್ಯ ಎರಡರ ಗುಣಲಕ್ಷಣಗಳನ್ನೂ ಮೈಗೂಡಿಸಿಕೊಂಡಿದೆಯೆಂದು ತಿಳಿಯಲವಕಾಶವಿದೆ. ಗಣರಚನೆಯು ಗ್ರಾಂಥಿಕ ಸಾಹಿತ್ಯದ ಶಿಷ್ಟ ರಚನೆಯ ಕಟ್ಟುಪಾಡುಗಳನ್ನು ಅನುಸರಿಸಿದೆಯೆನ್ನಬಹುದು. ಗಣರಚನೆಯಲ್ಲಿ ಅಂಶಗಣಗಳ ಸಂಖ್ಯೆ ಸಂಯೋಜನೆಗಳಲ್ಲಿ ಜಾನಪದ ತ್ರಿಪದಿಗಳ ಹೆಚ್ಚಿನ ಶೈಥಿಲ್ಯ ಸೌಲಭ್ಯಗಳು ಇಲ್ಲಿ ಕಂಡುಬರುವುದಿಲ್ಲ. ವಿರಳವಾಗಿ ಹೊರತು ಅಲ್ಲಿಯ ಹಾಗೆ ಇಲ್ಲಿ ಪರ್ಯಾಯ ಗಣಗಳು ಕಾಣಿಸಿಕೊಂಡಿಲ್ಲ." "ಜನಪದವಾಗಿರದೆ ಪ್ರೌಢವಾಗಿದ್ದು, ಪಂಡಿತ ರಚಿತವೆಂದು ತೋರುತ್ತವೆ".

ಇಷ್ಟು ಜಾನಪದ ಅಂಶಗಣ ಬಂಧಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿರುವ ವಡಿಯ ಪಾಲನೆಯನ್ನು (ಪಾದಾದಿಯ ಅಕ್ಷರವು ಯತಿಸ್ಥಾನದ ಅಕ್ಷರದ ಬಳಿಕ ಆವೃತ್ತಿಗೊಳ್ಳುವುದೇ ವಡಿ) ಈ ಶಾಸನದ ತ್ರಿಪದಿಗಳಲ್ಲೂ ನಾವು ಗಮನಿಸಬಹುದಾಗಿದೆ. ಅದು ಹೇಗೆಂದರೆ :

"ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯನ್" ಎಂಬ (ಪದ್ಯ ೧) ಪಾದದಲ್ಲಿ 'ಸಾ' ಮತ್ತು 'ಮಾ' ಅಕ್ಷರಗಳಲ್ಲಿ 'ಆ'ಕಾರದ ಆವೃತ್ತಿಯ ಸ್ವರವಡಿಯಿದೆ; "ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದಱಂತೆ" ಎಂಬ (ಪದ್ಯ ೨) ಪಾದದಲ್ಲಿ 'ಒ' ಮತ್ತು 'ಪೊ' ಅಕ್ಷರಗಳಲ್ಲಿ ಒ ಕಾರದ ಆವೃತ್ತಿಯ ಸ್ವರವಡಿಯಿದೆ ; "ಕಟ್ಟಿದ ಸಿಂಘಮನ್ ಕೆಟ್ಟೊಡೇನೆಮಗೆಂದು" ಎಂಬ (ಪದ್ಯ ೩) ಪಾದದಲ್ಲಿ 'ಕ' ಮತ್ತು 'ಕೆ' ಎಂಬ ಅಕ್ಷರಗಳಲ್ಲಿ ಕ ಕಾರದ ವ್ಯಂಜನಾಕ್ಷರ ವಡಿಯಿದೆ.

## 124.4 ಭಾಷಾ ವಿವೇಚನೆ

ಕಪ್ಪೆ ಅರಭಟ್ಟನ ಬಾದಾಮಿ ಶಾಸನ ಕನ್ನಡ ಭಾಷೆಯ ಪ್ರಾಚೀನ ಕಾಲದ ಶಾಸನಗಳಲ್ಲಿ ಒಂದು. ಇದರ ಕಾಲ ಕ್ರಿ.ಶ.ಸು. ೭೦೦ ಅಥವಾ ಸು. ೭೫೦ ಎಂಬುದಾಗಿ ವಿದ್ವಾಂಸರು ಭಾವಿಸಿದ್ದಾರೆ. ಶ್ರವಣಬೆಳ್ಗೊಳದ ನಿಸಿದಿಗಲ್ಲು ಶಾಸನಗಳ ಅನಂತರ ಕಾಲದಲ್ಲಿ ಗಣ್ಯವಾಗಿರುವ ಕೆಲವು ಶಾಸನಗಳಲ್ಲಿ ಇದಕ್ಕೆ ಒಂದು ಒಳ್ಳೆಯ ಸ್ಥಾನವಿದೆ.

ಕನ್ನಡ ನಾಡಿನ ಸಾಮಾಜಿಕ ಜೀವನದ ಸ್ವರೂಪವನ್ನು ವಿವೇಚಿಸುವವರು ಈ ಶಾಸನದಲ್ಲಿ ಚಿತ್ರಣಗೊಂಡಿರುವ ಕಪ್ಪೆಅರ ಭಟ್ಟನ ಸ್ವಭಾವ ಚಿತ್ರವನ್ನು ತಪ್ಪದೆ ಉಲ್ಲೇಖಿಸುತ್ತಾರೆ. ಸಂಸ್ಕೃತ ಶ್ಲೋಕದಲ್ಲಿ ಬರುವ ಉದಾತ್ತ ಜೀವನ ಧರ್ಮ, ಸುಸಂಸ್ಕೃತ ವ್ಯಕ್ತಿಗೆ ತನ್ನ ಪ್ರಾಣಕ್ಕಿಂತ ಮಾನವೇ ಮುಖ್ಯ ಎಂಬ ಸಂದೇಶ, ಇಡಿಯ ಶಾಸನದ ಮುಖ್ಯವಾದ ಸಂಗತಿಯಾಗಿದೆ. ಪ್ರಾಚೀನ ಕಾಲದಲ್ಲಿ ಸಂಪತ್ತು ವಿದ್ಯೆಗಳಿಗಿಂತ ವೀರ ಜೀವನವೇ ಜನಪ್ರಿಯವಾದ ಮೌಲ್ಯವಾಗಿತ್ತು ಎನ್ನುವುದನ್ನು ಇಲ್ಲಿ ಸಾಹಿತ್ಯಿಕವಾಗಿ ನಿರೂಪಿಸಲಾಗಿದೆ.

"ಈ ಬಾದಾಮಿ ಶಾಸನದ ತ್ರಿಪದಿಗಳು ಜನಪದವಾಗಿರದೆ ಪ್ರೌಢವಾಗಿದ್ದು, ಪಂಡಿತ ರಚಿತವೆಂದು ತೋರುತ್ತವೆ. "ಸಾಧುಗೆ ಸಾಧು..." ಎಂಬೊಂದು ಪದ್ಯವನ್ನು ಬಿಟ್ಟರೆ, ಉಳಿದವುಗಳಲ್ಲಿ ಲಾಲಿತ್ಯವಾಗಲಿ ಅರ್ಥ ಸುಕರತೆಯಾಗಲಿ ಇಲ್ಲ. ಮುಂದೆ ಚಂಪೂ ಕಾವ್ಯಗಳ ನಡುವೆ ಕಂಡುಬರುವ ತ್ರಿಪದಿಗಳನ್ನು ಇವು ಹೋಲುತ್ತವೆ. "ಒಬ್ಬ ಕನ್ನಡ ವೀರನ ಆವೇಶಯುತವಾದ ಸ್ವಭಾವ ಚಿತ್ರವು ಅಲ್ಲಿದೆ" ಎಂಬುದು ಸರಿ. ಆದರೆ "ಅದರಲ್ಲಿ ಭಾವ ಭಾಷೆಗಳ ಯೋಗ್ಯಮಿಲನವುಳ್ಳ ಸ್ವಯಂಪೂರ್ಣವಾದ ಭಾವ ಗೀತೆಯ ಸತ್ತ್ವವೂ

ತುಂಬಿದೆ" ಎಂಬ ಮಾತು ಹೆಚ್ಚಾಯಿತು ಎನ್ನಿಸುತ್ತದೆ. ಭಾವ ಸೊಗಸಾಗಿದ್ದರೂ ಭಾಷೆಯಲ್ಲಿ ಅಷ್ಟಾಗಿ ಹೃದ್ಯತೆಯಿಲ್ಲ; ಅಲ್ಲದೆ ಚಮತ್ಕಾರಕ್ಕೆ ಪ್ರಾಧಾನ್ಯ ಸಂದಿದೆ. ಹೀಗಾಗಿ ಬಾದಾಮಿ ಶಾಸನದ ಸಾಹಿತ್ಯಿಕ ಯೋಗ್ಯತೆ ಬಹಳ ಎತ್ತರದ್ದೇನೂ ಅಲ್ಲವೆನ್ನಬೇಕು. ಆದರೆ ತನಗಿಂತ ಹಿಂದಿನ ಜನಪದ ಸಾಹಿತ್ಯದ ಅಸ್ತಿತ್ವವನ್ನು ಸ್ಥಾಪಿಸುವಲ್ಲಿ ಅದು ಉಪಾದೇಯವಾಗಿದೆ".

ಈ ಉದ್ಧೃತಿ (ಸಿ.ಪಿ. ಕೃಷ್ಣಕುಮಾರ್, ಶಾಸನ ಸಾಹಿತ್ಯ : ವಸ್ತು, ಸಾಹಿತ್ಯ ಮೌಲ್ಯ, ವಿಶೇಷತೆ, ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೨, ೧೯೭೫, ಪು. ೪೬೪ - ೬೫) ಬಹುಶಃ ಸಮತೂಕದಲ್ಲಿರುವಂತೆ ತೋರುತ್ತದೆ.

ಈ ಶಾಸನದ ಮುಖ್ಯ ಭಾಗವಾದ ಮೂರು ತ್ರಿಪದಿಗಳಲ್ಲಿ ಸಂಸ್ಕೃತ ಮತ್ತು ಕನ್ನಡ ಶಬ್ದಗಳ ಮಿಶ್ರಣ ಒಂದು ಒಳ್ಳೆಯ ಹದದಲ್ಲಿದೆ. ಶಬ್ದಗಳು ಸಂಶ್ಲಿಷ್ಟಗೊಂಡು ಲಿಖಿತವಾಗಿದ್ದು, ಅದನ್ನು ಬಿಡಿಸಿ ಬರೆದಾಗ ಅರ್ಥ ಸುಕರತೆ ಏರ್ಪಡುತ್ತದೆ. 'ಮಾಧುರ್ಯ' ಎಂಬ ಒಂದು ಕಡೆ ಹೊರತಾಗಿ ಉಳಿದ ಕಡೆಗಳಲ್ಲಿ ವರ್ಗ ಪಂಚಮಾಕ್ಷರಗಳನ್ನೇ ಬದ್ಧ ಮತ್ತು ಬಿಡಿ ರೂಪಗಳಲ್ಲಿ ಬಳಸಿರುವುದನ್ನು ಕಾಣಬಹುದಾಗಿದೆ.

'ಕಪ್ಪೆಅರ ಭಟ್ಟನ್', 'ಶಿಷ್ಟಜನಪ್ರಿಯನ್' ಎಂದು ಮುಂತಾಗಿ ಬರೆದಿರುವುದರಿಂದ ಪುಂವಾಚಕ ಶಬ್ದ ರೂಪಗಳನ್ನು ಸರಿಯಾಗಿ ಗುರುತಿಸಲೂ ಓದಲೂ ಸಹಕಾರಿಯಾಗಿದೆ.

ಶಬ್ದ ರೂಪಗಳಲ್ಲಿ 'ಮಾಧೂರ್ಯ್ಯನ್', 'ವಿಪರೀತಾ', ಇವು ಲಿಪಿಕಾರ ಸ್ಖಾಲಿತ್ಯಗಳೆಂದು ತೋರುತ್ತವೆ. 'ಸಿಂಘ' ಶಬ್ದ 'ಸಿಂಹ'ವೆಂಬ ಸಂಸ್ಕೃತ ಶಬ್ದದ ತದ್ಭವವೆಂದು ಹೇಳಲಾಗದು. ನ್ಯಾಯವಾಗಿ ಅದು 'ಸಿಂಗ' ಎಂಬ ತದ್ಭವ ರೂಪವನ್ನು ಪಡೆಯಬೇಕಾಗಿತ್ತು. ಬಹುಶಃ ಗಲೀಯವಾದ 'ಹ' ಧ್ವನಿಗೆ ಮಹಾಪ್ರಾಣದ ಸತ್ತ್ವವಿರುವುದರಿಂದ ಇಲ್ಲಿ ಸಿಂಘವೆಂದಾಗಿದೆ. ಇದು ಅಪ್ರಚುರವಾದ ರೂಪವಾದರೂ ವಿರಳವಾಗಿ ಪ್ರಯೋಗಗಳುಂಟು. ಉದಾಹರಣೆಗೆ - "ಆನೆಯ ಸಿಂಘದ ಗಿಳಿಗಳ ನಾನಾ ರೂಪುಗಳನಕ್ಕರಂಗಳೊಳೆಸೆಯಲು ತಾನಳವಡಿಸಿದನ್" (ಎಕ. xi, ಚಿತ್ರದುರ್ಗ ೪೭ - ೩೬, ೧೦೬೭), "ಸಿಂಘನ ಗರುಡಂ" (ಸೌಇ., xx, ೨೧ - ೪೬ ; ೧೦೧೯) ಇಂಥವನ್ನು ನೋಡಬಹುದು. 'ಸಿಂಹ'ದ ಪ್ರಾಕೃತ ರೂಪವಾದ 'ಸಿಂಘ' ಕನ್ನಡಕ್ಕೆ ನೇರವಾಗಿ ಸ್ವೀಕೃತವಾಗಿರಬಹುದು.

## 124.5 ಕೆಲವು ಭಾಷಿಕ ಲಕ್ಷಣಗಳು

**ಅರ್ಥಘಟಕ ೧ : ಗದ್ಯ ಭಾಗ**

ಮೂರು ಸಂಸ್ಕೃತ ಸಮಾಸ ಶಬ್ದಗಳು ಅನುಪ್ರಾಸ ಸಂಘಟನೆಯಿಂದ ಕೂಡಿ ಚೆಲುವಾಗಿವೆ ; ಸಜ್ಜನನೆಂಬುದನ್ನು ಹೇಳುವ 'ಕಲಿಯುಗ ವಿಪರೀತನ್' ಒಂದು ಅಲಂಕಾರೋಕ್ತಿ. 'ಕೃತಯುಗಚರಿತನ್' ಎಂಬುದನ್ನು ಇದರೊಂದಿಗೆ ಹೋಲಿಸಬಹುದು.

**ಅರ್ಥಘಟಕ ೨ : ಸಂಸ್ಕೃತ ಶ್ಲೋಕ**

ಇದರ ಮೂಲ ತಿಳಿಯದು. ಆತ್ಮಾಭಿಮಾನವನ್ನು ಹೃದಯಂಗಮವಾಗಿ ಮನವರಿಕೆ ಮಾಡುವ ಒಂದು ಸುಭಾಷಿತ. ಸ್ಫೂರ್ತಿದಾಯಕವಾದ ಈ ಪದ್ಯವನ್ನು ಮುಂದಿನ ಮೂರು ತ್ರಿಪದಿಗಳಿಗೆ ಆಧಾರಪೀಠವಾಗಿ ಇಲ್ಲಿ ಬಳಸಿದೆ.

**ಅರ್ಥಘಟಕ ೩ : ಮೊದಲನೆಯ ತ್ರಿಪದಿ**

೧. 'ಬಾಧಿಪ್ಪ' ಎಂಬ ಶಬ್ದ 'ಬಾಧಿಸು' ಎಂಬ ಸಾಧಿತಧಾತುವಿನ ಭವಿಷ್ಯತ್ ಕಾಲದ ಕೃದಂತವಾದ 'ಬಾಧಿಪ' (ಬಾಧಿಸು + ವ = ಬಾಧಿಸುವ / ಬಾಧಿಪ) ಎಂಬ ಶಬ್ದದ ದ್ವಿತ್ವರೂಪ.

೨. 'ಕಲಿಯುಗ ವಿಪರೀತನ್' ಈ ಸಮಾಸವನ್ನು ಚತುರ್ಥೀ ತತ್ಪುರುಷವಾಗಿ ತಿಳಿಯಬೇಕು. ಹಾಗಾದರೆ, 'ಕಲಿಯುಗಕ್ಕೆ ವಿಪರೀತನ್' ಎಂದು ವಿಗ್ರಹ ವಾಕ್ಯವಾಗಿ ಕಲಿಯುಗದ ಧರ್ಮಕ್ಕೆ, ನಡೆವಳಿಕೆಗೆ ವಿಪರೀತನಾದವನು ಎಂದು ಸರಿಯಾಗಿ ಅಭಿಪ್ರಾಯವಾಗುವುದು.

೩. 'ಪೆಱನಲ್ಲ' ಈ ಶಬ್ದ ನ್ಯಾಯವಾಗಿ 'ಪೆಱನಲ್ಲನ್' ಎಂಬುದಾಗಿ ಇರಬೇಕಾಗಿತ್ತು. ಅಲ್ಲ ಎಂಬ ಕ್ರಿಯಾತ್ಮಕಾವ್ಯಯದ ಮೂಲ ರೂಪ ಅಲ್. ಇದು ಪ್ರಥಮ ಪುರುಷದ ಪುಲ್ಲಿಂಗ ಏಕವಚನದಲ್ಲಿ ಅಲ್ಲನ್, ಸ್ತ್ರೀಲಿಂಗ ಏಕವಚನದಲ್ಲಿ ಅಲ್ಲಳ್, ನಪುಂಸಕ ಏಕವಚನದಲ್ಲಿ ಅಲ್ಲದು, ಅಲ್ತು ಎಂದಾಗುತ್ತದೆ. ಬಹುಶಃ ಶಾಸನದಲ್ಲಿ 'ನ್' ಕೊರೆಯದೆ ಬಿಟ್ಟುಹೋಗಿರಬಹುದು. ಹೀಗೆ ಇರಲಿಲ್ಲ ಎನ್ನುವುದಾದರೆ, ಜನ ರೂಢಿಯಲ್ಲಿ ಅಲ್ಲನ್ > ಅಲ್ಲ ಎಂದು ಬಳಕೆಗೆ ಬಂದು ಹೋಗಿರಲೂಬಹುದು.

**ಅರ್ಥಘಟಕ ೪ : ಎರಡನೆಯ ತ್ರಿಪದಿ**

'ಒಳ್ಳಿತ್ತ' ಇದು ನ್ಯಾಯವಾಗಿ ಒಳ್ಳಿತ್ತನ್ ಎಂದಿರಬೇಕಾಗಿತ್ತು. ಗುಣವಾಚಕ ಪ್ರಕೃತಿ 'ಒಳ್' ಇದು ಒಳ್ಳಿತು, ಒಳ್ಳಿತ್ತು ಎಂಬ ಎರಡು ರೂಪಗಳಲ್ಲಿ ನಾಮವಾಚಕಗಳಾಗುತ್ತವೆ. ಒಳ್ಳಿತು ರೂಪ ದ್ವಿತ್ವಗೊಂಡು ಒಳ್ಳಿತ್ತು ಆಗಿದೆ. ಹೀಗೆ ದ್ವಿತ್ವಗಳಾಗುವುದು ಸಾಮಾನ್ಯ.

ವೈಯಾಕರಣರು ದ್ವಿತೀಯಾ ವಿಭಕ್ತಿಯ ಅರ್ಥದಲ್ಲಿ ಷಷ್ಠಿ ವಿಭಕ್ತಿಯ ಪ್ರಯೋಗವಾಗುವುದೆಂದು ಇಂಥ ಸಂದರ್ಭಗಳಲ್ಲಿ ಹೇಳಿದ್ದಾರೆ (ಶಬ್ದಮಣಿದರ್ಪಣ, ಸೂತ್ರ ೧೪೫, ಪ್ರಯೋಗ ೩, ೪). ಪ್ರಸಿದ್ಧವಾದ "ತೆಂಕನಾಡ ಮಱೆಯಲ್ಕಿನ್ನೇಂ ಮನಂ ಬರ್ಕುಮೇ" ಎಂಬ ಪಂಪನ ಪ್ರಯೋಗವೂ ಈ ತೆರನಾದುದು (೪ - ೩೧) ತೆಂಕನಾಡನ್ > ತೆಂಕನಾಡ.

ಕ್ರಿಯಾವಾಚಕದ ಪೂರ್ವದಲ್ಲಿ ಷಷ್ಠಿವಿಭಕ್ತಿ ಬರುವುದೇ ಇಲ್ಲ. ಇಂಥ ಕಡೆ ದ್ವಿತೀಯಾ ವಿಭಕ್ತಿ ಪ್ರತ್ಯಯ ಲುಪ್ತವಾಗಿರುವುದನ್ನು ನಾವು ಜನ ರೂಢಿಯಲ್ಲಿ ಪ್ರಚುರವಾಗಿರುವ ಸವಕಳಿ ರೂಪಗಳೆಂದು ತಿಳಿಯಬೇಕು. ಇಲ್ಲಿ 'ಅನ್' ಎಂಬ ದ್ವಿತೀಯಾ ಪ್ರತ್ಯಯದ 'ನ್' ಸವೆದು ಹೋಗಿದೆ, ಅಷ್ಟೇ. ಆದ್ದರಿಂದ ಒಳ್ಳಿತ್ತನ್ > ಒಳ್ಳಿತ್ತ ಎಂದು ಆಗಿದೆ.

**ಕೆಯ್ಯೊರಾರ್ :**

ಇಲ್ಲಿ ಹಳಗನ್ನಡದ ಶಬ್ದ ರೂಪ ಕೆಯ್ವರಾರ್ ಎಂದಿರುವುದೇ ಸಾಮಾನ್ಯ. ಭೂತ ಮತ್ತು ಭವಿಷ್ಯತ್ ಕಾಲಗಳಲ್ಲಿರುವ ಏಕ ಮತ್ತು ಬಹುವಚನ ಕೃಲ್ಲಿಂಗಗಳ ಅನ್ ಮತ್ತು ಅರ್ ಅಖ್ಯಾತ ಪ್ರತ್ಯಯಗಳು ಒನ್ - ಓನ್ ಮತ್ತು ಒರ್ - ಓರ್ ಎಂದಾಗುವುದು ಪೂರ್ವದ ಹಳಗನ್ನಡದ ಲಕ್ಷಣ. ಹಲ್ಮಿಡಿ ಶಾಸನದಲ್ಲಿ ಇಂಥ ಪ್ರಯೋಗಗಳಿರುವುದನ್ನು ಈಗಾಗಲೇ ಗಮನಿಸಿದ್ದೇವೆ.

**ಬಲ್ಲಿತ್ತು :**

ಇದು ಇಲ್ಲಿ ದ್ವಿತ್ವರೂಪದಲ್ಲಿದೆ. 'ಬಲ್ಲಿತು' ಎಂಬುದು ಅವರ ಸಹಜ ರೂಪ. ಇವು ಬಲ್ ಎಂಬ ಗುಣವಾಚಕ ಪ್ರಕೃತಿಯ ಎರಡು ರೂಪಗಳಾಗಿವೆ. "ತುಕಾರ ದುಕಾರಂಗಳೆ ಕಡೆಯಾಗಿ ಪಲವು ಗುಣ ವಚನಂಗಳೊಳವು ; ಅವಱೊಳ್ ತುಕಾರಾಂತಂಗಳ್ಗೆ ವಿಕಲ್ಪದಿಂ ದ್ವಿತ್ವಮುಂಟು (ಶಬ್ದಮಣಿದರ್ಪಣ, ಸೂತ್ರ ೭೭, ವೃತ್ತಿ)" ಎಂದು ಹೇಳಿ 'ಬಲ್ಲಿತ್ತು' ಎಂಬುದನ್ನೂ ಪ್ರಯೋಗದಲ್ಲಿ ತೋರಿಸಿದೆ. ಇದಕ್ಕೆ ಕಾವ್ಯ ಪ್ರಯೋಗಗಳೂ ಉಂಟು (ನೋಡಿ : ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂಪುಟ ಆರು).

"ಇಲ್ಲಿ ಸಂಧಿಕ್ಕುಮದು ಬಂದು" ಎಂಬ ವಾಕ್ಯವಿನ್ಯಾಸ ಕುತೂಹಲಕರವಾದುದು. "ಇಲ್ಲಿ ಅದು ಬಂದು ಸಂಧಿಕ್ಕುಂ" ಎಂಬಂತೆ ಇರುವ ರಚನೆ ವ್ಯಾಕರಣದ ಕಟ್ಟಿಗೆ ಅನುಸಾರವಾದುದು. ಕ್ರಿಯಾಪದದ ನ್ಯೂನ ರೂಪವನ್ನು ಕೊನೆಗೆ ತಂದಿರುವುದು ನಮ್ಮ ಕಾಲದ ವಾಕ್ಯ ವಿನ್ಯಾಸದ ನೆನಪು ತರುತ್ತದೆ.

**ಸಂಧಿಕ್ಕುಂ :**

ಇದು ಗಮನಿಸಬೇಕಾದ ರೂಪ. ಕೇಶಿರಾಜನು ತನ್ನ ವ್ಯಾಕರಣದಲ್ಲಿ "ಹೇತುವಿನೊಳಾದ ಇಸುವಿನ ಸುಕಾರಕ್ಕೆ 'ಕ್ಕುಂ' ಪರಮಾಗೆ ಆ ಸುಕಾರಮಂ ಲೋಪಿಸಲಕ್ಕು; ಕೆಲರಾ ಕುಂಗೆ ದ್ವಿರ್ಭಾವಮಂ ಪೇಟ್ವರದಂ ಶ್ರಾವ್ಯಮಾದೆಡೆಯೊಳ್ ಪೇಟ್ವುದು; ಕಿವಿಗೆ ಸೊಗಯಿಸದೆಡೆಯೊಳ್ ಮಾಣ್ಬುದು" ಎಂಬುದಾಗಿ ತಿಳಿಸಿದ್ದಾನೆ (ಶಮದ. ಸೂತ್ರ ೨೫೯, ವೃತ್ತಿ).

ದ್ವಿರ್ಭಾವಕ್ಕೆ ಎಂದರೆ ದ್ವಿತ್ವರೂಪಕ್ಕೆ ಅವನು ರಂಜಿಕ್ಕುಂ, ಪಾಲಿಕ್ಕುಂ ಇಂತಹ ಪ್ರಯೋಗಗಳನ್ನು ಕಾಣಿಸಿದ್ದಾನೆ. ಹೀಗೆ ದ್ವಿತ್ವ ರೂಪ ಬರುವುದು ವಿಕಲ್ಪವಾಗಿ ; ಹಾಗೆ ಬಂದರೆ "ಸಂಸ್ಕೃತದೊಳಿಂತಿದು ಮನೋಹರಂ" ಎಂದು ತನ್ನ ಅಭಿಪ್ರಾಯ ತಿಳಿಸಿದ್ದಾನೆ. 'ಸಂಧಿಕ್ಕುಂ' ಎಂಬ ಶಾಸನ ಪ್ರಯೋಗ ಆ ತೆರನಾದುದು.

**ಅರ್ಥಘಟಕ ೪ : ಮೂರನೆಯ ತ್ರಿಪದಿ**

**ಅಹಿತರ್ಕ್ಕಳ್ :**

ಇಲ್ಲಿ ಸರೇಫದ್ವಿತ್ವದ ಪ್ರಯೋಗವಿದೆ. 'ಅಹಿತರ್ಕಳ್' ಎಂದು ಸಾಮಾನ್ಯವಾಗಿ ಬರೆಯುವುದೇ ರೂಢಿ. ಆದರೆ ಪ್ರಾಚೀನ ಕಾಲದಲ್ಲಿ ವಿರಳವಾಗಿ ಸಾಹಿತ್ಯದಲ್ಲಿ, ವಿಶೇಷವಾಗಿ ಶಾಸನಗಳಲ್ಲಿ ಈ ತೆರನ ಸರೇಫದ್ವಿತ್ವದ ಪ್ರಯೋಗಗಳನ್ನು ಕಾಣುತ್ತೇವೆ. ಶಬ್ದಾನುಶಾಸನಕಾರನಾದ ಭಟ್ಟಾಕಳಂಕನು "ರೋದ್ವಿರ್ವ್ಯಂಜನಸ್ಯಾಹಾದೇಃ" (ಸೂತ್ರ ೭೫) ಎಂದು ಸೂತ್ರ ಬರೆದು "ರೇಫಾದುತ್ತರಸ್ಯ ಹ ಕಾರಾದಿ ವರ್ಜಿತಸ್ಯ ವ್ಯಂಜನಸ್ಯ ದ್ವಿರ್ಭಾವೋ ಭವತಿ" ಎಂಬ ವ್ಯಾಖ್ಯಾನದ ಅಡಿಗೆ ಕುಳಿರ್ಕ್ಕೋಡುಗಂ, ಊರ್ಗ್ಗಳ್ ಇಂಥ ಪ್ರಯೋಗಗಳನ್ನು ತೋರಿಸಿದೆ.

ಕೆಟ್ಟರ್, ಸತ್ತರ್ ಈ ಪ್ರಯೋಗಗಳಿಗೆ 'ಕೆಟ್ಟಾರ್', 'ಸತ್ತಾರ್' ಎಂಬ ರೀತಿಯಲ್ಲಿ ಶಬ್ದ ರೂಪಗಳನ್ನು ಬಳಸಿಲ್ಲದಿರುವುದು ಭಾಷೆಯಲ್ಲಿ ಆಗುತ್ತಿರುವ ಬದಲಾವಣೆಯನ್ನು ತೋರಿಸುತ್ತದೆ. ಹಾಗೆಯೇ ನಡುವಣ 'ಮೇಣ್' ಶಬ್ದಕ್ಕೆ ಸಮುಚ್ಚಯ, ವಿಕಲ್ಪ, ಅವಧಾರಣೆ ಈ ಯಾವುದೇ ಅರ್ಥವನ್ನು ಇಲ್ಲಿಗೆ ಹೊಂದಿಸಬಹುದು. 'ಅವಿಚಾರಮ್' ಕ್ರಿಯಾ ವಿಶೇಷಣಾವ್ಯಯವಾಗಿದೆ.

## 124.6 ಸಾರಾಂಶ

ಕಪ್ಪೆ ಅರಭಟ್ಟನ ಶಾಸನವು ವಸ್ತು ಮತ್ತು ಅಭಿವ್ಯಕ್ತಿಯ ದೃಷ್ಟಿಯಿಂದ ಮಹತ್ತ್ವದ ಸ್ಥಾನವನ್ನು ಪಡೆದ ಶಾಸನವಾಗಿದೆ. ಇದು ರಚಿತವಾದ ಕಾಲವಾಗಲಿ (ಕ್ರಿ.ಶ. ಸು. ೭೦೦ - ೭೫೦ರಲ್ಲಿ ರಚಿತವಾಗಿರಬೇಕೆಂಬ ಅಭಿಪ್ರಾಯವಿದೆ.) ಆ ಕಾಲದಲ್ಲಿ ಆಳುತ್ತಿದ್ದ ರಾಜಮನೆತನಕ್ಕೆ ಸಂಬಂಧಿಸಿದ ಚಾರಿತ್ರಿಕ ಸಂಗತಿಗಳಾಗಲಿ ಖಚಿತವಾಗಿ ಈ ಶಾಸನದಿಂದೇನು ತಿಳಿದುಬರುವುದಿಲ್ಲ. ಆದರೆ ಈ ಶಾಸನದಲ್ಲಿ ನಾವು ಗಮನಿಸಬೇಕಾದ ಬಹುಮುಖ್ಯ ಸಾಮಾಜಿಕ ಮತ್ತು ಭಾಷಿಕ ಅಂಶಗಳಿವೆ. ವೀರಜೀವನ ಒಂದು ಪ್ರಮುಖವಾದ ಸಾಮಾಜಿಕ ಮೌಲ್ಯವಾಗಿತ್ತು ಎಂಬ ಅಂಶ ಈ ಶಾಸನದಿಂದ ದೃಢಪಡುತ್ತದೆ. ಅಲ್ಲದೆ, ಪ್ರಾಣಕ್ಕಿಂತ ಮಾನವೇ ಮುಖ್ಯವೆಂದು ನಂಬಿದ್ದ ಜನಪದವು ಇತ್ತೆಂದು ತಿಳಿದುಬರುತ್ತದೆ.

ಕಪ್ಪೆ ಅರಭಟ್ಟನ ಶಾಸನವು ತತ್ಕಾಲೀನ ಸಂದರ್ಭದ ಕನ್ನಡ ಭಾಷೆಯಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ತಿಳಿಸುವ ಒಂದು ಮುಖ್ಯ ಸಾಕ್ಷಿಯಾಗಿ ನಿಲ್ಲುತ್ತದೆ. ಸಂಸ್ಕೃತ ಭಾಷೆಯು ಕನ್ನಡದೊಡನೆ ಬೆರೆಯುತ್ತಿದ್ದ ಮಿಶ್ರಣ ಸ್ವರೂಪ ಮತ್ತು ಪ್ರಮಾಣವನ್ನೂ ಈ ಶಾಸನ ಎತ್ತಿ ತೋರುತ್ತದೆ. ಕನ್ನಡ ದೇಸೀ ಛಂದೋ ರೂಪಗಳಲ್ಲಿ ಒಂದಾದ 'ತ್ರಿಪದಿ' ಬಳಕೆಯ ಪ್ರಾಚೀನ ಶಾಸನ ಇದಾಗಿದೆ. ಉತ್ತಮ ಕಾವ್ಯಾಂಶದಿಂದ ಕೂಡಿದ ಇಲ್ಲಿನ ಭಾಷೆ ಆ ಕಾಲದ ಭಾಷೆಯ ಸತ್ತ್ವ ಸೌಂದರ್ಯಗಳನ್ನು ಪ್ರತಿನಿಧಿಸುತ್ತದೆ.

## 124.7 ಅಭ್ಯಾಸಕ್ಕೆ ಪ್ರಶ್ನೆಗಳು

1. ಕಪ್ಪೆ ಅರಭಟ್ಟನ ಶಾಸನದ ವಸ್ತುವಿಶೇಷವನ್ನು ಪರಿಚಯಿಸಿ.
2. ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳ ಹಿನ್ನೆಲೆಯಲ್ಲಿ ಕಪ್ಪೆ ಅರಭಟ್ಟನ ಶಾಸನದ ಮಹತ್ತ್ವವನ್ನು ವಿಶದಪಡಿಸಿ.
3. ಕಪ್ಪೆ ಅರಭಟ್ಟನ ಶಾಸನ ಕುರಿತು ಶೋಧನೆ ನಡೆಸಿದ ವಿದ್ವಾಂಸರು ಯಾರು ಯಾರು ? ಅವರ ವಾದಗಳ ಸಾರಾಂಶವೇನು ?
4. ಭಾಷಾ ಪ್ರಯೋಗದ ಹಿನ್ನೆಲೆಯಲ್ಲಿ ಕಪ್ಪೆ ಅರಭಟ್ಟನ ಶಾಸನವನ್ನು ವಿಶ್ಲೇಷಿಸಿ.

## 124.8 ಅಭ್ಯಾಸಕ್ಕೆ ಆಕರಗಳು


1. A.N. Narasimaiah : A Grammar of The Oldest Kanarese Inscriptions, 1941, p. 267.
2. R.S. Panchamukhi (Ed.) : Karnatak Inscriptions, Vol. I, 1941, p.11.
3. Government of Mysore (Pb.) : Karnataka through the Ages, 1968, p. coverpage (ಕನ್ನಡ ಆವೃತ್ತಿ ಸಹ).
4. ರಾ. ನರಸಿಂಹಾಚಾರ್ (ಸಂ.) : ಶಾಸನ ಪದ್ಯಮಂಜರಿ, ೧೯೨೩, ಪು. ೨
5. ಮೈಸೂರು ವಿಶ್ವವಿದ್ಯಾನಿಲಯ (ಪ್ರ.) : ಕನ್ನಡ ಕೈಪಿಡಿ, ಸಂ.೧, ೧೯೩೬ (ದ್ವಿ.ಮು. ೧೯೫೫).
6. ಕೆ. ವೆಂಕಟರಾಮಪ್ಪ : 'ಕನ್ನಡ ಸಾಹಿತ್ಯ', ೧೯೩೬ (೧೯೭೨), ಪು. ೨
7. ದೇಸಾಯಿ ಪಾಂಡುರಂಗ ರಾಯ : ಶಾಸನ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೩೧-೨, ಜೂನ್ ೧೯೪೬, ಪು. ೩೨ - ೩೯.
8. ರಂ.ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ೧೯೫೩ (೧೯೭೧), ಪು. ೧೦ - ೧೧.
9. ಎಂ. ಚಿದಾನಂದ ಮೂರ್ತಿ : ಸಂಶೋಧನ ತರಂಗ, ೧೯೬೬, ಪು. ೨೦೬, ೨೧೦ (ಅಡಿ ಟಿಪ್ಪಣಿ)
10. ಎಂ. ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೬೬, ಪು. ೨೪೯ (ಮೂಲ ಶಾಸನದ ಪ್ರತಿ ಕೃತಿಯನ್ನು ಸಹ ಕೊಟ್ಟಿದೆ).
11. ತ.ಸು. ಶಾಮರಾಯ : ಕನ್ನಡ ಸಾಹಿತ್ಯ ಚರಿತ್ರೆ ; ಒಂದು ಸಮೀಕ್ಷೆ, ಪು. ೩ - ೪.
12. ಟಿ.ವಿ. ವೆಂಕಟಾಚಲ ಶಾಸ್ತ್ರೀ : ಬಾದಾಮಿ ಶಾಸನದ ಅರ್ಥ, 'ಶಬ್ದಾರ್ಥವಿಹಾರ', ೧೯೭೯, ಪು. ೧೨ - ೨೨.
13. ಸೇಡಿಯಾಪು ಕೃಷ್ಣಭಟ್ಟ : 'ಕನ್ನಡ ಛಂದಸ್ಸು', ೧೯೮೮, ಪು. ೩೩ - ೩೭ (ಅಡಿ ಟಿಪ್ಪಣಿ)
14. ಸೇಡಿಯಾಪು ಕೃಷ್ಣಭಟ್ಟ : ಕನ್ನಡ ಛಂದಸ್ಸು - ಒಂದು ವಿವರಣೆ, 'ವಿಚಾರ ಪ್ರಪಂಚ', ೧೯೯೨, ಪು. ೫೪೦ - ೪೩.
15. ಜಿ. ವೆಂಕಟಸುಬ್ಬಯ್ಯ : 'ಕಲಿಯುಗ ವಿಪರೀತವಲ್ಲ, ಕೇವಲ ಯುಗ ವಿಪರೀತ', ಸಾಧನೆ, ೭ - ೪, ೧೯೭೮.
16. ಡಾ. ಉಪ್ಪಂಗಳ ರಾಮಭಟ್ಟ : 'ಕನ್ನಡ ಛಂದಸ್ಸು' - ಪುಸ್ತಕ ವಿಮರ್ಶೆ, ಉದಯವಾಣಿ ೧೮ - ೬, 1989.
17. ಎಂ.ಎಂ. ಕಲಬುರ್ಗಿ : ಕಪ್ಪೆ ಅರಭಟ್ಟನ್, ಕರ್ನಾಟಕ ಭಾರತಿ, ೪ - ೩ ; ಮಾರ್ಗ ಸಂಪುಟ ೨, ಪು. ೮ - ೧೦.
18. ಸಿ.ಪಿ. ಕೃಷ್ಣಕುಮಾರ್ : ಶಾಸನ ಸಾಹಿತ್ಯ : ವಸ್ತು, ಸಾಹಿತ್ಯ ಮೌಲ್ಯ, ವಿಶೇಷತೆ, ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂ.೨, ೧೯೭೫, ಪು. ೪೬೪ - ೬೫.
19. ಬಾ.ರಾ. ಗೋಪಾಲ : ಕಪ್ಪೆಅರ ಭಟ್ಟ, 'ಸಮದರ್ಶಿ' (ಪ್ರೊ. ಎಚ್ಚೆಸ್ಕೆ ಅಭಿನಂದನಾ ಗ್ರಂಥ), ಪ್ರತಿಭಾ ಸಂಸತ್, ಮೈಸೂರು - ೨೩, ಪು. ೫೬೧ - ೬೬.


* * * *



ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-203/2014-15 ದಿನಾಂಕ : 30-08-2014

ಒಳಪುಟ : 60 GSM MPM ಮ್ಯಾಪ್ಲಿಥೋ ಮತ್ತು ರಕ್ಷಾಪುಟ: 220 GSM ಆರ್ಟ್‌ಕಾರ್ಡ್

ಮುದ್ರಕರು : ಅಭಿಮಾನಿ ಪಬ್ಲಿಕೇಷನ್ಸ್ ಲಿ., ಬೆಂಗಳೂರು-10 ಪ್ರತಿಗಳು : 10,000

# Karnataka State Open University

**Mukthagangothri, Mysore - 570 006.**




♣ REGIONAL CENTRES

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary

● **HEAD QUARTERS**

★ Total Study Centres : 111

♣ **Regional Centres : 10**

❄ B.Ed Study Centres : 10

✦ **M.Ed Study Centres : 08**

Karnataka State Open University

Mukthagangothri, Mysore - 570 006.

